ಕನ್ನಡ ಬಯ್ಗುಳ ಓದು

ಸಿ.ಪಿ.ನಾಗರಾಜ



ಕನ್ನಡ ಅಧ್ಯಯನ ಪೀಠ

ಕನ್ನಡ ಬಯ್ಗುಳ ಓದು

ಸಿ.ಪಿ.ನಾಗರಾಜ

ನಾಗು ಸ್ಮಾರಕ ಪ್ರಕಾಶನ
೭೫, ' ಎ ' ಬ್ಲಾಕ್, ೫ ನೆಯ ಕ್ರಾಸ್, ಕೃಷ್ಣ ಗಾರ್ಡನ್
ಆರ್.ವಿ.ಕಾಲೇಜು ಪೋಸ್ಟ್, ಬೆಂಗಳೂರು–೫೬೦೦೫೯

KANNADA BAYGULA ODU:
by C.P.Nagaraja, Published by Nagu Smaraka Prakashana,
75, ' A ' Block, 5th Cross, Krishna Garden, R.V.College Post,
Bengaluru-560059
Mobile: 9986347521

First Edition	:	2022
Page	:	266
Price	:	**Rs. 260/-**
Paper	:	80 gsm Ns Maplitho
Size	:	Demy 1/8
Copies	:	500
Copy right	:	Author
ಪುಟಗಳು	:	266
ಪ್ರತಿಗಳು	:	500
ಬೆಲೆ: ರೂ.	:	**260/–**
ಮುಖಪುಟ ವಿನ್ಯಾಸ	:	ಎಂ.ಎಲ್.ಸೋಮವರದ, ಮಂಡ್ಯ ಮೊ.9743512174, 8618580924
ಪುಟ ವಿನ್ಯಾಸ	:	ಕೆ.ಆರ್. ಹರೀಶ್, 8553184584

ಪ್ರತಿಗಳು ದೊರೆಯುತ್ತವೆ:
ಹರಿವು ಬುಕ್ಸ್
67, ಸೌತ್ ಅವೆನ್ಯೂ ಕಾಂಪ್ಲೆಕ್ಸ್
ಡಿವಿಜಿ ರಸ್ತೆ, ನಾಗಸಂದ್ರ ಸರ್ಕಲ್ ಬಳಿ
ಬಸವನಗುಡಿ, ಬೆಂಗಳೂರು–560004
ದೂರವಾಣಿ: 080–2660 3000

ಆರ್.ಸುಧೀಂದ್ರ ಕುಮಾರ್
9, 20ನೆಯ ಮೈನ್, 3ನೆಯ ಕ್ರಾಸ್
ವಿಜಯನಗರ 2ನೆಯ ಹಂತ
ಹಂಪಿ ಸರ್ಕಲ್ ಹತ್ತಿರ, ಮೈಸೂರು–570017
ಮೊ. 8892626269

ಸ್ವಾನ್ ಪ್ರಿಂಟರ್ಸ್
svanprint@gmail.com
☎ 080-26742233

ಮುನ್ನುಡಿ

ಬಯ್ಗುಳವನ್ನು ಸಿ.ಪಿ.ನಾಗರಾಜ್ ಬೆನ್ನು ಹತ್ತಿದ್ದಾರೆಯೋ ಇಲ್ಲವೇ ಬಯ್ಗುಳವೇ ಇವರ ಬೆನ್ನು ಹತ್ತಿದೆಯೋ ಎನ್ನುವುದು ಕಳೆದ ಮೂರೂವರೆ ದಶಕಗಳಿಂದ ನನ್ನನ್ನು ಕಾಡುತ್ತಲೇ ಇದೆ. ಸವಾಲು ಹಾಕುವ ಬೇತಾಳವನ್ನು ಹೆಗಲ ಮೇಲೆ ಹೊತ್ತು ತಿರುಗುವ ಛಲ ಬಿಡದ ತ್ರಿವಿಕ್ರಮನಂತೆ ನನಗೆ ಅವರು ಕಾಣುತ್ತಿದ್ದಾರೆ. ಈ ಹೊತ್ತಗೆಯೂ ಅವರ ಹುಡುಕಾಟ ತಡಕಾಟಗಳ ಕೊನೆ ಎಂದು ನನಗೆ ತೋರುತ್ತಿಲ್ಲ. ಏಕೆಂದರೆ ಬರೆಯ ಬೇಕಾಗಿರುವುದು ಇನ್ನೂ ಇದೆ ಎಂದು ಅವರೇ ಹೇಳುತ್ತಿದ್ದಾರೆ. ನೋಡೋಣ ಈ ಅಂಟಿದ ನಂಟಿನ ಕೊನೆ ಬಲ್ಲವರು ಯಾರು!

ತಮ್ಮ ಪಿಎಚ್.ಡಿ., ಪದವಿಗಾಗಿ ಬಯ್ಗುಳದ ವಲಯವನ್ನು ನಾಗರಾಜ್ ಆಯ್ದುಕೊಳ್ಳುವ ಹೊತ್ತಿಗಾಗಲೇ ಅವರು ಸಾಕಷ್ಟು ಕೆಲಸವನ್ನು ಮಾಡಿದ್ದರು. ಅವರ ಎಂ.ಫಿಲ್., ನಿಬಂಧ ಕೂಡ ಬಯ್ಗುಳವನ್ನು ಕುರಿತೇ ಇತ್ತು. ಅವರ ಓದಿಗೆ ನಾನು 'ದಾರಿದೀಪ' ಆಗಬೇಕೆಂದು ಅವರು ಕೇಳಿದ ಹೊತ್ತಿನಲ್ಲಿ. ಸುಮಾರು ಮೂರೂವರೆ ದಶಕಗಳ ಹಿಂದೆ ನಾನು ನುಡಿಗಳನ್ನು ಅವುಗಳ ಬಳಕೆಯ ನೆಲೆಗಳಿಂದ, ಬಳಸುವವರ ಹಿನ್ನೆಲೆಯಿಂದ ನೋಡಬೇಕೆಂಬ ಉಮೇದಿನಲ್ಲಿ ಇದ್ದವನು. ಆದರೆ ಕ್ಷೇತ್ರಕಾರ್ಯ ಎನ್ನುವುದರಿಂದ ಗಾವುದ ದೂರ ಇದ್ದವನು. ನಾಗರಾಜ್ ಹಗಲೂ ಇರುಳು ಎನ್ನದೇ ಕ್ಷೇತ್ರಕಾರ್ಯಕ್ಕೆ ಸಿದ್ಧರಿದ್ದವರು. ಬಯ್ಗುಳಗಳ ಸಂಗ್ರಹಕ್ಕಾಗಿ ಅವರು ನಡೆಸಿರುವ ಸಾಹಸಗಾಥೆ

ಗಳನ್ನು ಅವರು ಬರೆದರೆ ಅದೇ ಒಂದು ಮಹಾಪುರಾಣವಾಗಬಹುದು. ಈ ಹೊತ್ತಗೆಯಲ್ಲಿ ಅವರು ಕೆಲವು ಬಯ್ಗುಳಗಳನ್ನು ವಿವರಿಸುವಾಗ ನೀಡಿದ ವಿವರಗಳನ್ನು ಗಮನಿಸಿದರೆ, ಅವರು ಎಷ್ಟು ನಿಕಟವಾಗಿ ಆಯಾ ಸಂದರ್ಭಗಳನ್ನು ಗ್ರಹಿಸಿದ್ದಾರೆ ಎನ್ನುವುದು ಗೊತ್ತಾಗುತ್ತದೆ.

ಬಯ್ಗುಳಗಳು ನಮ್ಮೆಲ್ಲರ ಪದಕೋಶಗಳಲ್ಲಿ ಬೇರೆ ಬೇರೆ ಪ್ರಮಾಣಗಳಲ್ಲಿ ಸೇರಿರುತ್ತವೆ. ಅವುಗಳನ್ನು ಬಳಕೆಯ ನೆಲೆಗೆ ಒಯ್ಯುವ ಪ್ರಸಂಗಗಳು ಎಲ್ಲರಿಗೂ ಬರಲಾರವು. ಹಾಗೆ ಬರದಂತೆ ನೋಡಿಕೊಳ್ಳುವ ಕಟ್ಟುಪಾಡುಗಳನ್ನು ನಮ್ಮ ಪರಿಸರ ನಮಗೆ ಒದಗಿಸುತ್ತಲೇ ಇರುತ್ತದೆ. ಬಳಕೆಯಿಂದ ತಾನು ದೂರವಿಡಲು ಬಯಸುವ ಈ ಬಯ್ಗುಳಗಳನ್ನು ಒಂದು ಸಮುದಾಯವು ಅಗಾಧ ಪ್ರಮಾಣದಲ್ಲಿ ರೂಪಿಸಿಕೊಳ್ಳುವುದೇಕೆ ಎನ್ನುವುದನ್ನು ಹುಡುಕಿ ತೆಗೆಯಬೇಕು. ಅಲ್ಲದೆ ಎಲ್ಲ ಸಮುದಾಯಗಳಲ್ಲೂ ಇವುಗಳ ಪ್ರಮಾಣ ಮತ್ತು ಸ್ವರೂಪ ಒಂದೇ ಬಗೆಯಲ್ಲಿ ಇರುವುದಿಲ್ಲ. ಹೀಗೇಕೆ ಎನ್ನುವುದನ್ನೂ ಕೂಡ ಅರಿತುಕೊಳ್ಳಬೇಕಿದೆ.

ಈ ಹೊತ್ತಗೆಯಲ್ಲಿ ಬಯ್ಗುಳವನ್ನು ಜನರು ಬಳಸುವುದೇಕೆ ಎನ್ನುವುದನ್ನು ವಿವರಿಸಲು ನಾಗರಾಜ್ ಹೆಚ್ಚಾಗಿ ಮಾನಸಿಕ ನೆಲೆಯನ್ನು ಅವಲಂಬಿಸಿದ್ದಾರೆ. ಬಳಸುವ ಸಂದರ್ಭ ಮತ್ತು ಅವುಗಳ ಪರಿಣಾಮಗಳನ್ನು ವಿವರಿಸುವಾಗ ಸಾಮಾಜಿಕ ನೆಲೆಗಳನ್ನು ಹುಡುಕಿ ತೆಗೆದಿದ್ದಾರೆ. ಬಯ್ಗುಳದ ತಿರುಳನ್ನು ಕಂಡು ಕೊಳ್ಳುವಾಗ ಮತ್ತೆ ಹೆಚ್ಚಾಗಿ ಸಮಾಜ ರಚನೆಯ ಕೆಲವು ಚಹರೆಗಳನ್ನು ಬಳಸಿ ಕೊಳ್ಳುತ್ತಾರೆ. ಇವಲ್ಲದೆ ಬೇರೆ ದಾರಿಗಳು ಇವೆಯೇ ಎನ್ನುವುದನ್ನು ಮುಂದಿನ ಓದುಗಳು ನಮಗೆ ತೆರೆದು ತೋರಿಸಬೇಕಿದೆ.

ಬಯ್ಗುಳವನ್ನು **'ನುಡಿಗೆಲಸ-ಸ್ಪೀಚ್ ಆಕ್ಟ್'** ಎಂದು ತಿಳಿಯುವುದು ಒಂದು ಬಗೆ. ಅಂದರೆ ನಾವು ಮಾಡಬೇಕಾದ ಕೆಲಸವೊಂದನ್ನು ನೇರವಾಗಿ ಮಾಡದೆ, ಬದಲಿಯಾಗಿ ಒಂದು ನುಡಿಗಟ್ಟಿನ ಮೂಲಕ ಅದನ್ನು ಪೂರೈಸುವುದನ್ನು ಸರಳವಾಗಿ 'ನುಡಿಗೆಲಸ' ಎನ್ನೋಣ. ನಾವು ದಿನದಿನವೂ ಇಂತಹ ನೂರಾರು ನುಡಿಗೆಲಸಗಳನ್ನು ಮಾಡುತ್ತಲೇ ಇರುತ್ತೇವೆ. ಅದಕ್ಕಾಗಿ ಬೇಕಾದ ನುಡಿಗಟ್ಟು ಗಳನ್ನು ನಮ್ಮ ಪದಕೋಶದಲ್ಲಿ ಇರಿಸಿಕೊಂಡಿರುತ್ತೇವೆ. ಬಯ್ಗುಳಗಳೂ ಕೂಡ ಇಂತದೇ ನೆಲೆಯಲ್ಲಿ ಬಳಕೆಯಾಗಬಲ್ಲವು. ಆದರೆ ಬಯ್ಗುಳಗಳ ಬಳಕೆಗೆ ಸಮುದಾಯ ಇರಿಸಿಕೊಂಡಿರುವ ಕಟ್ಟುಪಾಡುಗಳಿಂದಾಗಿ ಅವು ಆ ಕಟ್ಟುಪಾಡುಗಳ ಮೀರುವಿಕೆಯಲ್ಲಿ ಮಾತ್ರ ಮೈದಳೆಯುತ್ತವೆ. ಅದೆಲ್ಲವನ್ನೂ ನಾಗರಾಜ್ ಈ ಹೊತ್ತಿಗೆಯಲ್ಲಿ ನಿರೂಪಿಸಿದ್ದಾರೆ.

ಕನ್ನಡದಲ್ಲಿ ಬಳಕೆಯಾಗುವ ಬಯ್ಗುಳಗಳನ್ನು ಹಲವು ಬಗೆಗಳಲ್ಲಿ ವಿಂಗಡಿಸುವುದು ರೂಢಿಯಲ್ಲಿದ್ದರೂ, ಈ ಹೊತ್ತಗೆಯಲ್ಲಿ ಅನುಸರಿಸಿರುವ ನೆಲೆ

ಹೆಚ್ಚು ಉಪಯುಕ್ತವೆನಿಸುತ್ತದೆ. ಆರೋಪದ ನೆಲೆ, ಶಾಪ ರೂಪದ ನೆಲೆ ಮತ್ತು ಕಾಮದ ನಂಟಿನ ನೆಲೆ ಎನ್ನುವ ಮೂರು ಬಗೆಗಳಲ್ಲಿ ಎರಡು ಮತ್ತು ಮೂರನೆಯ ಬಗೆಗಳು ಒಂದರ ಮುಂದುವರಿಕೆಯಾಗಿ ಇನ್ನೊಂದು ಇರುವಂತೆ ತೋರುತ್ತದೆ. ಅವುಗಳ ತಿರುಳಿನಲ್ಲಿರುವ ಸಾಮಾಜಿಕ ವಲಯಗಳನ್ನು ಹೊರತುಪಡಿಸಿದರೆ, ಅವೆರಡೂ ಒಂದೇ ಗುರಿಯನ್ನು ಹೊಂದಿವೆ. ಈ ಸಂಗತಿಯನ್ನು ಇನ್ನಷ್ಟು ವಿವರದಲ್ಲಿ ಗಮನಿಸಬೇಕೆಂದು ತೋರುತ್ತದೆ. ಅಂದರೆ ಶಾಪ ರೂಪದಲ್ಲಿ ಏನು ಸಂಭವಿಸಬೇಕೆಂದು ಬಯಸುವಂತೆ ಬಯ್ಗುಳಗಳು ರೂಪುಗೊಂಡಿರುತ್ತವೆಯೋ ಅದೇ ಬಗೆಯ ಬೇರೊಂದು ಕ್ರಿಯೆಯನ್ನು ಕಾಮದ ನಂಟಿನ ಬಯ್ಗುಳಗಳು ಸೂಚಿಸುತ್ತಿರುವಂತೆ ಕಾಣುತ್ತದೆ.

ತಮ್ಮ ಬಯ್ಗುಳಗಳ ಓದು ಮೊದಲಾಗುವ ಹೊತ್ತಿಗೆ ಕನ್ನಡದಲ್ಲಿ ಆವರೆಗೆ ನಡೆದಿದ್ದ ಅಧ್ಯಯನಗಳ ಪಟ್ಟಿಯೊಂದನ್ನು ನಾಗರಾಜ್ ಕೊಟ್ಟಿದ್ದಾರೆ. ಅವುಗಳ ತಿರುಳನ್ನೂ ನಿರೂಪಿಸಿದ್ದಾರೆ. ನಾಗರಾಜ್ ಅವರ ಬಳಿಕ ಈ ಅಧ್ಯಯನಗಳು ಹೆಚ್ಚಿನ ಪ್ರಮಾಣದಲ್ಲಿ ನಡೆದಂತೆ ತೋರುವುದಿಲ್ಲ. ಇದಕ್ಕೆ ಕಾರಣಗಳೇನೋ ತಿಳಿಯದು. ಈ ಬಗೆಯ ಅಧ್ಯಯನಗಳಲ್ಲಿ ಹೆಚ್ಚಿನ ಆಸಕ್ತಿಯೇ ಕಡಿಮೆಯಾಗುತ್ತಿದೆಯೋ ಇಲ್ಲವೇ ಇವುಗಳ ಉಪಯುಕ್ತತೆಯೇ ಕಡಿಮೆ ಎಂದು ತಿಳಿಯಲಾಗಿದೆಯೋ ಗೊತ್ತಾಗುತ್ತಿಲ್ಲ. ಆದರೆ ಸಮುದಾಯಗಳ ನಡೆಗಳನ್ನು ಅರಿಯ ಬಯಸುವವರು ಈ ವಲಯಗಳನ್ನು ದೂರಸರಿಸಲು ಬರುವುದಿಲ್ಲ.

ನಾಗರಾಜ್, ನಾನು ಈಗಾಗಲೇ ಹೇಳಿರುವಂತೆ ಬಯ್ಗುಳವನ್ನು ಬಳಸಲು ಕಾರಣವಾಗುವ ಮಾನಸಿಕ ಸಂಗತಿಗಳನ್ನು ಮತ್ತು ಅದಕ್ಕೆ ಪೂರಕವಾಗುವ ಮೆದುಳಿನ ರಚನೆಗಳನ್ನು ವಿವರಿಸಿದ್ದಾರೆ. ಇದನ್ನು ಇನ್ನೂ ವಿವರವಾಗಿ ಪರಿಶೀಲಿಸಬೇಕಿದೆ. ಏಕೆಂದರೆ ಬಯ್ಗುಳವನ್ನು ಬಳಸಲು ಯಾವ ಕಾರಣಗಳಿವೆಯೋ ಮತ್ತು ಅದಕ್ಕೆ ನೆರವಾಗುವ ಮೆದುಳಿನ ರಚನೆಗಳು ಏನಿವೆಯೋ ಅವೆಲ್ಲವೂ ಎಲ್ಲ ಸಮುದಾಯಗಳ ಮಾನವರಿಗೂ ಸಮಾನವಾದವು. ಆದರೆ ಎಲ್ಲ ಸಮುದಾಯಗಳಲ್ಲೂ ಬಯ್ಗುಳಗಳು ಒಂದೇ ಪ್ರಮಾಣದಲ್ಲಿ ಇರುವುದಿಲ್ಲ. ಅಲ್ಲದೆ ಒಂದೇ ಸಮುದಾಯದಲ್ಲಿ ಎಲ್ಲರೂ ಅವುಗಳನ್ನು ಬಳಸುವ ಪ್ರಮಾಣ ಮತ್ತು ಸ್ವರೂಪದಲ್ಲಿ ವ್ಯತ್ಯಾಸಗಳಿರುತ್ತವೆ. ಇದಕ್ಕೆ ಏನು ಕಾರಣಗಳಿರುತ್ತವೆ ಎನ್ನುವುದು ಒಂದು ಪ್ರಶ್ನೆ. ಸಮುದಾಯ ಸಂಸ್ಕೃತಿಗಳನ್ನು ಹೋಲಿಸುವ ಅಧ್ಯಯನಗಳನ್ನು ಮಾಡುವವರು ಈ ಪ್ರಶ್ನೆಗೆ ಉತ್ತರಗಳನ್ನು ಕಂಡುಕೊಳ್ಳಲು ಸಾಧ್ಯವಾಗುತ್ತದೆ.

ಬಯ್ಗುಳಗಳನ್ನು ನುಡಿಗೆಲಸಗಳೆಂದು ಹೇಳಿದೆನಷ್ಟೆ. ಶಾಪ ರೂಪದ ಬಯ್ಗುಳಗಳನ್ನು ನೋಡೋಣ. ಇವುಗಳ ಜೊತೆಯಲ್ಲೇ ಸಮುದಾಯಗಳಲ್ಲಿ ಒಳಿತನ್ನು ಬಯಸುವ ನುಡಿಗಟ್ಟುಗಳೂ ಇರುತ್ತವೆ. ಸಾಮಾನ್ಯವಾಗಿ ವರ ಮತ್ತು ಶಾಪಗಳನ್ನು

ಜೊತೆಜೊತೆಯಲ್ಲಿ ಇರಿಸಿ ನೋಡುವುದುಂಟು. ಎರಡೂ ನುಡಿಗೆಲಸಗಳೇ ಆಗಿರುತ್ತವೆ. ಒಳಿತನ್ನು ಬಯಸುವ ನುಡಿಗಟ್ಟುಗಳಿಗೆ ಒಳಿತನ್ನು ಮಾಡುವ ಕಸುವು ಇರುವುದಿಲ್ಲ. ಅದು ನುಡಿಯುವವರಲ್ಲಿ ಇರುವ ಬಯಕೆ ಮಾತ್ರ, ಇದೇ ಮಾತು ಬಯ್ಗುಳಗಳಿಗೂ ಹೊಂದುತ್ತದೆ. ಶಾಪ ರೂಪದ ಬಯ್ಗುಳಗಳನ್ನು ಬಳಸಿದಾಗ , ಆ ಬಯ್ಗುಳಗಳ ತಿರುಳಿನಂತೆ ಏನೂ ನಡೆಯುವುದಿಲ್ಲ. ಆದರೆ ಹಾಗಾಗ ಬೇಕೆಂಬುದು ಬಯ್ಯುವವರಲ್ಲಿ ಇರುವ ಬಯಕೆ ಮಾತ್ರ ಆಗಿರುತ್ತದೆ. ಶಾಪ ರೂಪದ ಬಯ್ಗುಳಗಳನ್ನು ಬಳಸುವವರಿಗೆ ಆ ಬಯ್ಗುಳಗಳ ತಿರುಳು ಏನನ್ನು ಹೇಳುತ್ತದೆ ಎನ್ನುವುದು ಕೂಡ ಗೊತ್ತಿಲ್ಲದೇ ಇರಬಹುದು. ಏಕೆಂದರೆ ಅದರಲ್ಲಿ ಸೂಚಿತವಾಗುವ ಯಾವುದೋ ಕ್ರಿಯೆ ಈಗ ಆ ಸಮುದಾಯದ ನೆನಪಿನಿಂದ ಜಾರಿ ಹೋಗಿರಲೂ ಬಹುದು. ಆಗ ಸುಮ್ಮನೆ ನುಡಿಗಟ್ಟಿನ ನೆಲೆಯಲ್ಲಿ ಮಾತ್ರ ಇಂತ ಬಯ್ಗುಳಗಳು ಬಳಕೆಯಾಗುತ್ತಿರುತ್ತವೆ.

ನಾಗರಾಜ್ ಅವರು ಬಯ್ಗುಳಗಳನ್ನು ಬಳಸುವ ಹೊತ್ತಿನಲ್ಲಿ ಭಾಗೀದಾರ ರಾಗಿರುವ ಬಯ್ಯುವವರು, ಬಯ್ಯಿಸಿಕೊಳ್ಳುವವರು ಮತ್ತು ಕೆಲವು ಸಂದರ್ಭಗಳಲ್ಲಿ ಸುಮ್ಮನೆ ನಿಂತು ನೋಡುವವರು–ಈ ಮೂರು ವಲಯಗಳ ಜನರ ಆಂಗಿಕಗಳನ್ನು ಗುರುತಿಸಿದ್ದಾರೆ. ಇದೊಂದು ಸಮುದಾಯದ ವಿಶಿಷ್ಟವಾದ ಸಂಗತಿ. ನುಡಿಯುವಾಗ ನಮ್ಮ ಆಂಗಿಕಗಳು ಹೇಗಿರಬೇಕು ಎನ್ನುವುದನ್ನು ನಾವು ಎಚ್ಚರದಿಂದ ಆಯ್ಕೆ ಮಾಡಿಕೊಳ್ಳುತ್ತೇವೆ ಎಂದುಕೊಂಡರೂ ಅದನ್ನು ಸಮುದಾಯಕ್ಕೆ ವಿಶಿಷ್ಟವಾದ ನಡೆಗಳೂ ಕೂಡ ನಮ್ಮ ಮೇಲೆ ಹೇರುತ್ತವೆ. ಈ ಹೇರಿಕೆಯಿಂದ ಬಿಡುಗಡೆ ಪಡೆಯಲು ನಾವು ಕಲಿಕೆಯಿಂದ ಪ್ರಯತ್ನಿಸುತ್ತೇವೆ. ಆದರೆ ಮಾನಸಿಕವಾಗಿ ಉದ್ವಿಗ್ನರಾದಾಗ ಎಂದಿನ ಆಂಗಿಕಗಳು ನೆನಪಿನಿಂದ ಮತ್ತೆ ಹೊರಬರತೊಡಗುತ್ತವೆ. ಬಯ್ಗುಳಗಳ ಬಳಕೆಯ ಹೊತ್ತಿನಲ್ಲಿ ಇದೇ ಬಗೆಯಲ್ಲಿ ಆಂಗಿಕಗಳು ಇರುತ್ತವೆಂದು ತೋರುತ್ತದೆ. ಈ ವಲಯದಲ್ಲಿ ನಾಗರಾಜ್ ತೆರೆದಿಟ್ಟಿರುವ ದಾರಿಗಳಲ್ಲಿ ಇನ್ನೂ ಮುಂದೆ ಸಾಗಲು ಅವಕಾಶಗಳಿವೆ ಎಂದು ತೋರುತ್ತದೆ.

ಬಯ್ಗುಳಗಳು, ಹೊತ್ತಗೆಯಲ್ಲಿ ನಿರೂಪಿತವಾಗಿರುವ ಬಗೆಯಲ್ಲಿ ಮಾನಸಿಕ ಮತ್ತು ಸಾಮಾಜಿಕ ನೆಲೆಯಲ್ಲಿ ನುಡಿಗೆಲಸಗಳಂತೆ ಬಳಕೆಯಾಗುವುದು ದಿಟ ವಾದರೂ ಹಲವಾರು ಕಡೆಗಳಲ್ಲಿ ಇವು ಬೇರೊಂದು ಕೆಲಸವನ್ನು ಮಾಡುವಂತೆ ತೋರುತ್ತವೆ. ಅವುಗಳ ತಿರುಳು ಸೂಚಿಸುವ ನೆಲೆಗಿಂತ ಬೇರೆಯಾಗಿ ಬಯ್ಗುಳಗಳು ವಾಕ್ಯಗಳ ರಚನೆಯಲ್ಲಿ ತೆರಪನ್ನು ತುಂಬುವ ನುಡಿಗಟ್ಟುಗಳಾಗಿಯೂ ಬಳಕೆ ಯಾಗಬಹುದು. ಇಂತಹ ಕಡೆಗಳಲ್ಲಿ ಬಯ್ಯುವವರು ಬಯ್ಯುತ್ತಲೂ ಇರುವುದಿಲ್ಲ. ಬಯ್ಯಿಸಿಕೊಳ್ಳುವವರು ಆ ಮಾತುಗಳಿಂದ ವಿಚಲಿತರೂ ಆಗುತ್ತಿರುವುದಿಲ್ಲ.

ಮಾತುಕತೆಗಳಲ್ಲಿ ವಾಕ್ಯಗಳ ಮೊದಲಲ್ಲಿ ಇಲ್ಲವೇ ನಡುವೆ ಬಯ್ಗುಳಗಳ ತುಣುಕುಗಳನ್ನು ಸೇರಿಸಿ ಮಾತು ಮುಂದುವರೆಸುವುದನ್ನು ಹಲವು ಬಾರಿ ಗಮನಿಸಿರುತ್ತೇವೆ. ಈ ನೆಲೆಯಲ್ಲೂ ಮತ್ತಷ್ಟು ಅಧ್ಯಯನ ಮಾಡಲು ಅವಕಾಶಗಳಿವೆ.

ಕೊನೆಗೂ ನಾಗರಾಜ್ ಈ ಹೊತ್ತಗೆಯನ್ನು ಸಿದ್ಧಪಡಿಸಿ ಹೊರತರಲು ಸಿದ್ಧರಾದರು ಎಂಬುದೊಂದು ನನಗೆ ನಿರಾಳ ತರುವ ಮಾತು. ಏಕೆಂದರೆ ಈ ಕೆಲಸವನ್ನು ಮುಗಿಸಲಾಗಲಿಲ್ಲ ಎಂದು ಅವರು ದಶಕಗಳಿಂದ ಕೊರಗನ್ನು ಅನುಭವಿಸುವುದನ್ನು ಕಂಡಿದ್ದೇನೆ. ಈ ಬಿಡುಗಡೆ ಪಡೆದುದಕ್ಕಾಗಿ ಅವರಿಗೆ ನನ್ನ ಅಭಿನಂದನೆಗಳು.

ಕೆ.ವಿ.ನಾರಾಯಣ
ಬೆಂಗಳೂರು

ನಾಲ್ಕು ನುಡಿ

ಈ ಬಯ್ಗುಳ ಪದಗಳ ಗುಚ್ಛ ಅಥವಾ ಪದಕೋಶದಲ್ಲಿರುವ ಎಲ್ಲ ಪದಗಳನ್ನು ಶಾಸ್ತ್ರೋಕ್ತವಾಗಿ ಮೊದಲು ಬಿತ್ತರಿಸಿದ್ದು 'ವಿಜಯ ಕರ್ನಾಟಕ'ದ ಓದುಗರಿಗೆ. ಅಂದರೆ, ಈ ಪದಗಳನ್ನು ಅವರ ನಡುವಿನಿಂದಲೇ ಹೆಕ್ಕಿ, ಭಾವನೆಗಳಿಂದ ಕೂಡಿದ್ದ ಅದರ ಒರಟು ಸೊಗಡಿಗೆ, ಬುದ್ಧಿಯ/ಶಿಕ್ಷಣದ/ಜ್ಞಾನದ ಲೇಪನ ಹಚ್ಚಿ ಮತ್ತೆ ಅವರ ನಡುವೆ ಇಟ್ಟಾಗ, ಮೊದಮೊದಲು, ಓದುಗರು ಇದಕ್ಕೆ ಹೇಗೆ ಪ್ರತಿಕ್ರಿಯಿಸ ಬೇಕು ಎಂದು ತಿಳಿಯದೇ ಹೋದರು. **'ಇದು ಬೇಡ'** ಎಂದರು. **'ಇದು ಬೇಕೇ'** ಎಂದು ಕೇಳಿದರು. ದಿನ ಕಳೆದಂತೆ, **'ಇದು ನಮ್ಮ ಊರಿನ ಮಾತಲ್ಲ' – 'ನಮ್ಮದು ಇನ್ನೂ ತೀಕ್ಷ್ಣ' – 'ನಮ್ಮ ಸೊಗಡು ಬೇರೆ'– 'ನಮ್ಮ ಭಾಗದ ಬಯ್ಗುಳ ನಿಮಗೆ ತಿಳಿದಿಲ್ಲವೇ'** – ಎಂದೆಲ್ಲಾ ಮಾತನಾಡಲು ಪ್ರಾರಂಭಿಸಿದರು. ಬಯ್ಗುಳ ಪದಗಳೇ ಹಾಗೆ, ಮೊದಲು ನಿರಾಕರಣೆಯನ್ನು ಅನುಭವಿಸುತ್ತವೆ, ನಂತರ ಆಪ್ತವಾಗುತ್ತವೆ. ಬಯ್ಗುಳ ಪದಗಳು ಒಂದು ಭಾಷಾ ಸಮುದಾಯದ, ಸಮಾಜದ ಆಳದ ಅಭಿವ್ಯಕ್ತಿ. ಅವು ನಿರಾಕರಣೆಗೆ ಒಳಪಡುತ್ತಲೇ ನಮ್ಮನ್ನು ಆವರಿಸಿಕೊಳ್ಳುತ್ತವೆ. ಸಾಮಾಜಿಕ ಬಳಕೆಯ ವ್ಯಾಪ್ತಿಯಿಂದಾಚೆಗೆ ಈ ಬಯ್ಗುಳ ಪದಗಳನ್ನು ಅಂಕಣವಾಗಿ ಪ್ರಯೋಗಿಸುವುದರ ಹಿಂದೆ ಅನೇಕ ವಿಚಾರಗಳು ತಲೆಯಲ್ಲಿ ಸುಳಿದು ಹೋಗಿದ್ದವು.

ಒಬ್ಬ ಓದುಗನನ್ನು ಈ ಮೂಲಕ ಮನರಂಜಿಸಬಹುದೇ – ಓದುಗರಿಗೆ ಪ್ರತಿದಿನ ಸಣ್ಣ ಆಘಾತ ಉಂಟು ಮಾಡಬಹುದೇ – ಅವರ ತಾಳ್ಮೆಯ, ಸ್ಥೈರಣೆಯ ಪರಿಧಿಯನ್ನು ಈ ಮೂಲಕ ಪರೀಕ್ಷಿಸಿ ವಿಸ್ತರಿಸಬಹುದೇ – ಎಂದೆಲ್ಲಾ ಯೋಚಿಸಿದ್ದೆವು. 'ಮನರಂಜನೆ'–'ಆಘಾತ' ಇತ್ಯಾದಿಗಳ ನಡುವೆ 'ತಾಳ್ಮೆ' ಮತ್ತು 'ಸ್ಥೈರಣೆ'ಯ ವಿಚಾರ ನನಗೆ ರಾಜಕೀಯ ಪ್ರಶ್ನೆಗಳಾಗಿ ಕಂಡವು.

ನಮ್ಮ ಸುತ್ತಲಿನ ವಾತಾವರಣವನ್ನು ನಾವು 'ಏಕಮುಖಿ', 'ಏಕಸಂಸ್ಕೃತಿ' ಮಾಡ ಹೊರಟು, ಏಕಧರ್ಮದತ್ತ ಕೊಂಡೊಯ್ದು, ಅದಕ್ಕೆ ಇಲ್ಲಸಲ್ಲದ ಪೊಳ್ಳು ನೈತಿಕ ವಾಗ್ವಾದಗಳನ್ನು ನಮ್ಮ ದಿನಪತ್ರಿಕೆಗಳು ಸೃಷ್ಟಿ ಮಾಡುತ್ತಿದ್ದ ಹೊತ್ತಿನಲ್ಲಿ; ಜೊತೆಗೆ, ನಾವುಗಳು ವೈಯಕ್ತಿಕವಾಗಿ ಒಂದು ಅಪಾಯಕಾರಿ ನೀತಿಭ್ರಮೆಗೆ ಬೀಳುತ್ತಿದ್ದಾಗ– **(a dangerous moral imagining of ourselves)** – ಈ ಬಯ್ಗುಳ ಪದಗಳು ನಮ್ಮ ವಿಭಿನ್ನತೆ, ನಮ್ಮ ನಿಜಗುಣ, ನಮ್ಮ ನಡುವಿನ ಬೆಳಕಾಗಿ ಕಂಡಿದ್ದು ಒಂದು ಸೋಜಿಗ. ಬಿಗಿಯಾಗುತ್ತಿದ್ದ ಸಾಮಾಜಿಕ ವಾತಾವರಣವನ್ನು ತಿಳಿಗೊಳಿಸುವುದಕ್ಕೆ ಇದು ಕೊಂಚ ಸಹಾಯ ಮಾಡಬಹುದೆಂಬ ನಂಬಿಕೆಯಿಂದ ಇದನ್ನು ಪತ್ರಿಕೆಯಲ್ಲಿ ಪ್ರಯೋಗಿಸಲು ಪ್ರಾರಂಭಿಸಿದೆವು. ಕರ್ನಾಟಕದ ಮಾನಸಿಕ ಸ್ವಾಸ್ಥ್ಯವನ್ನು ಕಾಪಾಡಲು ಈ ಬಯ್ಗುಳ ಪದಗಳು ಒಂದು ಸಣ್ಣ ಕಾಣಿಕೆಯಿತ್ತಿವೆ ಎಂದು ತಿಳಿದುಬಂದರೆ ಈ ಪ್ರಯೋಗ ಸಾರ್ಥಕ.

ಸುಗತ ಶ್ರೀನಿವಾಸರಾಜು
ಬೆಂಗಳೂರು

ನನ್ನ ನುಡಿ

ಪಿಎಚ್.ಡಿ.,ಪದವಿಯನ್ನು ಪಡೆಯಲು ಅಗತ್ಯವಾದ ನಿಬಂಧದ ರಚನೆಗೆ ವಿಷಯವನ್ನಾಗಿ ಕನ್ನಡ ಬಯ್ಗುಳಗಳನ್ನು ಆಯ್ಕೆ ಮಾಡಿಕೊಳ್ಳುವಂತೆ ಸೂಚಿಸಿದ ಎಂ.ಚಿದಾನಂದಮೂರ್ತಿ ಅವರಿಗೆ; ಎಂ.ಫಿಲ್., ಅಧ್ಯಯನದ ಅವಧಿಯಲ್ಲಿ ಮಾರ್ಗದರ್ಶಕರಾಗಿದ್ದ ಕೆ.ಮರುಳಸಿದ್ದಪ್ಪನವರಿಗೆ; ಪಿಎಚ್.ಡಿ., ಅಧ್ಯಯನ ಅವಧಿಯಲ್ಲಿ ಮಾರ್ಗದರ್ಶನ ನೀಡಿದ ಕೆ.ವಿ.ನಾರಾಯಣ ಅವರಿಗೆ – ಈ ಮೂವರು ಗುರುಗಳಿಗೂ ಮೊಟ್ಟಮೊದಲು ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ.

ಬಯ್ಗುಳಗಳ ಸಂಗ್ರಹ ಕಾರ್ಯದಲ್ಲಿ ನೂರಾರು ಮಂದಿ ಗೆಳೆಯರು, ವಿದ್ಯಾರ್ಥಿಗಳು ಮತ್ತು ಹಳ್ಳಿಗಳಲ್ಲಿನ ಗುರುಹಿರಿಯರು ನನಗೆ ನೆರವನ್ನು ನೀಡಿದ್ದಾರೆ. ಅವರೆಲ್ಲರಿಗೂ ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ.

೧೯೮೬–೮೭ರಲ್ಲಿ ಎಂ.ಫಿಲ್., ತರಗತಿಯಲ್ಲಿ ಓದುತ್ತಿದ್ದಾಗ ಮತ್ತು ೧೯೮೮–೯೩ರ ಅವಧಿಯಲ್ಲಿ ಪಿಎಚ್.ಡಿ.,ಅಧ್ಯಯನದ ಅವಧಿಯಲ್ಲಿ ನನ್ನ ಓದು ಬರಹಕ್ಕೆ ನೆರವನ್ನು ನೀಡಿದ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರಿಗೆ ಮತ್ತು ಪ್ರಾಧ್ಯಾಪಕರಿಗೆ ವಂದನೆಗಳನ್ನು ಸಲ್ಲಿಸುತ್ತೇನೆ.

ಎಂ.ಫಿಲ್ ಮತ್ತು ಪಿಎಚ್.ಡಿ., ಪದವಿಯನ್ನು ಪಡೆಯಲು ಆಡಳಿತಾತ್ಮಕವಾದ ಅನುಮತಿಯನ್ನು ನೀಡಿ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಉತ್ತೇಜನ ನೀಡಿದ ಮಂಡ್ಯ ಜಿಲ್ಲೆಯ, ಮದ್ದೂರು ತಾಲ್ಲೂಕಿನ, ಕಾಳಮುದ್ದನದೊಡ್ಡಿಯ ಭಾರತಿ ಕಾಲೇಜಿನ ಆಡಳಿತ ಮಂಡಲಿ, ಪ್ರಿನ್ಸಿಪಾಲರು, ಸಹೋದ್ಯೋಗಿ ಮಿತ್ರರಿಗೆ ವಂದನೆಗಳನ್ನು ಸಲ್ಲಿಸುತ್ತೇನೆ.

ಸುಗತ ಶ್ರೀನಿವಾಸರಾಜು ಅವರು ವಿಜಯ ಕರ್ನಾಟಕ ದಿನಪತ್ರಿಕೆಯ ಪ್ರಧಾನ ಸಂಪಾದಕರಾಗಿದ್ದ ಅವಧಿಯಲ್ಲಿ ಬಯ್ಗುಳದ ನುಡಿಗಳಿಗೆ ನನ್ನಿಂದ ಟಿಪ್ಪಣಿಯನ್ನು

ಬರೆಯಿಸಿ ೨೦೧೨ ರ ಜೂನ್ ತಿಂಗಳಿನಿಂದ ೨೦೧೪ ಜನವರಿ ತಿಂಗಳಿನವರೆಗೆ ಪತ್ರಿಕೆಯಲ್ಲಿ ಪ್ರಕಟಿಸಿದರು. ಆ ಟಿಪ್ಪಣಿಯನ್ನು ಈ ಹೊತ್ತಗೆಯಲ್ಲಿ ಸೇರಿಸಿ ಪ್ರಕಟಿಸಿದ್ದೇನೆ. ಬಯ್ಗುಳದ ನುಡಿಗಳ ಟಿಪ್ಪಣಿ ರೂಪದ ಬರಹ ರೂಪುಗೊಳ್ಳು ವುದಕ್ಕೆ ಕಾರಣರಾದ ಸುಗತ ಶ್ರೀನಿವಾಸರಾಜು ಅವರಿಗೆ ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ.

ಕಳೆದ ಎಂಟು ತಿಂಗಳಿನಿಂದ ಬಯ್ಗುಳಕ್ಕೆ ಸಂಬಂಧಪಟ್ಟಂತೆ ನಾನು ಹೊಸದಾಗಿ ಬರೆದ ಬರಹಗಳನ್ನು ಒಟ್ಟು ಹದಿನಾಲ್ಕು ಕಂತುಗಳಲ್ಲಿ ಪ್ರಕಟಿಸಿದ ಆನ್ ಲೈನ್ ಮ್ಯಾಗಜೀನ್ 'ಹೊನಲು' ಮಿಂದಾಣದ (honalu.net) ಸಂಪಾದಕ ವರ್ಗದವರಿಗೆ ಮತ್ತು ಓದಿ ಉತ್ತೇಜನ ನೀಡಿದ 'ಹೊನಲು' ಓದುಗರಿಗೆ ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ.

ಬೆಂಗಳೂರಿನ ಮಲ್ಲೇಶ್ವರಂ ಬಡಾವಣೆಯಲ್ಲಿರುವ ಮಹಾರಾಣಿ ಲಕ್ಷ್ಮಿ ಅಮ್ಮಣ್ಣಿ ಮಹಿಳಾ ಕಾಲೇಜಿನ ಸ್ನಾತಕೋತ್ತರ ಕೇಂದ್ರದಲ್ಲಿ ೨೦೦೬ ರಿಂದ ೨೦೨೧ರ ವರೆಗೆ ಅಧ್ಯಾಪನ ಮಾಡಲು ಅವಕಾಶ ದೊರೆತಿದ್ದರಿಂದ , ನನ್ನ ಓದು ಬರಹಕ್ಕೆ ಹೆಚ್ಚಿನ ಉತ್ತೇಜನ ದೊರೆಯಿತು. ಈ ಕಾಲೇಜಿನ ವಿದ್ಯಾರ್ಥಿನಿಯರಿಗೆ ಮತ್ತು ಸಹೋದ್ಯೋಗಿ ಅಧ್ಯಾಪಕರಿಗೆ ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ.

೧೯೬೮ ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ವತಿಯಿಂದ ಮಂಗಳೂರಿನಲ್ಲಿ ಕನ್ನಡ ಸ್ನಾತಕೋತ್ತರ ಕೇಂದ್ರವನ್ನು ತೆರೆದು ನನ್ನಂತಹ ನೂರಾರು ಮಂದಿ ವಿಜ್ಞಾನ ಪದವೀಧರರು ಕನ್ನಡ ಅಧ್ಯಾಪಕರಾಗಿ ರೂಪುಗೊಳ್ಳಲು ಕಾರಣರಾದ ಗುರುಸಮಾನರಾದ ದೇಜಗೌ ಅವರಿಗೆ (ದೇ.ಜವರೇಗೌಡರು) ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ.

೧೯೬೯ರಿಂದ ೧೯೭೧ರ ಅವಧಿಯಲ್ಲಿ ಮಂಗಳೂರಿನ ಕನ್ನಡ ಸ್ನಾತಕೋತ್ತರ ಕೇಂದ್ರದ ಕನ್ನಡ ಎಂ.ಎ.,ತರಗತಿಯಲ್ಲಿ ಗುರುಗಳಾಗಿದ್ದ ಎಸ್.ವಿ.ಪರಮೇಶ್ವರ ಭಟ್ಟರು, ಎಚ್.ಜೆ.ಲಕ್ಕಪ್ಪ ಗೌಡರು, ಗುಂಡ್ಮಿ ಚಂದ್ರಶೇಖರ ಐತಾಳರು, ಮಂಜುನಾಥ ಭಟ್ಟರು ಮತ್ತು ಬಿ.ಎ.ವಿವೇಕ ರೈ ಅವರಿಗೆ ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ.

೧೯೭೧ ರಿಂದ ೨೦೨೧ರವರೆಗೆ ಐವತ್ತು ವರ್ಷಗಳ ಕಾಲ ಕನ್ನಡ ಅಧ್ಯಾಪಕನಾಗಿ ನಾನು ರೂಪುಗೊಳ್ಳಲು ತಮ್ಮ ಪ್ರೀತಿ ಮತ್ತು ವಿಶ್ವಾಸದ ನಡೆನುಡಿ ಗಳಿಂದ ನೆರವಾದ ಅರ್ಜುನಪುರಿ ಕಾಲೇಜು, ಭಾರತಿ ಕಾಲೇಜು ಮತ್ತು ಮಹಾರಾಣಿ ಲಕ್ಷ್ಮಿ ಅಮ್ಮಣ್ಣಿ ಮಹಿಳಾ ಕಾಲೇಜಿನ ವಿದ್ಯಾರ್ಥಿ ಬಳಗಕ್ಕೆ ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ.

೧೯೮೮ ರಿಂದ ನಿರಂತರವಾಗಿ ನನ್ನ ಓದು ಬರಹಕ್ಕೆ ಮಾರ್ಗದರ್ಶಕರಾಗಿರುವ ಗುರುಗಳಾದ ಕೆ.ವಿ.ನಾರಾಯಣ ಅವರು 'ಕನ್ನಡ ಬಯ್ಗುಳ ಓದು' ಬರಹಕ್ಕೆ

ಮುನ್ನುಡಿಯನ್ನು ಬರೆದು ಉತ್ತೇಜನ ನೀಡಿದ್ದಾರೆ. ಸುಗತ ಶ್ರೀನಿವಾಸರಾಜು ಅವರು ಬಯ್ಗುಳದ ಟಿಪ್ಪಣಿಗೆ ಬರೆದಿದ್ದ ಮುನ್ನುಡಿಯನ್ನು ಈ ಹೊತ್ತಗೆಯಲ್ಲಿ ಹಾಕಿಕೊಂಡಿದ್ದೇನೆ. ಮುನ್ನುಡಿಗಳನ್ನು ಬರೆದ ಇವರಿಗೆ ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ.

ಬಯ್ಗುಳದ ಓದಿಗೆ ಅಗತ್ಯವಾದ ಇಂಗ್ಲಿಶ್ ನುಡಿಯ ಪುಸ್ತಕಗಳನ್ನು ಅಮೆರಿಕಾದಿಂದ ನನಗೆ ಕಳುಹಿಸಿ ನೆರವಾದ ನನ್ನ ಅಳಿಯ ಶಿವರಾಜು ಮತ್ತು ಮಗಳು ಗೌತಮಿಗೆ ಹಾಗೂ ನನ್ನ ಬರಹಗಳ ಮೊದಲ ಓದುಗಳಾದ ನನ್ನ ಹೆಂಡತಿ ಗಾಯತ್ರಿಗೆ ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ. ಈ ಬರಹದ ಕರಡು ಪ್ರತಿಯನ್ನು ಓದಿ ಉತ್ತೇಜನದ ನುಡಿಗಳನ್ನಾಡಿದ ನನ್ನ ಗುರು ಹಿರಿಯರಿಗೆ ಮತ್ತು ಗೆಳೆಯರಿಗೆ ವಂದನೆಗಳನ್ನು ಸಲ್ಲಿಸುತ್ತೇನೆ.

ಸಿ.ಪಿ. ನಾಗರಾಜ
ಬೆಂಗಳೂರು

ಪರಿವಿಡಿ

೧. ಬಯ್ಗುಳ ಓದಿನ ಮೊದಲು ೧೫
೨. ಬಯ್ಗುಳ ಸಂಗ್ರಹದ ಕೆಲಸ ೨೨
೩. ನಾವೇಕೆ ಬಯ್ಯುತ್ತೇವೆ? ೨೯
೪. ಬಯ್ಯುವಿಕೆ : ಮೆದುಳಿನ ನರಮಂಡಲ ೫೦
೫. ಬಯ್ಯುವಿಕೆ : ಮಾನಸಿಕ ಬೆಳವಣಿಗೆ ೬೬
೬. ಬಯ್ಯುವಿಕೆ : ಸಮಾಜದ ರಚನೆ ಮತ್ತು ಸಂಸ್ಕೃತಿಯ ಆಚರಣೆಗಳು ೭೩
೭. ಬಯ್ಯುವಿಕೆ–ಬಯ್ಗುಳದ ನುಡಿಗಳು–ಬಯ್ಗುಳದ ಬಗೆಗಳು ... ೮೧
೧. ಆರೋಪದ ಬಯ್ಗುಳ ೮೪
೨. ಶಾಪ ರೂಪದ ಬಯ್ಗುಳ ೯೩
೩. ಕಾಮದ ನಂಟಿನ ಬಯ್ಗುಳ ೧೦೨
೮. ಬಯ್ಗುಳದ ಬಗೆಗಿನ ಸಾಮಾಜಿಕ ನಿಲುವು ಮತ್ತು ನಂಬಿಕೆ ... ೧೦೮
೯. ಬಯ್ಯುವಿಕೆಯಲ್ಲಿ ತೊಡಗಿದವರ ದೇಹದ ಚಹರೆಗಳು... ... ೧೧೩
೧೦. ಬಯ್ಗುಳದ ಮಾತಿನ ಪ್ರಸಂಗದಲ್ಲಿ ಇತರರು ಇರುವುದು ... ೧೧೯
೧೧. ಬಯ್ಯುವಿಕೆ : ಜಾತಿ ಮತ್ತು ವರ್ಗ ೧೨೨
೧೨. ಬಯ್ಯುವಿಕೆ : ಗಂಡಸು ಮತ್ತು ಹೆಂಗಸು ೧೨೮
೧೩. ಬಯ್ಯುವಿಕೆ : ಇನ್ನಿತರ ಸಂಗತಿಗಳು ೧೩೧
೧೪. ಬಯ್ಗುಳ ಓದಿನ ಮುಂದುವರಿಕೆ ೧೩೩
೧೫. ಬಯ್ಗುಳ : ಟಿಪ್ಪಣಿ ೧೩೬
೧೬. ಸಂಗ್ರಹಿಸಿದ ಬಯ್ಗುಳಗಳು ೨೪೦
೧೭. ಓದಿಗೆ ನೆರವಾದ ಲೇಖನಗಳು ಮತ್ತು ಪುಸ್ತಕಗಳು ೨೬೧

೧. ಬಯ್ಗುಳ ಓದಿನ ಮೊದಲು

ಗುರುಗಳಾದ ಎಂ.ಚಿದಾನಂದಮೂರ್ತಿಯವರು ೧೯೭೬ರಲ್ಲಿ ಬರೆದ **'ಶಬ್ದಕೋಶ ಪ್ರಪಂಚದ ಅಗ್ನಿಕುಂಡ ಬೈಗುಳಗಳು'** ಎಂಬ ಬರಹವನ್ನು ಓದಿದ ನಂತರ, ನನ್ನ ಸುತ್ತಮುತ್ತಣ ಸಾಮಾಜಿಕ ಪರಿಸರದ ಜನಸಮುದಾಯದ ಮಾತುಕತೆಯಲ್ಲಿ ದಿನ ನಿತ್ಯ ಬಳಕೆಯಲ್ಲಿರುವ ಕನ್ನಡ ಬಯ್ಗುಳಗಳನ್ನು ಕಲೆ ಹಾಕಬೇಕೆಂಬ ಆಸೆಯಾಯಿತು. ಕನ್ನಡ ಅಧ್ಯಾಪಕನಾಗಿ ನಾನು ಕೆಲಸ ಮಾಡುತ್ತಿದ್ದ ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಕಾಳಮುದ್ದನದೊಡ್ಡಿಯ ಭಾರತಿ ಕಾಲೇಜಿನ ಆಸುಪಾಸಿನಲ್ಲಿದ್ದ ಸುಮಾರು ನಲವತ್ತು ಐವತ್ತು ಹಳ್ಳಿಗಳಲ್ಲಿ ಬಳಕೆಯಲ್ಲಿದ್ದ ಬಯ್ಗುಳದ ಬಿಡಿಬಿಡಿ ಪದಗಳನ್ನು, ನುಡಿಗಟ್ಟುಗಳನ್ನು ಮತ್ತು ವಾಕ್ಯರೂಪದ ಬಯ್ಗುಳಗಳನ್ನು ಒಂದು ಕಡೆ ಬರೆದಿಟ್ಟುಕೊಳ್ಳತೊಡಗಿದೆನು. ಒಂದೆರಡು ವರ್ಷಗಳಲ್ಲಿ ಆರು ನೂರಕ್ಕಿಂತ ಹೆಚ್ಚಿನ ಸಂಖ್ಯೆಯ ಬಯ್ಗುಳಗಳು ನನ್ನ ಸಂಗ್ರಹದ ಪಟ್ಟಿಯಲ್ಲಿದ್ದವು.

೧೯೮೬-೮೭ನೆಯ ಸಾಲಿನಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಕೇಂದ್ರದಲ್ಲಿ ಎಂ.ಫಿಲ್., ತರಗತಿಯಲ್ಲಿ ಓದುವ ಅವಕಾಶ ದೊರೆತಾಗ, ಎಂ.ಚಿದಾನಂದಮೂರ್ತಿಯವರ ಸಲಹೆಯಂತೆ ಕನ್ನಡ ಬಯ್ಗುಳಗಳನ್ನು ಕುರಿತು ನಿಬಂಧವನ್ನು ರಚಿಸಲು ತೊಡಗಿದೆನು. ಗುರುಗಳಾದ ಕೆ.ಮರುಳಸಿದ್ದಪ್ಪನವರ ಮಾರ್ಗದರ್ಶನದಲ್ಲಿ ನಿಬಂಧವನ್ನು ಸಿದ್ಧಪಡಿಸಲೆಂದು ಓದಲು ತೊಡಗಿದಾಗ, ಅದುವರೆವಿಗೂ ಕನ್ನಡ ಬಯ್ಗುಳಗಳನ್ನು ಕುರಿತು ರಚನೆಗೊಂಡಿದ್ದ ಈ ಕೆಳಕಂಡ ಒಂಬತ್ತು ಬರಹಗಳನ್ನು ಮತ್ತು ಬಯ್ಗುಳದ ಒಂದು ಸಂಕಲನವನ್ನು ಅವಲೋಕಿಸಿದೆನು.

೧. ತಪಸ್ವೀ ಕುಮಾರ್ (೧೯೭೦): 'ಗ್ರಾಮ್ಯ ಬಯ್ಗುಳ ಬನಿ'
ಈ ಬರಹದಲ್ಲಿ ಶಾಪ ರೂಪದ ಇಪ್ಪತ್ತೆರಡು ಬಯ್ಗುಳಗಳನ್ನು ವಿವರಿಸಿದ್ದಾರೆ. ಇಲ್ಲಿನ ಬಹುತೇಕ ಬಯ್ಗುಳಗಳು ಸಾವಿನ ಆಶಯವನ್ನು ಸೂಚಿಸುತ್ತವೆ. ಶವ ಸಂಸ್ಕಾರದ ಆಚರಣೆಗಳು ನಮ್ಮ ಸಮಾಜದಲ್ಲಿ ಯಾವ ಯಾವ ರೀತಿಯಲ್ಲಿ ನಡೆಯುತ್ತಿದ್ದವು ಎಂಬುದರ ಸಾಂಸ್ಕೃತಿಕ ವಿವರಗಳನ್ನು ಬಯ್ಗುಳದ ನುಡಿಗಟ್ಟುಗಳ ಹಿನ್ನೆಲೆಯಲ್ಲಿ ವಿವರಿಸಿದ್ದಾರೆ.

೨. ಮೃತ್ಯುಂಜಯ ಹೊರಕೇರಿ (೧೯೭೫): 'ಬೈಗುಳ: ಜನಪದ ಸಾಹಿತ್ಯದ ಒಂದು ಪ್ರಕಾರ'
"ಹಾಡು, ಕಥೆ, ಒಡಪು, ಒಗಟು, ಗಾದೆಗಳಂತೆ ಜನಪದ ಸಾಹಿತ್ಯದ ಇನ್ನೊಂದು ಪ್ರಕಾರ ಬೈಗುಳ" ಎಂಬ ಅಂಶವನ್ನು ಈ ಬರಹದಲ್ಲಿ ಪ್ರತಿಪಾದಿಸಿದ್ದಾರೆ. ಬಯ್ಗುಳಗಳನ್ನು 'ನಾಗರಿಕ ಮತ್ತು ಗ್ರಾಮ್ಯ' ಎಂಬ ಎರಡು ಪ್ರಮುಖ ವಿಧಗಳಾಗಿ ವಿಂಗಡಿಸಿ, ಗ್ರಾಮ್ಯ ಬಯ್ಗುಳಗಳಲ್ಲಿ 'ಶೀಲ ಮತ್ತು ಅಶ್ಲೀಲ' ಎಂಬ ವರ್ಗೀಕರಣವನ್ನು ಮಾಡಿದ್ದಾರೆ. ಅಶ್ಲೀಲ ಬಯ್ಗುಳಗಳನ್ನು ತಮ್ಮ ಅಧ್ಯಯನದ ವ್ಯಾಪ್ತಿಯಿಂದ ಹೊರತುಪಡಿಸಿ, ಶೀಲ ಬಯ್ಗುಳಗಳನ್ನು ಮತ್ತೆ ಮೂರು ವಿಧದಲ್ಲಿ ವಿಂಗಡಿಸಿದ್ದಾರೆ.
೧. ಗಂಡಸರ ಬಯ್ಗುಳ
೨. ಹೆಂಗಸರ ಬಯ್ಗುಳ
೩. ಉಭಯರ ಹಾಸ್ಯದ ಬಯ್ಗುಳ
ತಾವು ಮಾಡಿರುವ ವರ್ಗೀಕರಣಕ್ಕೆ ಅನುಗುಣವಾಗಿ ಉತ್ತರ ಕರ್ನಾಟಕದ ಕಡೆ ಚಲಾವಣೆಯಲ್ಲಿರುವ ಹಲವಾರು ಬಯ್ಗುಳಗಳನ್ನು ಉದಾಹರಣೆ ಯಾಗಿ ನೀಡಿದ್ದಾರೆ.

೩. ಎಂ.ಚಿದಾನಂದಮೂರ್ತಿ(೧೯೭೬): 'ಶಬ್ದಕೋಶ ಪ್ರಪಂಚದ ಅಗ್ನಿಕುಂಡ ಬೈಗುಳಗಳು'
"ಬೈಗುಳಗಳನ್ನು ಶಾಬ್ದಿಕ ಹೊಡೆತ ಎನ್ನಬಹುದು" ಎಂದು ವ್ಯಾಖ್ಯಾನಿಸಿರುವ ಲೇಖಕರು, ಬಯ್ಗುಳದ ನಿಯೋಗಗಳನ್ನು ಮನಶ್ಶಾಸ್ತ್ರದ ಹಿನ್ನೆಲೆಯಲ್ಲಿ ವಿಶ್ಲೇಷಣೆ ಮಾಡಿದ್ದಾರೆ. ಬಯ್ಗುಳಗಳನ್ನು ಪ್ರಯೋಗಿಸುವ ವ್ಯಕ್ತಿಯ ಮಾನಸಿಕ ಉಪಶಮನ, ಸಮತೋಲನ ಮತ್ತು ಸ್ವರಕ್ಷಣೆಯ ಅಂಶಗಳನ್ನು ಬಯ್ಗುಳದ ಪ್ರಮುಖ ನಿಯೋಗಗಳೆಂದು ಪರಿಭಾವಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಬಯ್ಗುಳದ ಅಭಿವ್ಯಕ್ತಿಯು "ಸಮಾಜದ ಮಾನಸಿಕ ಅಸ್ವಾಸ್ಥ್ಯತೆಗೆ ಒಂದು ಪರಿಣಾಮಕಾರಿ

ಔಷಧವೂ ಕೂಡ ಆಗಬಲ್ಲುದು" ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಬಯ್ಗುಳಗಳು ನೀಡುವ ಅರ್ಥಕ್ಕೆ ಅನುಸಾರವಾಗಿ, ಅವುಗಳನ್ನು 'ತೀವ್ರ-ತೀವ್ರತರ-ತೀವ್ರತಮ' ಎಂದು ವಿಂಗಡಿಸಿದ್ದಾರೆ. ಬಯ್ಗುಳದ ಅಭಿವ್ಯಕ್ತಿಯ ಮುಖ್ಯ ಉದ್ದೇಶ ದ್ವೇಷದ ಸಂಕೇತವಾಗಿದ್ದರೂ, ಹಲವೊಮ್ಮೆ ಸ್ನೇಹದ ಸಂಕೇತವಾಗಿಯೂ ಹಲವರಲ್ಲಿ ಬಯ್ಗುಳಗಳು ಅಭಿವ್ಯಕ್ತಗೊಳ್ಳುತ್ತವೆಯೆಂದು ಹೇಳಿದ್ದಾರೆ. ಕೆಲವು ಜನರು ಆಡುವ ಮಾತಿನ ಶೈಲಿಯಲ್ಲಿ ವಾಗ್ರೂಢಿಯಾಗಿ ಯಾವುದೇ ಉದ್ದೇಶವಿಲ್ಲದೆ ಬಯ್ಗುಳಗಳು ನಿರಂತರವಾಗಿ ಹೊರ ಹೊಮ್ಮುವುದನ್ನು ಲೇಖಕರು ಗಮನಿಸಿದ್ದಾರೆ.

ಅನಕ್ಷರಸ್ಥರಾಗಿರುವ ಸಾಮಾಜಿಕ ಕೆಳವರ್ಗದವರು ಮಾಡುವ ಗ್ರಾಮ ದೇವತೆಯ ಆರಾಧನೆಯ ಸಂದರ್ಭಗಳಲ್ಲಿ ಆ ದೇವತೆಯನ್ನು ಅತ್ಯಂತ ಹೊಲಸಾದ ಭಾಷೆಯಲ್ಲಿ ಬೈದು ಹಾಡುವುದನ್ನು ಗುರುತಿಸುತ್ತ, ಬೈಗುಳಗಳು ರಿಚುಯಲ್ (ಆಚರಣೆ) ಹಂತಕ್ಕೆ ಏರಿರುವುದನ್ನು ಪ್ರಮುಖವಾಗಿ ಗಮನಿಸಬೇಕೆಂದು ಸೂಚಿಸಿದ್ದಾರೆ. ಸಮಾಜಶಾಸ್ತ್ರ, ಮನಶ್ಶಾಸ್ತ್ರ, ಮಾನವ ವಿಜ್ಞಾನ, ಭಾಷಾ ವಿಜ್ಞಾನ ಮತ್ತು ಜಾನಪದ ಶಿಸ್ತುಗಳ ಹಿನ್ನೆಲೆಯಲ್ಲಿ ಬಯ್ಗುಳಗಳನ್ನು ಕುರಿತು ಅಧ್ಯಯನ ನಡೆಯಬೇಕೆಂಬ ಅಭಿಲಾಷೆಯನ್ನು ವ್ಯಕ್ತಪಡಿಸಿದ್ದಾರೆ. ಈ ಲೇಖನದ ಯಾವುದೇ ಹಂತದಲ್ಲಿಯೂ ಬಯ್ಗುಳಗಳನ್ನು ಉದಾಹರಣೆಯಾಗಿ ನೀಡಿಲ್ಲ.

೪. ಬಸವರಾಜ ನೆಲ್ಲಿಸರ(೧೯೭೯): 'ಗ್ರಾಮ ಜೀವನದಲ್ಲಿ ಬಯ್ಗುಳಗಳು'

ಗ್ರಾಮೀಣ ಜೀವನದ ವಿವಿಧ ನೆಲೆಗಳಲ್ಲಿ ಬಯ್ಗುಳದ ನುಡಿಗಳು ಯಥೇಚ್ಛವಾಗಿ ಬಳಕೆಯಾಗುವುದನ್ನು ಲೇಖಕರು ಗಮನಿಸಿದ್ದಾರೆ. ವಿದ್ಯಾವಂತ ಜನರಿಗಿಂತಲೂ ಅಧಿಕವಾಗಿ ಅನಕ್ಷರಸ್ಥರಾದ ಹಳ್ಳಿಗರು ಬಯ್ಗುಳಗಳನ್ನು ತೀವ್ರವಾಗಿ ಪ್ರಯೋಗಿಸುವುದನ್ನು ಹಲವಾರು ಕಾಲ್ಪನಿಕ ಸಂದರ್ಭಗಳ ಮೂಲಕ ಉದಾಹರಿಸಿದ್ದಾರೆ. 'ಬಯ್ಯುವುದೂ ಒಂದು ಕಲೆ, ಅದು ಎಲ್ಲರಿಗೂ ಬರುವಂತಹುದಲ್ಲ' ಎಂದು ಹೇಳುತ್ತ, ತೀವ್ರವಾಗಿ ಬಯ್ಗುಳಗಳನ್ನಾಡುವ ವ್ಯಕ್ತಿಗಳ ದೈಹಿಕ ಮತ್ತು ಮಾನಸಿಕ ಸ್ಥಿತಿಗತಿಗಳನ್ನು ಸಂಕ್ಷಿಪ್ತವಾಗಿ ವಿಶ್ಲೇಷಿಸಿದ್ದಾರೆ. ಭಾಷೆಯಲ್ಲಿ ಸಾಮಾನ್ಯ ಅರ್ಥಗಳಲ್ಲಿ ಚಲಾವಣೆಯಲ್ಲಿರುವ ಪದಗಳೇ, ಹೇಗೆ ಅವುಗಳನ್ನು ಬಳಸಿದ ಸಂದರ್ಭದ ಕಾರಣದಿಂದ ಬಯ್ಗುಳದ ಅರ್ಥವನ್ನು ಪಡೆಯುತ್ತವೆ ಎಂಬುದನ್ನು ಉದಾಹರಣೆಗಳೊಡನೆ ವಿವರಿಸಿದ್ದಾರೆ. ಬಯ್ಗುಳವನ್ನಾಡುವ ಸಂದರ್ಭದಲ್ಲಿ, ಅದರ ಜತೆಜತೆಗೆ ಪರಿಣಾಮ ತೀವ್ರತೆಗಾಗಿ ಬರುವಂತಹ 'ಬಯ್ಗುಳ ಶಬ್ದಯುಕ್ತವಾದ ಗಾದೆ ಮಾತುಗಳನ್ನು' ವಿಶ್ಲೇಷಿಸಿದ್ದಾರೆ.

೫. **ಟಿ.ಎಸ್. ಸತ್ಯನಾಥ್(೧೯೮೨): 'ಆಟಗಳು: ಮನೋವೈಜ್ಞಾನಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯಲ್ಲಿ'**

ಆಟವೊಂದರ ಸಾಮಾಜಿಕ ಸಾಂಸ್ಕೃತಿಕ ಪರಿಣಾಮಗಳನ್ನು ಕುರಿತು ವಿಶ್ಲೇಷಣೆ ಮಾಡಿರುವ ಈ ಲೇಖನದ ಅಂತ್ಯ ಭಾಗದಲ್ಲಿ **'ನಿನ್ನಕ್ಕನಾ ಕೆಯ್ಯ'** ಎಂಬ ಒಂದು ಬಯ್ಗುಳವನ್ನು ಅಧ್ಯಯನ ಮಾಡಿದ್ದಾರೆ. ಈ ಬಯ್ಗುಳವನ್ನು ೧೦ ರಿಂದ ೧೪ ವಯಸ್ಸಿನ ಹುಡುಗರು ವ್ಯಾಪಕವಾಗಿ ಬಳಸುವುದನ್ನು ಗಮನಿಸಿರುವ ಲೇಖಕರು, ಈ ಬಯ್ಗುಳದ ನಿಯೋಗಾತ್ಮಕ ಅಂಶಗಳನ್ನು ಸಾಂಸ್ಕೃತಿಕ, ಮನೋವೈಜ್ಞಾನಿಕ ಮತ್ತು ಸಾಮಾಜಿಕ ಪರಿಣಾಮಗಳ ಹಿನ್ನೆಲೆಯಲ್ಲಿ ವಿಶ್ಲೇಷಣೆ ಮಾಡಿದ್ದಾರೆ. ಲೇಖಕರ ಅಭಿಮತದಂತೆ "ಈ ಬಯ್ಗುಳವನ್ನು ಉಪಯೋಗಿಸುತ್ತಿರುವ ಹುಡುಗ ತನ್ನನ್ನು ತಾನು ವಯಸ್ಕತನಕ್ಕೆ ರೂಪಾಂತರಗೊಳಿಸಿಕೊಳ್ಳಲು ಮಾನಸಿಕ ಬೌದ್ಧಿಕ ಕಸರೊತ್ತೊಂದನ್ನು ಮಾಡುತ್ತಿದ್ದಾನೆ." ಹಾಗೂ "ಒಂದು ಹುಡುಗನ ಎದುರಿಗೇ ಅವನ ಅಕ್ಕನ ಶೀಲವನ್ನು ಹರಣ ಮಾಡುತ್ತೇನೆಂದು ಹೇಳುವುದರ ಮೂಲಕ ಎದುರಾಳಿಯ ಮೇಲೆ ಸಾಧಿಸಲಾಗುವ ಮಾನಸಿಕ ಮೇಲುಗೈ ಹಾಗೂ ಆ ಮೂಲಕ ಬರುವ ಪ್ರತಿಷ್ಠೆ ಎಲ್ಲವೂ ಒಟ್ಟಾಗಿ ಸೇರಿ ವಯಸ್ಕನಾಗಲು ಯತ್ನಿಸುತ್ತಿರುವವನ ಹುರುಡನ್ನು ತೀವ್ರಗೊಳಿಸಲು ಸಹಾಯ ಮಾಡುತ್ತವೆ" ಎಂದು ಅಭಿಪ್ರಾಯಪಟ್ಟಿದ್ದಾರೆ. ಈ ಬಯ್ಗುಳ ಪ್ರಯೋಗದ ಸಂದರ್ಭದಲ್ಲಿ ಅಭಿವ್ಯಕ್ತಗೊಳ್ಳುವ ಆಂಗಿಕ ಅಭಿನಯದ ಸಾಂಕೇತಿಕ ಅರ್ಥಗಳನ್ನು ಜೀವ ವಿಜ್ಞಾನದ ಹಿನ್ನೆಲೆಯಲ್ಲಿ ವ್ಯಾಖ್ಯಾನಿಸಿದ್ದಾರೆ.

೬. **ಕಾವ್ಯ ಜೀವಿ (೧೯೮೨): 'ಜನಪದ ಬಯ್ಗುಳಗಳು–ಒಂದು ವಿಶ್ಲೇಷಣೆ'**

ಒಂದು ನೂರ ಇಪ್ಪತ್ತು ಬಯ್ಗುಳಗಳ ಪಟ್ಟಿಯನ್ನು ಸಿದ್ಧಪಡಿಸಿಕೊಂಡು, ಬಯ್ಗುಳಗಳನ್ನು ಭಾಷಾ ವಿಜ್ಞಾನದ ಹಿನ್ನೆಲೆಯಲ್ಲಿ ವಿಶ್ಲೇಷಣೆ ಮಾಡಿದ್ದಾರೆ. ಕನ್ನಡಿಗರು ಬಳಸುವ ಬಯ್ಗುಳಗಳಲ್ಲಿ ಕಂಡು ಬರುವ ಹಿಂದಿ, ಉರ್ದು, ಸಂಸ್ಕೃತ, ಪಾರ್ಸಿ, ಅರಬ್ಬಿ ಭಾಷೆಯ ಅನೇಕ ಶಬ್ದಗಳನ್ನು ಗುರುತಿಸಿದ್ದಾರೆ. ಬಯ್ಗುಳದ ರಚನೆಯನ್ನು ಮೂಲ, ಜನ್ಯ, ಸಂಯುಕ್ತ ಎಂಬ ಮೂರು ವಿಧಗಳಲ್ಲಿ ವಿಂಗಡಿಸಿಕೊಂಡು, ತಮ್ಮ ವಿಂಗಡಣೆಗೆ ಅನುಗುಣವಾಗಿ ಅನೇಕ ಉದಾಹರಣೆಗಳನ್ನು ನೀಡಿದ್ದಾರೆ. ಬಯ್ಗುಳದ ನುಡಿಗಳಲ್ಲಿ ವ್ಯಾಪಕವಾಗಿ ಕಂಡು ಬರುವ ವಿಷಯಗಳನ್ನು ಪ್ರಸ್ತಾಪಿಸುತ್ತ ವ್ಯಭಿಚಾರ, ವಿಶ್ವಾಸದ್ರೋಹ, ಸೋಮಾರಿತನ ಮತ್ತು ಕಳ್ಳತನಕ್ಕೆ ಸಂಬಂಧಿಸಿದ ವಿಷಯಗಳೇ ಪ್ರಧಾನವಾಗಿರುವುದನ್ನು ವಿವರಿಸಿದ್ದಾರೆ.

೭. ಹರಿಕೃಷ್ಣ ಭಟ್ (೧೯೮೨): 'ದಕ್ಷಿಣ ಕನ್ನಡ ಹವ್ಯಕರ ಬೈಗಳು'

ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ಹಾಗೂ ಸುಳ್ಯ ತಾಲ್ಲೂಕು ಮತ್ತು ಕೇರಳ ರಾಜ್ಯಕ್ಕೆ ಸೇರಿರುವ ಕಾಸರಗೋಡು ತಾಲ್ಲೂಕುಗಳಲ್ಲಿ ನೆಲೆಸಿರುವ ಹವ್ಯಕ ಜನಸಮುದಾಯದಲ್ಲಿ ಬಳಕೆಯಲ್ಲಿರುವ ಒಂದು ನೂರ ಎಂಬತ್ತು ಬಯ್ಗುಳ ಗಳನ್ನು ಸಂಗ್ರಹಿಸಿ ವಿಶ್ಲೇಷಣೆ ಮಾಡಿದ್ದಾರೆ. ದ್ರಾವಿಡ ಭಾಷೆಗಳಾದ ತಮಿಳು, ತೆಲುಗು, ತುಳು ಮತ್ತು ಮಲೆಯಾಳಗಳಲ್ಲಿ ಕನ್ನಡದ 'ಬೈಗಳು' ಪದಕ್ಕೆ ಸಮಾನಾರ್ಥವಾದ ಪದಗಳು ಯಾವುವು ಎಂಬುದನ್ನು ಪಟ್ಟಿ ಮಾಡಿದ್ದಾರೆ. 'ಬೈಗಳು' ಪದದ ನಿಷ್ಪತ್ತಿಯ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಪ್ರಯೋಗದ ಸಂದರ್ಭದಲ್ಲಿ ಬಯ್ಗುಳದ ಪದಗಳು ಉಂಟುಮಾಡ ಬಹುದಾದ ಪರಿಣಾಮ ತೀವ್ರತೆಯ ವೈವಿಧ್ಯಗಳನ್ನು ಈ ಕೆಳಕಂಡಂತೆ ನಾಲ್ಕು ತೆರನಾಗಿ ವಿಂಗಡಿಸಿದ್ದಾರೆ.

೧. ತೀಕ್ಷ್ಣವಾದುವು/ಕಠೋರವಾದುವು
೨. ಸಾದಾದವು
೩. ಕೊಂಡಾಟದವು
೪. ಇತರ ಬೈಗುಳು

ಈ ಒಂದೊಂದು ವಿಂಗಡಣೆಗೂ ಹಲವಾರು ಬಯ್ಗುಳಗಳನ್ನು ಉದಾಹರಣೆ ಯಾಗಿ ನೀಡಿದ್ದಾರೆ. ಅನುಬಂಧದಲ್ಲಿ ತಾವು ಸಂಗ್ರಹಿಸಿದ್ದ ಬಯ್ಗುಳಗಳನ್ನು ಅಕಾರಾದಿಯಾಗಿ ಪಟ್ಟಿ ಮಾಡಿದ್ದಾರೆ.

೮. ಪಿ.ಕೆ.ಕೃಷ್ಣಭಟ್ (೧೯೮೩): 'ಬೈಗಳು–ಒಂದು ಅಧ್ಯಯನ'

ಕೇರಳ ರಾಜ್ಯಕ್ಕೆ ಸೇರಿರುವ ಕಾಸರಗೋಡಿನ ಕಾರಡ್ಕ ಮುಳ್ಳೇರಿಯಾ ಪ್ರೌಢಶಾಲೆಯ ವಿದ್ಯಾರ್ಥಿಗಳಿಂದ ಇನ್ನೂರು ಬಯ್ಗುಳಗಳನ್ನು ಸಂಗ್ರಹಿಸಿ, ಈ ಲೇಖನವನ್ನು ಸಿದ್ಧಪಡಿಸಿದ್ದಾರೆ. ಬಯ್ಗುಳಗಳನ್ನು ಪ್ರಯೋಗಿಸುತ್ತಿರುವ ಸಂದರ್ಭದಲ್ಲಿ "ಬೈಗಳಿನ ಧ್ವನಿ ಹಾಗೂ ಅರ್ಥ ಪ್ರಧಾನವಾಗಿರುತ್ತದೆ. ಆದ್ದರಿಂದ ಶಬ್ದಾರ್ಥವನ್ನು ಗಮನದಲ್ಲಿಟ್ಟುಕೊಂಡು, ಧ್ವನಿಯನ್ನೂ ಅಲ್ಲಗಳೆಯದೆ ವರ್ಗೀಕರಿಸಬೇಕು" ಎಂದು ಹೇಳಿ, ತಾವು ಸಂಗ್ರಹಿಸಿದ್ದ ಬಯ್ಗುಳಗಳನ್ನು ಈ ಕೆಳಕಂಡ ನಾಲ್ಕು ಬಗೆಯಲ್ಲಿ ವಿಂಗಡಿಸಿದ್ದಾರೆ.

೧. ಮಾನುಷ
೨. ಮಾನುಷೇತರ
೩. ಅತಿ ಮಾನುಷ
೪. ಸಂಕೀರ್ಣ

ಬಯ್ಗುಳದ ಚಲಾವಣೆಯಲ್ಲಿ ಸಂಸ್ಕೃತಿ ಮತ್ತು ಪರಿಸರದ ಪ್ರಭಾವ ಬಹಳ ಮುಖ್ಯವೆಂಬುದನ್ನು ಸೂಚಿಸುತ್ತ, ವ್ಯಕ್ತಿ–ವ್ಯಕ್ತಿಗಳ ನಡುವಣ ಸಂಬಂಧಗಳು ಬದಲಾದಂತೆ, ಬಯ್ಯುವ ರೀತಿ ಮತ್ತು ಬಯ್ಗುಳದ ಪದಗಳು ಬದಲಾಗುವುದನ್ನು ಗಮನಿಸಿದ್ದಾರೆ. ಅನುಬಂಧದಲ್ಲಿ ಪ್ರೌಢಶಾಲೆಯ ಹುಡುಗರಿಂದ ಸಂಗ್ರಹಿಸಿದ ಒಂದು ನೂರ ಇಪ್ಪತ್ತೆರಡು ಬಯ್ಗುಳಗಳನ್ನು, ಹುಡುಗಿಯರಿಂದ ಸಂಗ್ರಹಿಸಿದ ನಲವತ್ತು ಬಯ್ಗುಳಗಳನ್ನು ಮತ್ತು ಈ ಇಬ್ಬರ ಸಂಗ್ರಹದಲ್ಲಿ ಸಮಾನವಾಗಿ ಕಂಡು ಬಂದ ಮೂವತ್ತೆಂಟು ಬಯ್ಗುಳಗಳ ಪಟ್ಟಿಯನ್ನು ಪ್ರತ್ಯೇಕವಾಗಿ ಸಿದ್ಧಪಡಿಸಿದ್ದಾರೆ.

೯. **ಎಂ.ಎಂ.ಕಲಬುರ್ಗಿ(೧೯೮೬): 'ಸಮಗಾರ ದೇವರಿಗೆ ಮಚ್ಚೆಪೆಟ್ಟು ಇತ್ಯಾದಿ'**

ಗ್ರಾಮೀಣ ಜನತೆಯಿಂದ ಆರಾಧನೆಗೊಳ್ಳುತ್ತಿರುವ ಜನಪದ ದೇವತೆಗಳಲ್ಲಿ ಕೆಲವು ದೇವತೆಗಳನ್ನು "ಬಯ್ಯುವಿಕೆ, ಒದೆಯುವಿಕೆ, ಚಪ್ಪಲಿಯಿಂದ ಹೊಡೆಯುವಿಕೆ ಮೊದಲಾದ ಅನಾಗರಿಕ ಕ್ರಿಯೆಗಳಿಂದ ನಮ್ಮ ಪ್ರಾಚೀನರು ಪೂಜಿಸುತ್ತಿದ್ದರು" ಎಂಬ ವಿಚಾರವನ್ನು ಕುರಿತು ಈ ಲೇಖನದಲ್ಲಿ ಪ್ರಸ್ತಾಪಿಸಲಾಗಿದೆ. ಈಗಲೂ ಕರ್ನಾಟಕದ ವಿವಿಧ ಕಡೆಗಳಲ್ಲಿ ಮಾರಿಯಮ್ಮ ಮುಂತಾದ ಜನಪದ ದೇವತೆಗಳ ಆರಾಧನೆಯ ಸಂದರ್ಭದಲ್ಲಿ ದಿಮ್ಸಾಲೆ ಗಾಯಕರು, ಆಸಾದಿ ವೃತ್ತಿ ಗಾಯಕರು ಮತ್ತು ಸೋಮನ ಕುಣಿತದವರು ದೇವತೆಯನ್ನು ಬಯ್ಯುತ್ತ ಅಶ್ಲೀಲವಾದ ಹಾಡುಗಳನ್ನು ಹೇಳುವುದನ್ನು, ಆಗ ಅಲ್ಲಿದ್ದ ಭಕ್ತರು ಆಸಕ್ತಿಯಿಂದ ಅದೆಲ್ಲವನ್ನೂ ಕೇಳುವ ಸಂಗತಿಗಳನ್ನು ವಿವರಿಸುತ್ತ, ಇಂತಹ ಆರಾಧನೆಯ ಹಿನ್ನೆಲೆಯಲ್ಲಿ ಇರಬಹುದಾದ ಸಾಂಸ್ಕೃತಿಕ ಹಾಗೂ ಸಾಮಾಜಿಕ ಸಂಘರ್ಷದ ಸಂಗತಿಗಳನ್ನು ಕುರಿತು ಚಿಂತನೆ ಮಾಡಿದ್ದಾರೆ. ಈ ಬಗೆಯ ಆರಾಧನೆಗಳನ್ನು ಸಮಗ್ರವಾಗಿ ಅಧ್ಯಯನ ಮಾಡುವುದರ ಮೂಲಕ, ಕನ್ನಡ ನುಡಿ ಸಮುದಾಯದ ಸಾಮಾಜಿಕ ಮತ್ತು ಸಾಂಸ್ಕೃತಿಕ ರಂಗಗಳಲ್ಲಿನ ಇತಿಹಾಸದ ಸಂಗತಿಗಳನ್ನು ಪುನರ್ ರಚಿಸಬೇಕೆಂದು ಕರೆ ನೀಡಿದ್ದಾರೆ.

೧೦. **ಮೃತ್ಯುಂಜಯ ಹೊರಕೇರಿ (೧೯೮೧): ಉತ್ತರ ಕರ್ನಾಟಕದ ಬೈಗುಳಗಳು (ಒಂಬೈನೂರ ಇಪ್ಪತ್ತು ಬಯ್ಗುಳಗಳ ಸಂಕಲನ)**

ಈ ಹೊತ್ತಗೆಯು ಕನ್ನಡದಲ್ಲಿ ಪ್ರಕಟಗೊಂಡಿರುವ ಬಯ್ಗುಳದ ಮೊದಲನೆಯ ಸಂಕಲನವಾಗಿದೆ. ಉತ್ತರ ಕರ್ನಾಟಕದ ಕಡೆಯಲ್ಲಿ ಚಲಾವಣೆಯಲ್ಲಿರುವ ಒಂಬೈನೂರ ಇಪ್ಪತ್ತು ಬಯ್ಗುಳಗಳನ್ನು ಸಂಗ್ರಹಿಸಿ, ಅದಕ್ಕೊಂದು ಪ್ರಸ್ತಾವನೆ

ಯನ್ನು ಬರೆದಿದ್ದಾರೆ. ಇದೇ ಲೇಖಕರು ೧೯೭೫ರಲ್ಲಿ ರಚಿಸಿದ್ದ 'ಬೈಗುಳ: ಜನಪದ ಸಾಹಿತ್ಯದ ಒಂದು ಪ್ರಕಾರ' ಎಂಬ ಲೇಖನದ ಸಂಗತಿಗಳನ್ನೇ ಮತ್ತೆ ಯಥಾವತ್ತಾಗಿ ಈ ಹೊತ್ತಿಗೆಯ ಪ್ರಸ್ತಾವನೆಯಲ್ಲಿ ಬರೆದಿದ್ದಾರೆ. ಈ ವಿಚಾರದ ಜತೆಗೆ ತಪಸ್ವೀಕುಮಾರ್(೧೯೭೦) ಮತ್ತು ಎಂ. ಚಿದಾನಂದಮೂರ್ತಿ (೧೯೭೬) ಅವರ ಲೇಖನಗಳಲ್ಲಿನ ಅನೇಕ ವಿಚಾರಗಳನ್ನು ಅಲ್ಲಲ್ಲಿ ಅಳವಡಿಸಿಕೊಂಡಿದ್ದಾರೆ.

ಈ ಮೇಲ್ಕಂಡ ಎಲ್ಲಾ ಬರಹಗಳ ಓದಿನಿಂದ ನಾನು ಸಂಗ್ರಹಿಸಿದ್ದ ಬಯ್ಗುಳಗಳ ವಿಶ್ಲೇಷಣೆಗೆ ಅಗತ್ಯವಾದ ಕೆಲವು ಮಾಹಿತಿಗಳನ್ನು ಪಡೆದು ಕೊಂಡು ಎಂ.ಫಿಲ್., ಪದವಿ ಪರೀಕ್ಷೆಯ(೧೯೮೮) ಅಗತ್ಯವನ್ನು ಪೂರೈಸಲು ನಿಬಂಧವನ್ನು ರಚಿಸಿದೆನು. ಈ ನಿಬಂಧದ ವಿಶ್ಲೇಷಣೆಯ ವ್ಯಾಪ್ತಿಯು ಜಾನಪದ ಮತ್ತು ಭಾಷಾ ವಿಜ್ಞಾನದ ಶಿಸ್ತಿಗೆ ಒಳಪಟ್ಟಿತ್ತು.

❖

೨ ಬಯ್ಗುಳ ಸಂಗ್ರಹದ ಕೆಲಸ

'ಕನ್ನಡ ಬಯ್ಗುಳಗಳ ಅಧ್ಯಯನ' ಎಂಬ ತಲೆಬರಹದಲ್ಲಿ ಪಿಎಚ್.ಡಿ., ಪದವಿಗಾಗಿ ಮತ್ತೆ ನನ್ನ ಓದನ್ನು ಕೆ.ವಿ.ನಾರಾಯಣ ಅವರ ಮಾರ್ಗದರ್ಶನದಲ್ಲಿ ಮುಂದುವರಿಸಿದೆನು. ಬಯ್ಗುಳದ ಓದಿನ ವ್ಯಾಪ್ತಿಯನ್ನು ಸಾಮಾಜಿಕ ಭಾಷಾ ವಿಜ್ಞಾನದ ಶಿಸ್ತಿಗೆ ವಿಸ್ತರಿಸಿದೆನು. ಬಯ್ಗುಳಗಳನ್ನು ಓದಲು ಅಗತ್ಯವಾದ ಸಾಮಾಜಿಕ ಸಂಗತಿಗಳನ್ನು ಕಲೆಹಾಕಲು ಮತ್ತು ಬಯ್ಗುಳದ ನುಡಿ ಸಾಮಗ್ರಿಗಳು ರೂಪುಗೊಳ್ಳಲು ಕಾರಣವಾದ ಸಂಸ್ಕೃತಿಯ ಆಚಾರ ವಿಚಾರಗಳನ್ನು ತಿಳಿಯಲು ಈ ಕೆಳಕಂಡ ಆರು ಬಗೆಯ ಯೋಜನೆಗಳನ್ನು ರೂಪಿಸಿಕೊಂಡು ಕ್ಷೇತ್ರ ಕಾರ್ಯದಲ್ಲಿ ತೊಡಗಿದೆನು.

೧. ಜನರು ಹೆಚ್ಚಾಗಿ ಸೇರುವ ಸಾರ್ವಜನಿಕ ಜಾಗಗಳಾದ ಬಸ್ ನಿಲ್ದಾಣ, ರೈಲು ನಿಲ್ದಾಣ, ಸಂತೆ, ಚಲನ ಚಿತ್ರಮಂದಿರದ ಮುಂಭಾಗ, ದೊಡ್ಡ ದೊಡ್ಡ ವ್ಯಾಪಾರದ ಅಂಗಡಿ ಮುಂಗಟ್ಟು, ಪ್ರತಿಭಟನಾ ಸೂಚಕವಾದ ಸಭೆ ಮತ್ತು ಮೆರವಣಿಗೆ, ಶಾಲಾ ಕಾಲೇಜುಗಳ ಆವರಣ, ಜನರಿಂದ ತುಂಬಿ ತುಳುಕುತ್ತಿರುವ ರಸ್ತೆ ಮತ್ತು ಅತಿ ಹೆಚ್ಚು ಜನಸಾಂದ್ರತೆಯಿಂದ ಕೂಡಿರುವ ವಾಸದ ಬಡಾವಣೆಗಳನ್ನು ಮುಖ್ಯ ನೆಲೆಗಳನ್ನಾಗಿ ಗುರುತಿಸಿಕೊಂಡೆನು.
   ಅಲ್ಲಿ ಜಮಾವಣೆಗೊಳ್ಳುತ್ತಿದ್ದ ಜನರ ನಡುವೆ ಆಕಸ್ಮಿಕವಾಗಿಯೋ ಇಲ್ಲವೇ ಉದ್ದೇಶಪೂರ್ವಕವಾಗಿಯೋ ನಡೆಯುತ್ತಿದ್ದ ಜಗಳ, ಗುದ್ದಾಟ, ಹೊಡೆದಾಟ ಮತ್ತು ಬಡಿದಾಟದ ಸನ್ನಿವೇಶದಲ್ಲಿ ಕೇಳಿಬರುತ್ತಿದ್ದ ಎತ್ತರದ ಧ್ವನಿಯನ್ನು ಅಂದರೆ ಕೂಗಾಟ ಇಲ್ಲವೇ ಅರಚುವಿಕೆಯು ಕೇಳಿ ಬಂದ ಕೂಡಲೇ ಅತ್ತ ಹೋಗುತ್ತಿದ್ದೆ. ಮಾತಿನ ಚಕಮಕಿಯಲ್ಲಿ ತೊಡಗಿ, ನಡುನಡುವೆ ಬಯ್ಗುಳದ

ನುಡಿಗಳನ್ನು ಆಡುತ್ತಿದ್ದ ವ್ಯಕ್ತಿಗಳ ಹತ್ತಿರದಲ್ಲಿ ಅವರ ಗಮನಕ್ಕೆ ಬಾರದಂತೆ ಹಾಜರಿದ್ದು, ಅವರು ಆ ಸಂದರ್ಭದಲ್ಲಿ ಆಡುತ್ತಿದ್ದ ಮಾತುಗಳನ್ನು ನನ್ನ ಬಳಿ ಸದಾಕಾಲ ಇಟ್ಟುಕೊಂಡಿದ್ದ ಚಿಕ್ಕ ಗಾತ್ರದ ಧ್ವನಿ ಮುದ್ರಣ ಯಂತ್ರದ ಮೂಲಕ ದಾಖಲೆ ಮಾಡಿಕೊಳ್ಳುತ್ತಿದ್ದೆ.

ಬಯ್ಗುಳದ ಬಳಕೆಯು ಕೆಲವೊಮ್ಮೆ ಏಕಮುಖವಾಗಿರುತ್ತಿತ್ತು. ಅಂದರೆ ಒಬ್ಬ ಬಯ್ಯುತ್ತಿದ್ದರೆ ಮತ್ತೊಬ್ಬ ಇಲ್ಲವೇ ಇತರರು ಪ್ರತಿಯಾಗಿ ಬಯ್ಗುಳವನ್ನು ಬಳಸುತ್ತಿರಲಿಲ್ಲ. ಮತ್ತೆ ಕೆಲವೊಮ್ಮೆ ಎರಡು ಕಡೆಗಳಿಂದಲೂ ಪರಸ್ಪರ ಬಯ್ಗುಳ ಬಳಕೆಯಾಗುತ್ತಿತ್ತು. ಮಾತಿನ ಜಗಳದಲ್ಲಿ ತೊಡಗಿದ ಕೆಲವರು ತುಂಬಾ ಆಕ್ರಮಣಶೀಲರಾಗಿಯೂ, ಮತ್ತೆ ಕೆಲವರು ಸ್ವಲ್ಪಮಟ್ಟಿಗೆ ಹಿಂಜರಿ ದಂತೆಯೂ ಕಂಡುಬರುತ್ತಿದ್ದರು. ಆಗ ಆ ವ್ಯಕ್ತಿಗಳ ಮುಖದಲ್ಲಿ ನಾನಾ ಬಗೆಯ ಭಾವಗಳು ಹೊರಹೊಮ್ಮುತ್ತಿದ್ದವು. ಕೈಗಳ ಚಲನೆಯು ತೀವ್ರಗತಿ ಯಲ್ಲಿರುತ್ತಿತ್ತು. ಈ ಅಂಶಗಳೆಲ್ಲವನ್ನೂ ಸೂಕ್ಷ್ಮವಾಗಿ ಗಮನಿಸುತ್ತಿದ್ದೆನು.

ಮಾತಿನ ಜಗಳದಲ್ಲಿ ತೊಡಗಿರುವ ವ್ಯಕ್ತಿಗಳು ಉಟ್ಟಿರುವ ಬಟ್ಟೆ, ತೊಟ್ಟಿರುವ ಒಡವೆ ವಸ್ತುಗಳ ಮೂಲಕ, ಅವರು ಆರ್ಥಿಕವಾಗಿ ಯಾವ ವರ್ಗಕ್ಕೆ ಸೇರಿದವರೆಂಬುದನ್ನು ನಿರ್ಧರಿಸುತ್ತಿದ್ದೆನು. ಧ್ವನಿ ಮುದ್ರಣದ ಜತೆಜತೆಗೆ ಮೇಲ್ನೋಟಕ್ಕೆ ಸ್ಪಷ್ಟವಾಗಿ ಕಾಣುವಂತಹ ದೇಹದ ಚಹರೆಯನ್ನು, ಆಂಗಿಕ ಚಲನವಲನವನ್ನು, ಉಡುಗೆ ತೊಡುಗೆಯನ್ನು, ಲಿಂಗ(ಹೆಣ್ಣು/ಗಂಡು) ಮತ್ತು ವಯಸ್ಸಿನ ಸಂಗತಿಗಳನ್ನು ಗಮನಿಸಿ ನಮೂದಿಸಿಕೊಳ್ಳುತ್ತಿದ್ದೆನು.

ನನಗೆ ಪರಿಚಿತವಾದ ಜಾಗಗಳಲ್ಲಿ ಬಯ್ಗುಳದ ಪ್ರಸಂಗಗಳು ನಡೆದಾಗ, ಅದರಲ್ಲಿ ತೊಡಗಿದ್ದ ವ್ಯಕ್ತಿಗಳ ಜಾತಿ, ಮತ ಮತ್ತು ವಿದ್ಯೆಗೆ ಸಂಬಂಧಿಸಿದ ಸಂಗತಿಗಳನ್ನು ಗುರುತು ಹಾಕಿಕೊಳ್ಳುತ್ತಿದ್ದೆನು. ಬಯ್ದಾಡುತ್ತಿರುವವರ ಸುತ್ತಲೂ ಕುತೂಹಲದಿಂದ ನೆರೆಯುತ್ತಿದ್ದ ನೋಡುಗರ ಪ್ರತಿಕ್ರಿಯೆಗಳನ್ನು ಗುರುತು ಹಾಕಿಕೊಳ್ಳುತ್ತಿದ್ದೆ. ಜಗಳ ಹೆಚ್ಚಾದಂತೆಲ್ಲಾ ನೋಡುಗರ ಪ್ರತಿಕ್ರಿಯೆಗಳು ಬದಲಾಗುತ್ತಿದ್ದವು. ಕೆಲವರು ಜಗಳವನ್ನು ಬಿಡಿಸಲು ಮುಂದಾಗುತ್ತಿದ್ದರು; ಮತ್ತೆ ಕೆಲವರು ದೂರ ಸರಿಯುತ್ತಿದ್ದರು; ಇನ್ನು ಕೆಲವರು ಏನನ್ನೂ ಮಾಡದೆ ಜಗಳ ಮುಗಿಯುವವರೆಗೂ ನೋಡುತ್ತ ನಿಲ್ಲುತ್ತಿದ್ದರು.

ಈ ಬಗೆಯ ಕ್ಷೇತ್ರಕಾರ್ಯದಿಂದ ಸಾರ್ವಜನಿಕ ರಂಗದಲ್ಲಿ ನಡೆದ ನೂರಕ್ಕಿಂತ ಹೆಚ್ಚಿನ ಸಂಖ್ಯೆಯ ಬಯ್ಗುಳ ಪ್ರಸಂಗಗಳನ್ನು ಧ್ವನಿ ಮುದ್ರಣ ಮಾಡಿಕೊಂಡಿದ್ದೇನೆ ಮತ್ತು ಅವಕ್ಕೆ ಸಂಬಂಧಪಟ್ಟ ವಿವರಗಳೆಲ್ಲವನ್ನೂ ಒಂದು ನೋಟ್ ಬುಕ್ಕಿನಲ್ಲಿ ಬರೆದಿಟ್ಟುಕೊಂಡಿದ್ದೇನೆ.

೨. ಮಾಹಿತಿದಾರರಿಂದ ಬಯ್ಗುಳದ ಪ್ರಸಂಗಗಳನ್ನು ಪಡೆಯಲೆಂದು **'ಬಯ್ಗುಳದ ಪ್ರಸಂಗಗಳು'** ಎಂಬ ತಲೆಬರಹವನ್ನುಳ್ಳ ಒಂದು ಫಾರಂ ಅನ್ನು ಸಿದ್ಧಪಡಿಸಿದೆನು. ಅದರಲ್ಲಿ ಜನರು ಆಡಿದ ಬಯ್ಗುಳಗಳು; ಬಯ್ಯುವಿಕೆಯಲ್ಲಿ ತೊಡಗಿದ ವ್ಯಕ್ತಿಗಳ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಂಗತಿಗಳು; ಬಯ್ಯುವಿಕೆಯಲ್ಲಿ ತೊಡಗಿದವರ ಆಂಗಿಕ ಹಾವಭಾವ; ಬಯ್ಗುಳದ ಸಂದರ್ಭದಲ್ಲಿದ್ದ ನೋಡುಗರ ಪ್ರತಿಕ್ರಿಯೆಗಳನ್ನು ನಮೂದಿಸುವುದಕ್ಕೆ ಅಗತ್ಯವಾದ 'ಕಾಲಂ'ಗಳನ್ನು ಅಳವಡಿಸಿದೆನು. ಈ ವಿವರಗಳನ್ನೊಳಗೊಂಡ ನೂರಾರು ಫಾರಂಗಳನ್ನು ಅಚ್ಚುಹಾಕಿಸಿ, ಅವನ್ನು ಕಾಳಮುದ್ದನದೊಡ್ಡಿಯ ಸುತ್ತಮುತ್ತಣ ಹತ್ತಾರು ಹಳ್ಳಿಗಳಲ್ಲಿ ವಾಸವಾಗಿದ್ದ ನನಗೆ ಪರಿಚಯವಿದ್ದ ವ್ಯಕ್ತಿಗಳಿಗೆ ನೀಡಿ, ತಾವು ಆಗಿಂದಾಗ್ಗೆ ನೋಡುವ ಮತ್ತು ಕೇಳುವ ಬಯ್ಗುಳದ ಪ್ರಸಂಗದ ವಿವರಗಳನ್ನು ಈ ಫಾರಂನಲ್ಲಿ ತುಂಬಿಕೊಡಬೇಕೆಂದು ಕೇಳಿ ಕೊಂಡೆನು. ಕೆಲವು ತಿಂಗಳುಗಳ ನಂತರ ಅವರಿಂದ ಮಾಹಿತಿಯನ್ನೊಳ ಗೊಂಡ ಫಾರಂಗಳನ್ನು ಹಿಂಪಡೆದೆನು. ಸುಮಾರು ಇನ್ನೂರೈವತ್ತಕ್ಕಿಂತ ಹೆಚ್ಚಿನ ಬಯ್ಗುಳದ ಪ್ರಸಂಗಗಳ ವಿವರಗಳನ್ನು ಮಾಹಿತಿದಾರರಿಂದ ಪಡೆದಿದ್ದೇನೆ.

೩. ಸಾರ್ವಜನಿಕ ರಂಗದಲ್ಲಿ ಬಹಿರಂಗವಾಗಿ ಜನರ ನಡುವೆ ಉಂಟಾಗುವ ಬಯ್ಗುಳದ ಪ್ರಸಂಗಗಳನ್ನು ಸಂಗ್ರಹಿಸುವ ರೀತಿಯಲ್ಲಿ ಕುಟುಂಬದ ನೆಲೆಯಲ್ಲಿ ನಡೆಯುವ ಬಯ್ಗುಳದ ಪ್ರಸಂಗಗಳನ್ನು ಸಂಗ್ರಹಿಸುವುದು ಸುಲಭ ಸಾಧ್ಯವಲ್ಲ. ಆದ್ದರಿಂದ ಕುಟುಂಬದ ನೆಲೆಯಲ್ಲಿ ಬಳಕೆಯಾಗುವ ಬಯ್ಗುಳಗಳ ಬಗ್ಗೆ ಮಾಹಿತಿಯನ್ನು ಪಡೆಯಲೆಂದು ಒಂದು ಪ್ರಶ್ನಾವಳಿಯನ್ನು ಸಿದ್ಧ ಪಡಿಸಿದೆನು. ಈ ಪ್ರಶ್ನಾವಳಿಗೆ **"ಕುಟುಂಬದಲ್ಲಿ ಬಯ್ಗುಳಗಳ ಬಳಕೆ"** ಎಂಬ ಹೆಸರನ್ನು ನೀಡಿದೆನು. ಈ ಪ್ರಶ್ನಾವಳಿಯಲ್ಲಿ ಕುಟುಂಬದ ತಂದೆ, ತಾಯಿ ಮತ್ತು ಮಕ್ಕಳು ಪ್ರಮುಖ ವ್ಯಕ್ತಿಗಳಾಗಿದ್ದಾರೆ. ಇವರೆಲ್ಲರೂ ಕುಟುಂಬದ ದಿನ ನಿತ್ಯದ ಆಗುಹೋಗುಗಳಲ್ಲಿ ಬಯ್ಗುಳ ನುಡಿಗಳನ್ನು ಆಡುವ, ಕೇಳುವ ಮತ್ತು ಅವುಗಳಿಗೆ ಪ್ರತಿಕ್ರಿಯಿಸುವ ಬಗೆಗಿನ ಮಾಹಿತಿಗಳನ್ನು ನೀಡುವ ಮತ್ತು ಕುಟುಂಬದ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ವಿವರಗಳನ್ನು ಪಡೆಯುವ 'ಕಾಲಂ'ಗಳಿವೆ. ಈ ಪ್ರಶ್ನಾವಳಿಯನ್ನು ಭರ್ತಿ ಮಾಡಲು ಕಾಲೇಜುಗಳ ಮೂಲಕ ನಡೆಯುತ್ತಿದ್ದ ರಾಷ್ಟ್ರೀಯ ಸೇವಾ ಯೋಜನಾ ಶಿಬಿರ ಗಳಲ್ಲಿ ಹತ್ತಾರು ದಿನಗಳ ಕಾಲ ಒಟ್ಟಾಗಿ ಸೇರುತ್ತಿದ್ದ ಕಾಲೇಜುಗಳ ವಿದ್ಯಾರ್ಥಿ ಸಮುದಾಯವನ್ನು ಮಾಹಿತಿದಾರರನ್ನಾಗಿ ಆಯ್ಕೆಮಾಡಿಕೊಂಡೆನು. ವಿದ್ಯಾರ್ಥಿಗಳಿಗೆ ಒಂದು ಗಂಟೆಯ ಅವಧಿಯಲ್ಲಿ ಪ್ರಶ್ನಾವಳಿಯನ್ನು ಭರ್ತಿ

ಮಾಡುವ ಬಗ್ಗೆ ತರಬೇತಿಯನ್ನು ನೀಡಿ, ಅನಂತರ ಅವರಿಂದ ಪ್ರಶ್ನಾವಳಿಯನ್ನು ಭರ್ತಿಮಾಡಿಸಿದ್ದೇನೆ. ಈ ಬಗೆಯ ಮಾಹಿತಿಯನ್ನೊಳಗೊಂಡ ಐನೂರಕ್ಕಿಂತ ಹೆಚ್ಚಿನ ಪ್ರಶ್ನಾವಳಿಗಳು ನನ್ನಲ್ಲಿವೆ.

೪. ಮಂಡ್ಯ ಜಿಲ್ಲೆಯ ವ್ಯಾಪ್ತಿಯಲ್ಲಿ ಮದ್ದೂರು ಮತ್ತು ಮಳವಳ್ಳಿ ತಾಲ್ಲೂಕುಗಳು ಹಾಗೂ ರಾಮನಗರ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನಲ್ಲಿ ನೆಲೆಸಿರುವ ಜನಸಮುದಾಯದ ಸಾಮಾಜಿಕ ರಚನೆ ಮತ್ತು ಸಾಂಸ್ಕೃತಿಕ ಆಚರಣೆಯ ವಿವರಗಳನ್ನು ಪಡೆಯಲು ಮತ್ತೊಂದು ಪ್ರಶ್ನಾವಳಿಯನ್ನು ರೂಪಿಸಿಕೊಂಡೆನು. ಈ ಮೂರು ತಾಲ್ಲೂಕುಗಳ ಹೆಚ್ಚಿನ ಭಾಗವು ಹಳ್ಳಿಗರಿಂದಲೇ ತುಂಬಿರುವುದರಿಂದ ಮತ್ತು ತಾಲ್ಲೂಕು ಕೇಂದ್ರದಲ್ಲಿರುವವರಲ್ಲಿ ಬಹುತೇಕ ಮಂದಿ ಗ್ರಾಮೀಣ ಸಂಸ್ಕೃತಿಯ ಹಿನ್ನೆಲೆಯನ್ನು ಉಳ್ಳವರಾದುದರಿಂದ ಈ ಪ್ರಶ್ನಾವಳಿಗೆ **"ಗ್ರಾಮೀಣ ಸಮುದಾಯದಲ್ಲಿ ಪ್ರಯೋಗಗೊಳ್ಳುವ ಬಯ್ಗುಳಗಳ ಬಗೆಗಿನ ವಿವರಗಳು"** ಎಂಬ ಹೆಸರನ್ನು ನೀಡಿದೆನು.
ಮೂರು ತಾಲ್ಲೂಕುಗಳಲ್ಲಿಯೂ ಸಂಚರಿಸುತ್ತಾ, ಅಲ್ಲಲ್ಲಿ ಪ್ರತಿ ೩ ಇಲ್ಲವೇ ೫ ಕಿ.ಮೀ.ಗಳ ಅಂತರದಲ್ಲಿ ಒಂದೊಂದು ಗ್ರಾಮಕ್ಕೆ ಭೇಟಿ ಕೊಡುತ್ತ, ಆ ಗ್ರಾಮದ ವ್ಯಕ್ತಿಗಳಿಂದ ಮಾಹಿತಿಗಳನ್ನು ಪಡೆದಿದ್ದೇನೆ. ಈ ಪ್ರಶ್ನಾವಳಿಗೆ ಮಾಹಿತಿಗಳನ್ನು ಪಡೆಯಲು ಮಧ್ಯವಯಸ್ಸನ್ನು ದಾಟಿರುವ ಮತ್ತು ಅಕ್ಷರವಂತರಲ್ಲದ ಮಾಹಿತಿದಾರರನ್ನು ಆಯ್ಕೆ ಮಾಡಿಕೊಂಡಿದ್ದೇನೆ. ಪ್ರಶ್ನಾವಳಿಯಲ್ಲಿನ ವಿಚಾರಗಳನ್ನು ಅವರ ಮುಂದೆ ನಾನು ಓದಿ ಹೇಳಿ, ಅವುಗಳ ಬಗ್ಗೆ ಪ್ರಸ್ತಾಪಿಸಿ, ಅವರು ನೀಡಿದ ಉತ್ತರಗಳನ್ನು ನಾನೇ ಭರ್ತಿ ಮಾಡಿಕೊಂಡಿದ್ದೇನೆ.

ಜನಸಮುದಾಯದ ಜಾತಿ, ಮತ, ಕಸುಬು ಹಾಗೂ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ವಿವರಗಳನ್ನು ಸಂಕ್ಷಿಪ್ತವಾಗಿ ಇದರಲ್ಲಿ ದಾಖಲು ಮಾಡಿಕೊಂಡಿದ್ದೇನೆ. ಬಯ್ಗುಳಗಳ ಬಳಕೆಯ ಬಗ್ಗೆ ವಿವಿಧ ಜಾತಿಗಳಲ್ಲಿರುವ ನಿಲುವು ಮತ್ತು ನಂಬಿಕೆಗಳು, ವಿವಿಧ ವಯೋಮಾನದವರು ಬಳಸುವ ಬಯ್ಗುಳಗಳ ಸ್ವರೂಪ ಮತ್ತು ಬಯ್ಗುಳಗಳನ್ನು ಬಳಸುವ ವ್ಯಕ್ತಿಗಳ ಕೌಟುಂಬಿಕ ವಿವರಗಳನ್ನು ಇಲ್ಲಿ ಸಂಗ್ರಹಿಸಿದ್ದೇನೆ. ಗ್ರಾಮ ದೇವತೆಯ ಆರಾಧನೆ ಮತ್ತು ಇನ್ನಿತರ ಸಾಂಸ್ಕೃತಿಕ ಆಚರಣೆಯ ಸಂದರ್ಭಗಳಲ್ಲಿ ಬಯ್ಗುಳ ಬಳಕೆಯಾಗುವುದರ ಬಗ್ಗೆ ಮಾಹಿತಿಗಳನ್ನು ಕಲೆಹಾಕಿದ್ದೇನೆ. ಬಯ್ಗುಳಗಳ ಬಗ್ಗೆ ನಮ್ಮ ಸಮಾಜದ ದೃಷ್ಟಿಕೋನಗಳೇನೆಂಬುದನ್ನು ತಿಳಿಯಲು ಈ ಪ್ರಶ್ನಾವಳಿಯು ಸಹಾಯಕವಾಗಿದೆ. ಐವತ್ತಿಕ್ಕಿಂತಲೂ ಹೆಚ್ಚಿನ ಗ್ರಾಮಗಳಿಗೆ ಮತ್ತು ಮೂರು ತಾಲ್ಲೂಕು ಕೇಂದ್ರಗಳಿಗೆ ಹೋಗಿ ಮಾಹಿತಿಗಳನ್ನು ಸಂಗ್ರಹಿಸಿದ್ದೇನೆ.

೫. ಹಳ್ಳಿಗಾಡಿನಲ್ಲಿ ನಡೆಯುವ ಗ್ರಾಮದೇವತೆಯ ಉತ್ಸವದಲ್ಲಿ ಮತ್ತು ಹಬ್ಬಗಳ ಆಚರಣೆಯಲ್ಲಿ ಲೈಂಗಿಕ ನುಡಿಗಟ್ಟುಗಳನ್ನುಳ್ಳ ಹಾಡುಗಳನ್ನು ಹಾಡುವ ಸಂಪ್ರದಾಯವು ಇಂದಿಗೂ ಕರ್ನಾಟಕದ ಉದ್ದಗಲದಲ್ಲಿ ಕಂಡುಬರುತ್ತದೆ. ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಅರಕೆರೆ ಗ್ರಾಮದಲ್ಲಿ ಆಚರಿಸುವ ಶೂಲದ ಹಬ್ಬದ ಆಚರಣೆಯ ಸಂದರ್ಭದಲ್ಲಿ ದಿಮ್ಸಾಲೆಯು ಹಾಡಿರುವ ದೇವತೆಯನ್ನು ಕುರಿತ ಲೈಂಗಿಕ ವರ್ಣನೆಯ ಹಾಡುಗಳನ್ನು ಎಂ.ಚಿದಾನಂದಮೂರ್ತಿಯವರು ೧೯೭೭ರಲ್ಲಿ ಸಂಗ್ರಹಿಸಿದ್ದಾರೆ. ಈ ಸಂಗ್ರಹದಲ್ಲಿ ಪಠ್ಯವನ್ನು ಬಯ್ಗುಳಗಳ ಓದಿಗೆ ಬಳಸಿಕೊಂಡಿದ್ದೇನೆ.

ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆಯ ತಾಲ್ಲೂಕಿನ ಕಿಕ್ಕೇರಿ ಗ್ರಾಮದೇವತೆಯ ಆರಾಧನೆಯ ಸಂದರ್ಭದಲ್ಲಿ ಕುರುಬರು ದೇವತೆಯನ್ನು ಕುರಿತು ಹೇಳುವ ಲೈಂಗಿಕ ನುಡಿಗಟ್ಟುಗಳನ್ನುಳ್ಳ ಹಾಡುಗಳನ್ನು ಕಲೆಹಾಕಿದ್ದೇನೆ.

ಉತ್ತರ ಕರ್ನಾಟಕದ ಬಹುಭಾಗಗಳಲ್ಲಿ ಪ್ರತಿ ವರ್ಷ ಮಾರ್ಚಿ ತಿಂಗಳಿನಲ್ಲಿ ಹೋಳಿಹುಣ್ಣಿಮೆಯನ್ನು ಅತ್ಯಂತ ಅದ್ದೂರಿಯಿಂದ ಆಚರಿಸುತ್ತಾರೆ. ಕಾಮನನ್ನು ಸುಡುವ ಆಚರಣೆಯ ಸಂದರ್ಭದಲ್ಲಿ ಲೈಂಗಿಕ ಸಂಗತಿಯನ್ನುಳ್ಳ ಹಾಡುಗಳನ್ನು ಹಾಡುತ್ತಾರೆ. ೧೯೯೨ನೆಯ ಮಾರ್ಚ್ ೧೮ ರಂದು ಗುಲ್ಬರ್ಗಾ ಜಿಲ್ಲೆಯ, ಗುಲ್ಬರ್ಗಾ ತಾಲ್ಲೂಕಿನ ಕೆ.ನಂದೂರು ಗ್ರಾಮದಲ್ಲಿ ಆಚರಿಸಿದ ಹೋಳಿಹುಣ್ಣಿಮೆಯ ಆರಾಧನೆಯಲ್ಲಿ ಗೆಳೆಯರಾದ ಚನ್ನಣ್ಣ ವಾಲೀಕಾರ ಅವರೊಡನೆ ನಾನು ಸಕ್ರಿಯವಾಗಿ ಪಾಲ್ಗೊಂಡು, ಆ ಸಂದರ್ಭದಲ್ಲಿ ಹಾಡಿದ ಹಾಡುಗಳನ್ನು ಧ್ವನಿ ಮುದ್ರಣದ ಮೂಲಕ ದಾಖಲು ಮಾಡಿಕೊಂಡಿದ್ದೇನೆ.

ಈಗ ಪ್ರಕಟಗೊಳ್ಳುತ್ತಿರುವ 'ಕನ್ನಡ ಬಯ್ಗುಳ ಓದು' ಹೊತ್ತಗೆಯಲ್ಲಿ ಗ್ರಾಮ ದೇವತೆಗಳ ಆರಾಧನೆಯ ಸಂದರ್ಭದಲ್ಲಿ ಬಳಕೆಯಾಗುತ್ತಿರುವ ಲೈಂಗಿಕ ವರ್ಣನೆಯ ಹಾಡುಗಳು ಮತ್ತು ಬಯ್ಗುಳಗಳ ಬಗ್ಗೆ ಬರಹವನ್ನು ಮಾಡಿಲ್ಲ. ಅದನ್ನು ಪ್ರತ್ಯೇಕವಾಗಿ ಮತ್ತೊಂದು ಹೊತ್ತಗೆಯಲ್ಲಿ ಮುಂದಿನ ದಿನಗಳಲ್ಲಿ ಬರೆಯಲಿದ್ದೇನೆ.

೬. ಸಾರ್ವಜನಿಕ ರಂಗದಲ್ಲಿ ಮತ್ತು ಕುಟುಂಬದ ನೆಲೆಯಲ್ಲಿ ಜನರು ಬಳಸುವ ಬಯ್ಗುಳಗಳನ್ನು ಕಲೆಹಾಕಿದಂತೆಯೇ, ಕನ್ನಡದ ಕತೆ ಕಾದಂಬರಿಗಳಲ್ಲಿ ಬಳಕೆಗೊಂಡಿರುವ ಬಯ್ಗುಳಗಳನ್ನು ಸಂಗ್ರಹಿಸಲು ಐದು ಮಂದಿ ಲೇಖಕರ ಪುಸ್ತಕಗಳನ್ನು ಆಯ್ಕೆ ಮಾಡಿಕೊಂಡೆನು. ಕುವೆಂಪು ಅವರ 'ಕಾನೂರು

ಹೆಗ್ಗಡತಿ' ಮತ್ತು 'ಮಲೆಗಳಲ್ಲಿ ಮದುಮಗಳು'; ಎಸ್.ಎಲ್.ಭೈರಪ್ಪನವರ 'ಗೃಹಭಂಗ'; ಗೀತಾ ನಾಗಭೂಷಣ್ ಅವರ 'ಬದುಕು' ಕಾದಂಬರಿಗಳು; ಬೆಸಗರಹಳ್ಳಿ ರಾಮಣ್ಣನವರ 'ಕಣಜ' ಕಥಾ ಸಂಕಲನ ಮತ್ತು ಮೊಗಳ್ಳಿ ಗಣೇಶ ಅವರ 'ಮೊಗಳ್ಳಿ ಕಥೆಗಳು' ಸಂಕಲನದಲ್ಲಿ ಬಯ್ಗುಳ ಬಳಕೆಯಾಗಿರುವ ಪ್ರಸಂಗಗಳನ್ನು ಸಂಗ್ರಹಿಸಿದೆನು.

ಇದರ ಉದ್ದೇಶವೇನೆಂದರೆ ಕಣ್ಣ ಮುಂದಿನ ಸಮಾಜದ ನಿತ್ಯ ಜೀವನದ ವ್ಯವಹಾರಗಳಲ್ಲಿ ಜನರು ಬಳಸುತ್ತಿರುವ ಬಯ್ಗುಳದ ಪ್ರಸಂಗಗಳಲ್ಲಿ ಕಂಡು ಬರುವ ಸಂಗತಿಗಳನ್ನು ಕತೆ ಕಾದಂಬರಿಗಳ ಬಯ್ಗುಳದ ಪ್ರಸಂಗಗಳೊಡನೆ ಹೋಲಿಸಿ ನೋಡಿ, ಬಯ್ಯುವಿಕೆಯಲ್ಲಿ ಕಂಡುಬರುವ ಸಾಮಾನ್ಯ ಲಕ್ಷಣಗಳನ್ನು ವಿವರಿಸಿಕೊಳ್ಳುವುದಾಗಿತ್ತು.

ಕ್ಷೇತ್ರ ಕಾರ್ಯದ ಮೂಲಕ ಸಂಗ್ರಹಿಸಿದ ಬಯ್ಗುಳದ ಮಾಹಿತಿಯನ್ನು ಕುರಿತು ವಿಶ್ಲೇಷಣೆ ಮಾಡುವುದಕ್ಕೆ ಅಗತ್ಯವಾದ ತಿಳುವಳಿಕೆಯನ್ನು ಮತ್ತಷ್ಟು ಪಡೆಯಲು ಈ ಕೆಳಕಂಡ ಪುಸ್ತಕಗಳು ನನಗೆ ನೆರವಾದವು.

1. **DELL HYMES (1966): Language In Culture And Society-A Reader In Linguistics And Anthropology.**
2. **(Ed) JOHN J GUPERZ AND DELL HYMES (1972): Directions In Sociolinguistics-The Ethnography of Communication.**
3. **MARTIN MONTGOMERY (1986): An Introduction To Language And Society**
4. **(Ed) JAMES HASTINGS (1925): Encyclopedia of Religion And Ethics, Vol-1**

ಬಯ್ಗುಳವನ್ನು ಕುರಿತು ಕನ್ನಡದಲ್ಲಿ ದೊರೆತ ಬರಹಗಳು, ಇಂಗ್ಲಿಶಿನ ಪುಸ್ತಕಗಳ ಓದು ಮತ್ತು ಮಾರ್ಗದರ್ಶಿಗಳಾದ ಕೆ.ವಿ.ನಾರಾಯಣ ಅವರೊಡನೆ ಬಯ್ಯುವಿಕೆಯ ಬಗ್ಗೆ ನಡೆಸಿದ ಚರ್ಚೆಯಿಂದ ತಿಳುವಳಿಕೆಯನ್ನು ಪಡೆದು 'ಕನ್ನಡ ಬಯ್ಗುಳಗಳ ಅಧ್ಯಯನ' ಎಂಬ ನಿಬಂಧವನ್ನು ರಚಿಸಿ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿ ಪಿಎಚ್.ಡಿ.,ಪದವಿಯನ್ನು ಪಡೆದೆನು.

ಪಿಎಚ್.ಡಿ., ಪದವಿಯ ನಂತರವೂ ಬಯ್ಯುವಿಕೆಯನ್ನು ಕುರಿತ ಓದನ್ನು ಮುಂದುವರಿಸಿದೆ. ಕೆಲವು ವರ್ಷಗಳ ಹಿಂದೆ ನನ್ನ ಕಣ್ಣಿಗೆ ಬಿದ್ದ ಈ ಕೆಳಕಂಡ ಎರಡು ಪುಸ್ತಕಗಳು ಬಯ್ಯುವಿಕೆಯ ಓದಿಗೆ ತುಂಬಾ ಸಹಕಾರಿಯಾದವು.

1. **TIMOTHY JAY (1992): Cursing In America**
   A Psycholinguistics study of dirty language in the Courts, in the movies, in the schoolyards and on the streets.

2. **TIMOTHY JAY (1999): Why We Curse**
   A Neuro-Psycho-Social Theory of Speech

ಅಮೆರಿಕಾದ ಮಸಾಚುಸೆಟ್ಸ್ ನಗರದ ಮಸಾಚುಸೆಟ್ಸ್ ಕಾಲೇಜ್ ಆಫ್ ಲಿಬರಲ್ ಆರ್ಟ್ಸ್‌ನಲ್ಲಿ ಮನೋವಿಜ್ಞಾನ ವಿಭಾಗದಲ್ಲಿ ಪ್ರಾಧ್ಯಾಪಕರಾಗಿರುವ ಟಿಮೊತಿ ಜೆ ಅವರು **"Why We Curse "** ಎಂಬ ಹೊತ್ತಿಗೆಯಲ್ಲಿ ನಾವು ಬಯ್ಯುವುದಕ್ಕೆ ಕಾರಣಗಳನ್ನು ವ್ಯಕ್ತಿಯ ಮೆದುಳಿನ ನರಮಂಡಲದಲ್ಲಿ ನಡೆಯುವ ಪ್ರಕ್ರಿಯೆ, ವ್ಯಕ್ತಿಯ ಮಾನಸಿಕ ವ್ಯಕ್ತಿತ್ವ, ವ್ಯಕ್ತಿಯು ಹುಟ್ಟಿ ಬೆಳೆದು ಬಾಳುತ್ತಿರುವ ಸಮಾಜದ ರಚನೆ ಮತ್ತು ಸಂಸ್ಕೃತಿಯ ನಡಾವಳಿಯ ನೆಲೆಯಲ್ಲಿ ವಿಶ್ಲೇಷಣೆ ಮಾಡಿದ್ದಾರೆ. ನರ ವಿಜ್ಞಾನ, ಮನೋ ವಿಜ್ಞಾನ, ಸಮಾಜ ವಿಜ್ಞಾನ ಮತ್ತು ಮಾನವ ಸಾಂಸ್ಕೃತಿಕ ವಿಜ್ಞಾನಕ್ಕೆ ಸಂಬಂಧಿಸಿದ ಸಂಗತಿಗಳ ನೆಲೆಯಲ್ಲಿ ವ್ಯಕ್ತಿಯ ಮಯ್ ಮನದಲ್ಲಿ ಉಂಟಾಗುವ ತುಡಿತಗಳು ಬಯ್ಯುವಿಕೆಗೆ ಹೇಗೆ ಕಾರಣವಾಗುತ್ತವೆ ಎಂಬುದನ್ನು ವಿವರಿಸಿದ್ದಾರೆ. ಬಯ್ಯುವಿಕೆಗೆ ಕಾರಣವಾಗುವ ಈ ಸಿದ್ಧಾಂತವನ್ನು **"Neuro-Psycho-Social Theory Of Cursing"** ಎಂದು ಹೆಸರಿಸಿದ್ದಾರೆ.

ಪಿಎಚ್.ಡಿ. ಓದಿನ ಹಂತದಲ್ಲಿ ನರವಿಜ್ಞಾನ ಮತ್ತು ಮನೋವಿಜ್ಞಾನದ ನೆಲೆಯ ಸಂಗತಿಗಳನ್ನು ನಾನು ಗಮನಿಸಿರಲಿಲ್ಲ. ಇದೀಗ ಟಿಮೊತಿ ಜೆ ಅವರ ವಿಚಾರಗಳ ಹಿನ್ನೆಲೆಯಲ್ಲಿ ಮತ್ತೊಮ್ಮೆ ಕನ್ನಡ ಬಯ್ಗುಳಗಳ ವಿಶ್ಲೇಷಣೆಗೆ ತೊಡಗಿ, ಹೊಸದಾಗಿ "ಕನ್ನಡ ಬಯ್ಗುಳ ಓದು" ಎಂಬ ಈ ಹೊತ್ತಗೆಯನ್ನು ರಚಿಸಿದ್ದೇನೆ. ಜಾನಪದ, ಭಾಷಾ ವಿಜ್ಞಾನ, ಸಮಾಜ ವಿಜ್ಞಾನ, ನರ ವಿಜ್ಞಾನ ಮತ್ತು ಮನೋ ವಿಜ್ಞಾನದ ರಂಗದಲ್ಲಿ ವಿಜ್ಞಾನಿಗಳು ಹೇಳಿರುವ ಸಂಗತಿಗಳ ನೆಲೆಯಲ್ಲಿ ಕನ್ನಡ ಬಯ್ಗುಳ ಗಳನ್ನು ವಿವರಿಸಿದ್ದೇನೆ.

❖

೩. ನಾವೇಕೆ ಬಯ್ಯುತ್ತೇವೆ?

ಗುರುಗಳಾದ ಡಾ.ಕೆ.ವಿ.ನಾರಾಯಣ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ಮಾಡಿ ನಾನು ರಚಿಸಿದ "ಕನ್ನಡ ಬಯ್ಗುಳಗಳ ಅಧ್ಯಯನ" ಎಂಬ ಬರಹಕ್ಕೆ ೧೯೯೪ ನೆಯ ಇಸವಿಯಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಿಂದ ಪಿಎಚ್.ಡಿ., ಪದವಿ ಬಂದಾಗ ಮೆಚ್ಚಿದವರಿಗಿಂತ ಅಚ್ಚರಿಗೊಂಡವರು ಮತ್ತು ಆತಂಕ ಪಟ್ಟವರೇ ಹೆಚ್ಚು. ರಾಜ್ಯ ಮಟ್ಟದಲ್ಲಿ ಪ್ರಸಾರವಾಗುವ ದಿನ ಪತ್ರಿಕೆಯೊಂದರಲ್ಲಿ ಅಂದು "ಬಯ್ಗುಳಕ್ಕೆ ಪಿಎಚ್.ಡಿ.," ಪದವಿ ಎಂಬ ತಲೆಬರಹದಲ್ಲಿ ಪ್ರಕಟಗೊಂಡ ಸುದ್ದಿಯನ್ನು ಓದಿದ ವಾಚಕರೊಬ್ಬರು **"ಅಯ್ಯೋ, ನಮ್ಮ ವಿಶ್ವವಿದ್ಯಾಲಯಗಳ ಶೈಕ್ಷಣಿಕ ಮಟ್ಟ ಇಷ್ಟೊಂದು ಕುಸಿಯಿತೇ"** ಎಂದು ಓದುಗರ ಪತ್ರದಲ್ಲಿ ತಮ್ಮ ಕಳವಳವನ್ನು ವ್ಯಕ್ತಪಡಿಸಿದರು. ೨೦೧೨ ನೆಯ ಇಸವಿಯಲ್ಲಿ ಸುಮಾರು ಒಂದು ವರ್ಷದ ಕಾಲ ವಿಜಯ ಕರ್ನಾಟಕ ದಿನ ಪತ್ರಿಕೆಯಲ್ಲಿ ಬಯ್ಗುಳದ ಪದಗಳಿಗೆ ನಾನು ಬರೆಯುತ್ತಿದ್ದ ಟಿಪ್ಪಣಿಯು ಪ್ರಕಟಗೊಳ್ಳುತ್ತಿದ್ದಾಗ, ಪತ್ರಿಕೆಯ ಓದುಗರ ವಿಭಾಗದ ಪತ್ರದಲ್ಲಿ **"ಕೀಳು ಅಭಿರುಚಿಯುಳ್ಳ ನಿಕೃಷ್ಟಮಟ್ಟದ ಬಯ್ಗುಳಗಳ ಬಗ್ಗೆ ನಾಡಿನ ಜನತೆಗೆ ಪಾಠ ಹೇಳುವಂತಹ ಅಗತ್ಯವೇನಿತ್ತು. ಇದರಿಂದ ನಮಗೆ ಕೆಟ್ಟ ಆಲೋಚನೆ ಬರುತ್ತದೆಯಲ್ಲವೇ ಪ್ರಯೋಜನವಾದರೂ ಏನು"** ಎಂದು ಒಬ್ಬ ಓದುಗರು ಪ್ರಶ್ನಿಸಿದರು.

ಇಂದಿಗೂ ನನ್ನ ಪಿಎಚ್.ಡಿ., ಓದಿನ ವಿಷಯವನ್ನು ಕೇಳಿದಾಗ ಒಂದಲ್ಲ ಒಂದು ಬಗೆಯ ಉದ್ಗಾರವನ್ನು ವ್ಯಕ್ತಪಡಿಸದೆ ಸುಮ್ಮನಿರುವ ವ್ಯಕ್ತಿಯನ್ನು ನಾನು ಇದುವರೆಗೂ ಕಂಡಿಲ್ಲ. ಈಗ ಈ ಬರಹವನ್ನು ಓದಲು ತೊಡಗಿರುವ ನಿಮ್ಮ ಮನದಲ್ಲಿಯೂ **"ಬೋಳಿಮಗ-ಸೂಳೆಮಗ ಎಂಬಂತಹ ನೂರಾರು ಪದಗಳಿಂದ ಕೂಡಿರುವ ಬಯ್ಗುಳದಲ್ಲಿ ಪಿಎಚ್.ಡಿ., ಪದವಿಯನ್ನು ಪಡೆಯುವಂತಹ**

ಸಂಗತಿಗಳು ಏನಿದ್ದೀತು ಎಂಬ ತಿರಸ್ಕಾರ ಇಲ್ಲವೇ ಏನಿರಬಹುದು ಎಂಬ ಕುತೂಹಲ" ಇದ್ದೇ ಇರುತ್ತದೆ.

'ಬಯ್ಗುಳ' ಎಂದ ಕೂಡಲೇ "ಅದು ಕೆಟ್ಟದ್ದು" ಎಂದು ನಾವೆಲ್ಲರೂ ಹೇಳುತ್ತೇವೆ. ಆದರೆ ನಮ್ಮ ಜೀವಮಾನದಲ್ಲಿ ಇತರರನ್ನು ಬಯ್ಯದೆ; ಪ್ರಾಣಿಪಕ್ಷಿಗಳನ್ನು ಮತ್ತು ವಸ್ತುಗಳನ್ನು ಬಯ್ಯದೆ; ಬೇರೆಯವರಿಂದ ಬಯ್ಯಿಸಿಕೊಳ್ಳದೆ; ಕೆಲವೊಮ್ಮೆ ನಮ್ಮನ್ನು ನಾವೇ ಬಯ್ದುಕೊಳ್ಳದೆ ಇರಲು ಸಾಧ್ಯವೇ ಇಲ್ಲ. ನಾವೆಲ್ಲರೂ ಒಂದಲ್ಲ ಒಂದು ಬಗೆಯ ಬಯ್ಗುಳವನ್ನು ತಿಳಿದಿದ್ದೇವೆ ಮತ್ತು ಹಲವಾರು ಸನ್ನಿವೇಶಗಳಲ್ಲಿ ಅದನ್ನು ಆಡುತ್ತಿರುತ್ತೇವೆ. ಈ ರೀತಿ ನಮ್ಮ ನಡೆನುಡಿಯಲ್ಲಿ ಹಾಸುಹೊಕ್ಕಾಗಿ ಮಾನವರ ಸಾಮಾಜಿಕ ವರ್ತನೆಯ ಒಂದು ಭಾಗವಾಗಿರುವ ಬಯ್ಗುಳಗಳ ಬಗ್ಗೆ ಹೆಚ್ಚಿನ ಸಂಗತಿಯನ್ನು ತಿಳಿಯಬೇಕೆಂದರೆ ಜನರ ದಿನನಿತ್ಯದ ಜೀವನದ ಆಗುಹೋಗುಗಳಲ್ಲಿ ಬಯ್ಗುಳಗಳು ಬಳಕೆಗೊಂಡಿರುವ ಪ್ರಸಂಗಗಳನ್ನು ಗಮನಿಸಬೇಕಾದ ಅಗತ್ಯವಿದೆ.

"ಯಾರು ಯಾರಿಗೆ ಬಯ್ದರು... ಎಲ್ಲಿ ಬಯ್ದರು... ಯಾವಾಗ ಬಯ್ದರು... ಯಾತಕ್ಕಾಗಿ ಬಯ್ದರು... ಬಯ್ದಾಗ ಯಾವ ಬಗೆಯ ಬಯ್ಗುಳಗಳನ್ನು ಬಳಸಿದರು... ಬಯ್ಯುವಾಗ ಬಯ್ಯುವವರ ಮತ್ತು ಬಯ್ಯಿಸಿಕೊಳ್ಳುವವರ ಮುಖ ಭಾವ ಮತ್ತು ದೇಹದ ಚಲನವಲನಗಳು ಹೇಗಿದ್ದವು... ಬಯ್ಯಿಸಿಕೊಂಡವರು ಸುಮ್ಮನಿದ್ದರೆ ಇಲ್ಲವೇ ಪ್ರತಿಯಾಗಿ ಅವರು ಕೂಡ ಬಯ್ಯಲು ತೊಡಗಿದರೆ ಇಲ್ಲವೇ ಅಲ್ಲಿಂದ ದೂರ ಸರಿದರೆ... ಬಯ್ದವರು ಮತ್ತು ಬಯ್ಯಿಸಿಕೊಂಡವರಲ್ಲದೆ ಆ ಸಮಯದಲ್ಲಿ ಬೇರೆಯವರು ಯಾರಾದರೂ ಆ ಎಡೆಯಲ್ಲಿ ಇದ್ದರೆ... ಬಯ್ದವರ ಬಯ್ಯಿಸಿಕೊಂಡವರ ಮತ್ತು ಇತರರ ಮನದ ಮೇಲೆ ಉಂಟಾದ ಪರಿಣಾಮಗಳೇನು"–ಇವೇ ಮುಂತಾದ ಸಂಗತಿಗಳನ್ನು ನಮ್ಮ ಕಣ್ಣ ಮುಂದಿನ ಸಮಾಜದಲ್ಲಿ ನಿತ್ಯವೂ ನಡೆಯುತ್ತಿರುವ ಬಯ್ಗುಳದ ಪ್ರಸಂಗಗಳನ್ನು ಗಮನಿಸುವುದರ ಮೂಲಕ **"ನಾವೇಕೆ ಬಯ್ಯುತ್ತೇವೆ ಇಲ್ಲವೇ ಜನರೇಕೆ ಬಯ್ಯುತ್ತಾರೆ"** ಎಂಬುದನ್ನು ಮನದಟ್ಟು ಮಾಡಿಕೊಳ್ಳಬೇಕು.

ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕು, ಮಳವಳ್ಳಿ ತಾಲ್ಲೂಕು ಮತ್ತು ರಾಮನಗರ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನ ನೂರಾರು ಹಳ್ಳಿಗಳ ಪರಿಸರದಲ್ಲಿ ಸಂಗ್ರಹಿಸಿದ್ದ ಬಯ್ಗುಳಗಳನ್ನು ಈ ಬರಹದಲ್ಲಿ ಉದಾಹರಣೆಯಾಗಿ ನೀಡಿದ್ದೇನೆ.

ಕರ್ನಾಟಕದ ಉದ್ದಗಲದಲ್ಲಿ ಬಳಕೆಯಾಗುತ್ತಿರುವ ಕನ್ನಡ ನುಡಿಯಲ್ಲಿ ಹತ್ತಾರು ಬಗೆಯ ಪ್ರಾದೇಶಿಕ ಒಳನುಡಿಗಳು ಮತ್ತು ನೂರಾರು ಬಗೆಯ ಸಾಮಾಜಿಕ ಒಳನುಡಿಗಳಿವೆ. ಈ ಒಳನುಡಿಗಳಲ್ಲಿ ಬಳಕೆಯಾಗುತ್ತಿರುವ ಬಯ್ಗುಳದ ನುಡಿ ಸಾಮಗ್ರಿಗಳು ಅಂದರೆ ಬಳಸುತ್ತಿರುವ ಬಯ್ಗುಳದ ಪದಗಳು, ಬಯ್ಗುಳದ

ನುಡಿಗಟ್ಟುಗಳು ಮತ್ತು ಬಯ್ಗುಳದ ವಾಕ್ಯಗಳು ಬೇರೆ ಬೇರೆ ರೀತಿಯಲ್ಲಿವೆ. ಸಾಮಾಜಿಕ ನುಡಿ ವಿಜ್ಞಾನಿಗಳು ಕರ್ನಾಟಕ ರಾಜ್ಯದಲ್ಲಿ ಪ್ರತಿ ಹತ್ತು ಇಲ್ಲವೇ ಹದಿನಯ್ದು ಕಿಲೊ ಮೀಟರ್‌ಗಳ ಅಂತರದ ಬಳಕೆಯ ಕನ್ನಡ ನುಡಿಯಲ್ಲಿ ಕಂಡುಬರುವ ವ್ಯತ್ಯಾಸಗಳನ್ನು ಗುರುತಿಸಿದ್ದಾರೆ. ಆದ್ದರಿಂದ ಬಯ್ಯುವಿಕೆಯ ಪ್ರಸಂಗಗಳನ್ನು ನಾನು ಈ ಹೊತ್ತಿಗೆಯಲ್ಲಿ ನಿರೂಪಿಸುವಾಗ ಓದುಗರು ತಾವು ಹುಟ್ಟಿ ಬೆಳೆದು ಬಾಳುತ್ತಿರುವ ಪರಿಸರದಲ್ಲಿ ಕೇಳಿ ತಿಳಿದಿರುವ ಕನ್ನಡದ ಬಯ್ಗುಳಗಳನ್ನು ನೆನಪಿಸಿಕೊಳ್ಳಬೇಕಾದ ಅಗತ್ಯವಿದೆ.

ಪ್ರಸಂಗ – ೧

ಬೆಳಗ್ಗೆ ಎಂಟು ಗಂಟೆ ಸಮಯ. ಹಳ್ಳಿಯೊಂದರ ದಾರಿಯಲ್ಲಿ ಹಾಯ್ದು ಹೋಗುವ ಬಸ್ಸಿಗಾಗಿ ಅನೇಕ ಜನರು ಬಹಳ ಹೊತ್ತಿನಿಂದ ಕಾಯುತ್ತಾ ನಿಂತಿದ್ದಾರೆ. ಅವರಲ್ಲಿ ಒಬ್ಬ ಹುಡುಗ ಒಮ್ಮೆ ತನ್ನ ಕಯ್ಯಲ್ಲಿ ಕಟ್ಟಿದ್ದ ವಾಚಿನ ಕಡೆ ಕಣ್ಣಾಡಿಸುತ್ತಾ, ಮತ್ತೊಮ್ಮೆ ಬಸ್ಸು ಬರುವ ದಾರಿಯ ಕಡೆಗೆ ನೋಡುತ್ತ ಚಡಪಡಿಸುತ್ತಿದ್ದಾನೆ. ಹಳ್ಳಿಯಿಂದ ನಗರದ ಕಾಲೇಜಿಗೆ ಪ್ರತಿನಿತ್ಯ ಬಸ್ಸಿನಲ್ಲಿ ಹೋಗಿ ಬರುವ ಈ ಹುಡುಗನಿಗೆ ಇಂದು ಬೆಳಗ್ಗೆ ಹತ್ತು ಗಂಟೆಗೆ ಸರಿಯಾಗಿ ನಾಲ್ಕು ತಿಂಗಳಿಗೊಮ್ಮೆ ನಡೆಯುವ ಎಕ್ಸಾಮ್ ಇದೆ . ಪ್ರತಿ ನಿತ್ಯ ಏಳೂವರೆಗೆಲ್ಲಾ ಬರುತ್ತಿದ್ದ ಬಸ್ಸು, ಇಂದು ಗಂಟೆ ಎಂಟಾದರೂ ಬಂದಿರಲಿಲ್ಲ. ಕೆಲವೇ ಗಳಿಗೆಯಲ್ಲಿ ದೂರದಲ್ಲಿ ಬಸ್ಸು ಬರುತ್ತಿರುವ ದನಿ ಕೇಳಿಸಿತು.

ಅತ್ತ ನೋಡುತ್ತಿದ್ದಂತೆಯೇ ಬಸ್ಸು ಕಣ್ಣಿಗೆ ಬಿತ್ತು. ಬಸ್ಸಿನ ಒಳಗೆ ಜನರು ಕಿಕ್ಕಿರಿದು ತುಂಬಿದ್ದರಲ್ಲದೆ, ಬಸ್ ಟಾಪಿನ ಮೇಲೆಯೂ ಜನರು ಕುಳಿತಿದ್ದರು. ಬಸ್ಸು ನಿಲುಗಡೆಯ ಜಾಗಕ್ಕೆ ಬರುತ್ತಿದ್ದಂತೆಯೇ ಬಸ್ಸಿನ ವೇಗ ಕಡಿಮೆಯಾಗುವುದರ ಬದಲು, ಇನ್ನೂ ಹೆಚ್ಚಾಗಿ ಅಲ್ಲಿ ನಿಲ್ಲದೇ ಬಸ್ಸು ಮುಂದೆ ಸಾಗಿತು. ಕಾಯುತ್ತ ನಿಂತಿದ್ದ ಜನ ಬಸ್ಸನ್ನು ನಿಲ್ಲಿಸುವಂತೆ ಜೋರಾಗಿ ಕಿರುಚುತ್ತ, ನಾಲ್ಕಾರು ಹೆಜ್ಜೆ ಅದರ ಹಿಂದೆ ಓಡತೊಡಗಿದರು. ಆದರೆ ದೂಳೆಬ್ಬಿಸುತ್ತಾ ಬಸ್ಸು ಹೊರಟೇ ಹೋಯಿತು. ಇದರಿಂದ ಕಂಗಾಲಾದ ಹುಡುಗನು

ಹುಡುಗ: ಅಯ್ಯೋ... ಸೂಳೇ ಮಗನೇ

ಎಂದು ತನ್ನಲ್ಲಿಯೇ ಬಸ್ ಡ್ರೈವರ್‌ನನ್ನು ಬಯ್ದುಕೊಂಡನು.

ಪ್ರಸಂಗ–೨

ಸಂಜೆ ನಾಲ್ಕರ ಸಮಯ. ಸುಮಾರು ಅರವತ್ತು ವಯಸ್ಸಿನ ರಾಮಣ್ಣನವರು ಮನೆಯಲ್ಲಿ ಕುರ್ಚಿಯಲ್ಲಿ ಕುಳಿತುಕೊಂಡು ಪುಸ್ತಕವೊಂದನ್ನು ಓದುತ್ತಿದ್ದರು. ಯಾರೋ ಕಾಲಿಂಗ್ ಬೆಲ್ ಮಾಡಿದ ಶಬ್ದ ಕೇಳಿ ಬಂತು. ಬಾಗಿಲನ್ನು ತೆರೆಯಲೆಂದು ಆತುರಾತುರವಾಗಿ ಮೇಲಕ್ಕೆದ್ದು ಹೆಜ್ಜೆಯಿಡುವಾಗ ಕುರ್ಚಿಯ ಒಂದು ಕಾಲಿಗೆ ಮೊಣಕಾಲು ಬಡಿದು ರಾಮಣ್ಣನವರಿಗೆ ತುಂಬಾ ನೋವಾಯಿತು. **"ತೂ... ದರಿದ್ರದ್ದೆ"** ಎಂದು ಕುರ್ಚಿಯನ್ನು ಶಪಿಸುತ್ತ, ಏಟು ಬಿದ್ದ ಜಾಗವನ್ನು ಮುಟ್ಟಿ ಮುಟ್ಟಿ ನೋಡಿಕೊಳ್ಳುತ್ತ ಬಾಗಿಲ ಬಳಿ ಬಂದರು.

ಪ್ರಸಂಗ – ೩

ಬೆಳಗ್ಗೆ ಹತ್ತು ಗಂಟೆಯ ಹೊತ್ತಿಗೆ ಮಗ ಸೊಸೆ ಇಬ್ಬರೂ ಕೆಲಸಕ್ಕೆ ಹೋದ ನಂತರ, ಮನೆಯಲ್ಲಿದ್ದ ಬೋರಮ್ಮನವರು ತಿಂಡಿ ತಿಂದು, ಒಂದು ಗಳಿಗೆ ಮಲಗೋಣ ವೆಂದು ಚಾಪೆಯ ಮೇಲೆ ಒರಗಿದರು. ಇನ್ನೇನು ನಿದ್ದೆ ಹತ್ತುತ್ತಿತ್ತು. ಅಷ್ಟರಲ್ಲಿ ಅಡಿಗೆ ಮನೆಯಲ್ಲಿ ಪಾತ್ರೆಯೊಂದು ಉರುಳಿಬಿದ್ದ ದನಿಯೊಡನೆ, ದಡಾರೆನೆ ಏನೋ ನೆಗೆದು ಹಾರಿ ಹೋದ ಶಬ್ದ ಕೇಳಿಬಂತು. **"ಅಯ್ಯೋ ಹಾಳ್ ಬಸ್ತೀದೆ"** ಎಂದು ಕೊತ್ತಿಯನ್ನು/ಬೆಕ್ಕನ್ನು ನಿಂದಿಸುತ್ತ, ಮೇಲೆದ್ದು ಅಡಿಗೆಮನೆಯತ್ತ ಹೆಜ್ಜೆಯಿಟ್ಟರು.

ಪ್ರಸಂಗ – ೪

ಬೆಳಗ್ಗೆ ಹತ್ತು ಗಂಟೆಯ ಸಮಯ. ಬೆಂಗಳೂರು–ಮೈಸೂರಿನ ಹೆದ್ದಾರಿಯಲ್ಲಿ ಒಂದು ಸರ್ಕಾರಿ ಬಸ್ಸು ವೇಗದಲ್ಲಿ ಸಾಗುತ್ತಿತ್ತು. ನಾಲ್ಕು ರಸ್ತೆಗಳು ಸೇರುವ ಕಡೆಯೊಂದರಲ್ಲಿ ಯಾವ ಸಿಗ್ನಲ್ ಅನ್ನು ಗಮನಿಸದೆ, ಸ್ಕೂಟರ್ ಸವಾರನು ಅಡ್ಡಲಾಗಿ ಬಂದಾಗ, ಬಸ್ ಡ್ರೈವರ್ ಸಡನ್ನಾಗಿ ಬ್ರೇಕ್ ಅನ್ನು ಒತ್ತಿ, ಬಸ್ಸನ್ನು ಸ್ವಲ್ಪ ಬಲಕೆ ತಿರುಗಿಸಿ, ಮತ್ತೆ ಎಡಕ್ಕೆ ತಿರುಗಿಸಿ ಬಸ್ಸನ್ನು ನಿಯಂತ್ರಣಕ್ಕೆ ತರುತ್ತಿದ್ದಂತೆಯೇ, ಸ್ಕೂಟರ್ ಸವಾರನು ಗಾಬರಿಯಿಂದ ಪಕ್ಕಕ್ಕೆ ಸರಿದು ಸ್ಕೂಟರ್ ನಿಲ್ಲಿಸಿದ. **"ತೂ... ಲುಚ್ಚಾ ಬಾಂಚೊತ್"** ಎಂದು ಸ್ಕೂಟರ್ ಸವಾರನ ಕಡೆಗೆ ನೋಡಿ ಬಯ್ಯುತ್ತ, ಬಸ್ಸನ್ನು ಮುನ್ನಡೆಸಿದ.

ಈ ಮೇಲ್ಕಂಡ ನಾಲ್ಕು ಸನ್ನಿವೇಶಗಳಲ್ಲಿ ಬಯ್ಗುಳಗಳು ಏಕೆ ಬಳಕೆಯಾಗಿವೆ ಎಂಬುದನ್ನು ಈಗ ಪರಿಶೀಲಿಸೋಣ.

ಎಕ್ಸಾಮ್ ತಪ್ಪಿಹೋಗಲಿರುವುದರಿಂದ ಹುಡುಗನಿಗೆ ಹಾನಿಯುಂಟಾಯಿತು; ಮೊಣಕಾಲಿಗೆ ಪೆಟ್ಟು ಬಿದ್ದು ರಾಮಣ್ಣನವರಿಗೆ ನೋವಾಯಿತು; ಬೋರಮ್ಮನವರ

ನಿದ್ರೆಯು ಹಾಳಾಯಿತು; ಸ್ಕೂಟರ್ ಸವಾರನು ಅಡ್ಡಬಂದುದರಿಂದ ಡ್ರೈವರ್‌ನು ಇನ್ನೆಲ್ಲಿ ಅವಗಡ ಉಂಟಾಗಿ ಸಾವು ನೋವಾಗುವುದೊ ಎಂದು ಆತಂಕ ಗೊಂಡನು. ಈ ಪ್ರಸಂಗಗಳಲ್ಲಿ ಹಾನಿ, ನೋವು, ನಿದ್ದೆಗೆ ತೊಂದರೆ ಮತ್ತು ಅವಗಡದ ಆತಂಕಕ್ಕೆ ಗುರಿಯಾದ ವ್ಯಕ್ತಿಗಳು ತಮ್ಮ ಮನದಲ್ಲಿ ಉಂಟಾದ ಭಾವನೆಗಳನ್ನು ಹೊರಹಾಕಲು ಬಯ್ಗುಳವನ್ನು ಬಳಸಿದ್ದಾರೆ. ಒಂದು ವೇಳೆ ಈ ನಾಲ್ಕು ಪ್ರಸಂಗಗಳಲ್ಲಿ ಪಾಲ್ಗೊಂಡಿದ್ದವರು ಏನೊಂದನ್ನು ಮಾತನಾಡದೆ ಇಲ್ಲವೇ ಮನಸ್ಸಿನಲ್ಲಿ ಯಾವುದೇ ಬಗೆಯ ದುಗುಡವನ್ನು ಹೊಂದದೆ, ಯಾವುದೇ ಒಂದು ಬಗೆಯ ಪ್ರತಿಕ್ರಿಯೆಯನ್ನು ತೋರಿಸದೆ ಸುಮ್ಮನಿರಬಹುದಿತ್ತೇ ಎಂಬ ಪ್ರಶ್ನೆಯನ್ನು ನಾವು ಹಾಕಿಕೊಂಡರೆ, ಅವರ ಜಾಗದಲ್ಲಿ ನಾವೇ ಇದ್ದರೂ ಇಲ್ಲವೇ ಯಾವುದೇ ವ್ಯಕ್ತಿಯಿದ್ದರೂ ಸುಮ್ಮನಿರುವುದಕ್ಕೆ ಆಗುತ್ತಿರಲಿಲ್ಲವೆಂಬ ಉತ್ತರ ದೊರಕುತ್ತದೆ.

ಹಾಗಾದರೆ ಬಯ್ಗುಳದ ನುಡಿಗಳನ್ನಾಡುವುದಕ್ಕೆ ಬದಲಾಗಿ, ಮತ್ತಾವ ಬಗೆಯಲ್ಲಿ ಅವರೆಲ್ಲರೂ ತಮ್ಮ ಒಳಮಿಡಿತಗಳನ್ನು ಹೊರಹಾಕಬಹುದಾಗಿತ್ತು ಎಂಬ ಪ್ರಶ್ನೆಗೆ ಒಂದೆರಡು ಬಗೆಯ ಉತ್ತರಗಳನ್ನು ಮತ್ತು ಅದರಿಂದ ಉಂಟಾಗಬಹುದಾಗಿದ್ದ ಪರಿಣಾಮಗಳನ್ನು ಊಹಿಸಿಕೊಳ್ಳೋಣ.

೧) ಬಸ್ಸಿಗೆ ಕಲ್ಲನ್ನು ಹೊಡೆದು ಹಾನಿ ಮಾಡಿ ನಿಲ್ಲಿಸಬಹುದಿತ್ತು. ಹತಾಶೆಗೊಂಡ ಹುಡುಗನು ಆ ರೀತಿ ಮಾಡಿದ್ದಲ್ಲಿ ಬಸ್ಸಿಗೆ ಹೊಡೆದ ಕಲ್ಲುಗಳು ಪ್ರಯಾಣಿಸುತ್ತಿದ್ದ ಜನರಿಗೆ ಇಲ್ಲವೇ ಬಸ್ಸಿನ ಕಿಟಕಿಯ ಗಾಜುಗಳಿಗೆ ಬಡಿದು, ಇನ್ನೂ ಹೆಚ್ಚಿನ ಅನಾಹುತವಾಗಿ ಪ್ರಯಾಣಿಕರ ಜತೆ ಜಗಳವುಂಟಾಗಿ ಹೆಚ್ಚಿನ ಹಾನಿಯು ಹುಡುಗನಿಗೆ ಉಂಟಾಗುತ್ತಿತ್ತು.

೨) ನೋವಿಗೆ ಕಾರಣವಾದ ಕುರ್ಚಿಯನ್ನು ಕಾಲಿನಿಂದ ಒದೆಯಬಹುದಿತ್ತು. ಆ ರೀತಿ ಒದ್ದಿದ್ದರೆ ರಾಮಣ್ಣನವರ ಕಾಲಿಗೆ ಮತ್ತೊಮ್ಮೆ ನೋವಾಗುತ್ತಿತ್ತು.

೩) ಅಡುಗೆಮನೆಯಲ್ಲೇ ಇದ್ದ ಕೊತ್ತಿಯನ್ನು/ಬೆಕ್ಕನ್ನು ಕಂಡು ಅದರ ಮೇಲೆ ಒಂದು ಕೋಲನ್ನು ಎಸೆಯಬಹುದಿತ್ತು. ಆಗ ಎಸೆದ ಕೋಲು ಕಿಟಕಿಯ ಗಾಜಿಗೆ ಬಡಿಯಬಹುದಿತ್ತು.

೪) ಡ್ರೈವರ್‌ನು ಬಸ್ಸನ್ನು ನಿಲ್ಲಿಸಿ ಕೆಳಕ್ಕೆ ಇಳಿದು ಬಂದು ಸ್ಕೂಟರ್ ಸವಾರನಿಗೆ ಎರಡೇಟು ಬಾರಿಸಬಹುದಿತ್ತು. ಆಗ ಸ್ಕೂಟರ್ ಸವಾರನು ಪ್ರತಿಯಾಗಿ ಕಯ್ ಮಾಡಬಹುದಿತ್ತು. ಈ ಸಮಯದಲ್ಲಿ ಸುತ್ತಮುತ್ತಲಿನ ಜನ ಸೇರಿ ಮತ್ತೇನಾದರೂ ದೊಡ್ಡ ಗಲಾಟೆಯೇ ಉಂಟಾಗುತ್ತಿತ್ತು.

ಹಾಗಾದರೆ ಇಂತಹ ಅನೇಕ ಬಗೆಯ ಪೆಟ್ಟು, ಹಾನಿ ಇಲ್ಲವೇ ತೊಂದರೆಗೆ ಒಳಗಾಗುವುದರ ಬದಲು ಒಂದೆರಡು ಬಯ್ಗುಳಗಳನ್ನು ಆಡುವುದರ ಮೂಲಕವೇ ತಮ್ಮ ಒಳಮಿಡಿತವನ್ನು ಹೊರಹಾಕಿ ಸುಮ್ಮನಾದುದರಿಂದ, ವ್ಯಕ್ತಿಗಳ ಮನಸ್ಸಿನ ಕೋಪ ತಾಪವೂ ಕಡಿಮೆಯಾಯಿತು ಹಾಗೂ ಯಾವುದೇ ಬಗೆಯ ಅನಾಹುತ ನಡೆಯುವುದು ತಪ್ಪಿದಂತಾಯಿತು.

ಈ ಹಿನ್ನೆಲೆಯಿಂದ ಬಯ್ಗುಳಗಳನ್ನು ನೋಡಿದಾಗ ಒಂದು ಸಂಗತಿಯು ಎದ್ದು ಕಾಣುತ್ತದೆ. ನಮ್ಮ ಜೀವನದ ವ್ಯವಹಾರಗಳಲ್ಲಿ ಪ್ರತಿದಿನವೂ ಮನೆಯಲ್ಲಿ, ನೆರೆಹೊರೆಯಲ್ಲಿ, ಬೀದಿಯಲ್ಲಿ ಇಲ್ಲವೇ ನಾವು ದುಡಿಯುವ ನೆಲೆಗಳಲ್ಲಿ ನಮಗೆ ಇತರರಿಂದ ಅಡ್ಡಿ, ಆತಂಕ, ನೋವು, ಹತಾಶೆ ಉಂಟಾದಾಗ, ನಮ್ಮ ಮಯ್ ಮನದಲ್ಲಿ ಕೆರಳುವ ಕೋಪದ ಒಳಮಿಡಿತವನ್ನು ಬಯ್ಗುಳದ ಮೂಲಕ ಹೊರಹಾಕುವುದರ ಬದಲು, ಅದಕ್ಕೆ ಕಾರಣರಾದ ವ್ಯಕ್ತಿಗಳ ಮೇಲೆ ಕಯ್ ಮಾಡಿ ಹೊಡೆಯಲು ತೊಡಗಿದರೆ ಪರಿಸ್ಥಿತಿಯು ಏನಾಗಬಹುದೆಂಬುದನ್ನು ಅರೆಗಳಿಗೆ ಯೋಚಿಸಿ ನೋಡಿ. ನಾವು ಹೊಡೆಯುವಂತೆಯೇ ನಮ್ಮಿಂದ ಅಡ್ಡಿ ಆಂತಕಕ್ಕೆ ಒಳಗಾದವರು ನಮಗೆ ಹೊಡೆಯಲು ತೊಡಗಿದರೆ ಅದು ಅನೇಕ ಬಗೆಯ ಅನಾಹುತಗಳಿಗೆ ನಾಂದಿಯಾಗುತ್ತದೆ. ಹಾಗೇನಾದರೂ ಆದರೆ ವಾಸ್ತವವಾಗಿ ಯಾರೊಬ್ಬರೂ ಉಳಿಯುವುದಕ್ಕೆ ಆಗುವುದೇ ಇಲ್ಲ. ಬರೀ ಹೊಡೆದಾಟವನ್ನೇ ಎಲ್ಲಾ ಕಡೆಗಳಲ್ಲಿ ಎಲ್ಲಾ ಸಮಯದಲ್ಲಿಯೂ ಕಾಣಬೇಕಾಗುತ್ತದೆ. ಇದಕ್ಕೆ ಬದಲಾಗಿ ನಮ್ಮ ಕೋಪಕ್ಕೆ ಇಲ್ಲವೇ ಸಂಕಟಕ್ಕೆ ಕಾರಣರಾದ ವ್ಯಕ್ತಿಯ ಮಯ್ ಮೇಲೆ ಹೊಡೆದು ಬಡಿದು ಹಲ್ಲೆ ಮಾಡಿ, ನಮ್ಮ ಇಲ್ಲವೇ ಇತರರ ಮಾನ ಪ್ರಾಣಗಳಿಗೆ ಹಾನಿಯಾಗುವಂತೆ ನಡೆದುಕೊಳ್ಳುವುದರ ಬದಲು, ನಾಲ್ಕಾರು ನುಡಿಗಳ ಮೂಲಕ ಬಯ್ದು, ನಮ್ಮ ಮಯ್ ಮನದ ಉದ್ವೇಗವನ್ನು ಹೊರಹಾಕುವುದರಿಂದ ಯಾರೊಬ್ಬರಿಗೂ ಹೆಚ್ಚಿನ ಹಾನಿಯುಂಟಾಗುವುದಿಲ್ಲ.

ಆದುದರಿಂದಲೇ ಇತರರ ಮಯ್ ಮೇಲೆ ಕಯ್ ಮಾಡಿ ಹೊಡೆದು ಬಡಿದು ಹಲ್ಲೆ ಮಾಡುವುದರ ಬದಲು, ಮಾತಿನ ಮೂಲಕ ಹಲ್ಲೆ ಮಾಡುವ ಬಯ್ಯುವಿಕೆಯನ್ನು ಮಾನವನು ನಾಗರಿಕತೆಯತ್ತ ಅಡಿಯಿಟ್ಟ ದೊಡ್ಡ ಹೆಜ್ಜೆಗಳಲ್ಲಿ ಒಂದೆಂದು ಮನೋವಿಜ್ಞಾನಿಯೊಬ್ಬರು ಅಭಿಪ್ರಾಯಪಟ್ಟಿದ್ದಾರೆ.

(It has been said that he who was the first to abuse his fellow-man instead of knocking out his brains without a word, laid thereby the basis of civilization.

Jackson 1879-1958.

ಅಡುಗೆಯನ್ನು ಮಾಡುತ್ತಿರುವಾಗ ಕುಕ್ಕರಿನಲ್ಲಿ ಕುದಿಯುತ್ತಿರುವ ದ್ರವ ವಸ್ತುಗಳ ಬಿಸಿಯಾದ ಆವಿಯ ಪ್ರಮಾಣ ಹೆಚ್ಚಾದಾಗ, ಆವಿಯು ಹೊರಕ್ಕೆ ಹೋಗುವಂತಹ ಕವಾಟದ ವ್ಯವಸ್ಥೆಯಿಲ್ಲದಿದ್ದರೆ, ಕುಕ್ಕರ್ ಸಿಡಿಯುತ್ತದೆ. ಅಂತೆಯೇ ನಮ್ಮ ಮನದಲ್ಲಿ ಕುದಿಯುವ ಒಳಮಿಡಿತಗಳನ್ನು ಹೊರಹಾಕದಿದ್ದರೆ, ಅದು ನಮ್ಮ ಮಯ್ ಮನದ ಮೇಲೆ ಬಹುಬಗೆಯಲ್ಲಿ ಗಾಸಿಯನ್ನು ಉಂಟು ಮಾಡುತ್ತದೆ. ಆದ್ದರಿಂದ ಬಯ್ಯುವಿಕೆಯು ನಮ್ಮ ಮಯ್ ಮನದ ಆರೋಗ್ಯವನ್ನು ಕಾಪಾಡಿಕೊಳ್ಳುವುದರ ಜತೆಗೆ ಇತರರಿಗೂ ಹಾನಿಯಾಗದಂತೆ ನಡೆದುಕೊಳ್ಳಲು ನೆರವಾಗುವಂತಹ ಒಂದು ಬಗೆಯ ಸಾಮಾಜಿಕ ವರ್ತನೆಯಾಗಿ ಬಳಕೆಯಲ್ಲಿದೆ.

ಇದ್ದಕ್ಕಿದ್ದಂತೆಯೇ ಉಂಟಾದ ಅಡೆತಡೆಯಿಂದ ಮತ್ತು ಇನ್ನಿತರ ತೊಂದರೆಯಿಂದ ಮನದಲ್ಲಿ ಮೂಡುವ ಉದ್ವೇಗ, ಹತಾಶೆ, ನೋವು, ಕೋಪ ಮುಂತಾದ ಭಾವನೆಗಳನ್ನು ಹೊರಹಾಕುವುದಕ್ಕಾಗಿ ಮಾತ್ರವಲ್ಲ, ತಮ್ಮ ನಿತ್ಯ ಜೀವನದ ಆಗುಹೋಗುಗಳಲ್ಲಿ ಇನ್ನು ಅನೇಕ ಉದ್ದೇಶಗಳಿಗಾಗಿ ಜನರು ಬಯ್ಗುಳಗಳನ್ನು ಬಳಸುತ್ತಾರೆ. ಉದಾಹರಣೆಯಾಗಿ ಇನ್ನು ಕೆಲವು ಪ್ರಸಂಗ ಗಳನ್ನು ಗಮನಿಸೋಣ. ಮೇಲ್ಕಂಡ ನಾಲ್ಕು ಪ್ರಸಂಗಗಳಿಗಿಂತ ಈಗ ನಿಮ್ಮ ಮುಂದೆ ನಾನು ನಿರೂಪಿಸುವ ಪ್ರಸಂಗಗಳಲ್ಲಿ ಬಯ್ಯುವುದಕ್ಕೆ ಕಾರಣವಾದ ಸಂಗತಿಗಳು ಮತ್ತು ಬಯ್ಯುವ ಉದ್ದೇಶಗಳು ಬೇರೆ ಬೇರೆ ರೀತಿಯಲ್ಲಿವೆ.

ಪ್ರಸಂಗ–೫

ಮನೆಯೊಳಗಿನ ಒಂದು ಸನ್ನಿವೇಶ. ಬಿ.ಎ., ಓದಿರುವ ಮಗ ಇತ್ತ ಹೊಲಗದ್ದೆಯಲ್ಲಿ ದುಡಿಮೆಯನ್ನು ಮಾಡದೆ, ಅತ್ತ ಸಂಪಾದನೆಯ ಯಾವ ದಾರಿಯನ್ನು ಹಿಡಿಯದೆ, ಅಲ್ಲಿ ಇಲ್ಲಿ ಕುಂತಿದ್ದು, ಉಣ್ಣುವ ಸಮಯಕ್ಕೆ ಸರಿಯಾಗಿ ಮನೆಗೆ ಬಂದು ಹೋಗುತ್ತಿರುತ್ತಾನೆ. ಇದರಿಂದ ನೊಂದು ಬೆಂದು ಆಕ್ರೋಶ ಗೊಂಡಿದ್ದ ಬೋರಪ್ಪನವರು ಎಂದಿನಂತೆ ಈ ದಿನವೂ ತಮ್ಮ ಹೆಂಡತಿ ಮಾದಮ್ಮನ ಮುಂದೆ ಮಗನನ್ನು ಬಯ್ಯುತ್ತ ಕುಳಿತಿದ್ದಾರೆ.

ಬೋರಪ್ಪ: ಇವತ್ ಬರಲಿ ಆ ಚಂಗ್ಲು ನನ್ಮಗ.....ಏನಾದ್ರು ಒಂದು ಗೇಮೆ ಅಂತ ಮಾಡ್ಕೊಂಡು ಇರೋದಾದ್ರೆ ಅಟ್ಟೇಲಿರು. ಇಲ್ದೇದ್ರೆ ನಿನ್ ಪಾಡು ನೀನ್ ನೋಡ್ಕೊ ಅಂತೀನಿ.

ಮಾದಮ್ಮ: ಬೆಳ್ದು ಕಯ್ಯಿಗೆ ಬಂದಿರು ಮಗನ್ನ ಹಂಗೆಲ್ಲಾ ಅನ್ನೊಕೆ ಹೋಗ್ಬೇಡಿ. ಆಮ್ಯಾಲೆ ಒಂದಕ್ಕೋಗಿ ಮತ್ತೊಂದಕ್ಕೆ ತೀರಿಕೊಂಡದು.

ಬೋರಪ್ಪ: ತೂ... ಸುಮ್ಮನಿರು ಕತ್ತೆಮುಂಡೆ... ನಿನ್ನಿಂದಲೆ ಅವನು ಹಾಳಾಗೋದ.

ಮಾದಮ್ಮ: ಮಾತೆತ್ತಿದರೆ ಸಾಕು ನಿಮ್ಮ ಬಾಯಲ್ಲಿ ನನ್ನ ಮುಂಡೆ.. ಚಿನಾಲಿ ಅನ್ನೋದು ಬುಟ್ರೆ ಇನ್ನೇನ್ ತಾನೆ ಕಡದದು.

(ಈ ಮಾತುಕತೆ ನಡೆಯುತ್ತಿರುವಾಗ ಮನೆಯೊಳಕ್ಕೆ ಮಗ ಬರುತ್ತಾನೆ.)

ಬೋರಪ್ಪ: ಲೇ ನಿಂತ್ಕೊಳ್ಳ.... ನಿಂಗೇನ್ ಮಾನಮರ್ವಾದೆ ಅಂತ ಏನೂ ಇಲ್ವೇ ಊರಲ್ಲಿರೋ ಅಲಾಲ್‌ಟೋಪಿ ನನ್ಮಕ್ಳ ಜೊತೇಲಿ ತಿರೀಕೊಂಡು ನಿಂತಿದ್ದೀಯಲ್ಲ. ಹಿಂಗಾದ್ರೆ ಮನೆ ಉಳದದೇನ್ಲಾ.

ಮಗ : ಈಗ ನಾನ್ ಅಂತಾದ್ದೇನ್ ಮಾಡ್ದೆ ಅಂತ ಹಿಂಗಾಡಿಯೆ ನೀನು.

ಬೋರಪ್ಪ: ಏನ್ ಮಾಡ್ದೆ ಅಂತ ಕೇಳ್ತಿಯಲ್ಲ..ವಂಶಗೇಡಿ ನನ್ಮಗ್ನೆ. ಒಂಚೂರಾದ್ರು ಮನೆ ಜವಾಬ್ದಾರಿ ಅನ್ನೋದು ಇದೆಯೇನ್ಲಾ ನಿಂಗೆ ಅನ್ನಾಡಿ ನನ್ಮಗ್ನೆ, ಮೊದಲು ಏನಾದ್ರು ಒಂದು ಗೇಮೆ ಅಂತ ಮಾಡೋದು ಕಲಿ.

ಮಾದಮ್ಮ: ಹೋಗ್ಲಿ ಸುಮ್ನಿರಿ ಈಗ... ಮಾಡೂ ಕಾಲಕ್ಕೆ ಮಾಡ್ತನೆ.

ಬೋರಪ್ಪ: ಬೇವರ್ಸಿ ಮುಂಡೆ ಸುಮ್ನೆ ನಿಂತ್ಕೋ. ಎಲ್ಲದುಕ್ಕೂ ಬಾಯಾಕೊಂಡು ಬರಬ್ಯಾಡ.

ಮಗ: ಕೆಲಸಕ್ಕೆ ಮೊನ್ನೆ ಇಂಟರ್ ವ್ಯೂ ಬಂದಿದ್ದಾಗ ಎರಡು ಲಕ್ಷ ರೂಪಾಯಿ ನೀ ಕೊಟ್ಟಿದ್ರೆ.. ನಂಗೆ ಸರ್ಕಾರಿ ಕೆಲ್ಸ ಸಿಕ್ಕಿತಿರಲಿಲ್ವೇ....ಕೆಲಸ ಸಿಕ್ಕಿದ್ರೆ ನಾನ್ಯಾಕೆ ಹಿಂಗೆ ಇರ್ತಿದ್ದೆ.

ಬೋರಪ್ಪ: ಯಾರ ಮನೆಗೆ ಕನ್ನ ಹಾಕಿ ತರಲಪ್ಪ ಎರಡು ಲಕ್ಷ ರೂಪಾಯ! ನಿನ್ನಂತ ಏತ್ಲಾಂಡಿಗೆ ಯಾರ ತಾನೇ ಕೆಲಸ ಕೊಡ್ತರೆ. ಸಿಗದೇ ಇರೂ ಕೆಲಸದ ನೆಪ ತಕೊಂಡು ಕಾಲ ಕಳೀಬ್ಯಾಡ. ಹಿರೀಕರು ಬುಟ್ಟೋಗಿರು ಗದ್ದೆಹೊಲದಲ್ಲಿ ಗೇಮೆ ಮಾಡ್ಕೊಂಡು ಉಣ್ಣೋದು ಕಲಿ.

ಎಂದು ಮಗನನ್ನು ಎಚ್ಚರಿಸುತ್ತ ಬೋರಪ್ಪನವರು ಮಾತನಾಡುತ್ತಲೇ ಇದ್ದರು. ತಂದೆಯ ಮಾತಿಗೆ ಪ್ರತಿಯಾಡದೆ ಮಗ ಮನೆಯೊಳಕ್ಕೆ ಹೋದನು.

ಬೋರಪ್ಪನವರು ಮಗನಿಗೆ ಎಚ್ಚರಿಕೆಯನ್ನು ನೀಡಿ, ಅವನು ಯಾವುದಾದರೊಂದು ಬಗೆಯ ಕೆಲಸದಲ್ಲಿ ತೊಡಗುವಂತೆ ಮಾಡುವುದಕ್ಕಾಗಿ ಬಯ್ಯುತ್ತಿದ್ದಾರೆ. ಮಗನ ಪರವಾಗಿ ಮಾತನಾಡಲು ತೊಡಗಿದ ಹೆಂಡತಿಯನ್ನು ತಮ್ಮ ಮಾತಿಗೆ ಅಡ್ಡಬರದಂತೆ ತಡೆಯುವ ಉದ್ದೇಶದಿಂದ ಬಯ್ಗುಳವನ್ನು ಬಳಸಿದ್ದಾರೆ. ಈ ಪ್ರಸಂಗದಲ್ಲಿ ಬಯ್ಗುಳವು ಇತರರನ್ನು ವ್ಯಕ್ತಿಯು ತನ್ನ ಇಚ್ಚೆಗೆ ತಕ್ಕಂತೆ ನಿಯಂತ್ರಿಸುವ ಮತ್ತು ನಡೆದುಕೊಳ್ಳುವಂತೆ ಒತ್ತಾಯಿಸುವ ಒಂದು ಉಪಕರಣವಾಗಿ ಬಳಕೆಗೊಂಡಿದೆ. ಬೋರಪ್ಪನವರ ಮನದ ಭಾವನೆಗಳು ಏನೆಂಬುದನ್ನು ಅವರು ಆಡಿದ ಬಯ್ಗುಳದ ನುಡಿಗಳ ಮೂಲಕವೇ ಬೋರಪ್ಪನವರ ಹೆಂಡತಿ ಮತ್ತು ಮಗ

ಅರಿತುಕೊಂಡರು. ಈ ಪ್ರಸಂಗದಲ್ಲಿ ಭಾವನೆಗಳ ಸಂವಹನಕ್ಕೆ ಬಯ್ಗುಳದ ನುಡಿಗಳು ಬಳಕೆಯಾಗಿವೆ.

ಪ್ರಸಂಗ–೬

ಕಾಳಮುದ್ದನದೊಡ್ಡಿಯಲ್ಲಿ ನಾನು ವಾಸವಿದ್ದ ಮನೆಯ ಅಂಚಿನಲ್ಲಿ ರಾಗಿ ಅವರೆ ತೊಗರಿ ನವಣೆ ಮುಂತಾದ ಬೆಳೆಗಳಿಂದ ಕೂಡಿದ್ದ ಹೊಲವಿತ್ತು. ರಾಗಿ ಕುಯ್ಯಲು ಮುಗಿದ ನಂತರ ಸಂಕ್ರಾಂತಿ ಹಬ್ಬದ ತನಕ ಸಾಲಾರಂಬದ ಬೆಳೆಗಳಾದ ಅವರೆ ತೊಗರಿ ನವಣೆ ಜೋಳದ ಗಿಡಗಳಿದ್ದವು .ಆ ಹೊಲದ ಒಡತಿಯು ಪ್ರತಿ ದಿನ ಬೆಳಗ್ಗೆ ಹೊಲಕ್ಕೆ ಬಂದಾಗಲೆಲ್ಲಾ ಯಾರನ್ನಾದರೂ ಒಂದೇ ಸಮನೆ ಬಯ್ಯುತ್ತಿದ್ದರು. ಕಿಟಕಿಯ ಮೂಲಕ ನಾನು ನೋಡುತ್ತಿದ್ದಾಗ ಅಲ್ಲಿ ಬೇರೆ ಯಾರೂ ಕಾಣುತ್ತಿರಲಿಲ್ಲ. ಅವರೆಕಾಯಿ ಇಲ್ಲವೇ ತೊಗರಿಕಾಯನ್ನು ಕುಯ್ಯುತ್ತಾ ಹೊಲದಲ್ಲಿ ನಡುನಡುವೆ ನಿಂತು ಬಯ್ಯುವಿಕೆಯಲ್ಲಿ ತೊಡಗುತ್ತಿದ್ದರು. ಅವರ ಬಯ್ಗುಳಗಳು ಈ ರೀತಿ ಇದ್ದವು.

"ಕಂತ್ರಿ ಮುಂಡೇರು... ಹಾದರ್ಗಿತ್ತಿ ಮುಂಡೇರು... ಅವರ್ಗೆ ಮೊಲ್ಲಾಗ್ರು ಬರ... ಅವರೆಕಾಯಿ ತೊಗರಿಕಾಯಿ ಕದ್ದುಕುಯ್ಯೋ ಅವರ ಕಯ್ ಸೇದೋಗ... ಅವರ ಕಯ್ಗೆ ಕ್ವಾಷ್ಟತ್ತ... ಹಾಳ್ ಮನೆಯವರ್ಗೆ ನನ್ ಹೊಲವೇ ಆಗ್ಬೇಕೆ... ಅವರ ಮಕ್ಳ ತಿನ್ನ... ನನ್ ಕಣ್ಗೆ ಏನಾರ ಬಿದ್ದಿದ್ದರೆ, ಅವರ ಸಾಲೆ ಕಿತ್ತು ನಾಕು ಜನದ ಮುಂದೆ ಮಾನ ತೆಗಿತಿದ್ದೆ.... ಅವರ ಮನೆ ಗೆಡ್ಡೆ ಕಿತ್ತೋಗ."

ಒಂದು ದಿನ ಆಕೆಯ ಬಯ್ಗುಳವನ್ನು ಕೇಳಲಾಗದೆ ಹೊರಕ್ಕೆ ಬಂದು, ಅವರ ಜತೆ ಮಾತಿಗೆ ತೊಡಗಿದೆ.

ನಾನು : **ಹೊಲತ್ತಕೆ ಬಂದಾಗಲೆಲ್ಲ ಹಿಂಗೆ ಬಯ್ತಿರಲ್ಲ ಯಾಕ್ರಮ್ಮ?**

ಒಡತಿ : **ಅಯ್ಯೋ ಬನ್ನಿ ಮೇಸ್ಟ್ರೆ... ಜಾತ್ಕೆಟ್ ಲವುಡಿ ಮುಂಡೇರು ನನ್ ಹೊಲನೆಲ್ಲಾ ಹೆಂಗೆ ತಕ್ಕಲು ಮಾಡವ್ರೆ... ನೋಡ್ ಬನ್ನಿ.**

ನಾನು : **ನೀವಲ್ಲದೆ ಇನ್ನೊಬ್ಬರು ಹೊಲಕ್ಕೆ ಬಂದು ಕಾಯಿ ಕಿತ್ತಿದ್ದನ್ನು ನಾನು ಕಂಡೇ ಇಲ್ಲ ಕಣ್ರಮ್ಮ.**

ಒಡತಿ : **ನೀವೇನು ಮೂರೊತ್ತು ಮನೆ ತಾವೇ ಇದ್ದೀರ.. ಎಡಹೊತ್ತಲಿ ಬಂದು ಹಿಂಗೆ ಕುಯ್ಕೊಂಡೊಯ್ತರೆ. ನಾ ಸುಳ್ಳು ಹೇಳನೆ... ಬಾಪ್ಪ ಇತ್ತಗೆ... ಇಲ್ನೋಡಪ್ಪ ಹೆಂಗೆ ಗೊನ್ ಗೊನೇನೆ ತರದಾಕ್ಬುಟ್ಟವ್ರೆ ಊರೇಸ್ದ ನನ್ ಸವ್ತೀರು... ಅವರ ಮಕ್ಳ ಸಾಲ್ ಸಮಾದಿ ಮಾಡ.**

ನಾನು : ಬರೀ ಹೆಂಗಸರನ್ನೇ ಬಯ್ತಿದ್ದೀರಲ್ಲ... ಗಂಡಸರು ಕದ್ದು ಕಾಯಿ ಕೀಳಲ್ವೋ...

ಒಡತಿ: **ಆ ಮನಾಳ್ ನನ್ ಮಕ್ಳು ಬಂದ್ರೆ ಬುಡ ಸಮೇತ ಗಿಡನೇ ಕುಯ್ಕೊಂಡ್ ಹೊಯ್ತರೆ ಕಣಪ್ಪ. ಇದೇನಿದ್ರೂ ನಮ್ ಮನೆ ತಾವು ಒಂದಿಬ್ಬರು ಹೆಂಗಸ್ರು ಅವ್ರೆ.. ಆ ನನ್ ಸವ್ತಿರೇ ಹಿಂಗೆ ಕುಯ್ಯುರು. ಅವರ ಚಟ್ಟ ಕಟ್ಟ... ಅವರ್ಗೆ ಬರಬಾರದ್ದು ಬರ"** ಎಂದು ಹಿಡಿಹಿಡಿ ಶಾಪ ಹಾಕುವುದನ್ನು ಮುಂದುವರಿಸಿದರು.

ಒಂದು ದಿನ ಎಂದಿನಂತೆ ನಮ್ಮ ಮನೆಗೆ ಹಾಲನ್ನು ಹಾಕುವ ಅಮ್ಮ ಬಂದಿದ್ದಾಗ ಹೊಲದ ಒಡತಿಯ ಬಯ್ಗುಳಗಳು ಕೇಳಿಬರುತ್ತಿದ್ದವು. ಆಗ ಹಾಲಿನಮ್ಮ ಹೇಳಿದರು

> **"ಈ ಕಲ್ಕೇತಿ ಯಾವಾಗಲೂ ಹಿಂಗೆ ಕಣಪ್ಪ. ಇವಳ ಹೊಲದಲ್ಲಿ ಯಾರೂ ಕಾಯ್ನು ಕೀಳೂದಿಲ್ಲ ಏನೂ ಇಲ್ಲ.... ಹಿಂಗೆ ಬಯ್ತಿದ್ದರೆ ತನ್ನ ಗಂಟಲಿಗೆ ಹೆದರ್ಕೊಂಡು ಯಾರೂ ಬರದೆ ಇರಲಿ ಅಂತ ಹಿಂಗೆ ಬಯ್ತ ಆಡ್ತಾ ಇರ್ತಳೆ"** ಎಂದರು.

ಅವರೆಕಾಯಿ ಹೊಲದ ಒಡತಿಯು ತನ್ನ ಬೆಳೆಯನ್ನು ಕಾಪಾಡಿಕೊಳ್ಳಲೆಂದು ಬಯ್ಯುತ್ತಿದ್ದಾಳೆ. ಇವಳು ಆಡುವ ಬಯ್ಗುಳಕ್ಕೆ ಹೆದರಿಕೊಂಡು ಯಾರೊಬ್ಬರೂ ಹೊಲದ ಬಳಿ ಸುಳಿಯದಿರಲೆಂಬ ಉದ್ದೇಶದಿಂದ ಬಯ್ಗುಳವನ್ನು ಬಳಸುತ್ತಿದ್ದಾಳೆ. ಈ ಪ್ರಸಂಗದಲ್ಲಿ ಬಯ್ಗುಳವು ಇತರರಿಂದ ಬೆಳೆಯು ಕಳುವಾಗುವುದನ್ನು ತಡೆಗಟ್ಟುವ ಒಂದು ಹತಾರವಾಗಿ ಬಳಕೆಯಾಗಿದೆ.

ಪ್ರಸಂಗ–೭

ಸಂಜೆ ಏಳರ ಸಮಯ. ಹಳ್ಳಿಯೊಂದರ ತಮ್ಮ ಗುಡಿಸಲಿನ ಮುಂದೆ ನಿಂತಿರುವ ಹೆಂಗಸೊಬ್ಬರು ದೊಡ್ಡ ದನಿಯಲ್ಲಿ ಬಯ್ಯುತ್ತಿದ್ದಾರೆ. ನೆನ್ನೆ ಮೇಯುವುದಕ್ಕೆಂದು ಹೋಗಿದ್ದ ಅವರ ಕೋಳಿಯು ಇಂದು ಸಂಜೆಯಾದರೂ ಮನೆಗೆ ಬಾರದಿದ್ದಾಗ, ಅದನ್ನು ಯಾರೋ ಕದ್ದು ಮುರಿದುಕೊಂಡಿರುವುದು ದಿಟವಾಗಿದೆ. ತಮ್ಮ ಹೊಟ್ಟೆಯುರಿಯನ್ನು ಕಾರಿಕೊಳ್ಳುತ್ತಾ–

"ತೂ ನನ್ ಸವ್ತೀರ... ಆ ನನ್ ಕೋಳಿ ತಿನ್ನೂದ ನನ್ ಹೇಲ್ ತಿನ್ನೂರಿ... ನನ್ ಗಲ್ಲೆ ತಿನ್ನೂರಿ... ನನ್ ಕೋಳಿ ಮುರ್ಕೊಂಡೋರ ಬಾಯ್ಲಿ ಹುಳ ಬೀಳ... ಅವರ್ಗೆ ವಾಂತ್ಬೇದಿ ಬರ... ಅವರ್ಗೆ ಹೊತಾರೆ ಹೊತ್ಗೆ ಚಟ್ಟ ಕಟ್ಟ... ಅವರ ಬಾಯ್ಗೆ ನನ್ ರತ್ತ ಉಯ್ಯ... ಕಟ್ನಾವ್ ಕಡಿಯ... ನಾಗ್ರಾವು ಕಡಿಯ... ತೂ... ಅವರ ಬಾಳ್ಗೆ ಬೆಂಕಿ ಎಟ್ಟ..." ಹೀಗೆ ಸುಮಾರು ಹೊತ್ತು ಬಗೆಬಗೆಯ ಬಯ್ಗುಳಗಳನ್ನು ಅವರು ಆಡುತ್ತಲೇ ಇದ್ದರು.

ಕೋಳಿಯನ್ನು ಕಳೆದುಕೊಂಡಿರುವ ಹೆಂಗಸು ಬಯ್ಗುಳಗಳನ್ನು ಆಡುವುದರ ಮೂಲಕ ತನ್ನ ಒಡಲಿನ ಸಂಕಟವನ್ನು ಹೊರಹಾಕುತ್ತ, ಕೋಳಿಯನ್ನು ಮುರಿದು ಕೊಂಡಿರುವವರಿಗೆ ಕೇಡು ತಟ್ಟಲೆಂಬ ಉದ್ದೇಶದಿಂದ ಬಯ್ಗುಳವನ್ನು ಬಳಸಿದ್ದಾರೆ.

ಪ್ರಸಂಗ–೮

ಜಿಲ್ಲಾ ಕೇಂದ್ರವೊಂದರ ಪಾರ್ಕಿನಲ್ಲಿ ಸಂಜೆ ಆರರ ಸಮಯದಲ್ಲಿ ಅರವತ್ತಕ್ಕಿಂತ ಹೆಚ್ಚಿನ ವಯಸ್ಸಾಗಿದ್ದ ನಾಲ್ಕಾರು ಮಂದಿ ಗಂಡಸರು ಬೆಂಚುಗಳ್ಲಿನ ಮೇಲೆ ಕುಳಿತುಕೊಂಡು ಲೋಕಾಭಿರಾಮವಾಗಿ 'ಅದು–'ಇದು' ಮಾತನಾಡುವುದರಲ್ಲಿ ತೊಡಗಿದ್ದಾರೆ. ದಿನ ಪತ್ರಿಕೆಗಳಲ್ಲಿ ವರದಿಯಾಗುತ್ತಿರುವ ಭ್ರಷ್ಟಾಚಾರದ ಸಂಗತಿಗಳನ್ನು ಕುರಿತು ಮಾತನಾಡುತ್ತ–

ಒಬ್ಬರು: ನೀವೇನೆ ಹೇಳಿ. ನಾವು ಸರ್ವೀಸ್ ನಲ್ಲಿ ಇದ್ದಾಗ ಇಷ್ಟೊಂದು ಲಂಚ ಇರಲಿಲ್ಲ. ಏನ್ರಿ.ಈಗ ಯಾವ ಆಫೀಸಿಗೆ ನೀವು ಹೋದರೂ ದುಡ್ಡು ಕೊಡದೆ ಏನೂ ಆಗೂದಿಲ್ಲ. ಎಲ್ಲಾ ಕಡೆ ಖದೀಮರೇ ತುಂಬವ್ರೆ.

ಮತ್ತೊಬ್ಬರು: ಎಲ್ಲಾ ಡಿಪಾರ್ಟ್ ಮೆಂಟ್ ಗಳು ಹಾಳಾಗಿ ಹೋಗಿವೆ ಕಣ್ರಿ. ಲಂಚ ಕೊಟ್ಟರೂ ಈಗ ಕೆಲಸ ಮೊದಲಿನಂಗೆ ಆಗೂದಿಲ್ಲ. ಕಳ್ಳ ನನ್ಮಕ್ಳು ಕೊಟ್ಟ ದುಡ್ಡ ತಿನ್ಕೊಂಡು ಈಗ ಬನ್ನಿ ಆಗ ಬನ್ನಿ ಅಂತ ಸುಮ್ಮನೆ ದಿನಾ ಅಲೆಯುವಂಗೆ ಮಾಡ್ತರೆ.

ಇನ್ನೊಬ್ಬರು: ಏನ್ ಮಾಡ್ತೀರಿ. ಕೆಳಗಿನಿಂದ ಮೇಲಿನವರೆಗೂ ಭ್ರಷ್ಟಾಚಾರ ತುಂಬಿ ತುಳುಕ್ತಾದೆ. ಕೆಲವು ರಾಜಕಾರಣಿಗಳು ನಮ್ಮ ದೇಶದಲ್ಲಿ ಕೊಳ್ಳೆ ಹೊಡುದ್ ದುಡ್ಡನ್ನೆಲ್ಲಾ ಅಲ್ಲೆಲ್ಲೋ ಸ್ವಿಸ್ ಬ್ಯಾಂಕಿನಲ್ಲಿ ಇಟ್ಟದ್ದಾರಂತಲ್ಲ ಕೇಡಿ ನನ್ಮಕ್ಳು.

ಮುಂದುವರಿದ ಅವರ ಮಾತುಕತೆಯ ಉದ್ದಕ್ಕೂ ಬಯ್ಗುಳದ ನುಡಿಗಳು ಒಂದೇ ಸಮನೆ ಬಳಕೆಯಾಗುತ್ತಿದ್ದವು.

ಮಾತಿನಲ್ಲಿ ತೊಡಗಿರುವವರು ಯಾರೊಬ್ಬರೂ ವೈಯಕ್ತಿಕ ನೆಲೆಯಲ್ಲಿ ಯಾವುದೇ ಒಬ್ಬ ವ್ಯಕ್ತಿಯ ಬಗ್ಗೆ ತಮ್ಮ ಮನಸ್ಸಿನ ಆಕ್ರೋಶವನ್ನು ಕಾರುತ್ತಿಲ್ಲ. ಸಮಾಜದಲ್ಲಿ ನಡೆಯುತ್ತಿರುವ ವಿದ್ಯಮಾನಗಳ ಬಗ್ಗೆ ಮಾತನಾಡುತ್ತ, ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸುವಾಗ ಬಯ್ಗುಳದ ನುಡಿಗಳನ್ನಾಡುತ್ತಿದ್ದಾರೆ. ನಾವೆಲ್ಲರೂ ಇತರರ ನಡೆನುಡಿಯಲ್ಲಿನ ತಪ್ಪುಗಳನ್ನು ಕುರಿತು ಮಾತನಾಡುವಾಗ ಬಯ್ಗುಳ

ಗಳನ್ನು ಯಾವುದೇ ಅಡೆತಡೆಯಿಲ್ಲದೆ ಬಳಸುತ್ತೇವೆ. ಇಂತಹ ಸನ್ನಿವೇಶಗಳಲ್ಲಿ ಬಳಕೆಯಾಗುವ ಬಯ್ಗುಳಗಳು ಇತರರ ಬಗ್ಗೆ ನಮ್ಮ ಮನದ ಭಾವನೆಯು ಯಾವ ಬಗೆಯದು ಎಂಬುದನ್ನು ಮತ್ತು ಸಮಾಜದ ಬಗ್ಗೆ ನಮ್ಮ ನಿಲುವು ಏನೆಂಬುದನ್ನು ಜತೆಗಾರರಿಗೆ ತಿಳಿಸುತ್ತವೆ.

ಪ್ರಸಂಗ–೯

ರಾತ್ರಿ ಏಳು ಮೂವತ್ತರ ಸಮಯದಲ್ಲಿ ಈ ಪ್ರಸಂಗ ನಡೆಯುತ್ತಿತ್ತು. ಹಳ್ಳಿಯೊಂದರ ಬೀದಿ. ಇಕ್ಕೆಲಗಳಲ್ಲಿಯೂ ಗುಡಿಸಲುಗಳಿದ್ದವು. ಬಯ್ಯಿಸಿಕೊಳ್ಳುತ್ತಿದ್ದ ಹೆಂಗಸು ತನ್ನ ಗುಡಿಸಲಿನ ಒಳಗಿದ್ದಳು. ಈ ಗುಡಿಸಲಿನಿಂದ ಸುಮಾರು ಅಯ್ವತ್ತು ಅರವತ್ತು ಗಜಗಳ ದೂರದಲ್ಲಿದ್ದ ತಮ್ಮ ಗುಡಿಸಲ ಬಳಿಯಲ್ಲಿ ಅತ್ತಿತ್ತ ಓಡಾಡುತ್ತ ಒಬ್ಬ ಗಂಡಸು ಮತ್ತು ಒಬ್ಬ ಹೆಂಗಸು ಈಕೆಯನ್ನು ಬಯ್ಯುತ್ತಿದ್ದರು. ಬಯ್ಯುತ್ತಿದ್ದವರು ಗಂಡ ಹೆಂಡತಿಯರಾಗಿದ್ದರು. ಒಮ್ಮೊಮ್ಮೆ ಆಕೆಯ ಗುಡಿಸಲ ಹತ್ತಿರಕ್ಕೂ ಹೋಗಿ ಬಯ್ದು, ಮತ್ತೆ ತಮ್ಮ ಗುಡಿಸಲಿನ ಬಳಿಗೆ ಹಿಂತಿರುಗುತ್ತಿದ್ದರು. ದಂಪತಿಗಳಲ್ಲಿ ಹೆಂಡತಿಯ ಶೀಲಕ್ಕೆ ಕಳಂಕವನ್ನು ತರುವ ಕೆಟ್ಟ ಮಾತೊಂದನ್ನು ಆ ಹೆಂಗಸು ಬೇರೆಯವರ ಮುಂದೆ ಹೇಳಿದ್ದಳಂತೆ. ಅದರಿಂದ ಕೆರಳಿದ್ದ ದಂಪತಿಗಳು ಜತೆಗೂಡಿ ಈಗ ಅವಳನ್ನು ಬಯ್ಯತೊಡಗಿದ್ದಾರೆ. ಇವರು ಬಯ್ಯುವಿಕೆಯಲ್ಲಿ ತೊಡಗಿದ್ದನ್ನು ಕೇಳಿ ನೆರೆಹೊರೆಯಲ್ಲಿದ್ದ ಒಂದು ಗುಡಿಸಲಿನಿಂದ ಒಬ್ಬ ಹೆಂಗಸು ಬಂದು ನೋಡುತ್ತ ಕೇಳುತ್ತಾ ನಿಂತಿದ್ದಾಳೆ.

ಗಂಡ: (ದೊಡ್ಡ ದನಿಯಲ್ಲಿ ಅಬ್ಬರಿಸುತ್ತಾ)
ಆ ಮಾತ ನೀನ್ ಹೆಂಗೆ ಹೇಳ್ದೆ ಲೋಪರ್ ಬೊಡ್ಡಿ... ನಿಮ್ಮವ್ ಬೊಡ್ಡೀನಾ ಕೆಯ್ಯ... ನಿಮ್ಮವ್ ಲೋಪರ್ ತುಲ್ಲಾ ಕೆಯ್ಯ... ಜಾತ್ಕೆಟ್ ಬೊಡ್ಡಿ ಜಾತ್ಕೆಟ್ ರಂಡೆ.

ಹೆಂಡತಿ: (ಆಕ್ರೋಶದಿಂದ ಅರಚುತ್ತ...)
ಥೂ....ನನ್ ಸವ್ತಿ.... ಹಾದರ್ಗಿತ್ ನನ್ ಸವ್ತಿ...ಬೇವರ್ಸಿ ನನ್ ಸವ್ತಿ... ಯಾರ್ ಹಾಳ್ ಮಾಡೋಕೆ ಹೇಳ್ದೆ...ನನ್ ಸಂಸಾರ ಕಿತ್ ಹಾಕ್ಬೇಕು ಅಂತ ಹಂಗೆ ಹೇಳ್ದ... ನಿನ್ ಮಗನ್ನ ತಿನ್ನ...ನಿನ್ ಹೆಣ್ ಮುಂಡೆಯಾಗ... ಥೂ... ಹಾದರಗಿತ್ತಿ ನನ್ ಸವ್ತಿ...

ಗಂಡ: ಇನ್ನೊಂದು ಸತಿ ಏನಾರ ಇಂತಾ ಮಾತ ನೀನು ಹೇಳುದ್ದ ಕೇಳುದ್ರೆ ಆಗ ಅದರ ಕತೆಯೇ ಬೇರೆ ಆಯ್ತದೆ. ನಡೀಯಮ್ಮಿ ಈಗ ಒಳಾಕೆ. ಉಗಿದದ್ದು ಆಯ್ತಲ್ಲ.

ಹೆಂಡತಿ: ಇಂತಾ ಮುಂಡೇರ್ಗೆ ಸಾವಾದ್ರು ಬರಬಾರದ...ಇವರ ಮನೆ ಗೆಡ್ಡೆ ಕಿತ್ತೋಗ. ನನ್ನ ಹಂಗಂದವಳಲ್ಲ. ಇವಳ ಬಾಯ್ಲಿ ಹುಳ ಬೀಳ.

ಇವರಿಬ್ಬರ ಬಯ್ಯುವಿಕೆಗೆ ಗುಡಿಸಲಿನ ಒಳಗಿದ್ದ ಹೆಂಗಸು ಪ್ರತಿಯಾಗಿ ಗುಡಿಸಲಿನ ಒಳಗಿಂದಲೇ ಏನೇನೋ ಹೇಳುತ್ತಿದ್ದಳು. ಆದರೆ ಗಂಡ ಹೆಂಡತಿಯ ಬಯ್ಗುಳದ ಅಬ್ಬರ ಹೆಚ್ಚಾದಂತೆಲ್ಲಾ ಅವಳ ದನಿ ನಿಂತಿತು. ಗಂಡ ಹೆಂಡತಿಯು ಹಲವಾರು ನಿಮಿಷಗಳ ಕಾಲ ಹೀಗೆಯೇ ಬಯ್ಯುತ್ತಿದ್ದು ತಮ್ಮ ಗುಡಿಸಲಿನ ಒಳಕ್ಕೆ ಹೋದರು.

ತನ್ನ ಹೆಂಡತಿಯ ಶೀಲದ ಬಗ್ಗೆ ಕಳಂಕ ತರುವಂತಹ ಮಾತುಗಳನ್ನಾಡಿದ್ದ ಹೆಂಗಸಿನ ಬಾಯನ್ನು ಮುಚ್ಚಿಸಿ, ಅವಳು ಇನ್ನು ಮುಂದೆ ಈ ರೀತಿ ಎಲ್ಲಿಯೂ ಮಾತನಾಡದಂತೆ ನಿಯಂತ್ರಿಸಲು ಆ ಹೆಂಗಸನ್ನು ಬಯ್ದನು. ಆತನ ಹೆಂಡತಿಯು ತನಗೆ ಆದ ಅಪಮಾನಕ್ಕೆ ಪ್ರತಿಯಾಗಿ ಆಕ್ರೋಶವನ್ನು ಕಾರುತ್ತ, ಆ ಹೆಂಗಸನ್ನು ಬಯ್ದಳು. ಈ ಪ್ರಸಂಗದಲ್ಲಿ ಬಯ್ಗುಳ ನುಡಿಗಳು ಆ ಹೆಂಗಸಿಗೆ ಎಚ್ಚರಿಕೆಯನ್ನು ನೀಡುವ ಮತ್ತು ಆಕೆಯನ್ನು ನಿಯಂತ್ರಿಸುವ ಹತಾರವಾಗಿ ಬಳಕೆಯಾಗಿದೆ. ಜತೆಗೆ ಗಂಡ ಹೆಂಡತಿಯು ತಮಗೆ ಆಕೆಯ ಮಾತುಗಳಿಂದ ಉಂಟಾಗಿದ್ದ ಅಪಮಾನಕ್ಕೆ ತಕ್ಕ ಪ್ರತೀಕಾರವನ್ನು ತೀರಿಸಿಕೊಳ್ಳುವ ಉಪಕರಣವಾಗಿಯೂ ಬಯ್ಗುಳ ಬಳಕೆಯಾಗಿದೆ. ಈ ಪ್ರಸಂಗದಲ್ಲಿ ಬಯ್ಯಿಸಿಕೊಂಡ ಹೆಂಗಸು ಬಯ್ಯುತ್ತಿರುವವರನ್ನು ಎದುರಿಸಲಾಗದೆ ಹೆದರಿಕೆಯಿಂದ ತನ್ನ ಗುಡಿಸಲಿನಿಂದ ಹೊರಬರದೆ ಇವರ ಮಾತಿಗೆ ಉತ್ತರವನ್ನು ಕೊಡುತ್ತಲೋ ಇಲ್ಲವೇ ಇವರನ್ನು ಬಯ್ಯುತ್ತಲೋ ತನ್ನ ಪಾಡಿಗೆ ತಾನಿದ್ದಳು.

ಪ್ರಸಂಗ–೧೦

ತಂದೆಯ ಹೊಲವನ್ನು ಪಾಲು ಮಾಡಿಕೊಂಡು ಬೇಸಾಯ ಮಾಡುತ್ತಿದ್ದ ಅಣ್ಣ ಮತ್ತು ತಮ್ಮ ತೆವರಿಯ ಮೇಲೆ ನಿಂತುಕೊಂಡು ಜಗಳ ಕಾಯುತ್ತಿದ್ದಾರೆ. ಪ್ರತಿ ವರ್ಷ ಮುಂಗಾರಿನಲ್ಲಿ ಉಳುಮೆಯನ್ನು ಮಾಡುವಾಗಲೆಲ್ಲಾ ತಮ್ಮನು ತನ್ನ ಪಾಲಿನ ಹೊಲದ ತೆವರಿಯನ್ನು ಒತ್ತರಿಸಿಕೊಂಡು ಜಮೀನನ್ನು ಹೆಚ್ಚು ಮಾಡಿಕೊಳ್ಳುತ್ತಿದ್ದಾನೆ ಎಂಬ ಆರೋಪವನ್ನು ಮಾಡುತ್ತ–

ಅಣ್ಣ : ಲೇ... ನಿನ್ ಪಾಲ್ಗೆ ಬಂದಿರೂದ ನೀ ಹೆಂಗಾರ ಉತ್ಕೊ... ಹಿಂಗೆ ಏನಾರ ನೀ ಮಾಡ್ತಿದ್ರೆ.. ಬೋಳಿಮಗ್ನೆ ನಿಂಗೆ ಗುದ್ದಲಿ ಅಂಡಲ್ಲೆ ಬಾರಿಸ್ಬುಡ್ತೀನಿ.

ತಮ್ಮ : ನಾನೇನ್ ಕಡ್ಲೆಪುರಿ ತಿಂದನೆ. ಅದೇ ಗುದ್ದಲೀಲಿ ನಿನ್ ಮೊಕ ಕೆತ್ಬುಡ್ತೀನಿ... ನನ್ನ ಪಾಲಿಗೆ ಬಂದಿರೋದ ನಾನು ಉಳುತಾಯಿದ್ದರೆ ನಿಂಗೇನೋ ಮೊಲ್ಲಾಗ್ರು... ಹೋಗೋ ಅನ್ನಾಡಿ ನನ್ಮಗ್ನೆ.

ಅಣ್ಣ : ಲೇ ಅನ್ನಾಡಿ ಗಿನ್ನಾಡಿ ಅಂತ ಬೋದ್ರೆ ಸರಿಹೋಗೂದಿಲ್ಲ... ಲೋಪರ್ ಬಡ್ಡಿಮಗ್ನೆ.

ತಮ್ಮ : ಲೇ ಬೇವರ್ಸಿ... ನೀನ್ ಸರಿಯಾಗಿ ಮಾತಾಡುದ್ರಲ್ವೇ ನಾ ಮಾತಾಡೂದು.

ಹೀಗೆ ಜಗಳ ಮುಂದುವರಿಯುತ್ತಿದ್ದಾಗ, ಅಕ್ಕಪಕ್ಕದ ಜಮೀನಿನವರು ಬಂದು ಇಬ್ಬರನ್ನು ದೂರ ತಳ್ಳಿ **"ನಿಮ್ಮಪ್ಪ ಇದ್ದಾಗ ರಾಮ ಲಕ್ಷ್ಮಣರಂಗೆ ಇದ್ದೋರು ಇದ್ರ್ಯಾಕ್ರಪ್ಪ ಈಗ ಹಿಂಗಾಗುಬುಟ್ರಿ ಒಸಿ ಅನುಸರಿಸ್ಕೊಂಡು ಹೋಗಿ"** ಎಂದು ಸಮಾಧಾನ ಮಾಡಿ ಜಗಳವನ್ನು ಬಿಡಿಸಿದರು.

ಈ ಪ್ರಸಂಗದಲ್ಲಿ ಅಣ್ಣ ಮತ್ತು ತಮ್ಮ ಇಬ್ಬರೂ ತಮ್ಮ ತಮ್ಮ ಪಾಲಿನ ಜಮೀನನ್ನು ಕಾಪಾಡಿಕೊಳ್ಳುವುದಕ್ಕಾಗಿ ಪ್ರಯತ್ನಿಸುತ್ತಿದ್ದಾರೆ. ಇಬ್ಬರ ನಡುವಣ ಜಗಳದಲ್ಲಿ ಬಯ್ಗುಳ ನುಡಿಗಳು ತಮ್ಮನ್ನು ತಾವು ಸರಿಯೆಂದು ಹೇಳಿಕೊಂಡು, ಮತ್ತೊಬ್ಬನ ತಪ್ಪನ್ನು ಎತ್ತಿ ತೋರಿಸುವ ಸಾಧನವಾಗಿವೆ.

ಪ್ರಸಂಗ–೧೧

ಕಾಳಮುದ್ದನದೊಡ್ಡಿಯಲ್ಲಿ ಕಾಲೇಜಿನ ಉಪನ್ಯಾಸಕರೊಬ್ಬರ ಮನೆಯ ಕೈದೋಟದಲ್ಲಿ ತೋಟದಲ್ಲಿ ಒಣಗಿಹಾಕಿದ್ದ ಸೀರೆಯೊಂದು ಕಾಣೆಯಾಗಿತ್ತು. ಅದರ ಆರೋಪವನ್ನು ವಾರಕ್ಕೆ ಒಂದೆರಡು ದಿನ ತರಕಾರಿ ಮಾರಲೆಂದು ಮನೆಗಳ ಬಳಿ ಬರುತ್ತಿದ್ದ ಹೆಂಗಸರೊಬ್ಬರ ಮೇಲೆ ಹೊರಿಸಿ, ಆಕೆಯನ್ನು ಉಪನ್ಯಾಸಕರ ಹೆಂಡತಿ ಕೇಳಿದಾಗ–

ತರಕಾರಿ ಅಮ್ಮ : **ನಾನು ಅಂತಾ ಕೆಲ್ಸವ ನನ್ ಜೀವ ಹೋದ್ರು ಮಾಡೂಳಲ್ಲ... ಯಾವ ಲೋಪರ್ ಮುಂಡೇರು ಮಾಡಿದ್ದರೋ... ಯಾವ ಬೇವರ್ಸಿ ಮುಂಡೇರು ಮಾಡಿದ್ದರೋ... ಹಂಗೆ ಮಾಡ್ದೋರ್ ಮಕ್ಳ ತಿನ್ನ.**
(ಎಂದು ತನ್ನ ಮೇಲಿನ ಆರೋಪವನ್ನು ನಿರಾಕರಿಸುತ್ತ ಬಯ್ಯಲು ತೊಡಗಿದಳು.)

ಉಪನ್ಯಾಸಕರ ಹೆಂಡತಿ : **ಹೋಗ್ಲಿ ಬಿಡಮ್ಮ. ಯಾರ್ ತಕೊಂಡಿದ್ದರೋ ಅವರಿಗೆ ಕೆಟ್ಟದ್ದು ಆಯ್ತದೆ. ಹಿಂಗೆ ನಿನ್ನ ಕೇಳ್ದೆ ಅಂತ ನೀನೇನು ಬೇಜಾರ್ ಮಾಡ್ಕೊಬ್ಯಾಡ.**

ತರಕಾರಿ ಅಮ್ಮ : **ಅಯ್ಯೋ ನಾವು ಬಡವರು ಕಣವ್ವ.... ಗತ್ಕೆಟ್ ಮುಂಡತ್ತವ್. ನೀವು ನಮ್ಮಂತೆವರನ್ನ ಕೇಳ್ದೆ ಬೇರೆಯವರ ಕೇಳೂಕಾಪದೆ, ಬುಡವ್ವ**

ಈ ಪ್ರಸಂಗದಲ್ಲಿ ತರಕಾರಿ ಅಮ್ಮನು ತನ್ನ ಮೇಲೆ ಬಂದಿರುವ ಆಪಾದನೆಯನ್ನು ನಿರಾಕರಿಸಲು ಬಯ್ಗುಳವನ್ನು ಬಳಸುತ್ತಿದ್ದಾಳೆ.

ಪ್ರಸಂಗ–೧೨

ನಡು ಹಗಲು ಮೂರೂ ಮೂವತ್ತರ ಸಮಯ. ಹಳ್ಳಿಗಾಡಿನ ಪ್ರದೇಶದಲ್ಲಿರುವ ಒಂದು ಬತ್ತದ ಗದ್ದೆಯಲ್ಲಿ ಎಂಟು ಮಂದಿ ಹೆಣ್ಣಾಳುಗಳು ಬೆಳದು ಹಣ್ಣಾಗಿದ್ದ ಬತ್ತದ ಪಯಿರನ್ನು ಕುಯ್ಯುತ್ತಿದ್ದಾರೆ. ಕುಯ್ಯುವಿಕೆಯಲ್ಲಿ ತೊಡಗಿರುವುದಕ್ಕಿಂತ ಹೆಚ್ಚಾಗಿ ಮಾತಿನಲ್ಲಿ ಮಗ್ನರಾಗಿದ್ದುದನ್ನು ನೋಡಿದ ಗದ್ದೆಯ ಒಡೆಯನು ಹೆಣ್ಣಾಳುಗಳ ಬಗ್ಗೆ ಮುಂದಾಳುಗಿತ್ತಿಗೆ **"ಹಿಂಗಾದ್ರೆ ಕುಯ್ಲು ಇವತ್ತಿಗೆ ಮುಗಿಯುದಿಲ್ಲ"** ಎಂದು ದೂರುತ್ತಾನೆ. ಈ ಹೆಣ್ಣಾಳುಗಳನ್ನು ಕೆಲಸಕ್ಕೆ ಕರೆತಂದು ಕೆಲಸವನ್ನು ಮಾಡಿಸುವ ಜವಾಬ್ದಾರಿಯನ್ನು ಹೊತ್ತಿರುವ ಮುಂದಾಳುಗಿತ್ತಿಯು ಹೆಣ್ಣಾಳುಗಳನ್ನು ಬಯ್ಯತೊಡಗುತ್ತಾಳೆ.

ಮುಂದಾಳುಗಿತ್ತಿ: **ಎಲ್ಲರೂನೂ ನಿಮ್ಮ ತುಲ್ಲುನ್ ಮುಂದಕ್ಕೆ ಕರಕ್ಕರಮ್ಮಿ... ಈಚೀಚೆಗೆ ಬಂದು ಕುಯಿರ್ಲೆ.... ನಿಮ್ಮ ಸಾಲು ಬುಟ್ಟು ಆಚೀಚ್ಗೆ ಬಂದ್ರೆ ನಿಮ್ಮ ಮೊಲೆ ಕೂದು ಬುಡ್ತೀನಿ.... ನಿಮ್ಮಿಂದ ನಾನು ಒಂದು ಮಾತು ಕೇಳ್ವಂಗಾಯ್ತು.**

ಹೆಣ್ಣಾಳುಗಳು ಮುಂದಾಳುಗಿತ್ತಿಯ ಬಯ್ಗುಳದ ಮಾತಿಗೆ ಎದುರಾಡದೇ, ತಮ್ಮ ಕುಯ್ಲು ಕೆಲಸದಲ್ಲಿ ತೊಡಗುತ್ತಾರೆ. ಬತ್ತದ ಪಯಿರನ್ನು ಕುಯ್ಯುವ ಕೆಲಸದಲ್ಲಿ ಹೆಚ್ಚಿನ ಆಸಕ್ತಿಯನ್ನು ತೋರದೆ ಪರಸ್ಪರ ಮಾತಿನಲ್ಲಿ ಮಗ್ನರಾಗಿದ್ದ ಹೆಣ್ಣಾಳುಗಳಿಗೆ ಎಚ್ಚರಿಕೆಯನ್ನು ನೀಡಿ, ಅವರನ್ನು ಕೆಲಸದಲ್ಲಿ ತೊಡಗುವಂತೆ ಮಾಡುವುದಕ್ಕಾಗಿ ಬಯ್ಗುಳ ಬಳಕೆಯಾಗಿದೆ. ಬಯ್ಯುವುದರ ಮೂಲಕ ಮುಂದಾಳುಗಿತ್ತಿಯು ತಾನು ಅವರೆಲ್ಲರನ್ನೂ ನಿಯಂತ್ರಿಸುವ ಅಧಿಕಾರವನ್ನು ಹೊಂದಿದ್ದೇನೆ ಎಂಬುದನ್ನು ಸಾಬೀತುಪಡಿಸಿದ್ದಾರೆ. ಮುಂದಾಳುಗಿತ್ತಿಯ ಬಯ್ಗುಳಕ್ಕೆ ಹೆಣ್ಣಾಳುಗಳು ಯಾವುದೇ ಎದುರಾಡದೇ ತಮ್ಮಲ್ಲಿಯೇ ಗೊಣಗಿಕೊಳ್ಳುತ್ತಾ, ಮೊದಲಿಗಿಂತ ಹೆಚ್ಚಿನ ವೇಗದಲ್ಲಿ ಕುಯ್ಯಲು ತೊಡಗಿದರು. ಬಂಡಿಗೆ ಕಟ್ಟಿರುವ ಎತ್ತುಗಳು ಮಂದಗತಿಯಲ್ಲಿ ಹೋಗುತ್ತಿದ್ದಾಗ, ಅವನ್ನು ಚುರುಕುಗೊಳಿಸಲು ಗಾಡಿ ಹೊಡೆಯುವವನು ಚಾವಟಿಯನ್ನೊಮ್ಮೆ ಬೀಸುತ್ತ ಅಬ್ಬರಿಸುವಂತೆ ಮುಂದಾಳುಗಿತ್ತಿಯ ಬಯ್ಗುಳದ ನುಡಿಯು ಹೆಣ್ಣಾಳುಗಳು ಕೆಲಸದಲ್ಲಿ ತೊಡಗುವಂತೆ ಮಾಡುವ ಹತಾರವಾಗಿ ಬಳಕೆಯಾಗಿದೆ.

ಪ್ರಸಂಗ–೧೩

ಗುಡಿಯೊಂದರ ಬಳಿಯ ಮದುಮಂಟಪದಲ್ಲಿ ಮದುವೆಯೊಂದು ನಡೆಯುತ್ತಿದೆ. ಮದುವೆಗೆ ಬರುತ್ತಿರುವ ನೆಂಟರನ್ನು, ಆತ್ಮೀಯರನ್ನು ಮತ್ತು ಇನ್ನಿತರ ಜನರನ್ನು ಹೆಣ್ಣಿನ ತಂದೆಯು ನಗೆಮೊಗದಿಂದ ಬರಮಾಡಿ ಕೊಳ್ಳುತ್ತಿದ್ದಾರೆ. ಆಗ ಮದುವೆಗೆ ಬಂದ ಗೆಳೆಯರೊಬ್ಬರನ್ನು ಕುರಿತು–

ಹೆಣ್ಣಿನ ತಂದೆ : ಏನೋ ಬಡ್ಡಿಮಗ್ನೆ ಈಗ ಬತ್ತಾಯಿದ್ದೀಯೆ !... ನಿನಗೆ ತರವೇನೋ ಇದು

ಗೆಳೆಯ : ನೀನ್ ಕರೆದಿರೂ ಚಂದಕೆ ಮೂರು ದಿನ ಮುಂಚೇನೆ ಬರ್ಬೇಕಾಗಿತ್ತೇನ್ಲ?... ಬಡ್ಡತ್ತದ್ದೆ

ಹೆಣ್ಣಿನ ತಂದೆ : ನಿಂಗೂ ಮದುವೆಗೆ ಬಂದಿರೂ ಎರಡು ಮಕ್ಕಳವೆ ಅನ್ನೂದ ಮರೀ ಬ್ಯಾಡ.... ಹೋಗ್ಲಿ ಈಗ್ಲಾದ್ರು ಬಂದಲ್ಲ, ಒಳಾಕೆ ನಡೀಯಪ್ಪ.

ಗೆಳೆಯರು ನಗುನಗುತ್ತಾ ಮದುವೆಯ ಮಂಟಪದ ಒಳಕ್ಕೆ ಹೋಗುತ್ತಾರೆ. ಈ ಪ್ರಸಂಗದಲ್ಲಿ ಗೆಳೆಯರೊಬ್ಬರ ನಡುವಣ ಒಲವು ನಲಿವಿನ ನಂಟಿಗೆ ಮುದ್ರೆಯನ್ನು ಒತ್ತುವಂತೆ ಬಯ್ಗುಳದ ಬಳಕೆಯಾಗಿದೆ.

ಪ್ರಸಂಗ–೧೪

ಜಿಲ್ಲಾ ಕೇಂದ್ರದ ನಗರ ಪ್ರದೇಶ. ಟ್ಯಾಕ್ಸಿಗಳು ನಿಲ್ಲುವ ನಿಲ್ದಾಣ. ಸಮಯ ನಡು ಹಗಲು ೧೨–೩೦ ಗಂಟೆ. ಈ ಪ್ರಸಂಗವು ನಡೆಯುವಾಗ ಸುಮಾರು ಮೂವತ್ತು ಮಂದಿ ಅಲ್ಲಿದ್ದರು. ಸುಮಾರು ಮೂವತ್ತರ ವಯಸ್ಸಿನ ಒಬ್ಬ ಹೆಂಗಸು ಸುಮಾರು ನಲವತ್ತರ ವಯಸ್ಸಿನ ಗಂಡಸಿನ ಕೊರಳ ಪಟ್ಟಿಯನ್ನು ಹಿಡಿದು ಜಗ್ಗುತ್ತ, ಅತ್ತಿತ್ತ ಅವನನ್ನು ಎಳೆದಾಡುತ್ತ ಬಯ್ಯುತ್ತಿದ್ದಳು.

ಆತ ಅವಳ ಹಿಡಿತದಿಂದ ಬಿಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದ. ಸುತ್ತಲಿದ್ದ ಟ್ಯಾಕ್ಸಿ ಡ್ರೈವರ್‌ಗಳು ಮತ್ತು ಇತರರು ಸುತ್ತಲೂ ಬಹು ಬಗೆಯ ಪ್ರತಿಕ್ರಿಯೆಯನ್ನು ತೋರಿಸುತ್ತಿದ್ದರು.

ಹೆಂಗಸು: ನಿಮ್ಮವ್ವನ್ ತುಲ್ಗೆ ದೊಂಬನ ತುಣ್ಣೆ ಮಡ್ಗ....ಲೋ....ತಲಿಡ್ಕ ನನ್ಮಗ್ನೆ.... ನಿಮ್ಮವ್ವನ್ ತುಲ್ಗೆ ಆನೆ ತುಣ್ಣೆ ಮಡಗ....ನಿನ್ ಹೆಡ್ತಿ ತುಲ್ಗೆ ನನ್ ಮಗನ್ ತುಣ್ಣೆ ಮಡ್ಗ....ನನಗಾ ಅನ್ನುದಾ ನೀನು.... ಹೋಗೋ ಲೋ ಹೋಗು... ನೀನ್ ನನ್ನದೊಂದು ಶಾಟ...ನನಗೆ ಅಂತಾನೆ ಸೂಳೆಮಗ... ನಿಮ್ಮ ಅಕ್ಕ

ತಂಗೀರ ತುಲ್ಲೊಳಕ್ಕೆ ಕತ್ತೆ ತುಣ್ಣೆ...ಸೈತಾನಕ ಲೌಡ ಅಂತಾರೆ ನಿಮ್ಮವನ್ ತುಲ್ಲೊಳಕ್ಕೆ....ನನ್ ಮಗನೆ ಇನ್ನೊಂದು ಸತಿ ಅಂದಿಗಿಂದಿ

ಆಕೆಯ ಸುತ್ತ ನೆರೆದಿದ್ದ ಟ್ಯಾಕ್ಸಿ ಡ್ರೈವರ್‌ಗಳಲ್ಲಿ ಕೆಲವರು ಆ ಗಂಡಸನ್ನು 'ಬಿಟ್ಟುಬಿಡು' ಎಂದು ಆಕೆಗೆ ಹೇಳುತ್ತ, ಆಕೆಯನ್ನು ಕುರಿತು **'ಏ...ಬುಡ್ಡಿ... ಏ...ಊರ್ವಸಿ'** ಎಂದು ಚುಡಾಯಿಸುತ್ತಿದ್ದರು. ಆಕೆಯು ಅಂತಹ ಮಾತುಗಳಿಗೆ ಪ್ರತಿಕ್ರಿಯೆಯಾಗಿ ನಗುತ್ತ, ಮತ್ತೆ ಮತ್ತೆ ಆ ಗಂಡಸನ್ನು ತನಗೆ ಇಚ್ಚೆ ಬಂದ ಕಡೆ ಎಳೆದಾಡುತ್ತ ಬಯ್ಯುತ್ತಿದ್ದಳು. ಹಲವು ನಿಮಿಷಗಳ ನಂತರ ಆಕೆಯು ಅವನ ಕೊರಳಪಟ್ಟಿಯಿಂದ ಕಯ್ ತೆಗೆದು, ಅವನನ್ನು ಬಿಟ್ಟಳು. ಕೂಡಲೇ ಆತ ಅಲ್ಲಿಂದ ದೂರ ಸರಿದ. ಅಲ್ಲಿದ್ದವರೆಲ್ಲಾ ರಂಗದ ಮೇಲೆ ನಾಟಕವನ್ನು ನೋಡಿ ಆನಂದ ಪಡುವಂತೆ ಈ ಪ್ರಸಂಗದಲ್ಲಿ ನಗುತ್ತಿದ್ದರು.

ಈ ಪ್ರಸಂಗದಲ್ಲಿ ಬಯ್ಯುತ್ತಿರುವ ಹೆಂಗಸು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ತೀರಾ ಕೆಳಹಂತಕ್ಕೆ ಸೇರಿದವಳಾಗಿದ್ದಾಳೆ. ಯಾವುದೇ ಆಸರೆ ಯಿಲ್ಲದೆ ಬೀದಿ ಪಾಲಾಗಿ ಗಂಡಸರ ಕಾಮದ ಬಯಕೆಯನ್ನು ಈಡೇರಿಸಿ ಹೊಟ್ಟೆ ಹೊರೆಯುತ್ತಿರುವ ಹೆಣ್ಣಾಗಿದ್ದಾಳೆ. ತನ್ನನ್ನು **'ತಲೆಹಿಡುಕಿ'** ಎಂದು ಕರೆದ ಗಂಡಸು ಇವಳಂತೆಯೇ ತೀರಾ ಕೆಳಹಂತಕ್ಕೆ ಸೇರಿದವನಾಗಿದ್ದ. ಇದು ಅವರು ತೊಟ್ಟಿರುವ ಬಟ್ಟೆಯಿಂದಲೇ ಗೋಚರಿಸುತ್ತಿತ್ತು. ಈ ಪ್ರಸಂಗದಲ್ಲಿ ಆ ಹೆಂಗಸಿನ ಬಯ್ಯುವಿಕೆಯು ಮೂರು ಬಗೆಯ ಉದ್ದೇಶಗಳಿಂದ ಕೂಡಿದೆ.

೧. ತನ್ನ ಬಗ್ಗೆ ಕೀಳಾಗಿ ಮಾತನಾಡಿದ ಆ ಗಂಡಸನ್ನು ಅಪಮಾನ ಪಡಿಸುವುದರ ಮೂಲಕ ತನ್ನನ್ನು ಬೀದಿ ಸೂಳೆಯನ್ನಾಗಿ ಮಾಡಿರುವ ಗಂಡಸು ಜಾತಿಯ ಬಗ್ಗೆ ಆಕ್ರೋಶವನ್ನು ಕಾರುವುದು.

೨. ಅಲ್ಲಿದ್ದವರೆಲ್ಲರ ಗಮನವನ್ನು ತನ್ನತ್ತ ಸೆಳೆಯುವುದು.

೩. ಹೆಣ್ಣಿನ ಮಾತುಗಳಿಗೆ ಈ ಸಮಾಜ ಹಾಕಿರುವ ಕಟ್ಟುಪಾಡುಗಳನ್ನು ಮೀರಿ, ತನ್ನ ಇಚ್ಚೆಗೆ ಬಂದಂತಹ ಬಗೆಯಲ್ಲಿ ಕಾಮದ ನಂಟಿನ ಬಯ್ಗುಳಗಳನ್ನು ಹೆಚ್ಚಾಗಿ ಬಳಸುವುದು.

ಪ್ರಸಂಗ–೧೫

ತಾಲ್ಲೂಕು ಕೇಂದ್ರ, ಕಾವೇರಿ ನದಿ ನೀರಿನ ಬಗ್ಗೆ ಕೇಂದ್ರ ಸರ್ಕಾರದಿಂದ ನೇಮಕಗೊಂಡಿದ್ದ ನ್ಯಾಯಮಂಡಲಿಯು ನೀಡಿದ್ದ ಮಧ್ಯಂತರ ವರದಿಯನ್ನು

ವಿರೋಧಿಸಲೆಂದು ರಾಜ್ಯ ಮಟ್ಟದ ರೈತ ಸಂಘದ ವತಿಯಿಂದ ನೀಡಿದ್ದ ಕರೆಗೆ ಓಗೊಟ್ಟು ಸಾವಿರಾರು ಮಂದಿ ರಸ್ತೆಯಲ್ಲಿ ಸಾಲು ಸಾಲಾಗಿ ಜತೆಗೂಡಿದ್ದಾರೆ. ಕಾಲ ಬೆಳಗ್ಗೆ ೧೦-೩೦ ಗಂಟೆ. ಸುಮಾರು ಎರಡು ಅರ್ಧ ಕಿಲೋ ಮೀಟರ್ ದೂರ ಮೆರವಣಿಗೆ ವ್ಯಾಪಿಸಿತ್ತು. ರೈತಾಪಿ ದುಡಿಮೆಯ ಹಿನ್ನೆಲೆಯುಳ್ಳ ಹಳ್ಳಿಗಾಡಿನ ಜನರೇ ಹೆಚ್ಚು ಸೇರಿದ್ದರು. ಹುಡುಗ ಹುಡುಗಿಯರಿಂದ ಹಿಡಿದು ಮುಪ್ಪಿನ ತನಕ ಬೇರೆ ಬೇರೆ ವಯೋಮಾನದ ಗಂಡಸರು ಹೆಂಗಸರು ಅಲ್ಲಿ ಕಂಡುಬರುತ್ತಿದ್ದರು. ನಾನಾ ಬಗೆಯ ಬ್ಯಾನರ್‌ಗಳನ್ನು ಮೆರವಣಿಗೆಕಾರರು ಎತ್ತಿ ಹಿಡಿದಿದ್ದರು. ತಾಲ್ಲೂಕು ಕಛೇರಿಯತ್ತ ಮೆರವಣಿಗೆಯು ಮುನ್ನಡೆಯುತ್ತಿತ್ತು. ಮೆರವಣಿಗೆಯ ಉದ್ದಕ್ಕೂ ಅಲ್ಲಲ್ಲಿ ಹತ್ತಾರು ಮಂದಿ ಕೂಗುತ್ತಿದ್ದ ಘೋಷಣೆಗಳಿಗೆ ನೂರಾರು ಮಂದಿ ಬಗೆಬಗೆಯ ಧಿಕ್ಕಾರಗಳನ್ನು ಹಾಕುತ್ತ ದೊಡ್ಡ ದನಿಯಲ್ಲಿ ಕೂಗುತ್ತಿದ್ದರು.

ಘೋಷಣೆ: ಹೊಡೀರಪ್ಪೊ ಹೊಡೀರಿ.
ಜನರು: ಚಪ್ಪಲೀಲಿ ಹೊಡೀರಿ.

ಉಗೀರಪ್ಪೋ ಉಗೀರಿ.
ಕ್ಯಾಕರ್ಸಿ ಉಗೀರಿ.

ಸತ್ತರು ಸತ್ತರು.
ಶಾಸಕರೆಲ್ಲಾ ಸತ್ತರು.

ಸರ್ಕಾರವಂತೆ ಸರ್ಕಾರ.
ಇವರಪ್ಪನದಂತೆ ಸರ್ಕಾರ.

ಕಾನೂನಂತೆ ಕಾನೂನು.
ಇವರವ್ವನದಂತೆ ಕಾನೂನು.

ತಾಯಿಗಂಡ (ರಾಜಕಾರಣಿಯ ಹೆಸರು)
ಧಿಕ್ಕಾರ.

ಲೋಫರ್ (ರಾಜಕಾರಣಿಯ ಹೆಸರು)
ಧಿಕ್ಕಾರ.

ಮೆರವಣಿಗೆಯ ಉದ್ದಕ್ಕೂ ಈ ರೀತಿಯಲ್ಲಿ ಜನರು ತಮ್ಮ ಆಕ್ರೋಶವನ್ನು ವ್ಯಕ್ತಪಡಿಸುತ್ತಾ ತಾಲ್ಲೂಕು ಕಛೇರಿಯ ಬಳಿಗೆ ಬಂದರು.

ಮೇಲ್ಕಂಡ ಪ್ರಸಂಗದಲ್ಲಿ ಕರ್ನಾಟಕದ ಮತ್ತು ತಮಿಳುನಾಡಿನ ರಾಜಕಾರಣಿಗಳ ಹೆಸರನ್ನು ಬಹಿರಂಗವಾಗಿ ಉಚ್ಚರಿಸಿ ಧಿಕ್ಕಾರ ಹಾಕುತ್ತ ಜನರು ತಮ್ಮ ಆಕ್ರೋಶವನ್ನು ಹೊರಹಾಕುತ್ತಿದ್ದಾರೆ. ಅಧಿಕಾರಸ್ಥ ರಾಜಕಾರಣಿಗಳನ್ನು ಶ್ರೀಸಾಮಾನ್ಯನೊಬ್ಬ ನೇರವಾಗಿ ಬಯ್ಯುವುದಕ್ಕೆ ಆಗುವುದಿಲ್ಲ. ಏಕೆಂದರೆ ಅದರಿಂದ ಬಯ್ದವರಿಗೆ ಒಂದಲ್ಲ ಒಂದು ಬಗೆಯ ಅಪಾಯ ಎದುರಾಗುತ್ತದೆ. ವ್ಯಕ್ತಿಯು ತಾನು ಏಕಾಂಗಿಯಾಗಿದ್ದಾಗ ಬಯ್ಯಲು ಆಗದಿದ್ದುದನ್ನು ಈಗ ಇತರರ ಜತೆ ಗುಂಪುಗೂಡಿ ಮಾಡುತ್ತಿದ್ದಾನೆ. ಈ ರೀತಿ ಶ್ರೀಸಾಮಾನ್ಯರು ತಮ್ಮ ವ್ಯಕ್ತಿತ್ವದ ಒಂದು ಕೊರತೆಯನ್ನು ಗುಂಪಿನಲ್ಲಿ ಬಯ್ಯುವುದರ ಮೂಲಕ ನೀಗಿಸಿಕೊಂಡಿದ್ದಾರೆ.

ಪ್ರಸಂಗ–೧೬

ಹಳ್ಳಿಗಾಡಿನ ಪ್ರದೇಶದಲ್ಲಿ ಒಂದು ವಿಸ್ತಾರವಾದ ಬಯಲು. ಆಡು ಕುರಿ, ಎಮ್ಮೆ ಮತ್ತು ದನಗಳನ್ನು ಅನೇಕರು ಮೇಯಲು ಬಿಟ್ಟು ಅಲ್ಲಲ್ಲಿ ಕುಳಿತಿದ್ದಾರೆ. ಕಾಲ ಸಂಜೆ ೫ ಗಂಟೆ. ಇಬ್ಬರು ರೈತರು ಮಾತನಾಡುತ್ತ ಒಂದೆಡೆ ಕುಳಿತಿದ್ದಾರೆ. ಆ ಸಮಯದಲ್ಲಿ ದಪ್ಪ ದಪ್ಪ ಹನಿಗಳನ್ನು ಚೆಲ್ಲುತ್ತಾ ಸುರಿಯಲು ತೊಡಗಿದ ಮಳೆಯು ಕೆಲವೇ ಗಳಿಗೆಗಳಲ್ಲಿ ನಿಂತುಹೋದುದನ್ನು ಕಂಡು, ಒಬ್ಬ ರೈತ ಮತ್ತೊಬ್ಬನೊಡನೆ ತನ್ನ ಮನದ ಭಾವನೆಯನ್ನು ವ್ಯಕ್ತಪಡಿಸುತ್ತಾ–

ರೈತ–೧: **ಥೂ...ಇವನ ಹೆಡ್ತಿನಾ ಕೆಯ್ಯುಂದು...ಉಯ್ತಿರು ಚಂದ ನೋಡು. ಇದರ ತುಲ್ಗೆ ನನ್ ತುಣ್ಣೆ ಎಟ್ಟ... ಹಿಂಗೆಯೆಲ್ಲ ಇದರ ಗೇಮೆಯೆಲ್ಲ.**

ರೈತ–೨: **ಹೂ ಕನಣ್ಣ...ಬೊಡ್ಡೀದು... ಊದ್ರೆ ಒಂದೇ ಸಮ ಊದು ಊದು ಹಾಳು ಮಾಡ್ಬುಡ್ತದೆ. ಇಲ್ದೇದ್ರೆ ಹಿಂಗೆ ಉಯ್ಯದೇ ಹೊಂಟೋಯ್ತದೆ.**

ಈ ರೀತಿ ಅವರಿಬ್ಬರ ಮಾತುಕತೆಯಲ್ಲಿ ಬಯ್ಗುಳದ ನುಡಿಗಳು ಬಳಕೆಯಾಗುತ್ತಿದ್ದವು.

ಈ ಪ್ರಸಂಗದಲ್ಲಿ ಬಳಕೆಯಾಗಿರುವ ಬಯ್ಗುಳದ ನುಡಿಗಳು ಹಳ್ಳಿಗಾಡಿನ ಜನರ ಮಾತುಕತೆಯಲ್ಲಿ ಕಾಮದ ನಂಟಿನ ಪದಗಳು ಯಾವ ಹಿಂಜರಿಕೆಯೂ ಇಲ್ಲದೇ ಬಳಕೆಯಾಗುವ ಬಗೆಯನ್ನು ಸೂಚಿಸುತ್ತಿವೆ. ಬೇಸಾಯದ ಕೆಲಸದಲ್ಲಿ ಮಳೆಯ ನೀರಿನ ಕೊರತೆ ಇಲ್ಲವೇ ಅದರ ಹೆಚ್ಚಳದಿಂದ ನೇರವಾಗಿ ಪರಿಣಾಮವನ್ನು ಅನುಭವಿಸುವ ಬೇಸಾಯಗಾರರು ತಮ್ಮ ಭಾವನೆಯನ್ನು ಬಯ್ಗುಳದ ನುಡಿಗಳ ಮೂಲಕ ವ್ಯಕ್ತಪಡಿಸಿದ್ದಾರೆ. ಹಳ್ಳಿಗಾಡಿನ ಜನತೆ ತಮ್ಮ ತೀವ್ರತರವಾದ ಭಾವನೆಗಳನ್ನು ಹೊರಹಾಕುವಾಗ ಕಾಮದ ನಂಟಿನ ಪದಗಳನ್ನು ಹೆಚ್ಚಾಗಿ ಬಳಸುತ್ತಾರೆ.

ಒಟ್ಟಾರೆಯಾಗಿ ಇದುವರೆಗೆ ನಾನು ನಿರೂಪಿಸಿರುವ ಹದಿನೈದು ಬಯ್ಗುಳದ ಪ್ರಸಂಗಗಳಂತೆಯೇ ಇಲ್ಲವೇ ಇವಕ್ಕಿಂತ ಬೇರೆ ಬೇರೆ ಬಗೆಯಲ್ಲಿರುವ ಬಯ್ಯುವಿಕೆಯ ನೂರಾರು ಪ್ರಸಂಗಗಳನ್ನು ನಾವೆಲ್ಲರೂ ನಮ್ಮ ನಿತ್ಯ ಜೀವನದ ವ್ಯವಹಾರಗಳು ನಡೆಯುವ ಕುಟುಂಬದ ನೆಲೆ, ದುಡಿಯುವ ನೆಲೆ ಮತ್ತು ಸಾರ್ವಜನಿಕ ನೆಲೆಗಳಲ್ಲಿ ಕಾಣುತ್ತಿರುತ್ತೇವೆ. ಬಯ್ಗುಳ ಬಳಕೆಯಾಗುವುದಕ್ಕೆ ಗೊತ್ತುಪಡಿಸಿದ ಕಾಲವಾಗಲಿ ಇಲ್ಲವೇ ಜಾಗವಾಗಲಿ ಇಲ್ಲ. ಜನರ ದಿನನಿತ್ಯದ ವ್ಯವಹಾರಗಳಲ್ಲಿ ಅಡ್ಡಿ ಆತಂಕ ಅಡಚಣೆಗಳು ಉಂಟಾದಾಗ, ದೇಹಕ್ಕೆ ಪೆಟ್ಟು ಬಿದ್ದಾಗ, ಒಡವೆ ವಸ್ತು ಆಸ್ತಿಪಾಸ್ತಿಗಳಿಗೆ ಹಾನಿಯುಂಟಾದಾಗ, ವ್ಯಕ್ತಿಯ ಸಾಮಾಜಿಕ ಅಂತಸ್ತಿಗೆ ಅಪಮಾನವುಂಟಾದಾಗ ಮತ್ತು ಇನ್ನಿತರ ಕಾರಣಗಳಿಂದಾಗಿ ವ್ಯಕ್ತಿಯ ಮಯ್ ಮನಕ್ಕೆ ಗಾಸಿಯುಂಟಾದಾಗ ಬಯ್ಯುವಿಕೆಯು ಕಂಡುಬರುತ್ತದೆ.

ಈ ಹಿನ್ನೆಲೆಯಲ್ಲಿ "ನಾವೇಕೆ ಬಯ್ಯುತ್ತೇವೆ" ಎಂಬುದನ್ನು ಈ ಕೆಳಕಂಡಂತೆ ವಿವರಿಸಿಕೊಳ್ಳಬಹುದು.

೧. ಮನದಲ್ಲಿ ಮೂಡುವ ಹತಾಶೆ, ಕೋಪ, ಸಂಕಟ, ನೋವು, ಅಸೂಯೆ, ಹೊಟ್ಟೆಕಿಚ್ಚಿನ ಭಾವನೆಗಳನ್ನು ಹೊರಹಾಕುವುದಕ್ಕಾಗಿ ಬಯ್ಯುತ್ತೇವೆ.

೨. ಇತರರ ವರ್ತನೆಗಳನ್ನು ನಮ್ಮ ಇಚ್ಚೆಗೆ ತಕ್ಕಂತೆ ಹತೋಟಿಯಲ್ಲಿಡುದಕ್ಕಾಗಿ ಬಯ್ಯುತ್ತೇವೆ.

೩. ಇತರರಿಂದ ಅಡಚಣೆ ಇಲ್ಲವೇ ಹಾನಿಯುಂಟಾಗದಂತೆ ತಡೆಯುವುದಕ್ಕಾಗಿ ಬಯ್ಯುತ್ತೇವೆ.

೪. ಇತರ ಜತೆ ಹೊಂದಿರುವ ಒಲವು ನಲಿವನ್ನು ತೋರಿಸುವುದಕ್ಕಾಗಿ ಬಯ್ಯುತ್ತೇವೆ.

೫. ಇತರರ ಆಕ್ರಮಣ ಇಲ್ಲವೇ ಹಲ್ಲೆಯಿಂದ ಪಾರಾಗುವುದಕ್ಕಾಗಿ ಬಯ್ಯುತ್ತೇವೆ.

೬. ಎದುರಾಳಿಯನ್ನು ಕೀಳಾಗಿ ಕಾಣುವುದು ಇಲ್ಲವೇ ಅಪಮಾನಗೊಳಿಸುವುದಕ್ಕಾಗಿ ಬಯ್ಯುತ್ತೇವೆ.

೭. ಕಣ್ಣ ಮುಂದಿನ ಸಮಾಜದಲ್ಲಿ ನಡೆಯುತ್ತಿರುವ ಆಚರಣೆಗಳನ್ನು ಮತ್ತು ಜನ ಸಮುದಾಯದ ನಡೆನುಡಿಗಳನ್ನು ಒರೆಹಚ್ಚಿ ನೋಡುವಾಗ ಬಯ್ಯುತ್ತೇವೆ.

೮. ನಮ್ಮ ನಡೆ ನುಡಿಯಲ್ಲಿನ ತಪ್ಪುಗಳಿಂದಾಗಿ ಕಷ್ಟ ನಷ್ಟಗಳಿಗೆ ಒಳಗಾದಾಗ ನಮ್ಮನ್ನು ನಾವೇ ಬಯ್ದುಕೊಳ್ಳುತ್ತೇವೆ.

೯. ಇತರರ ನಡೆ ನುಡಿಯಲ್ಲಿನ ತಪ್ಪುಗಳನ್ನು ತಿದ್ದಿ ಸರಿಪಡಿಸುವುದಕ್ಕಾಗಿ ಬಯ್ಯುತ್ತೇವೆ.

ಬಯ್ಯುವಿಕೆಯಿಂದ ಎರಡು ಬಗೆಯ ಪರಿಣಾಮಗಳು ಉಂಟಾಗುತ್ತವೆ.

ಅ) ಜಗತ್ತಿನ ಬಗ್ಗೆ ನಮ್ಮ ಭಾವನೆಗಳನ್ನು ಹೊರಹಾಕಲು ಅವಕಾಶವಾಗುತ್ತದೆ.

ಆ) ಇತರರು ಈ ಜಗತ್ತಿನ ಬಗ್ಗೆ ವ್ಯಕ್ತಪಡಿಸುವ ಭಾವನೆಗಳನ್ನು ನಾವು ಗ್ರಹಿಸಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ.

'ಜಗತ್ತಿನ ಬಗ್ಗೆ' ಎಂದರೆ ನಮ್ಮ ಬದುಕನ್ನು ಒಳಗೊಂಡಂತೆ ಜಗತ್ತಿನ ಜನಸಮುದಾಯದ ವ್ಯವಹಾರಗಳ ಮತ್ತು ಆಗುಹೋಗುಗಳ ಬಗ್ಗೆ ನಾವು ಮಾಡುವ ಪ್ರತಿಕ್ರಿಯೆ ಮತ್ತು ತಳೆಯುವ ನಿಲುವು.

ಬಯ್ಗುಳದ ನುಡಿಗಳು ನಮ್ಮ ಭಾವನೆಗಳನ್ನು ತೀವ್ರತರವಾದ ರೀತಿಯಲ್ಲಿ ಪ್ರಕಟಿಸುವಂತೆ ಮತ್ತು ಬಯ್ಯುವವರ ಹಾಗೂ ಬಯ್ಯಿಸಿಕೊಳ್ಳುವವರ ಮಯ್ ಮನದ ಮೇಲೆ ಪರಿಣಾಮವನ್ನು ಬೀರುವಂತೆ ಬಯ್ಗುಳವಲ್ಲದ ಸಾಮಾನ್ಯ ನುಡಿಗಳು ಬೀರಲಾರವು. ಆದ್ದರಿಂದ ನಮ್ಮ ಭಾವನೆಗಳನ್ನು ಹೊರಹಾಕುವುದಕ್ಕೆ ಮತ್ತು ಇತರರ ಭಾವನೆಗಳನ್ನು ಗ್ರಹಿಸುವುದಕ್ಕೆ ಬಯ್ಗುಳದ ನುಡಿಯು ಒಂದು ಉಪಕರಣವಾಗಿದೆ.

❖

೪. ಬಯ್ಯುವಿಕೆ : ಮೆದುಳಿನ ನರಮಂಡಲ

ಕ್ರಿ.ಶ.೧೯೦೧ರಲ್ಲಿ ಪ್ಯಾಟ್ರಿಕ್ ಎಂಬ ಮನೋವಿಜ್ಞಾನಿಯು **"ನಾವೇಕೆ ಬಯ್ಯುತ್ತೇವೆ ಮತ್ತು ಕೆಲವೇ ಬಗೆಯ ಪದಗಳನ್ನು ಮಾತ್ರ ಏಕೆ ಬಯ್ಗುಳವನ್ನಾಗಿ ಬಳಸುತ್ತೇವೆ"** ಎಂಬ ಪ್ರಶ್ನೆಗಳನ್ನು ವಿಜ್ಞಾನಿಗಳ ಮುಂದೆ ಇಟ್ಟಿದ್ದರು. ಈ ಪ್ರಶ್ನೆಗಳಿಗೆ ಉತ್ತರವನ್ನು ಪಡೆಯಲು ನರ ವಿಜ್ಞಾನ, ಮನೋವಿಜ್ಞಾನ, ಮನೋ ನುಡಿ ವಿಜ್ಞಾನ, ಸಾಮಾಜಿಕ ನುಡಿ ವಿಜ್ಞಾನ ಮತ್ತು ಸಾಂಸ್ಕೃತಿಕ ಮಾನವ ವಿಜ್ಞಾನ ರಂಗಗಳಲ್ಲಿ ನುಡಿಯ ಬಗ್ಗೆ ನಡೆದಿರುವ ಸಂಶೋಧನೆಯ ಸಂಗತಿಗಳನ್ನು ಕಳೆದ ಎಪ್ಪತ್ತು ವರ್ಷಗಳಿಂದ ವಿಜ್ಞಾನಿಗಳು ಪರಿಶೀಲಿಸುತ್ತಿದ್ದಾರೆ.

ಬಯ್ಯುವಿಕೆಯಲ್ಲಿ ತೊಡಗಿದಾಗ ನಮ್ಮ ಮೆದುಳಿನ ನರಮಂಡಲ, ನಮ್ಮ ವ್ಯಕ್ತಿತ್ವ ಮತ್ತು ನಾವು ಹುಟ್ಟಿ ಬೆಳೆದು ಬಾಳುತ್ತಿರುವ ಸಮಾಜದ ರಚನೆ ಹಾಗೂ ಸಂಸ್ಕೃತಿಯ ಆಚರಣೆಯ ಸಂಗತಿಗಳೆಲ್ಲವೂ ಒಂದರೊಡನೊಂದು ಜತೆಗೂಡಿರುವುದಲ್ಲದೆ, ಒಂದರ ಮೇಲೆ ಮತ್ತೊಂದು ಪರಿಣಾಮವನ್ನು ಬೀರುತ್ತಿರುವುದನ್ನು ವಿಜ್ಞಾನಿಗಳು ಗುರುತಿಸಿದ್ದಾರೆ. ಪ್ಯಾಟ್ರಿಕ್ ಅವರ ಎರಡು ಪ್ರಶ್ನೆಗಳಿಗೆ ಉತ್ತರವನ್ನು ತಿಳಿಯಲು ತೊಡಗಿದಾಗ ಇವುಗಳ ಪಾತ್ರವೇನೆಂಬುದನ್ನು ಮೂರು ಹಂತಗಳಲ್ಲಿ ಪರಿಶೀಲಿಸಿದ್ದಾರೆ.

೧. ಮಾನವನ ಮಿದುಳಿನ ನರಮಂಡಲದಲ್ಲಿ ನಡೆಯುವ ಪ್ರಕ್ರಿಯೆಗಳು.

೨. ಮಾನವನ ಮಾನಸಿಕ ಬೆಳವಣಿಗೆ ಮತ್ತು ವ್ಯಕ್ತಿತ್ವ.

೩. ಮಾನವನು ಹುಟ್ಟಿ ಬೆಳೆದು ಬಾಳುತ್ತಿರುವ ಸಮಾಜದ ರಚನೆ ಮತ್ತು ಸಂಸ್ಕೃತಿಯ ಆಚರಣೆಗಳ ಸ್ವರೂಪ.

"ನಾವೇಕೆ ಬಯ್ಯುತ್ತೇವೆ ಮತ್ತು ಕೆಲವೇ ಬಗೆಯ ಪದಗಳನ್ನು ಮಾತ್ರ ಬಯ್ಗುಳವಾಗಿ ಏಕೆ ಬಳಸುತ್ತೇವೆ" ಎಂಬುದನ್ನು ತಿಳಿದುಕೊಳ್ಳಲು ನಮ್ಮ ಜೀವನದ ಆಗುಹೋಗುಗಳಲ್ಲಿ ನಾವು ಬಯ್ಯುವ ಇಲ್ಲವೇ ಇತರರಿಂದ ನಾವು ಬಯ್ಯಿಸಿಕೊಳ್ಳುವ ಸನ್ನಿವೇಶಗಳಲ್ಲಿ ನಮ್ಮ ಮಯ್ ಮನದಲ್ಲಿ ಉಂಟಾಗುವ ತುಡಿತಗಳನ್ನು ಗಮನಿಸಿದರೆ ಈ ಪ್ರಶ್ನೆಗಳಿಗೆ ಉತ್ತರ ತಾನಾಗಿಯೇ ದೊರಕುತ್ತದೆ.

ಮೊದಲು ನಮ್ಮ ಮೆದುಳಿನ ನರಮಂಡಲದಲ್ಲಿ ನಡೆಯುವ ಕ್ರಿಯೆಗಳು ಹೇಗಿರುತ್ತವೆ ಎಂಬುದನ್ನು ತಿಳಿಯೋಣ.

ಪ್ರಸಂಗ–೧೭

ಮನೆಯೊಂದರ ಮುಂದಿನ ಆವರಣದಲ್ಲಿ ವ್ಯಕ್ತಿಯೊಬ್ಬರು ಪತ್ರಿಕೆಯೊಂದನ್ನು ಓದುತ್ತ ಕುಳಿತಿದ್ದಾರೆ. ಕಾಲ ಮೇಲೆ ಏನೋ ಹರಿದಂತೆ ಆಗುತ್ತದೆ. ಮರುಗಳಿಗೆಯಲ್ಲಿಯೇ ಅವರ ಕಾಲು ತಾನಾಗಿಯೇ ಒದರುತ್ತದೆ. ಅದು ಏನೆಂದು ಅನಂತರ ನೋಡುತ್ತಾರೆ. ಅದು ನೂಲಿನ ಒಂದು ಎಳೆಯಾಗಿರುತ್ತದೆ. ಆ ಸಮಯದಲ್ಲಿ ಗಾಳಿ ತುಸು ಹೆಚ್ಚಾಗಿ ಬೀಸಿದ್ದರಿಂದ ಎಲ್ಲಿಂದಲೋ ಹಾರಿ ಬಂದ ನೂಲಿನ ಎಳೆಯು ಅದಾಗಿತ್ತು. ಹಾವೊ ಇಲ್ಲವೇ ಮತ್ತಾವುದೊ ಹುಳುವೊ ಎಂದು ಬೆದರಿದ್ದ ಅವರು ನಕ್ಕು ಸುಮ್ಮನಾಗಿ ಮತ್ತೆ ಓದಿನಲ್ಲಿ ತೊಡಗುತ್ತಾರೆ.

ಈ ಪ್ರಸಂಗದಲ್ಲಿ ಎರಡು ಬಗೆಯ ವರ್ತನೆಗಳನ್ನು ನಾವು ಕಾಣುತ್ತಿದ್ದೇವೆ. ಕಾಲ ಮೇಲೆ ಹರಿದಿದ್ದು ಏನೆಂಬುದನ್ನು ನೋಡುವುದಕ್ಕೆ ಮುನ್ನವೇ ಕಾಲನ್ನು ಮೇಲಕ್ಕೆ ಎತ್ತಿ ಒದರಿದ್ದರು. ನೋಡಿದ ನಂತರ ಅಪಾಯವಿಲ್ಲದ್ದನ್ನು ಕಂಡು ಅಲ್ಲೇ ಕುಳಿತರು. ಒಂದು ವೇಳೆ ಅಪಾಯಕಾರಿಯಾಗಿದ್ದರೆ ಅಲ್ಲಿಂದ ದೂರ ಸರಿಯಲು ಇಲ್ಲವೇ ಅಪಾಯಕಾರಿಯಾಗಿ ಕಂಡ ಜೀವಿಯೊಂದಿಗೆ ಹೋರಾಡಲು ತೊಡಗುತ್ತಿದ್ದರು. ಇಂತಹ ಈ ಎರಡು ಬಗೆಯ ವರ್ತನೆಗಳಿಗೆ ಮಾನವ ಜೀವಿಯ ಮೆದುಳಿನ ನರಮಂಡಲದಲ್ಲಿ ಎರಡು ಬಗೆಯ ವ್ಯವಸ್ಥೆಗಳು ಇರುವುದು ಕಾರಣವಾಗಿದೆ.

೧. ತನಗೆ ತಾನಾಗಿಯೇ ಕ್ರಿಯೆಯಲ್ಲಿ ತೊಡಗುವ ನರಮಂಡಲ ವ್ಯವಸ್ಥೆ (Autonomic Nervous System)

ದೇಹದ ಎದೆಯ ಬಡಿತ, ಉಸಿರಾಟ, ಕಣ್ಣಿನ ರೆಪ್ಪೆಗಳ ಬಡಿಯುವಿಕೆ, ರಕ್ತ ಸಂಚಾರ ಮತ್ತು ನಾವು ಸೇವಿಸುವ ಆಹಾರವನ್ನು ಜೀರ್ಣಿಸಲು ನೆರವಾಗುವ ಕೆಲಸಗಳೆಲ್ಲವೂ ಈ ಬಗೆಯ ವ್ಯವಸ್ಥೆಗೆ ಒಳಪಟ್ಟಿವೆ. ಈ ಕ್ರಿಯೆಗಳು ತಮ್ಮ ಪಾಡಿಗೆ ತಾವು ನಡೆಯುತ್ತಿರುವುದಕ್ಕೆ ನೆರವಾಗುವ ನರಕೋಶ ಮತ್ತು ನರತಂತುಗಳು ನಮ್ಮ

ಮೆದುಳಿನ ನರಮಂಡಲದಲ್ಲಿವೆ. ಇದ್ದಕ್ಕಿದ್ದಂತೆಯೇ ನಾವು ಅಪಾಯಕ್ಕೆ ಇಲ್ಲವೇ ಆತಂಕಕ್ಕೆ ಒಳಗಾದಾಗ ಈ ಬಗೆಯ ನರಮಂಡಲ ವ್ಯವಸ್ಥೆಯು ಕ್ರಿಯಾಶೀಲ ವಾಗುತ್ತದೆ. ಆದ್ದರಿಂದಲೇ ಕಾಲ ಮೇಲೆ ಹರಿದಿದ್ದು ಏನು ಎಂಬುದನ್ನು ವ್ಯಕ್ತಿಯು ನೋಡುವುದಕ್ಕೆ ಮುಂಚೆಯೇ ಆತನ ಕಾಲು ತಾನಾಗಿಯೇ ಒದರಿತು.

ಇದ್ದಕ್ಕಿದ್ದಂತೆಯೇ ಯಾವುದೇ ಒಂದು ಪ್ರಸಂಗ ಉಂಟಾದಾಗ ಮೆದುಳಿನ ನರಮಂಡಲದಲ್ಲಿ ನಡೆಯುವ ಈ ಬಗೆಯ ಕ್ರಿಯೆಯನ್ನು **"ಒಡುವ/ಪಾರಾಗುವ (Flight) ಮತ್ತು ಹೋರಾಡುವ (Fight)"** ವರ್ತನೆಗಳೆಂದು ಗುರುತಿಸಿದ್ದಾರೆ.

೨. ಉದ್ದೇಶಪೂರ್ವಕವಾಗಿಯೇ ಕ್ರಿಯೆಯಲ್ಲಿ ತೊಡಗುವ ಕೇಂದ್ರ ನರಮಂಡಲ ವ್ಯವಸ್ಥೆ: (Central Nervous System)

ಕಣ್ಣು, ಕಿವಿ, ಮೂಗು, ನಾಲಗೆ ಮತ್ತು ತೊಗಲು ಎಂಬ ಈ ಆಯ್ದು ಬಗೆಯ ಇಂದ್ರಿಯಗಳಿಂದ ಪಡೆಯುವ ಬಹುಬಗೆಯ ಸಂವೇದನೆಗಳನ್ನು ಒರೆಹಚ್ಚಿ ಯಾವ ಸನ್ನಿವೇಶದಲ್ಲಿ ಏನನ್ನು ಮಾಡಬೇಕು ಇಲ್ಲವೇ ಮಾಡಬಾರದು ಎಂಬುದನ್ನು ನಿಶ್ಚಯಿಸಿ ಕೊಂಡು ಮಾಡುವ ಕ್ರಿಯೆಗಳು ಈ ಬಗೆಯ ನರಮಂಡಲ ವ್ಯವಸ್ಥೆಗೆ ಒಳಪಟ್ಟಿವೆ.

ಅಪಾಯವಿಲ್ಲದ್ದನ್ನು ಕಂಡು ಸುಮ್ಮನೆ ಕುಳಿತುಕೊಳ್ಳುವುದು ಇಲ್ಲವೇ ಅಪಾಯ ವಿದೆ ಎಂಬುದನ್ನು ಅರಿತಾಗ ಅಲ್ಲಿಂದ ದೂರ ಸರಿಯುವುದು ಇಲ್ಲವೇ ಅದನ್ನು ಹೊಡೆಯಲು ವ್ಯಕ್ತಿಯು ಮುನ್ನುಗ್ಗುವುದು ಈ ಬಗೆಯ ವರ್ತನೆಗಳಿಗೆ ಮೆದುಳಿನ ಕೇಂದ್ರ ನರಮಂಡಲದಲ್ಲಿ ಕಯ್ಗೊಂಡ ತೀರ್ಮಾನಗಳು ಕಾರಣವಾಗುತ್ತವೆ.

ಈ ಎರಡು ಬಗೆಯ ನರಮಂಡಲ ವ್ಯವಸ್ಥೆಯು ನಾವು ಆಡುವ ಎರಡು ಬಗೆಯ ಮಾತಿನ ರೀತಿಗಳಿಗೂ ಅಂತೆಯೇ ಎರಡು ಬಗೆಯ ಬಯ್ಯುವಿಕೆಗೂ ಕಾರಣವಾಗಿದೆ.

೧. ಇದ್ದಕ್ಕಿದ್ದಂತೆ ಆಡುವ ಮಾತುಗಳು / ಇದ್ದಕ್ಕಿದ್ದಂತೆಯೇ ಬಯ್ಯುವುದು.
೨. ಉದ್ದೇಶಪೂರ್ವಕವಾಗಿ ಆಡುವ ಮಾತುಗಳು/ಉದ್ದೇಶಪೂರ್ವಕವಾಗಿ ಬಯ್ಯುವುದು.

೧. ಇದ್ದಕ್ಕಿದ್ದಂತೆ ಆಡುವ ಮಾತುಗಳು/ಇದ್ದಕ್ಕಿದ್ದಂತೆಯೇ ಬಯ್ಯುವುದು

ಯಾವುದೇ ಒಂದು ಪ್ರಸಂಗದಲ್ಲಿ ಇದ್ದಕ್ಕಿದ್ದಂತೆಯೇ ಅಡ್ಡಿ, ಆತಂಕ, ಹತಾಶೆ, ಅಪಾಯ, ಅಚ್ಚರಿ ಉಂಟಾಗಿ ಕೋಪ, ಹೆದರಿಕೆ, ಸಂಕಟ, ಆನಂದದ ತುಡಿತಗಳು ಮಯ್ ಮನದಲ್ಲಿ ಉಂಟಾದಾಗ ನಮಗೆ ಅರಿವಿಲ್ಲದಂತೆಯೇ ನಮ್ಮ ಬಾಯಿಂದ **"ಆಹಾ... ಓಹೋ... ಅಬ್ಬಾ... ಅಯ್ಯೋ... ದೇವರೇ... ಅಯ್ಯಯ್ಯಪ್ಪೋ... ತೂ... ತೂ... ಚೀ...ಚೀ"** ಮುಂತಾದ ಉದ್ಗಾರಗಳು ಹೊರಹೊಮ್ಮುತ್ತವೆ. ಇಂತಹ

ಮಾತುಗಳನ್ನು **"ಇದ್ದಕ್ಕಿದ್ದಂತೆ ಆಡುವ ಮಾತುಗಳು"** ಎಂದು ನುಡಿವಿಜ್ಞಾನಿಗಳು ಗುರುತಿಸಿದ್ದಾರೆ. ಏಕೆಂದರೆ ಈ ಬಗೆಯ ಮಾತುಗಳು ಮತ್ತೊಬ್ಬರೊಡನೆ ಯಾವುದೇ ಸಂಗತಿಯನ್ನು ವಿನಿಮಯ ಮಾಡಿಕೊಳ್ಳಲೆಂದು ಆಡಿದ ಮಾತುಗಳಲ್ಲ. ವ್ಯಕ್ತಿಯು ಆ ಸನ್ನಿವೇಶದಲ್ಲಿ ತನ್ನ ಮನದ ತುಡಿತವನ್ನು/ಭಾವನೆಯನ್ನು ಹೊರಹಾಕಲು ಆಡಿದ ಮಾತುಗಳಾಗಿವೆ. ಇದ್ದಕ್ಕಿದ್ದಂತೆಯೇ ಆಡುವ ಬಯ್ಗುಳದ ನುಡಿಗಳು ಈ ಬಗೆಯಲ್ಲಿರುತ್ತವೆ.

ಉದಾಹರಣೆ: ಪ್ರಸಂಗ–೧೭

ಚಿತ್ರಪಟವೊಂದನ್ನು ಗೋಡೆಗೆ ನೇತು ಹಾಕಲೆಂದು ಒಬ್ಬಳು ಸುತ್ತಿಗೆಯಿಂದ ಮೊಳೆಯೊಂದನ್ನು ಹೊಡೆಯುತ್ತಿದ್ದಾಗ, ಗುರಿ ತಪ್ಪಿ ಸುತ್ತಿಗೆಯ ಏಟು ಆಕೆಯ ಬೆರಳಿಗೆ ಬಡಿದಾಗ **"ಅಯ್ಯೋ... ಹಾಳಾದುದ್ದೆ"** ಎಂದು ಚೀತ್ಕರಿಸುತ್ತಾಳೆ. ಅವಳ ಚೀತ್ಕಾರದೊಡನೆ ಹೊರಹೊಮ್ಮಿದ ಈ ಬಯ್ಗುಳವು ಆಕೆಗೆ ಉಂಟಾಗಿರುವ ನೋವಿನ ಒಳಮಿಡಿತವನ್ನು ಹೊರಹಾಕುತ್ತಿದೆ. ಆಕೆಯ ಅಕ್ಕಪಕ್ಕದಲ್ಲಿ ಯಾರಾದರೂ ಇದ್ದಲ್ಲಿ ಅವರಿಗೆ ಅವಳ ಬಾಯಿಂದ ಹೊರಹೊಮ್ಮಿದ ಈ ಬಯ್ಗುಳದ ಪದ ಅವಳ ನೋವನ್ನು ತಿಳಿಯುವಂತೆ ಮಾಡುತ್ತದೆ.

ಇಂತಹ ಸನ್ನಿವೇಶದಲ್ಲಿ ವ್ಯಕ್ತಿಯ ಬಾಯಿಂದ ಹೊರಡುವ ಉದ್ಗಾರಗಳಾಗಲಿ ಇಲ್ಲವೇ ಇದ್ದಕ್ಕಿದ್ದಂತೆ ಆಡುವ ಬಯ್ಗುಳದ ನುಡಿಗಳಾಗಲಿ ಮಾತುಕತೆಯಲ್ಲಿ ತೊಡಗುವ ಇಲ್ಲವೇ ಮಾತುಕತೆಯನ್ನು ಮುಂದುವರಿಸುವ ರೂಪದಲ್ಲಿ ಇರುವುದಿಲ್ಲ. ಈ ನುಡಿಗಳು ವ್ಯಕ್ತಿಯ ಮೈಮನದಲ್ಲಿ ಉಂಟಾದ ಭಾವನೆಯನ್ನು ಹೊರಹಾಕುತ್ತವೆ.

ರಸ್ತೆಯಲ್ಲಿ ಸಂಚರಿಸುತ್ತಿರುವ ವಾಹನಗಳಿಗೆ ಅಡ್ಡಿಯುಂಟಾದಾಗ ವಾಹನ ಚಾಲಕರಿಂದ ಹೊರಹೊಮ್ಮುವ ಬಗೆಬಗೆಯ ಬಯ್ಗುಳಗಳನ್ನು ನಾವೆಲ್ಲರೂ ನಿತ್ಯವೂ ಕೇಳುತ್ತಿರುತ್ತೇವೆ ಇಲ್ಲವೇ ನಾವೇ ಚಾಲಕರಾಗಿದ್ದರೆ ನಮ್ಮ ಬಾಯಿಂದಲೇ ಬಯ್ಗುಳದ ಪದಗಳು ಹೊರಹೊಮ್ಮುತ್ತಿರುತ್ತವೆ. ನಮ್ಮೆಲ್ಲರ ನಿತ್ಯ ಜೀವನದ ನೂರಾರು ಬಗೆಯ ಪ್ರಸಂಗಗಳಲ್ಲಿ ಈ ರೀತಿ ಇದ್ದಕ್ಕಿದ್ದಂತೆಯೇ ಬಯ್ಗುಳಗಳನ್ನು ಬಳಸುವುದಕ್ಕೆ ನಮ್ಮ ಮೆದುಳಿನ ನರಮಂಡಲದಲ್ಲಿರುವ **Autonomic Nervous System** ಕಾರಣವಾಗಿದೆ. ಆದ್ದರಿಂದಲೇ ಪ್ರತಿಯೊಬ್ಬ ವ್ಯಕ್ತಿಯು ಒಂದಲ್ಲ ಒಂದು ಬಗೆಯ ಬಯ್ಗುಳದ ನುಡಿಗಳನ್ನು ಆಡುತ್ತಾನೆ. ಈ ಹಿಂದೆ ನಿರೂಪಿಸಿರುವ ೧, ೨, ೩, ೪ ಪ್ರಸಂಗಗಳು ಇದ್ದಕ್ಕಿದ್ದಂತೆ ಆಡುವ ಬಯ್ಯುವಿಕೆಯಾಗಿವೆ.

೨. ಉದ್ದೇಶಪೂರ್ವಕವಾಗಿ ಆಡುವ ಮಾತುಗಳು/ಉದ್ದೇಶಪೂರ್ವಕ ವಾಗಿ ಬಯ್ಯುವುದು

ಯಾವುದೇ ಒಂದು ಸಂಗತಿಯನ್ನು ಕುರಿತು ಇತರರೊಡನೆ ಪ್ರಸ್ತಾಪಿಸುವಾಗ ಇಲ್ಲವೇ ವ್ಯವಹರಿಸುವಾಗ ಮೊದಲೇ ಆಲೋಚಿಸಿ ಆಡುವ ಮಾತುಗಳನ್ನು ಉದ್ದೇಶಿತ ಮಾತುಗಳೆಂದು ಗುರುತಿಸಲಾಗಿದೆ. ಈ ರೀತಿಯಲ್ಲಿ ಉದ್ದೇಶಪೂರ್ವಕ ವಾಗಿ ಮಾತುಗಳನ್ನಾಡುವುದಕ್ಕೆ ನಮ್ಮ ಮೆದುಳಿನ ನರಮಂಡಲದಲ್ಲಿರುವ **Central Nervous System** ಕಾರಣವಾಗಿರುತ್ತದೆ.

ನಾವು ಮಾತನ್ನಾಡುತ್ತಿರುವ ಸಾಮಾಜಿಕ ಸನ್ನಿವೇಶಕ್ಕೆ ತಕ್ಕಂತೆ ನಮ್ಮ ಕೆಲಸವನ್ನು ಇಲ್ಲವೇ ಮನಸ್ಸಿನ ಬಯಕೆಯನ್ನು ಈಡೇರಿಸಿಕೊಳ್ಳುವುದಕ್ಕಾಗಿ ಉದ್ದೇಶಿತ ಮಾತುಗಳನ್ನು ಇತರರೊಡನೆ ಆಡುತ್ತೇವೆ. ಉದ್ದೇಶಪೂರ್ವಕವಾಗಿ ಆಡುವ ಬಯ್ಯುವಿಕೆಯು ಈ ಬಗೆಯ ಮಾನಸಿಕ ಪ್ರಕ್ರಿಯೆಗೆ ಒಳಪಟ್ಟಿದೆ.

ಇತರ ವ್ಯಕ್ತಿಗಳನ್ನು ಅಪಮಾನಮಾಡಲೆಂದೋ, ಇತರರನ್ನು ಹೆದರಿಸಿ ಬೆದರಿಸಿ ನಮಗೆ ಅಗತ್ಯವಿರುವ ಕೆಲಸವನ್ನು ಮಾಡಿಸಿಕೊಳ್ಳಲೆಂದೋ, ಇತರರ ನಡೆನುಡಿ ಗಳಲ್ಲಿನ ಕುಂದುಕೊರತೆಗಳನ್ನು ಎತ್ತಿ ಆಡಲೆಂದೋ, ನಮಗೆ ಹಾನಿಯನ್ನುಂಟು ಮಾಡಿದ ವ್ಯಕ್ತಿಗಳ ಬಗ್ಗೆ ನಮ್ಮ ಸಂಕಟವನ್ನು ಕಾರಿಕೊಳ್ಳುತ್ತ ಶಪಿಸಲೆಂದೋ ಇಲ್ಲವೇ ಇತರರ ಮನಸ್ಸನ್ನು ಅಣಕದ ನುಡಿಗಳಿಂದ ಚುಚ್ಚಿ ಗಾಸಿಗೊಳಿಸಲೆಂದು ನಾವು ಬಳಸುವ ಬಯ್ಯುವಿಕೆಗಳು ಉದ್ದೇಶಿತ ಮಾತಿನ ರೀತಿಗೆ ಸೇರುತ್ತವೆ.

ಉದ್ದೇಶಿತ ಬಯ್ಗುವಿಕೆಯಲ್ಲಿ ಬಳಸುತ್ತಿರುವ ಬಯ್ಗುಳದ ಬಗೆಗೆ ನಮ್ಮಲ್ಲಿ ಅರಿವು ಮತ್ತು ಎಚ್ಚರವಿರುತ್ತದೆ. ಅಂದರೆ ಬಯ್ಯುವಾಗ ನಮ್ಮ ಮಯ್ ಮನ ನಮ್ಮ ಹತೋಟಿಯಲ್ಲಿರುತ್ತದೆ. ಏಕೆಂದರೆ ಈ ಬಗೆಯ ಬಯ್ಯುವಿಕೆಯಲ್ಲಿ ತೊಡಗಿದಾಗ ನಮ್ಮನ್ನು ಒಳಗೊಂಡಂತೆ ಇತರ ವ್ಯಕ್ತಿಗಳ ಮೇಲೆಯೂ ಬಹುಬಗೆಗಳಲ್ಲಿ ನಾವು ಬಳಸುತ್ತಿರುವ ಬಯ್ಗುಳದ ನುಡಿಗಳು ಪರಿಣಾಮವನ್ನು ಬೀರುತ್ತಿರುತ್ತದೆ. ಈ ಹಿಂದೆ ನಾನು ನಿರೂಪಿಸಿರುವ ೬ ರಿಂದ ೧೬ರ ವರೆಗಿನ ಪ್ರಸಂಗಗಳು ಉದ್ದೇಶಪೂರ್ವಕವಾದ ಬಯ್ಯುವಿಕೆಯಾಗಿವೆ.

ಹೀಗೆ ಇದ್ದಕ್ಕಿದ್ದಂತೆಯೇ ಬಯ್ಯುವ ಮತ್ತು ಉದ್ದೇಶಪೂರ್ವಕವಾಗಿ ಬಯ್ಯುವ ಕ್ರಿಯೆಗಳಲ್ಲಿ ಮಿದುಳಿನ ನರಮಂಡಲದ ಪಾತ್ರವನ್ನು ಇನ್ನು ವಿವರವಾಗಿ ತಿಳಿಯ ಬೇಕಾದರೆ, ಮಾನವ ಮಿದುಳಿನ ರಚನೆ ಮತ್ತು ಕೆಲಸಗಳನ್ನು ಅರಿಯಬೇಕಾದ ಅಗತ್ಯವಿದೆ.

ಮೆದುಳಿನ ರಚನೆ ಮತ್ತು ಕೆಲಸ

ಮನದಲ್ಲಿ ಮೂಡುವ ಭಾವನೆಗಳನ್ನು ವ್ಯಕ್ತಪಡಿಸುವುದಕ್ಕೆ ನೆರವಾಗುವ, ಮಾತನ್ನು ಆಡುವುದಕ್ಕೆ ಮತ್ತು ಗ್ರಹಿಸಿ ಕೊಳ್ಳುವುದಕ್ಕೆ ಕಾರಣವಾಗಿರುವ ಮತ್ತು ಮಾತಿನ ಸನ್ನಿವೇಶದಲ್ಲಿ ಯಾವ ಬಗೆಯ ಮಾತನ್ನು ಆಡಬೇಕು ಇಲ್ಲವೇ ಆಡಬಾರದು ಎಂಬ ಅರಿವನ್ನು ನೀಡಿ ಮಾತನ್ನು ನಿಯಂತ್ರಿಸಿ ನಿರ್ದೇಶಿಸುವ ನರಕೋಶಗಳನ್ನು ಮೆದುಳಿನ ನರಮಂಡಲದಲ್ಲಿ ಗುರುತಿಸಿ, ನುಡಿಗೆ ಸಂಬಂಧ ಪಟ್ಟಂತೆ ಮೆದುಳಿನಲ್ಲಿ ನಡೆಯುವ ಕೆಲಸಗಳನ್ನು ವಿಜ್ಞಾನಿಗಳು ವಿವರಿಸಿದ್ದಾರೆ.

ಹದಿನಾಲ್ಕರ ಪ್ರಾಯಕ್ಕೆ ಬಂದಿರುವ ಪ್ರತಿಯೊಬ್ಬ ಮಾನವನ ತಲೆಬುರುಡೆ ಯಲ್ಲಿರುವ ಮೆದುಳು ಸರಿ ಸುಮಾರು ೧೪೦೦ ಗ್ರಾಮ್ ತೂಕವಿರುವ ಒಂದು ಮಾಂಸದ ಮುದ್ದೆ. ಮಗು ಹುಟ್ಟಿದಾಗ ಸುಮಾರು ೪೦೦ ಗ್ರಾಮ್ ತೂಕವಿದ್ದ ಮೆದುಳು, ಹದಿನಾಲ್ಕರ ಹರೆಯದ ತನಕ ಬೆಳೆಯುತ್ತಿರುತ್ತದೆ. ಕೋಟಿಗಟ್ಟಲೆ ನರಕೋಶ ಮತ್ತು ನರತಂತುಗಳಿಂದ ಕೂಡಿರುವ ಮೆದುಳನ್ನು ನರವಿಜ್ಞಾನಿಗಳು ಗೋಳಾಕಾರದಲ್ಲಿ ಕಲ್ಪಿಸಿಕೊಂಡು ಮೆದುಳನ್ನು ಎಡ ಮತ್ತು ಬಲ ಅರೆಗೋಳಗಳನ್ನಾಗಿ ವಿಂಗಡಿಸಿಕೊಂಡು ಮೆದುಳಿನ ರಚನೆ ಮತ್ತು ಕೆಲಸಗಳನ್ನು ಗಮನಿಸಿ ವಿವರಿಸಿದ್ದಾರೆ.

ಮಾತು ಮತ್ತು ಮೆದುಳಿನ ಎಡ ಅರೆಗೋಳ

ಮಾತಿನ ಮೂಲಕ ಯಾವುದೇ ಒಂದು ಸಂಗತಿಯನ್ನು ಅದರ ಕಾರ್ಯ ಕಾರಣಗಳ ಹಿನ್ನೆಲೆಯಲ್ಲಿ ಕುರಿತು ಚಿಂತನೆಯನ್ನು ಮಾಡಲು; ಯಾವುದೇ ಒಂದು ಕೆಲಸವನ್ನು ಮಾಡುವ ಮುನ್ನ ಅದರ ಲಾಭ ಇಲ್ಲವೇ ನಷ್ಟದ ಲೆಕ್ಕಾಚಾರವನ್ನು ಹಾಕಲು; ಸಂಗತಿಯೊಂದನ್ನು ಪ್ರತಿಪಾದನೆ ಮಾಡಲು ಅಗತ್ಯವಾದ ಮಾತಿನ ಧ್ವನಿಗಳು, ಪದಗಳು, ಪದಗಳನ್ನು ಜತೆಗೂಡಿಸಿ ವಾಕ್ಯರೂಪದಲ್ಲಿ ಮಾತನ್ನಾಡು

ವುದಕ್ಕೆ ಮತ್ತು ಆಡಿದ ವಾಕ್ಯಗಳನ್ನು ಗ್ರಹಿಸಿಕೊಳ್ಳುವುದಕ್ಕೆ ನೆರವಾಗುವ ನರಕೋಶಗಳು ಎಡ ಅರೆಗೋಳದಲ್ಲಿವೆ.

ಎಡ ಅರೆಗೋಳದ ಒಂದು ಎಡೆಯಲ್ಲಿ ಮಾತನ್ನು ಆಡುವುದಕ್ಕೆ ಇಲ್ಲವೇ ಮಾತಿನ ಉತ್ಪಾದನೆಗೆ **(Speech Production)** ನೆರವಾಗುವ ನರಕೋಶಗಳ ಚಿಕ್ಕ ಮಂಡಲವನ್ನು ಬ್ರೋಕ ಜಾಗ **(Broca's Area)** ಎಂದು ಕರೆಯುತ್ತಾರೆ. ಎಡ ಅರೆಗೋಳದ ಮತ್ತೊಂದು ಎಡೆಯಲ್ಲಿರುವ ಮಾತನ್ನು ಗ್ರಹಿಸಿಕೊಳ್ಳುವುದಕ್ಕೆ **(Speech Perception)** ನೆರವಾಗುವ ನರಕೋಶಗಳ ಚಿಕ್ಕ ಮಂಡಲವನ್ನು ವರ್ನಿಕೆಯ ಜಾಗ **(Wernicke's Area)** ಎಂದು ಕರೆಯುತ್ತಾರೆ. ಫ್ರಾನ್ಸ್ ನಗರದಲ್ಲಿ ಡಾಕ್ಟರ್ ಆಗಿದ್ದ ಪಿಯರೆ ಪಾಲ್ ಬ್ರೋಕ (೧೮೨೪-೧೮೮೦) ಮತ್ತು ಜರ್ಮನಿಯಲ್ಲಿದ್ದ ನರವಿಜ್ಞಾನಿ ಕಾರ್ಲ್ ವರ್ನಿಕೆ (೧೮೪೮-೧೯೦೫) ಎಂಬ ಹೆಸರಿನ ಈ ಇಬ್ಬರು ವ್ಯಕ್ತಿಗಳು ಮೆದುಳಿನಲ್ಲಿ ನಡೆಯುವ ಮಾತಿಗೆ ಸಂಬಂಧಿಸಿದ ನರಕೋಶಗಳ ನೆಲೆ ಮತ್ತು ಕೆಲಸಗಳನ್ನು ಮೊತ್ತಮೊದಲು ವಿವರಿಸಿದ್ದರಿಂದ, ಆ ಜಾಗಗಳನ್ನು ಅವರ ಹೆಸರಿನಿಂದ ಕರೆಯಲಾಗಿದೆ.

ಭಾವನೆ ಮತ್ತು ಮೆದುಳಿನ ಬಲ ಅರೆಗೋಳ

ಬಲ ಅರೆಗೋಳದಲ್ಲಿ ಭಾವನಾತ್ಮಕವಾದ ಮಾತಿಗೆ ನೆರವಾಗುವ ನರಕೋಶಗಳಿವೆ. "ಭಾವನಾತ್ಮಕ ಮಾತು" ಎಂದರೆ ಹತಾಶೆ, ಅಚ್ಚರಿ, ಸಂಕಟ, ಮೆಚ್ಚುಗೆ ಇಲ್ಲವೇ ಆನಂದ ಉಂಟಾದಾಗ ಹೊರಹೊಮ್ಮುವ ಬಿಡಿ ಬಿಡಿಯಾದ ಪದಗಳು, ನುಡಿಗಟ್ಟುಗಳು ಇಲ್ಲವೇ ಉದ್ಗಾರದ ದನಿಗಳು; ಇದರ ಜತೆಗೆ ಮನದಲ್ಲಿಯೇ ನೂರಾರು ಬಗೆಯ ವಸ್ತುಗಳನ್ನು, ಸನ್ನಿವೇಶಗಳನ್ನು ಮತ್ತು ಸಂಗತಿಗಳನ್ನು ಕಲ್ಪಿಸಿಕೊಂಡು ಕಾಣುವ ಮತ್ತು ರಾಗಮಯವಾಗಿ ಹಾಡುವ ಸಂಗೀತದ ಕಸುವಿನ ನರಕೋಶಗಳು ಬಲ ಅರೆಗೋಳದಲ್ಲಿವೆ. ಎಡ ಅರೆಗೋಳದಲ್ಲಿನ ನರಕೋಶಗಳು ಯಾವುದೇ ಒಂದು ಸಂಗತಿಯನ್ನು ಬಿಡಿಬಿಡಿಯಾಗಿ ಒರೆಹಚ್ಚಿ ನೋಡಿ ಗ್ರಹಿಸಿಕೊಳ್ಳಲು ನೆರವಾಗುವಂತಿದ್ದರೆ, ಬಲ ಅರೆಗೋಳದಲ್ಲಿನ ನರಕೋಶಗಳು ಇಡಿಯಾಗಿ ಒಂದು ಸಂಗತಿಯನ್ನು ಗ್ರಹಿಸಿಕೊಳ್ಳುವುದಕ್ಕೆ ನೆರವಾಗುತ್ತವೆ.

ಒಳಿತು ಕೆಡುಕಿನ ಎಚ್ಚರದ ಅರಿವು ಮತ್ತು ಫ್ರಂಟಲ್ ಲೋಬ್

ಮೆದುಳಿನ ಎಡ ಅರೆಗೋಳದ ಮುಂಚೂಣಿಯಲ್ಲಿರುವ ನರಕೋಶಗಳನ್ನು 'ಫ್ರಂಟಲ್ ಲೋಬ್' ಎಂದು ಕರೆಯುತ್ತಾರೆ. ಸಾಮಾಜಿಕ ವ್ಯವಹಾರದಲ್ಲಿ ನುಡಿಯನ್ನು ಬಳಸುವಾಗ ಈ ನರಕೋಶಗಳ ಪಾತ್ರ ಬಹು ದೊಡ್ಡದಾಗಿದೆ. ಮಾತನ್ನು ಆಡುತ್ತಿರುವ ಸನ್ನಿವೇಶದಲ್ಲಿ 'ಯಾವ ಜಾಗದಲ್ಲಿ, ಯಾವ ಸಮಯದಲ್ಲಿ,

ಯಾರೊಡನೆ, ಹೇಗೆ ಮಾತನಾಡಬೇಕು ಇಲ್ಲವೇ ಹೇಗೆ ಮಾತನಾಡಬಾರದು' ಎಂಬ ಲೆಕ್ಕಾಚಾರವನ್ನು ಹಾಕಿಕೊಂಡು ಎಚ್ಚರದ ತೀರ್ಮಾನವನ್ನು ತೆಗೆದು ಕೊಳ್ಳಲು ಪ್ರಂಟಲ್ ಲೋಬ್ ನರಕೋಶಗಳು ನೆರವಾಗುತ್ತವೆ. ಯಾವುದೇ ಒಂದು ನುಡಿ ಸಮುದಾಯದ ನಿತ್ಯ ಜೀವನದ ಆಚರಣೆಯಲ್ಲಿರುವ ಗಂಡು ಹೆಣ್ಣಿನ ಕಾಮದ ನಂಟು, ಸಾಮಾಜಿಕ ಸಂಪ್ರದಾಯ, ನಂಬಿಕೆ ಮತ್ತು ಕಟ್ಟುಪಾಡುಗಳಿಗೆ ಹಾನಿ ತಟ್ಟುವಂತೆ ಕೆಟ್ಟ ಮಾತುಗಳನ್ನು ಆಡುವುದನ್ನು ಪ್ರಂಟಲ್ ಲೋಬ್ ನರಕೋಶಗಳು ನಿಯಂತ್ರಿಸುತ್ತವೆ.

ಮೆದುಳಿನಲ್ಲಿರುವ ಕೋಟಿಗಟ್ಟಲೆ ನರಕೋಶಗಳೆಲ್ಲಕ್ಕೂ ಒಂದೊಂದು ಬಗೆಯ ಕೆಲಸವನ್ನು ಮಾಡುವ ಕಸುವು ಇದೆ. ಒಂದು ನರಕೋಶಕ್ಕೆ ಇತರ ವ್ಯಕ್ತಿಗಳ ಮುಖವನ್ನು ಸರಿಯಾಗಿ ಗುರುತಿಸುವ ಕಸುವು ಇದ್ದರೆ, ಮತ್ತೊಂದು ನರಕೋಶಕ್ಕೆ ಸಂಗೀತದ ರಾಗವನ್ನು ಕೇಳಿ ಗ್ರಹಿಸುವ ಕಸುವು ಇರುತ್ತದೆ. ಯಾವುದೇ ಕಾರಣದಿಂದ ಈ ನರಕೋಶಗಳಿಗೆ ಹಾನಿಯುಂಟಾದರೆ ಆಗ ವ್ಯಕ್ತಿಗಳ ಮುಖವನ್ನು ನೋಡಿದರೂ ಅದು ಯಾರೆಂದು ಸರಿಯಾಗಿ ಗುರುತಿಸಲು ಆಗುವುದಿಲ್ಲ; ಸಂಗೀತವನ್ನು ಕೇಳಿದರೂ ಅದನ್ನು ಗ್ರಹಿಸಿಕೊಳ್ಳಲು ಆಗುವುದಿಲ್ಲ.

ಇದೇ ರೀತಿಯಲ್ಲಿ ಇದ್ದಕ್ಕಿದ್ದಂತೆಯೇ ಬಯ್ಯುವ ಮತ್ತು ಉದ್ದೇಶ ಪೂರ್ವಕವಾಗಿ ಬಯ್ಯುವುದಕ್ಕೆ ಕಾರಣವಾಗುವ ನರಕೋಶಗಳು ಮೆದುಳಿನ ಯಾವ ಎಡೆಯಲ್ಲಿ ನೆಲೆಗೊಂಡಿವೆ ಎಂಬುದನ್ನು ವಿಜ್ಞಾನಿಗಳು ಸಂಶೋಧನೆ ಮಾಡಿದ್ದಾರೆ. ತಮ್ಮ ಈ ಸಂಶೋಧನೆಗೆ ಆರೋಗ್ಯ ರಂಗದಲ್ಲಿ ಮಾನಸಿಕ ರೋಗಿ ಗಳನ್ನು ಉಪಚರಿಸು ತ್ತಿದ್ದಾಗ ಕಂಡುಬಂದ ಸಂಗತಿಗಳನ್ನು ದಾಖಲಿಸಿರುವ ನರವಿಜ್ಞಾನಕ್ಕೆ ಸಂಬಂಧಿಸಿದ ಬರಹಗಳಿಂದ ಮಾಹಿತಿಯನ್ನು ಪಡೆದಿದ್ದಾರೆ.

ಮಾನಸಿಕ ರೋಗಕ್ಕೆ ಗುರಿಯಾಗಿ ನರಳುತ್ತಿದ್ದ ರೋಗಿಗಳನ್ನು ಉಪಚರಿಸುತ್ತಿದ್ದ ಡಾಕ್ಟರುಗಳು ರೋಗಿಗಳ ನಡೆನುಡಿಗಳಲ್ಲಿ ಕಂಡುಬರುತ್ತಿದ್ದ ವರ್ತನೆಗಳನ್ನು ಬರೆದಿಡುತ್ತಿದ್ದರು. ಇಂತಹ ರೋಗಿಗಳಲ್ಲಿ ಕೆಲವರು ಸಾವನ್ನಪ್ಪಿದ ನಂತರ, ಅವರ ಮೆದುಳಿನ ನರಮಂಡಲದಲ್ಲಿನ ನರಕೋಶಗಳಲ್ಲಿ ಉಂಟಾಗಿರುವ ವ್ಯತ್ಯಯಗಳನ್ನು ಗುರುತಿಸಿ, ಮಾನಸಿಕ ರೋಗಿಗಳ ವರ್ತನೆಗೆ ಕಾರಣವಾದ ಸಂಗತಿಗಳನ್ನು ವಿವರಿಸುತ್ತಿದ್ದರು.

ಮಾನಸಿಕ ರೋಗಿಗಳ ದೇಹ ಮತ್ತು ಮನಸ್ಸಿನ ಚಿತ್ರ ವಿಚಿತ್ರವಾದ ನೂರೆಂಟು ಬಗೆಯ ಸಾಮಾಜಿಕ ವರ್ತನೆಗಳಲ್ಲಿ **(Social Behaviour)** ಮತ್ತು ಮಾತಿನ ವರ್ತನೆಯಲ್ಲಿ **(Speech Behaviour)** ಕಂಡುಬರುವ ಸಂಗತಿಗಳನ್ನು ನುಡಿ ವಿಜ್ಞಾನಿಗಳು ಮತ್ತು ಮನೋವಿಜ್ಞಾನಿಗಳು ಕಳೆದ ಎಪ್ಪತ್ತು ವರ್ಷಗಳಿಂದ ಪರಿಶೀಲಿಸುತ್ತ, ಮೆದುಳಿನ ನರಮಂಡಲದಲ್ಲಿ ನಡೆಯುವ ಯಾವ ಯಾವ

ಬಗೆಯ ಕ್ರಿಯೆಗಳು ಬಯ್ಯುವಿಕೆಗೆ ಕಾರಣವಾಗಿವೆ ಎಂಬುದನ್ನು ವಿವರಿಸಿದ್ದಾರೆ.

ಅಫೇಸಿಯಾ, ಆಲ್ಜಮೀರ್, ಸ್ಕಿಜೋಪ್ರೇನಿಯಾ ಮುಂತಾದ ಬಹುಬಗೆಯ ಮಾನಸಿಕ ರೋಗಗಳಿಗೆ ಒಳಗಾದ ರೋಗಿಗಳಲ್ಲಿ ಬಯ್ಯುವಿಕೆಯು ಸಾಮಾನ್ಯವಾಗಿ ಕಂಡುಬರುವ ಮಾತಿನ ಚಹರೆಯಾಗಿದೆ. ಕೆಲವು ರೋಗಿಗಳು ಇದ್ದಕ್ಕಿದ್ದಂತೆಯೇ ಆಗಾಗ್ಗೆ ಒಂದೆರಡು ಬಯ್ಗುಳದ ಪದಗಳನ್ನು ಆಡುತ್ತಿದ್ದರೆ, ಮತ್ತೆ ಕೆಲವರು ನಿರಂತರವಾಗಿ ಬಯ್ಯುವಿಕೆಯಲ್ಲಿ ತೊಡಗಿ ಬಯ್ಗುಳದ ಪದಗಳನ್ನು, ನುಡಿಗಟ್ಟು ಗಳನ್ನು ಮತ್ತು ವಾಕ್ಯಗಳನ್ನು ಬಳಸುತ್ತಿರುತ್ತಾರೆ. ಮಾನಸಿಕ ರೋಗಿಗಳ ಬಯ್ಯುವಿಕೆಗೆ ಕಾರಣವಾಗುವ ಸಂಗತಿಗಳನ್ನು ಅರಿಯುವುದರ ಮೂಲಕ ಆರೋಗ್ಯವಂತರಾದ ವ್ಯಕ್ತಿಗಳು ತಮ್ಮ ನಿತ್ಯ ಜೀವನದಲ್ಲಿ ಬಯ್ಗುಳಗಳನ್ನು ಬಳಸುತ್ತಿರುವುದಕ್ಕೆ ಕಾರಣಗಳು ಏನೆಂಬುದನ್ನು ವಿಜ್ಞಾನಿಗಳು ವಿವರಿಸಿದ್ದಾರೆ.

ಮಾತನ್ನು ಆಡುವುದಕ್ಕೆ, ಮಾತನ್ನು ಗ್ರಹಿಸಿಕೊಳ್ಳುವುದಕ್ಕೆ ಮತ್ತು ಭಾವನೆ ಗಳನ್ನು ವ್ಯಕ್ತಪಡಿಸುವುದಕ್ಕೆ ನೆರವಾಗುವ ಮೆದುಳಿನ ನರಮಂಡಲದಲ್ಲಿರುವ ನರಕೋಶಗಳಿಗೆ ಹಾನಿಯುಂಟಾಗಿರುವುದರಿಂದ ಮಾನಸಿಕ ರೋಗಿಗಳು ಬಯ್ಯುವಿಕೆಯಲ್ಲಿ ತೊಡಗಿರುವುದು ಕಂಡುಬಂದಿದೆ.

ಮೆದುಳಿಗೆ ಹರಿಯುವ ರಕ್ತ ಸಂಚಾರದಲ್ಲಿ ಮತ್ತು ಮೆದುಳಿಗೆ ಸರಬರಾಜಾಗುವ ಆಮ್ಲಜನಕದ ಪ್ರಮಾಣದಲ್ಲಿ ಹೆಚ್ಚು ಕಡಿಮೆಯಾದಾಗ; ಮೆದುಳಿನ ನರಮಂಡಲಕ್ಕೆ ಸಾಂಕ್ರಾಮಿಕ ರೋಗಗಳು ಅಂಟಿ ನರಕೋಶಗಳು ಇಲ್ಲವಾದಾಗ; ಬಹುಬಗೆಯ ಅವಗಡಗಳಿಂದ ತಲೆಗೆ ಪೆಟ್ಟು ಬಿದ್ದು ನರಕೋಶಗಳಿಗೆ ಹಾನಿಯುಂಟಾದಾಗ ಮಾತನ್ನು ಆಡುವುದರಲ್ಲಿ **(Speech Production)** ಮತ್ತು ಆಡಿದ ಮಾತನ್ನು ಗ್ರಹಿಸಿಕೊಳ್ಳುವುದರಲ್ಲಿ **(Speeh Comprehension)** ಬಹುಬಗೆಯ ಏರುಪೇರುಗಳು ಕಂಡುಬರುತ್ತವೆ.

ಕ್ರಿ.ಶ.೧೮೬೪ ರಿಂದ ೧೮೮೦ ಕಾಲದಲ್ಲಿ ಫ್ರಾನ್ಸ್ ನಗರದಲ್ಲಿದ್ದ ಶಸ್ತ್ರಚಿಕಿತ್ಸಕ **(Physician),** ಅಂಗರಚನಾ ವಿಜ್ಞಾನಿ **(Anatomist)** ಮತ್ತು ಮಾನವಶಾಸ್ತ್ರಜ್ಞ ರಾಗಿದ್ದ **(Anthropologist)** ಪಿಯರೆ ಪಾಲ್ ಬ್ರೋಕ್ ಅವರು ತಮ್ಮ ಬಳಿ ಬರುತ್ತಿದ್ದ ನೂರಾರು ಮಾನಸಿಕ ರೋಗಿಗಳ ಮಾತಿನ ವರ್ತನೆಗಳನ್ನು ಗಮನಿಸಿ, ಆ ಬಗೆಯ ವರ್ತನೆಗಳಿಗೆ ಮೆದುಳಿನ ನರಕೋಶಗಳಲ್ಲಿ ಉಂಟಾಗಿದ್ದ ಹಾನಿಯ ಸ್ವರೂಪವನ್ನು ತಿಳಿದುಕೊಂಡು ವಿವರಿಸುತ್ತಿದ್ದರು. ಇಂತಹ ರೋಗಿಗಳಲ್ಲಿ ಟ್ಯಾನ್ **(Tan)** ಎಂಬ ಹೆಸರಿನ ವ್ಯಕ್ತಿಯ ಮಾತಿನ ಚಹರೆಗಳನ್ನು ಈ ರೀತಿ ಬರೆದಿಟ್ಟಿದ್ದಾರೆ.

ಪದ ಮತ್ತು ಪ್ರತ್ಯಯಗಳಿಂದ ಜತೆಗೂಡಿ ತಿರುಳನ್ನು ಒಳಗೊಂಡು ಸಂಗತಿಯನ್ನು ತಿಳಿಸುವ ಒಂದೇ ಒಂದು ವಾಕ್ಯವನ್ನಾದರೂ ಈ ರೋಗಿಯಿಂದ ನುಡಿಯಲಾಗುತ್ತಿರಲಿಲ್ಲ. ಆದರೆ ಈತ ತನ್ನ ಮನದ ಒಳಮಿಡಿತಗಳನ್ನು ಹೊರ

ಹಾಕಲು ಆಗಾಗ್ಗೆ **'Sacre-nom-de-Dieu'** ಎಂಬ ಒಂದು ಮಾತನ್ನು ಮಾತ್ರ ಆಡಬಲ್ಲವನಾಗಿದ್ದ. ಫ್ರೆಂಚ್ ನುಡಿಯಲ್ಲಿ ಇದು ಒಂದು ವಾಕ್ಯವಲ್ಲ; ಒಂದು ನುಡಿಗಟ್ಟು. ಈ ನುಡಿಗಟ್ಟು ವ್ಯಕ್ತಿಯು ಹತಾಶೆಗೊಂಡಾಗ ಇಲ್ಲವೇ ಹೆಚ್ಚಿನ ಆತಂಕಕ್ಕೆ ಒಳಗಾದಾಗ ತನ್ನ ಒಳಮಿಡಿತವನ್ನು ಹೊರಹಾಕುವ ಉದ್ಗಾರ ಸೂಚಕವಾಗಿದೆ. ಫ್ರೆಂಚ್ ನುಡಿಯ ಈ ಉದ್ಗಾರವು ಕನ್ನಡ ನುಡಿಯಲ್ಲಿ ನಾವು ಹತಾಶೆ, ಆತಂಕ, ಒತ್ತಡ ಇಲ್ಲವೇ ಹೆದರಿಕೆಯ ಸನ್ನಿವೇಶಗಳಲ್ಲಿ ಆಡುವ **"ಅಯ್ಯೋ ದೇವರೇ"** ಎಂಬ ಉದ್ಗಾರದಂತಿದೆ. ಈ ರೋಗಿಯ ಮೆದುಳಿನ ನರಮಂಡಲದಲ್ಲಿನ ನರಕೋಶ ಗಳನ್ನು ಪಾಲ್ ಬ್ರೋಕ ಅವರು ಪರಿಶೀಲಿಸಿದಾಗ ಕಂಡು ಬಂದ ಸಂಗತಿಗಳು ಈ ಕೆಳಕಂಡಂತೆ ಇದ್ದವು.

೧. ರೋಗಿಯ ಮೆದುಳಿನ ಎಡ ಅರೆಗೋಳದಲ್ಲಿ ಮಾತಿನ ಉತ್ಪಾದನೆಗೆ ನೆರವಾಗುವ ಬ್ರೋಕ ಜಾಗದಲ್ಲಿನ ನರಕೋಶಗಳು ಹಾನಿಗೊಂಡಿದ್ದವು. ಇದರಿಂದಾಗಿ ರೋಗಿಯು ಯಾವುದೇ ಒಂದು ವಾಕ್ಯವನ್ನು ಪರಿಪೂರ್ಣವಾಗಿ ಆಡಬಲ್ಲ ಕಸುವನ್ನು ಕಳೆದುಕೊಂಡಿದ್ದನು.

೨. ರೋಗಿಯು ಆಗತಾನೇ ಉಚ್ಚರಿಸಿದ್ದ ಉದ್ಗಾರದ ನುಡಿಯನ್ನು ಮತ್ತೊಮ್ಮೆ ಆಡುವಂತೆ ರೋಗಿಗೆ ಸೂಚಿಸಿದರೆ, ಅದನ್ನು ಆತ ಆಡಲಾಗುತ್ತಿರಲಿಲ್ಲ. ಅಂದರೆ ಆತನಿಗೆ ಅರಿವಿಲ್ಲದಂತೆಯೇ ತನಗೆ ತಾನಾಗಿಯೇ ಕೆಲವೊಮ್ಮೆ ಅವನ ಬಾಯಿಂದ ನುಡಿಯು ಹೊರಹೊಮ್ಮುತ್ತಿತ್ತು.

೩. ಈ ರೋಗಿಯ ಮೆದುಳಿನ ನರಮಂಡಲದಲ್ಲಿ ಭಾವನೆಗಳನ್ನು ಅಂದರೆ ಕೋಪ, ಹತಾಶೆ, ಸಂಕಟವನ್ನು ವ್ಯಕ್ತಪಡಿಸಲು ನೆರವಾಗುವ ಬಲ ಅರೆಗೋಳ ದಲ್ಲಿರುವ ನರಕೋಶಗಳಿಗೆ ಯಾವುದೇ ಬಗೆಯ ಹಾನಿಯುಂಟಾಗಿರಲಿಲ್ಲ. ಬಲ ಅರೆಗೋಳದ ನರಕೋಶಗಳು ಎಂದಿನಂತೆ ತಮ್ಮ ಕೆಲಸವನ್ನು ಮಾಡು ತ್ತಿದ್ದವು. ಆದ್ದರಿಂದಲೇ ರೋಗಿಯು ತನ್ನ ಒಳಮಿಡಿತಗಳನ್ನು **'Sacre-nom-de-Dieu'** ಎಂಬ ನುಡಿಗಟ್ಟಿನ ಮೂಲಕ ಹೊರಹಾಕುತ್ತಿದ್ದನು.

ಬ್ರೋಕ ಅವರ ಈ ವರದಿಯನ್ನು ಗಮನಿಸಿದ ವಿಜ್ಞಾನಿಗಳು ಬಯ್ಯುವುದಕ್ಕೆ ಕಾರಣವಾಗಿರುವ ಮೆದುಳಿನ ನರಮಂಡಲದ ಸಂಗತಿಗಳನ್ನು ತಿಳಿಯಲು ಇನ್ನೂ ಹಲವಾರು ಬಗೆಯ ಮಾನಸಿಕ ರೋಗಿಗಳ ಚಹರೆಗಳಿಂದ ತಮ್ಮ ಪ್ರಯತ್ನಗಳನ್ನು ಮುಂದುವರಿಸಿದರು.

ಮಾತನ್ನು ಆಡುವುದರಲ್ಲಿ ಮತ್ತು ಗ್ರಹಿಸಿಕೊಳ್ಳುವುದರಲ್ಲಿ ಉಂಟಾಗುವ ತೊಂದರೆಗಳನ್ನು "ಅಫೇಸಿಯ" ಎಂಬ ಹೆಸರಿನಲ್ಲಿ ಕರೆಯುತ್ತಾರೆ. ಅಫೇಸಿಯ

ರೋಗಕ್ಕೆ ಬಲಿಯಾದ ವ್ಯಕ್ತಿಗಳ ಮಾತಿನ ವರ್ತನೆಯಲ್ಲಿ ಹಲವು ಬಗೆಯ ವ್ಯತ್ಯಯಗಳು ಕಂಡುಬರುತ್ತವೆ. ಅಫೇಸಿಯ ರೋಗದಲ್ಲಿ ಬ್ರೋಕ ಅಫೇಸಿಯ ಮತ್ತು ವರ್ನಿಕೆಯ ಅಫೇಸಿಯ ಎಂಬ ಎರಡು ಬಗೆಗಳಿವೆ.

ಬ್ರೋಕ ಅಫೇಸಿಯ: ಮೆದುಳಿನ ಎಡ ಅರೆಗೋಳದ ಬ್ರೋಕ ಜಾಗದಲ್ಲಿ ಮಾತಿನ ಉತ್ಪಾದನೆಗೆ ಅಂದರೆ ಸಾಮಾಜಿಕ ವ್ಯವಹಾರಗಳಲ್ಲಿ ಅಗತ್ಯವಿರುವಾಗ ಸರಿಯಾಗಿ ಮಾತನಾಡುವುದಕ್ಕೆ ನೆರವಾಗುವ ನರಕೋಶಗಳ ಜಾಲವಿದೆ. ಮಾತನ್ನು ಉತ್ಪಾದಿಸುವ ಈ ನರಕೋಶಗಳಿಗೆ ಹಾನಿ ತಟ್ಟಿದಾಗ, ಯಾವುದೇ ವ್ಯಕ್ತಿಯು ವಾಕ್ಯವನ್ನು ಸರಿಯಾಗಿ ರಚಿಸಿ ಮಾತನಾಡುವುದಕ್ಕೆ ಆಗುವುದಿಲ್ಲ. ಮಾತಿನಲ್ಲಿ ಉಂಟಾಗುವ ಈ ಬಗೆಯ ತೊಂದರೆಯನ್ನು ಬ್ರೋಕ ಅಫೇಸಿಯ ಎನ್ನುತ್ತಾರೆ.

ಬ್ರೋಕ ಅಫೇಸಿಯ ರೋಗಕ್ಕೆ ಒಳಗಾದವರು ವಾಕ್ಯ ರೂಪದ ಮಾತುಗಳನ್ನಾಡಲಾಗದೆ, ತಮ್ಮ ಮನದ ಒಳಮಿಡಿತಗಳನ್ನು ಮತ್ತು ಇಂಗಿತವನ್ನು ಹೊರಹಾಕಲು ಬಿಡಿ ಬಿಡಿ ರೂಪದ ಒಂದೆರಡು ಉದ್ಗಾರದ ಪದಗಳನ್ನು ಇಲ್ಲವೇ ಬಯ್ಗುಳದ ಪದಗಳನ್ನಾಡುತ್ತಾರೆ.

ವರ್ನಿಕೆಯ ಅಫೇಸಿಯ: ಮೆದುಳಿನ ಎಡ ಅರೆಗೋಳದಲ್ಲಿರುವ ವರ್ನಿಕೆಯ ಜಾಗದಲ್ಲಿನ ನರಕೋಶಗಳಿಗೆ ಹಾನಿಯುಂಟಾದ ರೋಗಿಗಳಿಗೆ ತಾವು ಮತ್ತು ಇತರರು ಆಡುವ ಮಾತುಗಳ ತಿರುಳನ್ನು ಸರಿಯಾಗಿ ಗ್ರಹಿಸಿಕೊಳ್ಳುವ ಕಸುವು ಇರುವುದಿಲ್ಲ. ಆದರೆ ಇವರ ಮೆದುಳಿನಲ್ಲಿರುವ ಮಾತಿನ ಉತ್ಪಾದನೆಯ ಬ್ರೋಕ ಜಾಗ ಸರಿಯಿರುತ್ತದೆ. ಆದ್ದರಿಂದ ವಾಕ್ಯ ರೂಪದಲ್ಲಿ ಮಾತನಾಡಬಲ್ಲರು. ಆದರೆ ತಾವೇನು ಮಾತನಾಡುತ್ತಿದ್ದೇವೆ ಎಂಬುದರ ಅರಿವು ಅವರಿಗೆ ಇರುವುದಿಲ್ಲ. ಅವರು ಆಡುತ್ತಿರುವ ಮಾತುಗಳಲ್ಲಿ ಪರಸ್ಪರ ಹೊಂದಾಣಿಕೆಯಾಗಲಿ ಇಲ್ಲವೇ ಯಾವುದೇ ಬಗೆಯ ತಿರುಳು ಇರುವುದಿಲ್ಲ. ಈ ಬಗೆಯ ಮಾತಿನ ತೊಂದರೆಯನ್ನು ವರ್ನಿಕೆಯ ಅಫೇಸಿಯ ಎನ್ನುತ್ತಾರೆ. ವರ್ನಿಕೆಯ ಅಫೇಸಿಯ ರೋಗಿಗಳು ಒಂದೇ ಸಮನೆ ಮಾತನಾಡು ತ್ತಿರುವಂತೆಯೇ ಬಯ್ಗುಳದ ನುಡಿಗಳನ್ನು ನಿರಂತರವಾಗಿ ಆಡುತ್ತಿರುತ್ತಾರೆ.

ಮಾತಿನ ಸನ್ನಿವೇಶದಲ್ಲಿ ಯಾವ ಬಗೆಯ ಮಾತನ್ನು ಆಡಬೇಕು ಇಲ್ಲವೇ ಆಡಬಾರದು ಎಂಬುದನ್ನು ವಿವೇಚನೆ ಮಾಡುವ ಫ್ರಂಟಲ್ ಲೋಬ್ ನರಕೋಶಗಳು ಹಾನಿಗೊಂಡ ವ್ಯಕ್ತಿಯೊಬ್ಬನ ವರ್ತನೆಗಳನ್ನು ವಿಜ್ಞಾನಿಗಳು ಗಮನಿಸಿದ್ದಾರೆ. ಅಂತಹ ಬರಹಗಳಲ್ಲಿ ಈ ಕೆಳಕಂಡ ಪ್ರಸಂಗವು ಒಂದಾಗಿದೆ.

ಕ್ರಿ.ಶ.೧೮೪೮ರಲ್ಲಿ ಅಮೆರಿಕೆಯ ವರ್ಮಾಂಟ್ ನಗರದಲ್ಲಿ ನಡೆದ ವಾಹನದ ಅವಗಡವೊಂದರಲ್ಲಿ **ಪೀನಿಯಸ್ ಗಾಜ್** ಎಂಬ ವ್ಯಕ್ತಿಯ ತಲೆಗೆ ಬಲವಾದ ಪೆಟ್ಟು ಬಿದ್ದು, ಅವನ ಮೆದುಳಿನ ಮುಂಚೂಣಿಯ ಫ್ರಂಟಲ್ ಲೋಬ್ ನರಕೋಶಗಳಿಗೆ

ಹಾನಿಯುಂಟಾಯಿತು. ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದು ಚೇತರಿಸಿಕೊಂಡ ಹೊರಬಂದ ನಂತರ ಪೀನಿಯಸ್ ಗಾಜನ ಮಾತಿನ ವರ್ತನೆಯಲ್ಲಿ ಬಹು ದೊಡ್ಡ ಬದಲಾವಣೆಗಳು ಕಂಡುಬಂದವು. ಆತ ಸಾಮಾಜಿಕವಾಗಿ ಒಪ್ಪಿತವಲ್ಲದ ರೀತಿಯಲ್ಲಿ ಮಾತನಾಡುತ್ತಿದ್ದನು. ಬಯ್ಗುಳದ ಪದಗಳನ್ನು ಆಗಾಗ್ಗೆ ಬಳಸುತ್ತಿದ್ದನು. ಸಾಮಾಜಿಕ ಸನ್ನಿವೇಶದ ಮಾತುಕತೆಗಳಲ್ಲಿ ಸರಿಯಾದ ತೀರ್ಮಾನಗಳನ್ನು ಕಯ್ಗೊಳ್ಳಲಾಗದೆ ಇಕ್ಕಟ್ಟುಗಳಿಗೆ ಸಿಲುಕುತ್ತಿದ್ದನು. ಅಂದರೆ ಮಾತಿನ ಕುಶಲತೆಯು ಅವನಲ್ಲಿ ಇಲ್ಲವಾಗಿತ್ತು.

ಜನರು ಬಯ್ಯುವಿಕೆಯಲ್ಲಿ ತೊಡಗುವುದಕ್ಕೆ ಕಾರಣವಾಗುವ ಮೆದುಳಿನ ನರಮಂಡಲದ ಕ್ರಿಯೆಗಳನ್ನು ತಿಳಿಯುವುದಕ್ಕಾಗಿ ವಿಜ್ಞಾನಿಗಳು ಮಾನಸಿಕ ರೋಗಿಗಳ ಬಯ್ಯುವಿಕೆಯಲ್ಲಿ ಕಂಡು ಬರುವ ಈ ಎಲ್ಲ ಬಗೆಯ ಸಂಗತಿಗಳನ್ನು ಒರೆಹಚ್ಚಿ ನೋಡಿ, ನಿತ್ಯ ಜೀವನದ ವ್ಯವಹಾರಗಳಲ್ಲಿ ಜನರು ಇದ್ದಕ್ಕಿದ್ದಂತೆಯೇ ಬಯ್ಯಲು ಇಲ್ಲವೇ ಉದ್ದೇಶಪೂರ್ವಕವಾಗಿ ಬಯ್ಯಲು ಕಾರಣವಾದ ಮೆದುಳಿನ ನರಮಂಡಲದ ಸಂಗತಿಗಳನ್ನು ಈ ರೀತಿ ವಿವರಿಸಿದ್ದಾರೆ.

ವ್ಯಕ್ತಿಯು ತನ್ನ ದಿನ ನಿತ್ಯದ ಸಾಮಾಜಿಕ ಸನ್ನಿವೇಶಗಳಲ್ಲಿ ಇತರರೊಡನೆ ಮಾತಿನ ಮೂಲಕ ಸರಿಯಾಗಿ ವ್ಯವಹರಿಸಬೇಕಾದರೆ, ವ್ಯಕ್ತಿಯ ಮೆದುಳಿನ ನರಮಂಡಲದ ಎಡ ಅರೆಗೋಳದಲ್ಲಿರುವ ಮಾತಿನ ಉತ್ಪಾದನೆಯ ಬ್ರೋಕ ಜಾಗ ಹಾಗೂ ಮಾತಿನ ಗ್ರಹಿಕೆಯ ವರ್ನಿಕೆಯ ಜಾಗ, ಬಲ ಅರೆಗೋಳದಲ್ಲಿರುವ ಭಾವನೆಗಳನ್ನು ಉದ್ದೀಪಿಸುವ ನರಕೋಶಗಳ ಜಾಗ ಮತ್ತು ಮೆದುಳಿನ ಮುಂಚೂಣಿಯ ಎಡೆಯಲ್ಲಿ ಸಾಮಾಜಿಕ ಒಪ್ಪಿತವಾದ ನಡೆನುಡಿಗಳನ್ನು ನಿಯಂತ್ರಿಸಿ ನಿರ್ದೇಶಿಸುವ ಫಂಟಲ್ ಲೋಬ್ ನರಕೋಶಗಳು ಸರಿಯಾಗಿರಬೇಕು. ಇವುಗಳಲ್ಲಿ ಯಾವುದೇ ಒಂದು ನೆಲೆಯ ನರಕೋಶಗಳಿಗೆ ಹಾನಿಯುಂಟಾದರೂ ಮಾತಿನ ಬಳಕೆಯಲ್ಲಿ ತೊಂದರೆಗಳು ಕಂಡುಬರುತ್ತವೆ.

ಇದ್ದಕ್ಕಿದ್ದಂತೆಯೇ ನಡೆದ ಪ್ರಸಂಗಗಳಿಂದ ಬಹುಬಗೆಯ ಭಾವೋದ್ರೇಕಗಳಿಗೆ ಒಳಗಾದಾಗ ಮಾನವನ ಮೆದುಳಿನ ನರಮಂಡಲದಲ್ಲಿರುವ ತನಗೆ ತಾನೇ ಕ್ರಿಯಾಶೀಲವಾಗುವ ನರಕೋಶಗಳ **(Autonomic Nervous System)** ನೆರವಿನಿಂದ ಉದ್ಗಾರ ಸೂಚಕ ಪದಗಳನ್ನು ಆಡುವುದಕ್ಕೆ ಬಲ ಅರೆಗೋಳದಲ್ಲಿರುವ ನರಕೋಶಗಳು ಕಾರಣವಾಗುತ್ತವೆ. ಇದೇ ರೀತಿಯಲ್ಲಿ ಇದ್ದಕ್ಕಿದ್ದಂತೆಯೇ ನಾವು ಆಡುವ ಅಂದರೆ ನಮ್ಮ ಹತೋಟಿಯಿಲ್ಲದೆ ನಮ್ಮ ಬಾಯಿಂದ ಹೊರಬೀಳುವ ಬಯ್ಗುಳದ ನುಡಿಗಳಿಗೆ ಬಲ ಅರೆಗೋಳದಲ್ಲಿರುವ ನರಕೋಶಗಳು ಕಾರಣವಾಗಿವೆ.

ಎಡ ಅರೆಗೋಳದಲ್ಲಿರುವ ಬ್ರೋಕ ಜಾಗ ಮತ್ತು ವರ್ನಿಕೆಯ ಜಾಗ ಹಾಗೂ ಮೆದುಳಿನ ಮುಂಚೂಣಿಯಲ್ಲಿರುವ ಫಂಟಲ್ ಲೋಬ್ ನರಕೋಶಗಳು ಮಾತಿನ ಸನ್ನಿವೇಶಗಳಲ್ಲಿ ಲೆಕ್ಕಾಚಾರವನ್ನು ಹಾಕಿಕೊಂಡು ಉದ್ದೇಶಪೂರ್ವಕವಾಗಿ

ಮಾತನಾಡುವುದಕ್ಕೆ ನೆರವಾಗುವ ರೀತಿಯಲ್ಲಿಯೇ ನಾವು ಇತರರನ್ನು ಉದ್ದೇಶ ಪೂರ್ವಕವಾಗಿ ಬಯ್ಯುವುದಕ್ಕೆ ಈ ಮೂರು ನೆಲೆಗಳಲ್ಲಿರುವ ನರಕೋಶಗಳು **(Central Nervous System)** ಕಾರಣವಾಗಿವೆ.

ಕೋಪ, ಹತಾಶೆ, ಹೆದರಿಕೆ, ಆನಂದ ಮತ್ತು ಅಚ್ಚರಿ ಮುಂತಾದ ಭಾವನೆಗಳನ್ನು ವ್ಯಕ್ತಪಡಿಸಲು ನೆರವಾಗುವ ನರಕೋಶಗಳಿಂದ ಕೂಡಿದ ಬಲ ಅರೆಗೋಳದ ನರಮಂಡಲಕ್ಕೆ ಹಾನಿಯುಂಟಾದರೆ, ಅಂತಹ ರೋಗಿಗಳು ಯಾವುದೇ ಬಗೆಯ ಬಯ್ಯುವಿಕೆಯಲ್ಲಿ ತೊಡಗುವುದಿಲ್ಲ.

ವಿಜ್ಞಾನಿಗಳು ಮಾನವ ಜೀವಿಯ ಮೆದುಳಿನ ನರಮಂಡಲದಲ್ಲಿ ನಡೆಯುವ ಈ ಎಲ್ಲಾ ಬಗೆಯ ಪ್ರಕ್ರಿಯೆಗಳನ್ನು ಗಮನಿಸಿ "ವ್ಯಕ್ತಿಯು ತನ್ನ ಮಯ್ ಮನದ ಹತೋಟಿಗೆ ಒಳಗಾಗದೆ ಇದ್ದಕ್ಕಿದ್ದಂತೆಯೇ ಬಯ್ಯುವುದಕ್ಕೆ ಸಂಬಂಧಿಸಿದ ನರಕೋಶಗಳ ಜಾಲವು ಬಲ ಅರಗೋಳದಲ್ಲಿದೆಯೆಂದು ಮತ್ತು ಮಯ್ ಮನದ ಎಚ್ಚರದಿಂದಲೇ ಉದ್ದೇಶಪೂರ್ವಕವಾಗಿ ಬಯ್ಯುವುದಕ್ಕೆ ಸಂಬಂಧಿಸಿದ ನರಕೋಶಗಳ ಜಾಲವು ಎಡ ಅರೆಗೋಳದಲ್ಲಿದೆ" ಎಂದು ವಿವರಿಸಿದ್ದಾರೆ.

ಇದ್ದಕ್ಕಿದ್ದಂತೆ ಬಯ್ಯುವಾಗ, ಉದ್ದೇಶಪೂರ್ವಕವಾಗಿ ಬಯ್ಯುವಾಗ ಇಲ್ಲವೇ ಕೆಲವೊಂದು ಸನ್ನಿವೇಶಗಳಲ್ಲಿ ನಮಗೆ ಬಯ್ಯಬೇಕು ಎಂದು ಎನಿಸಿದರೂ ಬಹಿರಂಗವಾಗಿ ಬಯ್ಯಲಾಗದೆ, ಮನದಲ್ಲಿಯೇ ಬಯ್ದುಕೊಂಡು ಬಹಿರಂಗದಲ್ಲಿ ಯಾವುದೇ ಬಗೆಯ ಮಾತುಗಳನ್ನಾಡದೇ ಸುಮ್ಮನಿರುವಾಗ ನಮ್ಮ ಮೆದುಳಿನ ನರಮಂಡಲದಲ್ಲಿ ನಡೆಯುವ ನರಕೋಶಗಳ ಪ್ರಕ್ರಿಯೆಗಳನ್ನು ವಿಜ್ಞಾನಿಗಳು ಅಯ್ದು ಹಂತಗಳಲ್ಲಿ ವಿವರಿಸಿದ್ದಾರೆ.

೧. ಪ್ರಚೋದನೆ–Provocation

ವ್ಯಕ್ತಿಯ ಮನದಲ್ಲಿ ಕೋಪ, ಹತಾಶೆ, ಸಂಕಟ, ಅಚ್ಚರಿ ಮುಂತಾದ ಒಳಮಿಡಿತಗಳು ಮೂಡುವುದಕ್ಕೆ ಇಲ್ಲವೇ ಕೆರಳುವುದಕ್ಕೆ ಕಾರಣವಾಗುವ ಇಲ್ಲವೇ ಪ್ರಚೋದನೆಯನ್ನು ಉಂಟುಮಾಡುವ ಜೀವಿಗಳು, ವಸ್ತುಗಳು ಮತ್ತು ಕ್ರಿಯೆಗಳು.

ಉದಾಹರಣೆ: ವ್ಯಕ್ತಿಯ ಕಯ್ ತಪ್ಪಿ ವಸ್ತುಗಳು ಕೆಳಕ್ಕೆ ಬಿದ್ದು ಹಾಳಾಗುವುದು; ಕಲ್ಲನ್ನು ಎಡಗಿ ಇಲ್ಲವೇ ನೆಲದಲ್ಲಿ ಜಾರಿ ಆಯತಪ್ಪಿ ಕೆಳಕ್ಕೆ ಬೀಳುವುದು; ವ್ಯಕ್ತಿಯು ಮಾಡುವ ಚಲನವಲನಗಳಿಗೆ ಇತರ ಜೀವಿಗಳಿಂದ, ವಸ್ತುಗಳಿಂದ ಮತ್ತು ವ್ಯಕ್ತಿಗಳಿಂದ ಇದ್ದಕ್ಕಿದ್ದಂತೆಯೇ ಅಡ್ಡಿ ಆತಂಕಗಳು ಎದುರಾಗಿ ಅಪಾಯ ವುಂಟಾಗುವ ಕ್ರಿಯೆಗಳು ಮತ್ತು ದಿನನಿತ್ಯದ ವ್ಯವಹಾರಗಳಲ್ಲಿ ಇತರರಿಂದ ಎದುರಾಗುವ ಯಾವುದೇ ಬಗೆಯ ತೊಂದರೆಗಳು.

೨. ಮಯ್ ಮನದಲ್ಲಿ ಕಂಡುಬರುವ ಲಕ್ಷಣಗಳು

Physiological and Psychological Attributions

ಮೇಲ್ಕಂಡ ಸನ್ನಿವೇಶಗಳಲ್ಲಿ ವ್ಯಕ್ತಿಯ ಮೆದುಳಿನ ನರಮಂಡಲದಲ್ಲಿರುವ ತಮಗೆ ತಾವಾಗಿಯೇ ಕ್ರಿಯಾಶೀಲವಾಗುವ ನರಕೋಶಗಳ ವ್ಯವಸ್ಥೆಯು **(Autonomous nervous system)** ದೇಹಕ್ಕೆ ಮುನ್ನೆಚ್ಚರಿಕೆಯನ್ನು ನೀಡುತ್ತದೆ. ಮರುಗಳಿಗೆಯಲ್ಲಿಯೇ ವ್ಯಕ್ತಿಯ ಅರಿವಿಗೆ ಬರುವುದಕ್ಕೆ ಮುಂಚಿತವಾಗಿಯೇ ಅಂತಹ ಸನ್ನಿವೇಶದಿಂದ ಪಾರಾಗಲು ಇಲ್ಲವೇ ಅದನ್ನು ಎದುರಿಸಲು ದೇಹ ತಯಾರಾಗುತ್ತದೆ.

ಉದಾಹರಣೆ: ಕಾಲ ಮೇಲೆ ಏನೋ ಹರಿದಂತೆ ಆದಾಗ, ಅದು ಏನೆಂದು ನೋಡುವುದಕ್ಕೆ ಮುನ್ನವೇ ಕಾಲನ್ನು ಎತ್ತಿ ಒದರುವುದು. ಇದು ದೇಹಕ್ಕೆ ಸಂಬಂಧಿಸಿದ ಪ್ರತಿಕ್ರಿಯೆಯಾದರೆ, ನುಡಿಯ ರೂಪದಲ್ಲಿ ಉದ್ಗಾರ ಸೂಚಕವಾಗಿ **‘ಹಾ... ಹೋ.....ಚೇ.....ತೂ...’** ಎಂಬ ಪ್ರತಿಕ್ರಿಯಾತ್ಮಕ ಧ್ವನಿಗಳು ಮತ್ತು **‘ದರಿದ್ರದ್ದೆ... ಹಾಳಾದ್ದೆ...ಎಕ್ಕುಟ್ಟೋದ್ದೆ...’** ಪದರೂಪದ ಬಯ್ಗುಳಗಳು ಹೊರಹೊಮ್ಮುತ್ತವೆ.

ಈ ಬಗೆಯ ಪ್ರತಿಕ್ರಿಯಾತ್ಮಕ ಧ್ವನಿಗಳು ಮತ್ತು ಬಿಡಿ ಬಿಡಿ ರೂಪದ ಬಯ್ಗುಳಗಳು ಹೊರಹೊಮ್ಮುವುದಕ್ಕೆ ಮೆದುಳಿನ ಬಲ ಅರೆಗೋಳದಲ್ಲಿರುವ ನರಕೋಶಗಳು ಕಾರಣವಾಗಿವೆ.

ಇದ್ದಕ್ಕಿದ್ದಂತೆಯೇ ಬಯ್ಯುವ ಸನ್ನಿವೇಶದ ಈ ಎರಡು ಹಂತಗಳಲ್ಲಿ ಮಾನವನ ಮೆದುಳಿನ ನರಮಂಡಲದ ಬಲ ಅರೆಗೋಳದ ಪಾತ್ರ ದೊಡ್ಡದಾಗಿದೆ. ಏಕೆಂದರೆ ಭಾವನೆಗಳನ್ನು ಹೊರಹಾಕುವ ಉದ್ಗಾರ ಸೂಚಕ ಧ್ವನಿಗಳ ಮತ್ತು ಬಯ್ಗುಳದ ಪದಗಳ ನರಕೋಶಗಳು ಬಲ ಅರೆಗೋಳದಲ್ಲಿವೆ. ವ್ಯಕ್ತಿಯು ಒಬ್ಬನೇ ಇದ್ದಾಗ ಬಯ್ಯುವ ಪ್ರಸಂಗಗಳಲ್ಲಿ ಇಲ್ಲವೇ ವ್ಯಕ್ತಿಯು ಆಡಿದ ಬಯ್ಗುಳಕ್ಕೆ ಯಾವುದೇ ಪ್ರತಿಕ್ರಿಯೆಯು ಯಾರಿಂದಲೂ ಬಾರದಿದ್ದಾಗ, ಬಯ್ಯುವಿಕೆಯು ಮತ್ತೆ ಮುಂದುವರಿಯುವುದಿಲ್ಲ.

ಉದ್ದೇಶಪೂರ್ವಕವಾಗಿ ಬಯ್ಯುವುದಕ್ಕೆ ತೊಡಗುವಾಗ ಅಂದರೆ ಇತರ ವ್ಯಕ್ತಿಗಳ ನಡೆನುಡಿಗಳಲ್ಲಿನ ಅರೆಕೊರೆಗಳನ್ನು ಎತ್ತಿ ಹಿಡಿದು ಹಂಗಿಸುವಾಗ, ತೆಗಳುವಾಗ ಇಲ್ಲವೇ ಇತರರನ್ನು ಮಾತಿನ ದಾಳಿಯ ಮೂಲಕವೇ ಹತೋಟಿಯಲ್ಲಿಟ್ಟುಕೊಳ್ಳಲು ಬಯ್ಗುಳವನ್ನು ಪ್ರಯೋಗಿಸುವಾಗ ವ್ಯಕ್ತಿಯ ಮೆದುಳಿನ ನರಮಂಡಲದಲ್ಲಿ ನಡೆಯುವ ಕ್ರಿಯೆಗಳನ್ನು ನರವಿಜ್ಞಾನಿಗಳು ಮುಂದಿನ ಮೂರು ಹಂತಗಳಲ್ಲಿ ವಿವರಿಸಿದ್ದಾರೆ.

೩. ತಡೆಯೊಡ್ಡುವುದು–Inhibition

ಸಾಮಾಜಿಕ ಸನ್ನಿವೇಶಗಳಲ್ಲಿ ವ್ಯಕ್ತಿಗೆ ಅನೇಕ ಬಗೆಯ ಎಡರುತೊಡರುಗಳು ಉಂಟಾಗಿ ಮಯ್ ಮನಕ್ಕೆ ಇತರರಿಂದ ಗಾಸಿಯಾದಾಗ, ದೊಡ್ಡ ಪ್ರಮಾಣದಲ್ಲಿ ಕೋಪ, ಹತಾಶೆ ಇಲ್ಲವೇ ಸಂಕಟ ಉಂಟಾಗಿದ್ದರೂ ಕೆಲವೊಮ್ಮೆ ಅದಕ್ಕೆ ಕಾರಣ ನಾಗಿರುವ ವ್ಯಕ್ತಿಯನ್ನು ಬಯ್ಯಲು ತೊಡಗದೆ, ಬಯ್ಯುವಿಕೆಯನ್ನು ನಿಯಂತ್ರಿಸಿಕೊಳ್ಳುತ್ತಾನೆ.

ಉದ್ದೇಶಪೂರ್ವಕವಾಗಿ ಬಯ್ಯುವುದಕ್ಕೆ ಮುನ್ನಿನ ಗಳಿಗೆಯಲ್ಲಿ **"ಈ ಬಗೆಯ ಸಾಮಾಜಿಕ ಸನ್ನಿವೇಶದಲ್ಲಿ ಇಂತಹ ವ್ಯಕ್ತಿಯನ್ನು ನಾನು ಬಯ್ಯುವುದು ಸರಿಯಾಗುತ್ತದೆಯೋ ಇಲ್ಲವೇ ತಪ್ಪಾಗುವುದೋ"** ಎಂಬುದನ್ನು ವ್ಯಕ್ತಿಯು ತನ್ನ ಮನದಲ್ಲಿಯೇ ಅಳೆದು ಸುರಿದು ನೋಡುತ್ತಾನೆ. ತಾನು ಯಾರಿಗೆ ಬಯ್ಯ ಬೇಕೆಂದಿರುವನೋ ಆ ವ್ಯಕ್ತಿಯ ದೇಹದ ಕಸುವು ಹಾಗೂ ವಯಸ್ಸಿನ ಜೈವಿಕ ಸಂಗತಿಗಳು ಮತ್ತು ಆ ವ್ಯಕ್ತಿಯ ಜಾತಿ, ಮತ, ಲಿಂಗ, ವರ್ಗ ಮತ್ತು ಹೊಂದಿರುವ ಹುದ್ದೆ ಮುಂತಾದ ಸಾಮಾಜಿಕ ಸಂಗತಿಗಳೆಲ್ಲವೂ ಈಗ ಪರಿಗಣನೆಗೆ ಬರುತ್ತವೆ. ಏಕೆಂದರೆ ಕೆಲವೊಮ್ಮೆ ಬಯ್ಯಿಸಿಕೊಂಡವರು ತಿರುಗಿಬಿದ್ದರೆ ಆಗ ಅವರು ತನ್ನ ಮಯ್ ಮೇಲೆ ಹಲ್ಲೆ ಮಾಡಬಹುದು ಇಲ್ಲವೇ ಅದಕ್ಕಿಂತ ದೊಡ್ಡ ಹಾನಿ ಅವರಿಂದ ಉಂಟಾಗಬಹುದು. ತನಗೆ ಯಾವುದೇ ಬಗೆಯ ತೊಂದರೆಯಾಗ ದಂತಿದ್ದಾಗ ಬಯ್ಯುವ ಇಲ್ಲವೇ ಅಪಾಯ ಉಂಟಾಗುವಂತಿದ್ದರೆ ಬಯ್ಯದಿರುವ ತೀರ್ಮಾನವನ್ನು ವ್ಯಕ್ತಿಯು ಈ ಹಂತದಲ್ಲಿ ಕಯ್ಗೊಳ್ಳುತ್ತಾನೆ.

ಈ ಬಗೆಯ ತೀರ್ಮಾನವನ್ನು ವ್ಯಕ್ತಿಯು ಕಯ್ಗೊಳ್ಳುವುದಕ್ಕೆ ಮೆದುಳಿನ ಎಡ ಅರೆಗೋಳದ ಮುಂಚೂಣಿಯಲ್ಲಿರುವ 'ಫ್ರಂಟಲ್ ಲೋಬ್' ನರಕೋಶಗಳು ನೆರವಾಗುತ್ತವೆ. ವ್ಯಕ್ತಿಯು ತನ್ನ ದಿನನಿತ್ಯದ ವ್ಯವಹಾರಗಳಲ್ಲಿ **"ಯಾವ ಯಾವ ಎಡೆಯಲ್ಲಿ, ಯಾವ ಯಾವ ಸಮಯದಲ್ಲಿ, ಯಾವ ಯಾವ ವ್ಯಕ್ತಿಗಳೊಡನೆ ಹೇಗೆ ನಡೆದುಕೊಳ್ಳಬೇಕು ಇಲ್ಲವೇ ಹೇಗೆ ನಡೆದುಕೊಳ್ಳಬಾರದು"** ಎಂಬ ಸಾಮಾಜಿಕ ಅರಿವು ಮತ್ತು ಎಚ್ಚರವನ್ನು ನೀಡುವಂತಹ ನರಕೋಶಗಳು 'ಫ್ರಂಟಲ್ ಲೋಬ್'ನಲ್ಲಿ ಇವೆ.

೪. ತಡೆಯಿಲ್ಲದೆ ಮುಂದುವರಿಯುವುದು–Disinhibition

ಇತರರ ಮೇಲೆ ಮಾತಿನ ದಾಳಿಯನ್ನು ನಡೆಸಬಲ್ಲೆನು ಮತ್ತು ಆ ಬಗೆಯ ಕಸುವು ನನ್ನಲ್ಲಿದೆ ಎಂಬ ತೀರ್ಮಾನವನ್ನು ಕಯ್ಗೊಂಡ ವ್ಯಕ್ತಿಯು ಈಗ ಬಯ್ಯುವಿಕೆಯಲ್ಲಿ ತೊಡಗುತ್ತಾನೆ. ನಾನಾ ಬಗೆಯ ಬಯ್ಗುಳಗಳ ಮೂಲಕ ಎದುರಾಳಿಯನ್ನು ಕಂಗೆಡಿಸುವ ಇಲ್ಲವೇ ಇತರರನ್ನು ತನ್ನ ಇಚ್ಚೆಗೆ ತಕ್ಕಂತೆ ನಡೆಸಿಕೊಳ್ಳಲು ಬಯ್ಗುಳಗಳನ್ನು ಆಡತೊಡಗುತ್ತಾನೆ.

ಉದ್ದೇಶಪೂರ್ವಕವಾಗಿ ಬಯ್ಯುವಾಗ ಭಾವನೆಗಳನ್ನು ಹೊರಹೊಮ್ಮಿಸುವ ಮೆದುಳಿನ ಬಲ ಅರೆಗೋಳದ ನರಕೋಶಗಳು, ಬಯ್ಗುಳದ ಪದ ಮತ್ತು ವಾಕ್ಯಗಳನ್ನು ನುಡಿಯಲು ನೆರವಾಗುವ ಮೆದುಳಿನ ಎಡ ಅರೆಗೋಳದ ಬ್ರೋಕ ಮತ್ತು ವರ್ನಿಕೆಯ ಜಾಗದ ನರಕೋಶಗಳು ಮತ್ತು ವಿವೇಕದ ನಡೆನುಡಿಗಳಿಗೆ ಕಾರಣವಾಗುವ ಫ್ರಂಟಲ್ ಲೋಬಿನ ನರಕೋಶಗಳೆಲ್ಲವೂ ಜತೆಗೂಡಿ ಕ್ರಿಯಾಶೀಲವಾಗಿರುತ್ತವೆ. ಉದ್ದೇಶ ಪೂರ್ವಕವಾಗಿ ಬಯ್ಯುತ್ತಿರುವಾಗ ಮೆದುಳಿನ ಕೇಂದ್ರ ನರಮಂಡಲದ ನರಕೋಶ ಗಳೆಲ್ಲವೂ (Central Nervous System) ಜತೆಗೂಡಿ ಕೆಲಸ ಮಾಡುತ್ತಿರುತ್ತವೆ.

೫. ಪ್ರತೀಕಾರ– Retribution

'ಪ್ರತೀಕಾರ' ಎಂದರೆ ಬಯ್ಯುವಿಕೆಯ ಪ್ರಸಂಗದಲ್ಲಿ ವ್ಯಕ್ತಿಗಳ ಮಯ್ ಮನದಲ್ಲಿ ಉಂಟಾದ ಪರಿಣಾಮಗಳು ಯಾವುವು ಎಂಬುದನ್ನು ತಿಳಿಯುವುದು. ಬಯ್ದ ಮತ್ತು ಬಯ್ಯಿಸಿಕೊಂಡ ವ್ಯಕ್ತಿಗಳ ಮನಸ್ಸಿನ ಮೇಲೆ ಆ ಸನ್ನಿವೇಶದಲ್ಲಿ ಬಳಕೆಯಾದ ಬಯ್ಗುಳಗಳು ಬಹುಬಗೆಯ ಪರಿಣಾಮಗಳನ್ನು ಬೀರುತ್ತವೆ.

ವ್ಯಕ್ತಿಗಳ ನಡುವೆ ನಡೆದ ಮಾತಿನ ದಾಳಿಯ ಸನ್ನಿವೇಶದಲ್ಲಿ ಬಳಕೆಯಾದ ಬಯ್ಗುಳದ ನುಡಿಗಳಿಂದ ಬಯ್ದವರ ಮತ್ತು ಬಯ್ಯಸಿಕೊಂಡವರ ಮಯ್ ಮನದ ಮೇಲೆ ಉಂಟಾಗುವ ಪರಿಣಾಮವನ್ನು ಹೀಗೆ ಎಂದು ಹೇಳಲು ಆಗುವುದಿಲ್ಲ. ಏಕೆಂದರೆ ಅದು ವ್ಯಕ್ತಿಗತವಾದ ನೆಲೆಯಲ್ಲಿ ನಡೆಯುವ ಪ್ರಕ್ರಿಯೆಯಾಗಿರುತ್ತದೆ.

ಬಯ್ದ ವ್ಯಕ್ತಿಗೆ ತನಗೆ ಉಂಟಾಗಿದ್ದ ಕೋಪವನ್ನು ಇಲ್ಲವೇ ಹತಾಶೆಯನ್ನು ಹೊರಹಾಕಿ, ಅದಕ್ಕೆ ಕಾರಣನಾದ ವ್ಯಕ್ತಿಯನ್ನು ಬಯ್ಗುಳದಿಂದಲೇ ಸದೆಬಡಿದ ನೆಮ್ಮದಿ ದೊರಕಬಹುದು. **"ಅವನಿಗೆ ಚೆನ್ನಾಗಿ ಅಂದು ಆಡಿ ಅವನ ಮೊಕದ ನೀರ್ ಇಳಿಸ್ಬುಟ್ಟೆ. ಇನ್ನು ಯಾವತ್ತು ಎಲ್ಲೂ ಸರೀಕರ ಮುಂದೆ ಮೊಕ ಎತ್ಕೊಂಡು ತಿರುಗಾಡಬಾರದು ಹಂಗೆ ಬಯ್ದು ಕಳಿಸ್ದೆ"** ಎಂದು ಹೆಮ್ಮೆಯಿಂದ ಇತರರ ಮುಂದೆ ತಾವು ಬಯ್ದ ಪ್ರಸಂಗವನ್ನು ಹೊಗಳಿಕೊಳ್ಳುವವರು ಇದ್ದಾರೆ.

ಕೆಲವೊಮ್ಮೆ ಬಯ್ಯಿಸಿಕೊಂಡ ವ್ಯಕ್ತಿಯು ಪ್ರತಿಯಾಗಿ ಬಯ್ಯಲು ತೊಡಗಿದರೆ, ಆಗ ಸನ್ನಿವೇಶವು ವಿಕೋಪಕ್ಕೆ ತಿರುಗಿ, ಮೊದಲು ಬಯ್ಯಲು ತೊಡಗಿದವನ ಮನಸ್ಸು ಇನ್ನೂ ಹೆಚ್ಚಿನ ಗಾಸಿಗೆ ಒಳಗಾಗಬಹುದು.

ಬಯ್ಯಸಿಕೊಂಡ ವ್ಯಕ್ತಿಯ ಮನಸ್ಸಿನ ಮೇಲೆ ಉಂಟಾದ ಪರಿಣಾಮಗಳು ಬೇರೆ ಬೇರೆ ಬಗೆಯಲ್ಲಿರುತ್ತವೆ. ಬಯ್ದವನ ಮತ್ತು ಬಯ್ಯಸಿಕೊಂಡ ವ್ಯಕ್ತಿಯ ನಡುವಣ ಸಾಮಾಜಿಕ ನಂಟು (Social Relation) ಮತ್ತು ಅಧಿಕಾರದ ನಂಟು (Power Relation) ಯಾವ ಬಗೆಯದು ಎಂಬುದರ ನೆಲೆಯಲ್ಲಿ ಬಯ್ಯುವಿಕೆಯ ಪರಿಣಾಮದ ಸ್ವರೂಪ ಇರುತ್ತದೆ.

೫. ಬಯ್ಯುವಿಕೆ : ಮಾನಸಿಕ ಬೆಳವಣಿಗೆ

"ನಾವೇಕೆ ಬಯ್ಯುತ್ತೇವೆ ಇಲ್ಲವೇ ಜನರೇಕೆ ಬಯ್ಯುತ್ತಾರೆ" ಎಂಬುದನ್ನು ತಿಳಿಯಬೇಕಾದರೆ ಮಿದುಳಿನ ನರಮಂಡಲ ಪ್ರಕ್ರಿಯೆಗಳು, ಸಾಮಾಜಿಕ ಕಟ್ಟುಪಾಡುಗಳು ಮತ್ತು ಸಾಂಸ್ಕೃತಿಕ ಸಂಗತಿಗಳೊಡನೆ ಮಾನಸಿಕ ಸಂಗತಿಗಳು ಹೇಗೆ ಜತೆಗೂಡಿವೆ ಎಂಬುದನ್ನು ಮನದಟ್ಟುಮಾಡಿಕೊಳ್ಳಬೇಕು. ಈಗಾಗಲೇ ಮಿದುಳಿನ ನರಮಂಡಲ ಪ್ರಕ್ರಿಯೆಗಳು ಹೇಗೆ ಇದ್ದಕ್ಕಿದ್ದಂತೆಯೇ ಬಯ್ಯುವಿಕೆಗೆ ಮತ್ತು ಉದ್ದೇಶಪೂರ್ವಕವಾಗಿ ಬಯ್ಯುವಿಕೆಗೆ ಕಾರಣವಾಗಿವೆ ಎಂಬುದನ್ನು ತಿಳಿದಿದ್ದೇವೆ. ಇದೀಗ ಬಯ್ಯುವಿಕೆಗೆ ಕಾರಣವಾಗುವ ಮಾನಸಿಕ ಬೆಳವಣಿಗೆಯನ್ನು ಕುರಿತು ವಿಜ್ಞಾನಿಗಳು ವಿವರಿಸಿರುವ ಸಂಗತಿಗಳನ್ನು ತಿಳಿಯೋಣ.

ಕುಟುಂಬದ ನೆಲೆ, ದುಡಿಮೆಯ ನೆಲೆ ಮತ್ತು ಸಾರ್ವಜನಿಕ ನೆಲೆಗಳಲ್ಲಿ ಬೇರೆ ಬೇರೆ ಪ್ರಮಾಣಗಳಲ್ಲಿ ಬಯ್ಯುವಿಕೆಯಲ್ಲಿ ತೊಡಗಿರುವವರನ್ನು ನಾವು ನಮ್ಮ ನಿತ್ಯ ಜೀವನದ ವ್ಯವಹಾರಗಳಲ್ಲಿ ನೋಡುತ್ತಿರುತ್ತೇವೆ. ಕೆಲವರು ಮಾತಿಗೆ ಮುಂಚೆ ಬಯ್ಯುತ್ತಾರೆ; ಕೆಲವರು ಸಮಯ ಮತ್ತು ಸನ್ನಿವೇಶವನ್ನು ಗಮನಿಸಿ ಮಿತವಾಗಿ ಬಯ್ಗುಳದ ನುಡಿಗಳನ್ನಾಡುತ್ತಾರೆ; ಮತ್ತೆ ಕೆಲವರು ಸಮಯ ಸಂದರ್ಭವನ್ನು ಲೆಕ್ಕಿಸದೆ ಬಾಯಿಗೆ ಬಂದಂತೆ ಬಯ್ಯುತ್ತಲೇ ಇರುತ್ತಾರೆ; ಇನ್ನು ಕೆಲವರು ಕೋಪ, ಸಂಕಟ ಇಲ್ಲವೇ ಹತಾಶೆಗೆ ಒಳಗಾದರೂ ಬಯ್ಗುಳದ ನುಡಿಯನ್ನು ಜೋರಾಗಿ ಆಡದೆ, ತಮ್ಮಲ್ಲಿಯೇ ಗೊಣಗಿಕೊಂಡು ಇಲ್ಲವೇ ಇತರರಿಗೆ ಕೇಳಿಸದಂತೆ ಬಯ್ಯುತ್ತಾರೆ. ಕೆಲವೊಮ್ಮೆ ಒಬ್ಬನೇ ವ್ಯಕ್ತಿಯು ತನ್ನ ಜೀವನದ ಬೇರೆ ಬೇರೆ ಸಾಮಾಜಿಕ ಸಂದರ್ಭಗಳಲ್ಲಿ ಈ ಎಲ್ಲಾ ಬಗೆಯಲ್ಲಿಯೂ ಬಯ್ಯುವ ಇಲ್ಲವೇ ಬಯ್ಯದೆ ಸುಮ್ಮನಿರುವ ವರ್ತನೆಯು ಕಂಡು ಬರುತ್ತದೆ. ವ್ಯಕ್ತಿಯಲ್ಲಿ ಕಂಡುಬರುವ ಬಹುಬಗೆಯ ಬಯ್ಯುವಿಕೆಯ ವರ್ತನೆಗೆ ಕಾರಣವನ್ನು ವಿಜ್ಞಾನಿಗಳು ವ್ಯಕ್ತಿಯ

ಮಾನಸಿಕ ಬೆಳವಣಿಗೆಯ ಸ್ವರೂಪದಲ್ಲಿ ಗುರುತಿಸಿದ್ದಾರೆ.

ಪ್ರತಿಯೊಂದು ಬಯ್ಗುಳದ ಪ್ರಸಂಗದಲ್ಲಿಯೂ ಗಂಡಸಾಗಲಿ ಇಲ್ಲವೇ ಹೆಂಗಸಾಗಲಿ, ಅವನು/ಅವಳು ಆಡುವ ಬಯ್ಗುಳದ ನುಡಿಗಳು ಮತ್ತು ಬಯ್ಯುವ ರೀತಿಯು ಅಂದರೆ ಬಯ್ಯುವಿಕೆಯಲ್ಲಿ ತೊಡಗುವುದು ಇಲ್ಲವೇ ಬಯ್ಯುವಿಕೆಯನ್ನು ನಿಯಂತ್ರಿಸಿಕೊಳ್ಳುವುದು ಅವರು ಮಾನಸಿಕವಾಗಿ ಬೆಳವಣಿಗೆಯನ್ನು ಪಡೆದು ರೂಪಿಸಿಕೊಂಡಿರುವ ವ್ಯಕ್ತಿತ್ವಕ್ಕೆ ಅನುಗುಣವಾಗಿರುತ್ತದೆ. ಮಾನಸಿಕ ಬೆಳವಣಿಗೆಯ ಸ್ವರೂಪವು ವ್ಯಕ್ತಿಯಿಂದ ವ್ಯಕ್ತಿಗೆ ಬೇರೆ ಬೇರೆ ರೀತಿಯಲ್ಲಿರುತ್ತದೆ.

ಮಾನವ ಜೀವಿಯ ಮೆದುಳಿನ ನರಮಂಡಲದಲ್ಲಿನ ನರಕೋಶಗಳ ಮತ್ತು ನರಬಳ್ಳಿಯ ಹೆಣಿಗೆಯು ಒಂದೇ ಬಗೆಯಲ್ಲಿದ್ದರೂ, ವ್ಯಕ್ತಿಗಳ ಮನದಲ್ಲಿ ಮಿಡಿಯುವ ಭಾವನೆಗಳು ಮತ್ತು ವ್ಯಕ್ತಿಗಳ ಸಾಮಾಜಿಕ ನಡೆನುಡಿಗಳು ಬೇರೆ ಬೇರೆ ಬಗೆಯಲ್ಲಿರುತ್ತವೆ. ಈ ಜಗತ್ತಿನಲ್ಲಿ ಪ್ರತಿಯೊಬ್ಬ ವ್ಯಕ್ತಿಯು ಉಣ್ಣುವ ಆಹಾರ ಪದಾರ್ಥಗಳು, ಉಡುವ ಬಟ್ಟೆ, ಹುಟ್ಟಿನಿಂದ ಹಿಡಿದು ಸಾವಿನ ತನಕ ಪಾಲ್ಗೊಳ್ಳುವ ಮದುವೆ, ತಿಥಿ, ದೇವರ ಪೂಜೆ ಮುಂತಾದ ಆಚರಣೆಗಳು, ಅನುಸರಿಸುವ ಸಂಪ್ರದಾಯಗಳು ಮತ್ತು ಹೊಂದಿರುವ ನಂಬಿಕೆಗಳೆಲ್ಲವೂ ಅವನು/ಅವಳು ಹುಟ್ಟಿ ಬೆಳೆದು ಬಾಳುತ್ತಿರುವ ಕುಟುಂಬದ ಜಾತಿಯ ಮತ್ತು ಮತದ ಸಂಪ್ರದಾಯಗಳಿಗೆ ಹಾಗೂ ಕಟ್ಟುಪಾಡುಗಳಿಗೆ ಒಳಪಟ್ಟಿರುತ್ತದೆ.

ಪ್ರತಿಯೊಬ್ಬ ವ್ಯಕ್ತಿಯು ಲೋಕವನ್ನು ನೋಡುವ ಬಗೆ, ಲೋಕದ ಬಗ್ಗೆ ಮನದಲ್ಲಿ ತುಡಿಯುವ ಭಾವನೆ, ಮಾಡುವ ಚಿಂತನೆ ಮತ್ತು ತಳೆಯುವ ನಿಲುವು ಅವನ/ಅವಳ ಜಾತಿ ಧರ್ಮದ ಚೌಕಟ್ಟಿನಲ್ಲಿಯೇ ರೂಪುಗೊಂಡಿರುತ್ತದೆ. ಆದ್ದರಿಂದಲೇ ಬಹುತೇಕ ಮಂದಿಯ ಬದುಕಿನಲ್ಲಿ ಹುಟ್ಟಿನಿಂದ ಬಂದ ಜಾತಿ ಇಲ್ಲವೇ ಧರ್ಮದ ಕಟ್ಟುಪಾಡುಗಳು ಸಾವಿನ ತನಕ ಜತೆಜತೆಯಲ್ಲಿಯೇ ಇರುತ್ತವೆ. ಇದರ ಜತೆಜತೆಗೆ ಕುಟುಂಬವು ಹೊಂದಿರುವ ಸಂಪತ್ತಿನ ಪ್ರಮಾಣ, ವ್ಯಕ್ತಿಯು ಬೆಳೆದು ಬಾಳುವ ಪ್ರದೇಶದಲ್ಲಿನ ನಿಸರ್ಗದ ಆಗುಹೋಗುಗಳು ಮತ್ತು ಸುತ್ತಮುತ್ತಣ ಸಾಮಾಜಿಕ ಪರಿಸರದ ಜೀವನದ ಪದ್ಧತಿಗಳೆಲ್ಲವೂ ಒಟ್ಟುಗೂಡಿ ವ್ಯಕ್ತಿಯ ಮಾನಸಿಕ ಬೆಳವಣಿಗೆಗೆ ಕಾರಣವಾಗುವುದರ ಜತೆಗೆ ಅವನದೇ ಇಲ್ಲವೇ ಅವಳದೇ ಆದ ಸಾಮಾಜಿಕ ವ್ಯಕ್ತಿತ್ವವನ್ನು ರೂಪಿಸುತ್ತವೆ.

ವ್ಯಕ್ತಿಯ ಸಾಮಾಜಿಕ ವ್ಯಕ್ತಿತ್ವ ರೂಪುಗೊಳ್ಳುವಾಗ ಮಗು ಪಡೆದುಕೊಳ್ಳುವ ತಾಯ್ನುಡಿಯ ಪಾತ್ರ ಬಹು ದೊಡ್ಡದು. ಏಕೆಂದರೆ ನುಡಿಯ ಮೂಲಕ ಮಗು ಬೆಳೆಬೆಳೆಯುತ್ತ ತನ್ನ ಕಣ್ಣ ಮುಂದಿನ ಜಗತ್ತಿನಲ್ಲಿರುವ ವಸ್ತುಗಳ ಮತ್ತು ಜೀವಿಗಳ ಸ್ವರೂಪ ಹಾಗೂ ಗುಣವನ್ನು ಗ್ರಹಿಸಿಕೊಳ್ಳುತ್ತ ಅರಿವನ್ನು ಪಡೆಯುತ್ತದೆ. ತಾನು ಪಡೆದ ಅರಿವಿನಿಂದ ನುಡಿಯ ಮೂಲಕವೇ ಜಗತ್ತಿನೊಡನೆ ವ್ಯವಹರಿಸುತ್ತದೆ. ಈ

ಹಿನ್ನೆಲೆಯಲ್ಲಿ ವಿಜ್ಞಾನಿಗಳು ಬಯ್ಯುವಿಕೆಗೆ ಕಾರಣವಾಗುವ ಮೂರು ಬಗೆಯ ಮಾನಸಿಕ ಸಂಗತಿಗಳನ್ನು ಈ ಕೆಳಕಂಡಂತೆ ಗುರುತಿಸಿದ್ದಾರೆ.

೧. ಬಯ್ಗುಳದ ನುಡಿಯ ಗಳಿಕೆ ಮತ್ತು ಅರಿವಿನ ಬೆಳವಣಿಗೆ

ಯಾವುದೇ ಒಂದು ನುಡಿ ಸಮುದಾಯದಲ್ಲಿ ಹುಟ್ಟಿ ಬೆಳೆಯುವ ಮಗು ತನ್ನ ತಾಯ್ನುಡಿಯನ್ನು ತನ್ನದಾಗಿಸಿಕೊಳ್ಳುತ್ತಿರುವ ಹಂತದಲ್ಲಿಯೇ ಬಯ್ಗುಳದ ನುಡಿಗಳನ್ನು ಪಡೆದುಕೊಳ್ಳುತ್ತಿರುತ್ತದೆ. ತನ್ನ ಸುತ್ತಮುತ್ತಣ ಪರಿಸರದಲ್ಲಿ ಅಂದರೆ ಕುಟುಂಬದ ನೆಲೆಯಲ್ಲಿ, ಸಮಾನ ವಯಸ್ಸಿನ ಜತೆಗಾರರಲ್ಲಿ, ನೆರೆಹೊರೆಯಲ್ಲಿ ಮತ್ತು ಬೀದಿಯಲ್ಲಿ ಕೇಳಿಬರುತ್ತಿರುವ ಬಯ್ಗುಳದ ನುಡಿಗಳು ಮಗುವಿನ ಮನದಲ್ಲಿ ನೆಲೆಯೂರುತ್ತಿರುತ್ತವೆ. ಆದರೆ ನಾಲ್ಕಾರು ವರ್ಷದ ಮಕ್ಕಳು ಒಂದೆರಡು ಬಯ್ಗುಳದ ಪದಗಳನ್ನು ಆಡುತ್ತಿದ್ದರೂ, ಆ ಪದಗಳ ತಿರುಳು ಏನೆಂಬುದು ಮಕ್ಕಳಿಗೆ ಗೊತ್ತಿರುವುದಿಲ್ಲ. ಏಕೆಂದರೆ ಆ ಹಂತದಲ್ಲಿ ಮಕ್ಕಳು ದಿನನಿತ್ಯದ ಮಾತಿನ ಸನ್ನಿವೇಶ ಗಳಲ್ಲಿ ಯಾವ ಬಗೆಯ ಮಾತುಗಳನ್ನು ಆಡಬೇಕು ಇಲ್ಲವೇ ಆಡಬಾರದು ಎಂಬ ಸಾಮಾಜಿಕ ಅರಿವನ್ನು ಮತ್ತು ಎಚ್ಚರವನ್ನು ಹೊಂದಿರುವುದಿಲ್ಲ. ಉದಾಹರಣೆಯಾಗಿ ಈ ಕೆಳಕಂಡ ಒಂದು ಪ್ರಸಂಗವನ್ನು ಗಮನಿಸೋಣ.

ಮನೆಯಲ್ಲಿ ನಾಲ್ಕು ವರ್ಷದ ಪುಟ್ಟ ಬಾಲಕ ರಾಜೇಶನು ಎಲ್ಲರ ಕಣ್ಮಣಿ ಯಾಗಿದ್ದ. ಹರಳು ಹುರಿದಂತೆ ಮಾತನಾಡುವ ರಾಜೇಶನ ಮಾತುಗಳನ್ನು ಕೇಳುತ್ತಾ ನಕ್ಕು ನಲಿಯುವುದರ ಜತೆಗೆ, ಇಷ್ಟು ಚಿಕ್ಕ ವಯಸ್ಸಿನಲ್ಲಿಯೇ ಬಹಳ ಸೊಗಸಾಗಿ ಮಾತನಾಡುವುದರ ಬಗ್ಗೆ ಮನೆಮಂದಿಯೆಲ್ಲ ತುಂಬಾ ಹೆಮ್ಮೆ ಪಡುತ್ತಿದ್ದರು. ಒಂದು ದಿನ ರಾಜೇಶನ ತಾಯಿಯನ್ನು ನೋಡಲೆಂದು ಇಬ್ಬರು ಹೆಂಗಸರು ರಾಜೇಶನ ಮನೆಗೆ ಬಂದರು. ಸುಮಾರು ಇಪ್ಪತ್ತಯ್ದು ಮೂವತ್ತು ವಯಸ್ಸಿನ ಈ ಅಕ್ಕತಂಗೆಯರು ರೂಪದಲ್ಲಿ ಒಬ್ಬರನ್ನೊಬ್ಬರು ಬಹಳವಾಗಿ ಹೋಲುತ್ತಿದ್ದರು. ರಾಜೇಶನ ತಾಯಿಗೆ ಮೊನ್ನೆ ದೇಗುಲವೊಂದರಲ್ಲಿ ಹೊಸದಾಗಿ ಪರಿಚಯವಾಗಿದ್ದ ಇವರು, ಇದೇ ಮೊದಲ ಬಾರಿಗೆ ರಾಜೇಶನ ಮನೆಗೆ ಬಂದಿದ್ದರು. ತಿಂಡಿ ಕಾಫಿಯನ್ನು ನೀಡಿ, ಅವರೊಡನೆ ಮಾತನಾಡುತ್ತ ಕುಳಿತಿದ್ದಾಗ, ಹೊರಗಡೆ ಆಟವಾಡಿಕೊಂಡು ಮನೆಗೆ ಬಂದ ರಾಜೇಶ, ತನ್ನ ತಾಯಿಯ ಜತೆಯಲ್ಲಿದ್ದ ಹೆಂಗಸರನ್ನು ಕಂಡು ಕುತೂಹಲದಿಂದ–

"ಅಮ್ಮ ಅಮ್ಮ ಇವರು ಯಾರಮ್ಮ" ಎಂದು ಕೇಳಿದ.

"ನಿಮ್ಮ ಅತ್ತೆದೀರು ಕಣಪ್ಪ."

"ಇಬ್ಬರು ಒಂದೇ ತರ ಅವ್ರೆ"

"ಅಕ್ಕತಂಗೇರು ಕಣಪ್ಪ."

"ಹಂಗಾದ್ರೆ ಅಕ್ಕತಂಗೇರು ಕತ್ತೆಮುಂಡೇರು." ಎಂದನು.

ರಾಜೇಶನು ಆಡಿದ ಮಾತುಗಳನ್ನು ಕೇಳಿ ಆ ಹೆಂಗಸರು ಮಾನಸಿಕವಾಗಿ ತುಂಬಾ ಗಾಸಿಗೊಂಡರು. ತಾಯಿಯು ಮಗನ ಕೆನ್ನೆಗೆ ಚಟೀರ್ ಎಂದು ಬಾರಿಸಿ–

"ಎಲ್ಲೊ ಕಲಿತೆ ಇಂತಹ ಕೆಟ್ಟ ಮಾತುಗಳನ್ನ" ಎಂದು ಅಬ್ಬರಿಸಿದರು. ಪೆಟ್ಟನ್ನು ತಿಂದ ರಾಜೇಶನು–

"ಅಜ್ಜಿ ಅವತ್ತು ನಿಮ್ ಜೊತೇನೆ ಹೇಳ್ತಿರಿಲಿಲ್ವ... ಅಕ್ಕತಂಗೇರು ಕತ್ತೆಮುಂಡೇರು ಅಂತ"

ಎಂದು ಹೇಳುತ್ತ ಅಳಲು ತೊಡಗಿದ.

ನಡೆದಿದ್ದ ಪ್ರಸಂಗ ಏನೆಂದರೆ ಮೊನ್ನೆ ಹಳ್ಳಿಯಿಂದ ಬಂದಿದ್ದ ರಾಜೇಶನ ಅಜ್ಜಿಯು ಮಗಳೊಡನೆ ತಮ್ಮ ಊರಿನ ಮನೆಯೊಂದರ ಆಗುಹೋಗುಗಳನ್ನು ಕುರಿತು ಮಾತನಾಡುತ್ತ, ಆ ಮನೆಗೆ ಸೊಸೆಯಂದಿರಾಗಿ ಬಂದ ಅಕ್ಕತಂಗಿಯರು ಈಗ ಪರಸ್ಪರ ಗುದ್ದಾಡಿಕೊಂಡು, ಮನೆತನದ ನಾಶಕ್ಕೆ ಕಾರಣವಾಗುತ್ತಿರುವುದನ್ನು ವಿವರಿಸುತ್ತ **"ಅಕ್ಕತಂಗೇರು ಕತ್ತೆ ಮುಂಡೇರು"** ಎಂದು ಅವರ ಊರಿನ ಇಬ್ಬರು ಹೆಂಗಸರನ್ನು ಬಯ್ದಿದ್ದರು. ಇವರ ಮಾತುಗಳನ್ನು ಕೇಳಿಸಿಕೊಂಡಿದ್ದ ರಾಜೇಶನು ಇಂದು ಆ ಪದಗಳನ್ನು ಮತ್ತೆ ಈ ಸನ್ನಿವೇಶದಲ್ಲಿ ಆಡಿದ್ದನು. ತಟ್ಟನೆ ಈ ಪ್ರಸಂಗವನ್ನು ನೆನಪಿಸಿಕೊಂಡ ರಾಜೇಶನ ತಾಯಿಯು ತನ್ನ ಮಗನ ಬಾಯಲ್ಲಿ ಬಂದಿದ್ದ ಬಯ್ಗುಳದ ಪದಗಳಿಗೆ ಕಾರಣ ವಾಗಿದ್ದ ಸನ್ನಿವೇಶವನ್ನು ಆ ಹೆಂಗಸರಿಗೆ ಮತ್ತೊಮ್ಮೆ ವಿವರಿಸಿದರು. ಹಿರಿಯ ರಾಡಿದ್ದ ಬಯ್ಗುಳದ ಪದಗಳ ತಿರುಳನ್ನು ತಿಳಿಯದೆ ಹುಡುಗನು ಮಾತನಾಡಿದ್ದನ್ನು ಅರಿತ ಆ ಹೆಂಗಸರು ಈಗ ರಾಜೇಶನತ್ತ ನೋಡುತ್ತ ಮುಗುಳ್ ನಕ್ಕರು.

'ಕತ್ತೆಮುಂಡೇರು' ಎಂಬ ಪದ ಬಯ್ಗುಳವೆಂಬುದು ಈಗ ರಾಜೇಶನಿಗೆ ತಿಳಿದು ಬಂದರೂ, ಅದರ ತಿರುಳೇನು ಎಂಬ ಅರಿವು ಅವನಿಗೆ ಇನ್ನೂ ಬಂದಿಲ್ಲ. ಮಗುವಿನ ಹಂತವನ್ನು ದಾಟಿ, ಬಾಲ್ಯ ಮತ್ತು ಪ್ರಾಯದ ಹಂತವನ್ನು ಮುಟ್ಟುವ ವೇಳೆಗೆ ವ್ಯಕ್ತಿಗೆ ಬಯ್ಗುಳದ ಪದಕ್ಕೆ ಇರುವ ತಿರುಳು ಮತ್ತು ಅದರೊಡನೆ ಸೇರಿರುವ ಒಳಮಿಡಿತದ ಸಂಗತಿಗಳ ಸ್ವರೂಪದ ಅರಿವಾಗತೊಡಗುತ್ತದೆ. ಆದ್ದರಿಂದಲೇ ಚಿಕ್ಕಂದಿನಲ್ಲಿ ಕೋಪ ಇಲ್ಲವೇ ಹತಾಶೆಯಿಂದ ಅಳುತ್ತಿದ್ದ, ಕಿರುಚುತ್ತಿದ್ದ ಇಲ್ಲವೇ ಸಣ್ಣಪುಟ್ಟ ವಸ್ತುಗಳನ್ನು ಮುರಿದು ಅತ್ತಿತ್ತ ಎಸೆಯುತ್ತ ತನ್ನ ಭಾವನೆಗಳನ್ನು ಹೊರಹಾಕುತ್ತಿದ್ದ ಮಗು ವಯಸ್ಸಾದಂತೆಲ್ಲಾ ಬಯ್ಗುಳದ ಪದಗಳನ್ನು ಆಡಲು ತೊಡಗುತ್ತದೆ.

ತನ್ನ ಕಣ್ಣ ಮುಂದಿನ ಸಮಾಜದಲ್ಲಿ ನಡೆಯುತ್ತಿರುವುದನ್ನು ನೋಡಿ ಕೇಳಿ

ಗಮನಿಸಿ ಎಲ್ಲವನ್ನೂ ಅರಿತುಕೊಳ್ಳುವ ಮಗು **"ಜನರು ಹೇಗೆ ಬಯ್ಯುತ್ತಾರೆ? ಹಾಗೆ ಬಯ್ದಾಗ ಅವರಿಗೆ ಏನಾಯಿತು... ಬಯ್ದ ಮತ್ತು ಬಯ್ಯಿಸಿಕೊಂಡ ವ್ಯಕ್ತಿಗಳ ನಡೆನುಡಿಗಳ ರೀತಿ ಹೇಗಿತ್ತು... ಯಾವ ಬಗೆಯ ಬಯ್ಯುವಿಕೆಗೆ ಮೆಚ್ಚುಗೆ ದೊರೆಯಿತು ಇಲ್ಲವೇ ದಂಡನೆ ಆಯಿತು...ಹೇಗೆ ಬಯ್ಯುವುದನ್ನು ತಡೆಗಟ್ಟ ಲಾಯಿತು"** ಎಂಬುದೆಲ್ಲವನ್ನೂ ಮಗು ಗಮನಿಸುತ್ತದೆ. ಬಯ್ಗುಳದ ನುಡಿಗೆ ಇರುವ ಶಕ್ತಿ ಏನೆಂಬುದು ಮಗುವಿಗೆ ತಿಳಿಯತೊಡಗುತ್ತದೆ. ಕಾಲ ಉರುಳಿದಂತೆ ಬಯ್ಗುಳದ ಪದಗಳ ಮೂಲಕ ತನ್ನ ಭಾವನೆಗಳನ್ನು ಹೊರಹಾಕುವುದನ್ನು ರೂಢಿಸಿ ಕೊಳ್ಳುತ್ತದೆ. ಇದೇ ಸಮಯದಲ್ಲಿ ಇತರರು ಆಡುವ ಬಯ್ಗುಳದ ನುಡಿಯಲ್ಲಿರುವ ಭಾವನೆಗಳನ್ನು ಗ್ರಹಿಸಿಕೊಳ್ಳತೊಡಗುತ್ತದೆ. ಬಾಲ್ಯದಲ್ಲಿ ಹತ್ತಾರು ಬಗೆಯ ಬಯ್ಗುಳದ ಪದಗಳನ್ನು ಆಡುತ್ತಿದ್ದ ವ್ಯಕ್ತಿಗಳು ಹರೆಯದ ಹಂತಕ್ಕೆ ಬರುವ ವೇಳೆಗೆ ಇನ್ನು ಹೆಚ್ಚಿನ ಬಯ್ಗುಳ ನುಡಿಯನ್ನು ತಮ್ಮದಾಗಿಸಿಕೊಂಡಿರುತ್ತಾರೆ. ಒಮ್ಮೆ ಕಲಿತ ಬಯ್ಗುಳ ನುಡಿಯು ಮುಪ್ಪಿನವರೆಗೂ ವ್ಯಕ್ತಿಯ ನೆನಪಿನ ಕೋಶದಲ್ಲಿ ನೆಲೆಯಾಗಿರುತ್ತದೆ.

೨. ಪರಂಪರಾಗತ ಕಲಿಕೆ ಮತ್ತು ದಂಡನೆ ಇಲ್ಲವೇ ಮೆಚ್ಚುಗೆ

ಮಗು ಬಯ್ಯುವಿಕೆಯನ್ನು ಎರಡು ಬಗೆಗಳಲ್ಲಿ ಕಲಿಯುತ್ತದೆ.

ಅ) ಕುಟುಂಬದ ನೆಲೆಯನ್ನು ಒಳಗೊಂಡಂತೆ ತನ್ನ ಸುತ್ತಮುತ್ತಣ ಪರಿಸರದಲ್ಲಿ ಬಳಕೆಯಾಗುತ್ತಿರುವ ಬಯ್ಗುಳದ ನುಡಿಗಳನ್ನು ಕೇಳುತ್ತ, ಅದೆಲ್ಲವನ್ನೂ ಮಗು ತನ್ನದಾಗಿಸಿಕೊಳ್ಳತೊಡಗುತ್ತದೆ. ಈ ರೀತಿ ದಿನ ನಿತ್ಯ ನಡೆಯುವ ಮಾತುಕತೆಗಳಲ್ಲಿ ಆಗಿಂದಾಗ್ಗೆ ಬಳಕೆಯಾಗುವ ಬಯ್ಗುಳದ ನುಡಿಯನ್ನು ಕೇಳುತ್ತ ಮಗು ಬಯ್ಗುಳದ ಪದಸಂಪತ್ತನ್ನು ಪಡೆದುಕೊಳ್ಳುವ ಪ್ರಕ್ರಿಯೆಯನ್ನು ಪರಂಪರಾಗತ ಕಲಿಕೆ ಎನ್ನುತ್ತಾರೆ.

ಆ) ತಾನು ಕೇಳಿದ ಬಯ್ಗುಳದ ಪದವನ್ನು ಮಗು ಯಾವುದೇ ಒಂದು ಸನ್ನಿವೇಶದಲ್ಲಿ ಯಾರಿಗಾದರೂ ಬಳಸಿದಾಗ ಇಲ್ಲವೇ ಯಾರ ಮುಂದೆ ಯಾದರೂ ಉಚ್ಚರಿಸಿದಾಗ, ಆ ಸಮಯದಲ್ಲಿ ಅಲ್ಲಿದ್ದ ಹಿರಿಯರು ಅಚ್ಚರಿಯನ್ನು ವ್ಯಕ್ತಪಡಿಸುವುದರ ಜತೆಗೆ ನಗುನಗುತ್ತ ಸುಮ್ಮನಾದರೆ ಇಲ್ಲವೇ ಮಗು ನುಡಿದ ಬಯ್ಗುಳದ ಪದದ ಕಡೆಗೆ ಗಮನವನ್ನೇ ಹರಿಸದಿದ್ದರೆ ಆಗ ಮಗುವಿಗೆ ಉತ್ತೇಜನವನ್ನು ನೀಡಿದಂತಾಗುತ್ತದೆ. ಇಂತಹ ಕುಟುಂಬದ ಪರಿಸರದಲ್ಲಿ ಬೆಳೆಯುವ ಮಗು ತಾನು ಪಡೆದುಕೊಂಡಿರುವ ಬಯ್ಗುಳದ ನುಡಿಗಳನ್ನು ಹೆಚ್ಚು

ಹೆಚ್ಚಾಗಿ ಬಳಸುವ ಹವ್ಯಾಸವನ್ನು ರೂಢಿಸಿಕೊಳ್ಳುತ್ತದೆ. ಒಂದು ವೇಳೆ ಮಗು ಆಡಿದ ಬಯ್ಗುಳದ ನುಡಿಯನ್ನು ಕೇಳಿ ತಂದೆತಾಯಿ ಇಲ್ಲವೇ ಗುರುಹಿರಿಯರು ಕೂಡಲೇ ಮಗುವಿಗೆ "ಆ ಬಗೆಯ ಪದಗಳನ್ನು ಆಡಬಾರದು" ಎಂಬ ಎಚ್ಚರಿಕೆಯನ್ನು ನೀಡಿ, ಆ ಮಗುವನ್ನು ಹೊಡೆದರೆ ಇಲ್ಲವೇ ಇನ್ನಿತರ ರೀತಿಯಲ್ಲಿ ದಂಡಿಸಿದರೆ, ಆಗ ಮಗು ಬಯ್ಗುಳದ ನುಡಿಯನ್ನಾಡಲು ಹಿಂಜರಿಯುತ್ತದೆ. ಇತರರ ಮುಂದೆ ಆಡದೆ ತನ್ನನ್ನು ತಾನೇ ನಿಯಂತ್ರಿಸಿಕೊಳ್ಳಲು ಬಯಸುತ್ತದೆ. ಈ ರೀತಿ ಉತ್ತೇಜನದ ಇಲ್ಲವೇ ದಂಡನೆಯ ಪ್ರಕ್ರಿಯೆಯ ಮೂಲಕ ಮಗು ಬಯ್ಗುಳವನ್ನು ಹೆಚ್ಚಾಗಿ ಆಡುವಂತೆ ಮಾಡುವ ಇಲ್ಲವೇ ಬಯ್ಗುಳದ ನುಡಿಗಳನ್ನು ಆಡದಿರುವಂತೆ ಮಾಡುವ ಪ್ರಕ್ರಿಯೆಯನ್ನು ಮನೋವಿಜ್ಞಾನಿಗಳು **'ವರ್ತನೆಯಲ್ಲಿ ಬದಲಾವಣೆ (Behaviour Modification)'** ಎಂದು ಕರೆದಿದ್ದಾರೆ.

ಕೆಲವು ಕುಟುಂಬಗಳಲ್ಲಿ ತಂದೆತಾಯಂದಿರು ತಮ್ಮ ಮಗು ಬಯ್ಗುಳದ ನುಡಿಯನ್ನು ಆಡಿದಾಗ ತುಂಬಾ ಆತಂಕಗೊಳ್ಳುತ್ತಾರೆ. ಏಕೆಂದರೆ ತಮ್ಮ ಮಗು ಆಡಿದ ಬಯ್ಗುಳದ ನುಡಿಯಿಂದ ತಮ್ಮ ಮನೆತನದ ಸಾಮಾಜಿಕ ಅಂತಸ್ತಿಗೆ ಹಾನಿಯುಂಟಾಗುತ್ತದೆ ಎಂಬ ಹೆದರಿಕೆಯಿಂದ ತತ್ತರಿಸುತ್ತಾರೆ. ಕೆಲವು ಕುಟುಂಬ ಗಳಲ್ಲಿ ತಾಯಿತಂದೆಯರು ಮಗುವನ್ನು ಹೊಡೆದು ಬಡಿದು ಎಚ್ಚರಿಸುವುದರ ಜತೆಗೆ ಮಗುವಿನ ಬಾಯನ್ನು ಸೋಪಿನಿಂದ ತೊಳೆಯುವ ಇಲ್ಲವೇ ಕೆಲ ಸಮಯ ಮಗುವನ್ನು ಒಬ್ಬಂಟಿಯಾಗಿ ಕೊಠಡಿಯೊಂದರಲ್ಲಿ ಕೂಡಿಹಾಕುವ ದಂಡನೆಯನ್ನು ನೀಡುತ್ತಾರೆ.

೩. ಧರ್ಮ ಮತ್ತು ಜಾತಿಯ ಪ್ರಭಾವ

ಬಯ್ಗುಳ ಬಳಕೆ ಮತ್ತು ಕಲಿಕೆಯಲ್ಲಿ ಧರ್ಮ ಮತ್ತು ಜಾತಿಯ ಪಾತ್ರ ಬಹು ದೊಡ್ಡದು. ಜಗತ್ತಿನಲ್ಲಿರುವ ಹತ್ತಾರು ಬಗೆಯ ಧರ್ಮಗಳಿಗೆ ಸೇರಿದ ಜನ ಸಮುದಾಯಗಳಲ್ಲಿ ಒಂದೊಂದು ಧರ್ಮದಲ್ಲಿಯೂ ಹಲವಾರು ಬಗೆಯ ಜಾತಿ ಮತ್ತು ಉಪಜಾತಿಗಳಿವೆ. ವಿವಿಧ ಧರ್ಮಗಳ ಜನರು "ತಮ್ಮ ಧರ್ಮದ ಆಚರಣೆಗಳೇ ಇನ್ನುಳಿದ ಧರ್ಮಗಳ ಆಚರಣೆಗಳಿಗಿಂತ ಉತ್ತಮ" ಎಂಬ ನಂಬಿಕೆಯಿಂದ ಕೂಡಿದ್ದರೆ, ಪ್ರತಿಯೊಂದು ಧರ್ಮದ ಒಳಗಿರುವ ಜಾತಿ ಮತ್ತು ಉಪಜಾತಿಯ ಜನರು "ತಮ್ಮ ಜಾತಿಯು ಮತ್ತೊಂದು ಜಾತಿಗಿಂತ ಮೇಲು, ಇನ್ನೊಂದು ಜಾತಿಯು ತಮ್ಮ ಜಾತಿಗಿಂತ ಕೀಳು" ಎಂಬ ತರತಮಭಾವದಿಂದ ಕೂಡಿರುತ್ತಾರೆ. ಇಂತಹ ಜಾತಿ ಮತ್ತು ಧರ್ಮದ ಒಕ್ಕೂಟಗಳೇ ರಾಜಕೀಯ ಗದ್ದುಗೆಯನ್ನು ಪಡೆಯುವುದಕ್ಕೆ ಮತ್ತು ಆಸ್ತಿಪಾಸ್ತಿಯನ್ನು ಪಡೆದು ಸಂಪತ್ತಿಗೆ ಒಡೆಯರಾಗುವುದಕ್ಕೆ ಕಾರಣವಾಗಿರುವುದರಿಂದ ಜಗತ್ತಿನಲ್ಲಿ ಹುಟ್ಟಿ ಬೆಳೆದು

ಬಾಳುವ ಪ್ರತಿಯೊಬ್ಬ ವ್ಯಕ್ತಿತ್ವವನ್ನು ರೂಪಿಸುವುದರಲ್ಲಿ ಧರ್ಮ ಮತ್ತು ಜಾತಿ ಬಹು ದೊಡ್ಡ ಪರಿಣಾಮವನ್ನು ಬೀರುತ್ತವೆ. ಈ ಧರ್ಮ ಮತ್ತು ಜಾತಿಗಳು ಪ್ರತಿಯೊಬ್ಬ ವ್ಯಕ್ತಿಯ ಮನದಲ್ಲಿಯೂ ಒಂದಲ್ಲ ಒಂದು ಬಗೆಯ ಮೇಲರಿಮೆ ಇಲ್ಲವೇ ಕೀಳರಿಮೆಯ ಮನೋಭಾವನೆಯನ್ನು ನೆಲೆಗೊಳಿಸಿರುತ್ತವೆ. ಈ ಜಗತ್ತಿನಲ್ಲಿ ಬಾಳುತ್ತಿರುವ ಪ್ರತಿಯೊಬ್ಬ ವ್ಯಕ್ತಿಯ ಮಾನಸಿಕ ಬೆಳವಣಿಗೆಯನ್ನು ಆಯಾಯ ಧರ್ಮದ ಮತ್ತು ಆಯಾಯ ಜಾತಿಯ ಸಂಪ್ರದಾಯಗಳು, ಕಟ್ಟುಪಾಡುಗಳು ಮತ್ತು ನಂಬಿಕೆಗಳು ರೂಪಿಸಿ, ಅವನ/ಅವಳ ನಡೆನುಡಿಗಳನ್ನು ನಿಯಂತ್ರಿಸುತ್ತವೆ ಹಾಗೂ ನಿರ್ದೇಶಿಸುತ್ತವೆ. ಈ ಕಾರಣದಿಂದಾಗಿಯೇ ಧರ್ಮ ನಿಂದನೆಯ, ಜಾತಿ ನಿಂದನೆಯ ಮತ್ತು ಜನಾಂಗ ನಿಂದನೆಯ ಬಯ್ಗುಳದ ನುಡಿಗಳು ಜಗತ್ತಿನ ಎಲ್ಲೆಡೆಯಲ್ಲಿಯೂ ಬಳಕೆಗೊಳ್ಳುತ್ತಿವೆ.

❖

೬. ಬಯ್ಯುವಿಕೆ: ಸಮಾಜದ ರಚನೆ ಮತ್ತು ಸಂಸ್ಕೃತಿಯ ಆಚರಣೆಗಳು

ಕ್ರಿ.ಶ.೧೯೦೧ರಲ್ಲಿ ಪ್ಯಾಟ್ರಿಕ್ ಎಂಬುವವರು **"ಕೆಲವೇ ಬಗೆಯ ಪದಗಳನ್ನು ಮಾತ್ರ ಜನರು ಏಕೆ ಬಯ್ಗುಳವಾಗಿ ಬಳಸುತ್ತಾರೆ"** ಎಂದು ಕೇಳಿದ ಎರಡನೆಯ ಪ್ರಶ್ನೆಗೆ ಉತ್ತರವನ್ನು ವಿಜ್ಞಾನಿಗಳು ನುಡಿ ಸಮುದಾಯದ ಸಾಮಾಜಿಕ ರಚನೆಯ ಸ್ವರೂಪದಲ್ಲಿ ಮತ್ತು ಸಂಸ್ಕೃತಿಯ ಆಚರಣೆಯ ನೆಲೆಯಲ್ಲಿ ಅರಸಿದ್ದಾರೆ.

"ನಾವೇಕೆ ಬಯ್ಯುತ್ತೇವೆ ಇಲ್ಲವೇ ಜನರೇಕೆ ಬಯ್ಯುತ್ತಾರೆ" ಎಂಬುದನ್ನು ತಿಳಿದುಕೊಳ್ಳುವ ಮೊದಲಿನ ಹಂತಗಳಲ್ಲಿ ಇದುವರೆಗೆ ಮಾನವನ ಮಿದುಳಿನ ನರ ಮಂಡಲದಲ್ಲಿ ನಡೆಯುವ ಪ್ರಕ್ರಿಯೆಗಳು ಮತ್ತು ಮಾನಸಿಕ ಬೆಳವಣಿಗೆ ಹೇಗೆ ಕಾರಣ ವಾಗುತ್ತವೆ ಎಂಬುದನ್ನು ಗಮನಿಸಿದ್ದೇವೆ. ಇನ್ನು ಮುಂದೆ ಸಮಾಜದ ರಚನೆ ಮತ್ತು ಸಂಸ್ಕೃತಿಯ ಆಚರಣೆಗಳು ಹೇಗೆ ಕಾರಣವಾಗುತ್ತವೆ ಎಂಬುದನ್ನು ಪರಿಶೀಲಿಸುವುದರ ಮೂಲಕ ಜನರು ಬಯ್ಯುವುದಕ್ಕೆ ಪ್ರೇರಣೆಯನ್ನು ನೀಡುವ ಇಲ್ಲವೇ ಬಯ್ಯುವಿಕೆ ಯನ್ನು ತಡೆಗಟ್ಟುವ ಸಂಗತಿಗಳು ಯಾವುವು ಎಂಬ ಸಂಗತಿಗಳನ್ನು ತಿಳಿಯೋಣ.

ನಾನಾಗಲೀ ಇಲ್ಲವೇ ನೀವಾಗಲಿ ಮತ್ತೊಬ್ಬರೊಡನೆ ಮಾತನಾಡುವಾಗ, ನಮ್ಮ ಮತ್ತು ಅವರ ಸಾಮಾಜಿಕ ಹಿನ್ನೆಲೆ **(Social Background)** ಮುಖ್ಯ ವಾಗುತ್ತದೆ. ಸಾಮಾಜಿಕ ಹಿನ್ನೆಲೆಯು ವ್ಯಕ್ತಿಯ ಜೈವಿಕ ಮತ್ತು ಸಾಮಾಜಿಕ ಸಂಗತಿ ಗಳನ್ನು ಒಳಗೊಂಡಿರುತ್ತದೆ. ವ್ಯಕ್ತಿಯ ಲಿಂಗ ಅಂದರೆ ಗಂಡು ಇಲ್ಲವೇ ಹೆಣ್ಣು, ವ್ಯಕ್ತಿಯ ವಯಸ್ಸು ಮತ್ತು ಮಯ್ ಬಣ್ಣ ಈ ಮೂರು ಅಂಶಗಳನ್ನು ವ್ಯಕ್ತಿಯ ಜೈವಿಕ ಸಂಗತಿಗಳೆಂದು **(Biological Factors)** ಕರೆಯುತ್ತಾರೆ. ವ್ಯಕ್ತಿಯ ಜಾತಿ, ಮತ, ವಿದ್ಯೆ, ಉದ್ಯೋಗ, ಸಂಪತ್ತು, ಪ್ರಾಂತ್ಯ ಮತ್ತು ತಾಯ್ನುಡಿಯನ್ನು ಸಾಮಾಜಿಕ ಸಂಗತಿಗಳೆಂದು **(Social Factors)** ಕರೆಯುತ್ತಾರೆ.

ಕುಟುಂಬದ ನೆಲೆ, ದುಡಿಯುವ ನೆಲೆ ಮತ್ತು ಸಾರ್ವಜನಿಕ ನೆಲೆಯಲ್ಲಿ ನಡೆಯುವ ಯಾವುದೇ ಬಗೆಯ ಸನ್ನಿವೇಶಗಳಲ್ಲಿ ನಾವು ಮಾತನಾಡುವಾಗ ನಮ್ಮ ಮತ್ತು ಇತರರ ಸಾಮಾಜಿಕ ಹಿನ್ನೆಲೆಗೆ ತಕ್ಕಂತೆಯೇ ಮಾತುಗಳನ್ನಾಡುತ್ತೇವೆ. ಇದರಿಂದಾಗಿ ನಾವು ನಮಗಿಂತ ಚಿಕ್ಕ ವಯಸ್ಸಿನವರೊಡನೆ/ದೊಡ್ಡವಯಸ್ಸಿನವ ರೊಡನೆ; ಹೆಂಗಸರೊಡನೆ/ಗಂಡಸರೊಡನೆ; ಬಡವರೊಡನೆ/ಸಿರಿವಂತರೊಡನೆ; ಅಧಿಕಾರದ ದೊಡ್ಡ ಗದ್ದುಗೆಯಲ್ಲಿ ಇಲ್ಲವೇ ಚಿಕ್ಕ ಗದ್ದುಗೆಯಲ್ಲಿ ಇರುವವರೊಡನೆ; ಸರಿಸಮಾನವಾದ ವಯಸ್ಸು ಮತ್ತು ಸಾಮಾಜಿಕ ಅಂತಸ್ತು ಉಳ್ಳವರೊಡನೆ; ಪರಿಚಿತರೊಡನೆ/ಅಪರಿಚಿತರೊಡನೆ ಮಾತನಾಡುವಾಗ ನಾವು ಬಳಸುವ ಮಾತುಗಳ ವರಸೆ ಮತ್ತು ನಮ್ಮ ದೇಹದ ಹಾವಭಾವಗಳ ರೀತಿಯು ಬೇರೆ ಬೇರೆ ಬಗೆಯಲ್ಲಿರುತ್ತವೆ.

ಪ್ರತಿಯೊಂದು ಸಾಮಾಜಿಕ ಸನ್ನಿವೇಶದಲ್ಲಿಯೂ ನಾವು ಮತ್ತು ಇತರರು ಆಡುವ ಮಾತುಗಳ ತಿರುಳನ್ನು ನಿರ್ಣಯಿಸುವಲ್ಲಿ ಈ ಕೆಳಕಂಡ ಎರಡು ಸಂಗತಿಗಳು ದೊಡ್ಡ ಪಾತ್ರವನ್ನು ವಹಿಸುತ್ತವೆ.

೧. **ಮಾತನಾಡುತ್ತಿರುವ ಜಾಗದ ಪ್ರಾದೇಶಿಕ ಮತ್ತು ಸಾಮಾಜಿಕ ಪರಿಸರ. (Physical and Social Environment)**

'ಪ್ರಾದೇಶಿಕ ಪರಿಸರ' ಎಂದರೆ ಜನರು ನೆಲೆಸಿರುವ ಮನೆ, ವಿದ್ಯೆಯನ್ನು ಕಲಿಯುವ ಶಾಲಾಕಾಲೇಜು, ಆಟದ ಬಯಲು, ದೇಗುಲ, ದುಡಿಮೆಯನ್ನು ಮಾಡುವ ಜಾಗಗಳು ಇತ್ಯಾದಿ.

'ಸಾಮಾಜಿಕ ಪರಿಸರ' ಎಂದರೆ ಜನಗಳು ಜತೆಗೂಡಿ ಮಾಡುತ್ತಿರುವ ಎಲ್ಲಾ ಬಗೆಯ ಆಚರಣೆಗಳು. ಮದುವೆ, ಪೂಜೆ, ಆಟೋಟಗಳು, ವಿದ್ಯೆಯ ಕಲಿಕೆ, ಸಾವು ನೋವಿನ ಪ್ರಸಂಗಗಳು ಇತ್ಯಾದಿ.

೨. **ಮಾತಿನಲ್ಲಿ ತೊಡಗಿರುವ ವ್ಯಕ್ತಿಗಳ ನಡುವಣ ಸಾಮಾಜಿಕ ನಂಟು (Social Relation) ಮತ್ತು ಅಧಿಕಾರದ ನಂಟು (Power Relation).**

'ವ್ಯಕ್ತಿಗಳ ನಡುವಣ ಸಾಮಾಜಿಕ ನಂಟು' ಎಂದರೆ **ಕುಟುಂಬದ ವಲಯದಲ್ಲಿನ** ರಕ್ತದ ನಂಟು ಇಲ್ಲವೇ ವಿವಾಹದಿಂದ ಉಂಟಾಗಿರುವ ನಂಟು. ಉದಾಹರಣೆ: ಅಪ್ಪ-ಅಮ್ಮ; ಅಣ್ಣ-ತಂಗಿ; ಅಕ್ಕ-ತಮ್ಮ; ಚಿಕ್ಕಪ್ಪ-ದೊಡ್ಡಪ್ಪ; ಚಿಕ್ಕಮ್ಮ-ದೊಡ್ಡಮ್ಮ; ಗಂಡ-ಹೆಂಡತಿ; ಅತ್ತೆ-ಮಾವ ಇತ್ಯಾದಿ;

ದುಡಿಮೆಯ ನೆಲೆಯಲ್ಲಿ ಒಡೆಯ-ಆಳು; ದೊಡ್ಡ ಗದ್ದುಗೆಯಲ್ಲಿರುವವರು-ಸಣ್ಣ ಗದ್ದುಗೆಯಲ್ಲಿರುವವರು;

ಸಾರ್ವಜನಿಕ ನೆಲೆಯಲ್ಲಿ ಪರಿಚಿತರು–ಅಪರಿಚಿತರು;

'ಅಧಿಕಾರದ ನಂಟು' ಎಂಬುದು ವ್ಯಕ್ತಿಗಳ ವಯಸ್ಸು, ಲಿಂಗ–ಗಂಡು/ಹೆಣ್ಣು, ಜಾತಿ, ಮತ, ವಿದ್ಯೆ, ಸಂಪತ್ತು ಮತ್ತು ಪಡೆದಿರುವ ಗದ್ದುಗೆಗೆ ತಕ್ಕಂತೆ ಇಬ್ಬರು ವ್ಯಕ್ತಿಗಳಲ್ಲಿ ಯಾರು ಯಾರ ಮೇಲೆ ಹೆಚ್ಚಿನ ಹತೋಟಿಯನ್ನು ಹೊಂದಿದ್ದಾರೆ ಎಂಬುದನ್ನು ಸೂಚಿಸುತ್ತದೆ.

ಕುಟುಂಬದ ವಲಯದಲ್ಲಿ ಸಾಮಾನ್ಯವಾಗಿ ವಯಸ್ಸಾದ ಹಿರಿಯರು ಕಿರಿಯರ ಮೇಲೆ ಹಾಗೂ ತಮ್ಮ ದುಡಿಮೆಯಿಂದಲೇ ಕುಟುಂಬದ ಸದಸ್ಯರನ್ನು ಸಾಕಿ ಸಲಹುತ್ತಿರುವವರು ಹೆಚ್ಚಿನ ಅಧಿಕಾರವನ್ನು ಹೊಂದಿರುತ್ತಾರೆ.

ದುಡಿಮೆಯ ನೆಲೆಯಲ್ಲಿ ದೊಡ್ಡ ಗದ್ದುಗೆಯಲ್ಲಿರುವವರು ತಮ್ಮ ಕಯ್ ಕೆಳಗಿನ ಕೆಲಸದವರ ಮೇಲೆ ಮತ್ತು ಸಿರಿವಂತರಾದ ಒಡೆಯರು ತಮ್ಮ ಬಳಿ ದುಡಿಯುತ್ತಿರುವ ಕೆಲಸಗಾರರ ಮೇಲೆ ಹೆಚ್ಚಿನ ಅಧಿಕಾರವನ್ನು ಹೊಂದಿರುತ್ತಾರೆ.

ಸಾರ್ವಜನಿಕ ನೆಲೆಯಲ್ಲಿ ವ್ಯಕ್ತಿಗಳ ವಯಸ್ಸು, ದೇಹದ ಶಕ್ತಿ, ಉಡುಗೆ ತೊಡುಗೆಗಳು ಅಧಿಕಾರದ ನಂಟನ್ನು ನಿರ್ಣಯಿಸುವ ಅಂಶಗಳಾಗುತ್ತವೆ.

ಈ ಮೇಲ್ಕಂಡ ಎಲ್ಲ ಅಂಶಗಳು ಸಾಮಾಜಿಕ ವ್ಯವಹಾರಗಳಲ್ಲಿ ಮಾನವರ ಮಾತಿನ ವರ್ತನೆ **(Speech Behaviour)** ಹೇಗಿರಬೇಕು ಇಲ್ಲವೇ ಹೇಗಿರಬಾರದು ಎಂಬುದನ್ನು ನಿಯಂತ್ರಿಸುತ್ತ ಮತ್ತು ನಿರ್ದೇಶಿಸುತ್ತ ಮಾತಿನ ಸನ್ನಿವೇಶದಲ್ಲಿ ಬಳಕೆ ಯಾಗುವ ನುಡಿಗಳ ತಿರುಳು ಯಾವುದು ಎಂಬುದನ್ನು ಸೂಚಿಸುತ್ತದೆ. ಮಾನವರು ಆಡುವ ನುಡಿಯ ತಿರುಳು ಅದು ಬಳಕೆಗೊಳ್ಳುವ ಸಾಮಾಜಿಕ ಸಂದರ್ಭವನ್ನು **(Social Context)** ಅವಲಂಬಿಸಿರುತ್ತದೆ.

ಬಯ್ಯುವಿಕೆಯು ಮಾನವರ ಸಾಮಾಜಿಕ ವರ್ತನೆಯ ಒಂದು ಅಂಗವಾಗಿ ನಿತ್ಯಜೀವನದ ಆಗುಹೋಗುಗಳಲ್ಲಿ ಹಾಸುಹೊಕ್ಕಾಗಿದೆ. ಜನರು ತಾವು ಹುಟ್ಟಿ ಬೆಳೆದು ಬಾಳುತ್ತಿರುವ ನುಡಿ ಸಮುದಾಯದಲ್ಲಿ ತಮ್ಮ ತಾಯ್ನುಡಿಯನ್ನು ಪಡೆದುಕೊಂಡು ಬಳಸುತ್ತಿರುವಂತೆಯೇ ತಮ್ಮ ಸುತ್ತಮುತ್ತಣ ಪರಿಸರದಲ್ಲಿ ಬಳಕೆಯಾಗುತ್ತಿರುವ ಬಯ್ಗುಳದ ನುಡಿಗಟ್ಟುಗಳನ್ನು ತಮ್ಮದಾಗಿಸಿಕೊಂಡು, ಅವನ್ನು ಹೇಗೆ ಬಳಸಬೇಕೆಂಬುದನ್ನು ಅರಿತುಕೊಂಡಿರುತ್ತಾರೆ.

ವ್ಯಕ್ತಿಗಳಿಗೆ ವಯಸ್ಸು ಹೆಚ್ಚಾದಂತೆಲ್ಲ ಮತ್ತು ಲೋಕದ ನಡೆನುಡಿಗಳ ಪರಿಚಯ ವಾದಂತೆಲ್ಲಾ **"ಎಲ್ಲಿ... ಯಾವಾಗ... ಯಾರಿಗೆ... ಹೇಗೆ ಬಯ್ಯಬೇಕು ಇಲ್ಲವೇ ಬಯ್ಯಬಾರದು"** ಎಂಬ ಅರಿವು ಮತ್ತು ಎಚ್ಚರವು ಆಯಾಯ ನುಡಿ ಸಮುದಾಯದ ಸಾಂಪ್ರದಾಯಿಕವಾದ ನಡಾವಳಿಯಿಂದಲೇ ಬಂದಿರುತ್ತದೆ.

ಕೆಲವೊಮ್ಮೆ ಇತರರು ಅಂದರೆ ತಂದೆತಾಯಿ ಇಲ್ಲವೇ ಗುರುಹಿರಿಯರು ನೀಡುವ ಎಚ್ಚರಿಕೆ ಇಲ್ಲವೇ ದಂಡನೆಯಿಂದ ಬರುತ್ತದೆ.

ಜನರು ತಮ್ಮ ನಿತ್ಯ ಜೀವನದ ಪ್ರಸಂಗಗಳಲ್ಲಿ ಉದ್ದೇಶಪೂರ್ವಕವಾಗಿ ಇತರರನ್ನು ಬಯ್ಯುವುದಕ್ಕೆ ಮೊದಲು ಬಯ್ಯುವಿಕೆಯಿಂದ ಉಂಟಾಗುವ ಪರಿಣಾಮದ ಬಗ್ಗೆ ಎಚ್ಚರಿಕೆಯಿಂದ ಇರುತ್ತಾರೆ. ಯಾವುದೇ ವ್ಯಕ್ತಿಯನ್ನು ಅವರ ಮುಂದುಗಡೆಯೇ ನೇರವಾಗಿ ಬಯ್ಯುವುದು ಸಲೀಸಾದ ಕೆಲಸವಲ್ಲ. ಏಕೆಂದರೆ ಬಯ್ಯುವಿಕೆಯಿಂದ ಉಂಟಾಗುವ ಪರಿಣಾಮಗಳು ಬಹುಬಗೆಯಲ್ಲಿ ರುತ್ತವೆ. ಕೆಲವೊಮ್ಮೆ ಸಾವುನೋವುಗಳು ಉಂಟಾಗುವಂತಹ ಸನ್ನಿವೇಶಗಳು ಬರಬಹುದು. ಆದ್ದರಿಂದ ಜನರು ತಾವು ಇತರರನ್ನು ಉದ್ದೇಶಪೂರ್ವಕವಾಗಿ ಬಯ್ಯುವ ಮುನ್ನ, ಬಯ್ಯುವ ಹಕ್ಕು ತಮಗಿದೆಯೇ ಎಂಬುದರ ಬಗ್ಗೆ ಸರಿಯಾದ ತಿಳುವಳಿಕೆಯನ್ನು ಹೊಂದಿರುತ್ತಾರೆ. ತಮ್ಮ ಬಯ್ಗುಳಕ್ಕೆ ಪ್ರತಿಯಾಡದೆ ಒಪ್ಪಿಕೊಳ್ಳುವ ಇಲ್ಲವೇ ಸುಮ್ಮನಿರುವ ವ್ಯಕ್ತಿಗಳು ಇರುವ ಕಡೆಗಳಲ್ಲಿ ಜನರು ಹೆಚ್ಚಾಗಿ ಬಯ್ಗುಳವನ್ನು ಬಳಸುತ್ತಾರೆ.

ಬಯ್ಯುವುದರಿಂದ ತಮ್ಮ ಮಯ್ ಮೇಲೆ ಹಲ್ಲೆಯಾಗುವಂತಿದ್ದರೆ, ಕೆಲಸವನ್ನು ಕಳೆದುಕೊಳ್ಳುವಂತಿದ್ದರೆ, ತಮ್ಮನ್ನು ಜಾತಿ ಗುಂಪಿನಿಂದ ಇಲ್ಲವೇ ತಮ್ಮ ಒಡನಾಡಿಗಳ ಗುಂಪಿನಿಂದ ಹೊರಕ್ಕೆ ಹಾಕುವಂತಹ ದಂಡನೆಗಳಿಗೆ ಒಳಗಾಗುವಂತಿದ್ದರೆ ಅಂತಹ ಸನ್ನಿವೇಶಗಳಲ್ಲಿ ಬಯ್ಯುವುದಕ್ಕೆ ತೊಡಗದೆ ಎಂತಹ ಅಪಮಾನ, ಸಂಕಟ ಮತ್ತು ಹಾನಿಯನ್ನಾದರೂ ಸಹಿಸಿಕೊಂಡು ಸುಮ್ಮನಾಗುತ್ತಾರೆ.

ಬಯ್ಯುವಿಕೆಯಿಂದ ತಮಗೆ ಹೆಚ್ಚಿನ ಪ್ರಯೋಜನವಾಗುವಂತಿದ್ದರೆ ಅಂತಹ ಸನ್ನಿವೇಶಗಳಲ್ಲಿ ಬಯ್ಯುವಿಕೆಯಲ್ಲಿ ತೊಡಗುತ್ತಾರೆ. ಉದಾಹರಣೆ: ಇತರರ ಗಮನವನ್ನು ತಮ್ಮತ್ತ ಸೆಳೆಯುವುದಕ್ಕಾಗಿ; ಇತರರಿಂದ ಮೆಚ್ಚುಗೆಯನ್ನು ಪಡೆಯುವುದಕ್ಕಾಗಿ; ಕೇಳುಗರ ಮನಸ್ಸನ್ನು ರಂಜಿಸಿ ನಗುವಿನ ವಾತಾವರಣ ವನ್ನುಂಟುಮಾಡುವುದಕ್ಕಾಗಿ; ಹಣ ಮತ್ತು ಉನ್ನತ ಗದ್ದುಗೆಯಲ್ಲಿರು ವವರನ್ನು ಓಲೈಸಿಕೊಂಡು ಹೆಚ್ಚಿನ ಪ್ರಯೋಜನವನ್ನು ಪಡೆಯುವುದಕ್ಕಾಗಿ ಅವರ ಹಗೆಗಳನ್ನು ತಾವು ನಿರಂತರವಾಗಿ ಬಯ್ಯುತ್ತಿರುತ್ತಾರೆ.

ಕೆಲವು ನೆಲೆಗಳಲ್ಲಿ ಬಯ್ಯುವುದು ದೊಡ್ಡ ತಪ್ಪಾಗಿ ಕಂಡುಬಂದರೆ; ಇನ್ನು ಕೆಲವು ನೆಲೆಗಳಲ್ಲಿ ಅಂತಹ ದೊಡ್ಡ ತಪ್ಪಾಗಿ ಕಾಣುವುದಿಲ್ಲ; ಮತ್ತೆ ಕೆಲವು ನೆಲೆಗಳಲ್ಲಿ ಅದು ತಪ್ಪೇ ಅಲ್ಲ.

ಕುಟುಂಬದ ನೆಲೆ ಮತ್ತು ದುಡಿಮೆಯ ನೆಲೆಗಳಲ್ಲಿ ಬಯ್ಯುವ ಹಕ್ಕನ್ನು ಕೆಲವು

ವ್ಯಕ್ತಿಗಳು ಮಾತ್ರ ಹೊಂದಿರುತ್ತಾರೆ. ಕುಟುಂಬದ ನೆಲೆಯಲ್ಲಿ ವಯಸ್ಸಾದ ಹಿರಿಯರು ಇಲ್ಲವೇ ತಮ್ಮ ದುಡಿಮೆಯಿಂದಲೇ ಕುಟುಂಬದ ಹೊಣೆಗಾರಿಕೆ ಯನ್ನು ಹೊತ್ತಿರುವ ವ್ಯಕ್ತಿಗಳು ಮನೆಯಲ್ಲಿ ಇತರರನ್ನು ಬಯ್ಯಬಲ್ಲ ಹಕ್ಕನ್ನು ಹೊಂದಿರುತ್ತಾರೆ. ಅಂತೆಯೇ ದುಡಿಮೆಯ ನೆಲೆಯಲ್ಲಿ ಒಡೆಯರು ಇಲ್ಲವೇ ಉನ್ನತ ಗದ್ದುಗೆಯಲ್ಲಿರುವವರು ತಮ್ಮ ಕಯ್ ಕೆಳಗಿನವರನ್ನು ಬಯ್ಯಬಲ್ಲ ಹಕ್ಕನ್ನು ಹೊಂದಿರುತ್ತಾರೆ. ಇಂತಹ ಕಡೆಗಳಲ್ಲಿ ಬಯ್ಯುವಿಕೆಯು ಹೆಚ್ಚಿನ ವೇಳೆ ತಪ್ಪಾಗಿ ಕಾಣುವುದಿಲ್ಲ. ಆದರೆ ಬಯ್ಯುವ ಹಕ್ಕನ್ನು ಹೊಂದಿರುವ ವ್ಯಕ್ತಿಗಳು ತಂತಮ್ಮ ನೆಲೆಗಳಲ್ಲಿ ಬಯ್ಯಬಹುದೇ ಹೊರತು, ಅದೇ ರೀತಿ ಬೇರೊಂದು ನೆಲೆಯಲ್ಲಿ ಬಯ್ಯಲು ಹೋದರೆ ಹೆಚ್ಚಿನ ತೊಂದರೆಗೆ ಒಳಗಾಗಬೇಕಾಗುತ್ತದೆ.

ಉದಾಹರಣೆ:

ಕುಟುಂಬದ ನೆಲೆಯಲ್ಲಿ ತನ್ನ ಮನೆಯವರನ್ನು ನೇರವಾಗಿ ಬಾಯಿಗೆ ಬಂದಂತೆ ಬಯ್ಯುವ ವ್ಯಕ್ತಿಯೊಬ್ಬ, ತಾನು ದುಡಿಮೆಯನ್ನು ಮಾಡುವ ನೆಲೆಯಲ್ಲಿ ತನ್ನ ಮೇಲಿನ ಅಧಿಕಾರಿಯನ್ನು ಇಲ್ಲವೇ ತನ್ನ ಒಡೆಯನನ್ನು ಅದೇ ರೀತಿಯಲ್ಲಿ ನೇರವಾಗಿ ಬಯ್ಯಲಾರ. ಒಂದು ವೇಳೆ ದುಡಿಮೆಯ ನೆಲೆಯಲ್ಲಿ ಮೇಲಿನವರನ್ನು ಇಲ್ಲವೇ ಒಡೆಯನನ್ನು ಬಯ್ದರೆ ತೀವ್ರವಾದ ದಂಡನೆಗೆ ಗುರಿಯಾಗುವುದಲ್ಲದೆ, ಕೆಲಸವನ್ನೇ ಕಳೆದುಕೊಳ್ಳಬೇಕಾಗುತ್ತದೆ.

ಆಟದ ಬಯಲಿನಲ್ಲಿ ತನ್ನ ಗೆಳೆಯರೊಡನೆ ಬಯ್ದಾಡುವ ಒಬ್ಬ ತರುಣ, ಅದೇ ಬಗೆಯ ಬಯ್ಗುಳದ ನುಡಿಗಳನ್ನು ತನ್ನ ಮನೆಯಲ್ಲಿಯೋ ಇಲ್ಲವೇ ಕಾಲೇಜಿನ ಪ್ರಿನ್ಸಿಪಾಲರ ಮುಂದೆಯೋ ಆಡಲಾರ. ಒಂದು ವೇಳೆ ಆಡಿದರೆ ಅದು ದೊಡ್ಡ ತಪ್ಪಾಗುತ್ತದೆ.

ಸಾರ್ವಜನಿಕ ನೆಲೆಯಲ್ಲಿ ಅಪರಿಚಿತರೊಡನೆ ಬಯ್ದಾಡುವ ಪ್ರಸಂಗ ಬಂದಾಗ, ವ್ಯಕ್ತಿಗಳು ತೊಟ್ಟಿರುವ ಉಡುಗೆ ತೊಡುಗೆಗಳ ಮೂಲಕ ಅವರ ಸಾಮಾಜಿಕ ಹಿನ್ನೆಲೆಯನ್ನು ಅರಿತುಕೊಂಡು ಬಯ್ಯುವಿಕೆಯಲ್ಲಿ ತೊಡಗುತ್ತಾರೆ. ಈ ನೆಲೆಯಲ್ಲಿ ಬಯ್ದಾಡುವಿಕೆಯಲ್ಲಿ ತೊಡಗಿದವರ ನಡುವೆ ಯಾವುದೇ ಬಗೆಯ ಅಧಿಕಾರದ ನಂಟು ಇಲ್ಲದಿರುವುದರಿಂದ ಬಯ್ಯುವಿಕೆಯಲ್ಲಿ ಯಾರು ಮೇಲುಗಯ್ ಪಡೆಯುತ್ತಾರೆ ಮತ್ತು ಬಯ್ಯುವಿಕೆಯಿಂದ ಉಂಟಾದ ಪರಿಣಾಮವೇನು ಎಂಬುದನ್ನು ಹೇಳಲಾಗುವುದಿಲ್ಲ.

ಇದರಿಂದ ತಿಳಿದುಬರುವುದೇನೆಂದರೆ ಬಯ್ಯುವಿಕೆಯಲ್ಲಿ ತೊಡಗುವ ವ್ಯಕ್ತಿಗಳು ಯಾವ ಜಾಗದಲ್ಲಿ ತಾವು ಬಯ್ಯಬಹುದು ಇಲ್ಲವೇ ಬಯ್ಯಬಾರದು ಎಂಬುದನ್ನು ಅರಿಯುವುದರ ಮೂಲಕ ತಮ್ಮ ವ್ಯಕ್ತಿತ್ವದ ಇತಿಮಿತಿಗಳನ್ನು ತಿಳಿದುಕೊಂಡಿರಬೇಕು. ಯಾವ ಜಾಗದಲ್ಲಿ ತಾವು ಇತರರನ್ನು ಬಯ್ದು, ಅವರ ಮೇಲೆ ತನ್ನ

ಅಧಿಕಾರವನ್ನು ಚಲಾಯಿಸಬಲ್ಲರೋ ಮತ್ತು ಯಾರನ್ನು ತಾವು ನಿಯಂತ್ರಿಸಬಲ್ಲರೋ ಅಂತಹ ಕಡೆಗಳಲ್ಲಿ ಮಾತ್ರ ಬಯ್ಯಬಹುದು. ಇಲ್ಲದಿದ್ದರೆ ದೊಡ್ಡ ಹಾನಿಗೆ ಒಳಗಾಗಬೇಕಾಗುತ್ತದೆ. ಆದ್ದರಿಂದ ನಾವು ಬಯ್ಯುವಿಕೆಯಲ್ಲಿ ತೊಡಗುವಾಗ **"ಬಯ್ಯುತ್ತಿರುವ ನೆಲೆ ಯಾವುದು; ಸಾಮಾಜಿಕ ಸನ್ನಿವೇಶ ಯಾವುದು; ಬಯ್ಯಿಸಿಕೊಳ್ಳುತ್ತಿರುವ ವ್ಯಕ್ತಿ ಯಾರು"** ಎಂಬ ಸಾಮಾಜಿಕ ಹಿನ್ನೆಲೆಯ ಸಂಗತಿಗಳನ್ನು ಸರಿಯಾಗಿ ಅರಿತಿರಬೇಕು. ಮನೋವಿಜ್ಞಾನಿಗಳು ವ್ಯಕ್ತಿಯ ಮಾನಸಿಕ ಬೆಳವಣಿಗೆ, ನುಡಿ ಸಮುದಾಯದ ಸಾಮಾಜಿಕ ರಚನೆ ಮತ್ತು ಸಂಸ್ಕೃತಿಯ ಆಚರಣೆಗಳ ಹಿನ್ನೆಲೆಯಲ್ಲಿ ಯಾವ ಬಗೆಯ ವ್ಯಕ್ತಿಗಳು ತಮ್ಮ ನಿತ್ಯ ಜೀವನದ ವ್ಯವಹಾರಗಳಲ್ಲಿ ಬಯ್ಗುಳವನ್ನು ಸಲೀಸಾಗಿ ಬಳಸುತ್ತಾರೆ ಮತ್ತು ಬಯ್ಗುಳವನ್ನು ಬಳಸಲು ಹಿಂಜರಿಯುತ್ತಾರೆ ಎಂಬುದನ್ನು ಈ ಕೆಳಕಂಡಂತೆ ಗುರುತಿಸಿದ್ದಾರೆ.

ಸಲೀಸಾಗಿ ಬಯ್ಗುಳವನ್ನು ಬಳಸುವವರು

- ಪ್ರಾಯದ ಹಂತದಲ್ಲಿರುವ ವ್ಯಕ್ತಿಗಳು.
- ಜಾತಿ ಮತದ ಕಟ್ಟುಪಾಡುಗಳ ಬಗ್ಗೆ ಹೆಚ್ಚು ಗಮನವನ್ನು ನೀಡದವರು.
- ಬಯ್ಗುಳದ ಪದಗಳ ಬಳಕೆಯ ಬಗ್ಗೆ ಹೆಚ್ಚು ಆತಂಕವಿಲ್ಲದವರು.
- ಬಯ್ಯುವಿಕೆಗಾಗಿ ಇತರರಿಂದ ಮೆಚ್ಚುಗೆಯನ್ನು ಪಡೆದವರು.
- ಜೀವನದ ಪ್ರಸಂಗಗಳಲ್ಲಿ ಬಹುಬೇಗ ಉದ್ರೇಕಕ್ಕೆ ಒಳಗಾಗುವವರು.
- ಕೆಟ್ಟ ನಡೆನುಡಿಗಳಲ್ಲಿ ತೊಡಗಿದವರು.
- ಮಾದಕ ಪಾನೀಯಗಳನ್ನು ಅತಿಯಾಗಿ ಸೇವಿಸುವವರು.

ಬಯ್ಗುಳದ ಬಳಕೆಗೆ ಹಿಂಜರಿಯುವವರು

- ತಮ್ಮ ಜಾತಿ ಮತ ಬಗ್ಗೆ ಮೇಲರಿಮೆಯುಳ್ಳವರು.
- ಕಾಮದ ನುಡಿಗಳನ್ನು ಬಯ್ಗುಳವನ್ನಾಗಿ ಆಡಿದರೆ ತಮ್ಮ ವ್ಯಕ್ತಿತ್ವಕ್ಕೆ ಮತ್ತು ತಮ್ಮ ಕುಟುಂಬದ ಸಾಮಾಜಿಕ ಅಂತಸ್ತಿಗೆ ಹಾನಿಯುಂಟಾಗುವುದೆಂಬ ಆತಂಕವುಳ್ಳವರು.
- ಈ ಮೊದಲು ತಮ್ಮ ಜೀವನದಲ್ಲಿ ಇತರರನ್ನು ಬಯ್ದುದಕ್ಕಾಗಿ ದಂಡನೆಯನ್ನು ಪಡೆದವರು ಇಲ್ಲವೇ ಹೆಚ್ಚಿನ ಹಾನಿಗೆ ಒಳಗಾದವರು.
- ಎಂತಹ ಉದ್ರಿಕ್ತ ಪ್ರಸಂಗ ಗಳಲ್ಲಿಯೂ ತಮ್ಮನ್ನು ತಾವು ನಿಯಂತ್ರಿಸಿಕೊಳ್ಳಬಲ್ಲ ಕಸುವು ಉಳ್ಳವರು.

ಕನ್ನಡ ನುಡಿ ಸಮುದಾಯದ ಸಾಮಾಜಿಕ ರಚನೆಯ ಸ್ವರೂಪ

ನಾವು ನಿತ್ಯವೂ ಆಡುತ್ತಿರುವ ಕನ್ನಡ ನುಡಿಯಲ್ಲಿ ಯಾತಕ್ಕಾಗಿ ಕೆಲವು ಬಗೆಯ ಪದಗಳು ಮಾತ್ರ ಬಯ್ಗುಳದ ನುಡಿಗಳಾಗಿ ಬಳಕೆಯಾಗುತ್ತವೆ ಎಂಬುದನ್ನು ಅರಿತುಕೊಳ್ಳಬೇಕಾದರೆ **"ಯಾವ ಬಗೆಯ ಪದಗಳನ್ನು ಕನ್ನಡ ನುಡಿ ಸಮುದಾಯ ಬಯ್ಗುಳವೆಂದು ಪರಿಗಣಿಸಿದೆ ಮತ್ತು ಇದಕ್ಕೆ ಕಾರಣವಾದ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಗತಿಗಳೇನು"** ಎಂಬುದನ್ನು ತಿಳಿದುಕೊಳ್ಳಬೇಕು.

ಪ್ರತಿಯೊಂದು ನುಡಿ ಸಮುದಾಯದಲ್ಲಿಯೂ ಬಳಕೆಯಾಗುತ್ತಿರುವ ಬಯ್ಗುಳದ ನುಡಿ ಸಾಮಗ್ರಿಗಳು ಅಂದರೆ "ಮಾತಿನ ಧ್ವನಿಗಳು, ಪದಗಳು ಮತ್ತು ವಾಕ್ಯಗಳು" ಆಯಾಯ ನುಡಿ ಸಮುದಾಯದ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಗತಿಗಳಿಂದ ರೂಪುಗೊಂಡಿರುತ್ತವೆ. ಈ ಹಿನ್ನೆಲೆಯಲ್ಲಿ ನಮ್ಮ ನಿತ್ಯ ಜೀವನದ ಮಾತುಕತೆಗಳಲ್ಲಿ ಬಳಸುತ್ತಿರುವ ಬಯ್ಗುಳದ ನುಡಿ ಸಾಮಗ್ರಿಗಳಿಗೆ ಸಂಬಂಧಿಸಿದ ಸಂಗತಿಗಳನ್ನು ಅರಿತುಕೊಳ್ಳಲು ಕನ್ನಡ ಜನಸಮುದಾಯದ ಸಾಮಾಜಿಕ ಮತ್ತು ಸಾಂಸ್ಕೃತಿಕ ಸ್ವರೂಪವನ್ನು ಮೊದಲು ತಿಳಿದುಕೊಳ್ಳಬೇಕು,

ಕರ್ನಾಟಕ ರಾಜ್ಯದಲ್ಲಿ ಹಿಂದು, ಜೈನ, ಬೌದ್ಧ, ಸಿಖ್, ಇಸ್ಲಾಂ, ಕ್ರಿಶ್ಚಿಯನ್ ಮತ್ತು ಇನ್ನಿತರ ಮತಗಳಿಗೆ ಸೇರಿದ ಹಾಗೂ ಅನೇಕ ಬುಡಕಟ್ಟುಗಳ ಜನರು ನೆಲೆಸಿದ್ದಾರೆ. ರಾಜ್ಯದ ಸುಮಾರು ಏಳು ಕೋಟಿ ಜನಸಂಕೆಯಲ್ಲಿ ಶೇ ೬೫ ಮಂದಿ ಕನ್ನಡವನ್ನು ತಾಯ್ನುಡಿಯಾಗಿ ಹೊಂದಿದ್ದಾರೆ. ಕನ್ನಡ ನುಡಿಗರಲ್ಲಿ ಹೆಚ್ಚಿನ ಮಂದಿ ಹಿಂದುಗಳಾಗಿದ್ದಾರೆ. ಹಿಂದು ಮತವೆಂಬುದು ಹತ್ತಾರು ಬಗೆಯ ಜಾತಿ, ನೂರಾರು ಬಗೆಯ ಉಪಜಾತಿಗಳಿಂದ ಹೆಣೆದುಕೊಂಡಿದೆ. ಈ ಜಾತಿ ಉಪಜಾತಿಗಳೆಲ್ಲವೂ ಮೇಲುಕೀಳಿನ ಮೆಟ್ಟಿಲುಗಳಿಂದ ಕೂಡಿವೆ.

ಜಾತಿ ತಾರತಮ್ಯದ ಜತೆಗೆ ವರ್ಗ ತಾರತಮ್ಯ ಮತ್ತು ಲಿಂಗ ತಾರತಮ್ಯ ಕನ್ನಡ ಜನಸಮುದಾಯದಲ್ಲಿದೆ. ಇದರಿಂದಾಗಿ ಪ್ರತಿಯೊಂದು ಜಾತಿ, ಮತ, ಲಿಂಗ, ವರ್ಗಕ್ಕೆ ಸೇರಿದ ಗುಂಪಿನ ಜನರು ಮತ್ತೊಂದು ಗುಂಪಿನ ಜನರೊಡನೆ ಒಂದಲ್ಲ ಒಂದು ಬಗೆಯ ಅಸಹನೆ, ಆಕ್ರೋಶ, ತಿರಸ್ಕಾರ ಮತ್ತು ಹಗೆತನದ ಒಳಮಿಡಿತಗಳನ್ನು ಹೊಂದಿರುತ್ತಾರೆ. ಆದ್ದರಿಂದ ಜನರ ಮಾತುಕತೆಯಲ್ಲಿ ಬಹು ದೊಡ್ಡ ಪ್ರಮಾಣದಲ್ಲಿ ಬಯ್ಗುಳಗಳು ಬಳಕೆಯಾಗುತ್ತಿವೆ. ಇದರ ಜತೆಜತೆಗೆ ಜಾತಿ, ಮತ ಮತ್ತು ಹೆಣ್ಣು ಗಂಡಿನ ಕಾಮದ ನಂಟಿನ ಬಗ್ಗೆ ಪ್ರತಿಯೊಂದು ಜಾತಿ ಗುಂಪಿನ ನಡೆನುಡಿಗಳು ತಮ್ಮದೇ ಆದ ಸಂಪ್ರದಾಯ, ನಂಬಿಕೆ ಮತ್ತು ಕಟ್ಟು ಪಾಡುಗಳನ್ನು ಹೊಂದಿರುವುದರಿಂದ ಇತರ ಜಾತಿ ಗುಂಪಿನ ನಡೆನುಡಿಗಳನ್ನು ಅಣಕಿಸುವ, ತೆಗಳುವ, ಕಡೆಗಣಿಸುವ ನುಡಿಗಟ್ಟುಗಳು ರೂಪುಗೊಂಡಿವೆ.

ಕೆಲವು ಬಗೆಯ ವಸ್ತುಗಳನ್ನು, ಪ್ರಾಣಿಗಳನ್ನು ಮತ್ತು ವ್ಯಕ್ತಿಗಳ ಸಮಾಜ ಒಪ್ಪಿತ ವಲ್ಲದ ನಡೆನುಡಿಗಳನ್ನು ಕುರಿತು ಜನಸಮುದಾಯಗಳಲ್ಲಿ ಹಲವು ಬಗೆಯ ನಿಲುವು ಗಳಿರುತ್ತವೆ. ಈ ಹಿನ್ನೆಲೆಯಲ್ಲಿ ಕನ್ನಡ ನುಡಿ ಸಮುದಾಯವು ಸಾಂಸ್ಕೃತಿಕವಾಗಿ ಹಾಗೂ ಸಾಮಾಜಿಕವಾಗಿ ಕಳಂಕವೆಂದು ಪರಿಗಣಿಸಿರುವ ವಸ್ತುಗಳು, ಜೀವಿಗಳು, ವ್ಯಕ್ತಿಗಳು ಮತ್ತು ವ್ಯಕ್ತಿಗಳ ಕೆಟ್ಟ ನಡೆನುಡಿಗಳೆಲ್ಲವೂ ಬಯ್ಗುಳದ ನುಡಿ ಸಾಮಗ್ರಿಗಳಾಗಿ ರೂಪುಗೊಂಡು ಬಳಕೆಯಲ್ಲಿವೆ.

೭. ಬಯ್ಯುವಿಕೆ–ಬಯ್ಗುಳದ ನುಡಿಗಳು–ಬಯ್ಗುಳದ ಬಗೆಗಳು

ಯಾವುದೇ ಒಬ್ಬ ವ್ಯಕ್ತಿಯನ್ನು, ಪ್ರಾಣಿಪಕ್ಷಿಯನ್ನು, ಇಲ್ಲವೇ ವಸ್ತುವನ್ನು ಕುರಿತು ತೆಗಳುವ ಇಲ್ಲವೇ ಅವು ಹಾಳಾಗುವಂತೆ ಶಪಿಸುವ ಮಾತಿನ ಕ್ರಿಯೆಯನ್ನು ಬಯ್ಯುವಿಕೆಯೆಂದು ಕರೆಯುತ್ತಾರೆ.

ಈ ರೀತಿ ತೆಗಳುವಾಗ ಇಲ್ಲವೇ ಶಪಿಸುವಾಗ ಬಳಸುವ ನುಡಿ ಸಾಮಗ್ರಿಗಳನ್ನು ಬಯ್ಗುಳಗಳೆಂದು ಗುರುತಿಸುತ್ತಾರೆ.

'ಬಯ್ + ಗುಳ್' ಎಂಬ ಎರಡು ಪದಗಳು ಜತೆಗೂಡಿ ಬಯ್ಗುಳ ಎಂಬ ಪದ ರೂಪಗೊಂಡಿದೆ. **'ಬಯ್'** ಎಂಬ ಕ್ರಿಯಾಪದಕ್ಕೆ **"ಕೆಟ್ಟ ಮಾತನ್ನಾಡು; ಜರೆ; ತೆಗಳು; ನಿಂದಿಸು"** ಎಂಬ ತಿರುಳಿದೆ. **'ಕೂಡಿರುವುದು'** ಎಂಬ ತಿರುಳನ್ನು ಸೂಚಿಸುವ **'ಗುಳ್'** ಎಂಬ ಪ್ರತ್ಯಯ ಸೇರಿ **'ಬಯ್ಗುಳ್'** ಎಂಬ ನಾಮಪದ ರೂಪುಗೊಂಡು, ಜನರ ಬಾಯಲ್ಲಿ **'ಬಯ್ಗುಳ'** ಎಂಬ ರೂಪದಲ್ಲಿ ಉಚ್ಚಾರಣೆಗೊಳ್ಳುತ್ತಿದೆ. ಬಯ್ಗುಳ ಎಂಬ ನಾಮಪದಕ್ಕೆ **"ಜರಿಯುವಿಕೆ; ತೆಗಳಿಕೆ; ಮೂದಲಿಕೆ; ಶಪಿಸುವಿಕೆ"** ಎಂಬ ತಿರುಳಿಗಳಿವೆ.

ನಮ್ಮೆಲ್ಲರ ನಿತ್ಯ ಜೀವನದ ಸಾಮಾಜಿಕ ಸನ್ನಿವೇಶಗಳಲ್ಲಿ **"ಅವರು ನನ್ನನ್ನು ಬಯ್ದರು"** ಎಂಬ ಮಾತನ್ನು ಇತರರಿಂದ ಕೇಳುತ್ತಿರುತ್ತೇವೆ. ಇಲ್ಲವೇ ನಾವೇ ಹೇಳುತ್ತಿರುತ್ತೇವೆ. ಅಂತಹ ಸನ್ನಿವೇಶಗಳಲ್ಲಿ ಯಾವ ಬಗೆಯ ಮಾತುಗಳು ಬಳಕೆಯಾದುವು ಎಂಬುದನ್ನು ಒರೆಹಚ್ಚಿ ನೋಡಿದಾಗ ಯಾವ ಬಗೆಯ ನುಡಿಗಳು ಬಯ್ಗುಳವಾಗಿ ಬಳಕೆಗೊಳ್ಳುತ್ತವೆ ಎಂಬುದು ತಿಳಿದುಬರುತ್ತದೆ.

ಉದಾಹರಣೆ:

೧. **"ಈ ರೀತಿ ಪ್ರತಿನಿತ್ಯ ಕಚೇರಿಗೆ ನೀನು ತಡವಾಗಿ ಬಂದರೆ ನಿನ್ನನ್ನು ಕೆಲಸದಿಂದ ತೆಗೆಯಬೇಕಾಗುತ್ತದೆ."**

೨. "ಇದೇ ರೀತಿ ನೀನು ದುಂದು ವೆಚ್ಚ ಮಾಡುತ್ತಿದ್ದರೆ ಇನ್ನು ಮುಂದೆ ನಾನು ನಿನ್ನ ಕಯ್ಗೆ ಒಂದು ರೂಪಾಯನ್ನೂ ಕೊಡೂದಿಲ್ಲ."

೩. "ನೀನು ಇದೇ ರೀತಿ ಆಡುತ್ತಿದ್ದರೆ ನಿನ್ನ ಕಯ್ ಕಾಲ್ ಮುರಿದು ಒಂದು ಕಡೆ ಕುಂತ್ಕೊಳುವಂಗೆ ಮಾಡ್ತೀನಿ."

೪. "ನನ್ನ ಕೆಣಕಬೇಡ. ನಂಗೆ ಕೋಪ ಬಂದರೆ ಎದ್ದು ಬಂದು ಎದೆಗೆ ಒದ್ದು ನಿನ್ನ ನಡ ಮುರಿತೀನಿ."

೫. "ಏನೋ ತಾಯ್ಗಂಡ ನನ್ಮಗ್ನೆ. ಸಾಲ ತಕೊಂಡ್ ಮ್ಯಾಲೆ ದುಡ್ಡ ಸರಿಯಾದ ಟೇಮಿಗೆ ಕೊಡಬೇಕು ಅನ್ನು ಗ್ಯಾನ ಇಲ್ವಲ್ಲೋ ನಿಂಗೆ."

೬. "ಏನೇ ಹಾದರಗಿತ್ತಿ?..... ನಮ್ಮ ಮನೆ ಮುಳುಗಿಸ್ಬುಟ್ಟಲ್ಲೆ...."

ಮೇಲ್ಕಂಡ ಆರು ಬಗೆಯ ಮಾತುಗಳಲ್ಲಿ ಮೊದಲ ಎರಡು ಬಗೆಗಳಲ್ಲಿ "ಕೆಲಸದಿಂದ ತೆಗೆಯುವ ಮತ್ತು ದುಡ್ಡನ್ನು ಕೊಡದಿರುವ", ಎಚ್ಚರಿಕೆಯ ನುಡಿಗಳಿವೆ. ಅನಂತರದ ಎರಡು ಬಗೆಗಳಲ್ಲಿ, "ಕಾಲನ್ನು ಮುರಿದು ಮತ್ತು ಎದೆಗೆ ಒದೆದು ನಡ ಮುರಿದು" ದೇಹದ ಮೇಲೆ ಹಲ್ಲೆಯನ್ನು ಮಾಡುವ ಬೆದರಿಕೆಯ ನುಡಿಗಳಿವೆ. ಈ ನಾಲ್ಕು ಬಗೆಗಳಲ್ಲಿ ಬಳಕೆಯಾಗಿರುವ ಪದಗಳು ಎಚ್ಚರಿಕೆಯ ಇಲ್ಲವೇ ಬೆದರಿಕೆಯ ನುಡಿಗಳೇ ಹೊರತು ಬಯ್ಗುಳದ ಪದಗಳಲ್ಲ. ಕೊನೆಯ ಎರಡು ಬಗೆಗಳಲ್ಲಿ ಬಳಕೆಯಾಗಿರುವ **"ತಾಯಿಗಂಡ ಮತ್ತು ಹಾದರಗಿತ್ತಿ"** ಎಂಬ ಪದಗಳನ್ನು ಮಾತ್ರ ಬಯ್ಗುಳವೆಂದು ಕರೆಯುತ್ತಾರೆ.

'ತಾಯ್ಗಂಡ' ಎಂಬ ಪದ ಬಯ್ಗುಳವಾಗಿ ಬಳಕೆಯಾಗಲು ಕಾರಣವನ್ನು ತಿಳಿಯ ಬೇಕಾದರೆ ಅದನ್ನು ಕನ್ನಡ ನುಡಿ ಸಮುದಾಯದ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಗತಿಯ ಹಿನ್ನೆಲೆಯಲ್ಲಿ ನೋಡಬೇಕು.

ಕನ್ನಡ ನುಡಿ ಸಮುದಾಯಕ್ಕೆ ಸೇರಿದ ಕುಟುಂಬಗಳಲ್ಲಿ "ಗಂಡು ಹೆಣ್ಣುಗಳ ನಡುವೆ ಯಾರು ಯಾರೊಡನೆ ಕಾಮದ ನಂಟನ್ನು ಹೊಂದಬಹುದು ಇಲ್ಲವೇ ಹೊಂದಬಾರದು" ಎಂಬುದಕ್ಕೆ ತಲೆತಲಾಂತರಗಳಿಂದಲೂ ನಡೆದುಬರುತ್ತಿರುವ ಬಹುಬಗೆಯ ಸಂಪ್ರದಾಯದ ಕಟ್ಟುಪಾಡುಗಳಿವೆ.

ವ್ಯಕ್ತಿಯು ತನ್ನನ್ನು ಹೆತ್ತ ತಾಯಿಯನ್ನು ಕಾಮದ ಬಯಕೆಯಿಂದ ನೋಡುವುದನ್ನು ಇಲ್ಲವೇ ತಾಯಿಯೊಡನೆ ಕಾಮದ ನಂಟನ್ನು ಪಡೆಯುವುದನ್ನು ಬಹು ದೊಡ್ಡ ತಪ್ಪು ಎಂದು ಸಮಾಜ ಪರಿಗಣಿಸಿದೆ. ಈ ಬಗೆಯ ತಪ್ಪನ್ನು ಮಾಡಿದವನನ್ನು **'ತಾಯಿ ಗಂಡ'** ಎನ್ನುತ್ತಾರೆ. ಈ ಬಗೆಯ ಕಾಮದ ನಂಟನ್ನು ಅತಿ ದೊಡ್ಡ ಸಾಮಾಜಿಕ ಕಳಂಕವೆಂದು ಜನಸಮುದಾಯ ನಂಬಿದೆ. 'ಸಾಮಾಜಿಕ ಕಳಂಕ' ಎಂದರೆ ಸಮಾಜಕ್ಕೆ ಒಪ್ಪಿತವಲ್ಲದ ಮತ್ತು ಸಮಾಜಕ್ಕೆ ಹಾನಿಯನ್ನುಂಟುಮಾಡುವ ನಡೆನುಡಿ.

‘ಹಾದರ’ ಎಂಬ ಪದಕ್ಕೆ **‘ಗಿತ್ತಿ’** ಎಂಬ ಪ್ರತ್ಯಯ ಸೇರಿ **‘ಹಾದರಗಿತ್ತಿ’** ಎಂಬ ಪದ ರೂಪುಗೊಂಡಿದೆ. **‘ಹಾದರ’** ಎಂದರೆ ಒಂದು ಗಂಡು ಇಲ್ಲವೇ ಹೆಣ್ಣು ಸಮಾಜ ಒಪ್ಪಿತವಲ್ಲದ ರೀತಿಯಲ್ಲಿ ಕಾಮದ ನಂಟನ್ನು ಹೊಂದಿರುವುದು. ಯಾವುದೇ ಒಂದು ಹೆಣ್ಣು ಈ ರೀತಿ ಕೆಟ್ಟ ನಂಟನ್ನು ಹೊಂದಿದ್ದರೆ, ಅವಳನ್ನು ಹಾದರಗಿತ್ತಿ ಎಂದು ಕರೆಯುತ್ತಾರೆ. ಗಂಡಾಗಲಿ ಇಲ್ಲವೇ ಹೆಣ್ಣಾಗಲಿ ಈ ರೀತಿ ಹಾದರವನ್ನು ಮಾಡುವುದು ಸಾಮಾಜಿಕ ಕಳಂಕಗಳಲ್ಲಿ ಒಂದಾಗಿದೆ.

ಸಾಮಾಜಿಕ ಕಳಂಕವನ್ನು ಸೂಚಿಸುವ ಕಾರಣದಿಂದಾಗಿ **‘ತಾಯಿಗಂಡ’** ಮತ್ತು **‘ಹಾದರಗಿತ್ತಿ’** ಎಂಬ ಪದಗಳು ಬಯ್ಗುಳವಾಗಿ ಬಳಕೆಯಾಗುತ್ತಿವೆ. ನಾವು ಬಯ್ಗುಳ ಪದಗಳ ಬಳಕೆಯಲ್ಲಿ ಮತ್ತೊಂದು ಸಂಗತಿಯನ್ನು ಗಮನಿಸಬೇಕು. ಪ್ರತಿಯೊಂದು ಬಯ್ಗುಳವೂ ಬಳಕೆಯ ಸನ್ನಿವೇಶದಲ್ಲಿ ಬಯ್ಯುವವರ ಮನದ ಇಂಗಿತವನ್ನು ಸೂಚಿಸುವ ರೂಪಕದ ತಿರುಳನ್ನು ಹೊಂದುತ್ತದೆ.

ಉದಾಹರಣೆ:

“ಏನೋ ತಾಯ್ಗಂಡ ನನ್ಮಗ್ನೆ... ಸಾಲ ತಕೊಂಡ್ ಮ್ಯಾಲೆ ದುಡ್ಡ ಸರಿಯಾದ ಟೇಮಿಗೆ ಕೊಡಬೇಕು ಅನ್ನು ಗ್ಯಾನ ಇಲ್ವಲ್ಲೋ ನಿಂಗೆ.”

ಈ ಸನ್ನಿವೇಶದಲ್ಲಿ **‘ತಾಯ್ಗಂಡ’** ಎಂಬ ಬಯ್ಗುಳದ ನುಡಿಯು **“ಅತ್ಯಂತ ಕೀಳಾದ ನಡೆನುಡಿಯುಳ್ಳವನು/ನಂಬಿಕೆಗೆ ಯೋಗ್ಯನಲ್ಲದ ವ್ಯಕ್ತಿ”** ಎಂಬ ರೂಪಕದ ತಿರುಳನ್ನು ಪಡೆದಿದೆ.

“ಏನೇ ಹಾದರಗಿತ್ತಿ ನಮ್ಮ ಮನೆ ಮುಳುಗಿಸ್ಬುಟ್ಟಲ್ಲೆ”

ಈ ಸನ್ನಿವೇಶದಲ್ಲಿ **‘ಹಾದರಗಿತ್ತಿ’** ಎಂಬ ಬಯ್ಗುಳದ ನುಡಿಯು **“ಕೆಟ್ಟ ನಡೆನುಡಿಯುಳ್ಳವಳು”** ಎಂಬ ರೂಪಕದ ತಿರುಳಿನಲ್ಲಿ ಬಳಕೆಯಾಗಿದೆ.

ಬಯ್ಯುವ ವ್ಯಕ್ತಿಯು ತನ್ನ ಮನದ ಆಕ್ರೋಶ, ಹತಾಶೆ, ಸಂಕಟ, ಹೆದರಿಕೆ ಮುಂತಾದ ಒಳಮಿಡಿತಗಳನ್ನು ಹೊರಹಾಕುವಾಗ ಬಳಸುವ ಬಯ್ಗುಳಗಳು ಹೆಚ್ಚಿನ ಸನ್ನಿವೇಶಗಳಲ್ಲಿ ನೇರವಾದ ತಿರುಳಿಗಿಂತಲೂ ರೂಪಕದ ತಿರುಳಿನಲ್ಲಿಯೇ ಬಳಕೆಗೊಳ್ಳುತ್ತವೆ.

ಕನ್ನಡ ನುಡಿ ಸಮುದಾಯದಲ್ಲಿ ಬಳಕೆಯಾಗುತ್ತಿರುವ ಬಯ್ಗುಳಗಳಲ್ಲಿ ಈ ಕೆಳಕಂಡ ಮೂರು ಬಗೆಗಳನ್ನು ನಾವು ಗುರುತಿಸಬಹುದು.

೧. ಆರೋಪದ ಬಯ್ಗುಳ

೨. ಶಾಪ ರೂಪದ ಬಯ್ಗುಳ

೩. ಕಾಮದ ನಂಟಿನ ಬಯ್ಗುಳ.

೧. ಆರೋಪದ ಬಯ್ಗುಳ

ಯಾವುದೇ ಒಬ್ಬ ವ್ಯಕ್ತಿಯನ್ನು ಒಂದು ವಸ್ತು, ಪ್ರಾಣಿಪಕ್ಷಿ ಇಲ್ಲವೇ ವ್ಯಕ್ತಿಯ ಹೆಸರಿನೊಡನೆ ತಗುಳ್ಚಿ ಅಂದರೆ ಸೇರಿಸಿ "ನೀನು ಇಂತಹವನು/ನೀನು ಇಂತಹವಳು" ಎಂದು ನಿಂದಿಸುವ ಬಯ್ಗುಳ ನುಡಿಯನ್ನು ಆರೋಪದ ಬಯ್ಗುಳವೆಂದು ಕರೆಯುತ್ತಾರೆ.

'ಆರೋಪ' ಎಂದರೆ ಸಾಮಾಜಿಕ ಕಳಂಕವನ್ನು ಹೊತ್ತಿರುವ ಗುಣವನ್ನು ಸೂಚಿಸುವುದು ಇಲ್ಲವೇ ಹೊರಿಸುವುದು.

ಉದಾಹರಣೆ:

೧. ನೀನೊಬ್ಬ ಕಳ್ಳ.
೨. ನೀನೊಬ್ಬಳು ಸೂಳೆ.
೩. ತೂ..ನಾಯಿ ನನ್ಮಗ್ನೆ.
೪. ಮುಳ್ಗಳ್ಳಿ ನನ್ ಸವ್ತಿ.

೧. **ಕಳ್ಳ** =ಇತರರ ಒಡವೆ ವಸ್ತುಗಳನ್ನು ಕದ್ದು ಜೀವನವನ್ನು ನಡೆಸುವ ವ್ಯಕ್ತಿಯನ್ನು ಕಳ್ಳನೆಂದು ಕರೆಯುತ್ತಾರೆ. ಇಂತಹ ವ್ಯಕ್ತಿಗೆ ಸಮಾಜದಲ್ಲಿ ಯಾವುದೇ ಬೆಲೆಯಿಲ್ಲ. ಜನರ ಕಣ್ಣಿನಲ್ಲಿ 'ಕಳ್ಳ' ಒಬ್ಬ ಕಳಂಕಿತ ವ್ಯಕ್ತಿ. ಈ ರೀತಿ ಸಾಮಾಜಿಕ ಕಳಂಕವನ್ನು ಹೊತ್ತಿರುವ 'ಕಳ್ಳ' ಎಂಬ ಪದ ಬಯ್ಗುಳವಾಗಿ ಬಳಕೆಯಾಗಿದೆ.

"ನೀನೊಬ್ಬ ಕಳ್ಳ" ಎಂಬ ಮಾತು ಬಳಕೆಯಾದ ಸನ್ನಿವೇಶದಲ್ಲಿ ಬಯ್ಯಿಸಿ ಕೊಂಡ ವ್ಯಕ್ತಿಯು ಕಳ್ಳನೇ ಆಗಿರಬೇಕಿಲ್ಲ. ತನ್ನ ಪಾಲಿಗೆ ಬಂದ ಕೆಲಸವನ್ನು ಸರಿಯಾಗಿ ಮಾಡದವನು ಇಲ್ಲವೇ ನಂಬಿಕೆಗೆ ಯೋಗ್ಯನಲ್ಲದವನು ಎಂಬ ರೂಪಕದ ತಿರುಳಿನಲ್ಲಿಯೂ ಬಳಕೆಯಾಗುತ್ತದೆ.

೨. **ಸೂಳೆ**=ಜೀವನವನ್ನು ನಡೆಸುವುದಕ್ಕಾಗಿ ಹಣವನ್ನು ಸಂಪಾದಿಸಲು ಗಂಡಸರೊಡನೆ ಕಾಮದ ನಂಟನ್ನು ಪಡೆಯುವುದನ್ನು ಕಸುಬನ್ನಾಗಿ ಮಾಡಿಕೊಂಡಿರುವವಳು.

ಸೂಳೆಯಾದ ಹೆಣ್ಣಿಗೆ ಸಮಾಜದಲ್ಲಿ ಯಾವುದೇ ಬೆಲೆಯಿಲ್ಲ. ಆಕೆಯು ಜನರ ಕಣ್ಣಿನಲ್ಲಿ ಅತ್ಯಂತ ಕೆಳಮಟ್ಟದ ವ್ಯಕ್ತಿಯಾಗಿರುತ್ತಾಳೆ. ಸಮಾಜವು ಸೂಳೆತನದ ಕಸುಬನ್ನು ಕಳಂಕಿತವೆಂದು ಪರಿಗಣಿಸಿದೆ. ಈ ರೀತಿ ಸಾಮಾಜಿಕ ಕಳಂಕವನ್ನು

ಹೊತ್ತಿರುವ 'ಸೂಳೆ' ಎಂಬ ಪದ ಬಯ್ಗುಳವಾಗಿ ಬಳಕೆಯಾಗುತ್ತದೆ.

'ಸೂಳೆ' ಎಂದು ಬಯ್ಯಸಿಕೊಂಡ ವ್ಯಕ್ತಿಯು ಸೂಳೆಯೇ ಆಗಿರುತ್ತಾಳೆ ಎಂದೇನಿಲ್ಲ. ಬಯ್ಯುವವರ ಉದ್ದೇಶ ಮತ್ತು ಬಳಕೆಗೊಂಡ ಮಾತಿನ ಸನ್ನಿವೇಶಕ್ಕೆ ತಕ್ಕಂತೆ "ಕೆಟ್ಟ ನಡೆನುಡಿಯುಳ್ಳ ಹೆಂಗಸು" ಎಂಬ ರೂಪಕದ ತಿರುಳಿನಲ್ಲಿ ಬಳಕೆಯಾಗುತ್ತದೆ.

೩. ನಾಯಿ=ಇದೊಂದು ಸಾಕು ಪ್ರಾಣಿ ಮತ್ತು ಮಾನವ ಸಮುದಾಯವಿರುವ ಕಡೆಗಳಲ್ಲಿ ಬೀದಿಯಲ್ಲಿಯೂ ಬಾಳುವ ಜೀವಿ. ತನ್ನನ್ನು ಸಾಕಿದ ಒಡೆಯನಿಗೆ ಅಪಾರವಾದ ಪ್ರೀತಿಯನ್ನು ತೋರಿಸುವ ಈ ಪ್ರಾಣಿಯ ಒಳಿತಿನ ಗುಣಕ್ಕಿಂತಲೂ, ಬೀದಿ ನಾಯಿಯು ಹೇಲು ಕಂಡ ಕಡೆಗೆ ನೆಗೆದು ಹೊಲಸನ್ನು ತಿನ್ನುವ ಬಗೆಯನ್ನು ಗಮನದಲ್ಲಿಟ್ಟುಕೊಂಡು ನಾಯಿಯ ಬಗ್ಗೆ ಕೀಳಾದ ಒಂದು ನಿಲುವು ಜನಮನದಲ್ಲಿದೆ. ಈ ನಿಟ್ಟಿನಲ್ಲಿ 'ನಾಯಿ' ಎಂಬ ಪದ ಒಂದು ಬಯ್ಗುಳವಾಗಿ ಬಳಕೆಯಾಗುತ್ತಿದೆ.

ವ್ಯಕ್ತಿಯನ್ನು **'ನಾಯಿ'** ಎಂದು ಕರೆದಾಗ, ಅವನ ಇಲ್ಲವೇ ಅವಳ ವ್ಯಕ್ತಿತ್ವವನ್ನೇ ಅಲ್ಲಗಳೆದು, ಮಾನವ ಜೀವಿಯಾದ ವ್ಯಕ್ತಿಯನ್ನು ಪ್ರಾಣಿಯ ಹಂತಕ್ಕೆ ಇಳಿಸುವ ತಿರಸ್ಕಾರದ ಭಾವನೆಯಿದೆ. ಬಳಕೆಗೊಂಡ ಸನ್ನಿವೇಶಕ್ಕೆ ತಕ್ಕಂತೆ 'ನಾಯಿ' ಎಂಬ ಬಯ್ಗುಳ ಪದವು "ಯಾವ ಕಡೆಯಲ್ಲಿ ತನಗೆ ಅನುಕೂಲ ದೊರಕುವುದೋ ಅತ್ತ ಹೋಗುವ ಕೀಳು ವ್ಯಕ್ತಿ" ಎಂಬ ರೂಪಕದ ತಿರುಳಿನಲ್ಲಿ ಬಳಕೆಯಾಗುತ್ತದೆ.

೪. ಮುಳ್ಗಳ್ಳಿ=ಇದೊಂದು ಬಗೆಯ ಗಿಡ. ಕಾಂಡದ ಉದ್ದಕ್ಕೂ ಹರಿತವಾದ ಮೊನೆಯುಳ್ಳ ಮುಳ್ಳುಗಳಿಂದ ಕೂಡಿರುವ ಈ ಗಿಡವನ್ನು 'ಮುಳ್ಗಳ್ಳಿ' ಎಂದು ಕರೆಯುತ್ತಾರೆ. ಹಳ್ಳಿಗಾಡಿನ ಹೊಲಗದ್ದೆತೋಟಗಳ ಬೇಲಿಯಲ್ಲಿ ಈ ಬಗೆಯ ಕಳ್ಳಿಗಿಡಗಳು ಇರುತ್ತವೆ. ಈ ಗಿಡದ ಆಕಾರ ಹಾಗೂ ಅದರ ಬಳಿಸಾರಿ ಬಂದವರು ಮುಳ್ಳಿನಿಂದ ಚುಚ್ಚಿಸಿಕೊಂಡಾಗ ಹೊಂದುವ ನೋವನ್ನು ಒಂದು ರೂಪಕವನ್ನಾಗಿ ಮಾಡಿಕೊಂಡು 'ಮುಳ್ಗಳ್ಳಿ' ಎಂಬ ಪದವನ್ನು ಒಂದು ಬಯ್ಗುಳವನ್ನಾಗಿ ಬಳಸಲಾಗುತ್ತಿದೆ.

'ಮುಳ್ಗಳ್ಳಿ ನನ್ ಸವ್ತಿ' ಎಂಬ ಬಯ್ಗುಳವು "ಇತರರಿಗೆ ತೊಂದರೆಯನ್ನು ಮಾಡುವ, ಕಿರುಕುಳವನ್ನು ನೀಡುವ ಮತ್ತು ಚುಚ್ಚು ಮಾತಿನ ಮೂಲಕ ಇತರರ ಮನಸ್ಸನ್ನು ಗಾಸಿಗೊಳಿಸುವ ಹೆಂಗಸು" ಎಂಬ ರೂಪಕದ ತಿರುಳಿನಲ್ಲಿ ಬಳಕೆಯಾಗುತ್ತಿದೆ.

ಬಯ್ಯುವಿಕೆಯನ್ನು ಮೊನಚನ್ನು ಹೆಚ್ಚಿಸಲೆಂದು "ನನ್ ಸವ್ತಿ ಇಲ್ಲವೇ ನನ್

ಮಗ" ಎಂಬ ಬಯ್ಗುಳದ ಪದಗಳನ್ನು ಜತೆಯಾಗಿ ಉಚ್ಚರಿಸುತ್ತಾರೆ. ಒಬ್ಬ ಗಂಡಸಿಗೆ ಇಬ್ಬರು ಹೆಂಡತಿಯರಿದ್ದರೆ, ಅವರಿಬ್ಬರು ಪರಸ್ಪರ ಸವತಿಯರು ಎನಿಸಿಕೊಳ್ಳುತ್ತಾರೆ.

'ನನ್ಮಗ್ನೆ' ಎಂಬುದು ಒಂದು ಬಯ್ಗುಳದ ಪದವಾಗಿ ಬಳಕೆಯಲ್ಲಿದೆ. "ನೀನು ನನಗೆ ಹುಟ್ಟಿದವನು" ಎಂಬ ತಿರುಳನ್ನು ಹೊಂದಿರುವ ಈ ಪದ ಬಯ್ಯಿಸಿಕೊಂಡ ವ್ಯಕ್ತಿಯ ಹುಟ್ಟಿನ ಮೂಲವನ್ನೇ ಕೆಣಕುವಂತಿರುತ್ತದೆ.

ಬಯ್ಗುಳವಾಗಿ ಬಳಸುವ ನುಡಿಸಾಮಗ್ರಿಗಳಾದ ಪದ, ಪದಕಂತೆ ಮತ್ತು ವಾಕ್ಯಗಳೆಲ್ಲವೂ ಎರಡು ಬಗೆಯ ತಿರುಳನ್ನು ಹೊಂದಿರುತ್ತವೆ.

೧. ನೇರವಾದ ತಿರುಳು. ೨. ರೂಪಕದ ತಿರುಳು.

ಉದಾಹರಣೆ:

ಅ) ಬೀದಿಯಲ್ಲಿ ಒಂದು ಹಂದಿ ಬರುತ್ತಿದೆ.

ಆ) ನೀನೊಂದು ಹಂದಿ.

ಇ) ಲೇ ಹಂದಿಗುಟ್ಟೋನೆ ಅಲ್ಲೇನು ಮಾಡ್ತ ಇದ್ದೀಯೆ

ಮೊದಲನೆಯ ವಾಕ್ಯದಲ್ಲಿ **'ಹಂದಿ'** ಎಂಬ ಪದ ನೇರವಾದ ತಿರುಳಿನಲ್ಲಿ ಬಳಕೆಯಾಗಿದೆ.

ಎರಡು ಮತ್ತು ಮೂರನೆಯ ವಾಕ್ಯಗಳಲ್ಲಿ ರೂಪಕದ ತಿರುಳಿನಲ್ಲಿ ಬಳಕೆಯಾಗಿದೆ.

"ನೀನೊಂದು ಹಂದಿ" ಎಂಬ ಬಯ್ಗುಳದ ನುಡಿಯಲ್ಲಿ 'ಹಂದಿ'ಎಂಬ ಪದ ರೂಪಕದ ತಿರುಳಿನಲ್ಲಿ **"ವ್ಯಕ್ತಿಯ ಕೊಳಕುತನವನ್ನು"** ಸೂಚಿಸುತ್ತಿದೆ.

"ಲೇ ಹಂದಿಗುಟ್ಟೋನೆ ಅಲ್ಲೇನು ಮಾಡ್ತ ಇದ್ದೀಯೇ" ಎಂಬ ಬಯ್ಗುಳದ ನುಡಿಯು "ಬಯ್ಯುತ್ತಿರುವವನಿಗೆ ಆ ವ್ಯಕ್ತಿಯ ಬಗ್ಗೆ ಇರುವ ಅಸಡ್ಡೆಯ ಮತ್ತು ತಿರಸ್ಕಾರದ ಭಾವನೆಗಳನ್ನು ಸಂಕೇತಿಸುವ ರೂಪಕವಾಗಿದೆ.

ಬಯ್ಗುಳದ ಪ್ರಸಂಗಗಳಲ್ಲಿ ಬಳಕೆಯಾಗುವ ಬಯ್ಗುಳಗಳೆಲ್ಲವೂ "ಹತಾಶೆ, ಸಂಕಟ, ಅಸೂಯೆ, ಹೊಟ್ಟೆಕಿಚ್ಚು, ಸೇಡು" ಮುಂತಾದ ಬಹು ಬಗೆಯ ಭಾವನೆಗಳನ್ನು ಸೂಚಿಸುವ ರೂಪಕಗಳೇ ಆಗಿರುತ್ತವೆ. ಬಯ್ಗುಳ ಬಳಕೆಯಾಗುವ ಮಾತಿನ ಸನ್ನಿವೇಶಗಳಿಗೆ ತಕ್ಕಂತೆ ರೂಪಕದ ತಿರುಳನ್ನು ಹೊಂದುತ್ತವೆ.

ವ್ಯಕ್ತಿಯ ಮಯ್ ಬಣ್ಣದಿಂದ ಹಿಡಿದು, ವ್ಯಕ್ತಿಯ ದೇಹದ ಆಕಾರ, ವ್ಯಕ್ತಿಯ ಜಾತಿ ಮತ, ವ್ಯಕ್ತಿಯ ನಡೆನುಡಿಯಲ್ಲಿ ಕಂಡು ಬರುವ ತಪ್ಪುಗಳು, ಮತ್ತು ಅಕ್ರಮ ಕಾಮದ ನಂಟನ್ನು ಕುರಿತು ನಿಂದಿಸುವ ಬಗೆಯಲ್ಲಿ ಆರೋಪದ ಬಯ್ಗುಳಗಳು ರೂಪುಗೊಂಡಿರುತ್ತವೆ.

ಉದಾಹರಣೆ:

೧. ಮಯ್ಯಿನ ಅರೆಕೊರೆಗಳನ್ನು ಕುರಿತ ಬಯ್ಗುಳ

ಅ) ಮಯ್ ಬಣ್ಣ:

ಕರಿಯ; ಕೆಂಚ; ಕರಿಮುಂಡೆ.

ಆ) ಅಂಗಹೀನತೆ

ಕುಂಟ; ಕುಂಡ; ಎಡಚ; ಮೆಡ್ಡಗಣ್ಣ;

ಹಲ್ಲುಬ್ಬ; ಹೆಳವ; ಕಿವುಡ; ಮೆಡ್ಡಗಣ್ಣ.

ಇ) ಸಂತಾನೋತ್ಪತ್ತಿಯಲ್ಲಿನ ಕೊರತೆ

ಮಕ್ಕಳನ್ನು ಪಡೆಯಲಾಗದ ಗಂಡಸಿನ ದೇಹದ ಕೊರತೆಯನ್ನು ಹೇಳುವುದರ ಜತೆಗೆ ಗಂಡಸಿನ ಹೇಡಿತನದ ಇಲ್ಲವೇ ಹಿಂಜರಿಕೆಯ ನಡೆನುಡಿಗಳನ್ನು ಈ ಬಗೆಯ ಬಯ್ಗುಳಗಳು ಸೂಚಿಸುತ್ತವೆ.

ಕ್ವಾಜ; ಕೂಮ; ಪಂಡ; ಹೆಣಗ.

ಸಮಾಜದಲ್ಲಿ ಮಕ್ಕಳನ್ನು ಪಡೆಯಲಾಗದ ಹೆಂಗಸನ್ನು ಅತ್ಯಂತ ಹೀನವಾಗಿ ಕಾಣುವುದರ ಜತೆಗೆ, ಆಕೆಯನ್ನು ಈ ರೀತಿ ನಿಂದಿಸುತ್ತಾರೆ.

ಬಂಜೆ; ಗೊಡ್ ನನ್ಸವ್ವಿ; ಸುಳಿಯಿಲ್ಲದ ಮುಂಡೆ,

ಸುಳಿ ಮುರ್ಕು ಮುಂಡೆ.

೨. ಜಾತಿ ನಿಂದನೆಯ ಬಯ್ಗುಳ

ಕಮ್ಜಾತಿಗೆ ಹುಟ್ದೋನು; ಕಮ್ಜಾತಿ ಮುಂಡೆ

'ಕಮ್ಜಾತಿ' ಎಂಬ ಜೋಡುಪದದಲ್ಲಿ **'ಕಡಿಮೆಯ ಜಾತಿ'** ಎಂಬ ಎರಡು ಪದಗಳಿವೆ. ಕೀಳು ಜಾತಿಗೆ ಹುಟ್ಟಿದ ವ್ಯಕ್ತಿ ಎಂಬ ತಿರುಳನ್ನು ಒಳಗೊಂಡಿದೆ. ಕನ್ನಡ ನುಡಿ ಸಮುದಾಯದಲ್ಲಿ ಹತ್ತಾರು ಬಗೆಯ ಜಾತಿಗಳು ಮತ್ತು ನೂರೆಂಟು ಬಗೆಯ ಉಪಜಾತಿಗಳು ಮೇಲು-ಕೀಳಿನ ಮೆಟ್ಟಿಲುಗಳಿಂದ ಕೂಡಿವೆ. ಜಾತಿ ಮೆಟ್ಟಲಿನ ತುತ್ತ ತುದಿಯಲ್ಲಿರುವ ಜನರ ಮನದಲ್ಲಿ 'ತಮ್ಮದೇ ಉತ್ತಮ ಜಾತಿ' ಎಂಬ ಮೇಲರಿಮೆಯಿದ್ದರೆ, ಕೆಳಗಿನ ತುದಿಯಲ್ಲಿರುವ ಜನರ ಮನದಲ್ಲಿ "ತಮ್ಮದೇ ಕಟ್ಟಕಡೆಯದು" ಎಂಬ ಕೀಳರಿಮೆಯಿದೆ. ನಡುವಣ ಜಾತಿಗಳಿಗೆ ಸೇರಿದ ಜನಮನದಲ್ಲಿ ಮೇಲರಿಮೆ ಮತ್ತು ಕೀಳರಿಮೆಗಳೆರಡೂ ನೆಲೆಗೊಂಡಿವೆ. ಒಬ್ಬ ವ್ಯಕ್ತಿಯು ತನಗಿಂತ ಕೆಳಜಾತಿಯವರೊಡನೆ ವ್ಯವಹರಿ ಸುವಾಗ ಮೇಲರಿಮೆಯ ಅಹಂಕಾರದಿಂದ ಕೂಡಿದ್ದರೆ, ತನಗಿಂತ ಮೇಲು ಜಾತಿಯವ ರೊಡನೆ ವ್ಯವಹರಿಸುವಾಗ ಕೀಳರಿಮೆಯಿಂದ ಕುಗ್ಗಿರುತ್ತಾನೆ. ಸಮಾಜದಲ್ಲಿ

ಬೇರೆ ಬೇರೆ ಜಾತಿಗುಂಪುಗಳಾಗಿ ಒಡೆದು, ಮಾನಸಿಕವಾಗಿ ದೂರವಾಗಿದ್ದು ಕೊಂಡು ಬಾಳುತ್ತಿರುವ ಜನರ ತಿಂಡಿತಿನಸುಗಳಲ್ಲಿ, ಹುಟ್ಟು, ಮದುವೆ, ಸಾವು ಮತ್ತು ಹಬ್ಬಗಳ ಆಚರಣೆಯ ಮಾತಿನ ಸನ್ನಿವೇಶಗಳಲ್ಲಿ ಜಾತಿಯ ಬಗೆಗಿನ ನಿಲುವುಗಳು ಎದ್ದು ಕಾಣುತ್ತಿರುತ್ತವೆ. ಇತರರನ್ನು ಕಡೆಗಣಿಸಿ ನುಡಿಯುವಾಗ "ವ್ಯಕ್ತಿಯ ಜಾತಿಯ ಹೆಸರನ್ನು" ಒಂದು ಬಯ್ಗುಳವನ್ನಾಗಿ ಬಳಸುತ್ತಾರೆ.

೩. ಕೆಟ್ಟ ಚಟಗಳನ್ನು ಕುರಿತ ಬಯ್ಗುಳ

ವ್ಯಕ್ತಿಗೆ, ಕುಟುಂಬಕ್ಕೆ ಮತ್ತು ಸಮಾಜಕ್ಕೆ ಹಾನಿಯನ್ನು ಉಂಟುಮಾಡುವ ಯಾವುದೇ ಬಗೆಯ ಕೆಟ್ಟಚಟವುಳ್ಳವರನ್ನು ತೀವ್ರವಾಗಿ ನಿಂದಿಸುವ ಬಯ್ಗುಳಗಳು.

ಗಂಡಸಿಗೆ: ಕುಡುಕ, ಕಚ್ಚೆಗಳ್ಳ, ಜೂಜುಕೋರ, ಲಂಚ್ಕೋರ.

ಕಚ್ಚೆಗಳ್ಳ: ಅನೇಕ ಹೆಂಗಸರೊಡನೆ ಕಾಮದ ನಂಟನ್ನು ಹೊಂದಿರುವವನು ಎಂಬ ರೂಪಕದ ತಿರುಳಿನಲ್ಲಿ ಬಳಕೆಗೊಳ್ಳುತ್ತದೆ. 'ಕಚ್ಚೆ' ಮತ್ತು 'ಕಳ್ಳ' ಎಂಬ ಎರಡು ಪದಗಳು ಜತೆಗೂಡಿ 'ಕಚ್ಚೆಗಳ್ಳ' ಪದ ರೂಪುಗೊಂಡಿದೆ. ಪಂಚೆಯನ್ನು ತೊಡೆಯ ಎಡೆಯಿಂದ ಹಾಯಿಸಿ ನಡುವಿಗೆ ಕಟ್ಟಿಕೊಂಡಾಗ, ಅದು ಕಚ್ಚೆ ಎನಿಸಿಕೊಳ್ಳುತ್ತದೆ.

ಹೆಂಗಸಿಗೆ: ತೀಟೆ ಮುಂಡೆ. ಮಿಟುಕಲಾಡಿ.

ತೀಟೆಮುಂಡೆ: ಕಂಡಕಂಡವರೊಡನೆ ಇಲ್ಲಸಲ್ಲದ ತಂಟೆತಕರಾರನ್ನು ತೆಗೆದು ಜಗಳವಾಡುವ ಚಟವುಳ್ಳ ಹೆಂಗಸು. ನವೆ/ಕಡಿತ/ತುರಿಕೆ ಎಂಬ ತಿರುಳಿನ 'ತೀಟೆ' ಎಂಬ ಪದವು ಕನ್ನಡಿಗರ ಮಾತುಕತೆಯ ಸನ್ನಿವೇಶದಲ್ಲಿ 'ಜಗಳಗಂಟಿತನದ ನಡೆನುಡಿಗಳಿಗೆ' ಒಂದು ರೂಪಕವಾಗಿ ಬಳಕೆಯಾಗುತ್ತದೆ. ಬಯ್ಗುವಿಕೆಯ ಮೊನಚನ್ನು ಹೆಚ್ಚಿಸಲೆಂದು 'ಮುಂಡೆ' ಎಂಬ ಮತ್ತೊಂದು ಬಯ್ಗುಳವನ್ನು ಜತೆಯಲ್ಲಿ ಸೇರಿಸಿ ಉಚ್ಚರಿಸುತ್ತಾರೆ.

ಮಿಟುಕಲಾಡಿ: ತಳುಕುಬಳುಕಿನ ಉಡುಗೆ ತೊಡುಗೆಗಳನ್ನು ತೊಟ್ಟು ಮತ್ತು ನಯಗಾರಿಕೆಯ ನಡೆನುಡಿಗಳಿಂದ ಎಲ್ಲರನ್ನೂ ತನ್ನತ್ತ ಸೆಳೆದು ಜನರನ್ನು ವಂಚಿಸುವ ಹೆಂಗಸು ಎಂಬ ರೂಪಕದ ತಿರುಳಿನಲ್ಲಿ ಈ ಬಯ್ಗುಳದ ಪದ ಬಳಕೆಯಲ್ಲಿದೆ.

೪. ವಂಚಕತನವನ್ನು ಕುರಿತ ಬಯ್ಗುಳ

ಅ) ಯಾವುದೇ ವ್ಯಕ್ತಿಯ ಕೆಟ್ಟ ಗುಣಗಳಲ್ಲಿ ಬಹಳ ಹಾನಿಕಾರಕವಾದುದು ಯಾವುದೆಂದರೆ ಅವನ ವಂಚಕತನದ ಇಲ್ಲವೇ ದ್ರೋಹದ ನಡೆನುಡಿ. ಅದರಲ್ಲಿಯೂ ಉಪಕಾರವನ್ನು ಪಡೆದ ಎಡೆಯಲ್ಲಿಯೇ ವಂಚಿಸುವುದನ್ನು ಈ ಕೆಳಕಂಡ ಬಯ್ಗುಳದ ನುಡಿ ಸಾಮಗ್ರಿಗಳು ಸೂಚಿಸುತ್ತವೆ.

ಅನ್ನ ತಿಂದ್ ಮನೆ ಗಳ ಎಣ್ಸು ಸೂಳೆಮಕ್ಳು.

ಅನ್ನ ಹಾಕ್ದೋಳ್ನೆ ಹೆಂಡ್ತಿ ಅಂತ ಹಿಡ್ಕೊಳೊ ಬಡ್ಡಿಹೈಕ್ಳು.

ನಡು ನೀರಲ್ಲಿ ಬುಂಡೆ ಕುಯ್ಯೋ ನನ್ಮಕ್ಳು.

ಆ) ಸಿರಿವಂತಿಕೆ ಮತ್ತು ಆಡಳಿತದ ಗದ್ದುಗೆಯು ಇರುವ ಕಡೆಗಳಲ್ಲಿ ತಮ್ಮ ಇರುವಿಕೆಯನ್ನು ಕಂಡುಕೊಳ್ಳುತ್ತ, ಅಲ್ಲಿ ನಾನಾ ಬಗೆಯ ತಳುಕಿನ ಆಟಗಳನ್ನು ಆಡುತ್ತ, ತಾವು ಸಂಪತ್ತನ್ನು ಗಳಿಸುವುದಕ್ಕಾಗಿ ಅನ್ಯರನ್ನು ವಂಚಿಸುವ ವ್ಯಕ್ತಿಗಳನ್ನು ಕುರಿತ ಬಯ್ಗುಳಗಳು ಈ ರೀತಿಯಲ್ಲಿವೆ.

ತಳುಕುಗಾರ/ತಳುಕುಗಾತಿ, ತಟವಟಗಾರ/ತಟವಟಗಾತಿ, ಚತ್ರಿ ಬಡ್ಡಿಮಗ/ ಚತ್ರಿ ಮುಂಡೆ, ಕುತಂತ್ರಿ, ಆಟಕೋಟ್ಲೆ ನನ್ಮಕ್ಳು/ಆಟಕೋಟ್ಲೆ ಲೌಡಿ.

೫. ದುರಹಂಕಾರದ ವರ್ತನೆಗಳನ್ನು ಕುರಿತ ಬಯ್ಗುಳ

ತಾಯಿ ತಂದೆಯನ್ನು ಮತ್ತು ಗುರುಹಿರಿಯರನ್ನು ಒಲವಿನಿಂದ ಕಾಣದೆ, ಅವರ ಸಂಗಡ ಬಹಳ ಒರಟುತನದಿಂದ ನಡೆದುಕೊಳ್ಳುವ ಅಹಂಕಾರದ ನಡೆನುಡಿಗಳನ್ನು ಹೊಂದಿರುವ ವ್ಯಕ್ತಿಗಳನ್ನು ಸೂಚಿಸುವ ಬಯ್ಗುಳ.

ಅರ್ಮೆಡ್ಡೆ ಬಡ್ಡಿಹೈದ, ತಲ್ಸಿಡ್ಕ, ತಿರ್ಕೆ ಜಂಬದ ನನ್ಮಗ, ಉರ್ಸಿಂಗಿ, ತಲೇಲೆ ನಡೀತನೆ ಸೂಳೆಮಗ.

೬. ದಾರಿದ್ರ್ಯವನ್ನು ಕುರಿತ ಬಯ್ಗುಳ

ಬಡತನವೆಂಬುದು ಎಲ್ಲಾ ಕಾಲದಲ್ಲಿಯೂ ಸಮಾಜದ ಕಣ್ಣಿನಲ್ಲಿ ಕೀಳು ಎನಿಸಿಕೊಂಡಿದೆ. ಬಡತನದಲ್ಲಿ ಬೇಯುತ್ತಿರುವ ವ್ಯಕ್ತಿಗಳನ್ನು ಕುರಿತು ಬಹಳ ಹೀನವಾಗಿ ನಿಂದಿಸುವಂತಹ ಬಯ್ಗುಳಗಳು ಈ ಕೆಳಕಂಡಂತಿವೆ.

ದರಿದ್ರದ ನನ್ಮಗ, ದಿಕ್ಕೆಟ್ಟ ನನ್ಮಗ, ಪುಟಗೋಸಿ ನನ್ಮಗ, ಪರ್ದೇಸಿ ನನ್ಮಗ, ಪಾಪರ್ ನನ್ಮಗ/ಪಾಪರ್ ಮುಂಡೆ;

ಇಟ್ಟಾಡ್ಕೊಂಡು ಚೊಟ್ಟೆ ಎತ್ಕೊಂಡು ಬದ್ದಿರೋ ನನ್ಮಗ.

೭. ಹೆಸರುಗಳನ್ನು ಸಂಕೇತವನ್ನಾಗಿ ಮಾಡಿಕೊಂಡು ನಿಂದಿಸುವ ಬಯ್ಗುಳ

ಅ) ಪ್ರಾಣಿಗಳ ಹೆಸರನ್ನು ನೇರವಾಗಿ ವ್ಯಕ್ತಿಗೆ ಆರೋಪಿಸಿ ನಿಂದಿಸಿರುವ ಬಯ್ಗುಳ:

ಹಂದಿ ನನ್ಮಗ; ಹೆಣ್ ಹ್ಯಾಟೆ ನನ್ಮಗ

ಕಪಿ ಬಡ್ಡತ್ತದ್ದು; ನರಿ ಬಡ್ಡಿಮಗ

ರಣ್ಕಾಟಿ ನನ್ಸವ್ತಿ ; ಕತ್ತೆ ರಂಡೆ.

ಆ) ಮುಳ್ಳುಗಳಿಂದ ಕೂಡಿ ವಿಕೃತವಾಗಿರುವ ಕೆಲವು ಸಸ್ಯಗಳ ಹೆಸರಿನ ಬಯ್ಗುಳ:

ಮುಂಡ್ಗಳ್ಳಿ ನನ್ಸವ್ತಿ; ಪಾಪಾಸ್ ಕಳ್ಳಿ ನನ್ಸವ್ತಿ.

ಇ) ಪುರಾಣಗಳಲ್ಲಿ ಕೆಟ್ಟ ನಡೆನುಡಿಯುಳ್ಳವರೆಂದು ನಿರೂಪಣೆಗೊಂಡಿರುವ ವ್ಯಕ್ತಿಗಳ ಹೆಸರು:

ಕೀಚಕ; ಮಂತ್ರೆ; ಹಿಡಂಬಿ; ಶಕುನಿ; ಶಿಖಂಡಿ; ತಾಟ್ಗಿತ್ತಿ; ಪೂತನಿ.

ಈ ಬಯ್ಗುಳ ಪದಗಳೆಲ್ಲವೂ ಮಾತಿನ ಸನ್ನಿವೇಶಕ್ಕೆ ಅನುಗುಣವಾಗಿ "ವ್ಯಕ್ತಿಯ ಕಾಮುಕತನ, ಕ್ರೂರತನ, ವಂಚಕತನ, ಹೇಡಿತನದ ಗುಣಗಳನ್ನು" ಸೂಚಿಸುವ ರೂಪಕಗಳಾಗಿ ಬಳಕೆಗೊಳ್ಳುತ್ತವೆ.

ಈ) ಐತಿಹಾಸಿಕ ವ್ಯಕ್ತಿಗಳಲ್ಲಿ 'ಮೀರ್ ಸಾದಕ್' ಎಂಬ ವ್ಯಕ್ತಿಯ ಹೆಸರು ನಂಬಿಕೆ ದ್ರೋಹಕ್ಕೆ ಒಂದು ಸಂಕೇತವಾಗಿದೆ.

ಉ) ಹಳ್ಳಿಗಾಡಿನ ಜನರು ತಾವು ಬಹಳ ಭಯಭಕ್ತಿಯಿಂದ ಪೂಜಿಸುವ ದೇವತೆಗಳ ಹೆಸರನ್ನು ಬಯ್ಗುಳವಾಗಿ ಬಳಸುತ್ತಾರೆ.

ಉರಿ ಮಾರಿ; ಮಾರಿ ಮುಂಡೆ;

೮. ಯಾವುದೇ ಕೆಲಸವನ್ನು ಮಾಡದೆ ಇಲ್ಲವೇ ಹಿಡಿದ ಕೆಲಸವನ್ನು ಅಚ್ಚುಕಟ್ಟಾಗಿ ನೆರವೇರಿಸದ ವ್ಯಕ್ತಿಗಳನ್ನು ಕುರಿತ ಬಯ್ಗುಳ:

ಏತ್ಲಾಂಡಿ; ಎಡವಟ್ ನನ್ಮಗ; ಅನ್ನಾಡಿ; ಅಡ್ಜಂಬ್ರದ ಬಡ್ಡತ್ತದ್ದೆ.

೯. ವ್ಯಕ್ತಿಗಳಲ್ಲಿರುವ ಕೇಡಿಗತನ, ದಡ್ಡತನ, ಆಲಸ್ಯ ಮುಂತಾದ ವರ್ತನೆಗಳನ್ನು ಕಟುವಾಗಿ ಟೀಕಿಸುವಂತಹ ಬಯ್ಗುಳ:

ಕೇಡ್ಗ; ಅನ್ನೇಕಾರ/ಅನ್ನೇಕಾತಿ; ಗಾಂಪ; ಹೆಡ್ಡ; ಮೈಗಳ್ಳ; ಸೋಂಬೇರಿ.

೧೦. ವ್ಯಕ್ತಿಯ ಹುಟ್ಟಿನ ಹಿನ್ನೆಲೆಯಲ್ಲಿ ಕಂಡುಬರುವ ಲೋಪಗಳನ್ನು ಮತ್ತು ಅಕ್ರಮ ಕಾಮದ ನಂಟನ್ನು ಕುರಿತು ನಿಂದಿಸುವ ಬಯ್ಗುಳ:

ಅ) ಗಂಡಸಿಗೆ ಹೆಚ್ಚಿನ ಮನ್ನಣೆಯುಳ್ಳ ಸಾಮಾಜಿಕ ವ್ಯವಸ್ಥೆಯಲ್ಲಿ "ತಂದೆಯ

ಬೀಜಕ್ಕೆ ಹುಟ್ಟಿದವನೇ ಸಮಾಜ ಒಪ್ಪಿತವಾದ ಸಂತಾನ. ಇತರ ಗಂಡಸರಿಂದ ಹುಟ್ಟಿದ್ದೆಲ್ಲವೂ ಅಕ್ರಮ ಸಂತಾನ" ಎಂಬ ಕಟ್ಟುಪಾಡುಗಳಿವೆ. ಕುಟುಂಬದ ನೆಲೆಯಲ್ಲಿ ಇಂತಹ ಕಟ್ಟುಪಾಡುಗಳು ಜಗತ್ತಿನ ಬಹುತೇಕ ಸಮಾಜಗಳಲ್ಲಿ ಕಂಡುಬರುತ್ತದೆ. ಕನ್ನಡ ನುಡಿ ಸಮುದಾಯದಲ್ಲಿಯೂ ಇದೇ ಬಗೆಯ ಕಾಮದ ನಂಟಿನ ಸಾಮಾಜಿಕ ಕಟ್ಟುಪಾಡುಗಳು ಜಾರಿಯಲ್ಲಿರುವುದರಿಂದ ಅಕ್ರಮ ಸಂತಾನದ ಬಗೆಗಿನ ಬಯ್ಗುಳಗಳು ರೂಪುಗೊಂಡು ಬಳಕೆಯಲ್ಲಿವೆ. ಯಾವುದೇ ಒಬ್ಬ ವ್ಯಕ್ತಿಯ ಹುಟ್ಟಿನ ಹಿನ್ನೆಲೆಯನ್ನು ಪ್ರಶ್ನಿಸಿದಾಗ, ಕೆದಕಿದಾಗ ಇಲ್ಲವೇ ಅಣಕಿಸಿ ಬಯ್ದಾಗ, ಬಯ್ಯಿಸಿಕೊಂಡ ವ್ಯಕ್ತಿಯು ತೀವ್ರವಾದ ಮಾನಸಿಕ ಯಾತನೆಗೆ ಗುರಿಯಾಗುತ್ತಾನೆ. ಆದ್ದರಿಂದ ಆತ ಕೂಡಲೇ ಆಕ್ರಮಣಕಾರಿಯಾಗಿ ಪ್ರತಿಕ್ರಿಯಿಸುತ್ತಾನೆ.

ಅಡ್ನಾಡಿಗೆ ಹುಟ್ದೋನು.

ಅಪ್ಪಿಲ್ದೆ ಹುಟ್ದೋನು.

ಮಿಂಡರಿಗೆ ಹುಟ್ದೋನು.

ಹಲವುಬೆರ್ಕೆಗೆ ಹುಟ್ದೋನು.

ಹಾದರಕ್ಕೆ ಹುಟ್ದೋನು.

ಇಪ್ಪತ್ತೆಂಟ್ ಜನಕ್ಕೆ ಹುಟ್ದೋನು.

ಆ) ವ್ಯಕ್ತಿಯ ಹುಟ್ಟಿನ ಹಿನ್ನೆಲೆಯಲ್ಲಿ ತಂದೆಯ 'ಬೀಜದ' ವಿಚಾರ ಹೇಗೆ ಮುಖ್ಯ ಸಂಗತಿಯಾಗಿದೆಯೋ, ಅಂತೆಯೇ ಮಗುವನ್ನು ಹೆರುವ ತಾಯಿಯ ಪಾತಿವ್ರತ್ಯ ಮತ್ತು ಶೀಲವು ಚೆನ್ನಾಗಿರಬೇಕೆಂದು ಸಮಾಜದ ನಿಲುವಾಗಿದೆ. ಯಾವುದೇ ಒಂದು ಹೆಣ್ಣನ್ನು ನಿಂದಿಸುವಾಗ, ಆಕೆಯ ಶೀಲದ ಮೇಲೆ ದಾಳಿ ಮಾಡುವಂತಹ ಬಯ್ಗುಳಗಳನ್ನು ಅತಿ ಹೆಚ್ಚಾಗಿ ಬಳಸುತ್ತಾರೆ. ಇಂತಹ ಮಾತಿನ ಹಲ್ಲೆಯಿಂದ ಆಕೆಯ ವ್ಯಕ್ತಿತ್ವಕ್ಕೆ ದೊಡ್ಡ ಪೆಟ್ಟನ್ನು ಕೊಡಲಾಗುತ್ತದೆ.

ಊರು ಕೇದೋಳೆ; ಸೀಮೆ ಜನ ಕೇದೋಳೆ;

ಇ) **ಅಗಮ್ಯ ಸಂಬಂಧದ ನಿರಾಕರಣೆ**

(ಅಗಮ್ಯ=ಹೋಗಿ ಸೇರಲಾಗದ/ಕೂಡಲಾಗದ; ಅಗಮ್ಯ ಸಂಬಂಧ= ಮಾಡ ಬಾರದ ನಂಟು.)

ಜಗತ್ತಿನ ಎಲ್ಲ ಬಗೆಯ ಜಾತಿ, ಧರ್ಮ ಮತ್ತು ಬುಡಕಟ್ಟಿನ ಜನಸಮುದಾಯ ಗಳಲ್ಲಿಯೂ ಗಂಡು-ಹೆಣ್ಣಿನ ಕಾಮದ ನಂಟಿನ ಬಗ್ಗೆ ಹಲವು ಬಗೆಯ ಕಟ್ಟು

ಪಾಡುಗಳಿವೆ. ಇಂತಹ ಕಟ್ಟುಪಾಡುಗಳಲ್ಲಿ ಅಗಮ್ಯ ಸಂಬಂಧಗಳ ನಿರಾಕರಣೆಯು ಮುಖ್ಯವಾದುದು. 'ಅಗಮ್ಯ ಸಂಬಂಧದ ನಿರಾಕರಣೆ' ಎಂದರೆ **"ಇಂತಹ ಒಂದು ಗಂಡು ಇಂತಹ ಒಂದು ಹೆಣ್ಣಿನ ಜತೆ ಕಾಮದ ನಂಟನ್ನು ಹೊಂದ ಬಾರದು"** ಎಂಬ ಕಟ್ಟುಪಾಡು. ಇದನ್ನು ಮೀರಿ ನಡೆದುಕೊಳ್ಳುವುದು ಸಮಾಜದ ಕಣ್ಣಿನಲ್ಲಿ ಅತ್ಯಂತ ತೀವ್ರತರವಾದ ಅಪರಾಧವಾಗುತ್ತದೆ ಮತ್ತು ಸಾಮಾಜಿಕ ಕಳಂಕದ ನಡೆಯಾಗುತ್ತದೆ. ಕನ್ನಡ ನುಡಿ ಸಮುದಾಯದಲ್ಲಿ ಅಗಮ್ಯ ಸಂಬಂಧದ ತಡೆ ಈ ಕೆಳಕಂಡ ಸ್ವರೂಪದಲ್ಲಿದೆ. ಈ ವ್ಯಕ್ತಿಗಳ ನಡುವೆ ಕಾಮದ ನಂಟು ನಡೆಯಬಾರದು.

ತಾಯಿ–ಮಗ; ತಂದೆ–ಮಗಳು; ಅತ್ತೆ–ಅಳಿಯ; ಮಾವ–ಸೊಸೆ; ಅತ್ತಿಗೆ–ಮೈದುನ; ಅಣ್ಣ–ತಂಗಿ;

ಕುಟುಂಬದ ನೆಲೆಯಲ್ಲಿ ಮೇಲ್ಕಂಡ ವ್ಯಕ್ತಿಗಳ ನಡುವೆ ಕಾಮದ ನಂಟು ನಡೆದರೆ, ಅದು ಸಮಾಜದ ತಿರಸ್ಕಾರಕ್ಕೆ ಗುರಿಯಾಗುತ್ತದೆ. ಇಂತಹ ಅಗಮ್ಯ ಸಂಬಂಧಗಳಲ್ಲಿ ತಾಯಿ ಮತ್ತು ಮಗನ ನಡುವಣ ಸಂಬಂಧವನ್ನು ಎಲ್ಲ ಸಮಾಜಗಳಲ್ಲಿಯೂ ಕಳಂಕಿತ ನಡೆಯೆಂದು ಪರಿಗಣಿಸಲಾಗಿದೆ. ಇತರರಿಗೆ ವಂಚಿಸುವ ಮತ್ತು ನಂಬಿದ ಎಡೆಯಲ್ಲಿಯೇ ದ್ರೋಹವನ್ನು ಮಾಡುವ ವ್ಯಕ್ತಿಗಳನ್ನು ಬಯ್ಯುವಾಗ ಈ ಬಗೆಯ ಬಯ್ಗುಳಗಳು ರೂಪಕದ ತಿರುಳಿನಲ್ಲಿ ಬಳಕೆಯಾಗುತ್ತವೆ.

ತಾಯೀಗೆ ಕಾಲ್ನೀಡು ಬಡ್ಡಿಹೈದ.

ತಾಯಿ ಕೇದು ತಮ್ಮನನ್ನು ಹುಟ್ಟಿಸು ನನ್ಮಗ.

ತಾಯಿ ಮಗ್ಗುಲಿಗೆ ಕಾಲಾಕು ನನ್ಮಕ್ಳು.

ತಮ್ಮ ಹೈಕ್ಳ ತಾವೇ ಕೇದು ದೇವರಿಗೆ ಹೆಸರಿಸು ನನ್ಮಗ. (ತಂದೆ–ಮಗಳ ಸಂಬಂಧ)

ವಾಲೆ ವರ್ಸೆ ನೋಡ್ದೆ ಮೈದುನ ಕೇದೋಳೆ.(ಅತ್ತಿಗೆ–ಮೈದುನ ಸಂಬಂಧ)

ಈ ರೀತಿಯಲ್ಲಿ ಸಾಮಾಜಿಕ ಕಳಂಕಕ್ಕೆ, ಜನಸಮುದಾಯದ ಕಣ್ಣಿನಲ್ಲಿ ಅಸಹ್ಯ ಮತ್ತು ತಿರಸ್ಕಾರಕ್ಕೆ ಗುರಿಯಾಗಿರುವ ವಸ್ತುಗಳು, ಕೆಲವು ಬಗೆಯ ಪ್ರಾಣಿಪಕ್ಷಿಗಳು ಮತ್ತು ವ್ಯಕ್ತಿಗಳ ಕೆಟ್ಟ ನಡೆನುಡಿಗಳು ಆರೋಪದ ಬಯ್ಗುಳಗಳಾಗಿ ರೂಪು ಗೊಂಡು ಜನಸಮುದಾಯದ ಮಾತುಕತೆಗಳಲ್ಲಿ ಬಳಕೆಗೊಳ್ಳಲು ಕಾರಣವಾಗಿವೆ.

❖

೨. ಶಾಪ ರೂಪದ ಬಯ್ಗುಳ

ವ್ಯಕ್ತಿಗೆ ಸಾವು ನೋವು ಉಂಟಾಗಲಿ; ವ್ಯಕ್ತಿಗೆ ಸೇರಿದ ಒಡವೆ ವಸ್ತು ಆಸ್ತಿಪಾಸ್ತಿಯು ನಾಶವಾಗಲಿ; ವ್ಯಕ್ತಿಯ ಕುಟುಂಬದ ಮಕ್ಕಳು ಮೊಮ್ಮಕ್ಕಳು ಮರಿಮೊಮ್ಮಕ್ಕಳೆಲ್ಲರೂ ಸಾವನ್ನಪ್ಪಿ ಮನೆತನವೇ ನಾಶವಾಗಲಿ; ಒಟ್ಟಿನಲ್ಲಿ ವ್ಯಕ್ತಿಗೆ ಒಂದಲ್ಲ ಒಂದು ಬಗೆಯ ಕೇಡು ತಟ್ಟಲಿ ಎಂಬ ಉದ್ದೇಶದಿಂದ ಆಡುವ ನುಡಿಯನ್ನು ಶಾಪವೆಂದು ಕರೆಯುತ್ತಾರೆ.

ಶಾಪದ ನುಡಿಯ ಮೂಲಕ ಬಯ್ಯುವುದನ್ನು 'ಶಾಪ ಹಾಕುವುದು' ಎನ್ನುತ್ತಾರೆ. ಶಾಪ ಎಂಬ ಪದಕ್ಕೆ "ಕೇಡುಕನ್ನು ಬಯಸಿ ಹೇಳುವ ಮಾತು " ಎಂಬ ತಿರುಳಿದೆ.

ಜನರು ತುಂಬಾ ಹತಾಶೆಗೆ ಒಳಗಾದಾಗ, ಅಂದರೆ ಹೆಚ್ಚಿನ ಮಟ್ಟದ ಹಾನಿ, ನೋವು ಇಲ್ಲವೇ ಅಪಮಾನಕ್ಕೆ ಗುರಿಯಾಗಿ ನರಳುತ್ತಿರುವಾಗ, ತಮ್ಮ ಸಂಕಟಕ್ಕೆ ಕಾರಣರಾದ ವ್ಯಕ್ತಿಗಳಿಗೆ ಶಾಪವನ್ನು ಹಾಕುತ್ತಾರೆ. ಕೆಲವೊಮ್ಮೆ ತಮ್ಮ ಚಲನವಲನಕ್ಕೆ ಅಡ್ಡಿಯಾದ ಹಾಗೂ ಇನ್ನಿತರ ತೊಂದರೆಗೆ ಕಾರಣವಾದ ಜಡವಸ್ತುಗಳನ್ನು ಮತ್ತು ಜೀವಜಂತುಗಳನ್ನು ಶಪಿಸುತ್ತಾರೆ. ಒಂದೇ ಸಮನೆ ಶಾಪದ ನುಡಿಗಳನ್ನೇ ಅತಿ ಹೆಚ್ಚಾಗಿ ಬಳಸುತ್ತಿದ್ದರೆ ಅದನ್ನು **'ಹಿಡಿಹಿಡಿ ಶಾಪ ಹಾಕುವುದು'** ಎನ್ನುತ್ತಾರೆ.

ಶಾಪದ ನುಡಿಗಳಿಗೆ ಒಂದು ಬಗೆಯ ಮಾಂತ್ರಿಕ ಶಕ್ತಿಯಿದೆಯೆಂಬ ನಂಬಿಕೆಯು ಜನಸಮುದಾಯದಲ್ಲಿದೆ. **'ಮಾಂತ್ರಿಕ ಶಕ್ತಿ'** ಎಂದರೆ ದೇವತೆ, ದೆವ್ವ ಇಲ್ಲವೇ ಅತಿ ಮಾನವ ಶಕ್ತಿಗಳನ್ನು ಕೆಲವೊಂದು ಬಗೆಯ ಆಚರಣೆಗಳಿಂದ ಮತ್ತು ನಿಯತವಾದ ನುಡಿಗಳ ಉಚ್ಚಾರಣೆಯಿಂದ ಒಲಿಸಿಕೊಂಡು, ಆ ಮೂಲಕ ತಮ್ಮ ಬಯಕೆಗಳನ್ನು ಈಡೇರಿಸಿಕೊಳ್ಳಬಲ್ಲ ಶಕ್ತಿ. ಇದನ್ನು **'ಮಾಟ-ಮಂತ್ರ'** ಎಂದು ಕೂಡ ಕರೆಯುತ್ತಾರೆ.

ಮಾಟ-ಮಂತ್ರಗಳ ಮೂಲಕ ವ್ಯಕ್ತಿಯು ತನ್ನ ಬಯಕೆಗಳನ್ನು ಈಡೇರಿಸಿ ಕೊಳ್ಳುವುದರ ಜತೆಗೆ ತನ್ನ ಹಗೆಗಳಿಗೆ ಸಾವು ನೋವುಗಳನ್ನು ಉಂಟುಮಾಡ ಬಹುದೆಂಬ ನಂಬಿಕೆಯು ಜನಮನದಲ್ಲಿದೆ. ಮಾಟ-ಮಂತ್ರದ ಕ್ರಿಯೆಗಳು ಹೇಗೆ ತಮ್ಮ ಶತ್ರುಗಳನ್ನು ನಾಶಪಡಿಸುತ್ತವೆಯೋ ಅಂತೆಯೇ ಶಾಪದ ನುಡಿಗಳು ಕೂಡ ಕ್ರಿಯೆಯ ರೂಪವನ್ನು ಪಡೆದು ತಮ್ಮ ಹಗೆಗಳನ್ನು ನಾಶಪಡಿಸುವಂತಾಗಲಿ ಎಂಬ ಉದ್ದೇಶವು ಬಯ್ಯುವವರಲ್ಲಿ ಇರುತ್ತದೆ. ಆದ್ದರಿಂದ ಶಾಪವನ್ನು **"ಮಾತಿನ ರೂಪದ ಮಾಟ ಮತ್ತು ಮಂತ್ರ"** ಎಂದು ಕರೆಯುತ್ತಾರೆ. ಜನಸಮುದಾಯದ ಮಾತುಕತೆ ಗಳಲ್ಲಿ ಬಳಕೆಯಾಗುವ ಕನ್ನಡ ಶಾಪಗಳು ಈ ಕೆಳಕಂಡಂತಿವೆ:

೧. ಸಾವು ಉಂಟಾಗಲಿ ಎಂಬ ಶಾಪಗಳು:

ನಿನ್ ಬಾಯ್ಗೆ ಮಣ್ ಬೀಳ.
ನಿಂಗೆ ಆಪತ್ ಬಂದ್ ಚಾಪೇಲಿ ಹೊತ್ಕೊಂಡೋಗ.
ನೀನ್ ನಿಗ್ರು ಬೊದ್ದೆ ಹಾಕ.
ನಿನ್ನ ಹಜ್ಜೆ ಮರ್ಸ, ಗೆಜ್ಜಲು ತಿನ್ನ.

೨. ಮನೆಯು ಹಾಳಾಗಲಿ ಎಂಬ ಶಾಪಗಳು:

ನಿನ್ ಮನೇಗೆ ಬೆಂಕಿ ಬೀಳ.
ನಿನ್ ಮನೆ ಪಾಳ್ ಮನೆಯಾಗ.
ನಿನ್ ಮನೆಗೆ ಬೀದಿ ಮಾರಮ್ಮ ನುಗ್ಗ.
ನಿನ್ ಮನೆ ಪಾಳ್ ಮನೆಯಾಗ.

೩. ದೇಹದ ಅಂಗಗಳು ಹಾಳಾಗಲಿ ಎಂಬ ಶಾಪಗಳು:

ನಿನ್ ಕಣ್ ಇಂಗೋಗ.
ನಿನ್ ಕಯ್ ಸೇದೋಗ.
ನಿನ್ ಕಾಲ್ ಮುರಿಯ.
ನಿನ್ ನಾಲ್ಗೆ ನರ ಸಾಯ.

೪. ರೋಗಗಳು ತಟ್ಟಲಿ ಎಂಬ ಶಾಪಗಳು:

ನಿಂಗೆ ಮೊಲ್ಲಾಗ್ರು ಬರ.
ನಿಂಗೆ ಸಾಲೆ ರೋಗ ಬರ.
ನಿಂಗೆ ವಾಂತ್ಬೇದಿ ಬರ.
ನಿಂಗೆ ಮೊಳೆ ರೋಗ ಬರ.

೫. ಮಕ್ಕಳಿಗೆ ಸಾವು ಬರಲಿ ಇಲ್ಲವೇ ಮನೆತನ ನಾಶವಾಗಲಿ ಎಂಬ ಶಾಪಗಳು

ನಿನ್ ಸುಳಿ ಸತ್ತೋಗ.
ನಿನ್ ಕಂದನ್ನ ತಿನ್ನ.
ನಿನ್ ಹೆತ್ ಕಂದನ್ನ ಹುತ್ತಕ್ಕೆ ಹಾಕ.
ನಿನ್ ಮಕ್ಕಳನ್ನೆಲ್ಲ ಒಟ್ಗೆ ತಕೊಂಡೋಗಿ ಗುಂಡಿಗಾಕ.
ನಿನ್ ಮಕ್ಳ ಸಾಲ್ ಸಮಾದಿ ಮಾಡ.

೬. ಮದುವೆಯಾಗದಿರಲಿ ಎಂಬ ಶಾಪಗಳು:

ನಿನ್ ಹಣೆ ಮ್ಯಾಲೆ ಬಾಸಿಂಗ ಕಟ್ದೇ ಹೋಗ.
ನೀನ್ ಹಸೆಮಣೆ ಮ್ಯಾಲೆ ಅಕ್ಕಸ್ದಕ್ಕಿ ಕಾಣ್ದೆ ಹೋಗ.
ನೀನ್ ಮೂಡ್ಲಾಗ್ ನಿಂತ್ಕೊಂಡು ಅಕ್ಕಿ ಕಾಳ್ ಹಾಕಿಸ್ಕೋದೆ ಹೋಗ.

೭. ಬಡತನ ಉಂಟಾಗಲಿ ಎಂಬ ಶಾಪಗಳು:

ನಿಂಗೆ ಬರಬಾರದ್ದು ಬಂದು ಬೀದೀಲಿ ನಿಂತ್ಕೊಳ.
ನಿನ್ ಕಯ್ಗೆ ಬಂದದ್ದು ಬಾಯ್ಗೆ ಬರದೇ ಹೋಗ.
ನಿನ್ ಬರ ಇಂಗದೇ ಹೋಗ.
ನಿಂಗೆ ಬಂದ ಕಷ್ಟ ಬಯಲಾಗ್ದೆ ಹೋಗ.

೮. ದನಕರು ಮುಂತಾದ ಪ್ರಾಣಿ ಸಂಪತ್ತು ನಾಶವಾಗಲಿ ಎಂಬ ಶಾಪಗಳು

ನಿನ್ ಎತ್ಗೆ ಜರಾ ಬರ.
ನಿನ್ ಎಮ್ಮೇಗೆ ದೊಡ್ರೋಗ ಬರ.
ನಿನ್ ಕೋಳಿಗೆ ಕೊಕ್ರೆ ರೋಗ ಬರ.

೯. ಸಾವಿನ ನಂತರದ ಕ್ರಿಯೆಗಳನ್ನು ಬಯಸುವ ಶಾಪಗಳು:

ನಿನ್ ಇಂಡೇಕೂಳ್ ನಾಯಿ ತಿನ್ನ.
ನಿನ್ನ ಒಂಟಕೊಂಬೆ ಮ್ಯಾಲೆ ಹೊತ್ಕೊಂಡ್ ಹೋಗ.
ನಿನ್ ದುವ್ವೆ ಮ್ಯಾಕೆ ಕಾಗೆ ಬರದೇ ಹೋಗ.
ನಿನ್ ಬುಂಡೆ ಒಡಿದೇನೆ ಹೋಗ.

ಶಾಪವನ್ನು ಹಾಕುವವರು ಅತಿ ಹೆಚ್ಚಿನ ಸನ್ನಿವೇಶಗಳಲ್ಲಿ ಹಗೆಯನ್ನು ಎದುರಿಸುವ ಇಲ್ಲವೇ ಹಗೆಯನ್ನು ಸದೆಬಡಿಯುವ ದೇಹ ಬಲ, ಜಾತಿ ಬಲ, ಹಣ ಬಲ, ಗದ್ದುಗೆಯ ಬಲ, ಜನ ಬಲ ತಮ್ಮಲ್ಲಿ ಇಲ್ಲವೆಂಬ ಕೊರಗು ಮತ್ತು ಅಸಹಾಯಕತೆಯಿಂದಾಗಿ, ತಾವು ನಂಬಿರುವ ದೇವರಿಗೆ ಇಲ್ಲವೇ ಅತಿಮಾನವ ಶಕ್ತಿಗೆ ಮೊರೆಹೋಗುತ್ತಾರೆ. ಆದ್ದರಿಂದಲೇ ಪ್ರತಿಯೊಂದು ಶಾಪದ ನುಡಿಯ ಕೊನೆಯಲ್ಲಿ "ಬೀಳ (ಬೀಳಲಿ/ಬೀಳುವಂತಾಗಲಿ); ಆಗ (ಆಗಲಿ/ಆಗುವಂತಾಗಲಿ); ಹೋಗ (ಹೋಗಲಿ/ಹೋಗುವಂತಾಗಲಿ); ಬರ (ಬರಲಿ/ಬರುವಂತಾಗಲಿ) ಎಂಬ ರೂಪದ ಕ್ರಿಯಾಪದಗಳಿರುತ್ತವೆ.

ಶಾಪವನ್ನು ಹಾಕುವಾಗ ಕೆಲವೊಮ್ಮೆ ಎತ್ತರದ ದನಿಯಲ್ಲಿ ಬಯ್ಯುತ್ತ, ತಮ್ಮ ಶಾಪಕ್ಕೆ ಗುರಿಯಾದ ವ್ಯಕ್ತಿಯ ಮಯ್ ಮೇಲೆ ಉಗಿಯುವ, ದೂಳನ್ನು ಎರಚುವ ಇಲ್ಲವೇ ತಮ್ಮ ಹಸ್ತಗಳೆರಡನ್ನು ಮುಂದೆ ಒಡ್ಡಿ ಬೆರಳುಗಳಿಂದ ನಟಿಕೆಗಳನ್ನು ಮುರಿಯುವ ಕ್ರಿಯೆಗಳನ್ನು ಶಾಪವಾಹಕಗಳಾಗಿ ಬಳಸುತ್ತಾರೆ. ನುಡಿಗಳ ಮೂಲಕ ತಾವು ವ್ಯಕ್ತಪಡಿಸುತ್ತಿರುವ ಕೇಡಿನ ಆಶಯವು ತಾವು ಉದ್ದೇಶಿಸಿದ ವ್ಯಕ್ತಿಗೆ ತಟ್ಟಬೇಕೆಂಬ ತೀವ್ರತರವಾದ ಹಂಬಲವು ಬಯ್ಯುವವರಲ್ಲಿ ಇರುತ್ತದೆ.

ಸಾವಿರಾರು ವರ್ಶಗಳಿಂದಲೂ ಕನ್ನಡ ಜನಸಮುದಾಯದ ಮದುವೆ ಮತ್ತು ಸಾವಿನ ಸನ್ನಿವೇಶಗಳಲ್ಲಿ ಮಾಡುತ್ತಿರುವ ಆಚರಣೆಗಳ ಸ್ವರೂಪವನ್ನು ಸೂಚಿಸುವ ನುಡಿಗಟ್ಟುಗಳು ಶಾಪಗಳಲ್ಲಿವೆ. ಶಾಪದ ನುಡಿಗಳ ಓದಿನಿಂದ ನಾವು ಕನ್ನಡ ನುಡಿ ಸಮುದಾಯದ ಸಾಂಸ್ಕ್ರುತಿಕ ಆಚರಣೆಗಳ ಸ್ವರೂಪವನ್ನು ತಿಳಿಯಬಹುದು.

ನಾನು ಮದ್ದೂರು, ಮಂಡ್ಯ, ಮಳವಳ್ಳಿ ಮತ್ತು ಚನ್ನಪಟ್ಟಣ ತಾಲ್ಲೂಕುಗಳ ಪ್ರಾಂತ್ಯದಲ್ಲಿರುವ ಜನರ ಮಾತುಕತೆಗಳಲ್ಲಿ ಬಳಕೆಯಾಗುತ್ತಿರುವ ಬಯ್ಗುಳಗಳನ್ನು ಸಂಗ್ರಹಿಸುವಂತೆಯೇ, ಗುಲ್ಬರ್ಗಾ ನಗರದ ಆಸುಪಾಸಿನಲ್ಲಿದ್ದ ಹತ್ತಾರು ಹಳ್ಳಿಗಳಲ್ಲಿ ಸಂಚರಿಸಿ ಶಾಪರೂಪದ ಬಯ್ಗುಳಗಳನ್ನು ಸಂಗ್ರಹಿಸಿದ್ದೇನೆ.

೧. ನಿನ್ ಕಣ್ಣಿನ ಗೊಂಬೆ ತಿದ್ದ

ಮದುವೆಯಾಗುವುದಕ್ಕೆ ಮುನ್ನವೇ ಸಾವು ಬರಲಿ ಎಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

‘ಕಣ್ಣಿನ ಗೊಂಬೆ ತಿದ್ದುವುದು’ ಒಂದು ಬಗೆಯ ಆಚರಣೆಯನ್ನು ತಿಳಿಸುವ ನುಡಿಗಟ್ಟು. ಮದುವೆಯಾಗದಿರುವ ವ್ಯಕ್ತಿಯು ಸತ್ತರೆ, ಹೆಣವನ್ನು ಒಪ್ಪಮಾಡುವ ಮೊದಲು ಸತ್ತ ವ್ಯಕ್ತಿಯು ಗಂಡಾಗಿದ್ದರೆ ಹೆಣ್ಣು ಬೊಂಬೆಯನ್ನು, ಹೆಣ್ಣಾಗಿದ್ದರೆ ಗಂಡು ಬೊಂಬೆಯನ್ನು ಮಣ್ಣಿನಿಂದ ಇಲ್ಲವೇ ಮೈದಾ ಹಿಟ್ಟಿನಿಂದ ತಯಾರಿಸುತ್ತಾರೆ. ಆ ಬೊಂಬೆಗೆ ಕಣ್ಣು ಮೂಗನ್ನು ತಿದ್ದಿ ತೀಡಿ ಅಲಂಕಾರ ಮಾಡಿ, ಬೊಂಬೆಯನ್ನು ಹೆಣದ ಪಕ್ಕದಲ್ಲಿಟ್ಟು ಅರಿಸಿನ ಬೆರೆತ ಅಕ್ಕಿಕಾಳನ್ನು ಹಾಕುತ್ತ ಮದುವೆಯ ಶಾಸ್ತ್ರವನ್ನು ಮಾಡುತ್ತಾರೆ. ಅನಂತರ ಹೆಣದ ಜತೆಯಲ್ಲಿ ಬೊಂಬೆಯನ್ನು ಹೂಳುತ್ತಾರೆ ಇಲ್ಲವೇ ಸುಡುತ್ತಾರೆ. ಇತ್ತೀಚಿನ ದಿನಗಳಲ್ಲಿ ಪ್ಲಾಸ್ಟಿಕ್ ಬೊಂಬೆಯನ್ನು ಬಳಸುತ್ತಾರೆ. ‘ತಿದ್ದ’ ಎನ್ನುವುದು ತಿದ್ದಲಿ/ತಿದ್ದುವಂತಾಗಲಿ ಎಂಬ ತಿರುಳಿನ ಕ್ರಿಯಾಪದ. ತಿದ್ದುವುದು ಎಂದರೆ ಹೊಸದಾಗಿ ಮಾಡುವುದು.

೨. ನಿನ್ ಇಂಡೆಕೂಳ್ ಮಾಡ

ಸಾವು ಬರಲಿ ಎಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

'ಇಂಡೆಕೂಳು ಮಾಡುವುದು' ಒಂದು ಬಗೆಯ ಆಚರಣೆ. ವ್ಯಕ್ತಿಯ ಹೆಣವನ್ನು ಹೂಳಿದ ಇಲ್ಲವೇ ಸುಟ್ಟ ಜಾಗದಲ್ಲಿ ಮೂರು/ಏಳು/ಹನ್ನೊಂದನೆಯ ದಿನದಂದು ಸುಮಾರು ಒಂದೂವರೆ ಅಡಿ ಎತ್ತರ, ಮೂರು ಅಡಿ ಅಗಲ ಮತ್ತು ಆರು ಅಡಿ ಉದ್ದದ ಮಣ್ಣಿನ ದಿಬ್ಬವನ್ನು ಕಟ್ಟಿ, ಅದರ ಮೇಲೆ ಎಣ್ಣೆಯಲ್ಲಿ ಕರಿದ ಕಜ್ಜಾಯ, ಚಿಕಿನುಂಡೆ, ಚಕ್ಕುಲಿ ಮುಂತಾದ ತಿಂಡಿಗಳನ್ನು ಮತ್ತು ನಾನಾ ಬಗೆಯ ಹಣ್ಣುಗಳ ತೊಳೆಗಳನ್ನು ಬಿಡಿಸಿ ಇಡುತ್ತಾರೆ. ಇದರ ಜತೆಗೆ ಅಕ್ಕಿ, ಜೀರಿಗೆ, ಅರಿಸಿನವನ್ನು ಹಾಕಿ ಮಸಣದಲ್ಲಿಯೇ ಬೇಯಿಸಿ ತಯಾರಿಸಿದ ಅನ್ನವನ್ನು ಸಣ್ಣ ಸಣ್ಣ ಉಂಡೆಗಳನ್ನಾಗಿ ಕಟ್ಟಿ ದಿಬ್ಬದ ಮೇಲೆ ಹಾಕುತ್ತಾರೆ. ಈ ಬಗೆಯ ಅನ್ನವನ್ನು 'ಇಂಡೆಕೂಳು' ಎನ್ನುತ್ತಾರೆ.

ದಿಬ್ಬದ ಮೇಲೆ ಹಾಕಿರುವ ಉಣಿಸು ತಿನಸುಗಳನ್ನು ಕಾಗೆ ಹದ್ದು ಗರುಡ ಮುಂತಾದ ಹಕ್ಕಿಗಳು ಮತ್ತು ಇನ್ನಿತರ ಪ್ರಾಣಿಗಳು ತಿಂದರೆ ಸತ್ತವರ ಆತ್ಮಕ್ಕೆ ಶಾಂತಿ ದೊರೆಯುವುದೆಂಬ ನಂಬಿಕೆಯು ತಲೆತಲಾಂತರಗಳಿಂದಲೂ ಜನಮನದಲ್ಲಿದೆ.

'ಪಿಂಡದ ಕೂಳು' ಎಂಬ ಪದಕಂತೆಯು ದಿನಬಳಕೆಯ ಮಾತುಕತೆಯ ಉಚ್ಚಾರಣೆಯಲ್ಲಿ 'ಇಂಡೆಕೂಳು' ಎಂದಾಗಿದೆ. ಪಕಾರ ಹಕಾರಗೊಂಡು ಅನಂತರ ಹಕಾರ ಉಚ್ಚಾರಣೆಯಿಂದ ಬಿಟ್ಟುಹೋಗಿದೆ. ಪಿಂಡ ಎಂದರೆ 'ಉಂಡೆ; ಕೂಳು ಎಂದರೆ ಅನ್ನ. ಪಿಂಡದ ಕೂಳು ಎಂದರೆ ಅನ್ನದ ಉಂಡೆ.

೩. ನಿನ ಗ್ವಾಡಿಗಿ ಬಡೀಲಿ

ಸಾವು ಬರಲಿ ಎಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

"ಗೋಡೆಗೆ ಬಡಿಯುವುದು" ಒಂದು ಬಗೆಯ ಆಚರಣೆ. ಗುಲ್ಬರ್ಗಾದ ಪ್ರಾಂತ್ಯದಲ್ಲಿ ವ್ಯಕ್ತಿಯು ಸಾವನ್ನಪ್ಪಿದಾಗ ಹೆಣವನ್ನು ಒಪ್ಪಮಾಡುವುದಕ್ಕೆ ಮೊದಲು, ಬಂದ ಜನರೆಲ್ಲರೂ ನೋಡಲು ಅವಕಾಶವಾಗುವಂತೆ ಹೆಣವನ್ನು ಗೋಡೆಗೆ ಆನಿಸಿ ಇಲ್ಲವೇ ಒರಗಿಸಿ ಕುಳ್ಳಿರಿಸುತ್ತಾರೆ. ದೇಹ ಅತ್ತಿತ್ತ ವಾಲಿಕೊಂಡು ಬೀಳದಿರಲೆಂದು ಹಾಗೂ ತಲೆಯು ಕೆಳಬಾಗದೆ ನೆಟ್ಟಗಿರಲೆಂದು ಗೋಡೆಗೆ ಗುಂಟಗಳನ್ನು ಬಡಿದು ಬಟ್ಟೆಯ ತುಂಡುಗಳಿಂದ ಹೆಣವನ್ನು ಬಿಗಿದು ಕಟ್ಟುತ್ತಾರೆ. ಸಾವಿನ ಉದ್ದೇಶವನ್ನು ಹೇಳುವ **"ನಿನ ಗುಂಟಕ ಬಡಿಯ"** ಎಂಬ ಶಾಪದ ನುಡಿಯೊಂದು ಈ ಪ್ರದೇಶದಲ್ಲಿ ಬಳಕೆಯಲ್ಲಿದೆ.

೪. ನಿನ ದಂಡಿದಾರ ಹರೀಲಿ.

"ನಿನ್ನ ಗಂಡನಿಗೆ ಸಾವು ಬರಲಿ" ಎಂಬ ಉದ್ದೇಶದಿಂದ ಹೆಂಗಸಿಗೆ ಹಾಕುವ ಶಾಪದ ನುಡಿ.

ಗುಲ್ಬರ್ಗಾ ಪ್ರಾಂತ್ಯದಲ್ಲಿ "ದಂಡಿದಾರ ಹರಿಯುವುದು" ಒಂದು ಬಗೆಯ ಆಚರಣೆಯಾಗಿದೆ. ದಂಡಿ ಎಂದರೆ ಹಣೆಯ ಎರಡು ಕಡೆಗಳಲ್ಲಿ ಹೂಗೊಂಚಲು ಇಳಿಬಿದ್ದಿರುವಂತೆ ತಲೆಗೆ ಕಟ್ಟಿರುವ ಹೂವಿನ ಕುಚ್ಚು/ಗೊಂಚಲು. ಗಂಡನ ಹೆಣವನ್ನು ಹೂಳಿರುವ ಇಲ್ಲವೇ ಸುಟ್ಟಿರುವ ಜಾಗಕ್ಕೆ ಆತನ ಹೆಂಡತಿಯನ್ನು ಮೂರು/ಏಳು/ಹನ್ನೊಂದನೆಯ ದಿನದಂದು ಮುತ್ತೈದೆತನದ ಕುರುಹುಗಳಿಂದ ಸಿಂಗರಿಸಿ ಕರೆದೊಯ್ಯುತ್ತಾರೆ. ಹೆಣವನ್ನು ಒಪ್ಪಮಾಡಿದ ಎಡೆಯಲ್ಲಿ ಆಕೆಯನ್ನು ಕುಳ್ಳಿರಿಸಿ, ಗಂಡ ಸತ್ತಿರುವ ಹಿರಿಯ ವಯಸ್ಸಿನ ಇಬ್ಬರು ಹೆಂಗಸರು ಆಕೆಯ ಕಯ್ಗಳಲ್ಲಿರುವ ಗಾಜಿನ ಬಳೆಗಳನ್ನು ಒಡೆದು, ಹಣೆಯಲ್ಲಿರುವ ಕುಂಕುಮವನ್ನು ಅಳಿಸಿ, ಮುಡಿಯಲ್ಲಿರುವ ದಂಡಿದಾರವನ್ನು ಹರಿದು ಕಿತ್ತು, ಹೆಣವನ್ನು ಹೂಳಿ ಮಣ್ಣನ್ನು ಮುಚ್ಚಿರುವ ಗುದ್ದದ ಮೇಲೆ ಒಗೆಯುತ್ತಾರೆ. ಗಂಡನನ್ನು ಕಳೆದುಕೊಂಡ ಆ ಹೆಂಗಸು ಅಂದಿನಿಂದ ಹಣೆಗೆ ಕುಂಕುಮವನ್ನು ಹಚ್ಚಿಕೊಳ್ಳುವ ಮತ್ತು ತಲೆಗೆ ಹೂವನ್ನು ಮುಡಿದುಕೊಳ್ಳುವ ಅವಕಾಶದಿಂದ ವಂಚಿತಳಾಗುತ್ತಾಳೆ.

೫. ನಿನ್ ಗುಡ್ಡುಗ್ ಕುಂಡ್ಸ

"ನಿನ್ನನ್ನು ಗುಡ್ಡದಲ್ಲಿ ಕುಳ್ಳಿರಿಸುವಂತಾಗಲಿ" ಎಂಬ ಈ ಶಾಪದ ನುಡಿಯು "ಹೊಟ್ಟೆಯಲ್ಲಿ ಮಗುವಿದ್ದಾಗಲೇ ನಿನಗೆ ಸಾವು ಬರಲಿ" ಎಂಬ ಉದ್ದೇಶವನ್ನು ಹೊಂದಿದೆ.

ತುಂಬು ಬಸುರಿಯಾದ ಹೆಂಗಸು ಸಾವನ್ನಪ್ಪಿದಾಗ, ಅವಳ ಹೆಣವನ್ನು ಹೂಳುವುದಿಲ್ಲ ಇಲ್ಲವೇ ಸುಡುವುದಿಲ್ಲ. ಊರಿಗೆ ಹತ್ತಿರದಲ್ಲಿರುವ ಕಲ್ಲುಬಂಡೆಗಳಿಂದ ಕೂಡಿದ ಗುಡ್ಡಕ್ಕೆ ಹೆಣವನ್ನು ಕೊಂಡೊಯ್ದು, ಅಲ್ಲಿ ಬಂಡೆಗಳ ನಡುವೆ ಇರುವ ಎಡೆಯೊಂದರಲ್ಲಿ ಕುಳ್ಳಿರಿಸಿ, ಹೊಟ್ಟೆಯನ್ನು ಬಗೆದು, ಮಗುವನ್ನು ಹೊರತೆಗೆದು ತಾಯಿಯ ತೊಡೆಗಳ ಮೇಲಿಡುತ್ತಾರೆ. ಗುಡ್ಡದಲ್ಲಿರುವ ಜೀವ ಜಂತುಗಳು ಈ ಹೆಣಗಳನ್ನು ತಿನ್ನುವಾಗ, ಅವಕ್ಕೆ ಕುಡಿಯಲೆಂದು ಒಡೆದ ಮಡಕೆಗಳಲ್ಲಿ ನೀರನ್ನು ತುಂಬಿಟ್ಟು ಹಿಂತಿರುಗುತ್ತಾರೆ. ಇತ್ತೀಚೆಗೆ ಈ ಆಚರಣೆಯು ನಿಂತಿದೆ.

೧ ನಿನ್ ಮಕ್ಳ ತಕೊಂಡೋಗಿ ಒಳ್ಗೆರೆಗಾಕ

“ಹೆತ್ತ ಮಕ್ಕಳು ಉಳಿಯದೆ ಕೂಡಲೇ ಸಾಯಲಿ” ಎಂಬ ಉದ್ದೇಶದಿಂದ **ಹಾಕುವ ಶಾಪದ ನುಡಿ.**

ಹುಟ್ಟಿದ ಮಗು ನಾಲ್ಕಾರು ದಿನಗಳಲ್ಲಿಯೇ ಸಾವನ್ನಪ್ಪಿದಾಗ ‘ಚಟವನ್ನು ಕಟ್ಟಿ’ ಅದರಲ್ಲಿ ಹೆಣವನ್ನಿಟ್ಟು ಹೊತ್ತುಕೊಂಡು ಹೋಗಿ ಮಸಣದಲ್ಲಿ ಹೂಳುವುದಿಲ್ಲ ಇಲ್ಲವೇ ಸುಡುವುದಿಲ್ಲ. ಅದಕ್ಕೆ ಬದಲಾಗಿ ಮಗುವಿನ ಹೆಣವನ್ನು ಬಾಳೆ ಎಲೆಯ ಮೇಲಿಟ್ಟುಕೊಂಡು, ಅದನ್ನು ಕಯ್ಗಳಲ್ಲಿ ಎತ್ತಿಕೊಂಡು ಹೋಗಿ, ಊರಿನ ಬಳಿಯಿರುವ ಕೆರೆಯ ಒಳಬಯಲಿನಲ್ಲಿ ನೀರು ನಿಂತಿಲ್ಲದ ಎಡೆಯಲ್ಲಿ ಗುಂಡಿಯೊಂದನ್ನು ತೋಡಿ, ಹೆಣವನ್ನು ಹೂಳಿ, ಅದರ ಮೇಲೆ ಅಂಕೋಲೆ ಕಡ್ಡಿ ಮತ್ತು ಇತರ ಮುಳ್ಳಿನ ಕೋಲುಗಳನ್ನು ಓತಿಟ್ಟು, ಮುಳ್ಳಿನ ರಾಶಿಯ ಮೇಲೆ ಕಲ್ಲಿನ ದಿಂಡುಗಳನ್ನು ಇಡುತ್ತಾರೆ. ನಾಯಿ ನರಿಗಳು ಹೆಣವನ್ನು ಕಿತ್ತು ತಿನ್ನದಿರಲೆಂದು ಈ ರೀತಿ ಮುಳ್ಳು, ಕಲ್ಲನ್ನು ಹೇರುತ್ತಾರೆ.

೨. ನಿನ್ ಹಣೆಗೆ ಬಾಚಿಂಗ ಕಟ್ದೇ ಹೋಗ

“ಎಂದೆಂದಿಗೂ ಮದುವೆಯಾಗದಿರಲಿ” ಎಂಬ ಉದ್ದೇಶದಿಂದ ಹಾಕುವ **ಶಾಪದ ನುಡಿ.**

ಇದೇ ಉದ್ದೇಶದಿಂದ ಹೇಳುವ **“ನೀನ್ ಹಸೆಮಣೆ ಮ್ಯಾಲೆ ನಿಲ್ದೇ ಹೋಗ; ನೀನ್ ಹಸೆಮಣೆ ಮ್ಯಾಲೆ ಅಕ್ಕಸ್ದಕ್ಕಿ ಕಾಣ್ದೇ ಹೋಗ; ನಿನ್ ತಲೆ ಮ್ಯಾಲೆ ಅಕ್ಕಿಕಾಳು ಬೀಳ್ದೇ ಹೋಗ; ನೀನ್ ಮೂಡ್ಲಾಗ್ ನಿಂತ್ಕೊಂಡು ಮೂರ್ ಅಕ್ಕಿಕಾಳು ಹಾಕಿಸ್ಕೊದೇ ಹೋಗ”** ಎಂಬ ಶಾಪದ ನುಡಿಗಳು ಬಳಕೆಯಲ್ಲಿವೆ.

‘ಹಣೆಗೆ ಬಾಸಿಂಗ ಕಟ್ಟುವುದು’ ಮದುವೆಯನ್ನು ಮಾಡುವಾಗ ಜರುಗುವ ಒಂದು ಆಚರಣೆ. ಕನ್ನಡ ನುಡಿ ಸಮುದಾಯಕ್ಕೆ ಸೇರಿದ ಕುಟುಂಬಗಳಲ್ಲಿ ಮದುಮಕ್ಕಳನ್ನು ಹೊತ್ತು ಮೂಡುವ ಮೂಡಲ ದಿಕ್ಕಿಗೆ ಎದುರಾಗಿ ನಿಲ್ಲಿಸಿ, ಹಣೆಗೆ ಬಾಸಿಂಗ ಕಟ್ಟಿ, ಕಯ್ಗೆ ಕಂಕಣ ತೊಡಿಸಿ, ಅರಿಸಿನ ಸವರಿದ ಅಕ್ಕಿಕಾಳುಗಳನ್ನು ನೆಂಟರು ಮತ್ತು ಆತ್ಮೀಯರು ಹೆಣ್ಣು-ಗಂಡಿನ ತಲೆಯ ಮೇಲೆ ಎರಚುತ್ತಾ ಒಳಿತಾಗಲೆಂದು ಹರಸುತ್ತಾರೆ.

ಕೆರೆಯ ಜೊಂಡಿನಲ್ಲಿ ಬೆಳೆಯುವ ಒಂದು ಗಿಡದಿಂದ ಮೆತುವಾದ ಬೆಂಡನ್ನು ತೆಗೆದು, ದೇವರ ಹೆಸರನ್ನು ಉಚ್ಚರಿಸುತ್ತಾ ಅದರ ಮೇಲೆ ಕೆಲವು ಗೆರೆಗಳನ್ನು ಎಳೆದು, ಕೋಲ್ಗಳ್ಳಿ ಇಲ್ಲವೇ ಮುಂಡ್ಗಳ್ಳಿ ಹಾಲನ್ನು ಸವರಿ, ಕೆಂಪು, ಹಳದಿ, ಹಸಿರು ಬಣ್ಣದ ಹೊಳೆಹೊಳೆಯುವ ಗುಲ್ಲಂಪಟ್ಟೆ ಕಾಗದವನ್ನು ಅಂಟಿಸಿ, ಹಣೆಗೆ ಕಟ್ಟಲು ಅನುಕೂಲ ವಾಗುವಂತೆ ಉದ್ದನೆಯ ಅರಿಸಿನದ ದಾರವನ್ನು ಪೋಣಿಸಿ

ತಯಾರಿಸಿದ ತೊಡುಗೆಯೇ ಬಾಸಿಂಗ. ಆಡು ಮಾತಿನಲ್ಲಿ ಉಚ್ಚಾರಣೆಯಾಗುವಾಗ 'ಬಾಚಿಂಗ' ಎಂದಾಗಿದೆ.

೮. ನಿನ್ನೆಡ್ತಿ ತಿನ್ಕೊಂಡು ಹಿಟ್ಟಿನ ಮಡ್ಕೆ ಹಿಡ್ಕೊಳ

"ಹೆಂಡತಿಗೆ ಸಾವು ಬರಲಿ" ಎಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

"ಹಿಟ್ಟಿನ ಮಡಕೆಯನ್ನು ಹಿಡಿದುಕೊಳ್ಳುವುದು" ಒಂದು ಬಗೆಯ ಆಚರಣೆ. ಬಸುರಿಯಾಗಿದ್ದ ಹೆಂಡತಿಯು ಸಾವನ್ನಪ್ಪಿದಾಗ, ಅವಳ ಹೆಣವನ್ನು ಮಸಣದಲ್ಲಿ ಒಪ್ಪ ಮಾಡಿದ ನಂತರ, ಅವಳ ಗಂಡ ಐದು ಇಲ್ಲವೇ ಒಂಬತ್ತು ದಿನಗಳ ಕಾಲ ತನ್ನ ಮನೆಗೆ ಹಿಂತಿರುಗಿ ಬರುವಂತಿಲ್ಲ. ಆ ದಿನಗಳಲ್ಲಿ ಅವನು ರಾಗಿ ಮುದ್ದೆಯನ್ನು ಮಾಡಲು ಬೇಕಾದ ಸಾಮಗ್ರಿಗಳನ್ನು ಮತ್ತು ಹಿಟ್ಟಿನ ಮಡಕೆಯನ್ನು ಹಿಡಿದುಕೊಂಡು ಊರಿನಲ್ಲಿರುವ ಎಲ್ಲಾ ದೇಗುಲಗಳ ಬಳಿ ಒಂದೊಂದು ದಿನ ತಂಗಿದ್ದು, ಅಲ್ಲಿ ಒಬ್ಬಂಟಿಯಾಗಿ ತಾನೇ ಹಿಟ್ಟನ್ನು ಬೇಯಿಸಿಕೊಂಡು ತಿನ್ನುತ್ತಾನೆ.

ಶಾಪಗಳ ಬಗೆಗೆ ಜಗತ್ತಿನ ಹಲವು ಜನಾಂಗಗಳಲ್ಲಿ ನಾನಾ ಬಗೆಯ ನಂಬಿಕೆಗಳು ಇರುವುದನ್ನು ಸಾಂಸ್ಕೃತಿಕ ಮಾನವಶಾಸ್ತ್ರಜ್ಞರು ಗುರುತಿಸಿದ್ದಾರೆ. ಎ.ಇ.ಕ್ರಾಲಿ ಎಂಬುವರು ಶಾಪಗಳ ಬಗೆಗಿನ ಜನಪದರ ನಂಬಿಕೆಗಳನ್ನು ಈ ಕೆಳಕಂಡಂತೆ ನಿರೂಪಿಸಿದ್ದಾರೆ.

೧. "ಒಂದು ಸಾರಿ ಹಾಕಿದ ಶಾಪ ಹಾಕಿಸಿಕೊಂಡ ವ್ಯಕ್ತಿಗೆ ತಟ್ಟಲೇ ಬೇಕು. ಏಕೆಂದರೆ ಒಮ್ಮೆ ಹಾಕಿದ ಶಾಪವು ಏಳು ವರ್ಷಗಳ ಕಾಲ ಗಾಳಿಯಲ್ಲಿ ತೇಲುತ್ತಿದ್ದು, ಅವಕಾಶ ಸಿಕ್ಕಿದ ಕೂಡಲೇ ಉದ್ದೇಶಿತ ಶತ್ರುವಿಗೆ ಹೋಗಿ ಬಡಿಯುತ್ತದೆ" ಎಂಬ ನಂಬಿಕೆಯು ಐರಿಶ್ ಜನಾಂಗದಲ್ಲಿದೆ.

೨. ಅರಬ್ಬರು ತಾವು ಶಾಪಕ್ಕೆ ಗುರಿಯಾದಾಗ ನೆಲದ ಮೇಲೆ ಮಲಗುತ್ತಾರೆ. ಶಾಪಗಳು ತಮ್ಮ ಮೇಲೆ ಹಾರಿ ಹೋಗುವುದರಿಂದ, ಅವುಗಳ ಹೊಡೆತದಿಂದ ತಪ್ಪಿಸಿಕೊಂಡೆವು ಎಂದು ನಂಬುತ್ತಾರೆ.

೩. ಸಕಾರಣವಿಲ್ಲದೆ ಮತ್ತೊಬ್ಬರಿಗೆ ಹಾಕಿದ ಶಾಪವು, ಹಿಂತಿರುಗಿ ಬಂದು ಶಾಪವನ್ನು ಹಾಕಿದ ವ್ಯಕ್ತಿಗೆ ತಟ್ಟಿ ಹಾನಿಯನ್ನುಂಟುಮಾಡುತ್ತದೆ ಎಂಬ ನಂಬಿಕೆಯು ಅನೇಕ ಜನಾಂಗಗಳಲ್ಲಿದೆ.

೪. "ಹಿರಿಯರು ಹಾಕಿದ ಶಾಪ, ಅದರಲ್ಲಿಯೂ ತಂದೆ ತಾಯಿ ಹಾಕಿದ ಶಾಪವು ಬಿಡದೆ ತಟ್ಟುತ್ತದೆ" ಎಂಬ ನಂಬಿಕೆಯು ಎಲ್ಲಾ ಜನಾಂಗಗಳಲ್ಲಿಯೂ ಇದೆ.

> ಮೋರಿಸ್ ಜನಾಂಗದ ಗಾದೆಯೊಂದು ಈ ರೀತಿ ಹೇಳುತ್ತದೆ. "ಸಂತರು ಶಾಪವನ್ನು ಕೊಟ್ಟರೆ ತಂದೆತಾಯಿ ಅದರಿಂದ ನಿಮ್ಮನ್ನು ಕಾಪಾಡುತ್ತಾರೆ. ಆದರೆ ತಂದೆತಾಯಿ ಶಾಪ ಹಾಕಿದರೆ ಸಂತರು ನಿಮ್ಮನ್ನು ಕಾಪಾಡಲಾರರು."

ಮಾಟ-ಮಂತ್ರಗಳಿಂದ ಇಲ್ಲವೇ ಇತರರು ಆಡುವ ಶಾಪದ ನುಡಿಗಳಿಂದ ಕೇಡಾಗುತ್ತದೆ ಎನ್ನುವ ಸಂಗತಿಯು ಜನಸಮುದಾಯದ ಮನದಲ್ಲಿರುವ ಒಂದು ನಂಬಿಕೆಯೇ ಹೊರತು ವಾಸ್ತವವಲ್ಲ. ಆದರೂ ಜನರು ಇತರರಿಂದ ಶಾಪ ಹಾಕಿಸಿಕೊಳ್ಳಲು ತುಂಬಾ ಹೆದರುತ್ತಾರೆ. ಏಕೆಂದರೆ ಯಾವುದೋ ಕೆಟ್ಟ ಗಳಿಗೆಯೊಂದರಲ್ಲಿ ಹಗೆಗಳು ತಮಗೆ ಹಾಕಿದ ಶಾಪದ ನುಡಿಯು ಜೀವನದಲ್ಲಿ ಒಂದಲ್ಲ ಒಂದು ಬಗೆಯ ಕೇಡನ್ನು ಉಂಟುಮಾಡಬಹುದೆಂಬ ಹೆದರಿಕೆಯು ಜನಮನದಲ್ಲಿ ಬೇರೂರಿದೆ.

❖

೩. ಕಾಮದ ನಂಟಿನ ಬಯ್ಗುಳ

ಗಂಡು ಹೆಣ್ಣಿನ ಜನನೇಂದ್ರಿಯಗಳನ್ನು ಮತ್ತು ಜನನೇಂದ್ರಿಯಗಳಿಂದ ನಡೆಯುವ ದೇಹಗಳ ಮಿಲನದ ಕ್ರಿಯೆಯನ್ನು ಹೆಸರಿಸಿ ಆಡುವ ಬಯ್ಗುಳಗಳನ್ನು ಕಾಮದ ನಂಟಿನ ಬಯ್ಗುಳಗಳೆಂದು ಕರೆಯುತ್ತಾರೆ.

ಉದಾಹರಣೆ:

೧. ನಿನ್ ಹೆತ್ತೋಳ್ನಾ ಕೆಯ್ಯ.

೨. ನಿನ್ ಪುಕ್ಕೀಗೆ ನನ್ ತುಣ್ಣೆ ಸಿಗಾಕ.

ಈ ಬಯ್ಗುಳದಲ್ಲಿ ಬಳಕೆಯಾಗಿರುವ ಪದಗಳನ್ನು ಕೇಳುತ್ತಿದ್ದಂತೆಯೇ ನಮ್ಮಲ್ಲಿ ಬಹುತೇಕ ಮಂದಿ ಬೆಚ್ಚಿ ಬೀಳುತ್ತೇವೆ. ಇಂತಹ ನುಡಿಗಳನ್ನು ಆಡಿದವರ ಬಗ್ಗೆ ಅಸಹ್ಯಪಟ್ಟುಕೊಳ್ಳುತ್ತೇವೆ. ಇಂತಹವರಿಂದ ದೂರವಿರಲು ಪ್ರಯತ್ನಿಸುತ್ತೇವೆ. ಇದಕ್ಕೆ ಕಾರಣವನ್ನು ತಿಳಿಯಲು ನಾವೆಲ್ಲರೂ ಅಂದರೆ ಕನ್ನಡ ನುಡಿಯನ್ನಾಡುವವರು ಕಾಮದ ಬಗ್ಗೆ ಹೊಂದಿರುವ ನಿಲುವುಗಳನ್ನು ಒಮ್ಮೆ ಒರೆಹಚ್ಚಿ ನೋಡಬೇಕು. ನಮ್ಮ ದೇಹದ ಅಂಗಗಳನ್ನು ಹೆಸರಿಸುವ ತಲೆ, ಕಣ್ಣು, ಕಿವಿ, ಮೂಗು, ನಾಲಗೆ, ಬಾಯಿ, ಕಯ್, ಕಾಲು, ಹೊಟ್ಟೆ, ಎದೆ ಮುಂತಾದ ಪದಗಳನ್ನು ದಿನನಿತ್ಯದ ಮಾತಿನ ಸನ್ನಿವೇಶಗಳಲ್ಲಿ ನಾವೆಲ್ಲರೂ ಯಾವ ಅಡೆತಡೆಯಿಲ್ಲದೆ ಉಚ್ಚರಿಸುವಂತೆ ನಮ್ಮ ದೇಹದ ಜನನೇಂದ್ರಿಯಗಳ ಹೆಸರನ್ನು ಹೇಳಲು ಹಿಂಜರಿಯುತ್ತೇವೆ.

ಏಕೆಂದರೆ ದಿನ ನಿತ್ಯದ ಮಾತುಕತೆಯಲ್ಲಿ ಕಾಮದ ಪದಗಳನ್ನು **(Sexual Words)** ಆಡಬಾರದೆಂಬ ಸಾಮಾಜಿಕ ಮತ್ತು ಸಾಂಸ್ಕೃತಿಕವಾದ ಕಟ್ಟಲೆಯು ಸಾವಿರಾರು ವರ್ಷಗಳಿಂದಲೂ ನುಡಿ ಸಮುದಾಯದಲ್ಲಿ ಚಾಲ್ತಿಯಲ್ಲಿದೆ. ಜನನೇಂದ್ರಿಯಗಳನ್ನು ಹೆಸರಿಸುವ ಪದಗಳನ್ನು ಮತ್ತು ಅವುಗಳ ಕ್ರಿಯೆಗಳನ್ನು ಮಾತುಕತೆಯಲ್ಲಿ ಬಳಸುವುದು ದೊಡ್ಡ ತಪ್ಪು ಎಂದು ನುಡಿ ಸಮುದಾಯ ಪರಿಗಣಿಸಿದೆ.

ಆದುದರಿಂದಲೇ ತಂದೆ ತಾಯಿಗಳು ತಮ್ಮ ಮಕ್ಕಳೊಡನೆ, ಗುರುಗಳು ತಮ್ಮ ವಿದ್ಯಾರ್ಥಿಗಳೊಡನೆ ಮತ್ತು ಹಿರಿಯರು ಕಿರಿಯರೊಡನೆ ಕಾಮದ ಸಂಗತಿಗಳನ್ನು ಕುರಿತು ಮಾತನಾಡುವುದಿಲ್ಲ. ರೇಡಿಯೊ ಮತ್ತು ದೂರದರ್ಶನದ ಕಾರ್ಯಕ್ರಮಗಳಲ್ಲಿ ಬಹಿರಂಗವಾಗಿ ಕಾಮದ ಪದಗಳನ್ನು ಬಳಸಿಕೊಂಡು ಚರ್ಚೆ ಮಾಡುವುದಿಲ್ಲ. ಇನ್ನಿತರ ಸಮೂಹ ಮಾಧ್ಯಮಗಳಲ್ಲಿಯೂ ಕಾಮಕ್ಕೆ ಸಂಬಂಧಿಸಿದ ಪದಗಳನ್ನು

ಪ್ರಕಟಿಸಬಾರದು ಎಂಬ ನಿಲುವು ಪರಂಪರಾಗತವಾಗಿ ಕನ್ನಡ ನುಡಿ ಸಮುದಾಯದ ಜನಮನದಲ್ಲಿ ನೆಲೆಸಿದೆ.

ಕಾಮದ ಸಂಗತಿಯ ಚರ್ಚೆ ಬಂದಾಗ ನಮ್ಮ ಇಚ್ಚೆಗೆ ಬಂದಂತೆ ಕಾಮದ ಪದಗಳನ್ನು ಆಡುವ ಸ್ವಾತಂತ್ರ್ಯ ನಮಗೆ ಇರುವುದಿಲ್ಲ. ಏಕೆಂದರೆ ಸಾಂಸ್ಕೃತಿಕ ಕಟ್ಟುಕಟ್ಟಲೆಗಳು ಕಾಮದ ನಂಟಿನ ಮಾತುಗಳನ್ನು ನಿಯಂತ್ರಿಸುತ್ತಿವೆ. ಕಾಮದ ನಂಟಿನ ಬಗೆಗೆ ಕನ್ನಡ ನುಡಿ ಸಮುದಾಯವನ್ನು ಒಳಗೊಂಡಂತೆ ಜಗತ್ತಿನಲ್ಲಿ ಬಳಕೆಯಲ್ಲಿರುವ ಎಲ್ಲ ನುಡಿ ಸಮುದಾಯಗಳಲ್ಲಿಯೂ ಒಂದಲ್ಲ ಒಂದು ಬಗೆಯ ಕಟ್ಟಲೆಗಳು ಇದ್ದೇ ಇರುತ್ತವೆ. ಇದನ್ನು **'ಟ್ಯಾಬು–Taboo'** ಎಂದು ಕರೆಯುತ್ತಾರೆ.

ಕೆಲವು ಬಗೆಯ ಮಾತುಗಳನ್ನು ಮತ್ತು ವರ್ತನೆಗಳನ್ನು ಜನರು ತಮ್ಮ ನಿತ್ಯ ಜೀವನದ ನಡೆನುಡಿಗಳಲ್ಲಿ ತಡೆಹಿಡಿಯಬೇಕೆಂದು ಇಲ್ಲವೇ ಹತ್ತಿಕ್ಕಬೇಕೆಂದು ಮಾಡಿರುವ ಸಾಮಾಜಿಕ ಮತ್ತು ಸಾಂಸ್ಕೃತಿಕ ಕಟ್ಟಲೆಯನ್ನು 'ಟ್ಯಾಬು' ಎಂದು ಕರೆಯುತ್ತಾರೆ.

ಜಗತ್ತಿನಲ್ಲಿರುವ ಪ್ರತಿಯೊಂದು ನುಡಿ ಸಮುದಾಯದ ನಡೆನುಡಿಯಲ್ಲಿಯೂ ಅಂದರೆ ಸಂಸ್ಕೃತಿಯಲ್ಲಿಯೂ **"ಕೆಲವೊಂದು ಬಗೆಯ ಮಾತುಗಳನ್ನು ಆಡಬಾರದು, ನೋಟಗಳನ್ನು ನೋಡಬಾರದು, ಉಣಿಸು ತಿನಸುಗಳನ್ನು ಸೇವಿಸಬಾರದು ಮತ್ತು ಕೆಲಸಗಳನ್ನು ಮಾಡಬಾರದು"** ಎಂಬ ಕಟ್ಟುಕಟ್ಟಲೆಗಳಿರುತ್ತವೆ. ಪ್ರತಿಯೊಂದು ನುಡಿ ಸಮುದಾಯದ ಸಂಸ್ಕೃತಿಯಲ್ಲಿಯೂ ಈ ಬಗೆಯ ಕಟ್ಟುಕಟ್ಟಲೆಗಳು ಆಹಾರ ಸೇವನೆಯ ವಿಚಾರದಲ್ಲಿ ಬೇರೆ ಬೇರೆ ಬಗೆಗಳಲ್ಲಿ ಇದ್ದರೂ ಗಂಡು ಹೆಣ್ಣಿನ ಕಾಮಕ್ಕೆ ಸಂಬಂಧಪಟ್ಟಂತೆ ಸರಿಸುಮಾರಾಗಿ ಒಂದೇ ಬಗೆಯಲ್ಲಿವೆ.

ಏಕೆಂದರೆ 'ಕಾಮ' ಎಂಬುದು ಜಗತ್ತಿನಲ್ಲಿ ಮಾನವ ಜೀವಿಯನ್ನು ಒಳಗೊಂಡಂತೆ ಎಲ್ಲ ಬಗೆಯ ಪ್ರಾಣಿ ಹಕ್ಕಿ ಕ್ರಿಮಿ ಕೀಟಗಳ ಪಾಲಿಗೆ ದೇಹದ ಹಸಿವಿನಂತೆಯೇ ಸಹಜವಾದ ಒಂದು ಸಂಗತಿಯಾಗಿದೆ. ಬದುಕಿ ಉಳಿಯಲು ಆಹಾರ ಸೇವನೆಯ ಮೂಲಕ ಹೇಗೆ ಹೊಟ್ಟೆಯನ್ನು ತುಂಬಿಸಿಕೊಳ್ಳಬೇಕೋ ಅಂತೆಯೇ ಹೆಣ್ಣು ಗಂಡು ಜೀವಿಗಳು ಪರಸ್ಪರ ಕೂಡುವಿಕೆಯಿಂದ ತಮ್ಮ ಮಯ್ ಮನದ ಕಾಮದ ಬಯಕೆಯನ್ನು ಈಡೇರಿಸಿಕೊಳ್ಳುವುದು ಮತ್ತು ತಮ್ಮ ಸಂತತಿಯನ್ನು ಮುಂದುವರಿಸುವುದು ನಿಸರ್ಗ ಸಹಜವಾದ ಸಂಗತಿಯಾಗಿದೆ. ಆದರೆ ಅತ್ತ ನಿಸರ್ಗದ ನೆಲೆಯಲ್ಲಿ ಒಂದು ಪ್ರಾಣಿಯಾಗಿರುವ ಮಾನವರು, ಇತ್ತ ತಾವೇ ಕಟ್ಟಿಕೊಂಡಿರುವ ಜಾತಿ, ಮತ ಮತ್ತು ದೇವರುಗಳಿಂದ ಕೂಡಿದ ಒಕ್ಕೂಟಗಳ ನಡುವೆ ಸಾಮಾಜಿಕ ಪ್ರಾಣಿಯಾಗಿಯೂ ಬಾಳುತ್ತಿದ್ದಾರೆ. ಆದ್ದರಿಂದ ಮಾನವರ ಪಾಲಿಗೆ ಕಾಮ ಎಂಬುದು ಇತರ ಜೀವಿಗಳಂತೆ ಕೇವಲ ಮಯ್ ಮನದ ಬಯಕೆಯನ್ನು ಈಡೇರಿಸಿಕೊಳ್ಳುವ ಮತ್ತು ಸಂತಾನವನ್ನು ಪಡೆಯುವ ಕ್ರಿಯೆಗಳಿಗೆ ಮಾತ್ರ ಸೀಮಿತವಾಗಿಲ್ಲ. ಮಾನವ ಸಮುದಾಯದ ಸಾಮಾಜಿಕ,

ಧಾರ್ಮಿಕ, ರಾಜಕೀಯ ಮತ್ತು ಆರ್ಥಿಕ ವ್ಯವಸ್ಥೆಯನ್ನು ರೂಪಿಸುವುದರಲ್ಲಿ ಕಾಮದ ನಂಟಿನ ಬಗೆಗಿನ ರೀತಿನೀತಿಗಳು ಬಹು ದೊಡ್ಡ ಪಾತ್ರವನ್ನು ವಹಿಸಿವೆ.

ಜಗತ್ತಿನ ಮಾನವ ಸಮುದಾಯದಲ್ಲಿ ಬುಡಕಟ್ಟುಗಳನ್ನು ಒಳಗೊಂಡಂತೆ ಪ್ರತಿಯೊಂದು ಸಮಾಜದಲ್ಲಿಯೂ ಕಾಮದ ನಂಟಿನ ಬಗ್ಗೆ ಹಲವಾರು ಬಗೆಯ ಕಟ್ಟುಪಾಡುಗಳಿರುತ್ತವೆ. ಜಾತಿ, ಮತ ಮತ್ತು ಸಂಪತ್ತಿನ ಮಾನದಂಡವಾದ ವರ್ಗದ ಅಂತಸ್ತು ಮತ್ತು ಕುಟುಂಬಗಳಿಗೆ ಸೀಮಿತವಾಗಿರುವ ಸಂಪ್ರದಾಯಗಳು ಗಂಡು ಹೆಣ್ಣಿನ ಕಾಮದ ನಂಟಿಗೆ ಪೂರಕವಾದ ಸಂಗತಿಗಳಾಗುತ್ತವೆ.

ಮಾನವ ಸಮುದಾಯಗಳು ರೂಪಿಸಿರುವ ಈ ನೀತಿ ನಿಯಮಗಳನ್ನು ಲೆಕ್ಕಿಸದೆ, ಸಮಾಜದ ಕಟ್ಟುಕಟ್ಟಲೆಗಳನ್ನು ಮೀರಿ ಗಂಡು ಹೆಣ್ಣು ಕಾಮದ ನಂಟನ್ನು ಪಡೆಯುವುದನ್ನು ಮತ್ತು ಮಕ್ಕಳನ್ನು ಹೆರುವುದನ್ನು ಬಹು ದೊಡ್ಡ ತಪ್ಪೆಂದು ಜನ ಸಮುದಾಯ ನಿರ್ಣಯಿಸಿ, ಅಂತಹ ಕಾಮದ ನಂಟನ್ನು ಸಾಮಾಜಿಕ ಕಳಂಕವೆಂದು ಪರಿಗಣಿಸುತ್ತದೆ. ಆದ್ದರಿಂದ ಕಾಮದ ಪದಗಳು ಬಯ್ಗುಳಗಳಾಗಿ ಬಳಕೆಗೊಳ್ಳುತ್ತವೆ.

ಕಾಮದ ಪದಗಳು ಬಯ್ಗುಳಗಳಾಗಿ ರೂಪುಗೊಳ್ಳಲು ಕಾರಣವಾದ ಸಂಗತಿಯನ್ನು ಮಾನವ ಸಮುದಾಯದ ಸಾಮಾಜಿಕ ಮತ್ತು ಸಾಂಸ್ಕೃತಿಕ ಚರಿತ್ರೆಯ ಹಿನ್ನೆಲೆಯಿಂದ ತಿಳಿಯಬೇಕು.

ಅಲೆಮಾರಿಯಾಗಿದ್ದ ಮಾನವ ಗುಂಪುಗಳು ಒಂದೆಡೆ ನಿಂತು ಬೇಸಾಯವನ್ನು ಮಾಡತೊಡಗಿದಾಗ ಕುಟುಂಬಗಳು ರಚನೆಗೊಂಡವು. ಈ ಕುಟುಂಬಗಳಲ್ಲಿ ತಾಯಿಯೇ ಮೇಟಿಯಾಗಿದ್ದಳು. ಹುಟ್ಟುವ ಮಕ್ಕಳು ಮತ್ತು ಉಳುಮೆ ಮಾಡುವ ಭೂಮಿಯು ಸಮುದಾಯದ ಒಟ್ಟು ಆಸ್ತಿಯಾಗಿದ್ದವು. ಮಕ್ಕಳು ತಾಯಿಯ ಹೆಸರಿನ ಕುಲಕ್ಕೆ ಸೇರದವರಾಗಿದ್ದು, ಆ ಕುಲದ ಹೆಸರನ್ನು ಪಡೆಯುತ್ತಿದ್ದರು. ಹುಟ್ಟುವ ಮಕ್ಕಳ ತಂದೆ ಯಾರು ಎಂಬುದು ದೊಡ್ಡ ಸಂಗತಿಯಾಗಿರಲಿಲ್ಲ. ಆಗ ಹೆಣ್ಣಿನ ಕಾಮದ ನಂಟಿಗೆ ಯಾವುದೇ ಬಗೆಯ ಕಟ್ಟುಪಾಡುಗಳು ಇರಲಿಲ್ಲ.

ಅನಂತರದ ಸಾವಿರಾರು ವರ್ಷಗಳ ಜನಜೀವನದಲ್ಲಿ ಅನೇಕ ಪಲ್ಲಟಗಳು ಉಂಟಾಗಿ ಉಳುವ ಭೂಮಿಯ ಒಡೆತನವು ಒಟ್ಟು ಸಮುದಾಯದಿಂದ ಕಯ್ ತಪ್ಪಿಹೋಗಿ, ಗಂಡಸರ ಹಿಡಿತಕ್ಕೆ ಸಿಲುಕಿದಾಗ, ಆಸ್ತಿಯ ಮೇಲೆ ಗಂಡಸಿನ ಒಡೆತನ ಉಂಟಾಯಿತು. ಗಂಡು ತನ್ನ ಬೀಜದಿಂದ ಹುಟ್ಟುವ ಮಕ್ಕಳಿಗೆ ಆಸ್ತಿಯ ಒಡೆತನದ ಹಕ್ಕು ದೊರೆಯಬೇಕೆಂಬ ಉದ್ದೇಶಕ್ಕೆ ಒಳಗಾಗಿ, ಹೆಣ್ಣಿಗೆ ಶೀಲದ ಎಲ್ಲೆಯನ್ನು ಹಾಕಿ, ಅವಳನ್ನು ತನ್ನ ಹಿಡಿತಕ್ಕೆ ತೆಗೆದುಕೊಂಡ. ಶೀಲವೆಂದರೆ "ಒಂದು ಹೆಣ್ಣು ಯಾವ ಗಂಡಿನೊಡನೆ ಕಾಮದ ನಂಟನ್ನು ಹೊಂದಬೇಕು ಇಲ್ಲವೇ ಹೊಂದಬಾರದು ಎಂಬ ಕಟ್ಟಲೆಗೆ ಅನುಗುಣವಾದ ನಡೆನುಡಿ." ಈ ಕಟ್ಟಲೆಯನ್ನು ಮೀರಿದವಳು ಸಾಮಾಜಿಕ ಕಳಂಕಕ್ಕೆ ಗುರಿಯಾಗುತ್ತಾಳೆ.

ಈ ರೀತಿ ಆಸ್ತಿಯ ಹಕ್ಕುದಾರನಾದ ಗಂಡು ತಾನು ಹೆಣ್ಣಿನೊಡನೆ ಪಡೆಯುವ ಕಾಮದ ನಂಟಿಗೆ ಜಾತಿ,ಮತ ಮತ್ತು ಸಾಮಾಜಿಕ ಕಟ್ಟುಪಾಡುಗಳನ್ನು ಹಾಕಿ, ಅವಳ ಚಲನವಲನಗಳನ್ನು ನಿಯಂತ್ರಿಸಿ, ಹೆಣ್ಣನ್ನು ತನ್ನ ಗುಲಾಮಳನ್ನಾಗಿಸಿಕೊಂಡ. ಆಸ್ತಿಯ ಹಕ್ಕು, ಹೆಣ್ಣಿನ ಮೇಲಿನ ಗಂಡಿನ ಒಡೆತನದ ಮತ್ತು ಗಂಡು ಮೇಲುಗಯ್ ಆಗಿರುವ ಕುಟುಂಬದ ರಚನೆಯ ಕಾರಣದಿಂದಾಗಿ ಕಾಮದ ನಂಟಿನ ಬಗ್ಗೆ ಹೆಚ್ಚಿನ ನಿಯಂತ್ರಣಗಳು ಜಾರಿಗೆ ಬಂದವು. ಹೆಣ್ಣಿನ ಕನ್ಯತ್ವ ಮತ್ತು ಶೀಲದ ಸುತ್ತ ಅತ್ಯಂತ ಕಟ್ಟುನಿಟ್ಟಾದ ಸಾಮಾಜಿಕ ಮತ್ತು ಸಾಂಸ್ಕೃತಿಕ ಕಟ್ಟುಪಾಡುಗಳನ್ನು ರಚಿಸಿದ ಸಮುದಾಯಗಳಲ್ಲಿ ನಮ್ಮ ಕನ್ನಡ ನುಡಿ ಸಮುದಾಯವೂ ಒಂದಾಗಿದೆ.

ಕಾಮದ ನಂಟಿನ ಬಯ್ಗುಳಗಳಲ್ಲಿ ಹೆಚ್ಚಿನ ಬಯ್ಗುಳಗಳು ಹೆಣ್ಣಿನ ಶೀಲದ ಸುತ್ತಲೂ ಇರುತ್ತವೆ. ವ್ಯಕ್ತಿಯ ತಾಯಿಯ ಇಲ್ಲವೇ ಹೆಂಡತಿಯ ಶೀಲವನ್ನು ಕೆಡಿಸುವಂತಹ ಕಾಮದ ನಂಟಿನ ಬಯ್ಗುಳವು ಬಯ್ಯಿಸಿಕೊಂಡ ವ್ಯಕ್ತಿಯ ಕುಟುಂಬದ ಮರ್ಯಾದೆಯನ್ನೇ ಹಾಳುಮಾಡುವ ಉದ್ದೇಶವನ್ನು ಹೊಂದಿರುತ್ತವೆ. ಗಂಡಿನ ಗಂಡಸುತನವನ್ನು ಅಲ್ಲಗಳೆಯುವ ಮತ್ತು ಹೆಣ್ಣಿನ ಶೀಲವನ್ನು ಕಡೆಗಣಿಸುವ ಮಾತಿನ ಸನ್ನಿವೇಶಗಳಲ್ಲಿ ಹೆಚ್ಚಾಗಿ ಕಾಮದ ನಂಟಿನ ಬಯ್ಗುಳಗಳು ಬಳಕೆಯಾಗುತ್ತವೆ. ಸಾಮಾಜಿಕವಾದ ಕಟ್ಟುಪಾಡುಗಳನ್ನು ಮುರಿಯುವ ಸನ್ನಿವೇಶ ಗಳಲ್ಲಿ ಮತ್ತು ಸಮಾಜ ಒಪ್ಪಿತವಾದ ನಡೆನುಡಿಗಳನ್ನು ಲೆಕ್ಕಿಸದೆ ತಮ್ಮ ಇಚ್ಚೆಗೆ ಬಂದಂತೆ ವರ್ತಿಸುವ ವ್ಯಕ್ತಿಗಳು ಹೆಚ್ಚಾಗಿ ಕಾಮದ ನಂಟಿನ ಬಯ್ಗುಳಗಳನ್ನು ಆಡುತ್ತಿರುತ್ತಾರೆ. ದೇಹದ ಮೇಲೆ ನಡೆಸುವ ಅತ್ಯಾಚಾರದಂತೆಯೇ , ಕಾಮದ ಪದಗಳನ್ನು ಬಳಸಿ ಆಡುವ ಬಯ್ಗುಳಗಳು ಬಯ್ಯಿಸಿಕೊಳ್ಳುವ ವ್ಯಕ್ತಿಯನ್ನು ಮಾನಸಿಕವಾಗಿ ಗಾಸಿಗೊಳಿಸುತ್ತವೆ.

ಉದಾಹರಣೆ:

೧. **ವ್ಯಕ್ತಿಯ ಹುಟ್ಟಿಗೆ ಕಾರಣಳಾದ ತಾಯಿಯನ್ನು ಹೆಸರಿಸಿ:**

ನಿಮ್ಮವ್ವನ್ ಕೆಚ್ಚಲ್ಲಾ ಕೆಯ್ಯ

೨. **ಅಕ್ಕ ತಂಗಿಯರನ್ನು ಹೆಸರಿಸಿ:**

ನಿಮ್ಮಕ್ಕನ್ ತುಲ್ಲಾ ಕೆಯ್ಯ.
ನಿನ್ ತಂಗೀನಾ ಕೆಯ್ಯ.

೩. **ಹೆಂಡತಿಯನ್ನು ಹೆಸರಿಸಿ:**

ನಿನ್ ಹೆಂಡ್ರ ಬಳ್ಳೀನಾ ಕೆಯ್ಯ.

೪. ಅಜ್ಜಿಯನ್ನು ಹೆಸರಿಸಿ:

ನಿನ್ ಅಜ್ಜಿ ಯಾಸಾನಾ ಕೆಯ್ಯ.

೫. ಕಾಮದ ನಂಟಿನ ಬಯ್ಗುಳಗಳಲ್ಲಿ ಅತ್ಯಂತ ವಿಲಕ್ಷಣವಾದ ಹಾಗೂ ವಿಕೃತವಾದ ಕಾಮದ ಸಂಗತಿಗಳನ್ನು ಕಾಣಬಹುದು. ಸಾಮಾಜಿಕ, ಧಾರ್ಮಿಕ ಮತ್ತು ನೈತಿಕ ಕಟ್ಟುಪಾಡುಗಳಿಗೆ ಒಳಗಾಗಿ, ಮನಸ್ಸಿನೊಳಗೆ ಅದುಮಿಡಲಾಗಿದ್ದ ಕಾಮದ ಭಾವನೆಗಳು ಬಹುಬಗೆಗಳಲ್ಲಿ ಹೊರಹೊಮ್ಮುತ್ತವೆ.

ನಿನ್ ಅಟ್ಟಿಕ್ಕೊದ್ದೀಳ್ ತುಲ್ಗೆ ನನ್ ಹಟ್ಟಿ ನಾಯಿ ತುಣ್ಣೆ ಇಕ್ಕ.
ನಿನ್ ಮೊಕ್ಕೆ ನನ್ ತರಡು ಉಜ್ಜ.
ನಿನ್ ಹಲ್ಲಿಗೆ ನನ್ ತುಲ್ ಉಜ್ಜ.
ನಿನ್ ಹೆತ್ತೋಳ್ ತುಲ್ಗೆ ಎತ್ತಿನ ಬಳ್ಳಿ ಇಕ್ಕ.

೬. ಹೆಂಗಸರೇ ಹೆಂಗಸರನ್ನು ಕುರಿತು ಬಯ್ಯುವ ಕಾಮದ ನಂಟಿನ ಬಯ್ಗುಳಗಳು ಅತ್ಯಂತ ವಿಲಕ್ಷಣವಾಗಿವೆ. ಈ ಬಗೆಯ ಬಯ್ಗುಳಗಳಲ್ಲಿ ಒಂದು ಹೆಣ್ಣು ಮತ್ತೊಂದು ಹೆಣ್ಣಿನ ಮೇಲೆ ಕಾಮದ ಹಲ್ಲೆಯು ತನ್ನ ಗಂಡನಿಂದಲೇ ಇಲ್ಲವೇ ಇತರ ಗಂಡಸರಿಂದ ನಡೆಯಲಿ ಎಂಬ ಆಶಯವನ್ನು ವ್ಯಕ್ತಪಡಿಸುತ್ತಾಳೆ.

ನಿನ್ ಮೊಲೆ ಚಿಗುರ್ ಹಿಡ್ಕೊಂಡು ನನ್ ಗಂಡ ಕೇಯ.
ನಿನ್ ಮೋರೆ ನಿಮ್ಮಾವ ಕೆಯ್ಯ.

೭. ಹೆಂಗಸರು ಮುಟ್ಟಾದಾಗ ಹೊರಹೊಮ್ಮುವ ರಕ್ತವನ್ನು "ರತ್ತ, ಹಾಟು, ಹೊಲೆ, ಗಲ್ಲೆ, ಕೊಳ" ಎಂಬ ಹೆಸರಿನಿಂದ ಮತ್ತು ಮಕ್ಕಳನ್ನು ಹೆತ್ತಾಗ ಹೊರಬೀಳುವ ವಸ್ತುವನ್ನು 'ಮಾಸು' ಎಂದು ಕರೆಯುತ್ತಾರೆ. ಈ ಪದಗಳನ್ನು ಬಳಸಿಕೊಂಡು ಹೆಂಗಸರು ಬಯ್ಗುಳಗಳನ್ನಾಡುತ್ತಾರೆ.

ನಿನ್ ಬಾಯ್ಗೆ ನನ್ ಮಾಸಾಕ.
ನಿನ್ ನೆತ್ತಿ ಸುಳೀಗೆ ನನ್ ಹಾಟುಯ್ಯ.
ನಿನ್ ತಲೆ ಮ್ಯಾಲೆ ನನ್ ರತ್ತ ಒತ್ತ.

೮. ಗಂಡಸರು ಹೆಂಗಸರನ್ನು ಬಯ್ಯುವಾಗ ಕಾಮದ ನಂಟಿನ ಬಯ್ಗುಳಗಳ ಮೂಲಕ ಹಲ್ಲೆ ನಡೆಸುತ್ತಾರೆ.

ನಿನ್ ಕುಡು ಮೋಣ್ನಾ ಕೆಯ್ಯ.
ನಿಂತ್ಕೆ ನನ್ ದಡಿ ಸಿಗಾಕ.
ನಿನ್ ತೊಡೆ ಸಂದೀನಾ ಕೆಯ್ಯ.

ಸಮಾಜವು ರೂಪಿಸಿರುವ ಕಾಮದ ಕಟ್ಟುಪಾಡುಗಳನ್ನು ಮುರಿಯುವಂತಹ ಮಾತುಗಳು ಮತ್ತು ಕ್ರಿಯೆಗಳು ಸಾಮಾಜಿಕ ಕಳಂಕವೆನಿಸಿಕೊಳ್ಳುತ್ತವೆ. ಸಾಮಾಜಿಕ ಕಳಂಕವೆನಿಸಿದ ಕಾಮದ ನುಡಿಗಟ್ಟುಗಳೇ ಬಯ್ಗುಳಗಳಾಗಿ ರೂಪುಗೊಂಡು ಬಳಕೆಯಾಗುತ್ತಿವೆ.

೮. ಬಯ್ಗುಳದ ಬಗೆಗಿನ ಸಾಮಾಜಿಕ ನಿಲುವು ಮತ್ತು ನಂಬಿಕೆ

ಬಯ್ಗುಳದ ನುಡಿಗಳನ್ನು ಕೇಳಲು ಅಂದರೆ ಇತರರಿಂದ ಬಯ್ಯಿಸಿಕೊಳ್ಳಲು ಎಲ್ಲಾ ಜಾತಿ, ಮತ ಮತ್ತು ವರ್ಗದ ಜನರು ಸಾಮಾನ್ಯವಾಗಿ ಹಿಂಜರಿಯುತ್ತಾರೆ. 'ಬಯ್ಗುಳ' ಎಂದ ಕೂಡಲೇ "ಅದು ಕೇಳಲು ಅಸಹ್ಯವಾಗಿರುತ್ತದೆ ಮತ್ತು ಅಶ್ಲೀಲವಾಗಿರುತ್ತದೆ" ಎಂಬ ನಿಲುವು ಎಲ್ಲರಲ್ಲಿಯೂ ಇದೆ. ಅತಿ ಹೆಚ್ಚಾಗಿ ಬಯ್ಗುಳವನ್ನು ಆಡುವ ವ್ಯಕ್ತಿಯ ಬಗೆಗಂತೂ ಅತ್ಯಂತ ತಿರಸ್ಕಾರವಿರುತ್ತದೆ. ಮಾತಿನಲ್ಲಿ ಹೆಚ್ಚಾಗಿ ಬಯ್ಗುಳದ ಪದಗಳನ್ನು ಆಡುವ ವ್ಯಕ್ತಿಯನ್ನು **'ಹೊಲಸು ಬಾಯಿ ನನ್ಮಗ / ಹೊಲಸು ಬಾಯಿ ಮುಂಡೆ'** ಎಂದು ಜನರು ಕರೆಯುತ್ತಾರೆ.

ತಮ್ಮ ಮಕ್ಕಳಿಗೆ ನೆರೆಹೊರೆಯವರು ಇಲ್ಲವೇ ಅನ್ಯರು ಬಯ್ದಾಗ, ಅಂತಹ ಸಮಯದಲ್ಲಿ ಆ ಮಕ್ಕಳ ತಂದೆ ತಾಯಿ ತುಂಬಾ ನೊಂದುಕೊಂಡು, ಬಯ್ದವರೊಡನೆ ಜಗಳಕ್ಕೆ ನಿಲ್ಲುತ್ತಾರೆ. **"ನಮ್ಮ ಹುಡುಗ/ಹುಡುಗಿ ತಪ್ಪು ಮಾಡಿದ್ರೆ ಚೆನ್ನಾಗಿ ನಾಲ್ಕೇಟು ಬಾರಿಸಬೇಕಾಗಿತ್ತು. ನಿಮ್ಮನ್ನು ಯಾರು ತಡೀತಿದ್ದೋರು. ಆದರೆ ಹಿಂಗೆಲ್ಲಾ ಬಾಯಿಗೆ ಬಂದಂಗೆ ಬಯ್ದು ಕಳಿಸಿದ್ದೀರಲ್ಲ, ಇದು ಸರಿಯೇ"** ಎಂದು ಬಯ್ದವರನ್ನು ಪ್ರಶ್ನಿಸುತ್ತಾರೆ. ಮಯ್ ಮೇಲೆ ಬೀಳುವ ಏಟಿಗಿಂತಲೂ ಬಯ್ಗುಳದ ನುಡಿಗಳ ಮೂಲಕ ಮನಸ್ಸಿಗೆ ಆಗುವ ಪೆಟ್ಟು ದೊಡ್ಡದೆಂಬ ನಿಲುವು ಈ ಮಾತುಗಳಲ್ಲಿ ಕಂಡು ಬರುತ್ತದೆ.

ಈ ಕೆಳಕಂಡ ಗಾದೆಗಳಲ್ಲಿ ಕಂಡು ಬರುವ ಮಾತುಗಳು ಬಯ್ಗುಳದ ಬಗ್ಗೆ ಜನಮನದಲ್ಲಿರುವ ಮತ್ತೊಂದು ಬಗೆಯ ನಿಲುವನ್ನು ಸೂಚಿಸುತ್ತವೆ.

೧. ಬಯ್ದು ಹೇಳ್ದೋರು ಉದ್ಧಾರ ಆಗೋಕೆ ಹೇಳುದ್ರು
ನಗ್ತಾ ಹೇಳ್ದೋರು ಹಾಳಾಗೋಕೆ ಹೇಳುದ್ರು.

೨. ಬಯ್ದೋರು ಬುದ್ಧಿ ಹೇಳುದ್ರಂತೆ
ನಗಿಸಿದೋರು ಹದಗೆಡಿಸಿದರಂತೆ.

೩. ಬಯ್ದು ಹೇಳಿದಾವ ಬುದ್ಧಿ ಹೇಳಿದ
ನಕ್ಕು ಹೇಳಿದಾವ ಕೆಡುಕು ಹೇಳಿದ.

ಬಯ್ಯುವಿಕೆಯಿಂದ ಹಾನಿಯಾಗುತ್ತದೆ ಎಂಬ ನಿಲುವಿಗಿಂತ ಬೇರೆಯಾದ ನಿಲುವನ್ನು ಈ ಗಾದೆಗಳಲ್ಲಿ ನಾವು ಕಾಣಬಹುದು. ಸಕಾಲದಲ್ಲಿ, ಸಕಾರಣಕ್ಕಾಗಿ, ಸದುದ್ದೇಶದಿಂದ ಬಯ್ಯುವುದರಿಂದ "ತಪ್ಪು ಮಾಡಲು ತೊಡಗಿರುವ ವ್ಯಕ್ತಿಗಳನ್ನು ಅಲ್ಲಲ್ಲೇ ತಿದ್ದಿ ಸರಿಪಡಿಸಿ, ಅವರು ಜೀವನದಲ್ಲಿ ಒಳ್ಳೆಯ ನಡೆನುಡಿಗಳನ್ನು ಅಳವಡಿಸಿಕೊಂಡು ಬಾಳಲು ಅಗತ್ಯವಾದ ಎಚ್ಚರಿಕೆಯನ್ನು ಮತ್ತು ತಿಳುವಳಿಕೆಯನ್ನು ನೀಡಬಹುದು" ಎಂಬ ಸಂಗತಿಯನ್ನು ಈ ಗಾದೆಗಳು ಸೂಚಿಸುತ್ತಿವೆ.

ಬಯ್ಗುಳದ ಬಗೆಗಿನ ನಂಬಿಕೆಗಳು

೧. ಅನ್ಯರ ಕಯ್ಯಲ್ಲಿ ಬಯ್ಯಿಸಿಕೊಳ್ಳುವುದರಿಂದ ನಮಗೆ ಒಳ್ಳೆಯದಾಗುತ್ತದೆ. ಇತರರು ನಮ್ಮನ್ನು ಹೆಚ್ಚು ಹೆಚ್ಚು ಬಯ್ದಂತೆಲ್ಲಾ, ನಾವು ಮಾಡಿರುವ ಪಾಪ ಅವರಿಗೆ ಹೋಗಿ , ಅವರು ಮಾಡಿರುವ ಪುಣ್ಯ ನಮಗೆ ಬರುತ್ತದೆ.

೨. ನಮ್ಮ ಜೀವನದಲ್ಲಿ ಪದೇ ಪದೇ ನಾನಾ ಬಗೆಯ ಸಂಕಟ ಮತ್ತು ಹಾನಿ ಉಂಟಾಗುತ್ತಿದ್ದರೆ, ಅದರಿಂದ ಪಾರಾಗಲು ನಾವು ಯಾರಿಂದಲಾದರೂ ಬಯ್ಯಿಸಿಕೊಳ್ಳಬೇಕು. ಈ ರೀತಿ ಬಯ್ಯಿಸಿಕೊಂಡರೆ ನಮ್ಮ ಜೀವನದಲ್ಲಿನ ಕೆಟ್ಟದ್ದು ತೊಲಗಿ ಒಳ್ಳೆಯದು ಬರುತ್ತದೆ.

ಈ ಮೇಲ್ಕಂಡ ನಂಬಿಕೆಗಳು ಜನಸಮುದಾಯದಲ್ಲಿರುವುದು ಕಂಡುಬರುತ್ತದೆ. ಈ ನಂಬಿಕೆಗಳೇ ಮುಂದುವರಿದು ಕೆಲವು ಬಗೆಯ ಸಂಪ್ರದಾಯಗಳಾಗಿ ಸಾಮಾಜಿಕ ಆಚರಣೆಯಲ್ಲಿ ಕಳೆದ ಅಯ್ವತ್ತು ವರ್ಷಗಳವರೆಗೂ ಇದ್ದುವು ಎಂದು ಹಳ್ಳಿಗಳಲ್ಲಿನ ಹಿರಿಯರು ಹೇಳುತ್ತಾರೆ.

ಮಂಡ್ಯ ಜಿಲ್ಲೆಯ ಅನೇಕ ಹಳ್ಳಿಗಳಲ್ಲಿ ಯುಗಾದಿ ಹಬ್ಬದ ಮಾರನೆಯ ದಿನವನ್ನು 'ವರುಶ ತೊಡಕು' ಎಂದು ಕರೆಯುತ್ತಾರೆ. ಅಂದಿನ ದಿನದ ರಾತ್ರಿ ಊರಿನ ತರುಣರು ಮತ್ತು ಚಿಕ್ಕ ಹುಡುಗರು ಗುಂಪುಗುಂಪಾಗಿ ಜತೆಗೂಡಿ ಊರಿನ

ದಾರಿಯಲ್ಲಿ ಸಾಗುತ್ತ ಮನೆಗಳ ಮೇಲೆ ಕಲ್ಲುಗಳನ್ನು ಎಸೆಯುತ್ತಿದ್ದರು. ಈ ರೀತಿ ಕಲ್ಲನ್ನು ಹೊಡೆಸಿಕೊಂಡ ಮನೆಯವರು ಬಯ್ಯತೊಡಗಿದಾಗ, ಅಲ್ಲೇ ಅಕ್ಕಪಕ್ಕದಲ್ಲಿ ಕತ್ತಲೆಯ ಎಡೆಗಳಲ್ಲಿ ನಿಂತುಕೊಂಡಿರುವ ಈ ಗುಂಪಿನ ಮಂದಿ **"ಹಬ್ಬದ ದಿನ ಚೆನ್ನಾಗಿ ಬಯ್ಸಿಕೊಂಡೆವು. ಇನ್ನು ವರುಶವೆಲ್ಲಾ ನಮಗೆ ಒಳ್ಳೆಯದಾಗುತ್ತದೆ"** ಎಂಬ ನಂಬಿಕೆಯಿಂದ ಕೇಕೆ ಹಾಕುತ್ತ ಆನಂದಪಡುತ್ತಿದ್ದರು. ಕೆಲವು ಗ್ರಾಮಗಳಲ್ಲಿ ಕಲ್ಲುಗಳನ್ನು ಎಸೆಯುವ ಬದಲು ಹುಣಿಸೆ ಬೀಜಗಳನ್ನು ಎಸೆಯುವ ಆಚರಣೆಯಿತ್ತು. ಈ ಬಗ್ಗೆ ಇಂತಹ ಕ್ರಿಯೆಗಳಲ್ಲಿ ಪಾಲ್ಗೊಂಡಿದ್ದ ಹಳ್ಳಿಗರನ್ನು ಪ್ರಶ್ನಿಸಿದಾಗ, ಅವರು ನೀಡಿದ ಉತ್ತರಗಳು ಈ ಕೆಳಕಂಡಂತಿವೆ.

೧. **"ಹಿಂದಿನಿಂದಲೂ ಈ ರೀತಿ ಮಾಡ್ಕೊಂಡು ಬಂದಿದ್ರು ಅದಕ್ಕೆ ನಾವು ಮಾಡ್ತಿದ್ದೊ."**

೨. **"ನಗ್ಸರಕ್ಕೆ ಈ ರೀತಿ ಮಾಡ್ತಿದ್ದೊ. ಇನ್ನೇನು ಇಲ್ಲ."** (ನಗ್ಸರ=ಹಾಸ್ಯ/ವಿನೋದ)

೩. **"ವರುಶಕ್ಕೆ ಒಂದ್ ಸತಿನಾದ್ರು ಬೇರೆಯವರ ಕೈಲಿ ಬಯ್ಯಿಸಿಕೊಂಡ್ರೆ ಒಳ್ಳೇದಾಗುತ್ತೆ. ಅದಕ್ಕೆ ಹಿಂಗೆ ಮಾಡ್ತಿದ್ದೊ."**

ಇತ್ತೀಚಿನ ವರ್ಷಗಳಲ್ಲಿ ಈ ಸಂಪ್ರದಾಯ ಸಂಪೂರ್ಣವಾಗಿ ನಿಂತುಹೋಗಿದೆ.

ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಕಂಡುಬರುವ ಒಂದು ಸಂಪ್ರದಾಯವನ್ನು ಬಸವರಾಜ ನೆಲ್ಲಿಸರ (೧೯೭೯) ಅವರು ತಮ್ಮ ಬರಹವೊಂದರಲ್ಲಿ ದಾಖಲಿಸಿದ್ದಾರೆ.

"ಗೌರಿ ಹಬ್ಬದಲ್ಲಿ ಒಂದು ವೈಶಿಷ್ಟ್ಯವಿದೆ. ಏನೆಂದರೆ, ಚೌತಿ ಚಂದ್ರನನ್ನು ನೋಡಬಾರದು. ನೋಡಿದರೆ ಏನಾದರೂ ಕೆಡುಕಾಗುತ್ತದೆ ಎಂಬ ನಂಬಿಕೆಯಿದೆ. ಆದರೂ ಅಪ್ಪಿ ತಪ್ಪಿ ನೋಡಿದರೆ, ಬೇರೊಬ್ಬರ ಹತ್ತಿರ ಬೈಸಿಕೊಳ್ಳಬೇಕಂತೆ. ಅದಕ್ಕಾಗಿ ಅವರು ಕುಂಬಳಕಾಯಿ ಒಡೆದು, ಅದರಲ್ಲಿ ಪಾಯಿಕಾನಿ ಮಾಡಿ ಯಾರದಾದರೂ ಮನೆಯ ಅಂಗಳದಲ್ಲಿಟ್ಟು ಬರುತ್ತಾರೆ. ಬೆಳಗ್ಗೆ ಎದ್ದು ನೋಡಿದ ಆ ಮನೆಯವರು **"ಯಾವ ಮುಂಡೆಗಂಡ ಹಿಂಗೆ ಹೇತು ಹೋಗಿದ್ದಾನೋ, ಅವನಿಗೇನು ಅಮ್ಮನ ಜಡ ಹಿಡಿದಿತ್ತಾ"** ಎಂದು ಬೈಯುತ್ತಾರೆ. ಆಗ ಅವರ ಕಷ್ಟ ಪರಿಹಾರವಾಗುತ್ತದೆಯಂತೆ. ಈ ಸಂಪ್ರದಾಯ ಇಂದಿಗೂ ಉಂಟು."

ಜೇಮ್ಸ್ ಪ್ರೇಜರ್ (೧೯೭೬) ಅವರು ಸಂಪಾದಿಸಿರುವ "ದಿ ಗೋಲ್ಡನ್ ಬೋ" ಪುಸ್ತಕದಲ್ಲಿ ಬಯ್ಗುಳದ ಸಂಪ್ರದಾಯಗಳ ಬಗ್ಗೆ ವಿವರಿಸಿರುವ ಕೆಲವು ಸಂಗತಿಗಳು ಈ ಕೆಳಕಂಡಂತಿವೆ.

೧. ಇಂಡಿಯಾ ದೇಶದ ಬಿಹಾರ ರಾಜ್ಯದಲ್ಲಿನ ಜನರು ಅನ್ಯರಿಂದ ಬಯ್ಗುಳಗಳನ್ನು ಕೇಳುವುದರಿಂದ ತಮ್ಮ ಪಾಲಿಗೆ ಒಳ್ಳೆಯದಾಗುತ್ತದೆ ಎಂದು ನಂಬಿದ್ದಾರೆ. ಮದುವೆಯ ಗಂಡನ್ನು ಮೆರವಣಿಗೆಯ ಮೂಲಕ ಕರೆದುಕೊಂಡು ಹೋಗುತ್ತಿರುವ ದಿಬ್ಬಣವು ಹೆಣ್ಣಿನ ಮನೆಗೆ ಬಳಿಗೆ ಬಂದಾಗ, ಅಲ್ಲಿ ಹೆಣ್ಣಿನ ಕುಟುಂಬಕ್ಕೆ ಸೇರಿದ ಒಬ್ಬ ಹೆಂಗಸು ಅತ್ಯಂತ ಕೆಟ್ಟ ಬಯ್ಗುಳಗಳಿಂದ ಅಲ್ಲಿದ್ದ ಜನರನ್ನು ಬಯ್ಯುತ್ತಿದ್ದರೆ, ಮದುವೆಯಾಗಲಿರುವ ಮದುಮಕ್ಕಳ ಮುಂದಿನ ಜೀವನದಲ್ಲಿ ಒಳ್ಳೆಯದಾಗುತ್ತದೆ ಎಂಬ ನಂಬಿಕೆಯು ಜನಮನದಲ್ಲಿದೆ.

೨. ಬಿಹಾರದಲ್ಲಿ ನಡೆಯುವ ಹಬ್ಬವೊಂದರ ಸಮಯದಲ್ಲಿ ತಮ್ಮ ಸೋದರಿಯರಿಂದ ಸೋದರರು ಚೆನ್ನಾಗಿ ಬಯ್ಯಿಸಿಕೊಂಡರೆ, ಅದರಿಂದ ಸೋದರರ ವಯಸ್ಸು ಹೆಚ್ಚಾಗಿ, ಜೀವನದ ಉದ್ದಕ್ಕೂ ಒಳಿತಾಗುವುದೆಂಬ ನಂಬಿಕೆಯಿದೆ.

೩. ಬಂಗಾಳ ರಾಜ್ಯದ ಬರ್ಬಮ್ ಜಿಲ್ಲೆಯ ದುಬ್ ರಾಜಪುರ ಎಂಬ ಗ್ರಾಮದಲ್ಲಿ ಮಳೆಯಿಲ್ಲದೆ ಅತಿ ದೊಡ್ಡ ಬರಗಾಲ ಬಂದ ಕಾಲದಲ್ಲಿ ಜನರು ಕೆಸರು, ಕಸ, ಮಲ ಮುಂತಾದ ಹೊಲಸಾದ ವಸ್ತುಗಳನ್ನು ಅಕ್ಕಪಕ್ಕದ ಮನೆಗಳ ಮೇಲೆ ಎಸೆಯುತ್ತಾರೆ ಮತ್ತು ಆ ಗ್ರಾಮದಲ್ಲಿನ ಕುರುಡರು, ಕುಂಟರು ಮತ್ತು ಹೆಳವರ ಮೇಲೆ ನೀರನ್ನು ಎರಚಿ ಅವರನ್ನು ಸಂಪೂರ್ಣವಾಗಿ ಒದ್ದೆ ಮಾಡುತ್ತಾರೆ. ಇಂತಹ ಕ್ರಿಯೆಗಳಿಂದ ನೊಂದ ಜನರು ಮನೆಯ ಮೇಲೆ ಹೊಲಸನ್ನು ಇಲ್ಲವೇ ತಮ್ಮ ಮೇಲೆ ನೀರನ್ನು ಎರಚಿದ ಜನರನ್ನು ಕುರಿತು ಬಯ್ಗುಳಗಳಿಂದ ನಿಂದಿಸತೊಡಗಿದಾಗ ಮಳೆ ಸುರಿಯುತ್ತದೆ ಎಂಬ ನಂಬಿಕೆಯಿದೆ.

೪. ಪಂಜಾಬು ರಾಜ್ಯದ ಶಹಾಪುರ ಜಿಲ್ಲೆಯಲ್ಲಿ ಬರಗಾಲ ಬಂದಾಗ ಆಚರಿಸುವ ಮತ್ತೊಂದು ಬಗೆಯ ಸಂಪ್ರದಾಯವಿದೆ. ಅದೇನೆಂದರೆ ಮಲ ಇಲ್ಲವೇ ಹೊಲಸು ತುಂಬಿದ ಮಡಕೆಯೊಂದನ್ನು ಬಹಳ ಗಯ್ಯಾಳಿಯಾದ ಹೆಂಗಸಿನ ಮನೆಯ ಹೊಸ್ತಿಲಲ್ಲಿ ಚೆಲ್ಲಿ ಹೋದರೆ, ಆಕೆ ಅದನ್ನು ಕಂಡು ಹೀನಾಮಾನವಾಗಿ ಬಯ್ಗುಳದ ನುಡಿಗಳ ಮೂಲಕ ತನ್ನ ಉದ್ರಿಕ್ತ ಭಾವನೆಗಳನ್ನು ಕಾರತೊಡಗುತ್ತಾಳೆ. ಒಂದೇ ಸಮನೆ ಎಡೆಬಿಡದೆ ಹೊರಹೊಮ್ಮುತ್ತಿರುವ ಅವಳ ಬಯ್ಗುಳದ ನುಡಿಗಳ ಅಬ್ಬರದ ದನಿಯು

ಮುಗಿಲಿನಲ್ಲಿರುವ ಮಳೆಯ ಮೋಡಗಳಿಗೆ ಬಡಿದು ಮಳೆ ಬರುವಂತೆ ಮಾಡುತ್ತದೆ ಎಂಬ ನಂಬಿಕೆಯಿದೆ.

೫. ಕೊಚ್ಚಿನ್ ರಾಜ್ಯದ ಕ್ರಾಂಗನೂರು ಎಂಬ ಊರಿನಲ್ಲಿ ದೇವಿ ಭಗವತಿಯ ದೇವಾಲಯವಿದೆ. ಪ್ರತಿ ವರ್ಷ ಮಾರ್ಚ್-ಏಪ್ರಿಲ್ ತಿಂಗಳಿನಲ್ಲಿ ಇಲ್ಲಿ ನಡೆಯುವ ದೇವಿಯ ಉತ್ಸವಕ್ಕೆ ಕೊಚ್ಚಿನ್, ಮಲಬಾರ್ ಮತ್ತು ಟ್ರಾವಂಕೂರ್ ಮುಂತಾದ ಕಡೆಗಳಿಂದ ದೇವಿಯನ್ನು ಪೂಜಿಸುವ ಜನರು "ಮಾರ್ಚ್... ಮಾರ್ಚ್" ಎಂದು ದೊಡ್ಡ ಧ್ವನಿಯಲ್ಲಿ ಜಪಿಸುತ್ತ ಗುಂಪು ಗುಂಪಾಗಿ ಆಗಮಿಸುತ್ತಾರೆ. ದೇವಿ ಭಗವತಿ ದೇಗುಲದ ಮೇಲೆ ಕಲ್ಲುಗಳನ್ನು ತೂರುತ್ತಾ, ಹೊಲಸಾದ ವಸ್ತುಗಳನ್ನು ಎಸೆಯುತ್ತಾ, ದೇವಿಯನ್ನು ಕುರಿತು ಬಯ್ಗುಳದ ನುಡಿಗಳನ್ನಾಡುತ್ತ, ತಮ್ಮ ಭಕ್ತಿಯನ್ನು ನಿವೇದಿಸಿಕೊಳ್ಳುತ್ತಾರೆ. ಈ ಬಗೆಯ ಆಚರಣೆಯು ದೇವಿ ಭಗವತಿಗೆ ಪ್ರಿಯವೆಂದು ಜನರು ನಂಬಿದ್ದಾರೆ. ಇಂತಹ ಆಚರಣೆಯಿಂದ ದೇವಿಯ ಅನುಗ್ರಹ ದೊರೆತು, ಮುಂಬರಲಿರುವ ವರ್ಷದಲ್ಲಿ ತಮಗೆ ಯಾವುದೇ ಬಗೆಯ ರೋಗದ ಸೋಂಕು ತಟ್ಟುವುದಿಲ್ಲವೆಂಬ ನಂಬಿಕೆಯು ಜನಮನದಲ್ಲಿದೆ.

ಹೀಗೆ ಬಯ್ಗುಳದ ಬಗೆಗಿನ ಹತ್ತಾರು ನಂಬಿಕೆಗಳು ಮತ್ತು ಸಂಪ್ರದಾಯಗಳು ಜಗತ್ತಿನ ಉದ್ದಗಲದಲ್ಲಿರುವ ಎಲ್ಲಾ ನುಡಿ ಸಮುದಾಯಗಳಲ್ಲೂ ನಮಗೆ ದೊರಕುತ್ತವೆ.

❖

೯. ಬಯ್ಯುವಿಕೆಯಲ್ಲಿ ತೊಡಗಿದವರ ದೇಹದ ಚಹರೆಗಳು

ಯಾವುದೇ ಒಂದು ಸನ್ನಿವೇಶದಲ್ಲಿ ವ್ಯಕ್ತಿಗಳು ಮಾತನಾಡುತ್ತಿರುವಾಗ ಅವರ ದೇಹದ ಚಹರೆಗಳು ಆಡುವ ಮಾತಿನ ಉದ್ದೇಶವನ್ನು ಮತ್ತು ತಿರುಳನ್ನು ತಿಳಿಸುವುದರಲ್ಲಿ ಬಹು ದೊಡ್ಡ ಪಾತ್ರವನ್ನು ವಹಿಸುತ್ತವೆ. ಆಲ್ಬರ್ಟ್ ಮೆಹರಾಬಿನ್ ಎಂಬ ಮನೋವಿಜ್ಞಾನಿಯು ನಾವು ಆಡುವ ಮಾತಿನಲ್ಲಿ ಶಾಬ್ದಿಕ ರೂಪದ ಮಾತಿನ ಸಾಮಗ್ರಿಗೂ ಮತ್ತು ಅದರ ಜತೆಜತೆಯಲ್ಲಿಯೇ ಹೊರಹೊಮ್ಮುವ ದೇಹದ ಚಹರೆಗೂ ಇರುವ ನಂಟನ್ನು ಕುರಿತು ಈ ರೀತಿ ಹೇಳಿದ್ದಾರೆ.

"ನಾವು ನುಡಿಯುವ ಮಾತಿನ ಧ್ವನಿಗಳಿಂದ ಕೂಡಿದ ಸಂದೇಶದಲ್ಲಿ ಶಾಬ್ದಿಕ ಅಭಿವ್ಯಕ್ತಿಯ ಪಾತ್ರ ಕೇವಲ ಶೇ. ೭ರಷ್ಟು ಮಾತ್ರ ಇರುತ್ತದೆ; ಕೊರಳನಿಂದ ಹೊರ ಹೊಮ್ಮುವ ಧ್ವನಿಯ ಏರಿಳಿತದಿಂದಾಗಿ ಸುಮಾರು ಶೇ. ೩೮ರಷ್ಟು ಸಂವಹನ ಉಂಟಾಗುತ್ತದೆ; ಮುಖಭಾವ, ಕಯ್ ಕಾಲುಗಳ ಚಲನವಲನ ಮುಂತಾದ ಅಶಾಬ್ದಿಕ ಅಭಿವ್ಯಕ್ತಿಯಿಂದ ಉಳಿದ ಶೇ. ೫೫ರಷ್ಟು ಸಂವಹನಗೊಳ್ಳುತ್ತದೆ" ಎಂದು ಪ್ರತಿಪಾದಿಸಿದ್ದಾರೆ.

ವ್ಯಕ್ತಿಯು ಮಾತನಾಡಲು ತೊಡಗಿದಾಗ ಬಹು ಬಗೆಯ ಭಾವನೆಗಳು ಮುಖದಲ್ಲಿ ಕಂಡುಬರುತ್ತವೆ. ಕಣ್ಣುಗಳ ನೋಟದಲ್ಲಿ, ಹುಬ್ಬುಗಳ ಏರಿಳಿತದಲ್ಲಿ, ಮೂಗಿನ ಹೊಳ್ಳೆಗಳ ಅದುರುವಿಕೆಯಲ್ಲಿ, ತುಟಿಗಳ ಚಲನೆಯಲ್ಲಿ ಮತ್ತು ಹಲ್ಲುಮುರಿಯನ್ನು ಕಚ್ಚುವುದರಲ್ಲಿ ತಿರಸ್ಕಾರದ, ಆಕ್ರೋಶದ, ಹೆದರಿಕೆಯ, ಗಂಭೀರತೆಯ, ಸಂಕಟದ, ಆನಂದದ ಇಲ್ಲವೇ ಇನ್ನಿತರ ಭಾವನೆಗಳನ್ನು ಕಾಣಬಹುದು. ಬಹುತೇಕ ಸನ್ನಿವೇಶಗಳಲ್ಲಿ ಮನಸ್ಸಿನ ಅಂತರಂಗದ ಒಳ ಮಿಡಿತಗಳು ಮುಖದಲ್ಲಿ ಬಹು ಚೆನ್ನಾಗಿ ಬಹಿರಂಗಗೊಳ್ಳುತ್ತಿರುತ್ತವೆ. ಮುಖದಲ್ಲಿ

ಹೊರಹೊಮ್ಮುತ್ತಿರುವ ಚಹರೆಗಳ ಜತೆಜತೆಯಲ್ಲಿಯೇ ಮಾತನಾಡುತ್ತಿರುವ ವ್ಯಕ್ತಿಯ ಕಯ್ಗಳ ಚಲನೆಯು ಮಾತಿನ ಸಮಯದಲ್ಲಿ ಮುಖ್ಯವಾಗುತ್ತದೆ. ಕಯ್ಗಳನ್ನು ಇಲ್ಲವೇ ಕಯ್ ಬೆರಳುಗಳನ್ನು ಅತ್ತಿತ್ತ ಆಡಿಸುವುದು; ಹಸ್ತಗಳನ್ನು ಅರಳಿಸುವುದು ಇಲ್ಲವೇ ಮುಶ್ಟಿ ಹಿಡಿಯುವುದು; ಒಂದು ಗೊತ್ತಾದ ದಿಕ್ಕಿನ ಕಡೆಗೆ ಬೆರಳುಗಳನ್ನು ತೋರಿಸುವುದು–ಇವೆಲ್ಲವೂ ಆಡಿದ ಮಾತಿನ ತಿರುಳನ್ನು ಕೇಳುಗರು ಇನ್ನು ಚೆನ್ನಾಗಿ ಮನದಟ್ಟು ಮಾಡಿಕೊಳ್ಳುವುದಕ್ಕೆ ಪೂರಕವಾಗುತ್ತವೆ.

ಇಡೀ ದೇಹದ ಚಲನೆಯು ಮಾತಿನ ಮೇಲೆ ಪರಿಣಾಮವನ್ನು ಬೀರುತ್ತಿರುತ್ತದೆ. ಹಲವು ರೀತಿಗಳಲ್ಲಿ ಅತ್ತಿತ್ತ ಚಲಿಸುತ್ತಾ ಮಾತನಾಡುವುದು ಇಲ್ಲವೇ ಯಾವುದೋ ಒಂದು ನಿಲುವಿನಲ್ಲಿ ನಿಂತುಕೊಂಡು ಮಾತನಾಡುವುದು ಕೂಡ, ಆಡುವ ಮಾತಿನ ಸಂವಹನಕ್ಕೆ ನೆರವಾಗುತ್ತದೆ. ನಾವು ಮಾತನಾಡುವಾಗ ಇತರರಿಗೆ ಎಶ್ಟು ಹತ್ತಿರದಲ್ಲಿರುತ್ತೇವೆ ಇಲ್ಲವೇ ದೂರದಲ್ಲಿರುತ್ತೇವೆ ಎಂಬ ಅಂಶವೂ ಆಡುವ ಮಾತುಗಳ ಮೇಲೆ ಪರಿಣಾಮವನ್ನು ಬೀರುತ್ತಿರುತ್ತದೆ. ಮಾತನ್ನು ಪಿಸುಮಾತಿನಲ್ಲಿ ನುಡಿಯುವಾಗ ಇಲ್ಲವೇ ತುಸು ಗಟ್ಟಿ ದ್ವನಿಯಲ್ಲಿ ಹೇಳುವಾಗ ಇಲ್ಲವೇ ಅತಿ ದೊಡ್ಡ ದ್ವನಿಯಲ್ಲಿ ಕಿರುಚುವಾಗ ಪದಗಳ ತಿರುಳು ಒಂದೇ ಆಗಿದ್ದರೂ ಮಾತಿನ ಉದ್ದೇಶ ಬೇರೆ ಬೇರೆಯಾಗಿರುತ್ತದೆ. ಹೀಗೆ ಬಗೆಬಗೆಯ ದ್ವನಿಯ ಏರಿಳಿತದೊಡನೆ ಮುಖ ಮತ್ತು ಕಯ್ಗಳನ್ನು ಒಳಗೊಂಡಂತೆ ಇಡೀ ದೇಹದ ಚಲನವಲನಗಳು ಮಾತಿನ ಸಂವಹನ ಕ್ರಿಯೆಯಲ್ಲಿ ಬಹು ದೊಡ್ಡ ಪಾತ್ರವನ್ನು ವಹಿಸುತ್ತವೆ. ಮಾತನಾಡುವಾಗ ಕಂಡುಬರುವ ಇಂತಹ ದೇಹದ ಚಹರೆಗಳ ಹಿನ್ನೆಲೆಯಲ್ಲಿ ಬಯ್ಗುಳದ ಪ್ರಸಂಗಗಳನ್ನು ಗಮನಿಸಿದಾಗ, ಬಯ್ಯುವಿಕೆಯ ಬಗ್ಗೆ ಅನೇಕ ಸಂಗತಿಗಳು ತಿಳಿದುಬರುತ್ತವೆ.

ಕುಟುಂಬದ ನೆಲೆ, ದುಡಿಮೆಯ ನೆಲೆ ಮತ್ತು ಸಾರ್ವಜನಿಕ ನೆಲೆಗಳಲ್ಲಿ ಬಯ್ಯುವಾಗ ದೇಹದ ಚಹರೆಗಳು ಬೇರೆ ಬೇರೆ ಬಗೆಗಳಲ್ಲಿ ಕಂಡುಬರುತ್ತವೆ. ಏಕೆಂದರೆ ಬಯ್ಯುವ ಮತ್ತು ಬಯ್ಯಿಸಿಕೊಳ್ಳುವ ವ್ಯಕ್ತಿಯ ಜಾತಿ, ಮತ, ಲಿಂಗ, ವರ್ಗವನ್ನು ಒಳಗೊಂಡ ಸಾಮಾಜಿಕ ಅಂತಸ್ತು ಮತ್ತು ವಯಸ್ಸಿನ ಸಂಗತಿಗಳು ಬಯ್ಗುಳದ ಪ್ರಸಂಗದಲ್ಲಿ ಮುಖ್ಯವಾಗುತ್ತವೆ.

ಸಾಮಾಜಿಕ ಅಂತಸ್ತಿನಲ್ಲಿ ಹಾಗೂ ವಯಸ್ಸಿನ ಹಿರಿಯತನದಲ್ಲಿ ದೊಡ್ಡಮಟ್ಟದಲ್ಲಿರುವ ವ್ಯಕ್ತಿಗಳು ಸಾರ್ವಜನಿಕ ನೆಲೆಯಲ್ಲಿ ಬಯ್ಗುಳದ ನುಡಿಗಳನ್ನು ಆದಶ್ಟು ಕಡಿಮೆ ಪ್ರಮಾಣದಲ್ಲಿ ಬಳಸುತ್ತಾರೆ. ಅಂತೆಯೇ ತಮ್ಮ ದೇಹದ ಚಹರೆಗಳನ್ನು ಹೊರಹೊಮ್ಮಿಸುವುದರಲ್ಲಿಯೂ ಅತ್ಯಂತ ಸಂಯಮಶೀಲರಾಗಿರಲು ಪ್ರಯತ್ನಿಸುತ್ತಾರೆ. ಮಾತಿನ ಸನ್ನಿವೇಶಗಳಲ್ಲಿ ತಮ್ಮ ಮಯ್ ಮನದಲ್ಲಿ ಕೆರಳುವ ಭಾವನೆಗಳನ್ನು ಹತೋಟಿಯಲ್ಲಿ ಇಟ್ಟುಕೊಂಡು ಮಾತನಾಡಲು ಬಯಸುತ್ತಾರೆ.

ಆದರೆ ಇಂತಹ ವ್ಯಕ್ತಿಗಳೇ ತಮ್ಮ ಕುಟುಂಬದ ನೆಲೆಯಲ್ಲಿ ಮತ್ತು ತಮ್ಮದೇ ಒಡೆತನವನ್ನುಳ್ಳ ದುಡಿಮೆಯ ನೆಲೆಯಲ್ಲಿ ತಮ್ಮ ಕಯ್ ಕೆಳಗಿನವರನ್ನು ಬಯ್ಯುವಾಗ ತಮ್ಮ ಕೋಪ ತಾಪಗಳನ್ನು ಅತ್ಯಂತ ಆವೇಶಪೂರ್ಣವಾಗಿ ಇಲ್ಲವೇ ಉದ್ರೇಕಪೂರ್ಣವಾಗಿಯೇ ಹೊರಹಾಕುತ್ತಾರೆ. ಕುಟುಂಬದ ಮತ್ತು ದುಡಿಮೆಯ ನೆಲೆಯಲ್ಲಿ ಕಂಡುಬರುವ ದೇಹದ ಚಹರೆಯು ಅವರು ಹೊಂದಿರುವ ಸಿರಿವಂತಿಕೆಯ ಇಲ್ಲವೇ ಅಧಿಕಾರದ ಸಂಕೇತವಾಗಿರುತ್ತದೆ.

ವ್ಯಕ್ತಿಗಳ ಸಾಮಾಜಿಕ ಅಂತಸ್ತು ತಗ್ಗಿದಂತೆಲ್ಲಾ ಅಂದರೆ ಸಾಮಾಜಿಕ ಜಾತಿ ರಚನೆಯಲ್ಲಿ ಕೆಳಹಂತದಲ್ಲಿರುವವರು, ಹಣಕಾಸು ಒಡವೆ ವಸ್ತು ಮತ್ತು ಇನ್ನಿತರ ಸಂಪತ್ತಿಲ್ಲದವರು, ಬಯ್ಗುಳದ ಮಾತಿನ ಪ್ರಸಂಗಗಳಲ್ಲಿ ತೊಡಗಿದಾಗ ಸಾರ್ವಜನಿಕ ರಂಗದಲ್ಲಾಗಲಿ ಇಲ್ಲವೇ ಕುಟುಂಬದ ನೆಲೆಯಲ್ಲಾಗಲಿ ಯಾವುದೇ ಸಂಕೋಚ, ಹಿಂಜರಿಕೆ, ಸಂಯಮವಿಲ್ಲದೆ ಉದ್ರಿಕ್ತ ಭಾವನೆಗಳನ್ನು ನೇರವಾಗಿ ಪ್ರಕಟಿಸುತ್ತಾರೆ. ಏಕೆಂದರೆ ಜೀವನಕ್ಕೆ ಅತ್ಯಗತ್ಯವಾದ ಅನ್ನ, ಬಟ್ಟೆ, ವಸತಿ, ವಿದ್ಯೆ ಮತ್ತು ಆರೋಗ್ಯದಿಂದ ವಂಚಿತರಾಗಿರುವ ಬಡವರು ಹಸಿವು, ಬಡತನ ಮತ್ತು ಅಪಮಾನದ ಬದುಕನ್ನು ನಡೆಸುತ್ತಿರುವುದರಿಂದ, ತಮ್ಮ ಮಯ್ ಮನದಲ್ಲಿ ಕೆರಳುವ ಭಾವನೆಗಳನ್ನು ಯಾವುದೇ ಆತಂಕವಿಲ್ಲದೇ ಹೊರಹಾಕುತ್ತಾರೆ. ಆದ್ದರಿಂದಲೇ ಕಡು ಬಡವರು ಮತ್ತು ಕೆಳವರ್ಗದವರು ಪರಸ್ಪರ ನಡೆಸುವ ಮಾತುಕತೆಗಳಲ್ಲಿ ಬಯ್ಗುಳದ ನುಡಿ ಸಾಮಗ್ರಿಗಳು ಹೆಚ್ಚಾಗಿ ಬಳಕೆಯಾಗುತ್ತವೆ.

ಕುಟುಂಬದ ನೆಲೆ, ದುಡಿಮೆಯ ನೆಲೆ ಮತ್ತು ಸಾರ್ವಜನಿಕ ನೆಲೆಗಳಲ್ಲಿ ಬಯ್ಯುವುದಕ್ಕೆ ಮತ್ತು ಬಯ್ಯಿಸಿಕೊಳ್ಳುವುದಕ್ಕೆ ಹೆದರುವ ಜನರೆಂದರೆ ಮಧ್ಯಮ ವರ್ಗದ ಜನ. 'ಮಧ್ಯಮ ವರ್ಗ' ಎಂದರೆ ಉಣಲು ಉಡಲು ವಾಸಿಸಲು ಅನುಕೂಲವುಳ್ಳ ಆದರೆ ಅತಿ ಹೆಚ್ಚಿನ ಸಿರಿವಂತಿಕೆಯಾಗಲಿ ಇಲ್ಲವೇ ಅಧಿಕಾರ ವಾಗಲಿ ಇಲ್ಲದ ಮಂದಿ. ಮಧ್ಯಮ ವರ್ಗದ ಜನರಿಗೆ ತಮ್ಮ ಸಾಮಾಜಿಕ ಅಂತಸ್ತನ್ನು ಎಚ್ಚರದಿಂದ ಕಾಪಾಡಿಕೊಳ್ಳಬೇಕೆಂಬ ಕಾತರವಿರುವುದರಿಂದ ತಮ್ಮ ಉಡುಗೆ ತೊಡುಗೆಗಳ ಬಗ್ಗೆ ಎಚ್ಚರವಹಿಸುವಂತೆಯೇ ತಾವು ದುಡಿಯುವ ನೆಲೆ ಮತ್ತು ಸಾರ್ವಜನಿಕ ನೆಲೆಗಳಲ್ಲಿ ಆಡುವ ಮಾತಿನ ಬಗ್ಗೆ ಹೆಚ್ಚು ಕಾಳಜಿಯನ್ನು ಹೊಂದಿರುತ್ತಾರೆ. ತಮ್ಮ ಸಾಮಾಜಿಕ ಅಂತಸ್ತಿಗೆ ಕುಂದನ್ನು ಉಂಟು ಮಾಡುವಂತಹ ಬಯ್ಗುಳದ ನುಡಿ ಗಳನ್ನು ಬೇರೆಯವರಿಂದ ಕೇಳಲು ಇಲ್ಲವೇ ಬೇರೆಯವರಿಗೆ ಬಯ್ಯಲು ಹಿಂಜರಿ ಯುತ್ತಾರೆ. ತಮ್ಮ ಕುಟುಂಬದ ನೆಲೆಯಲ್ಲಿ ಬಳಸುವ ಬಯ್ಗುಳದ ನುಡಿಗಳು ಇತರರಿಗೆ ಕೇಳಿಸದಂತೆ ಎಚ್ಚರವಹಿಸುತ್ತಾರೆ. ಮಧ್ಯಮ ವರ್ಗದ ಜನರು ತಮಗೆ ಸರಿಯೆನಿಸದ ಯಾವುದೇ ವ್ಯಕ್ತಿಗಳನ್ನು ನೇರವಾಗಿ ಅವರ ಮುಂದೆ ಬಯ್ಯುವು ದಕ್ಕಿಂತ ಹೆಚ್ಚಾಗಿ ಅವರ ಹಿಂದೆ ಅವರಿಗೆ ಗೊತ್ತಾಗದಂತೆ ಬಯ್ದುಕೊಳ್ಳುತ್ತಾರೆ.

ವ್ಯಕ್ತಿಗಳ ನಡುವೆ ಬಯ್ಗುಳವು ಏಕಮುಖವಾಗಿದ್ದರೆ ಅಂದರೆ ಬಯ್ಯುತ್ತಿರುವ ವ್ಯಕ್ತಿಗೆ ಯಾವುದೇ ಬಗೆಯ ಎದುರುತ್ತರವನ್ನು ಕೊಡದೆ ಮತ್ತೊಬ್ಬ ವ್ಯಕ್ತಿಯು ಸುಮ್ಮನೆ ಬಯ್ಯಿಸಿಕೊಳ್ಳುತ್ತಿದ್ದರೆ, ಬಯ್ಯುತ್ತಿರುವ ಮತ್ತು ಬಯ್ಯಿಸಿಕೊಳ್ಳುತ್ತಿರುವ ವ್ಯಕ್ತಿಗಳ ದೇಹದ ಚಹರೆಯಲ್ಲಿ ಬೇರೆ ಬೇರೆ ಬಗೆಯ ಅಂಶಗಳನ್ನು ನಾವು ಗಮನಿಸಬಹುದು. ಇಂತಹ ಸನ್ನಿವೇಶಗಳಲ್ಲಿ ಬಯ್ಯುವವರು ಆಕ್ರಮಣಶೀಲ ರಾಗಿರುತ್ತಾರೆ. ದೊಡ್ಡ ಧ್ವನಿಯಲ್ಲಿ ಅಬ್ಬರಿಸಿ ನುಡಿಯುತ್ತಿರುತ್ತಾರೆ. ಬಯ್ಯುವವರ ಮುಖದಲ್ಲಿ ತೀವ್ರವಾದ ಕೋಪ, ಆಕ್ರೋಶ ಮತ್ತು ತಿರಸ್ಕಾರದ ಭಾವನೆಗಳು ಪ್ರಕಟ ಗೊಳ್ಳುತ್ತಿರುತ್ತವೆ. ಬಯ್ಯುತ್ತಿರುವವರು ತಮ್ಮ ಆಕ್ರೋಶಕ್ಕೆ ಗುರಿಯಾದವರನ್ನು ನೆಟ್ಟನೆಯ ನೋಟದಿಂದ ದುರುಗುಟ್ಟಿಕೊಂಡು ನೋಡುತ್ತಿರುತ್ತಾರೆ. ಹುಬ್ಬುಗಳ ಏರಿಳಿತ, ಮೂಗಿನ ಹೊಳ್ಳೆಗಳ ಅರಳುವಿಕೆ, ಹಲ್ಲುಮುರಿಯನ್ನು ಕಚ್ಚುವುದು ಮುಂತಾದ ಮುಖಭಾವಗಳೂ ಈ ಸಮಯದಲ್ಲಿ ಕಂಡುಬರುತ್ತವೆ. ಇಂತಹ ಸಮಯದಲ್ಲಿ ಸಂಯಮರಹಿತ ವ್ಯಕ್ತಿಗಳು ಅತ್ಯಂತ ಉದ್ರಿಕ್ತವಾದ ಭಾವನೆಗಳನ್ನು ಪ್ರಕಟಿಸುತ್ತಾರೆ. ಕೈಗಳನ್ನು ಅತ್ತಿತ್ತ ಆಡಿಸುತ್ತಿದ್ದು, ಹಲವೊಮ್ಮೆ ಹಲ್ಲೆ ನಡೆಸುವಂತೆ ಬಯ್ಯಿಸಿಕೊಳ್ಳುತ್ತಿರುವವರ ಅತಿ ಹತ್ತಿರಕ್ಕೆ ಬಂದು ಅವರ ಮುಖದ ಬಳಿ ತಮ್ಮ ಕೈಗಳನ್ನು ಚಾಚುತ್ತಾರೆ. ಕೈಗಳ ಚಲನೆಯಲ್ಲಿಯೇ ಬಯ್ಯಿಸಿಕೊಳ್ಳುತ್ತಿರುವವರನ್ನು ಕೀಳಾಗಿ ಮಾಡಲು ಪ್ರಯತ್ನಿಸುತ್ತಾರೆ. ಕೆಲವೊಮ್ಮೆ ಬಯ್ಯಿಸಿಕೊಳ್ಳುತ್ತಿರುವವನ ಕೆನ್ನೆಯ ಮೇಲೆ ತಿವಿಯುವ ಇಲ್ಲವೇ ತಲೆಯ ಮೇಲೆ ಹೊಡೆಯುವ ಹಂತಕ್ಕೂ ಹೋಗುತ್ತಾರೆ.

ಇಂತಹ ಪ್ರಸಂಗಗಳಲ್ಲಿ ಬಯ್ಯುವವರ ಆಕ್ರಮಣಕ್ಕೆ ಒಳಗಾದವರ ದೇಹದ ಚಹರೆಗಳು ಈ ಕೆಳಕಂಡಂತಿರುತ್ತವೆ. ಬಯ್ಯಿಸಿಕೊಳ್ಳುತ್ತಿರವವರು ಹಿಂಜರಿಕೆಯಿಂದ ಸುಮ್ಮನೆ ನಿಂತಿರುತ್ತಾರೆ. ಇವರ ಮುಖದಲ್ಲಿ ಅಪಮಾನದ ಇಲ್ಲವೇ ನೋವಿನ ಭಾವನೆಗಳು ಎದ್ದು ಕಾಣುತ್ತಿರುತ್ತವೆ. ತಲೆ ಬಗ್ಗಿಸಿ ನೆಲದತ್ತ ನೋಡುತ್ತಿರುತ್ತಾರೆ ಇಲ್ಲವೇ ಅತ್ತಿತ್ತ ನೋಡುತ್ತಾರೆಯೇ ಹೊರತು ಬಯ್ಯುತ್ತಿರುವವರನ್ನು ನೋಡುವುದಿಲ್ಲ. ಏಕೆಂದರೆ ಹಾಗೆ ಹಿಂತಿರುಗಿ ಬಯ್ಯುತ್ತಿರುವವರನ್ನು ನೋಡಿದರೆ ಅದು ಪ್ರತಿಭಟನೆಯ ಸಂಕೇತವಾಗುತ್ತದೆ. ಬಯ್ಯಿಸಿಕೊಳ್ಳುತ್ತಿರುವವರ ದೇಹವು ಸ್ವಲ್ಪ ಮಟ್ಟಿಗೆ ಮುದುಡಿಕೊಂಡಂತಿರುತ್ತದೆ.

ಒಂದು ವೇಳೆ ಬಯ್ಗುಳದ ಮಾತಿನ ಕ್ರಿಯೆಯಲ್ಲಿ ಭಾಗಿಗಳಾದವರು ಸಮಾನವಾದ ಸಾಮಾಜಿಕ ಅಂತಸ್ತು ಮತ್ತು ದೇಹದ ಬಲವನ್ನು ಹೊಂದಿದ್ದರೆ, ಆಗ ಅವರ ದೇಹದ ಚಹರೆಯು ಈ ರೀತಿ ಇರುತ್ತದೆ. ಭಾಗಿಗಳಿಬ್ಬರೂ ಆಕ್ರಮಣ ಶೀಲರಾಗಿ ನಡೆದುಕೊಳ್ಳುತ್ತಾರೆ. ಅವರ ಕಣ್ಣಿನೋಟಗಳು ಪರಸ್ಪರ ತಾಕುತ್ತಿರುತ್ತವೆ. ಒಬ್ಬರು ಮತ್ತೊಬ್ಬರತ್ತ ಪ್ರಕಟಿಸುವ ತಿರಸ್ಕಾರದ, ಆಕ್ರೋಶದ ಮತ್ತು ಅಸಹ್ಯಕರವಾದ

ಭಾವನೆಗಳು ಸಮ ಪ್ರಮಾಣದಲ್ಲಿಯೇ ಕಂಡುಬರುತ್ತವೆ. ಭಾಗಿಗಳಲ್ಲಿ ಒಬ್ಬರು ತೋರಿಸಿದ ಭಾವವನ್ನು ಮತ್ತೊಬ್ಬರು ಮರುಗಳಿಗೆಯಲ್ಲಿಯೇ ಅನುಕರಿಸುತ್ತಾರೆ. ಕೈಗಳ ಮತ್ತು ದೇಹದ ಚಲನವಲನಗಳು ಬಹು ತೀವ್ರಗತಿ ಯಲ್ಲಿರುತ್ತವೆ. ಒಬ್ಬರು ಮತ್ತೊಬ್ಬರನ್ನು ಕಡೆಗಣಿಸುತ್ತಾ, ಆದಷ್ಟು ಅಸಹ್ಯಕರವಾದ ಭಾವಗಳನ್ನು ವ್ಯಕ್ತಪಡಿಸಲು ಪ್ರಯತ್ನಿಸುತ್ತಾರೆ. ಈ ರೀತಿ ಬಯ್ಯುವಿಕೆಯಲ್ಲಿ ತೊಡಗಿರುವ ವ್ಯಕ್ತಿಗಳ ತಮ್ಮ ನಡುವಣ ಸಂಬಂಧ ಮುರಿದುಬೀಳುವುದರ ಬಗ್ಗೆ ಯಾವುದೇ ಬಗೆಯ ಆತಂಕ ಪಡುವುದಿಲ್ಲವಾದುದರಿಂದ, ಪರಸ್ಪರರ ಮಾತಿನ ಹಲ್ಲೆ ನಿರಾತಂಕವಾಗಿ ನಡೆಯುತ್ತಿರುತ್ತದೆ.

ಬಯ್ಗುಳದ ಪ್ರಸಂಗಗಳಲ್ಲಿ ಗಂಡಸರು ಮತ್ತು ಹೆಂಗಸರಲ್ಲಿ ದೇಹದ ಚಹರೆಗಳು ಬೇರೆ ಬೇರೆ ರೀತಿಯಲ್ಲಿ ಕಂಡುಬರುತ್ತವೆ.

ಆಕ್ರಮಣಶೀಲರಾದ ಗಂಡಸರು ಎದುರಾಳಿಯನ್ನು ದಿಟ್ಟಿಸಿ ನೋಡುತ್ತಾ, ಹುಬ್ಬುಗಳನ್ನು ಗಂಟಿಕ್ಕಿಕೊಂಡು, ಮುಖದಲ್ಲಿ ತೀವ್ರ ಕೋಪವನ್ನು ಪ್ರಕಟಿಸುತ್ತ ಎದುರಾಳಿಯತ್ತ ಮುನ್ನುಗ್ಗಲು ಪ್ರಯತ್ನಿಸುತ್ತಾರೆ. ಗಂಡಸರ ಕಾಮದ ಅಂಗದ ಆಕೃತಿಯಲ್ಲಿ ಮುಂಗಯ್ ಅನ್ನು ಬಗ್ಗಿಸಿ ಅಲ್ಲಾಡಿಸುತ್ತಾರೆ. ಕಾಮದ ಕ್ರಿಯೆಯು ನಡೆಯುವ ರೀತಿಯನ್ನು ಎರಡು ಕಯ್‌ಗಳಲ್ಲಿ ಅಭಿನಯಿಸಿ ತೋರಿಸುತ್ತ, ಎದುರಾಳಿಗೆ ಅಪಮಾನವನ್ನು ಉಂಟುಮಾಡಲು ಪ್ರಯತ್ನಿಸುತ್ತಾರೆ. ಇಂತಹ ಉದ್ರಿಕ್ತ ಭಾವದ ವರ್ತನೆಯು ಮಧ್ಯಮ ಕೆಳವರ್ಗದ ಮತ್ತು ಅತಿ ಕೆಳವರ್ಗದ ಗಂಡಸರಲ್ಲಿ ಹೆಚ್ಚಾಗಿ ಕಾಣುತ್ತೇವೆ.

ಸಾಮಾಜಿಕವಾಗಿ ಮೇಲು ಮತ್ತು ಮಧ್ಯಮ ವರ್ಗಕ್ಕೆ ಸೇರಿದ ಹೆಂಗಸರು ದುಡಿಮೆಯ ನೆಲೆ ಮತ್ತು ಸಾರ್ವಜನಿಕ ನೆಲೆಗಳಲ್ಲಿ ಎಲ್ಲರ ಮುಂದೆ ಬಹಿರಂಗವಾಗಿ ನಡೆಯುವ ಬಯ್ಗುಳ ಪ್ರಸಂಗಗಳಲ್ಲಿ ಪಾಲ್ಗೊಳ್ಳಲು ಹಿಂಜರಿಯುತ್ತಾರೆ. ತಮ್ಮ ಕುಟುಂಬದ ಮತ್ತು ತಮ್ಮ ನಡವಳಿಕೆಯ ಬಗ್ಗೆ ಕೆಟ್ಟ ಹೆಸರು ಬರುತ್ತದೆಯೆಂದು ಬಯ್ಗುಳದ ಮಾತುಗಳನ್ನಾಡಲು ಅಂಜುತ್ತಾರೆ. ಸಾಮಾನ್ಯವಾಗಿ ಮೇಲು ಮತ್ತು ಮಧ್ಯಮ ವರ್ಗಕ್ಕೆ ಸೇರಿದ ಹೆಂಗಸರಲ್ಲಿ ಹೆಚ್ಚಿನವರು ಗಂಡಸರ ಆದಾಯ ದಿಂದಲೇ ಮನೆಯ ವ್ಯವಹಾರಗಳನ್ನು ನಡೆಸುತ್ತಿರುವ ಪರಾವಲಂಬಿ ಗಳಾಗಿರುತ್ತಾರೆ. ಇದರಿಂದಾಗಿ ಅವರು ತಮ್ಮ ನೋವಿಗೆ ಕಾರಣರಾದವರನ್ನು ನೇರವಾಗಿ ಬಯ್ಯಲು ಅಳುಕುತ್ತಾರೆ.

ಆದರೆ ಕೆಳ ವರ್ಗದ ಹೆಂಗಸರಲ್ಲಿ ಹೆಚ್ಚುಕಡಿಮೆ ಎಲ್ಲರೂ ಸ್ವಾವಲಂಬಿ ಯಾಗಿರುತ್ತಾರೆ. ಅಂದರೆ ತಮ್ಮ ದಿನನಿತ್ಯದ ಅನ್ನವನ್ನು ತಾವೇ ದುಡಿದು ತಿನ್ನುವ ಮಂದಿಯಾಗಿರುತ್ತಾರೆ. ಆದ್ದರಿಂದ ಗಂಡಸರೊಡನೆ ಸರಿಸಮಾನವಾಗಿ ನಿಂತು ಮಾತನಾಡಬಲ್ಲ ಕಸುವನ್ನು ಹೊಂದಿರುತ್ತಾರೆ. ದುಡಿಮೆಯ ನೆಲೆಯಲ್ಲಿ ಮೇಲು

ಜಾತಿ ಮತ್ತು ಮೇಲುವರ್ಗದ ಗಂಡಸರಿಂದ ಬಹುಬಗೆಯ ಕಿರುಕುಳಕ್ಕೆ ಒಳಗಾಗುವುದರ ಜತೆಗೆ ಆಗಾಗ್ಗೆ ಬಯ್ಯಿಸಿಕೊಳ್ಳುವ ಕೆಳ ವರ್ಗದ ಹೆಂಗಸರು ಕೆಲಸವನ್ನು ಕಳೆದುಕೊಳ್ಳುವ ಹೆದರಿಕೆಯಿಂದ ಸುಮ್ಮನಾಗುತ್ತಾರೆ. ಆದರೆ ಇದೇ ಹೆಂಗಸರು ತಮ್ಮ ಕುಟುಂಬದ ವ್ಯಕ್ತಿಗಳೊಡನೆ ಮತ್ತು ತಮ್ಮಂತೆಯೇ ಬಡವರಾಗಿರುವ ಗಂಡುಹೆಣ್ಣುಗಳೊಡನೆ ಜಗಳವಾಡುವಾಗ ಬಯ್ಗುಳವನ್ನು ಯಾವ ಹಿಂಜರಿಕೆಯಿಲ್ಲದೆ ಬಳಸುತ್ತಾರೆ.

ಬಯ್ಯುವಾಗ ತಮ್ಮ ಕಯ್‌ಗಳನ್ನು ತೀವ್ರಗತಿಯಲ್ಲಿ ಆಡಿಸುತ್ತಾ, ಎದುರಾಳಿಯ ಕೆನ್ನೆಯನ್ನು ತಿವಿಯಲು, ತಲೆಯ ಕೂದಲನ್ನು ಹಿಡಿದು ಎಳೆಯಲು, ಬಟ್ಟೆಯನ್ನು ಕೀಳಲು ಪ್ರಯತ್ನಿಸುತ್ತಾರೆ. ಇಂತಹ ಸಮಯದಲ್ಲಿ ಆಕ್ರಮಣಕಾರಿ ರೂಪದಲ್ಲಿ ಕಾಮದ ನಂಟಿನ ಬಯ್ಗುಳಗಳನ್ನು ಕೂಡ ಆಡುತ್ತಾರೆ. ಶಾಪರೂಪದ ಬಯ್ಗುಳಗಳನ್ನು ಹೆಚ್ಚಾಗಿ ಆಡುವ ಹೆಂಗಸರು ತಮ್ಮ ಎರಡು ಕೈಗಳನ್ನು ಮುಂದಕ್ಕೆ ಒಡ್ಡಿ ಬೆರಳುಗಳಿಂದ ನಟಿಕೆಯನ್ನು ಮುರಿಯುತ್ತಾ ಶಪಿಸುತ್ತಾರೆ. ಬೀದಿಯಲ್ಲಿರುವ ದೂಳನ್ನು ಎರಡು ಕಯ್‌ಗಳಲ್ಲೂ ಗೋರಿಕೊಂಡು, ಎದುರಾಳಿಯ ಕಡೆಗೆ ಇಲ್ಲವೇ ಅವನ/ಅವಳ ಮನೆಯ ಮೇಲೆ ಎರಚುತ್ತಾ ಶಪಿಸುತ್ತಾರೆ. ಬಯ್ಗುಳದ ಪ್ರಸಂಗಗಳಲ್ಲಿ ಸಾಮಾನ್ಯವಾಗಿ ಗಂಡಸರು ಅಳುವುದು ಕಂಡುಬರುವುದಿಲ್ಲ. ಆದರೆ ಹೆಂಗಸರಲ್ಲಿ ಬಹಳಷ್ಟು ಮಂದಿ ಅಳುತ್ತಲೇ ಬಯ್ಯುತ್ತಿರುತ್ತಾರೆ.

ಬಯ್ಗುಳಗಳನ್ನು ಸದಾಕಾಲ ಆಡುತ್ತಲೇ ಇರುವ ಚಟವುಳ್ಳ ಕೆಲವು ಹೆಂಗಸರು ಮತ್ತು ಗಂಡಸರು ತಾವು ಕುಳಿತ ಕಡೆಯಲ್ಲಿಯೇ ಇಲ್ಲವೇ ತಾವು ಕೆಲಸ ಮಾಡುತ್ತಿರುವ ಜಾಗದಲ್ಲಿಯೇ ಅತ್ತಿತ್ತ ತಿರುಗಾಡುತ್ತಾ ಗಂಟೆಗಟ್ಟಲೆ ಏಕ ಪ್ರಕಾರವಾಗಿ ಬಯ್ಯುವಂತಹ ಕಸುವನ್ನು ಹೊಂದಿರುತ್ತಾರೆ. ಇಂತಹವರಲ್ಲಿ ಹೆಚ್ಚಿನ ಮಂದಿ ಒಂದಲ್ಲ ಒಂದು ಬಗೆಯ ಮಾನಸಿಕ ಒತ್ತಡದಿಂದ ನರಳುತ್ತಿರುತ್ತಾರೆ.

ಕುಟುಂಬದ ನೆಲೆಯಲ್ಲಿ ಬಯ್ಗುಳಗಳು ಪ್ರಯೋಗಗೊಂಡಾಗ, ಹಲವೊಮ್ಮೆ ಬಯ್ಯಿಸಿಕೊಳ್ಳುವವರ ಮುಖವನ್ನು ದಿಟ್ಟಿಸಿ ನೋಡುವುದಾಗಲಿ ಇಲ್ಲವೇ ಬೇರೆ ಬೇರೆ ಬಗೆಯ ಭಾವಗಳಾಗಲಿ ಕಂಡುಬರುವುದಿಲ್ಲ. ಬಯ್ಯುತ್ತಿರುವವರು ತಮ್ಮ ಪಾಡಿಗೆ ತಾವು ಕೆಲಸಗಳನ್ನು ಮಾಡುತ್ತಲೇ ಬಯ್ಗುಳದ ನುಡಿಗಳನ್ನು ಆಡುತ್ತಿರುತ್ತಾರೆ.

❖

೧೦. ಬಯ್ಗುಳದ ಮಾತಿನ ಪ್ರಸಂಗದಲ್ಲಿ ಇತರರು ಇರುವುದು

ಬಯ್ಯುತ್ತಿರುವ ಮತ್ತು ಬಯ್ಯಿಸಿಕೊಳ್ಳುತ್ತಿರುವ ವ್ಯಕ್ತಿಗಳ ನಡುವೆ ಇತರರು ಇರುವುದು ಅಥವಾ ಇಲ್ಲದಿರುವುದು ಬಯ್ಯುವಿಕೆಯ ಪ್ರಸಂಗದಲ್ಲಿ ಬಹು ದೊಡ್ಡ ಪರಿಣಾಮವನ್ನು ಬೀರುತ್ತದೆ.

ಬಯ್ಗುಳದ ಮಾತಿನ ಪ್ರಸಂಗದಲ್ಲಿ ತೊಡಗಿದ ಈ ಇಬ್ಬರ ನಡುವೆ ಮತ್ತೆ ಯಾರೂ ಇಲ್ಲದಿದ್ದರೆ, ಆಗ ಆಕ್ರೋಶದ ತೀವ್ರತೆಯು ಕಡಿಮೆಯಾಗುತ್ತದೆ ಅಥವಾ ಬಹುಮಟ್ಟಿಗೆ ನಿಂತೇ ಹೋಗುತ್ತದೆ. ಆ ಸಮಯದಲ್ಲಿ ಬಯ್ಯಿಸಿಕೊಂಡವನು ನಾನಾ ಕಾರಣಗಳಿಗಾಗಿ ಸುಮ್ಮನಾಗಬಹುದು. ಅಂದರೆ ತನ್ನದೇ ತಪ್ಪುಗಳಿರ ಬಹುದು; ಮಯ್ಯಲ್ಲಿ ಕಸುವಿಲ್ಲದವನಾಗಿರಬಹುದು; ತಾನು ಆ ನೆಲೆಗೆ ಹೊಸಬನಾಗಿರಬಹುದು; ಎದುರಾಳಿಗಿಂತ ತಾನು ಸಾಮಾಜಿಕ ಹಾಗೂ ಸಂಪತ್ತಿನ ಅಂತಸ್ತಿನಲ್ಲಿ ಕೀಳಾಗಿರಬಹುದು ಅಥವಾ ತನಗೆ ಹಾನಿಯುಂಟಾಗಬಹುದೆಂಬ ಹೆದರಿಕೆಯಿಂದ ಸುಮ್ಮನಾಗಬಹುದು.

ಆದರೆ ಇದೇ ಸನ್ನಿವೇಶದಲ್ಲಿ ಮೂರನೆಯ ವ್ಯಕ್ತಿಗಳಾಗಿ ಇತರರು ಇದ್ದರೆ, ಆಗ ಬಯ್ಯುವಿಕೆಯ ಸ್ವರೂಪವು ಬೇರೆ ಬೇರೆ ಆಯಾಮಗಳನ್ನು ಹೊಂದುತ್ತದೆ. ಬಯ್ಯುತ್ತಿರುವ ವ್ಯಕ್ತಿಯು ಅನ್ಯರ ಮುಂದೆ ಬಯ್ಗುಳದ ಕ್ರಿಯೆಯನ್ನು ಮುಂದುವರಿಸಿ ಎದುರಾಳಿಯನ್ನು ಅಪಮಾನಗೊಳಿಸಲು ಇನ್ನೂ ಉತ್ಸಾಹದಿಂದ ಬಯ್ಗುಳದ ಮಾತಿನ ತೀವ್ರತೆಯನ್ನು ಹೆಚ್ಚು ಮಾಡುತ್ತಾನೆ. ಇಂತಹ ಸನ್ನಿವೇಶದಲ್ಲಿ ಬಯ್ಯಿಸಿ ಕೊಳ್ಳುವವನು ಅನಿವಾರ್ಯವಾಗಿ ತನ್ನ ನಡೆನುಡಿಗಳೇ ಸರಿಯೆಂದು ಹೇಳಿಕೊಳ್ಳು ವುದಕ್ಕಾಗಿ ಬಯ್ಗುಳದ ಬಳಕೆಯ ಮೂಲಕವೇ ಪ್ರತ್ಯುತ್ತರವನ್ನು ನೀಡಲು

ತೊಡಗುವುದು ಕಂಡುಬರುತ್ತದೆ. ಅಂದರೆ ಇತರರ ಹಾಜರಿಯಿಂದ ಬಯ್ಗುಳದ ಪ್ರಸಂಗವು ಇನ್ನು ಹೆಚ್ಚಿನ ಮಟ್ಟದಲ್ಲಿ ಕ್ರಿಯಾಶೀಲವಾಗುತ್ತದೆ.

ಸಾರ್ವಜನಿಕ ರಂಗದಲ್ಲಿ ನಡೆಯುವ ಬಯ್ಗುಳದ ಪ್ರಸಂಗದಲ್ಲಿ ತೊಡಗಿದವರ ಸುತ್ತಮುತ್ತ ನೋಡುಗರು ಹೆಚ್ಚಿನ ಸಂಕೆಯಲ್ಲಿ ಸುತ್ತುಗಟ್ಟುತ್ತಿದ್ದಂತೆಯೇ ಬಯ್ಗುಳದ ಪ್ರಸಂಗವು ನಾಟಕೀಯವಾದ ತಿರುವನ್ನು ಪಡೆಯುತ್ತದೆ. ಬಯ್ಗುಳದ ಮಾತಿನ ಕ್ರಿಯೆಯಲ್ಲಿ ತೊಡಗಿದವರು ಈಗ ಅಲ್ಲಿದ್ದವರ ಜೊತೆಯಲ್ಲಿ ಮಾತನಾಡಲು ತೊಡಗುತ್ತಾರೆ. ಇತರರ ಸಾಂತ್ವನದ ನುಡಿಗಳು ಅವರಿಗೆ ಇನ್ನೂ ಹೆಚ್ಚಿನ ಆವೇಶವನ್ನು ಇಲ್ಲವೇ ಉತ್ಸಾಹವನ್ನು ನೀಡುತ್ತವೆ. ಬಯ್ದಾಟದಲ್ಲಿ ತೊಡಗಿದವರು, ತಾವು ಬಯ್ಯುವುದಕ್ಕೆ ಕಾರಣಗಳೇನೆಂಬುದನ್ನು ಪರಸ್ಪರ ಬಯ್ದಾಡುತ್ತಲೇ ಮತ್ತೆ ಮತ್ತೆ ವಿವರಿಸುತ್ತಾರೆ. ಅವರಿಬ್ಬರಿಗೆ ಮಾತ್ರ ತಿಳಿದಿರಬಹುದಾದ ಮಾತಿನ ಜಗಳಕ್ಕೆ ಕಾರಣವಾದ ಸಂಗತಿಗಳು, ಈಗ ಅಲ್ಲಿರುವ ನೋಡುಗರಿಗೂ ತಿಳಿಯುತ್ತದೆ. ಈ ಹಂತದಲ್ಲಿ ಅಲ್ಲಿದ್ದವರು ನಾನಾ ಬಗೆಗಳಲ್ಲಿ ಪ್ರತಿಕ್ರಿಯಿಸತೊಡಗುತ್ತಾರೆ.

ಹಲವರು ಬಯ್ದಾಡುವುದಕ್ಕೆ ಕಾರಣಗಳು ಏನೆಂಬುದನ್ನು ಗ್ರಹಿಸಿಕೊಂಡು, ತಪ್ಪು ಮಾಡಿದ್ದವನಿಗೆ ವಿವೇಕವನ್ನು ಹೇಳುತ್ತಾರೆ. ಮತ್ತೆ ಕೆಲವರು ಇಬ್ಬರಿಗೂ ಸಮಾಧಾನ ಹೇಳುತ್ತಾರೆ. ಮತ್ತೆ ಕೆಲವರು ಬಯ್ದಾಡುತ್ತಿರುವವರಲ್ಲಿ ಯಾರೊಬ್ಬರನ್ನು ವಹಿಸಿಕೊಳ್ಳದೆ ಸುಮ್ಮನೆ ಅಲ್ಲಿ ನಿಂತೇ ಇರುತ್ತಾರೆ. ಮತ್ತೆ ಕೆಲವರು ಇಬ್ಬರಲ್ಲಿ ಒಬ್ಬರನ್ನು ವಹಿಸಿಕೊಂಡು ಅವನಿಗೆ ಬೆಂಬಲವಾಗಿ ನಿಲ್ಲುವರಲ್ಲದೇ ತಾವೂ ಬಯ್ಯುವುದಕ್ಕೆ ತೊಡಗುತ್ತಾರೆ. ಆಗ ಬಯ್ಗುಳದ ಮಾತಿನ ಪ್ರಸಂಗದಲ್ಲಿ ಇನ್ನೂ ಹೆಚ್ಚಿನ ಆವೇಶ ಮತ್ತು ಆಕ್ರೋಶ ಕಂಡುಬರುತ್ತದೆ. ಬಯ್ಗುಳದ ಪ್ರಸಂಗವು ತೀವ್ರಗೊಳ್ಳುತ್ತಿದ್ದಂತೆಯೇ ಮತ್ತೆ ಕೆಲವು ನೋಡುಗರು ಅಲ್ಲಿಂದ ದೂರ ಸರಿಯುತ್ತಾರೆ. ಕೆಲವು ಸನ್ನಿವೇಶಗಳಲ್ಲಿ ಬಯ್ದಾಟದಲ್ಲಿ ತೊಡಗಿರುವವರು ತಮ್ಮ ಸುತ್ತಲೂ ಆ ರೀತಿ ಇತರರು ನೋಡುತ್ತಾ ನಿಂತಿರುವುದಕ್ಕೆ ವಿರೋಧವನ್ನು ವ್ಯಕ್ತಪಡಿಸುತ್ತಾ **"ಇಲ್ಲೇನು ಕೋತಿ ಕುಣಿಸ್ತಾವರೆ ಅಂತ ಬಂದು ನಿಂತಿದ್ದೀರ"** ಎಂದು ಹಂಗಿಸುತ್ತಾರೆ.

ಸಾರ್ವಜನಿಕ ರಂಗಗಳಲ್ಲಿ ಈ ರೀತಿ ಬಯ್ಗುಳದ ಮಾತಿನ ಕ್ರಿಯೆಯಲ್ಲಿ ತೊಡಗಿ ಇತರರ ನಡುವೆಯೂ ಬಯ್ಯುವಿಕೆಯನ್ನು ಮುಂದುವರಿಸುವವರು ಸಾಮಾನ್ಯವಾಗಿ ಮಧ್ಯಮ ಕೆಳವರ್ಗದ ಮತ್ತು ಕೆಳವರ್ಗಕ್ಕೆ ಸೇರಿದ ವ್ಯಕ್ತಿಗಳಾಗಿರುತ್ತಾರೆ. ಶ್ರೀಮಂತ ವರ್ಗ ಮತ್ತು ಮಧ್ಯಮ ವರ್ಗದವರು ಸಾರ್ವಜನಿಕ ಕ್ಷೇತ್ರದಲ್ಲಿ ಬಯ್ಗುಳದ ಮಾತಿನ ಘಟನೆಯಲ್ಲಿ ತೊಡಗಲು ಹಿಂಜರಿಯುತ್ತಾರೆ. ಸಾರ್ವಜನಿಕ ಕ್ಷೇತ್ರದಲ್ಲಿ ಬಯ್ಯುವುದರಿಂದ ಇಲ್ಲವೇ ಬಯ್ಯಿಸಿಕೊಳ್ಳುವುದರಿಂದ ತಮ್ಮ ಸಾಮಾಜಿಕ ಅಂತಸ್ತು ಕುಸಿಯುವುದೆಂಬ ಆತಂಕ ಈ ವರ್ಗದ ಜನರಲ್ಲಿದೆ. ಆದ್ದರಿಂದಲೇ ಜನರು ಹೆಚ್ಚು ಹೆಚ್ಚು ವಿದ್ಯಾವಂತರಾದಂತೆಲ್ಲಾ ಸಾಮಾಜಿಕ ಮತ್ತು ಆರ್ಥಿಕ

ಅಂತಸ್ತುಗಳ ಶ್ರೇಣಿಯಲ್ಲಿ ಮೇಲೆ ಏರಿದಂತೆಲ್ಲಾ, ಸಾರ್ವಜನಿಕ ಕ್ಷೇತ್ರಗಳಲ್ಲಿ ಬಯ್ಗುಳದ ಮಾತುಗಳನ್ನು ಪ್ರಯೋಗಿಸುವ ಅಥವಾ ಅನ್ಯರಿಂದ ತಾವು ಬಯ್ಯಿಸಿಕೊಳ್ಳುವುದರ ಬಗ್ಗೆ ತೀವ್ರ ಎಚ್ಚರ ವಹಿಸುತ್ತಾರೆ.

ಬಯ್ಗುಳದ ಘಟನೆಯ ಸಂದರ್ಭಗಳಲ್ಲಿ ನೋಡುಗರ ವರ್ತನೆಯು ಬಹು ಕುತೂಹಲದಿಂದ ಕೂಡಿರುತ್ತದೆ. ಬಯ್ದಾಡುವವರು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಪರಸ್ಪರ ತಳ್ಳಾಡುತ್ತಲೋ ಅಥವಾ ಮತ್ತಿತರ ಕಾರಣಗಳಿಂದ ಅತ್ತಿತ್ತ ಚಲಿಸುತ್ತಿದ್ದರೆ, ನೋಡುಗರ ಚಲನವಲನಗಳು ಅದಕ್ಕೆ ತಕ್ಕಂತೆ ಇರುತ್ತವೆ. ಅಂದರೆ ಬಯ್ದಾಡುತ್ತಿರುವವರನ್ನೇ ಹಿಂಬಾಲಿಸುತ್ತಾ ಸುತ್ತುವರಿಯುತ್ತಾರೆ. ಹಲವು ಸಂದರ್ಭಗಳಲ್ಲಿ ಬಯ್ದಾಡುವ ಕ್ರಿಯೆಯಲ್ಲಿ ತೊಡಗಿದವರು ಅಲ್ಲಿದ್ದ ನೋಡುಗರ ಸಮೂಹದಲ್ಲಿ ತಮ್ಮ ಗೌರವಕ್ಕೆ ಪಾತ್ರರಾಗಿರುವವರನ್ನು ಅಥವಾ ತಮಗಿಂತ ವಯಸ್ಸಿನಲ್ಲಿ ಹಾಗೂ ಅಧಿಕಾರದಲ್ಲಿ ಹಿರಿಯರಾದ ಆತ್ಮೀಯರನ್ನು ಕಂಡು ಬಯ್ಗುಳದ ಮಾತುಗಳನ್ನು ನಿಲ್ಲಿಸಬಹುದು ಅಥವಾ ಕಡಿಮೆ ಮಾಡಬಹುದು.

ಮತ್ತೆ ಕೆಲವೊಮ್ಮೆ ನೋಡುಗರ ಸಮೂಹದಲ್ಲಿ ತಮಗೆ ಆತ್ಮೀಯರಾದವರನ್ನು ಕಂಡು ಶಕ್ತಿ ಸಂಚಯವಾದಂತೆ ಇನ್ನೂ ಉತ್ಸಾಹ ಮತ್ತು ಉದ್ರೇಕಗಳಿಂದ ಬಯ್ಗುಳಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಪ್ರಯೋಗಿಸಬಹುದು. ಆದ್ದರಿಂದ ಬಯ್ಗುಳದ ಮಾತಿನ ದಾಳಿಯು ನಿಲ್ಲಲು ಇಲ್ಲವೇ ಮತ್ತಷ್ಟು ಹೆಚ್ಚಾಗಲು ಇಲ್ಲವೇ ಕಡಿಮೆ ಪ್ರಮಾಣದಲ್ಲಿ ನಡೆಯಲು ನೋಡುಗರ ಹಾಜರಿಯು ಪ್ರಮುಖ ಕಾರಣವಾಗಿರುತ್ತದೆ.

❖

೧೧. ಬಯ್ಯುವಿಕೆ: ಜಾತಿ ಮತ್ತು ವರ್ಗ

ಕನ್ನಡ ನುಡಿ ಸಮುದಾಯವನ್ನು ಒಳಗೊಂಡಂತೆ ಭಾರತೀಯ ಸಮಾಜದಲ್ಲಿ ವ್ಯಕ್ತಿಯ ಸಾಮಾಜಿಕ ಸ್ಥಾನಮಾನಗಳನ್ನು ನಿರ್ಧರಿಸುವಲ್ಲಿ **"ವ್ಯಕ್ತಿಯು ಯಾವ ಜಾತಿಗೆ ಮತ್ತು ಯಾವ ವರ್ಗಕ್ಕೆ ಸೇರಿದವನು/ಳು"** ಎಂಬುದು ಗುರುತರವಾದ ಅಳತೆಗೋಲಾಗಿದೆ. ವ್ಯಕ್ತಿಯ ಎಲ್ಲಾ ಬಗೆಯ ಸಾಮಾಜಿಕ ವರ್ತನೆಗಳನ್ನು ಈ ಎರಡು ಸಂಗತಿಗಳೇ ನಿಯಂತ್ರಿಸುತ್ತವೆ ಮತ್ತು ನಿರ್ದೇಶಿಸುತ್ತವೆ. ಸಾಮಾಜಿಕ ವರ್ತನೆಯ ಒಂದು ಭಾಗವೇ ಆಗಿರುವ ಬಯ್ಯುವಿಕೆಯ ಬಗ್ಗೆ ತಿಳಿಯುವಾಗ ನಮ್ಮ ಸಮಾಜದ ಜಾತಿ ಪದ್ಧತಿಯ ಚರಿತ್ರೆಯನ್ನು ಅರಿಯಬೇಕಾದ ಅಗತ್ಯವಿದೆ.

ಮನು ಎಂಬ ರಿಸಿಯು ಸಂಸ್ಕೃತ ನುಡಿಯಲ್ಲಿ ಬರೆದ ಹೊತ್ತಗೆಯನ್ನು 'ಮನುಧರ್ಮ ಶಾಸ್ತ್ರ / ಮನುಸ್ಮೃತಿ' ಎಂದು ಕರೆಯುತ್ತಾರೆ. ಇದು ಕ್ರಿ.ಪೂ.೨೦೦ ರಿಂದ ಕ್ರಿ.ಶ.೩೦೦ರ ನಡುವಣ ಕಾಲಮಾನದಲ್ಲಿ ಈ ಹೊತ್ತಗೆ ರಚನೆಗೊಂಡಿರ ಬಹುದೆಂದು ಚರಿತ್ರೆಕಾರರು ಹೇಳಿದ್ದಾರೆ. ಇಂಡಿಯಾ ದೇಶದಲ್ಲಿ ಅಂದು ನೆಲೆಸಿದ್ದ ಜನಸಮುದಾಯದ ಸಾಮಾಜಿಕ ರಚನೆಯ ಸ್ವರೂಪವನ್ನು ಮತ್ತು ಜನರು ನಿತ್ಯ ಜೀವನದಲ್ಲಿ ಮಾಡಬೇಕಾದ ಆಚರಣೆಗಳನ್ನು ಹಾಗೂ ಅನುಸರಿಸಬೇಕಾದ ನಿಯಮ ಗಳನ್ನು ಈ ಹೊತ್ತಿಗೆಯಲ್ಲಿ ವಿವರಿಸಲಾಗಿದೆ.

ಇಂಡಿಯಾ ದೇಶದ ಪ್ರಾಚೀನ ಕಾಲದ ಸಾಮಾಜಿಕ ರಚನೆಯಲ್ಲಿ "ಬ್ರಾಹ್ಮಣ-ಕ್ಷತ್ರಿಯ-ವೈಶ್ಯ-ಶೂದ್ರ" ಎಂಬ ನಾಲ್ಕು ವರ್ಣಗಳಿದ್ದವು. ಬ್ರಹ್ಮನೆಂಬ ದೇವರ ಮುಖದಿಂದ ಬ್ರಾಹ್ಮಣ, ತೋಳುಗಳಿಂದ ಕ್ಷತ್ರಿಯ, ತೊಡೆಗಳಿಂದ ವೈಶ್ಯ, ಪಾದಗಳಿಂದ ಶೂದ್ರರು ಹುಟ್ಟಿ ಬಂದಿದ್ದಾರೆ. ವಿದ್ಯೆ, ಸಂಪತ್ತು ಮತ್ತು ಅಧಿಕಾರವನ್ನು ಹೊಂದುವುದಕ್ಕೆ ಶೂದ್ರರು ಯೋಗ್ಯರಲ್ಲ. ಪಾದವು ಹೇಗೆ ದೇಹದ

ತೂಕವನ್ನು ಹೊರುತ್ತದೆಯೋ ಅಂತೆಯೇ ಶೂದ್ರರು ಇನ್ನುಳಿದ ಮೂರು ವರ್ಣದವರ ಸೇವೆಯಲ್ಲಿಯೇ ತಮ್ಮ ಬದುಕನ್ನು ಕಳೆಯಬೇಕು ಎಂಬ ಕಟ್ಟಳೆಗಳನ್ನು ಮನು ಗೊತ್ತುಪಡಿಸಿದ್ದಾನೆ.

ಮನುವಿನ ಕಾಲದಲ್ಲಿಯೇ ಜನಸಮುದಾಯದಲ್ಲಿದ್ದ ಮತ್ತೊಂದು ವರ್ಗದ ಜನರನ್ನು 'ಚಂಡಾಲ'ರೆಂದು ಹೆಸರಿಸಲಾಗಿದೆ. ಸಾಮಾಜಿಕ ಇತಿಹಾಸದಲ್ಲಿ ಇವರನ್ನು ಪಂಚಮರೆಂದು ಗುರುತಿಸಲಾಗಿದೆ. ಕಾಲ ಉರುಳಿದಂತೆಲ್ಲಾ ನಾಲ್ಕು ವರ್ಣಗಳು ಹತ್ತಾರು ನೂರಾರು ಸಾವಿರಾರು ಬಗೆಯ ಕವಲುಗಳಾಗಿ ಮತ್ತೆ ಮತ್ತೆ ಒಡೆದು ಜಾತಿ ಉಪಜಾತಿಗಳಾಗಿ ರೂಪುಗೊಂಡಿವೆ. ಪ್ರತಿಯೊಂದು ಜಾತಿ ಉಪ ಜಾತಿಗಳು ತಮ್ಮದೇ ಆದ ಸಂಪ್ರದಾಯ ಮತ್ತು ಕಟ್ಟುಪಾಡುಗಳನ್ನು ಆಚರಿಸುತ್ತಿವೆ.

ಶಾಸ್ತ್ರದಲ್ಲಿ ಹೇಳಿದೆಯೆಂದು ಅನುಸರಿಸುತ್ತಿರುವ ಕಟ್ಟುಪಾಡುಗಳು ಜಾತಿ ಸಮುದಾಯಗಳನ್ನು ಮಾನಸಿಕವಾಗಿ ವಿಂಗಡಿಸಿ **"ನಮ್ಮ ಜಾತಿ ಮತ್ತೊಂದು ಜಾತಿಗಿಂತ ಮೇಲು ಎಂಬ ಮೇಲರಿಮೆಯನ್ನು ಮತ್ತು ನಮ್ಮ ಜಾತಿ ಮತ್ತೊಂದು ಜಾತಿಗಿಂತ ಕೀಳು ಎಂಬ ಕೀಳರಿಮೆಯನ್ನು ಜನಮನದಲ್ಲಿ ನಾಟಿಸಿದೆ."** ಆದ್ದರಿಂದಲೇ ಜಾತಿ ಸಮುದಾಯದಲ್ಲಿ ಹುಟ್ಟಿ ಬೆಳೆದು ಬಾಳುತ್ತಿರುವ ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ಬೇರೆ ಬೇರೆ ಪ್ರಮಾಣದಲ್ಲಿ ಜಾತಿಯ ಬಗೆಗಿನ ಮೇಲರಿಮೆ ಇಲ್ಲವೇ ಕೀಳರಿಮೆಯು ನೆಲೆಗೊಂಡಿದೆ. ಭೂಮಿಯ ಒಡೆತನ, ರಾಜಕೀಯ ಅಧಿಕಾರ ಮತ್ತು ವ್ಯಾಪಾರ ವ್ಯವಹಾರಗಳ ಕಾರಣದಿಂದಾಗಿ ಜಾತಿ ಸಮುದಾಯಗಳ ನಡುವೆ ಪರಸ್ಪರ ಅಸಹನೆ, ಅಪನಂಬಿಕೆ ಮತ್ತು ಹಗೆತನದ ಭಾವನೆಗಳಿವೆ.

ಮನುಸ್ಮೃತಿಯಲ್ಲಿ ಬಯ್ಯುವಿಕೆಯ ಬಗ್ಗೆ ಮನು ಹೇಳಿರುವ ಸಂಗತಿಗಳಿಂದ ಅಂದಿನ ಸಮಾಜದ ನ್ಯಾಯ ಪದ್ಧತಿಯಲ್ಲಿದ್ದ ವರ್ಣ/ಜಾತಿ ತಾರತಮ್ಯವನ್ನು ಮತ್ತು ಕ್ರೂರತನದ ಸ್ವರೂಪವನ್ನು ತಿಳಿಯಬಹುದು.

ಮನುಸ್ಮೃತಿ

ಅನುವಾದಕರು: ಶೇಷ ನವರತ್ನ

ಪ್ರಕಾಶಕರು: ಸಮಾಜ ಪುಸ್ತಕಾಲಯ, ಧಾರವಾಡ.

ಪ್ರಕಟಣೆಯ ವರ್ಷ: ೨೦೦೭ (ಪಂಚಮ ಮುದ್ರಣ)

ಮನುಸ್ಮೃತಿಯ ೮ನೆಯ ಅಧ್ಯಾಯದಿಂದ ಈ ಕೆಳಕಂಡ ಶ್ಲೋಕಗಳನ್ನು ಆಯ್ದುಕೊಳ್ಳಲಾಗಿದೆ.

ಶ್ಲೋಕ-೨೬೭

ಬ್ರಾಹ್ಮಣನನ್ನು ಬೈದರೆ ಕ್ಷತ್ರಿಯನಿಗೆ ನೂರು ಪಣಗಳ ದಂಡವು ವಿಧಿಸಲ್ಪಡುತ್ತದೆ. ವೈಶ್ಯನಿಗೆ ನೂರೈವತ್ತು ಅಥವಾ ಇನ್ನೂರು ಪಣಗಳ ದಂಡವು ಹಾಗು ಬ್ರಾಹ್ಮಣನನ್ನು ಬೈದ ಶೂದ್ರನಿಗೆ ಹೊಡೆಯುವುದು ಮುಂತಾದ ಶಿಕ್ಷೆ ವಿಧಿಸಬೇಕು.

ಶ್ಲೋಕ-೨೬೮

ಬ್ರಾಹ್ಮಣನು ಕ್ಷತ್ರಿಯನನ್ನು ಬೈದರೆ ಬ್ರಾಹ್ಮಣನಿಗೆ ಐವತ್ತು ಪಣಗಳ ದಂಡವನ್ನು ವಿಧಿಸಬೇಕು. ವೈಶ್ಯನನ್ನು ಬೈದರೆ ಇಪ್ಪತ್ತೈದು ಪಣಗಳ ದಂಡವು ಹಾಗೂ ಶೂದ್ರನನ್ನು ಬೈದರೆ ಬ್ರಾಹ್ಮಣನಿಗೆ ಹನ್ನೆರಡು ಪಣಗಳ ದಂಡವು ವಿಧಿಸಲ್ಪಡುತ್ತದೆ.

ಶ್ಲೋಕ-೨೬೯

ಬ್ರಾಹ್ಮಣ, ಕ್ಷತ್ರಿಯ, ವೈಶ್ಯರು ತಮ್ಮ ತಮ್ಮ ವರ್ಣದವರಲ್ಲೇ ಬೈದಾಡಿದರೆ ಅವರಿಗೆ ಹನ್ನೆರಡು ಪಣಗಳ ದಂಡವು. ಹೊಲಸು ಮಾತುಗಳಿಂದ ಬೈದಾಡಿದರೆ ಬೈದವರಿಗೆ ಇದರ ಎರಡು ಪಟ್ಟು ದಂಡ ಶುಲ್ಕವು ವಿಧಿಸಲ್ಪಡಬೇಕು.

ಶ್ಲೋಕ-೨೭೦

ಉಪನಯನ ಸಂಸ್ಕಾರ ಹೊಂದಲು ಅರ್ಹತೆಯಿಲ್ಲದ (ಏಕ ಜಾತಿಯವನಾದ) ಶೂದ್ರನು ದ್ವಿಜಾತಿಯವರಾದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರನ್ನು ಹೀನವಾದ ಕೆಟ್ಟ ಮಾತುಗಳಿಂದ ಬೈದರೆ, ಕೆಳಜಾತಿಯಲ್ಲಿ ಹುಟ್ಟಿದ ಆ ಶೂದ್ರನ ನಾಲಿಗೆಯನ್ನು ಛೇದಿಸತಕ್ಕದ್ದು. ಏಕೆಂದರೆ ಅವನು ಕೆಳಜಾತಿಯವನು.

ಶ್ಲೋಕ-೨೭೧

ಬ್ರಾಹ್ಮಣ, ಕ್ಷತ್ರಿಯ, ವೈಶ್ಯ-ಇವರ ಜಾತಿಯ ಹೆಸರುಗಳನ್ನೆತ್ತಿ ಹೀನಾಮಾನವಾಗಿ ಬೈದಂಥ ಆ ಶೂದ್ರನ ಬಾಯಲ್ಲಿ ಕಾದ ಕಬ್ಬಿಣದ ಹತ್ತಂಗುಲ ಉದ್ದದ ಸರಳನ್ನಿಡಬೇಕು.

ಶ್ಲೋಕ-೨೭೨

ಬ್ರಾಹ್ಮಣ ಮೊದಲಾಗಿ ನಾಲ್ಕೂ ಜಾತಿಯವರಲ್ಲಿ ಪರಸ್ಪರರು ತಮ್ಮ ತಮ್ಮವರ ವಿರುದ್ಧ ಕುಲ, ವಿದ್ಯೆ, ದೇಶ, ಸಂಸ್ಕಾರಗಳ ವಿಷಯದಲ್ಲಿ ಒಬ್ಬರಿಗೊಬ್ಬರು ಬೈದಾಡಿದರೆ ಇನ್ನೂರು ಪಣಗಳ ದಂಡವನ್ನು ಕೊಡತಕ್ಕದ್ದು.

ಜನರು ಮಾಡುವ ಒಂದೇ ಬಗೆಯ ತಪ್ಪಿಗೆ, ಅವರ ಹುಟ್ಟಿನ ವರ್ಣವನ್ನು/ಜಾತಿಯನ್ನು ಆಧರಿಸಿ ನೀಡುತ್ತಿದ್ದ ದಂಡನೆಯು ಹೇಗೆ ಬೇರೆ ಬೇರೆ ಪ್ರಮಾಣದಲ್ಲಿತ್ತು ಹಾಗೂ ಕೆಳವರ್ಣಕ್ಕೆ ಸೇರಿದ ಶೂದ್ರರನ್ನು ಹೇಗೆ ಕ್ರೂರವಾಗಿ ನಡೆಸಿಕೊಳ್ಳಲಾಗುತ್ತಿತ್ತು ಎಂಬ ಸಾಮಾಜಿಕ ಚರಿತ್ರೆಯ ಸಂಗತಿಯನ್ನು ಈ ಶ್ಲೋಕಗಳಿಂದ ತಿಳಿಯಬಹುದು.

ವ್ಯಕ್ತಿಗಳು ಹೊಂದಿರುವ ಆಸ್ತಿಪಾಸ್ತಿ, ಒಡವೆವಸ್ತು ಮತ್ತು ಇನ್ನಿತರ ಸಂಪತ್ತು ಸಮಾಜದಲ್ಲಿ ಬಹುಬಗೆಯ ವರ್ಗಗಳನ್ನು ರಚಿಸಿದೆ. ಸಿರಿವಂತ ವರ್ಗ, ಮಧ್ಯಮ ವರ್ಗ, ಕೆಳ ಮಧ್ಯಮವರ್ಗ ಮತ್ತು ಕೆಳವರ್ಗಗಳೆಂಬ ವರ್ಗ ತಾರತಮ್ಯ ಜನಸಮುದಾಯವನ್ನು ಅನೇಕ ಹಂತಗಳಲ್ಲಿ ವಿಂಗಡಿಸಿದೆ.

ಕನ್ನಡ ನುಡಿ ಸಮುದಾಯದಲ್ಲಿ ಬಳಕೆಯಲ್ಲಿರುವ **"ಗೌಡ ಊರ ಮುಂದೆ ಬಯ್ದರೆ , ತೋಟಿ ಒಲೆ ಮುಂದೆ ಬಯ್ದು"** ಎಂಬ ಗಾದೆಯು ಬಯ್ಯುವಿಕೆಯಲ್ಲಿ ವ್ಯಕ್ತಿಯ ಜಾತಿ ಮತ್ತು ವರ್ಗ ಹೇಗೆ ಮುಖ್ಯವಾದ ಸಂಗತಿಯಾಗಿರುತ್ತದೆ ಎಂಬುದನ್ನು ತಿಳಿಸುತ್ತದೆ.

ಜಾತಿಬಲ, ಹಣಬಲ, ತೋಳ್ಬಲ ಮತ್ತು ಅಧಿಕಾರದ ಗದ್ದುಗೆಯ ಬಲವುಳ್ಳ ಗೌಡನು ಸಾರ್ವಜನಿಕವಾಗಿ ಎಲ್ಲರ ಮುಂದೆ ತೋಟಿಯನ್ನು ಬಯ್ದು ಅರಗಿಸಿ ಕೊಳ್ಳಬಲ್ಲ. ಆದರೆ ಇಂತಹ ಯಾವುದೇ ಬಲಗಳು ಇಲ್ಲದ ತೋಟಿಯು ತನ್ನ ಮಯ್ ಮನದ ಆಕ್ರೋಶವನ್ನು ಬಹಿರಂಗವಾಗಿ ಹೇಳಲಾಗದೆ, ಅದನ್ನು ತನ್ನ ಮನೆಯಲ್ಲಿ ಹೊರಹಾಕುತ್ತಾನೆ.

"ಅವರು ಬಾಯಿಗೆ ಬಂದಂಗೆಲ್ಲಾ ಬಯ್ತರೆ" ಎಂಬ ಮಾತನ್ನು ನಾವೆಲ್ಲ ಕೇಳುತ್ತಿರುತ್ತೇವೆ. **"ಅವರು ವಾಚಾಮಗೋಚರವಾಗಿ ಬಯ್ದು ಅವನ ಮಾನ ಮರ್ಯಾದೆಯನ್ನು ಕಳೆದರು"** ಎಂಬ ಬರಹವನ್ನು ಒಂದೆರಡು ಕಡೆ ಓದಿರುತ್ತೇವೆ.

'ವಾಚಾಮ್' ಮತ್ತು ಅಗೋಚರ' ಎಂಬ ಎರಡು ಸಂಸ್ಕೃತ ಪದಗಳು ಜತೆ ಗೂಡಿ 'ವಾಚಾಮಗೋಚರ' ಎಂಬ ಪದ ರೂಪುಗೊಂಡಿದೆ. 'ವಾಚ' ಎಂದರೆ ಮಾತು; 'ಅಗೋಚರ' ಎಂದರೆ ಕಾಣದಿರುವುದು. ಈ ಎರಡು ಪದಗಳು ಜತೆಗೂಡಿದಾಗ 'ವಾಚಾಮಗೋಚರ' ಎಂಬ ಪದಕ್ಕೆ "ನುಡಿಯಬಾರದುದು; ಹೇಳಬಾರದುದು; ಬಾಯಿಗೆ ಬಂದಂತೆ" ಎಂಬ ರೂಪಕದ ತಿರುಳಿದೆ. ಬಯ್ಗುಳದ ನುಡಿಗಳ ಮೂಲಕ ಮತ್ತೊಬ್ಬ ವ್ಯಕ್ತಿಯನ್ನು ಅಪಮಾನಪಡಿಸಿದಾಗ **"ವಾಚಾಮಗೋಚರವಾಗಿ"** ನಿಂದಿಸಿದರು ಎಂಬ ತಿರುಳು ಬರುತ್ತದೆ.

ಬಾಯಿಗೆ ಬಂದಂಗೆಲ್ಲಾ ಬಯ್ಯುವ ಸಾಮಾಜಿಕ ವರ್ತನೆಯು ವ್ಯಕ್ತಿಯ ಮಾನಸಿಕ ಸ್ಥಿತಿಯನ್ನು ತಿಳಿಸುವಂತೆಯೇ, ಅವನ/ಅವಳ ಸಾಮಾಜಿಕ ಸ್ಥಾನಮಾನವನ್ನು ಸೂಚಿಸುತ್ತದೆ.

ಮೇಲು ಕೀಳಿನ ಜಾತಿ ಮೆಟ್ಟಿಲುಗಳಿಂದ ಮತ್ತು ವರ್ಗ ತಾರತಮ್ಯದಿಂದ ಹೆಣೆದುಕೊಂಡಿರುವ ಸಮಾಜದಲ್ಲಿ ಕೆಳ ಜಾತಿಗೆ ಮತ್ತು ಕೆಳವರ್ಗಕ್ಕೆ ಸೇರಿದ ಕುಟುಂಬಗಳು ಜಾತಿಯ ಕಾರಣದಿಂದಾಗಿಯೇ ನೂರಾರು ವರ್ಷಗಳಿಂದ ವಿದ್ಯೆ, ಸಂಪತ್ತು ಮತ್ತು ಗದ್ದುಗೆಯಿಂದ ವಂಚಿತರಾಗಿದ್ದಾರೆ. ಇದರಿಂದಾಗಿ ದಿನನಿತ್ಯದ ಅಗತ್ಯಗಳಾದ ಅನ್ನ ಬಟ್ಟೆ ವಸತಿಯಿಂದ ವಂಚಿತರಾಗಿ ಬಡತನದ ಬೇಗೆಯಲ್ಲಿ ಬೇಯುತ್ತಿರುತ್ತಾರೆ. ಪ್ರತಿನಿತ್ಯ ಹತ್ತಾರು ಬಗೆಯ ತೊಂದರೆಗಳಿಂದ ನರಳುತ್ತಿರುವ ಈ ಕೆಳಜಾತಿಯ ಮತ್ತು ಕೆಳವರ್ಗದ ಜನರ ಕುಟುಂಬಗಳಲ್ಲಿ ಹೆಚ್ಚು ಹೆಚ್ಚು ಬಯ್ಗುಳಗಳು ಬಳಕೆಗೊಳ್ಳುತ್ತಿರುತ್ತವೆ. ಏಕೆಂದರೆ ಈ ಸಮುದಾಯದ ಜನರು ದಿನನಿತ್ಯದ ಅಗತ್ಯ ವಸ್ತುಗಳನ್ನು ಪಡೆಯುವುದಕ್ಕಾಗಿಯೇ ಬಹುಬಗೆಗಳಲ್ಲಿ ಪರಿತಪಿಸುತ್ತ, ತಮ್ಮ ಮಯ್ ಮನದ ಆತಂಕದ, ಹತಾಶೆಯ, ಸಂಕಟದ ಮತ್ತು ಆಕ್ರೋಶದ ಒಳಮಿಡಿತಗಳನ್ನು ಬಯ್ಗುಳದ ನುಡಿಗಳ ಮೂಲಕ ನಿರಂತರವಾಗಿ ಹೊರಹಾಕುತ್ತಿರುತ್ತಾರೆ.

ಮೇಲು ಜಾತಿಗಳಿಗೆ ಸೇರಿದ ಕುಟುಂಬಗಳಲ್ಲಿ ಬಹುತೇಕ ಕುಟುಂಬಗಳು ನೂರಾರು ವರ್ಷಗಳಿಂದಲೂ ಸಂಪತ್ತಿಗೆ ಒಡೆಯರಾಗಿದ್ದಾರೆ. ಮೇಲು ಜಾತಿಗಳಿಗೆ ಮತ್ತು ಮೇಲು ವರ್ಗ ಹಾಗೂ ಮೇಲು ಮಧ್ಯಮ ವರ್ಗಗಳಿಗೆ ಸೇರಿದ ಕುಟುಂಬಗಳಲ್ಲಿ ಬಳಕೆಯಾಗುವ ಬಯ್ಗುಳದ ಪ್ರಮಾಣವು ಕೆಳಜಾತಿ ಮತ್ತು ಕೆಳವರ್ಗಗಳಿಗೆ ಸೇರಿದ ಕುಟುಂಬಗಳಲ್ಲಿ ಬಳಕೆಯಾಗುವುದಕ್ಕಿಂತ ಕಡಿಮೆಯಾಗಿರುತ್ತದೆ. ಏಕೆಂದರೆ ಈ ಕುಟುಂಬಗಳ ಸದಸ್ಯರು ದಿನನಿತ್ಯದ ಅಗತ್ಯಗಳಿಗೆ ಹೆಚ್ಚು ಹೆಣಗಾಡುವ ಸನ್ನಿವೇಶಗಳಿಗೆ ಒಳಗಾಗಿರುವುದಿಲ್ಲ.

ನಾವೆಲ್ಲರೂ ವಾಸವಾಗಿರುವ ಊರುಗಳಲ್ಲಿ ಕೆಳವರ್ಗದವರು ವಾಸ ಮಾಡುತ್ತಿರುವ ಅತಿ ಇಕ್ಕಟ್ಟಾದ ವಸತಿ ಪ್ರದೇಶಗಳಲ್ಲಿ ಮತ್ತು ನೀರು, ವಿದ್ಯುತ್ ಮತ್ತು ರಸ್ತೆಯ ಅನುಕೂಲಗಳು ಇಲ್ಲದ ಬಡಜನರ ಬಡಾವಣೆಗಳಲ್ಲಿ ಪ್ರತಿನಿತ್ಯ ಒಂದಲ್ಲ ಒಂದು ಬಗೆಯ ಬಯ್ಗುಳದ ಪ್ರಸಂಗಗಳನ್ನು ಬಹಿರಂಗದ ಸಾಮಾಜಿಕ ವ್ಯವಹಾರಗಳಲ್ಲಿ ಕಾಣುತ್ತಿರುತ್ತೇವೆ. ಆದರೆ ನೀರು, ವಿದ್ಯುತ್ ಮತ್ತು ರಸ್ತೆಯ ಅನುಕೂಲಗಳ ಜತೆಗೆ ತಮ್ಮದೇ ಆದ ನಿವೇಶನದ ಸುತ್ತ ಚಿಕ್ಕ ಗೋಡೆಗಳನ್ನು ಕಟ್ಟಿಸಿಕೊಂಡು ಪ್ರತ್ಯೇಕವಾಗಿ ವಾಸಮಾಡುತ್ತಿರುವ ಬಡಾವಣೆಗಳಲ್ಲಿ ಬಯ್ಗುಳದ ಪ್ರಸಂಗಗಳು ಬಹಿರಂಗದಲ್ಲಿ ಅತಿ ಕಡಿಮೆ ಪ್ರಮಾಣದಲ್ಲಿ ಕಂಡುಬರುತ್ತವೆ.

ಮೇಲು ಜಾತಿಗಳಿಗೆ ಸೇರಿದ ಜನರು ಮತ್ತು ವರ್ಗದಲ್ಲಿ ಮೇಲಿನ ಹಂತಗಳಿಗೆ ಏರುತ್ತಿರುವ ವ್ಯಕ್ತಿಗಳು ಹೆಚ್ಚಿನ ಬೆಲೆಯ ಉಡುಗೆ ತೊಡುಗೆಗಳ ಮೂಲಕ ತಮ್ಮ ಸಾಮಾಜಿಕ ಅಂತಸ್ತನ್ನು ತೋರಿಸಿಕೊಳ್ಳುವಂತೆಯೇ, ಸಾರ್ವಜನಿಕ ರಂಗದಲ್ಲಿ ಅವರು ಬಳಸುವ ಮಾತುಗಳಲ್ಲಿಯೂ ಬದಲಾವಣೆ ಕಂಡು ಬರುತ್ತದೆ.

ಸಾರ್ವಜನಿಕವಾಗಿ ತಾವು ಆಡುವ ಮಾತುಗಳು ತಮ್ಮ ಸಾಮಾಜಿಕ ಅಂತಸ್ತನ್ನು ಕಾಪಾಡುವಂತಿರಬೇಕೆಂಬ ಎಚ್ಚರವನ್ನು ಹೊಂದಿರುತ್ತಾರೆ. ಆದ್ದರಿಂದ ಮೇಲು ಜಾತಿಯ ಮತ್ತು ಮೇಲು ಹಾಗೂ ಮಧ್ಯಮ ವರ್ಗಕ್ಕೆ ಸೇರಿದ ವ್ಯಕ್ತಿಗಳು ತಮ್ಮ ಕುಟುಂಬದ ನೆಲೆಯಲ್ಲಿ ಬಯ್ಗುಳದ ನುಡಿಗಳನ್ನು ಮನೆಯೊಳಗೆ ಬಳಸುತ್ತಿದ್ದರೂ, ದುಡಿಮೆಯ ನೆಲೆ ಮತ್ತು ಸಾರ್ವಜನಿಕ ನೆಲೆಗಳಲ್ಲಿ ಬಹಿರಂಗವಾಗಿ ಬಯ್ಗುಳದ ನುಡಿಗಳನ್ನಾಡುವುದಕ್ಕೆ ಹಿಂಜರಿಯುತ್ತಾರೆ.

❖

೧೨. ಬಯ್ಯುವಿಕೆ: ಗಂಡಸು ಮತ್ತು ಹೆಂಗಸು

ಗಂಡಸು ಮತ್ತು ಹೆಂಗಸಿನ ನಡುವೆ ಬಯ್ಗುಳದ ಶಬ್ದಗಳು ಪರಸ್ಪರ ಚಲಾವಣೆಗೊಳ್ಳುವಾಗ ಹಲವು ಬಗೆಯ ಲಕ್ಷಣಗಳನ್ನು ಪ್ರಮುಖವಾಗಿ ಕಾಣುತ್ತೇವೆ.

೧. ಗಂಡಸರನ್ನು ಉದ್ದೇಶಿಸಿದ ಬಯ್ಗುಳಗಳು:

ಕಚ್ಚರ್ಕ; ಕ್ವಾಜ; ಮುಟ್ಠಾಳ; ಹೆಣಗ; ಕೂಮ
ಈ ಮೇಲ್ಕಂಡ ಬಯ್ಗುಳ ಪದಗಳು ಸ್ತ್ರೀಲಿಂಗ ರೂಪದಲ್ಲಿ ದೊರೆಯುವುದಿಲ್ಲ.

೨. ಹೆಂಗಸರನ್ನು ಕುರಿತ ಬಯ್ಗುಳಗಳು

ಬಡ್ಡಿ ಮುಂಡೆ; ರಂಡೆ; ಸವ್ತಿ; ಸೂಳೆ; ಬಂಜೆ; ನಾಯಕ್ಸಾನಿ
ಈ ಮೇಲ್ಕಂಡ ಬಯ್ಗುಳ ಪದಗಳು ಪುಲ್ಲಿಂಗ ರೂಪದಲ್ಲಿ ದೊರೆಯುವುದಿಲ್ಲ.

೩. ಗಂಡಸರು ಮಾತ್ರ ಆಡುವ ಬಯ್ಗುಳಗಳು

ನಿನ್ ಬಾಯ್ಗೆ ನನ್ ತುಣ್ಣೆ ಸಿಗಾಕ.
ನಿನ್ ಮೊಲೆನಾ ಕೆಯ್ಯ.

೪. ಹೆಂಗಸರು ಮಾತ್ರ ಆಡುವ ಬಯ್ಗುಳಗಳು

ನಿನ್ ಬಾಯ್ಗೆ ನನ್ ಗಲ್ಲೆ ಹಾಕ
ನಿನ್ ನೆತ್ತಿ ಮ್ಯಾಲೆ ನನ್ ಮಾಸಿನ ಮಡ್ಕೆ ಎತ್ತಾಕ.

೫. ಲಿಂಗಭೇದವಿಲ್ಲದೆ ಅನ್ವಯವಾಗುವ ಬಯ್ಗುಳಗಳು:

ಅನಿಸ್ಟುದ್ದೆ; ಬಡ್ಡತ್ತದ್ದೆ; ಮುಂಡತ್ತದ್ದೆ; ಮುಂಡೇದೆ; ಮುದೇವಿ; ಮುಳ್ಳಿಕ್ಕೋದ್ದೆ; ಮುಸಂಡಿ; ಹಾಳುಬಸ್ತೀದೆ; ಚಿತ್ತೆಬೆದೆಗುಟ್ಟುದ್ದೆ.

೬. **ಗಂಡಸರಿಗೆ ಅನ್ವಯವಾಗುವಂತಹ ಬಯ್ಗುಳದ ಪದಗಳು ಸ್ತ್ರೀವಾಚಕ ಪ್ರತ್ಯಯಗಳ ಜತೆಗೂಡಿ ಸ್ತ್ರೀಯರಿಗೂ ಅನ್ವಯವಾಗುತ್ತವೆ.**

ಗಂಡಸರಿಗೆ	**ಹೆಂಗಸರಿಗೆ**
ಅನ್ಕ	ಅನ್ಕಿ
ಅನ್ನೇಕಾರ	ಅನ್ನೇಕಾತಿ
ಚಾಡಿಕೋರ	ಚಾಡಿಕೋರಿ
ತಟವಟಗಾರ	ತಟವಟಗಾತಿ
ಗುಲಾಮ	ಗುಲಾಮಗಿತ್ತಿ
ಹಾದರ್ಕೋರ	ಹಾದರ್ಗಿತ್ತಿ
ದ್ವಂಸಗಾಲ	ದ್ವಂಸಗಾಲಿ

೭. ಯಾವುದೇ ಬಯ್ಗುಳದ ಪದದ ಮುಂದೆ **"ನನ್ಮಗ...ಬಡ್ಡಿಮಗ...ಸೂಳೆಮಗ... ...ಬೋಳಿಮಗ...ಮುಂಡೆ ಮಗ"** ಎಂದು ಮತ್ತೊಂದು ಬಯ್ಗುಳದ ಪದವನ್ನು ಸೇರಿಸಿ ಹೇಳುವುದರಿಂದ ಆದು ಗಂಡಸರಿಗೆ ಅನ್ವಯವಾಗುತ್ತದೆ.

ಯಾವುದೇ ಬಯ್ಗುಳದ ಪದದ ಮುಂದೆ **"ನನ್ಸವ್ತಿ... ಮುಂಡೆ... ರಂಡೆ...ಬಡ್ಡಿ... ಲವುಡಿ"** ಎಂದು ಮತ್ತೊಂದು ಬಯ್ಗುಳದ ಪದವನ್ನು ಸೇರಿಸಿ ಹೇಳುವುದರಿಂದ ಆದು ಹೆಂಗಸಿರಿಗೆ ಅನ್ವಯವಾಗುತ್ತದೆ.

ಗಂಡಸರಿಗೆ	**ಹೆಂಗಸರಿಗೆ**
ಅಂಟ್ ನನ್ಮಗ	**ಅಂಟ್ ಮುಂಡೆ**
ಅಡಕಸ್ವಿ ನನ್ಮಗ	**ಅಡಕಸ್ವಿ ಲವುಡಿ**
ಕಂಜಾತಿ ಬಡ್ಡಿ ಹೈದ	**ಕಂಜಾತಿ ಬಡ್ಡಿ**
ಕತ್ತೆ ಸೂಳೆಮಗ	**ಕತ್ತೆ ಮುಂಡೆ**
ತೊಟ್ಟಿ ಮುಂಡೆ ಮಗ	**ತೊಟ್ಟಿ ನನ್ಸವ್ತಿ**

೮. ಪ್ರತಿಯೊಂದು ನುಡಿ ಸಮುದಾಯದಲ್ಲಿಯೂ ಗಂಡಸು ಮತ್ತು ಹೆಂಗಸಿನ ನಡೆನುಡಿಗಳ ಬಗ್ಗೆ ಬೇರೆ ಬೇರೆ ಬಗೆಯ ನಿಲುವುಗಳಿವೆ. ಅದೇ ರೀತಿಯಲ್ಲಿ

ಕನ್ನಡ ನುಡಿ ಸಮುದಾಯದಲ್ಲಿಯೂ ಇಂತಹ ನಿಲುವನ್ನು ಈ ಕೆಳಕಂಡ ಎರಡು ಬಯ್ಗುಳಗಳು ಸೂಚಿಸುತ್ತವೆ.

ಅ) ಗಂಡ್ಬೀರಿ

ಯಾವುದೇ ಸಮಸ್ಯೆ ಇಲ್ಲವೇ ತೊಡಕಿನ ವ್ಯವಹಾರದ ಸನ್ನಿವೇಶಗಳಲ್ಲಿ ಗಂಡಸರು ಮಾತನಾಡುತ್ತಿದ್ದಾಗ, ನಡುವೆ ತಲೆಹಾಕಿ ಪ್ರಶ್ನೆ ಮಾಡುವ, ಸಲಹೆಯನ್ನು ನೀಡುವ ಇಲ್ಲವೇ ತಕರಾರನ್ನು ತೆಗೆಯುವ ಹೆಂಗಸು.

ಕನ್ನಡ ನುಡಿ ಸಮುದಾಯದಲ್ಲಿ ಗಂಡಸರ ಮುಂದೆ ಹೆಂಗಸು ನಾಚಿಕೆ ಹಾಗೂ ಹಿಂಜರಿಕೆಯಿಂದ ನಡೆದುಕೊಳ್ಳುವುದನ್ನು ಹೆಣ್ತನವೆಂದು ತಿಳಿಯಲಾಗಿದೆ. ಸಾಮಾಜಿಕ ವ್ಯವಹಾರಗಳಲ್ಲಿ ಹೆಂಗಸಿನ ನಡೆನುಡಿಗಳು ಹೆಣ್ತನದಿಂದ ಕೂಡಿರ ಬೇಕೆಂದು ಸಮಾಜ ಬಯಸುತ್ತದೆ. ಇದಕ್ಕೆ ಬದಲಾಗಿ ಹೆಂಗಸು ನಾಚಿಕೆಯನ್ನು ಬಿಟ್ಟು, ಕೆಚ್ಚೆದೆಯಿಂದ ನಡೆದುಕೊಳ್ಳುವುದು ನಿಂದೆಗೆ ಕಾರಣವಾಗುತ್ತದೆ. ಏಕೆಂದರೆ ಕೆಚ್ಚೆದೆಯಿಂದ ಯಾವುದೇ ಆಪತ್ತು ಇಲ್ಲವೇ ಸಮಸ್ಯೆಗಳು ಎದುರಾದಾಗ ಹೆದರದೆ ಮುನ್ನುಗ್ಗುವುದನ್ನು ಗಂಡುತನವೆಂದು ಕನ್ನಡ ಸಮಾಜ ಪರಿಗಣಿಸಿದೆ. ಆದುದರಿಂದ ಗಂಡುತನವುಳ್ಳ ಹೆಂಗಸನ್ನು ಗಂಡ್ಬೀರಿ ಎನ್ನುತ್ತಾರೆ.

'ಗಂಡ್ಬೀರಿ' ಎಂಬ ಜೋಡುಪದದಲ್ಲಿ ಗಂಡು ಮತ್ತು ಬೀರಿ ಪದಗಳಿವೆ. ಸಂಸ್ಕೃತದ 'ವೀರ' ಎಂಬ ಪದ ಕನ್ನಡಿಗರ ಬಾಯಲ್ಲಿ 'ಬೀರ' ಎಂದಾಗಿದೆ. ಇದಕ್ಕೆ 'ಇ' ಒಟ್ಟು ಸೇರಿ ಬೀರಿ ಎಂಬ ಪದ ರೂಪುಗೊಂಡಿದೆ.

ಆ) ಹೆಣ್ಣಿಗ : ಹೆಣ್ಣುತನವುಳ್ಳ ಗಂಡಸು.

ಹೆಣ್ಣು ಎಂಬ ಪದಕ್ಕೆ 'ಇಗ' ಒಟ್ಟು ಸೇರಿ ಹೆಣ್ಣಿಗೆ ಪದ ರೂಪುಗೊಂಡಿದೆ. ಕನ್ನಡ ನುಡಿ ಸಮುದಾಯದಲ್ಲಿ ಗಂಡಸು ಮತ್ತು ಹೆಂಗಸಿನ ನಡೆನುಡಿಗಳ ಬಗ್ಗೆ ಹಲವು ಬಗೆಯ ನಿಲುವುಗಳಿವೆ. ಇವನ್ನು ಒಟ್ಟುಗೂಡಿಸಿ 'ಗಂಡಸಿನಲ್ಲಿರಬೇಕಾದ ನಡೆನುಡಿಗಳನ್ನು ಗಂಡಸುತನ ಮತ್ತು ಹೆಂಗಸಿನಲ್ಲಿರಬೇಕಾದ ನಡೆನುಡಿಗಳನ್ನು ಹೆಣ್ಣುತನ" ಎಂದು ಕರೆಯುತ್ತಾರೆ.

ಗಂಡಸಿಗೆ ಕೆಚ್ಚೆದೆಯುಳ್ಳ ಗಂಡಸುತನ ಮತ್ತು ಹೆಂಗಸಿಗೆ ಎಲ್ಲರ ಮುಂದೆ ಅಂಜುವ ಹಾಗೂ ನಾಚಿಕೆಯಿಂದ ತಲೆಬಾಗಿ ನಡೆಯುವ ಹೆಣ್ಣುತನವಿರ ಬೇಕೆಂಬುದು ಇಂತಹ ನಿಲುವುಗಳಲ್ಲಿ ಒಂದಾಗಿದೆ. ಬಾಳಿನಲ್ಲಿ ಆಪತ್ತು ಇಲ್ಲವೇ ಸವಾಲುಗಳು ಎದುರಾದಾಗ ಹೆದರಿಕೆಯಿಂದಲೋ ನಾಚಿಕೆಯಿಂದಲೋ ಹಿಂಜರಿಯುವ ಗಂಡಸನ್ನು 'ಹೆಣ್ಣಿಗ' ಎಂದು ಹಂಗಿಸುತ್ತಾರೆ. ಉಚ್ಚಾರಣೆ ಗೊಳ್ಳುವಾಗ ' ಹೆಣ್ಗ/ಹೆಣಗ' ಎಂಬ ರೂಪಗಳನ್ನು ಪಡೆಯುತ್ತದೆ. ❖

೧೩. ಬಯ್ಯುವಿಕೆ: ಇನ್ನಿತರ ಸಂಗತಿಗಳು

೧. ಬಯ್ಗುಳದ ಮಾತಿನ ಹಲ್ಲೆ – ದೇಹದ ಮೇಲೆ ಏಟಿನ ಹಲ್ಲೆ

ಬಯ್ಯುವಿಕೆಯ ಪ್ರಸಂಗಗಳಲ್ಲಿ ಬಯ್ಯುತ್ತಿರುವ ವ್ಯಕ್ತಿಯು ಬಯ್ಗುಳ ನುಡಿಗಳ ಮೂಲಕ ಮಾತಿನ ಹಲ್ಲೆಯನ್ನು ಮಾಡುತ್ತಿದ್ದಂತೆಯೇ, ಇನ್ನೂ ಹೆಚ್ಚಿನ ಭಾವೋದ್ರೇಕಕ್ಕೆ ಒಳಗಾಗಿ ಕೆಲವೊಮ್ಮೆ ಬಯ್ಯಿಸಿಕೊಳ್ಳುತ್ತಿರುವ ವ್ಯಕ್ತಿಯ ಮುಖದ ಮೇಲೆ ಹೊಡೆಯುವುದಕ್ಕೆ ಇಲ್ಲವೇ ಮೈಮೇಲೆ ಹಲ್ಲೆ ಮಾಡುವುದಕ್ಕೆ ತೊಡಗುತ್ತಾನೆ/ಳೆ. ಇದಕ್ಕೆ ಕಾರಣವೇನೆಂದರೆ ಬಯ್ಯಿಸಿಕೊಳ್ಳುತ್ತಿರುವ ವ್ಯಕ್ತಿಯನ್ನು ಸಂಪೂರ್ಣವಾಗಿ ತನ್ನ ಹಿಡಿತಕ್ಕೆ ತೆಗೆದುಕೊಂಡು, ತನ್ನ ಇಚ್ಚೆಗೆ ತಕ್ಕಂತೆ ನಡೆದುಕೊಳ್ಳುವಂತೆ ಮಾಡುವುದಾಗಿರುತ್ತದೆ.

ಕುಟುಂಬದ ನೆಲೆ, ದುಡಿಮೆಯ ನೆಲೆ ಮತ್ತು ಸಾರ್ವಜನಿಕ ನೆಲೆಗಳಲ್ಲಿ ಬಯ್ಯುವ ಮತ್ತು ಹೊಡೆಯುವ ಪ್ರಸಂಗಗಳಲ್ಲಿ ಭಾಗಿಯಾದವರಲ್ಲಿ, ಈ ಎರಡು ರೀತಿಯಲ್ಲಿಯೂ ಹಲ್ಲೆ ನಡೆಸುವ ವ್ಯಕ್ತಿಯು ವಯಸ್ಸಿನಲ್ಲಿ ಹಿರಿಯವನಾಗಿಯೋ, ಮಯ್ ಬಲದಲ್ಲಿ ಹೆಚ್ಚಿನ ಶಕ್ತಿಯುಳ್ಳವನಾಗಿಯೋ, ಸಂಪತ್ತಿನಲ್ಲಿ ಇಲ್ಲವೇ ಅಧಿಕಾರದಲ್ಲಿ ದೊಡ್ಡವನಾಗಿಯೋ ಇರುತ್ತಾನೆ. ಗಂಡಸು ಮೇಲುಗೈ ಆಗಿ, ಹೆಂಗಸು ಅಡಿಯಾಳಾಗಿರುವ ಕುಟುಂಬ ವ್ಯವಸ್ಥೆಯಲ್ಲಿ ಗಂಡಸು ಹೆಂಗಸಿನ ಮೇಲೆ ಮಾತಿನ ಮತ್ತು ದೇಹದ ಹಲ್ಲೆಯನ್ನು ಜತೆ ಜತೆಯಲ್ಲಿ ಮಾಡುವುದು ಕಂಡುಬರುತ್ತದೆ.

ಮಧ್ಯಮ ಕೆಳವರ್ಗ ಮತ್ತು ಕೆಳವರ್ಗಕ್ಕೆ ಸೇರಿದ ಕುಟುಂಬಗಳಲ್ಲಿ ಈ ಎರಡು ಬಗೆಯ ಹಲ್ಲೆಗಳು ಸಾಮಾನ್ಯವಾಗಿ ಕಂಡುಬರುತ್ತವೆ. ಆದರೆ ಮೇಲು ವರ್ಗ ಮತ್ತು ಮಧ್ಯಮ ವರ್ಗಕ್ಕೆ ಸೇರಿದ ಕುಟುಂಬಗಳಲ್ಲಿ ಇಂತಹ ಹಲ್ಲೆಗಳು ನಡೆಯ

ತೊಡಗಿದರೆ, ವ್ಯಕ್ತಿಗಳ ನಡುವಣ ಸಂಬಂಧವು ಸ್ವಲ್ಪ ಕಾಲಾನಂತರ ಶಾಶ್ವತವಾಗಿ ಮುರಿದುಬೀಳುತ್ತದೆ. ಅಂದರೆ ಬಯ್ಯುವ ಮತ್ತು ಹೊಡೆಯುವ ವ್ಯಕ್ತಿಯ ಜತೆಯ ನಂಟನ್ನು ಬಯ್ಯಿಸಿಕೊಳ್ಳುವ ಮತ್ತು ಹೊಡೆಯಿಸಿಕೊಳ್ಳುವ ವ್ಯಕ್ತಿಯು ಕಡಿದುಕೊಳ್ಳುತ್ತಾನೆ/ಳೆ.

ಇತರೆ ನುಡಿ ಸಮುದಾಯಗಳಿಂದ ಕನ್ನಡಕ್ಕೆ ಬಂದಿರುವ ಬಯ್ಗುಳಗಳು

ಕನ್ನಡ ನುಡಿ ಸಮುದಾಯದಲ್ಲಿ ಬಳಕೆಯಾಗುತ್ತಿರುವ ಆರೋಪದ ಬಯ್ಗುಳ ಗಳಲ್ಲಿ ಇತರ ನುಡಿಗಳಿಂದ ಬಂದಿರುವ ಅನೇಕ ಪದಗಳು ಬಳಕೆಯಲ್ಲಿವೆ. ಚರಿತ್ರೆಯ ಬೇರೆ ಬೇರೆ ಕಾಲಘಟ್ಟಗಳಲ್ಲಿ ಕನ್ನಡಿಗರು ಇತರ ನುಡಿಸಮುದಾಯ ದವರೊಡನೆ ಪಡೆದ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ಶೈಕ್ಷಣಿಕ ನಂಟಿನಿಂದಾಗಿ ಇತರ ನುಡಿಯ ನೂರಾರು ಪದಗಳು ಕನ್ನಡ ನುಡಿಯಲ್ಲಿ ಬೆರತುಹೋಗಿವೆ.

ಅ) ಇಂಗ್ಲಿಷಿನಿಂದ:

ಪಾಪರ್; ರೌಡಿ ; ಕ್ರಾಕ್ ; ಕಂತ್ರಿ; ಲೋಪರ್; ಪೋರ್ ಟ್ವೆಂಟಿ;

ಆ) ಅರಾಬಿಕ್ ಮತ್ತು ಪರ್ಶಿಯನ್ ನುಡಿಗಳಿಂದ:

ಅಡಕಸ್ಬಿ; ಕದೀಮ; ದಗಾಕೋರ; ಬದ್ಮಾಶ್; ನಾಮರ್ದ; ಬೇವಕೂಫ್; ನಮಕ್ ಹರಾಮ್; ಬಜಾರಿ; ಬೇವರ್ಸಿ;

ಇ) ಮರಾಠಿ, ಹಿಂದಿ ಮತ್ತು ಉರ್ದು ನುಡಿಗಳಿಂದ:

ಉಡಾಳ; ಕಂಜೂಸ್; ಡೋಂಗಿ; ಪುಡಾರಿ; ಲೌಡ; ಛಿನಾಲ್; ಲಫಂಗ; ಲುಚ್ಚಾ; ಗಬ್ರೂ; ಕಚಡಾ; ಬಕ್ರಾ

ಉ) ಸಂಸ್ಕೃತದಿಂದ

ಆಷಾಢಭೂತಿ; ಋಣಪಾತ್ಕ; ದಂಡಪಿಂಡ; ದ್ರಾಬೆ; ಅಯೋಗ್ಯ; ಮೂರ್ಖ; ಪಾಪಿಷ್ಠ.

❖

೧೪. ಬಯ್ಗುಳ ಓದಿನ ಮುಂದುವರಿಕೆ

ಇದುವರೆಗೆ ನಾನು ಬಯ್ಯುವಿಕೆಗೆ ಸಂಬಂಧಪಟ್ಟಂತೆ ಮತ್ತು ಬಯ್ಗುಳದ ನುಡಿ ಸಾಮಗ್ರಿಗಳ ಬಗ್ಗೆ ಹೇಳಿರುವ ಸಂಗತಿಗಳನ್ನು ಓದುತ್ತಿರುವ ಓದುಗರಿಗೆ ತಮ್ಮ ಜೀವನದಲ್ಲಿ ತಾವು ಬಯ್ದಿರುವ, ಇತರರಿಂದ ಬಯ್ಯಿಸಿಕೊಂಡಿರುವ ಮತ್ತು ಇತರರು ಬಯ್ದಾಡಿಕೊಳ್ಳುತ್ತಿದ್ದ ಪ್ರಸಂಗಗಳಲ್ಲಿ ಭಾಗಿಯಾಗಿದ್ದ ನೆನಪುಗಳು ಮರುಕಳಿಸುತ್ತಿರಬಹುದು. ಬಯ್ಗುಳಕ್ಕೆ ಸಂಬಂಧಪಟ್ಟ ಇನ್ನು ಎಷ್ಟೋ ಸಂಗತಿಗಳನ್ನು ನಾನು ಹೇಳಿಲ್ಲ ಎಂದು ಅನ್ನಿಸಬಹುದು. ನಿಮ್ಮ ಅನಿಸಿಕೆ ಸರಿ. ಬಯ್ಗುಳಕ್ಕೆ ಸಂಬಂಧಿಸಿದ ಎಲ್ಲ ಸಂಗತಿಗಳನ್ನು ನಾನು ಹೇಳುವುದಕ್ಕೆ ಆಗಿಲ್ಲ; ಆಗುವುದೂ ಇಲ್ಲ. ಏಕೆಂದರೆ ಬಯ್ಗುಳದ ವ್ಯಾಪ್ತಿ ದೊಡ್ಡದು. ಇದು ನಮ್ಮೆಲ್ಲರ ಜೀವನದ ಮಾತುಕತೆಯಲ್ಲಿ ಹಾಸುಹೊಕ್ಕಾಗಿದೆ.

ಬಯ್ಗುಳದ ಪದ ಸಂಪತ್ತು, ಬಯ್ಯುವಿಕೆಯ ಸನ್ನಿವೇಶ ಮತ್ತು ಸಂದರ್ಭಗಳು ಮತ್ತು ಬಯ್ಯುವಿಕೆಯಲ್ಲಿ ಭಾಗಿಗಳಾಗುವ ವ್ಯಕ್ತಿಗಳ ಸಾಮಾಜಿಕ ವ್ಯಕ್ತಿತ್ವ ಬೇರೆ ಬೇರೆ ಬಗೆಗಳಲ್ಲಿವೆ. ನುಡಿಸಮುದಾಯಕ್ಕೆ ಸಂಬಂಧಪಟ್ಟ ಸಾಮಾಜಿಕ ಚರಿತ್ರೆ ಮತ್ತು ಸಾಂಸ್ಕೃತಿಕ ಆಚರಣೆಯ ಸಂಗತಿಗಳಿಂದ ಬಯ್ಗುಳದ ನುಡಿ ಸಾಮಗ್ರಿಗಳು ರೂಪುಗೊಂಡಿವೆ.

ಇವನ್ನೆಲ್ಲ ಒಟ್ಟಾರೆಯಾಗಿ ಗಮನಿಸಿ ಒಮ್ಮೆ ಒರೆಹಚ್ಚಿ ನೋಡಿದರೆ "ಬಯ್ಯುವಿಕೆ ಎಂಬುದು ಕೇವಲ ಭಾವೋದ್ವೇಗದ ಸನ್ನಿವೇಶಗಳಲ್ಲಿ ಮಾತ್ರ ಆಡುವ ನುಡಿಯಲ್ಲ ಇಲ್ಲವೇ ಅರ್ಥವಿಲ್ಲದ ಕಿರುಚಾಟದ ಮಾತಿನ ವರ್ತನೆಯಲ್ಲ; ಬಯ್ಯುವಿಕೆಗೆ ಒಂದು ಉದ್ದೇಶವಿದೆ; ಬಯ್ಗುಳದ ನುಡಿ ಸಾಮಗ್ರಿಗಳಿಗೆ ಇತರ ನುಡಿಗಳಿಗೆ ಇರುವಂತೆಯೇ

ಅರ್ಥವಿದೆ; ಬಯ್ಯುವಿಕೆಯು ಎಲ್ಲ ವ್ಯಕ್ತಿಗಳಲ್ಲಿಯೂ ಸಾಮಾನ್ಯವಾಗಿ ಕಂಡುಬರುವ ಒಂದು ಬಗೆಯ ಸಾಮಾಜಿಕ ವರ್ತನೆಯಾಗಿದೆ; ಮಾತಿನ ಎಲ್ಲ ಸನ್ನಿವೇಶ ಗಳಲ್ಲಿಯೂ ಬಯ್ಯುವಿಕೆಯು ಹಾನಿಕಾರಕವಾಗಿರುವುದಿಲ್ಲ; ಬಯ್ಯುವಿಕೆಯನ್ನು ವ್ಯಕ್ತಿ ಗಳನ್ನು ಹತೋಟಿಯಲ್ಲಿಡಲು ಇಲ್ಲವೇ ಗಾಸಿಗೊಳಿಸಲು ಒಂದು ಹತಾರವನ್ನಾಗಿ ಬಳಸಲಾಗುತ್ತದೆ; ಬಯ್ಯುವಿಕೆಯು ಕೆಲವು ಬಗೆಯ ಸನ್ನಿವೇಶಗಳಲ್ಲಿ ಮತ್ತು ಕೆಲವು ನೆಲೆಗಳಲ್ಲಿ ಅಪಾಯಕಾರಿಯಾದ ಹತಾರವಾಗುತ್ತದೆ ಇಲ್ಲವೇ ಉದ್ದೇಶಿತ ಕಾರ್ಯಸಾಧನೆಯ ಉಪಕರಣ ವಾಗುತ್ತದೆ" ಎಂಬುದು ಮನವರಿಕೆಯಾಗುತ್ತದೆ.

ಕರ್ನಾಟಕದ ಉದ್ದಗಲದಲ್ಲಿನ ಪ್ರಾದೇಶಿಕ ಮತ್ತು ಸಾಮಾಜಿಕ ಒಳನುಡಿಗಳಲ್ಲಿ ಬಳಕೆಯಾಗುತ್ತಿರುವ ಬಯ್ಗುಳದ ನುಡಿ ಸಾಮಗ್ರಿಗಳನ್ನು ಸಂಗ್ರಹಿಸಿ, ಬಯ್ಗುಳದ ಪದಗಳ ಮತ್ತು ನುಡಿಗಟ್ಟುಗಳ ತಿರುಳನ್ನು ಅವನ್ನು ಬಳಸುತ್ತಿರುವ ಜನ ಸಮುದಾಯಗಳಿಂದಲೇ ಕೇಳಿ ತಿಳಿದು ವಿವರಿಸಿಕೊಳ್ಳುವ ಕೆಲಸ ನಡೆಯಬೇಕಾಗಿದೆ. ಆರೋಪದ ಬಯ್ಗುಳದ ನೆಲೆಯಲ್ಲಿ ಹೊಸ ಹೊಸ ಬಯ್ಗುಳ ಪದಗಳು ಬಂದು ಸೇರುತ್ತಿವೆ; ಕಾಮದ ನಂಟಿನ ಬಯ್ಗುಳಗಳು ಬೇರೆ ಬೇರೆ ಬಗೆಗಳಲ್ಲಿ ಸಂಯೋಜನೆ ಗೊಳ್ಳುತ್ತಿವೆ; ಶಾಪರೂಪದ ಬಯ್ಗುಳಗಳಲ್ಲಿ ಕೆಲವು ಬಳಕೆಯಿಂದ ಮರೆಯಾಗುತ್ತಿವೆ. ಏಕೆಂದರೆ ದುಡಿಮೆಯನ್ನು ಅರಸಿಕೊಂಡು ಹಳ್ಳಿಗಾಡಿನಿಂದ ಪಟ್ಟಣಗಳಿಗೆ ವಲಸೆ ಬಂದ ಯುವ ತಲೆಮಾರಿನ ಜನಕ್ಕೆ ಹಳೆಯ ತಲೆಮಾರಿನ ಜನರ ಸಂಪರ್ಕ ಕಡಿಮೆಯಾದಂತೆಲ್ಲಾ ಶಾಪ ರೂಪದ ಬಯ್ಗುಳಗಳನ್ನು ಕೇಳುವ ಅವಕಾಶ ಕಡಿಮೆಯಾಗುತ್ತದೆ. ಹಳೆಯ ತಲೆಮಾರಿನ ಜನರು ಕಣ್ಮರೆ ಯಾದಂತೆಲ್ಲಾ ಶಾಪರೂಪದ ಬಯ್ಗುಳಗಳಲ್ಲಿ ಹಲವು ಅಳಿಯುತ್ತವೆ.

ಶಾಪ ರೂಪದ ಬಯ್ಗುಳಗಳಲ್ಲಿ ಹುಟ್ಟು ಮದುವೆ ಸಾವಿಗೆ ಸಂಬಂಧಪಟ್ಟ ಅನೇಕ ಬಗೆಯ ಆಚರಣೆಯ ನುಡಿಗಟ್ಟುಗಳಿವೆ. ಈ ಆಚರಣೆಯ ಸ್ವರೂಪವನ್ನು ನಾವು ಹಳೆಯ ತಲೆಮಾರಿನ ಜನರಿಂದಲೇ ಕೇಳಿ ತಿಳಿದುಕೊಳ್ಳಬೇಕಾಗಿದೆ. ಏಕೆಂದರೆ ಕಾಲ ಉರುಳಿದಂತೆಲ್ಲಾ ಆಚರಣೆಗಳ ರೀತಿಯಲ್ಲಿಯೂ ಹಲವಾರು ಬದಲಾವಣೆಗಳು ಆಗುತ್ತಿರುತ್ತವೆ ಹಾಗೂ ಕೆಲವು ಆಚರಣೆಗಳು ಬಳಕೆಯಿಂದ ತಪ್ಪಿಹೋಗುತ್ತವೆ. ಬಯ್ಗುಳದ ನುಡಿ ಸಾಮಗ್ರಿಗಳಿಗೆ ಟಿಪ್ಪಣಿಯನ್ನು ಬರೆದು ನಾನು ಈ ಮೊದಲು ಬರೆದು ಪ್ರಕಟಿಸಿದ್ದ 'ಬಯ್ಗುಳ' ಎಂಬ ಹೆಸರಿನ ಹೊತ್ತಗೆಗೆ ಗುರುಗಳಾದ ಕೆ.ವಿ.ನಾರಾಯಣ ಅವರು ಮುನ್ನುಡಿಯನ್ನು ಬರೆದಾಗ ಹೇಳಿರುವ ಕೆಲವು ಮಾತುಗಳನ್ನು ಇಲ್ಲಿ ಮತ್ತೊಮ್ಮೆ ದಾಖಲಿಸುತ್ತೇನೆ.

"ಬಯ್ಗುಳಗಳು ಬರಹರೂಪದಲ್ಲಿ ಕತೆ ಕಾದಂಬರಿಗಳನ್ನು ಬಿಟ್ಟರೆ ಬೇರೆ ಕಡೆಗಳಲ್ಲಿ ಕಾಣಸಿಗುವುದಿಲ್ಲ. ಇವು ನಮ್ಮ ನುಡಿಯಲ್ಲಿ ಬಳಕೆಯಲ್ಲಿದ್ದು, ಈಗ

ಕಳೆದು ಹೋಗಿರುವ ಪದಗಳನ್ನು, ನಮ್ಮ ನಡಾವಳಿಗಳಲ್ಲಿ ಬಳಕೆಯಲ್ಲಿದ್ದ , ಆದರೆ ಈಗ ಮರೆಯಾಗಿರುವ ಹಲವಾರು ಸಂಗತಿಗಳನ್ನು ಅಡಗಿಸಿ ಇಟ್ಟುಕೊಂಡಿರುತ್ತವೆ. ಹಾಗಾಗಿ ಇವುಗಳನ್ನು ಕೂಡಿಟ್ಟು ಅರಿಯಲು ತೊಡಗಬೇಕಾಗುತ್ತದೆ. ಬಯ್ಗುಳಗಳ ಓದು ಇನ್ನೂ ಹೆಚ್ಚಾಗಿ ಆಗಬೇಕಿದೆ. ನಾಗರಾಜ್ ಅವರ ಕೆಲಸವನ್ನು ಅವರ ಜೊತೆ ಸೇರಿ ಬೇರೆಯವರು ಕೂಡ ಮುಂದುವರಿಸಬೇಕಿದೆ."

❖

ಬಯ್ಗುಳ : ಟಿಪ್ಪಣಿ

ನನ್ನ ನುಡಿ

ವಿಜಯ ಕರ್ನಾಟಕ ದಿನಪತ್ರಿಕೆಯ ಪ್ರಧಾನ ಸಂಪಾದಕರಾದ ಸುಗತ ಶ್ರೀನಿವಾಸರಾಜು ಅವರ ಬಯ್ಗುಳದ ನುಡಿ ಸಾಮಗ್ರಿಗಳಾದ ಪದ-ಪದಕಂತೆ-ವಾಕ್ಯಗಳನ್ನು ಕುರಿತು ಕಿರಿದಾಗಿ ಟಿಪ್ಪಣಿಯನ್ನು ಬರೆದು ಕೊಟ್ಟರೆ, ಪತ್ರಿಕೆಯಲ್ಲಿ ಪ್ರಕಟಿಸುವುದಾಗಿ ತಿಳಿಸಿದರು. ಈ ರೀತಿ ಒಂದೊಂದು ಬಯ್ಗುಳಕ್ಕೂ ಬಿಡಿಬಿಡಿಯಾಗಿ ಟಿಪ್ಪಣಿಯನ್ನು ಈ ಮೊದಲು ಬರೆದಿರಲಿಲ್ಲ; ಬರೆಯಬೇಕೆಂಬ ಆಲೋಚನೆಯೂ ನನ್ನಲ್ಲಿ ಇರಲಿಲ್ಲ. ಆದುದರಿಂದ ಈ ಬಗೆಯ ಬರಹ ರೂಪುಗೊಳ್ಳುವುದಕ್ಕೆ ಸುಗತ ಶ್ರೀನಿವಾಸರಾಜು ಅವರೇ ಕಾರಣರಾಗಿದ್ದಾರೆ. ೨೦೧೨ರ ಜೂನ್ ತಿಂಗಳಿನಿಂದ ೨೦೧೪ ಜನವರಿ ತಿಂಗಳವರೆಗೆ ವಿಜಯ ಕರ್ನಾಟಕ ಪತ್ರಿಕೆಯಲ್ಲಿ ಪ್ರಕಟಗೊಂಡ ಬಯ್ಗುಳಗಳನ್ನು ಈ ಹೊತ್ತಿಗೆಯಲ್ಲಿ ತರುತ್ತಿದ್ದೇನೆ.

ಟಿಪ್ಪಣಿಯನ್ನು ಬರೆಯುವುದಕ್ಕೆ ಮೊದಲು ನಾನು ಕೂಡಿಹಾಕಿದ್ದ ಬಯ್ಗುಳಗಳೊಡನೆ ಹಳ್ಳಿಗಳಿಗೆ ಹೋಗಿ, ಜನಪದರ ಮುಂದೆ ಅವನ್ನು ಓದಿ ಹೇಳಿ, ಬಯ್ಗುಳದ ಬಳಕೆಯ ನೆಲೆಯ ತಿರುಳನ್ನು ಮತ್ತು ಬಯ್ಗುಳಗಳಲ್ಲಿ ಹೆಸರಿಸಿರುವ ಆಚರಣೆಗಳ ವಿವರಗಳನ್ನು ತಿಳಿದುಕೊಳ್ಳುತ್ತಿದ್ದೆ. ಅನಂತರ ಕನ್ನಡ-ಕನ್ನಡ; ಸಂಸ್ಕೃತ-ಕನ್ನಡ; ಇಂಗ್ಲಿಶ್-ಕನ್ನಡ; ಹಿಂದಿ-ಕನ್ನಡ; ಉರ್ದು-ಕನ್ನಡ; ಇಂಗ್ಲಿಶ್-ಇಂಗ್ಲಿಶ್; ಹಿಂದಿ-ಹಿಂದಿ-ಇಂಗ್ಲಿಶ್ ಪದನೆರಿಕೆಗಳಲ್ಲಿ ಬಯ್ಗುಳದ ಪದರೂಪಗಳ ತಿರುಳು ಮತ್ತು ರಚನೆಯ ವಿವರಗಳನ್ನು ಗುರುತು ಹಾಕಿಕೊಂಡು ಟಿಪ್ಪಣಿಯನ್ನು ಬರೆದು ಗುರುಗಳಾದ ಕೆ.ವಿ. ನಾರಾಯಣ ಅವರಿಗೆ ಕಳುಹಿಸುತ್ತಿದ್ದೆ. ಟಿಪ್ಪಣಿಯಲ್ಲಿ ಕಂಡುಬರುತ್ತಿದ್ದ ತಪ್ಪುಗಳನ್ನು ತಿದ್ದಿತೀಡಿ, ಅವರು ಸಲಹೆಗಳನ್ನು ನೀಡುತ್ತಿದ್ದರು. ಗುರುಗಳ ನೆರವಿನಿಂದಾಗಿ, ನಾನು ಟಿಪ್ಪಣಿಗಳನ್ನು ಬರೆದಿದ್ದೇನೆ. ಆದುದರಿಂದ ಈ ಹೊತ್ತಿಗೆಯ ರಚನೆಯಲ್ಲಿ ಹಳ್ಳಿಗಾಡಿನ ಜನಪದರ ಮತ್ತು ಕೆ.ವಿ. ನಾರಾಯಣ

ಅವರ ಕೊಡುಗೆ ತುಂಬಾ ದೊಡ್ಡದು. ಹಳ್ಳಿಗಳಲ್ಲಿ ಜನಪದರೊಡನೆ ಮಾತುಕತೆ ನಡೆಸಲು ಗೆಳೆಯರಾದ ಕೂಡ್ಲೂರು ವೆಂಕಟಪ್ಪ, ಕಿರಗಂದೂರಿನ ಲಿಂಗಣ್ಣ ಬಂದುಕಾರ್, ಕಾಳೇಗೌಡ ನಾಗವಾರ, ಸೇಡಂ ನಗರದ ಮಹಿಪಾಲ್ ರೆಡ್ಡಿ ಮುನ್ನೂರ್, ಜೇವರ್ಗಿ ಪಟ್ಟಣದ ಶಿವಕವಿ ಹಿರೇಮಠ, ಗುಲ್ಬರ್ಗಾ ನಗರದ ರಾಜೇಂದ್ರ ಯರನಾಳೆ ಮತ್ತು ಚನ್ನಪಟ್ಟಣದ ಡಾಕ್ಟರ್ ಶ್ರೀಧರ್ ನೆರವಾಗಿದ್ದಾರೆ.

ಕೂಡ್ಲೂರಿನ ಚಿಟ್ಟೆನಿಂಗಮ್ಮ, ಕಿರಗಂದೂರಿನ ಹೊಂಬೇಗೌಡ ಮತ್ತು ಜೋಗಿಗೌಡ, ಮೆಣಸಿಗನಹಳ್ಳಿಯ ಎಂ.ಬಿ. ರಾಮಕೃಷ್ಣ ಮತ್ತು ವೆಂಕಟಾಚಲಯ್ಯ, ಬುಗತಗಳ್ಳಿಯ ಪುಟ್ಟಮ್ಮ, ಹೊಸಕೆರೆಯ ಸಿದಿಗತ್ ಉಲ್ಲಾಬೇಗ್ ಮತ್ತು ಗುಲ್ಬರ್ಗಾ ನಗರದ ಸುತ್ತಮುತ್ತಣ ಹಳ್ಳಿಗಳಲ್ಲಿ ಮೂವತ್ತಕ್ಕಿಂತ ಹೆಚ್ಚಿನ ಜನಪದರಿಂದ ಬಯ್ಗುಳಗಳ ಬಳಕೆಯ ನೆಲೆಯ ತಿರುಳನ್ನು ಮತ್ತು ಆಚರಣೆಗಳ ವಿವರವನ್ನು ಕೇಳಿ ತಿಳಿದುಕೊಂಡಿದ್ದೇನೆ.

ಬಡಗಣ ಕರ್ನಾಟಕದ ಬಯ್ಗುಳಗಳಿಗೆ ಟಿಪ್ಪಣಿಯನ್ನು ಬರೆಯುವಾಗ ದೇಶಾಂತ ಹುಡುಗಿ ಅವರ 'ಬೀದರ ಕನ್ನಡ ಕೋಶ'ವನ್ನು ಬಳಸಿ ಕೊಂಡಿದ್ದೇನೆ. ಮಯ್ಸೂರು ಜಿಲ್ಲೆಯ ಕೆ.ಆರ್. ನಗರ ತಾಲ್ಲೂಕಿನ ಸಾಲಿಗ್ರಾಮದ ಬಳಿಯ ರಾಂಪುರದ ಬಿ. ರಾಜಣ್ಣನವರು ತಮ್ಮ ನೆನಪಿನಲ್ಲಿದ್ದ ಇಪ್ಪತ್ತು ಬಯ್ಗುಳಗಳ ಮಾಹಿತಿಯನ್ನು ನೀಡಿ, ಟಿಪ್ಪಣಿ ಬರೆಯಲು ನೆರವಾಗಿದ್ದಾರೆ. ಗೆಳೆಯರಾದ ಆರ್. ಲಕ್ಷ್ಮೀನಾರಾಯಣ ಮತ್ತು ಅಖಿಲೇಶ್ ಯಾದವ್ ಅವರ ಜತೆಗೂಡಿ ಹಿಂದಿ-ಕನ್ನಡ ಮತ್ತು ಹಿಂದಿ-ಹಿಂದಿ-ಇಂಗ್ಲಿಶ್ ಪದನೆರಿಕೆಗಳನ್ನು ಓದಿ, ಬಯ್ಗುಳಗಳ ತಿರುಳನ್ನು ತಿಳಿದುಕೊಂಡಿದ್ದೇನೆ. ಶಾಲಾ ಕಾಲೇಜು ಮತ್ತು ಸ್ನಾತಕೋತ್ತರ ಕೇಂದ್ರ ಗಳಲ್ಲಿ ಕನ್ನಡ, ಇಂಗ್ಲಿಶ್, ಹಿಂದಿ, ಉರ್ದು ನುಡಿಗಳನ್ನು ಹೇಳಿಕೊಡುವ ಹತ್ತಾರು ಮಂದಿ ಉಪನ್ಯಾಸಕರೊಡನೆ ಮಾತನಾಡಿ ಮಾಹಿತಿಗಳನ್ನು ಕಲೆಹಾಕಿದ್ದೇನೆ.

ಈ ರೀತಿ ಬಯ್ಗುಳದ ಓದು ಬರಹಕ್ಕೆ ನೆರವಾದ ಮೇಲ್ಕಂಡ ಎಲ್ಲಾ ಗುರು ಹಿರಿಯರಿಗೆ, ಗೆಳೆಯರಿಗೆ, ವಿಜಯ ಕರ್ನಾಟಕ ಪತ್ರಿಕೆಯ ಪ್ರಧಾನ ಸಂಪಾದಕರಿಗೆ ಹಾಗೂ ಸಿಬ್ಬಂದಿ ವರ್ಗದವರಿಗೆ, ಪತ್ರಿಕೆಯ ಓದುಗರಿಗೆ ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ.

ಸಿ.ಪಿ. ನಾಗರಾಜ
ಬೆಂಗಳೂರು

ಆರೋಪದ ಬಯ್ಗುಳ

೧. ಅಂಟ್ ನನ್ಮಗ

ತನ್ನ ಅಗತ್ಯಗಳನ್ನು ಈಡೇರಿಸಿಕೊಳ್ಳಲು ಹಣವನ್ನು ವೆಚ್ಚ ಮಾಡದೆ, ದುಡಿದು ಗಳಿಸಿದ ಹಣವನ್ನೆಲ್ಲಾ ಕೂಡಿಡುವ ಹಾಗೂ ಹತ್ತಿರದವರಿಗೆ ಕಿಂಚಿತ್ತಾದರೂ ನೆರವನ್ನು ನೀಡದ ವ್ಯಕ್ತಿ.

'ಅಂಟು' ಎಂದರೆ "ಮುಟ್ಟಿದಾಗ ಕಯ್ಗೆ, ತಗುಲಿದಾಗ ಮಯ್ಗೆ ಹತ್ತಿಕೊಳ್ಳುವ ಜಿಡ್ಡಿನಂತಹ ವಸ್ತು". ಈ ವಸ್ತುವಿನ ಜಿಗುಟುತನವನ್ನು ಒಂದು ರೂಪಕವಾಗಿ ಬಳಸಿ, ಈ ಬಯ್ಗುಳವನ್ನು ಕಟ್ಟಲಾಗಿದೆ. ಜೀನತನವುಳ್ಳ ಹೆಂಗಸನ್ನು "ಅಂಟ್ ಮುಂಡೆ" ಎಂದು ಬಯ್ಯುತ್ತಾರೆ.

೨. ಅಂಡಬಂಡ ನನ್ಮಗ

ಯಾವುದೇ ಒಂದು ಆಟ, ಮಾತುಕತೆ ಕೆಲಸ ನಡೆಯುತ್ತಿರುವಾಗ ಸರಿಯಾಗಿ ರುವುದನ್ನು ತಪ್ಪೆಂದು, ತಪ್ಪಾಗಿರುವುದನ್ನು ಸರಿಯೆಂದು ಮೊಂಡುತನದಿಂದ ವಾದಿಸುವ ವ್ಯಕ್ತಿ.

"ಗೊತ್ತುಗುರಿಯಿಲ್ಲದ ಮಾತು; ಒಂದಕ್ಕೊಂದು ತಾಳೆಯಾಗದ ಮಾತು; ಹೊಂದಾಣಿಕೆಯಿಲ್ಲದ್ದು" ಎಂಬ ತಿರುಳಿನ 'ಅಂಡಬಂಡ್' ಎಂಬ ಪದ ಮರಾಠಿ ಮತ್ತು ಹಿಂದಿ ನುಡಿಗಳಲ್ಲಿ ಬಳಕೆಯಲ್ಲಿದೆ. ಈ ನುಡಿ ಸಮುದಾಯಗಳ ಒಡನಾಟ ದಿಂದ ಕನ್ನಡದಲ್ಲಿ 'ಅಂಡಬಂಡ' ಎಂಬ ರೂಪದಲ್ಲಿ ಉಚ್ಚಾರಣೆಗೊಂಡು "ಯಾವುದನ್ನೂ ಒಪ್ಪದೇ, ಎಲ್ಲದಕ್ಕೂ ತಂಟೆ ತಕರಾರುಗಳನ್ನು ಒಡ್ಡುವ ನಡೆನುಡಿಗಳಿಗೆ" ಒಂದು ರೂಪಕವಾಗಿ ಬಳಕೆಗೆ ಬಂದಿದೆ.

೩. ಅಕ್ಲು ಬಡ್ಡತ್ತದ್ದು

ಕುಟುಂಬದ ಇಲ್ಲವೇ ಸಮಾಜದ ಕಟ್ಟುಪಾಡುಗಳಿಗೆ ಒಳಗಾಗದೆ, ಯಾರ ಅಂಕೆಶಂಕೆಗಳಿಲ್ಲದೆ ಬಾಳುತ್ತಿರುವ ವ್ಯಕ್ತಿ.

ಅಕ್ಕಲು ಎಂದರೆ 'ರಾಗಿ / ಬತ್ತದ ಬೆಳೆಯನ್ನು ಕುಯ್ದು, ಅರಿಗಳನ್ನು ಒಣಗಿಸಿ, ಹೊರೆಗಳನ್ನು ಕಟ್ಟುವಾಗ ಹೊರೆಯಿಂದ ಕಳಚಿಕೊಂಡು ಹೊಲಗದ್ದೆಗಳಲ್ಲಿ ಬಿದ್ದಿರುವ ತೆನೆ'. ಈ ರೀತಿ ಹೊರೆಯ ಕಟ್ಟಿಗೆ ಒಳಪಡದ ಅಕ್ಕಲನ್ನು ಒಂದು ರೂಪಕವಾಗಿ ಬಳಸಿಕೊಂಡು ಈ ಬಯ್ಗುಳ ಹುಟ್ಟಿದೆ. ಬಯ್ಯುವಿಕೆಯ ಮೊನಚನ್ನು ಹೆಚ್ಚಿಸಲು "ಬಡ್ಡತ್ತದ್ದು" ಎಂಬ ಮತ್ತೊಂದು ಬಯ್ಗುಳ ಬಳಕೆಯಾಗಿದೆ.

೪. ಅಟ್ಟಿಕ್ಕಿದ ಮ್ಯಾಲೆ ಬಟ್ಟಿಕ್ಕೊ ನನ್ ಸವ್ತಿ

ಯಾವೊಂದು ಕೆಲಸವನ್ನೂ ಮಯ್ ಬಗ್ಗಿಸಿ ಮಾಡದೆ, ಮಾತಿನಲ್ಲೇ ಮರುಳು ಮಾಡಿ, ಜನ ಮೆಚ್ಚುಗೆಯನ್ನು ಪಡೆಯುವ ಹೆಂಗಸು.

'ಅಟ್ಟಿಕ್ಕು' ಎಂಬ ಪದರೂಪದಲ್ಲಿ 'ಅಡು' ಮತ್ತು 'ಇಕ್ಕು' ಎಂಬ ಪದಗಳಿವೆ. ಅಡು ಎಂದರೆ ಅಡುಗೆಯನ್ನು ಮಾಡುವುದು. ಇಕ್ಕು ಎಂದರೆ ಉಣಬಡಿಸುವುದು. 'ಬಟ್ಟಿಕ್ಕು' ಎಂಬ ಪದರೂಪದಲ್ಲಿ ಬಟ್ಟು ಮತ್ತು ಇಕ್ಕು ಎಂಬ ಪದಗಳಿವೆ. ಬಟ್ಟು ಎಂದರೆ ಹಣೆಯಲ್ಲಿ ಇಟ್ಟುಕೊಳ್ಳುವ ಕಂಕುಮ / ಚಂದನ / ವಿಭೂತಿ / ಕಸ್ತೂರಿ / ಇನ್ನಿತರ ವಸ್ತುಗಳ ಕೂಡಿದ ದುಂಡನೆಯ ತಿಲಕ. 'ಬಟ್ಟಿಕ್ಕುವುದು' ಎಂದರೆ ಊಟ ಮಾಡಿದ ನಂತರ ಹೊರಗೆ ಹೋಗುತ್ತಿರುವವರ ಹಣೆಗೆ ಕಪ್ಪನ್ನಿಟ್ಟು, ಯಾವುದೇ ಬಗೆಯ ಕೆಡುಕು ತಟ್ಟದಿರಲೆಂದು ಹೇಳುವುದು. 'ಕಪ್ಪು' ಎಂದರೆ ಹಣೆಗೆ ಇಡುವ ಒಂದು ಬಗೆಯ ಮಸಿ. ಯಾವುದೇ ಒಂದು ಪ್ರಸಂಗದಲ್ಲಿ ಒಬ್ಬಳು ಅಡುಗೆಯನ್ನು ಮಾಡಿ ಬಡಿಸಿದ್ದು, ಮತ್ತೊಬ್ಬಳು ಬಟ್ಟನ್ನಿಟ್ಟಿದ್ದರೆ, ಉಂಡು ಹೊರ ಬಂದವರು ತಮಗೆ ಬಟ್ಟನ್ನಿಟ್ಟು, ಒಳಿತನ್ನು ಕೋರಿದವಳನ್ನು ತಮ್ಮ ಬಗ್ಗೆ ಕಾಳಜಿಯುಳ್ಳ ವಳೆಂದು ತಿಳಿಯುತ್ತಾರೆಯೇ ಹೊರತು ಶ್ರಮಪಟ್ಟು ಅಡುಗೆಯನ್ನು ಮಾಡಿ ಉಣಬಡಿಸಿದವಳನ್ನಲ್ಲ. ಈ ಎರಡು ನುಡಿಗಟ್ಟುಗಳು ಒಂದೇ ಸೊಲ್ಲಿನಲ್ಲಿ ಬಂದಾಗ "ತೋರಿಕೆಯ ನಡೆನುಡಿಗಳಿಗೆ ದೊರೆಯುವ ಹೆಚ್ಚಿನ ಮನ್ನಣೆಯನ್ನು" ಸೂಚಿಸುತ್ತವೆ.

೫. ಅಡಕಸ್ಬಿ

ಯಾವುದೇ ಒಂದು ಕೆಲಸವನ್ನು ಮಾಡಲು ಬೇಕಾದ ನಿಪುಣತೆ, ಚತುರತೆ, ಪರಿಶ್ರಮವಿಲ್ಲದ ವ್ಯಕ್ತಿ ಇಲ್ಲವೇ ಯಾವುದೇ ಒಂದು ಕೆಲಸದಲ್ಲಿ ತೊಡಗಿದರೂ ಅದನ್ನು ಸರಿಯಾಗಿ ಮಾಡಿ ಮುಗಿಸದೆ ಹಾಳು ಮಾಡುವ ವ್ಯಕ್ತಿ.

"ಕೆಲಸ; ಉದ್ಯೋಗ; ಪರಿಶ್ರಮ" ಎಂಬ ತಿರುಳುಳ್ಳ 'ಕಸಬ್' ಎಂಬ ಅರಾಬಿಕ್ ಪದಕ್ಕೆ "ಇಲ್ಲವಾಗು; ನಿಂತುಹೋಗು; ತಡೆಯಾಗು" ಎಂಬ ತಿರುಳಿನ 'ಅಡ್' ಎಂಬ ಉರ್ದು ನುಡಿಯ ಪದ ಸೇರಿ 'ಅಡ್‌ಕಸಬ್' ಎಂಬ ಪದ ರೂಪುಗೊಂಡಿದೆ.

ಈ ಪದಕ್ಕೆ 'ಮಾಡುವವನು/ಮಾಡುವವಳು' ಎಂಬ ತಿರುಳಿನ 'ಇ' ಎಂಬ ಒಟ್ಟು ಸೇರಿ 'ಅಡ್‌ಕಸಬಿ' ಎಂಬ ಪದ ಬಳಕೆಯಲ್ಲಿದೆ. ಉರ್ದು ನುಡಿ ಸಮುದಾಯದ ಒಡನಾಟದಿಂದ ಕನ್ನಡ ನುಡಿ ಸಮುದಾಯದಲ್ಲಿ ಬಳಕೆಗೆ ಬಂದಾಗ 'ಅಡಕಸ್ಬಿ/ಅಡಕಸ್ವಿ' ಎಂಬ ರೂಪಗಳಲ್ಲಿ ಉಚ್ಚಾರಣೆಗೊಳ್ಳುತ್ತಿದೆ. ಅರಾಬಿಕ್ ಪದ 'ಕಸಬ್' ಎಂಬುದಕ್ಕೆ ' ಸೂಳೆಗಾರಿಕೆ' ಎಂಬ ಮತ್ತೊಂದು ತಿರುಳಿದೆ.

೬. ಅಡ್ಡಂಬ್ರದ ಬಡ್ಡತ್ತದ್ದು

ಮಾಡಲೆಂದು ಕಯ್ಗೆ ಎತ್ತಿಕೊಂಡ ಯಾವುದೇ ಕೆಲಸವನ್ನು ಸರಿಯಾಗಿ ಕೊನೆತನಕ ಮಾಡಿ ಮುಗಿಸದೆ, ನಡುವೆಯೇ ಮತ್ತೊಂದು ಕೆಲಸದಲ್ಲಿ ತೊಡಗಿ, ಅದನ್ನೂ ಸರಿಯಾಗಿ ಮಾಡದಿರುವ ವ್ಯಕ್ತಿ.

'ಜಂಬರ' ಎಂದರೆ ಕೆಲಸ. ಇದು 'ಅಡ್ಡ' ಎಂಬ ಪದದ ಜತೆಗೂಡಿ 'ಅಡ್ಡಂಬ್ರ' ಎಂದು ರೂಪುಗೊಂಡಿದೆ. ಬಯ್ಯುವಿಕೆಯ ಮೊನಚನ್ನು ಹೆಚ್ಚಿಸಲೆಂದು 'ಸೂಳೆಯ ಮಗ' ಎಂಬ ತಿರುಳುಳ್ಳ 'ಬಡ್ಡತ್ತದ್ದು' ಎಂಬ ಬಯ್ಗುಳ ಜತೆಯಲ್ಲಿ ಉಚ್ಚಾರಣೆ ಗೊಂಡಿದೆ.

೭. ಅಡ್ಮೋರೆ ಬಡ್ಡಿಮಗ

ನಾಲ್ಕಾರು ಮಂದಿ ಜತೆಗೂಡಿ ಯಾವುದೇ ಒಂದು ಕೆಲಸವನ್ನು ಮಾಡಲು ತೊಡಗಿದಾಗ, ಅದನ್ನು ಕಡೆಗಣಿಸುವ, ಅದಕ್ಕೆ ತಡೆಯೊಡ್ಡುವ, ಅವರೊಡನೆ ಕಯ್ ಜೋಡಿಸದ ವ್ಯಕ್ತಿ.

ದಿನನಿತ್ಯದ ಸಾಮಾಜಿಕ ವ್ಯವಹಾರಗಳಲ್ಲಿ ಯಾರನ್ನೂ ಒಲವಿನಿಂದ ಕಾಣದೆ,

ಯಾರೊಡನೆಯೂ ಒಂದು ಒಳ್ಳೆಯ ನುಡಿಯನ್ನಾಡದೆ, ಬೇರೊಂದು ಕಡೆಗೆ ತನ್ನ ಮೋರೆಯನ್ನು (ಮುಖವನ್ನು) ಅಡ್ಡಲಾಗಿ ತಿರುಗಿಸಿಕೊಂಡಿರುವ ವ್ಯಕ್ತಿಯ ಇರುವಿಕೆಯನ್ನು ಒಂದು ರೂಪಕವನ್ನಾಗಿ ಮಾಡಿಕೊಂಡು ಈ ಬಯ್ಗುಳವನ್ನು ಕಟ್ಟಲಾಗಿದೆ. ಬಯ್ಯುವಿಕೆಯ ಮೊನಚನ್ನು ಹೆಚ್ಚಿಸಲೆಂದು **"ಬಡ್ಡಿಮಗ/ಸೂಳೆಮಗ/ ಮುಂಡೆಮಗ"** ಮುಂತಾದ ಪದಗಳನ್ನು ಜತೆಗೂಡಿಸಿ ಉಚ್ಚರಿಸುತ್ತಾರೆ.

೮. ಅನ್ಕ

ರುಚಿರುಚಿಯಾದ ತಿಂಡಿತಿನಿಸುಗಳನ್ನು ತಿನ್ನುತ್ತಿರಬೇಕೆಂಬ ಬಾಯ್ ಚಪಲವುಳ್ಳವನು ಹಾಗೂ ತಿನ್ನುವ ವಸ್ತುಗಳನ್ನು ಕಂಡಾಗ ಜೊಲ್ಲು ಸುರಿಸುವವನು.

'ಹನಿಕು' ಎಂಬ ಪದದಿಂದ 'ಅನ್ಕ' ಹುಟ್ಟಿ ಬಂದಿದೆ. ಹನಿಕು ಎಂದರೆ "ಹನಿಯಾಗಿ ಬೀಳುವುದು, ತೊಟ್ಟಿಕ್ಕುವುದು. 'ಬೆಳಗಾನ ಮಳೆ ಹನುಕುತ್ಲೇ ಇತ್ತು' ಎಂಬ ಮಾತಿದೆ. "ಅನ್ಕನ ಪಂಕ್ತೀಲಿರಬೇಕು" ಎಂಬ ಗಾದೆಯೊಂದು ಕನ್ನಡ ನುಡಿ ಸಮುದಾಯದಲ್ಲಿ ಬಳಕೆಯಲ್ಲಿದೆ. ಊಟ ತಿಂಡಿ ಸಮಯದಲ್ಲಿ ಅನ್ಕ ತನಗೆ ಬೇಕಾದುದೆಲ್ಲವನ್ನೂ ನಾಚಿಕೆ ಸಂಕೋಚಗಳಿಲ್ಲದೆ ಮತ್ತೆ ಮತ್ತೆ ಕೇಳಿ ಹಾಕಿಸಿಕೊಳ್ಳುತ್ತಾನೆ. ಇದರಿಂದ ಅಕ್ಕಪಕ್ಕದಲ್ಲಿ ಕುಳಿತವರಿಗೂ ಅವೆಲ್ಲವೂ ದೊರಕುತ್ತದೆ. ಇದೇ ಗುಣವುಳ್ಳ ಹೆಂಗಸನ್ನು 'ಅನ್ಕಿ' ಎಂದು ಕರೆಯುತ್ತಾರೆ.

೯. ಅನ್ನ ತಿಂದ್ಮನೆ ಗಳ ಎಣ್ಸು ನನ್ಮಕ್ಳು

ಸಂಕಟವಿದ್ದಾಗ ಪಡೆದ ನೆರವನ್ನು ಮರೆತು, ನೆರವು ನೀಡಿದವರ ಸಾಮಾಜಿಕ ಅಂತಸ್ತನ್ನು ಅಳೆಯಲು ತೊಡಗುವ ಕೆಟ್ಟ ವ್ಯಕ್ತಿಗಳು.

ಕನ್ನಡ ನುಡಿ ಸಮುದಾಯದಲ್ಲಿ ಬಳಕೆಯಲ್ಲಿರುವ 'ಗಳ ಎಣಿಸು' ಎಂಬ ನುಡಿಗಟ್ಟು ಈ ಸನ್ನಿವೇಶದಲ್ಲಿ "ವ್ಯಕ್ತಿಯ ಸಂಪತ್ತಿನ ಮೊತ್ತವನ್ನು ಅಳೆಯುವುದು' ಎಂಬ ತಿರುಳನ್ನು ಹೊಂದಿದೆ. ನಾಡ ಹೆಂಚಿನ ಮನೆಗಳಲ್ಲಿ ಹೆಂಚುಗಳನ್ನು ಹೊದಿಸುವ ಸೂರಿಗೆ ಮರದ ತೊಲೆಯನ್ನು ಮತ್ತು ಬಿದಿರಿನ ಗಳವನ್ನು ಜೋಡಿಸಿ ರುತ್ತಾರೆ. ಸಿರಿವಂತರಾದವರು ಹೆಚ್ಚಾಗಿ ಗಳವನ್ನು ಬಳಸಿಕೊಂಡು ಒಂದರ ಪಕ್ಕದಲ್ಲೊಂದನ್ನು ಜತೆಗೂಡಿಸಿ, ಚಗರೆ ಹುರಿಯಿಂದ ಬಿಗಿದು ಕಟ್ಟಿಸಿರುತ್ತಾರೆ. ಮನೆಯ ಒಳಗೆ ಕುಳಿತಾಗ ಮೇಲಿನ ಸೂರಿನಲ್ಲಿ ಕಾಣುವ ಗಳಗಳ ಪ್ರಮಾಣ ದಿಂದಲೇ ಆ ಮನೆಯವರ ಸಾಮಾಜಿಕ ಅಂತಸ್ತನ್ನು ತಿಳಿಯಬಹುದು. ಇದನ್ನೇ ಒಂದು ರೂಪಕವಾಗಿ ಬಳಸಿಕೊಂಡು ಉಪಕಾರದ ನೆನಪಿಲ್ಲದ ವ್ಯಕ್ತಿಗಳ ಕೆಟ್ಟ ಗುಣವನ್ನು ಅಲ್ಲಗಳೆಯಲಾಗಿದೆ.

೧೦. ಅನ್ನಾಡಿ

ಯಾವುದೇ ಒಂದು ಕೆಲಸವನ್ನು ಮಾಡಲು ಬೇಕಾದ ಅರಿವು, ಕುಶಲತೆ, ಶಕ್ತಿಯಿಲ್ಲದವನು.

“ತಿಳುವಳಿಕೆಯಿಲ್ಲದ; ಚತುರತೆಯಿಲ್ಲದ; ನಿಪುಣತೆಯಿಲ್ಲದ; ಸಾಮಾಜಿಕ ಅರಿವಿಲ್ಲದ ವ್ಯಕ್ತಿ” ಎಂಬ ತಿರುಳುಳ್ಳ ‘ಅನಾಡೀ’ ಎಂಬ ಪದ ಉರ್ದು ಮತ್ತು ಹಿಂದಿ ನುಡಿ ಸಮುದಾಯಗಳಲ್ಲಿ ಬಳಕೆಯಲ್ಲಿದೆ. ಈ ನುಡಿ ಸಮುದಾಯಗಳ ಒಡನಾಟದಿಂದ ಕನ್ನಡಿಗರಲ್ಲಿ ಬಳಕೆಗೆ ಬಂದಾಗ, ಕನ್ನಡ ಉಲಿಕಂತೆಯ ಜೋಡಣೆಗೆ ತಕ್ಕಂತೆ ಪದರಚನೆಯಲ್ಲಿ ಬದಲಾವಣೆಯಾಗಿ ‘ಅನ್ನಾಡಿ’ ಎಂದು ಉಚ್ಚಾರಣೆಗೊಂಡಿದೆ. “ಅನ್ನಾಡಿ ಮುಂಡೆ; ಅನ್ನಾಡಿ ನನ್ಮಕ್ಳು; ಅನ್ನಾಡಿ ಕೆಲಸ” ಎಂಬ ಪದಕಂತೆಗಳು ಬಳಕೆಯಲ್ಲಿವೆ.

೧೧. ಅನ್ನೇಕಾರ

ಜನರು ಒಳ್ಳೆಯದೆಂದು ಒಪ್ಪಿರುವ ಸಾಮಾಜಿಕವಾದ ನಡೆನುಡಿಗಳನ್ನು ಕಡೆಗಣಿಸಿ, ಇತರರಿಗೆ ಕೇಡನ್ನು ಬಗೆಯುವವನು.

‘ಅನ್ಯಾಯ’ ಎಂಬ ಪದಕ್ಕೆ ‘ಮಾಡುವವನು’ ಎಂಬ ತಿರುಳುಳ್ಳ ‘ಕಾರ’ ಎಂಬ ಒಟ್ಟು ಸೇರಿ ‘ಅನ್ಯಾಯಕಾರ’ ಎಂಬ ಸಂಸ್ಕೃತ ಪದ ರೂಪುಗೊಂಡಿದೆ. ಇದು ಕನ್ನಡಿಗರ ಆಡುಮಾತಿನಲ್ಲಿ ಬಳಕೆಗೆ ಬಂದಾಗ, ಕನ್ನಡ ಉಲಿಕಂತೆಯ ಜೋಡಣೆಗೆ ತಕ್ಕಂತೆ ಬದಲಾವಣೆಗೊಂಡು ‘ಅನ್ನೇಕಾರ’ ಎಂದು ಉಚ್ಚಾರಣೆಗೊಂಡಿದೆ. ಇದೇ ಬಗೆಯ ಗುಣವುಳ್ಳ ಹೆಂಗಸನ್ನು ‘ಅನ್ನೇಕಾತಿ’ ಎಂದು ಕರೆಯುತ್ತಾರೆ. (ಅನ್ಯಾಯಕಾರ + ತಿ = ಅನ್ಯಾಯಕಾರ್ತಿ = ಅನ್ನೇಕಾತಿ).

೧೨. ಅಲ್ಕ ನನ್ಮಗ

ಹೆಂಗಸರ ಬಗೆಗೆ ಕೆಟ್ಟ ನೋಟ, ಮಾತು, ವರ್ತನೆಗಳಿಂದ ನಡೆದುಕೊಳ್ಳುವ ವ್ಯಕ್ತಿ ಇಲ್ಲವೇ ಹೀನವಾದ ನಡೆನುಡಿಗಳಿಂದ ಎಲ್ಲರ ತಿರಸ್ಕಾರಕ್ಕೆ ಗುರಿಯಾಗಿ, ಸಾಮಾಜಿಕವಾಗಿ ಯಾವುದೇ ಬಗೆಯ ಮನ್ನಣೆಯಿಲ್ಲದವನು.

ಉರ್ದು, ಮರಾಠಿ ಮತ್ತು ಹಿಂದಿ ನುಡಿ ಸಮುದಾಯಗಳಲ್ಲಿ ‘ಹಲ್ಕಾ’ ಎಂಬ ಪದ “ಹಗುರವಾದುದು; ಸಣ್ಣದು; ಚಿಕ್ಕದು” ಎಂಬ ತಿರುಳಿನ ಜತೆಗೆ “ಹೀನ;

ನೀಚ; ಕೀಳು; ಹಾಳು; ಕೆಟ್ಟ" ಎಂಬ ರೂಪಕವಾಗಿಯೂ ಮಾತಿನ ಸನ್ನಿವೇಶಗಳಲ್ಲಿ ಬಳಕೆಯಾಗುತ್ತಿದೆ. ಈ ನುಡಿ ಸಮುದಾಯಗಳ ಒಡನಾಟದಿಂದ ಕನ್ನಡ ಸಮುದಾಯದಲ್ಲಿ ಬಳಕೆಗೆ ಬಂದು "ಅಲ್ಕ ಮುಂಡೆ; ಅಲ್ಕ ಕೆಲಸ; ಅಲ್ಕ ಮಾತು; ಅಲ್ಕ ಜನ" ಎಂಬ ಪದಕಂತೆಗಳಾಗಿ ಮಾತಿನ ಸನ್ನಿವೇಶಗಳಲ್ಲಿ ಕೇಳಿ ಬರುತ್ತವೆ.

೧೩. ಆಷಾಢಭೂತಿ

ಮೊದಮೊದಲು ತುಂಬಾ ಒಳ್ಳೆಯ ಮಾತುಕತೆಗಳಿಂದ ಜನರಲ್ಲಿ ನಂಬಿಕೆಯನ್ನು ಹುಟ್ಟಿಸಿ, ಕೊನೆಯಲ್ಲಿ ಮೋಸ ಮಾಡುವ ಹಾಗೂ ತೋರಿಕೆಯ ನಡೆನುಡಿಗಳನ್ನುಳ್ಳ ವ್ಯಕ್ತಿ.

ಸಂಸ್ಕೃತ ನುಡಿಯಲ್ಲಿ ರಚನೆಗೊಂಡಿರುವ 'ಪಂಚತಂತ್ರ' ಎಂಬ ಹೊತ್ತಿಗೆಯಲ್ಲಿ ಆಷಾಢಭೂತಿ ಎಂಬ ವ್ಯಕ್ತಿಯು ಸಂನ್ಯಾಸಿಯೊಬ್ಬನ ಬಳಿಯಲ್ಲಿದ್ದ ಹಣದ ಗಂಟನ್ನು ನಯವಾದ ನಡೆನುಡಿಗಳಿಂದ ಲಪಟಾಯಿಸುವ ಕತೆಯೊಂದು ನಿರೂಪಣೆಗೊಂಡಿದೆ. ಈ ಕತೆಯಲ್ಲಿನ ಆಷಾಢಭೂತಿಯ ಹೆಸರು ಕನ್ನಡ ನುಡಿ ಸಮುದಾಯದ ಮಾತುಕತೆಗಳಲ್ಲಿ ನಯವಂಚಕತನದ ನಡೆನುಡಿಗಳಿಗೆ ಒಂದು ರೂಪಕವಾಗಿ ಬಳಕೆಯಾಗುತ್ತಿದೆ.

'ಮುತ್ತುಗದ ಕೋಲು' ಎಂಬ ತಿರುಳಿನ 'ಆಷಾಢ' ಎಂಬ ಪದಕ್ಕೆ, 'ಇರುವಿಕೆ' ಎಂಬ ತಿರುಳಿನ 'ಭೂತಿ' ಎಂಬ ಪದ ಸೇರಿ 'ಆಷಾಢಭೂತಿ' ಎಂಬ ಸಂಸ್ಕೃತ ಪದ ರೂಪುಗೊಂಡಿದೆ. ಗುರುಗಳ ಸೇವೆಯನ್ನು ಮಾಡುವ ಗುಡ್ಡರ ಕಯ್ಯಲ್ಲಿ ಮುತ್ತುಗದ ಕೋಲು ಇರುತ್ತಿತ್ತು.

೧೪. ಇಟ್ಬಾಡುನ್ಗೆ ಹುಟ್ಟೋನು

ಸಮಾಜ ಒಪ್ಪಿತವಾದ ಕಟ್ಟುಪಾಡುಗಳಿಗೆ ಒಳಪಡದೆ, ಯಾವುದೇ ಮಾತುಕತೆ ಅಥವಾ ವ್ಯವಹಾರಗಳಲ್ಲಿ ದೊಡ್ಡವರು ಚಿಕ್ಕವರು ಅನ್ನುವುದನ್ನು ಗಮನಿಸದೆ, ತನಗೆ ಬೇಕಾದಂತೆ ನಡೆದುಕೊಳ್ಳುವ ವ್ಯಕ್ತಿ.

'ಎಸೆದಿರುವುದು; ದೂರ ಬಿಸಾಡಿರುವುದು' ಎಂಬ ತಿರುಳಿನ 'ಇಟ್ಟು' ಎಂಬ ಪದಕ್ಕೆ. 'ಆಡುವವನು' ಎಂಬ ಪದ ಸೇರಿ "ಒಂದೆಡೆ ತಳವೂರದೆ ತಿರುಗುವವನು; ಗತಿಗೇಡಿ; ತಿರಿದು ತಿನ್ನುವವನು" ಎಂಬ ರೂಪಕದ ತಿರುಳಿನಲ್ಲಿ ಬಳಕೆಯಾಗುವ 'ಇಟ್ಬಾಡುವವನು' ಎಂಬ ಪದ ರೂಪುಗೊಂಡಿದೆ.

ಕನ್ನಡ ನುಡಿ ಸಮುದಾಯಕ್ಕೆ ಸೇರಿದ ಕುಟುಂಬದಲ್ಲಿನ ಹೆಂಗಸು ತನ್ನ ಗಂಡನಿಂದ ಪಡೆದ ಮಗುವಿಗೆ ಮಾತ್ರ ಸಾಮಾಜಿಕ ಮನ್ನಣೆಯಿರುತ್ತದೆ. ಮತ್ತೊಬ್ಬ

ಗಂಡಸಿನ ಕಾಮದ ನಂಟಿನಿಂದ ಹಡೆದ ಮಗು "ಅಪ್ಪ ಯಾರೆಂದು ಗೊತ್ತಿಲ್ಲದ್ದು" ಎಂಬ ಸಾಮಾಜಿಕ ಕಳಂಕಕ್ಕೆ ಗುರಿಯಾಗುತ್ತದೆ. **"ಅಪ್ಪಂಗೆ ಹುಟ್ದೋನಾಗಿದ್ರೆ ನಾಕು ಜನ ಒಪ್ಪುವಂಗೆ ಮಾತಾಡ್ತಿದ್ದ...ಹೋಗಿ ಹೋಗಿ ಇಟ್ಬಾಡುನ್ಗೆ ಹುಟ್ಟಿರೂ ಅವ್ನ ಬಾಯ್ನಲ್ಲಿ ಒಳ್ಳೆ ಮಾತು ಹೆಂಗ್ ತಾನೇ ಬಂದದು"** ಎಂಬ ಆರೋಪದ ಮಾತು ಬಳಕೆಯಲ್ಲಿದೆ.

೧೫. ಇದೊಂದು ದಂಡಪಿಂಡ

ಮಯ್ ಬಗ್ಗಿಸಿ ಮತ್ತು ಮನಸ್ಸನ್ನು ತೊಡಗಿಸಿ ಯಾವುದೇ ಒಂದು ಕೆಲಸವನ್ನು ಮಾಡದೆ, ಸುಮ್ಮನೆ ಕುಂತು ನಿಂತು ಕಾಲ ಕಳೆಯುತ್ತಾ, ಉಣ್ಣುವುದಕ್ಕೆ ಉಡುವುದಕ್ಕೆ ಅವರಿವರ ದುಡಿಮೆಯನ್ನೇ ನೆಮ್ಮಿಕೊಂಡು, ಕುಟುಂಬಕ್ಕೆ ಹೊರೆಯಾಗಿ ಬಾಳುತ್ತಿರುವ ವ್ಯಕ್ತಿ.

'ಕೋಲು; ಹೊಡೆತ; ರಾಜನ ಒಡೆತನವನ್ನು ಸೂಚಿಸುವ ಉಪಕರಣ' ಎಂಬ ತಿರುಳುಳ್ಳ 'ದಂಡ' ಎಂಬ ಸಂಸ್ಕೃತ ಪದವು ಕನ್ನಡದಲ್ಲಿ ಬಳಕೆಯಾಗುವಾಗ 'ಅಗತ್ಯವಿಲ್ಲದ; ಪ್ರಯೋಜನವಿಲ್ಲದ; ಬೇಕಾಗಿಲ್ಲದ' ಎಂಬ ಮತ್ತೊಂದು ತಿರುಳನ್ನು ಹೊಂದುತ್ತದೆ. ದಂಡ ಎಂಬ ಪದಕ್ಕೆ, ಪಿಂಡ ಎಂಬ ಸಂಸ್ಕೃತ ಪದ ಸೇರಿ 'ದಂಡಪಿಂಡ' ಎಂಬ ಜೋಡುಪದ ರೂಪುಗೊಂಡಿದೆ.

ಸತ್ತ ಹಿರಿಯರನ್ನು ಪೂಜಿಸುವಾಗ ಎಡೆಯಾಗಿ ಇಡುವ ಅಕ್ಕಿ, ಜೀರಿಗೆ, ಅರಿಸಿನವನ್ನು ಬೇಯಿಸಿ ತಯಾರಿಸಿದ ಅನ್ನದ ಉಂಡೆ ಹಾಗೂ ಇನ್ನಿತರ ವಸ್ತುಗಳಿಗೆ 'ಪಿಂಡ' ಎಂದು ಹೆಸರು. ಓದು ಬರಹ ಬಲ್ಲ ಕನ್ನಡಿಗರ ಮಾತುಕತೆಯಲ್ಲಿ ದಂಡಪಿಂಡ ಎಂಬುದು ಕೆಲಸಗೇಡಿತನದ ವ್ಯಕ್ತಿತ್ವಕ್ಕೆ ಒಂದು ರೂಪಕವಾಗಿ ಬಳಕೆಯಾಗುತ್ತಿದೆ.

೧೬. ಈಡಿಯಟ್

ಸಾಮಾಜಿಕ ಒಡನಾಟದ ಮಾತುಕತೆಯಲ್ಲಿ ಅಥವಾ ಕೆಲಸದಲ್ಲಿ ಇತರರೊಡನೆ ಹೇಗೆ ನಡೆದುಕೊಳ್ಳಬೇಕು, ಏನನ್ನು ಮಾಡಬೇಕು ಎಂಬುದನ್ನು ತಿಳಿಯದವನು.

'ಈಡಿಯಟ್' ಎಂಬ ಇಂಗ್ಲಿಶ್ ಪದಕ್ಕೆ "ದಡ್ಡ; ಯಾವುದೇ ಒಂದು ಕಸುಬನ್ನು ಸರಿಯಾಗಿ ಕಲಿಯದವನು; ಕಸುಬಿನಲ್ಲಿ ಕುಶಲತೆಯಿಲ್ಲದವನು; ಸರಿ–ತಪ್ಪುಗಳನ್ನು ಒರೆಹಚ್ಚಿ ನೋಡುವ ಅರಿವಿಲ್ಲದವನು; ಸಹಜವಲ್ಲದ ನಡೆನುಡಿಗಳಿಂದ ಇತರರನ್ನು ನಗಿಸುವವನು" ಎಂಬ ತಿರುಳಿದೆ. ಇಂಗ್ಲಿಶ್ ನುಡಿಯನ್ನು ಬಲ್ಲ

ಕನ್ನಡಿಗರ ಮಾತುಕತೆಯಲ್ಲಿ 'ತಿಳಿಗೇಡಿತನದ ನಡೆನುಡಿಗಳಿಗೆ' ಒಂದು ರೂಪಕವಾಗಿ 'ಈಡಿಯಟ್' ಎಂದು ಉಚ್ಚಾರಣೆಗೊಂಡು ಬಳಕೆಯಾಗುತ್ತಿದೆ.

೧೭. ಉಡಾಪೆ ನನ್ಮಗ

ತಾನು ಆಡುವ ಮಾತು ಮತ್ತು ಮಾಡುವ ಕೆಲಸದಲ್ಲಿ ತುಸುವಾದರೂ ಆಸಕ್ತಿ, ಹೊಣೆಗಾರಿಕೆ, ಮುಂದಾಲೋಚನೆಯನ್ನು ಹೊಂದಿರದೆ, ಎಲ್ಲವನ್ನೂ ಹಗುರವಾಗಿ ತೆಗೆದುಕೊಳ್ಳುವ ವ್ಯಕ್ತಿ.

ಅಸಡ್ಡೆ; ಉದಾಸೀನತೆ ಎಂಬ ತಿರುಳಿನ 'ಉಡಾಫೂ' ಎಂಬ ಪದ ಮರಾಠಿ ನುಡಿ ಸಮುದಾಯದಲ್ಲಿ ಬಳಕೆಯಲ್ಲಿದೆ. ಈ ಸಮುದಾಯದ ಒಡನಾಟದಿಂದ ಕನ್ನಡಿಗರ ಮಾತುಕತೆಗಳಲ್ಲಿ ಬಳಕೆಗೆ ಬಂದಾಗ 'ಉಡಾಪೆ' ಎಂಬ ರೂಪದಲ್ಲಿ ಉಚ್ಚಾರಣೆಗೊಂಡು 'ಹೊಣೆಗಾರಿಕೆಯಿಲ್ಲದ ನಡೆನುಡಿಗಳಿಗೆ' ಒಂದು ರೂಪಕವಾಗಿದೆ.

೧೮. ಉಡಾಳ

ತನ್ನ ಮತ್ತು ಕುಟುಂಬದ ಒಳಿತಿಗಾಗಿ ದುಡಿಮೆಯನ್ನು ಮಾಡದೆ, ಜೀವನದಲ್ಲಿ ಯಾವೊಂದು ಬಗೆಯ ಹೊಣೆಗಾರಿಕೆಯಿಲ್ಲದೆ, ಅಲೆದಾಡುತ್ತಾ ಕಾಲ ಕಳೆಯುವ ವ್ಯಕ್ತಿ.

'ಅಲೆಮಾರಿ; ಹೊಣೆಗೇಡಿ; ಚಂಚಲ ಚಿತ್ತ; ಸೋಮಾರಿ' ಎಂಬ ತಿರುಳುಳ್ಳ 'ಉಡಾಳ್' ಎಂಬ ಪದ ಮರಾಠಿ ನುಡಿ ಸಮುದಾಯದಲ್ಲಿ ಬಳಕೆಯಲ್ಲಿದೆ. ಮರಾಠಿ ಮತ್ತು ಕನ್ನಡ ನುಡಿ ಸಮುದಾಯಗಳ ಒಡನಾಟದಿಂದ ಕನ್ನಡ ಮಾತಿನ ಸಮುದಾಯದಲ್ಲಿ ಬಳಕೆಗೆ ಬಂದಿದೆ.

೧೯. ಉಪ್ಪುರಿಯ

ಯಾವುದೇ ಒಂದು ಮಾತುಕತೆ ಅಥವಾ ವ್ಯವಹಾರ ನಡೆಯುತ್ತಿರುವಾಗ ಇತರರ ಬಗ್ಗೆ ತುಸುವಾದರೂ ಒಲವು, ಆದರ, ತಾಳ್ಮೆ, ಹೊಂದಾಣಿಕೆಯಿಲ್ಲದೆ ಪ್ರತಿ ಗಳಿಗೆಯಲ್ಲೂ ಕೋಪತಾಪದ ನಡೆನುಡಿಗಳಿಂದ ಕೂಡಿರುವ ವ್ಯಕ್ತಿ.

'ಉಪ್ಪು' ಎಂಬ ಪದದೊಡನೆ 'ಬೆಂಕಿಯ ನಾಲಗೆ; ಸುಡುವಿಕೆ' ಎಂಬ ತಿರುಳಿನ 'ಉರಿ' ಎಂಬ ಪದ ಮತ್ತು 'ಅ' ಎಂಬ ಒಟ್ಟು ಸೇರಿ 'ಉಪ್ಪುರಿಯ' ಎಂಬ

ಜೋಡುಪದ ರೂಪುಗೊಂಡಿದೆ. 'ಬೆಂಕಿಯಂತೆ ಸುಡುವವನು; ಆತಂಕ ಆಕ್ರೋಶಗಳಿಂದ ಕೆರಳುವವನು' ಎಂಬ ರೂಪಕದ ತಿರುಳಿನಲ್ಲಿ 'ಉರಿಯ' ಎಂಬ ಹೆಸರು ಪದ ಬಳಕೆಯಾಗಿದೆ.

ಉರಿಯುತ್ತಿರುವ ಬೆಂಕಿಯ ಕೆಂಡಗಳ ಮೇಲೆ ಉಪ್ಪಿನ ಹರಳುಗಳನ್ನು ಹಾಕಿದಾಗ, ಅವು ಪಟಪಟನೆ ಶಬ್ದವನ್ನು ಮಾಡುತ್ತಾ ಎಲ್ಲೆಡೆ ಸಿಡಿಯ ತೊಡಗುತ್ತದೆ. ಈ ಕ್ರಿಯೆಯನ್ನು 'ಸಿಡುಕುತನದ ನಡೆನುಡಿಗಳಿಗೆ' ಒಂದು ರೂಪಕ ವನ್ನಾಗಿ ಮಾಡಿಕೊಂಡು ಮಾತುಕತೆಗಳಲ್ಲಿ ಬಳಸುತ್ತಾರೆ. **"ಅವನ ಮೊಕ ಹೆಂಗೆ ಉಪ್ಪುರೀತಾದೆ ನೋಡು. ಅಂತಾವನ ಜತೇಲಿ ಹೆಂಗೆ ನೀಸೂದು ನೀನೇ ಹೇಳು"** ಎಂಬ ಮಾತುಗಳು ಬಳಕೆಯಲ್ಲಿವೆ.

೨೦. ಉರ್ಮಾರಿ

ಸಿಟ್ಟು ಸಿಡುಕಿನ ನಡೆನುಡಿಗಳಿಂದ ಎಲ್ಲರನ್ನೂ ಗೋಳುಹುಯ್ದುಕೊಳ್ಳುವ ಹೆಂಗಸು.

'ಉರ್ಮಾರಿ' ಎಂಬ ಜೋಡುಪದದಲ್ಲಿ 'ಉರಿಯುವ ಮಾರಿ' ಎಂಬ ಎರಡು ಪದಗಳಿವೆ. ಕನ್ನಡ ನುಡಿ ಸಮುದಾಯದ ಹಳ್ಳಿಗರು ಮಾರಿ ದೇವತೆಯನ್ನು "ಒಲಿದರೆ ಕಾಪಾಡುವ, ಮುನಿದರೆ ಕೊಲ್ಲುವ ಹಾಗೂ ಬಹು ಕೋಪತಾಪಗಳಿಂದ ಕೂಡಿದ ತಾಯಿ" ಎಂದು ನಂಬಿದ್ದಾರೆ. ಜನ ಸಮುದಾಯದ ಸಂಪ್ರದಾಯದ ನಡೆನುಡಿಗಳಲ್ಲಿ ಯಾವುದೇ ಬಗೆಯ ಮುಟ್ಟು ಚಿಟ್ಟು ಇಲ್ಲವೇ ಕುಂದುಕೊರತೆ ಉಂಟಾದಲ್ಲಿ ಕೂಡಲೇ ಉರಿದೇಳುವ ಮಾರಿಯು ಜನಗಳಿಗೆ ದಡಾರ, ಸಿಡುಬು, ಕಾಲರ ಇಲ್ಲವೇ ಪ್ಲೇಗ್ ರೋಗಗಳು ತಗಲುವಂತೆ ಮಾಡಿ, ಒಟ್ಟೊಟ್ಟಾಗಿ ಬಲಿ ತೆಗೆದುಕೊಳ್ಳುತ್ತಾಳೆ ಎಂಬ ಹೆದರಿಕೆಯು ಜನಮನದಲ್ಲಿದೆ. ಮಾರಿ ದೇವತೆಯ ವ್ಯಕ್ತಿತ್ವವನ್ನು ಒಂದು ರೂಪಕವನ್ನಾಗಿ ಮಾಡಿಕೊಂಡು ಈ ಬಯ್ಗುಳವನ್ನು ಕಟ್ಟಲಾಗಿದೆ.

೨೧. ಉರ್ಸಿಂಗಿ

ಯಾವಾಗಲೂ ಸಿಡುಕುತನದ ನಡೆನುಡಿಗಳಿಂದ ಎಲ್ಲರ ಮೇಲೆ ಕೋಪತಾಪ ಗಳನ್ನು ಕಾರುವ ವ್ಯಕ್ತಿ.

'ಉರ್ಸಿಂಗಿ' ಎಂಬುದು ಒಂದು ಬಗೆಯ ಹಾವು. ಸರಸರನೆ ಮರಗಿಡಗಳನ್ನೇರಿ, ಮೇಲಿನಿಂದಲೇ ಬರ್‍ರನೆ ಹಾರಿಕೊಂಡು ನೆಲದತ್ತ ಬಂದಿಳಿಯುವ ಇದರ ಹಾರಾಟ ಹಾಗೂ ಹರಿದಾಟ ತುಂಬಾ ವೇಗವಾಗಿರುತ್ತದೆ. ಉರ್ಸಿಂಗಿ ಹಾವಿನ ಚಲನವಲನ ಗಳನ್ನು ಒಂದು ರೂಪಕವನ್ನಾಗಿ ಮಾಡಿಕೊಂಡು ಈ ಬಯ್ಗುಳವನ್ನು ಕಟ್ಟಲಾಗಿದೆ.

೨೨. ಊಮೆಮಳ್ಳಿ

ಯಾವುದೇ ಒಬ್ಬ ವ್ಯಕ್ತಿಯ ಅಥವಾ ಒಂದು ಸಂಗತಿಯ ಬಗ್ಗೆ ಎಲ್ಲವನ್ನೂ ತಿಳಿದಿದ್ದರೂ, ಏನೊಂದನ್ನು ಅರಿಯದವಳಂತೆ ನಟನೆ ಮಾಡುವ ಹೆಂಗಸು.

'ಮಾತು ಬಾರದ ವ್ಯಕ್ತಿ; ಮೂಗ; ಮೂಗಿ' ಎಂಬ ತಿರುಳಿನ 'ಊಮೆ ಎಂಬ ಪದಕ್ಕೆ 'ದಡ್ಡಿ; ತಿಳಿಗೇಡಿ' ಎಂಬ ತಿರುಳಿನ 'ಮರುಳಿ' ಎಂಬ ಪದವು ಸೇರಿ 'ಊಮೆ ಮರುಳಿ' ಎಂಬ ಜೋಡುಪದ ರೂಪುಗೊಂಡು, ಉಚ್ಚಾರಣೆಯಲ್ಲಿ 'ಊಮೆಮಳ್ಳಿ' ಎಂದಾಗಿದೆ.

ಕಂಡು ಕಾಣದಂತೆ ಇಲ್ಲವೇ ತಿಳಿದು ತಿಳಿಯದಂತೆ ವರ್ತಿಸುವ ಬಗೆಯನ್ನು 'ಜಾಣಪೆದ್ದು' ಎಂದು ಕರೆಯುತ್ತಾರೆ. ಇಂತಹ ಜಾಣಪೆದ್ದಿನ ನಡೆನುಡಿಯುಳ್ಳ ಹೆಂಗಸಿನ ವ್ಯಕ್ತಿತ್ವವನ್ನು ಸೂಚಿಸಲು 'ಊಮೆಮಳ್ಳಿ' ಎಂಬ ಪದ ಬಯ್ಗುಳವಾಗಿ ಬಳಕೆಯಾದಾಗ ರೂಪಕದ ತಿರುಳನ್ನು ಪಡೆಯುತ್ತದೆ.

೨೩. ಊಸರವಳ್ಳಿ

ಸಾಮಾಜಿಕ ವ್ಯವಹಾರದ ಮಾತುಕತೆ ಅಥವಾ ಕೆಲಸದಲ್ಲಿ ತನ್ನದೇ ಆದ ಒಂದು ನಿಲುವಿಲ್ಲದೆ, ಇತರರ ಮರ್ಜಿಗೆ ತಕ್ಕಂತೆ ನಡೆನುಡಿಗಳನ್ನು ಬದಲಾಯಿಸಿಕೊಳ್ಳುವ ವ್ಯಕ್ತಿ.

ಊಸರವಳ್ಳಿ ಎಂಬುದು ಹಲ್ಲಿ, ಉಡ, ಹೆಂಟೆಗೊದ್ದ ಜೀವಿಗಳ ಗುಂಪಿಗೆ ಸೇರಿದ ಒಂದು ಪ್ರಾಣಿ. ಮರಗಿಡದ ಕೊಂಬೆರೆಂಬೆಗಳ ಮೇಲೆ, ಪೊದೆಗಳಲ್ಲಿ ಊಸರವಳ್ಳಿಯು ಹರಿದಾಡುವಾಗ ಹಾವು, ಹದ್ದು, ಗಿಡುಗ, ಕಾಡುಬೆಕ್ಕು ಮುಂತಾದ ಪ್ರಾಣಿಗಳ ಬಾಯಿಗೆ ಬಲಿಯಾಗದಂತಿರಲು, ಇದರ ಮಯ್ಯ ತೊಗಲಿನ ಚಹರೆಯು ಕಪ್ಪು, ಕಂದು, ನೀಲಿ, ಹಸುರು, ಬೂದಿ, ನೇರಳೆ, ಹಳದಿಯ ಬಣ್ಣಗಳಲ್ಲಿ ಬದಲಾಗುತ್ತಿರುತ್ತದೆ.

"ಊಸರವಳ್ಳಿಯ ಮಯ್ಯೊಳಗಿರುವ ಒಂದು ಬಗೆಯ ಹಾರ್ಮೋನಿನ ನೆರವಿನಿಂದ ಬಣ್ಣಗಳು ನಿರಂತರವಾಗಿ ಬದಲಾಗುತ್ತಿರುತ್ತವೆ. ಆದರೆ ಈ ಬದಲಾವಣೆಯು ಉದ್ದೇಶಪೂರ್ವಕವಾಗಿ ನಡೆಯುವುದಿಲ್ಲ. ನಿಸರ್ಗದ ವಾತಾವರಣದಲ್ಲಿ ಊಸರ ವಳ್ಳಿಯು ಹಾದುಹೋಗುತ್ತಿರುವಾಗ, ಆಯಾಯ ಪರಿಸರದಲ್ಲಿನ ವಸ್ತುಗಳ ಬಣ್ಣಕ್ಕೆ ತಕ್ಕಂತೆ ಸಹಜವಾಗಿ ಇದರ ಮಯ್ ಬಣ್ಣ ಬದಲಾಗುತ್ತಿರುತ್ತದೆ" ಎಂಬುದನ್ನು ಜೀವ ವಿಜ್ಞಾನಿಗಳು ಗುರುತಿಸಿದ್ದಾರೆ. ಕನ್ನಡಿಗರ ಮಾತುಕತೆಯಲ್ಲಿ ಊಸರವಳ್ಳಿಯ ಬಣ್ಣ ಬದಲಾಗುವ ಕ್ರಿಯೆಯು "ತನ್ನ ಉಳಿವಿಗಾಗಿ ಸಮಯಕ್ಕೆ ತಕ್ಕಂತೆ ವರ್ತಿಸುವ

ಮತ್ತು ನಂಬಿಕೆಗೆ ತಕ್ಕುದಲ್ಲದ ನಡೆನುಡಿಗಳಿಗೆ" ಒಂದು ರೂಪಕವಾಗಿ ಬಳಕೆಯಾಗುತ್ತಿದೆ. ಹಳ್ಳಿಗಾಡಿನ ಜನರ ಬಾಯಲ್ಲಿ ಊಸರವಳ್ಳಿ ಎಂದು ಕರೆಯುವ ಜೀವಿಯನ್ನು, ಅಕ್ಷರವಂತರಾದ ಕನ್ನಡಿಗರು 'ಗೋಸುಂಬೆ' ಎಂಬ ಹೆಸರಿನಿಂದಲೂ ಗುರುತಿಸುತ್ತಾರೆ.

೨೪. ಎಂಜ್ಲು ನನ್ಮಗ

ಇತರರು ಹಾಕಿದ ಅನ್ನ, ನೀಡಿದ ಹಣ ಮತ್ತು ಕೊಟ್ಟ ವಸ್ತುಗಳಿಂದಲೇ ಜೀವನ ಮಾಡುತ್ತಿರುವ ಹಾಗೂ ಸಾಮಾಜಿಕವಾಗಿ ಒಳ್ಳೆಯ ವ್ಯಕ್ತಿತ್ವವಿಲ್ಲದವನು.

ಜನರು ಉಗಿದ ಎಂಜಲನ್ನು ಇಲ್ಲವೇ ತಿಂದು ಮಿಕ್ಕಿದ ಉಣಿಸನ್ನು ತಿನ್ನುವ ಕಾಗೆ, ನಾಯಿ ಮತ್ತು ಇತರ ಪ್ರಾಣಿಗಳ ವರ್ತನೆಯನ್ನು ಒಂದು ರೂಪಕವನ್ನಾಗಿ ಮಾಡಿಕೊಂಡು ಈ ಬಯ್ಗುಳವನ್ನು ಕಟ್ಟಲಾಗಿದೆ. **"ಎಂಜ್ಲು ತಿನ್ನು ಬಡ್ಡಿಮಗ್ನೆ; ಎಂಜ್ಲುಗುಟ್ಟಿದ ಸೂಳೆಮಗ; ಎಂಜ್ಲುಗೆ ಬಾಯ್ಬಾಯ್ ಬಿಡು ನನ್ಮಕ್ಳು"** ಎಂಬ ಬಯ್ಗುಳಗಳು ಬಳಕೆಯಲ್ಲಿವೆ.

೨೫. ಎಮ್ಗುಟ್ಟಿದ ನನ್ಮಗ

ಕಯ್ಗೊಂಡ ಯಾವುದೇ ಒಂದು ಕೆಲಸವನ್ನು ಒಲವಿನಿಂದ, ಚುರುಕುತನದಿಂದ, ಚಟುವಟಿಕೆಯಿಂದ ಮಾಡಿ ಮುಗಿಸದೆ, ಇತರರ ಟೀಕೆಟಿಪ್ಪಣಿಗಳಿಂದ ಕಿಂಚಿತ್ತಾದರೂ ಅಳುಕದೆ, ಮುಜುಗರಪಟ್ಟುಕೊಳ್ಳದೆ, ಕೋಪತಾಪಗಳಿಂದ ಕುದಿಯದೆ ತನ್ನ ಪಾಡಿಗೆ ತಾನು ಸುಮ್ಮನಿರುವ ವ್ಯಕ್ತಿ.

"ಎಮ್ಮೆಗೆ ಹುಟ್ಟಿದ" ಎಂಬ ಪದಕಂತೆಯಲ್ಲಿರುವ ಎಮ್ಮೆಯು ಹಾಲು ಕೊಡುವ ಒಂದು ಸಾಕುಪ್ರಾಣಿ. ಮಂದಗತಿಯ ನಡಿಗೆಯಿಂದ ಕೂಡಿದ ಎಮ್ಮೆಯ ಚಹರೆಗಳನ್ನು ಕನ್ನಡ ನುಡಿ ಸಮುದಾಯದ ಮಾತುಕತೆಗಳಲ್ಲಿ "ಜಡತನ; ಆಲಸ್ಯ; ಸೋಮಾರಿತನದ ನಡೆನುಡಿಗಳಿಗೆ" ಒಂದು ರೂಪಕವಾಗಿ ಬಳಸುತ್ತಾರೆ.

೨೬. ಎರ್ಡು ತಲೆ ಹಾವು

ಹಗೆತನವುಳ್ಳ ಇಬ್ಬರ ಕಡೆಯೂ ಗೆಳೆಯನಂತೆ ನಡೆದುಕೊಳ್ಳುತ್ತಾ, ಅವರ ಗುಟ್ಟನ್ನು ಇವರಿಗೆ, ಇವರ ಗುಟ್ಟನ್ನು ಅವರಿಗೆ ತಿಳಿಸಿ, ಪರಸ್ಪರ ಇಬ್ಬರನ್ನೂ ಎತ್ತಿಕಟ್ಟುವ ವ್ಯಕ್ತಿ.

ನಿಸರ್ಗದಲ್ಲಿ ಕಾಣುವ ಜೀವಜಂತುಗಳ ಆಕಾರ, ಬಣ್ಣ ಹಾಗೂ ವರ್ತನೆಗಳನ್ನು ರೂಪಕಗಳನ್ನಾಗಿ ಮಾಡಿಕೊಂಡು ಈ ಬಗೆಯ ಆರೋಪದ ಬಯ್ಗುಳಗಳನ್ನು ಕನ್ನಡ ನುಡಿ ಸಮುದಾಯದಲ್ಲಿ ಬಳಸುತ್ತಾರೆ. 'ಮಣ್ಣಾವು' ಎಂಬ ಹೆಸರಿನ ಹಾವಿನ ಬಾಲದ ತುದಿಯು ಮೊನಚಾಗಿರುವುದರ ಬದಲು ಮೊಂಡಾಗಿ ದಪ್ಪವಾಗಿದ್ದು, ನೋಡುವವರ ಕಣ್ಣಿಗೆ ತಲೆಯಂತೆ ಕಾಣಿಸುತ್ತದೆ. ಇದನ್ನೇ ಮತ್ತೊಂದು ತಲೆಯೆಂದು ತಪ್ಪಾಗಿ ತಿಳಿಯಲಾಗಿದೆ.

೨೭. ಏಳ್ ತಿಂಗಳ್ಗೆ ಹುಟ್ಟೋದೇನು

ಸರಿ ತಪ್ಪುಗಳ ವಿವೇಚನೆಯಿಲ್ಲದೆ ಮಾತನಾಡುವ ಇಲ್ಲವೇ ಕೆಲಸವನ್ನು ಕಯ್ಗೊಂಡು ಎಲ್ಲವನ್ನೂ ಹದಗೆಡಿಸುವ ವ್ಯಕ್ತಿ.

ತಾಯಿಯ ಹೊಟ್ಟೆಯಲ್ಲಿ ಒಂಬತ್ತು ತಿಂಗಳ ಕಾಲ ಚೆನ್ನಾಗಿ ರೂಪುಗೊಂಡು ಬೆಳೆದು ಹುಟ್ಟಬೇಕಾಗಿರುವ ಮಗುವು ಏಳು ತಿಂಗಳಿಗೆ ಹುಟ್ಟಿದರೆ, ಅದರ ಮಯ್ ಮನ ಬೆಳವಣಿಗೆಯು ಮೊಟಕುಗೊಳ್ಳುವುದೆಂಬ ಸಂಗತಿಯೊಂದು ಕನ್ನಡ ಜನಪದರ ಮನದಲ್ಲಿ ನೆಲೆಗೊಂಡಿದೆ. ಸಾಮಾಜಿಕ ವ್ಯವಹಾರಗಳಲ್ಲಿ ಇತರರ ಸಂಗಡ ಹೇಗೆ ನಡೆದುಕೊಳ್ಳಬೇಕೆಂಬ ಅರಿವು, ಹೊಣೆಗಾರಿಕೆ, ತಾಳ್ಮೆಯಿಲ್ಲದ ವ್ಯಕ್ತಿಯ ಆತುರತನದ ನಡೆನುಡಿಗಳನ್ನು ಸೂಚಿಸಲು ಇದನ್ನು ಒಂದು ರೂಪಕವಾಗಿ ಮಾತುಕತೆಯಲ್ಲಿ ಬಳಸುತ್ತಾರೆ. **"ಲೇ.... ಹಿಂದೆಮುಂದೆ ಸರಿಯಾಗಿ ತಿಳ್ಕೊಂಡು ಮಾತಾಡು.. ಏಳ್ ತಿಂಗಳ್ಗೆ ಹುಟ್ಟೋದೇನಂಗೆ ಆಡ್ಬೇಡ"** ಎಂಬ ಮಾತು ಬಳಕೆಯಲ್ಲಿದೆ.

೨೮. ಕಂಜೂಸ್ ನನ್ಮಗ

ಇರುವ ಸಂಪತ್ತಿನಲ್ಲಿ ಬಿಡಿಗಾಸನ್ನು ಬಿಚ್ಚದೆ, ತಾನೂ ಸರಿಯಾಗಿ ಉಣ್ಣದೆ ತಿನ್ನದೆ, ತನ್ನ ಹೆಂಡತಿ ಮಕ್ಕಳನ್ನು ಸರಿಯಾಗಿ ನೋಡಿಕೊಳ್ಳದೆ ಹಾಗೂ ಇತರರ ಒಳಿತಿಗಾಗಿ ಯಾವೊಂದು ಬಗೆಯ ನೆರವನ್ನು ನೀಡದೆ, ಗಳಿಸಿದ ಹಣವನ್ನೆಲ್ಲಾ ಕೂಡಿಡುವ ವ್ಯಕ್ತಿ.

ಕಂಜೂಸ್ ಎಂಬ ಪದ 'ಜಿಪುಣ; ಜುಗ್ಗ; ಜೀನ' ಎಂಬ ತಿರುಳಿನಲ್ಲಿ ಮರಾಠಿ ಮತ್ತು ಉರ್ದು ನುಡಿ ಸಮುದಾಯಗಳಲ್ಲಿ ಬಳಕೆಯಲ್ಲಿದೆ. ಈ ನುಡಿ ಸಮುದಾಯಗಳ ಒಡನಾಟದಿಂದ ಕನ್ನಡ ನುಡಿ ಸಮುದಾಯದ ಮಾತುಕತೆಗಳಲ್ಲಿ ಬಳಕೆಗೆ ಬಂದಿದೆ.

೨೯. ಕಂತ್ರಿ ನನ್ಮಗ

ಸಾಲ್ಕು ಜನ ಒಪ್ಪುವಂತಹ ಒಳ್ಳೆಯ ನಡೆನುಡಿಗಳಿಲ್ಲದ ಹಾಗೂ ಯಾವುದೇ ಒಂದು ಕೆಲಸವನ್ನು ಸರಿಯಾಗಿ ಮಾಡುವ ತಿಳುವಳಿಕೆಯಿಲ್ಲದ ವ್ಯಕ್ತಿ.

'ದೇಶ, ಹಳ್ಳಿಗಾಡು, ವ್ಯಕ್ತಿಯ ಹುಟ್ಟಿನ ನೆಲೆ' ಎಂಬ ತಿರುಳಿನಲ್ಲಿ ಬಳಕೆಯಾಗುತ್ತಿರುವ 'ಕಂಟ್ರಿ' ಎಂಬ ಇಂಗ್ಲಿಶ್ ಪದವು ಕನ್ನಡ ನುಡಿ ಸಮುದಾಯದಲ್ಲಿ ಬಳಕೆಗೆ ಬಂದಾಗ, ಉಲಿ ವ್ಯತ್ಯಾಸಗೊಂಡು 'ಕಂತ್ರಿ' ಎಂದು ಉಚ್ಚಾರಗೊಳ್ಳುವುದರ ಜತೆಗೆ ತಿರುಳಿನಲ್ಲಿಯೂ ಬದಲಾಗಿದೆ. **"ಕಂತ್ರಿ ಕೆಲಸ; ಕಂತ್ರಿ ಬುದ್ಧಿ; ಕಂತ್ರಿ ಜನ"** ಎಂಬ ಪದಕಂತೆಗಳು ಕನ್ನಡಿಗರ ಮಾತಿನ ಸನ್ನಿವೇಶಗಳಲ್ಲಿ ಬಳಕೆಯಲ್ಲಿವೆ. ಅರಾಬಿಕ್, ಪರ್ಶಿಯನ್, ಮರಾಠಿ, ಉರ್ದು ಮತ್ತು ಇಂಗ್ಲಿಶ್ ನುಡಿಗಳಿಂದ ಕನ್ನಡ ನುಡಿ ಸಮುದಾಯದಲ್ಲಿ ಬಳಕೆಗೆ ಬಂದ ಪದಗಳು ಕೆಲವೊಮ್ಮೆ ಬೇರೊಂದು ಬಗೆಯ ತಿರುಳಿನಲ್ಲಿಯೂ ಬಳಕೆಗೊಳ್ಳುತ್ತವೆ.

೩೦. ಕಚಡಾ ನನ್ಮಗ

ಸಾಮಾಜಿಕ ಒಡನಾಟದ ಮಾತುಕತೆ ಅಥವಾ ಕೆಲಸದಲ್ಲಿ ಕೊಳಕುತನದ ನಡೆನುಡಿಯಿಂದ ಅಂದರೆ ಕೆಟ್ಟ ಮಾತು ಮತ್ತು ಕೀಳು ವರ್ತನೆಯಿಂದ ಎಲ್ಲವನ್ನೂ ಹಾಳು ಮಾಡುವವನು.

'ಕೊಳಕಾದುದು; ಹೊಲಸಾದುದು; ಹೊರಗೆ ಎಸೆಯುವಂತಹುದು' ಎಂಬ ತಿರುಳಿನ 'ಕಚಡಾ' ಎಂಬ ಪದ ಉರ್ದು, ಮರಾಠಿ, ಹಿಂದಿ ನುಡಿ ಸಮುದಾಯಗಳಲ್ಲಿ ಬಳಕೆಯಲ್ಲಿದೆ. ಈ ನುಡಿ ಸಮುದಾಯಗಳ ಒಡನಾಟದಿಂದ ಕನ್ನಡದಲ್ಲಿ ಬಳಕೆಗೆ ಬಂದಾಗ "ಎಲ್ಲವನ್ನೂ ಹದಗೆಡಿಸುವ ನಡೆನುಡಿಗಳಿಗೆ" ಒಂದು ರೂಪಕವಾಗಿದೆ.

೩೧. ಕಚ್ಚೆಗಳ್ಳ

ಅನೇಕ ಹೆಂಗಸರೊಡನೆ ಕಾಮದ ನೆಂಟನ್ನು ಹೊಂದಿರುವವನು.

'ಕಚ್ಚೆ' ಮತ್ತು 'ಕಳ್ಳ' ಎಂಬ ಎರಡು ಪದಗಳ ಕೂಡುವಿಕೆಯಿಂದ 'ಕಚ್ಚೆಗಳ್ಳ' ಎಂಬ ಪದ ರೂಪುಗೊಂಡಿದೆ. ಪಂಚೆ ಇಲ್ಲವೇ ಸೀರೆಯನ್ನು ತೊಡೆಯ ಎಡೆಯಿಂದ ಹಾಯಿಸಿ ನಡುವಿಗೆ ಕಟ್ಟಿಕೊಂಡಾಗ ಅದು 'ಕಚ್ಚೆ' ಎನಿಸಿಕೊಳ್ಳುತ್ತದೆ. ಈ ಪದಕ್ಕೆ "ಹೆಣ್ಣು ಗಂಡಿನ ನಡುವಣ ಕಾಮದ ನೆಂಟು" ಎಂಬ ಮತ್ತೊಂದು ತಿರುಳಿದೆ.

"ಕಯ್ಯಿ ಬಾಯಿ ಕಚ್ಚೆ ಸರಿಯಾಗಿರುವವರನ್ನು ಯಾರು ಏನೂ ಮಾಡೋಕಾ ಗೊಲ್ಲ" ಎಂಬ ಮಾತು ಕನ್ನಡ ನುಡಿ ಸಮುದಾಯದಲ್ಲಿ ಬಳಕೆಯಲ್ಲಿದೆ.

ಇದೇ ತಿರುಳನ್ನು ಹೊಂದಿರುವ "ಕಚ್ಚರ್ಕ" ಎಂಬ ಪದವೂ ಬಳಕೆಯಲ್ಲಿದೆ. 'ಕಚ್ಚೆ' ಮತ್ತು 'ಹರುಕ' ಎಂಬ ಪದಗಳ ಜೋಡಣೆಯಿಂದಾಗಿದೆ.

೩೨. ಕದೀಮ

ಇತರರ ಗಂಟನ್ನು ದೋಚುವುದರಲ್ಲಿ ನಿಸ್ಸೀಮನಾದವನು ಇಲ್ಲವೇ ಯಾವುದೇ ಒಂದು ಕೆಲಸವನ್ನು ಮಾಡಿ ಮುಗಿಸಲು ಏನನ್ನು ಬೇಕಾದರೂ ಮಾಡಲು ಹೇಸದವನು, ಹಿಂಜರಿಯದವನು.

'ಹಳೆಯದು, ಹಿಂದಿನದು, ಪುರಾತನವಾದುದು' ಎಂಬ ತಿರುಳುಳ್ಳ 'ಕದೀಮ್' ಎಂಬ ಅರಾಬಿಕ್ ಪದವು ಮರಾಠಿ ಮತ್ತು ಉರ್ದು ನುಡಿ ಸಮುದಾಯಗಳಲ್ಲಿ 'ನುರಿತವನು; ಚೆನ್ನಾಗಿ ತಿಳಿದವನು' ಎಂಬ ತಿರುಳಿನ ಜತೆಗೆ, "ಕೆಟ್ಟ ಕೆಲಸಗಳನ್ನು ಮಾಡಲು ಹಿಂಜರಿಯದವನು" ಎಂಬ ಮತ್ತೊಂದು ತಿರುಳನ್ನು ಹೊಂದಿ ಬಳಕೆ ಯಾಗುತ್ತಿದೆ. ಈ ಎರಡು ನುಡಿ ಸಮುದಾಯಗಳ ಒಡನಾಟದಿಂದ ಕನ್ನಡ ನುಡಿ ಸಮುದಾಯದಲ್ಲಿ ಬಳಕೆಗೆ ಬಂದಿದೆ.

೩೩. ಕಬರ್ಗೇಡಿ

ಆಡುವ ಮಾತು ಮತ್ತು ಮಾಡುವ ಕೆಲಸದಲ್ಲಿ ಯಾವುದೇ ಬಗೆಯ ಎಚ್ಚರ ವಾಗಲೀ ಅಥವಾ ಹೊಣೆಗಾರಿಕೆಯಾಗಲೀ ಇಲ್ಲದ ವ್ಯಕ್ತಿ.

'ತಿಳುವಳಿಕೆ; ಅರಿವು' ಎಂಬ ತಿರುಳಿನ 'ಖಬರ್' ಎಂಬ ಅರಾಬಿಕ್ ಪದದೊಡನೆ 'ಅಳಿವು; ಹಾನಿ; ನಾಶ" ಎಂಬ ತಿರುಳಿನ 'ಕೇಡು' ಎಂಬ ಕನ್ನಡ ಪದ ಮತ್ತು 'ಇ' ಎಂಬ ಕನ್ನಡದ ಒಟ್ಟು ಸೇರಿ 'ಖಬರ್ಗೇಡಿ' ಎಂಬ ಪದ ರೂಪುಗೊಂಡಿದೆ. ಉರ್ದು ನುಡಿ ಸಮುದಾಯದ ಒಡನಾಟದಿಂದ ಕನ್ನಡದಲ್ಲಿ ಬಳಕೆಗೆ ಬಂದು, ಬಡಗಣ ಕರ್ನಾಟಕದ ಕನ್ನಡಿಗರ ಮಾತುಕತೆಯಲ್ಲಿ 'ಕಬರ್ಗೇಡಿ' ಎಂದು ಉಚ್ಚಾರಣೆಗೊಂಡು, "ಬೇಜವಾಬ್ದಾರಿತನದ ನಡೆನುಡಿ"ಗಳಿಗೆ ಒಂದು ರೂಪಕವಾಗಿ ಬಳಕೆಯಾಗುತ್ತದೆ. ಇದೇ ಬಗೆಯ ಪದರಚನೆಯುಳ್ಳ 'ಮರ್‍ಯಾದೆಗೇಡಿ; ಲಜ್ಜೆಗೇಡಿ' ಎಂಬ ಬಯ್ಗುಳಗಳು ಬೇರೆ ಬೇರೆ ತಿರುಳುಗಳಲ್ಲಿ ಬಳಕೆಯಲ್ಲಿವೆ.

೩೫. ಕರಿ ಮುಂಡೆ

ಕಪ್ಪನೆಯ ಮಯ್ ಬಣ್ಣವುಳ್ಳ ಹೆಂಗಸು.

ಕನ್ನಡ ನುಡಿ ಸಮುದಾಯದಲ್ಲಿ ವ್ಯಕ್ತಿಗಳ ಮಯ್‌ಕಟ್ಟು ಮತ್ತು ಬಣ್ಣದ ಬಗ್ಗೆ ಹಲವು ಬಗೆಯ ನಿಲುವುಗಳಿವೆ. ಬೆಳ್ಳಗೆ ಎತ್ತರವಾಗಿದ್ದು, ಕಣ್ಣು ಕಿವಿ ಮೂಗು ನೆಟ್ಟಗೆ ನೇರಕ್ಕಿರುವ ವ್ಯಕ್ತಿಗಳ ಬಗ್ಗೆ ಮೆಚ್ಚುಗೆಯನ್ನು ಮತ್ತು ಕಪ್ಪಗೆ ಕುಳ್ಳಾಗಿದ್ದು, ಅತಿ ದಪ್ಪಗೆ ಇಲ್ಲವೇ ಅತಿ ಸಣ್ಣಗಿದ್ದು, ಕಣ್ಣು ಕಿವಿ ಮೂಗು ಕಯ್ ಕಾಲುಗಳ ಆಕಾರದಲ್ಲಿ ಏನಾದರೂ ಕುಂದುಗಳು ಕಂಡು ಬಂದರೆ ಅಸಡ್ಡೆಯನ್ನು ತಾಳುತ್ತಾರೆ. ಇತರರ ನಡೆನುಡಿಗಳಿಂದ ತಮಗೆ ಉಂಟಾಗಿರುವ ಬೇಸರ, ಕೋಪ, ನಿರಾಶೆ ಇಲ್ಲವೇ ತಿರಸ್ಕಾರವನ್ನು ಹೊರಹಾಕುವ ಮಾತಿನ ಸನ್ನಿವೇಶಗಳಲ್ಲಿ ಮಯ್ಯಿನ ಚಹರೆಗಳನ್ನೇ ನೇರವಾಗಿ ಹೆಸರಿಸಿ ಬಯ್ಯುತ್ತಾರೆ. ಬಯ್ಯುವಾಗ **"ನನ್ಮಗ್ನೆ; ನನ್ಸವ್ತಿ; ಬಡ್ಡತ್ತದೆ"** ಮುಂತಾದ ಬಯ್ಗುಳದ ಪದಗಳನ್ನು ಜತೆಗೂಡಿಸಿ ಬಯ್ಯುವಿಕೆಯ ಮೊನಚನ್ನು ಹೆಚ್ಚಿಸುತ್ತಾರೆ. **"ದಡಗ್ ನನ್ಸವ್ತಿ; ಕುಳ್ ನನ್ಮಗ್ನೆ; ಗೂನ್ ಬಡ್ಡತ್ತದೆ; ಮೆಡ್ಡಗಣ್ ನನ್ಸವ್ತಿ; ಗುಳ್ಗಣ್ ಮುಂಡೆ"** ಮುಂತಾದ ಹತ್ತಾರು ಬಗೆಯ ಮಯ್ ಚಹರೆಗಳನ್ನು ಒಳಗೊಂಡ ಬಯ್ಗುಳಗಳು ಬಳಕೆಯಲ್ಲಿವೆ.

೩೬. ಕರ್ ನಾಲ್ಗ್ಯಾ

ನಾಲಗೆಯಲ್ಲಿ ಕಪ್ಪು ಕಲೆ ಉಳ್ಳವನನ್ನು ಬಡಗಣ ಕರ್ನಾಟಕದ ಕನ್ನಡ ಒಳನುಡಿಯಲ್ಲಿ 'ಕರ್ ನಾಲ್ಗ್ಯಾ' ಎಂದು ಕರೆಯುತ್ತಾರೆ.

ಈ ಬಗೆಯ ನಾಲಗೆಯುಳ್ಳವನು ಆಡುವ ಮಾತುಗಳು ಇಲ್ಲವೇ ಹಾಕುವ ಶಾಪದ ನುಡಿಗಳು ಕೆಲವೊಮ್ಮೆ ಜೀವನದಲ್ಲಿ ನಿಜವಾಗುತ್ತವೆ ಎಂಬ ಆತಂಕ ಕನ್ನಡ ನುಡಿ ಸಮುದಾಯದಲ್ಲಿದೆ. ಆದುದರಿಂದ ಇಂತಹವರೊಡನೆ ಜಗಳ ಕಾಯಲು ಇಲ್ಲವೇ ಹಗೆತನ ಕಟ್ಟಿಕೊಳ್ಳಲು ಜನರು ಹಿಂಜರಿಯುತ್ತಾರೆ. ತೆಂಕಣ ಕರ್ನಾಟಕದ ಒಳನುಡಿಯಲ್ಲಿ ನಾಲಗೆ ಇಲ್ಲವೇ ಮಯ್ಯ ತೊಗಲಿನಲ್ಲಿ ಹುಟ್ಟಿನಿಂದಲೇ ಬಂದಿರುವ ಕಪ್ಪು ಕಲೆಯನ್ನು 'ಮತ್ತಿ' ಎಂದು ಕರೆಯುತ್ತಾರೆ. "ಮತ್ ನಾಲ್ಗೆ ಮುಂಡೆ ಕೆಣಕಬ್ಯಾಡ. ಅಸವಲ್ಲದ ಗಳ್ಗೇಲಿ ಅವಳಾಡಿದ್ದು ತಟ್ಟುಬುಡ್ತದೆ" ಎಂಬ ಎಚ್ಚರಿಕೆಯ ಮಾತು ಬಳಕೆಯಲ್ಲಿದೆ. ವ್ಯಕ್ತಿಯ ಮಯ್ಯಿನ ಚಹರೆಗಳಲ್ಲಿ ಕೆಲವನ್ನು ಕೆಟ್ಟದ್ದೆಂದು ಗುರುತಿಸಿ, ಅದನ್ನು ಎತ್ತಿ ತೆಗಳುವಾಗ, ಈ ಬಗೆಯ ಪದಗಳನ್ನು ಆರೋಪದ ಬಯ್ಗುಳಗಳಾಗಿ ಬಳಸುತ್ತಾರೆ.

೩೭. ಕರುಕ್ಲು ನನ್ಮಗ

ಯಾರೊಡನೆಯೂ ಒಲವು ನಲಿವಿನಿಂದ ಒಡನಾಡದ, ಒಳ್ಳೆಯ ನಂಟನ್ನು ಹೊಂದದ, ಇತರರ ನೋವು ನಲಿವುಗಳಿಗೆ ಮಿಡಿಯದ ಗಡಸು ಮನದ ವ್ಯಕ್ತಿ.

ಬೆಂಕಿಯಲ್ಲಿ ಸುಟ್ಟು ಅಥವಾ ಕುದಿಯುವ ಎಣ್ಣೆಯಲ್ಲಿ ಬೆಂದು ಕರ್‍ರಗೆ ಗಟ್ಟಿಯಾಗಿರುವ ವಸ್ತುವನ್ನು 'ಕರುಕ್ಲು' ಎಂದು ಕರೆಯುತ್ತಾರೆ. 'ಕರಿಯ ಬಣ್ಣ' ಎಂಬ ತಿರುಳಿನ 'ಕರ್' ಎಂಬ ಪದಕ್ಕೆ 'ಕ್' ಮತ್ತು 'ಅಲು' ಎಂಬ ಒಟ್ಟುಗಳು ಸೇರಿ ರೂಪುಗೊಂಡ 'ಕರಕ್ಲು' ಎಂಬ ಪದ ಮಾತಿನಲ್ಲಿ ಬಳಕೆಯಾಗುವಾಗ 'ಕರುಕ್ಲು' ಎಂದು ಉಚ್ಚಾರಣೆಗೊಂಡಿದೆ. ಜನಗಳೊಡನೆ ಬೆರತು ಒಂದಾಗಿ ಬಾಳದೆ, ಮುದುಡಿದ ಮನದಿಂದ ಬಾಳುತ್ತಿರುವ ವ್ಯಕ್ತಿಯ ಸಾಮಾಜಿಕ ವರ್ತನೆಯನ್ನು ಸೂಚಿಸಲು 'ಕರುಕ್ಲು' ಎಂಬ ವಸ್ತುವನ್ನು ಒಂದು ರೂಪಕವಾಗಿ ಬಳಸುತ್ತಾರೆ.

೩೮. ಕಲ್ಗಚ್ ನನ್ಸವ್ತಿ

ಕೆಟ್ಟ ನಡೆನುಡಿಗಳಿಂದ ಹಾಗೂ ಕೊಳಕುತನದಿಂದ ಕೂಡಿದ ಹೆಂಗಸು.

'ಕಲಗಚ್ಚು' ಎಂಬ ಜೋಡುಪದದಲ್ಲಿ 'ಕಲಕಿದ ಕರ್ಚು' ಎಂಬ ಪದಗಳಿವೆ. 'ಕಲಕು' ಎಂದರೆ 'ಕದಡು; ಬೆರಸು.' 'ಕರ್ಚು' ಎಂದರೆ 'ತೊಳೆಯುವಿಕೆ'. ಅಡುಗೆ ಮನೆಯಲ್ಲಿ ಅಕ್ಕಿ ಮೊದಲಾದ ದಿನಸಿಗಳನ್ನು, ಕಾಳುಕಡ್ಡಿಗಳನ್ನು, ಕಾಯಿಪಲ್ಲೆ ಗಳನ್ನು, ಅಡುಗೆ ಮಾಡಿದ ಪಾತ್ರೆ ಪಡಗಗಳನ್ನು ಮತ್ತು ಉಂಡ ತಟ್ಟೆಗಳನ್ನು ತೊಳೆದ ನೀರನ್ನು ಮನೆಯ ಹಿಂದಿರುವ ತೊಟ್ಟಿಗೆ ಸುರಿಯುತ್ತಾರೆ. ಈ ರೀತಿ ತೊಳೆದು ಬಳಿದು ಹಾಕಿದ ಮುಸುರೆ ನೀರನ್ನು ಕಲಗಚ್ಚು ಎಂದು ಕರೆಯುತ್ತಾರೆ. ಇದನ್ನು ಒಂದು ರೂಪಕವಾಗಿ ಮಾಡಿಕೊಂಡು ಈ ಬಯ್ಗುಳವನ್ನು ಕಟ್ಟಲಾಗಿದೆ. ಕಲಗಚ್ಚಿನಿಂದ ತುಂಬಿರುವ ತೊಟ್ಟಿಯನ್ನು 'ಕೊಳಕುತನ ಮತ್ತು ಹಾದರತನ'ಕ್ಕೆ ಮತ್ತೊಂದು ರೂಪಕವನ್ನಾಗಿ ಮಾಡಿಕೊಂಡು **'ತೊಟ್ಟಿ ನನ್ಮಗ; ತೊಟ್ಟಿ ಮುಂಡೆ'** ಎಂಬ ಬಯ್ಗುಳಗಳನ್ನು ಬಳಸುತ್ತಾರೆ.

೩೯. ಕಿತಾಪತಿ ನನ್ಮಗ

ಚೆನ್ನಾಗಿ ನಡೆಯುತ್ತಿದ್ದ ಯಾವುದೇ ಒಂದು ಕೆಲಸವನ್ನು ಇಲ್ಲವೇ ವ್ಯಕ್ತಿಗಳ ನಡುವಣ ಒಳ್ಳೆಯ ನಂಟನ್ನು ಚಾಡಿ ಮಾತು, ಕಟ್ಟುಕತೆ, ಕುತಂತ್ರದ ನಡೆನುಡಿಗಳಿಂದ ಹದಗೆಡಿಸಿ ಹಾಳು ಮಾಡುವ ವ್ಯಕ್ತಿ.

ಮರಾಠಿ ನುಡಿಯಲ್ಲಿ 'ಕಿತಾಬತೀ' ಎಂಬ ಪದಕ್ಕೆ 'ಇತರರ ವ್ಯವಹಾರಗಳಲ್ಲಿ ತಲೆ ಹಾಕುವಿಕೆ; ಕಿಡಿಗೇಡಿತನ' ಎಂಬ ತಿರುಳಿದೆ. ಮರಾಠಿ ನುಡಿ ಸಮುದಾಯದ ಒಡನಾಟದಿಂದ ಕನ್ನಡಿಗರಲ್ಲಿ ಈ ಪದ ಬಳಕೆಗೆ ಬಂದಾಗ 'ಕಿತಾಪತಿ' ಎಂಬ ರೂಪದಲ್ಲಿ ಉಚ್ಚಾರಣೆಗೊಂಡಿದೆ.

೪೦. ಕಿತ್ತೋದ್ ನನ್ಮಗ

ಕುಟುಂಬದ ಸಂಪ್ರದಾಯಗಳನ್ನು ಆಚರಿಸದೆ, ಗುರುಹಿರಿಯರ ಮಾತುಗಳನ್ನು ಲೆಕ್ಕಿಸದೆ, ಸಮಾಜದ ಕಟ್ಟುಪಾಡುಗಳಿಗೆ ಸೊಪ್ಪುಹಾಕದೆ ತನ್ನ ಮನಸ್ಸಿಗೆ ಬಂದಂತೆ ನಡೆದುಕೊಳ್ಳುವ ವ್ಯಕ್ತಿ.

'ಕಿತ್ತು ಹೋದ' ಎಂಬ ಪದಕಂತೆಯು ಕನ್ನಡಿಗರ ಮಾತುಕತೆಯಲ್ಲಿ ಒಂದು ರೂಪಕವಾಗಿ ಬಳಕೆಯಾದಾಗ "ಯಾರೊಬ್ಬರ ಅಥವಾ ಯಾವುದೊಂದರ ಹತೋಟಿಗೂ ಒಳಗಾಗದೆ, ಸಮಾಜ ಒಪ್ಪಿತ ನಡೆನುಡಿಗಳಿಗೆ ತಲೆಬಾಗದೆ, ಸರೀಕರ ಮುಂದೆ ಮಾನಮರ್ಯಾದೆಗಳನ್ನು ಉಳಿಸಿಕೊಂಡು ಬಾಳಬೇಕೆಂಬ ಎಚ್ಚರ ವಿಲ್ಲದೆ, ಯಾವುದೇ ಬಗೆಯ ಕೀಳು ಕೆಲಸವನ್ನು ಮಾಡಲು ಹಿಂಜರಿಯದ ನಡೆನುಡಿ ಗಳನ್ನು" ಸೂಚಿಸುತ್ತದೆ. ಇದೇ ಬಗೆಯ ನಡೆನುಡಿಯುಳ್ಳ ಹೆಂಗಸನ್ನು 'ಕಿತ್ತೋದ್ ನನ್ನ ಸವ್ತಿ' ಎಂದು ಬಯ್ಯುತ್ತಾರೆ.

೪೧. ಕಿರಾತ್ಕ

ಎಡೆಬಿಡದೆ ಕಿರುಕುಳವನ್ನು ನೀಡುತ್ತಾ ಮಯ್ ಮನಕ್ಕೆ ಗಾಸಿಯನ್ನುಂಟು ಮಾಡುವ ವ್ಯಕ್ತಿ.

'ಕಿರಾತ' ಎಂಬ ಸಂಸ್ಕೃತ ಪದಕ್ಕೆ 'ಬೇಟೆಯಾಡಿ ಜೀವಿಸುವವನು; ಕಾಡಿನಲ್ಲಿ ನೆಲೆಸಿರುವವನು; ಅನಾಗರಿಕ' ಎಂಬ ತಿರುಳಿದೆ. ಇಂಡಿಯಾ ದೇಶದ ದಟ್ಟವಾದ ಕಾಡುಗಳಲ್ಲಿ ಮತ್ತು ಬೆಟ್ಟಗುಡ್ಡಗಳಲ್ಲಿ ನೆಲೆಸಿದ್ದ ಬುಡಕಟ್ಟಿನ ಜನಸಮುದಾಯ

ಗಳಲ್ಲಿ ಕೆಲವನ್ನು 'ಕಿರಾತ' ಎಂಬ ಹೆಸರಿನಿಂದ ಕರೆಯುತ್ತಿದ್ದರು. ಈ ಪದ ಕನ್ನಡಿಗರಲ್ಲಿ ಬಳಕೆಗೆ ಬಂದಾಗ 'ಮಾಡುವವನು' ಎಂಬ ತಿರುಳಿನ 'ಕ' ಎಂಬ ಒಟ್ಟು ಸೇರಿ 'ಕಿರಾತ್ಕ' ಎಂಬ ಪದವಾಗಿ "ಒಂದೇ ಸಮನೆ ನೋವು, ತೊಂದರೆ, ಸಂಕಟವನ್ನು ಕೊಡುವವನು" ಎಂಬ ರೂಪಕದ ತಿರುಳನ್ನು ಪಡೆದಿದೆ. ಇದೇ ವರ್ತನೆಯುಳ್ಳ ಹೆಂಗಸನ್ನು 'ಕಿರಾತ್ಕಿ' ಎಂದು ಬಯ್ಯುತ್ತಾರೆ.

೪೨. ಕಿರಿಕ್ ನನ್ಮಗ

ಇತರರ ಯಾವುದೇ ಬಗೆಯ ನಡೆನುಡಿಯನ್ನು ಒಪ್ಪದ, ತಾನು ಹೇಳುವುದು ಮಾಡುವುದೇ ಸರಿಯೆಂಬ ಮೊಂಡುತನದ ಹಾಗೂ ನಡೆಯುತ್ತಿರುವ ಕೆಲಸಕ್ಕೆ ಇಲ್ಲಸಲ್ಲದ ನೆಪಗಳನ್ನು ಒಡ್ಡಿ ಅಡ್ಡಿಯನ್ನುಂಟುಮಾಡುವ ವ್ಯಕ್ತಿ.

'ಕಿರುಕುಳ; ಕಾಟ' ಎಂಬ ತಿರುಳುಳ್ಳ 'ಕಿರಿಕಿರಿ' ಎಂಬ ಸಾಮಪದವು, ಮಾತಿನ ಸನ್ನಿವೇಶದಲ್ಲಿ 'ಕಿರಿಕ್' ಎಂಬ ಗುಣಪದವಾಗಿ ಬಳಕೆಯಾಗಿದೆ. "ಅವನೊಬ್ಬ ಬಲೇ ಕಿರಿಕ್ ಮನ್ಸ. ಯಾವಾಗ್ಲೂ ಅವನ್ದು ಒಂದಲ್ಲ ಒಂದು ತರಕಾರು ಇದ್ದೇ ಇರ್ತದೆ" ಎಂಬ ಮಾತು ಬಳಕೆಯಲ್ಲಿದೆ.

೪೩. ಕೀಚಕ

ಒರಟುತನ ಹಾಗೂ ನೀಚತನದ ನಡೆನುಡಿಗಳಿಂದ ಒಂದೇ ಸಮನೆ ಕಿರುಕುಳವನ್ನು ಕೊಡುವ ವ್ಯಕ್ತಿ.

ವ್ಯಾಸ ಮಹಾಭಾರತದಲ್ಲಿ ಬರುವ ಒಂದು ಪಾತ್ರ ಕೀಚಕ. ಈತ ವಿರಾಟ ರಾಜನ ಹೆಂಡತಿ ರಾಣಿ ಸುದೇಷ್ಣೆಯ ಒಡಹುಟ್ಟಿದವನು. ಪಾಂಡವರು ಹನ್ನೆರಡು ವರ್ಷ ವನವಾಸವನ್ನು ಮುಗಿಸಿ, ಒಂದು ವರ್ಷ ತಲೆಮರೆಸಿಕೊಂಡು ವಿರಾಟನಗರಿ ಯಲ್ಲಿದ್ದಾಗ, ರಾಣಿ ಸುದೇಷ್ಣೆಯ ಸೇವಕಿಯಾಗಿದ್ದ ದ್ರೌಪದಿಗೆ ಕೀಚಕನು ಕಾಮದ ಕಿರುಕುಳವನ್ನು ನೀಡಿ, ಭೀಮನಿಂದ ಸಾವನ್ನಪ್ಪಿದ. ಕೀಚಕನ ಹೆಸರನ್ನು "ಒರಟುತನ, ನೀಚತನ ಹಾಗೂ ಕ್ರೂರತನದ ನಡೆನುಡಿಗಳಿಗೆ" ಒಂದು ರೂಪಕವಾಗಿ ಕನ್ನಡಿಗರು ದಿನನಿತ್ಯದ ಮಾತುಕತೆಗಳಲ್ಲಿ ಬಳಸುತ್ತಿದ್ದಾರೆ.

೪೪. ಕೊಳಕ್ ನನ್ಮಗ

ಕೊಚ್ಚೆಯಾಗಿರುವ ಮಯ್ ಕಯ್‌ಗಳನ್ನು ಸರಿಯಾಗಿ ತೊಳೆಯದೆ, ಮಡಿಯಾಗಿರುವ ಬಟ್ಟೆಗಳನ್ನು ಉಡದೆ, ತಾನು ವಾಸ ಮಾಡುತ್ತಿರುವ ಎಡೆಯಲ್ಲಿ ಬಿದ್ದಿರುವ ಕಸಕಡ್ಡಿಗಳನ್ನು ಗುಡಿಸಿ ತೆಗೆಯದೆ, ಹೊಲಸನ್ನೇ ಮೆತ್ತಿಕೊಂಡಂತೆ ಬಾಳುತ್ತಿರುವ ವ್ಯಕ್ತಿ. ಸಾಮಾಜಿಕ ವ್ಯವಹಾರದ ಮಾತುಕತೆ ಮತ್ತು ಕೆಲಸದಲ್ಲಿ ಕೆಳಮಟ್ಟದ ನಡೆನುಡಿಗಳಿಂದ ಎಲ್ಲವನ್ನೂ ಹಾಳು ಮಾಡುವ ವ್ಯಕ್ತಿ.

ಆರೋಪದ ಬಯ್ಗುಳಗಳಲ್ಲಿ ಹೆಚ್ಚಿನವು ರೂಪಕದ ತಿರುಳಿನಲ್ಲಿ ಬಳಕೆಯಾಗುತ್ತವೆ. ಆದರೆ 'ಕೊಳಕು' ಎಂಬ ಈ ಪದವು ಕೊಳಕಿನಿಂದ ಕೂಡಿದ ವ್ಯಕ್ತಿ ಎಂಬ ನೇರವಾದ ತಿರುಳಿನ ಜತೆಗೆ, ಬಳಕೆಯಾಗುತ್ತಿರುವ ಮಾತಿನ ಸನ್ನಿವೇಶ ಹಾಗೂ ಬಳಸುತ್ತಿರುವವರ ಉದ್ದೇಶಕ್ಕೆ ತಕ್ಕಂತೆ "ನೀಚ; ಹೀನ; ಕೆಡುಕ" ಎಂಬ ರೂಪಕದ ತಿರುಳನ್ನು ಹೊಂದುತ್ತದೆ. ಹೆಂಗಸರನ್ನು ಬಯ್ಯುವಾಗ **'ಕೊಳಕ್ ಮುಂಡೆ'** ಎಂಬ ಪದಕಂತೆಯನ್ನು ಬಳಸುತ್ತಾರೆ.

೪೫. ಕೋಡಂಗಿ

ಸಾಮಾಜಿಕ ಪರಿಸರ ಇಲ್ಲವೇ ಮಾತಿನ ಸನ್ನಿವೇಶದ ಆಗುಹೋಗುಗಳ ಅರಿವಿಲ್ಲದೆ ಹಾಗೂ ಮಾಡಬೇಕಾದ ಕೆಲಸದ ಹೊಣೆಗಾರಿಕೆಯಿಲ್ಲದೆ ಹಗುರವಾಗಿ ನಡೆದುಕೊಳ್ಳುವ ವ್ಯಕ್ತಿ.

ಕರ್ನಾಟಕ ರಾಜ್ಯದ ಕರಾವಳಿ ಜಿಲ್ಲೆಗಳ ಬಯಲಾಟವಾದ ಯಕ್ಷಗಾನ ಕಲೆಯಲ್ಲಿ ಕೋಡಂಗಿಯ ಪಾತ್ರ ಕಂಡುಬರುತ್ತದೆ. ಚಿತ್ರವಿಚಿತ್ರವಾದ ಉಡುಗೆ ತೊಡುಗೆಗಳಿಂದ ಸಿಂಗಾರಗೊಂಡು, ನೋಟಕರಲ್ಲಿ ನಗೆಯುಕ್ಕಿಸುವಂತೆ ಕಣ್ಣು ಬಾಯಿ ಕಯ್ ಕಾಲುಗಳನ್ನು ಕುಣಿಸುವ ಮತ್ತು ಮಾತನಾಡುವ ಕೋಡಂಗಿಯ ಪಾತ್ರದ 'ನಗೆಚಾಟಿಕೆಯ ಮಾತುಕತೆ ಮತ್ತು ವರ್ತನೆಗಳನ್ನು' ಒಂದು ರೂಪಕ ವನ್ನಾಗಿ ಮಾಡಿಕೊಂಡು ಈ ಬಯ್ಗುಳವನ್ನು ಕಟ್ಟಲಾಗಿದೆ.

೪೭. ಕ್ರಾಕ್ ನನ್ಮಗ

ಮಾತುಕತೆಯಲ್ಲಿ ಅಥವಾ ವ್ಯವಹಾರದಲ್ಲಿ ನಾಲ್ಕು ಮಂದಿ ಒಪ್ಪುವಂತೆ ನಡೆದುಕೊಳ್ಳದೆ, ಅಡ್ಡಮಾತುಗಳಿಂದ ಇಲ್ಲವೇ ಇಲ್ಲಸಲ್ಲದ ತಂಟೆತಕಾರುಗಳನ್ನು ಒಡ್ಡುವುದರ ಮೂಲಕ ಎಲ್ಲವನ್ನೂ ಹದಗೆಡಿಸುವ ವ್ಯಕ್ತಿ.

'ಕ್ರ್ಯಾಕ್' ಎಂಬ ಇಂಗ್ಲಿಷ್ ಪದಕ್ಕೆ 'ದೊಡ್ಡ ದನಿಯಲ್ಲಿ ಮಾತನಾಡುವುದು; ಜಂಬ ಕೊಚ್ಚಿಕೊಳ್ಳುವುದು; ಮಿದುಳಿನ ನರಮಂಡಲಕ್ಕೆ ಹಾನಿಯಾಗುವುದು' ಎಂಬ ತಿರುಳಿದೆ. ಕನ್ನಡ ನುಡಿ ಸಮುದಾಯದಲ್ಲಿ ಈ ಪದ "ಮಾನಸಿಕ ರೋಗಕ್ಕೆ ಬಲಿಯಾಗಿ ಮಯ್ ಮನದ ಮೇಲಣ ಹತೋಟಿಯನ್ನು ಕಳೆದುಕೊಂಡು ತಲೆಕೆಟ್ಟಿರುವ ವ್ಯಕ್ತಿಯ ನಡೆನುಡಿಯ ಚಹರೆಗಳಿಗೆ" ಒಂದು ರೂಪಕವಾಗಿ ಬಳಕೆಯಾಗುತ್ತಿದೆ. **"ಆ ಕ್ರಾಕ್ ಜತೇಲಿ ಯಾಕ್ ಮಾತಾಡೂಕೆ ಹೋಗಿದ್ದೆ, ಬುದ್ದಿ ಇದ್ದದೆ ನಿಂಗೆ"** ಎನ್ನುವ ಮಾತು ಬಳಕೆಯಲ್ಲಿದೆ.

೪೮. ಗಡವ

ಯಾವುದೇ ಬಗೆಯ ದುಡಿಮೆಯನ್ನು ಮಾಡದೆ ಸುಮ್ಮನೆ ಕಾಲಕಳೆಯುವ ಗಂಡಸು.

ದೊಡ್ಡ ಗಾತ್ರದ ಗಂಡು ಕೋತಿಗೆ 'ಗಡವ' ಎಂದು ಹೆಸರು. ಇದು ತನ್ನ ಗುಂಪಿನಲ್ಲಿರುವ ಇತರ ಗಂಡು ಕೋತಿಗಳ ಜತೆ ಪದೇ ಪದೇ ಕಾಲು ಕೆರೆದು ಗುದ್ದಾಡುವ ಹಾಗೂ ಹೆಣ್ಣು ಕೋತಿಗಳ ಜತೆ ಕಾಮದ ಚಕ್ಕಂದವಾಡುವ ಗುಣವನ್ನು ಹೊಂದಿರುತ್ತದೆ.

ಈ ಪ್ರಾಣಿಯ ಹೆಸರನ್ನು ಒಂದು ರೂಪಕವಾಗಿ ಬಳಸಲಾಗಿದೆ. ಸಮಾಜದಲ್ಲಿ ಇತರರ ಜತೆಯಲ್ಲಿ ಒರಟೊರಟಾಗಿ ನಡೆದುಕೊಳ್ಳುವ ಹಾಗೂ ದೊಡ್ಡ ಗಾತ್ರದ ದೇಹವನ್ನು ಹೊಂದಿದ್ದರೂ, ಯಾವುದೇ ಬಗೆಯ ದುಡಿಮೆಯನ್ನು ಮಾಡದೆ ಸುಮ್ಮನೆ ಕಾಲಕಳೆಯುವ ಗಂಡಸನ್ನು ಹಂಗಿಸಲು ಈ ಪದವನ್ನು ಬಳಸುತ್ತಾರೆ.

೪೯. ಗಬ್ರೂ ನನ್ಮಗ

ಸಾಮಾಜಿಕ ಒಡನಾಟದ ಮಾತುಕತೆಗಳನ್ನು ಇಲ್ಲವೇ ಕೆಲಸಗಳನ್ನು ಚೆನ್ನಾಗಿ ನಡೆಸಿಕೊಂಡು ಹೋಗುವಂತಹ ಅರಿವು, ಚಳಕ, ಜಾಣತನವಿಲ್ಲದ ವ್ಯಕ್ತಿ.

ಉರ್ದು, ಮರಾಠಿ, ಹಿಂದಿ ನುಡಿ ಸಮುದಾಯಗಳಲ್ಲಿ 'ಗಬರೂ' ಎಂಬ ಪದ "ಇತರರ ಕೆಟ್ಟ ನಡೆನುಡಿಗಳನ್ನು ಅರಿಯದೆ ಎಲ್ಲವನ್ನೂ ನಂಬುವ ಮಗುವಿನಂತಹ ಮನಸ್ಸಿನವನು" ಎಂಬ ತಿರುಳಿನ ಜತೆಗೆ "ದಡ್ಡ; ತಿಳಿಗೇಡಿ" ಎಂಬ ರೂಪಕ ವಾಗಿಯೂ ಬಳಕೆಯಲ್ಲಿದೆ. ಈ ಸಮುದಾಯಗಳ ಒಡನಾಟದಿಂದ ಕನ್ನಡದಲ್ಲಿ ಬಳಕೆಗೆ ಬಂದಿದೆ.

೫೦. ಗಾಳ್ಗಂಟ್ಲು ನನ್ಮಗ

ಯಾವುದೇ ಒಂದು ಮಾತುಕತೆ ಅಥವಾ ಕೆಲಸ ನಡೆಯುತ್ತಿರುವಾಗ ಇಲ್ಲಸಲ್ಲದ ತಂಟೆ ತಕರಾರುಗಳನ್ನು ಒಡ್ಡಿ, ಯಾವುದನ್ನೂ ಆಗಗೊಡಿಸದ, ಪೂರೈಸಲು ಬಿಡದ ಮೊಂಡುತನದ ನಡೆನುಡಿಯುಳ್ಳ ವ್ಯಕ್ತಿ.

'ಒರಟಾದುದು; ಕೀಳಾದುದು' ಎಂಬ ತಿರುಳಿನ 'ಗಾಳ್' ಎಂಬ ಪದ ಮತ್ತು 'ಕಟ್ಟು; ಕಂತೆ; ಗಡ್ಡೆ' ಎಂಬ ತಿರುಳಿನ 'ಗಂಟು' ಎಂಬ ಪದದೊಡನೆ 'ಅಲು' ಎಂಬ ಒಟ್ಟು ಸೇರಿ 'ಗಾಳ್ಗಂಟ್ಲು' ಎಂಬ ಜೋಡುಪದ ರೂಪುಗೊಂಡಿದೆ. 'ಗಂಟ್ಲು' ಎಂಬ ಪದಕ್ಕೆ 'ಗೋಜಲುಗೋಜಲಾಗಿ ಉಂಡೆಗಟ್ಟಿರುವುದು' ಎಂಬ ತಿರುಳಿದೆ. ನಿವಾರಿಸಲಾಗದಂತಹ ತೊಡಕಿನ ಸಂಗತಿಗಳನ್ನು ಮತ್ತು ಸಣ್ಣತನದ ನಡೆನುಡಿಗಳನ್ನು ಸೂಚಿಸಲು ಈ ನುಡಿಗಟ್ಟನ್ನು ಒಂದು ರೂಪಕವಾಗಿ ಬಳಸುತ್ತಾರೆ.

"ಆ ಗಾಳ್ಗಂಟ್ಲು ಮನೆಗೆ ನನ್ನ ಕೊಟ್ಟುಟ್ಟು, ನಮ್ಮ ಅಪ್ಪ ಅವ್ವ ನನ್ನ ತಲೆ ಮ್ಯಾಲೆ ಕಲ್ ಎತ್ತಾಕ್ಬುಟ್ರು" – "ಈ ಗಾಳ್ಗಂಟ್ಲು ಸವಾಸ ಬ್ಯಾಡ ಅಂತ ಬಡ್ಕೊಂಡೆ, ನೀ ಕೇಳ್ಲಿಲ್ಲ" ಎಂಬ ಮಾತುಗಳು ಬಳಕೆಯಲ್ಲಿವೆ.

೫೧. ಗುಗ್ಗು

ಯಾವುದೇ ಒಂದು ಕೆಲಸವನ್ನು ಮಾಡಲು ಬೇಕಾದ ತಿಳುವಳಿಕೆಯಾಗಲಿ, ಚತುರತೆಯಾಗಲಿ, ನಿಪುಣತೆಯಾಗಲಿ ಇಲ್ಲದ ವ್ಯಕ್ತಿ.

ಗೂಬೆ ಎಂಬ ಹಕ್ಕಿಯನ್ನು ಹೆಸರಿಸುವ 'ಘೂಕ' ಎಂಬ ಸಂಸ್ಕೃತ ಪದವು ಉರ್ದು ಮತ್ತು ಹಿಂದಿ ನುಡಿ ಸಮುದಾಯಗಳಲ್ಲಿ 'ಘುಘ್ಗೂ' ಎಂಬ ರೂಪದಲ್ಲಿ ಉಚ್ಚಾರಣೆಗೊಂಡಿದೆ ಹಾಗೂ ತಿರುಳಿನಲ್ಲಿ 'ದಡ್ಡ; ತಿಳಿಗೇಡಿ; ಚುರುಕಾಗಿಲ್ಲದವನು" ಎಂಬ ರೂಪಕವಾಗಿಯೂ ಬಳಕೆಯಲ್ಲಿದೆ. ಈ ನುಡಿ ಸಮುದಾಯಗಳ ಒಡನಾಟದಿಂದ ಕನ್ನಡಿಗರಲ್ಲಿ ಬಳಕೆಗೆ ಬಂದಾಗ, ಕನ್ನಡ ನುಡಿಯ ಉಲಿಕಂತೆ ಮತ್ತು ಪದ ರಚನೆಯ ನಿಯಮಗಳಿಗೆ ತಕ್ಕಂತೆ 'ಗುಗ್ಗು' ಎಂಬ ರೂಪದಲ್ಲಿ ಉಚ್ಚಾರಣೆಗೊಂಡಿದೆ.

೫೨. ಗುಳ್ಳೆ ಲಕ್ಕ

ಒಳಸಂಚು ಹಾಗೂ ಉಪಾಯದ ನಡೆನುಡಿಗಳಿಂದ ಇತರರನ್ನು ವಂಚಿಸಿ, ತನಗೆ ಬೇಕಾದುದನ್ನು ಪಡೆದುಕೊಳ್ಳುವ ವ್ಯಕ್ತಿ.

ಕನ್ನಡ ನುಡಿ ಸಮುದಾಯದಲ್ಲಿ ಬಳಕೆಯಲ್ಲಿರುವ ಒಳನುಡಿಯೊಂದರಲ್ಲಿ ನರಿಯನ್ನು 'ಲಕ್ಕ' ಎಂದು ಕರೆಯುತ್ತಾರೆ. ಗುಳ್ಳ ಎಂಬ ಪದಕ್ಕೆ 'ಸಣ್ಣದು; ಪುಟ್ಟದು; ಆಕಾರದಲ್ಲಿ ಚಿಕ್ಕದಾಗಿರುವುದು' ಎಂಬ ತಿರುಳಿದೆ. ಗುಳ್ಳಗಿರುವ ಲಕ್ಕನೇ 'ಗುಳ್ಳೆಲಕ್ಕ'. ಊರಿನ ಮನೆಗಳಿಗೆ ನುಗ್ಗಿ ಕೋಳಿಗಳನ್ನು ಸದ್ದಿಲ್ಲದೇ ಕದ್ದೊಯ್ಯುವ ಲಕ್ಕ/ನರಿಯನ್ನು 'ಉಪಾಯಗಾರಿಕೆ, ಕಪಟತನ, ಮರೆಮೋಸದ ನಡೆನುಡಿಗಳಿಗೆ' ಒಂದು ರೂಪಕವಾಗಿ ಕನ್ನಡಿಗರು ತಮ್ಮ ಮಾತುಕತೆಗಳಲ್ಲಿ ಬಳಸುತ್ತಾರೆ. ಇದೇ ತಿರುಳಿನ **'ಗುಳ್ಳೆ ನರಿ'** ಎಂಬ ಪದವು ಕನ್ನಡದ ಮತ್ತೊಂದು ಒಳನುಡಿಯಲ್ಲಿ ಬಯ್ಗುಳವಾಗಿ ಬಳಕೆಯಲ್ಲಿದೆ.

೫೩. ಚತ್ರಿ ನನ್ಮಗ

ಹಗೆತನ ಇಲ್ಲವೇ ಜಿದ್ದಾಜಿದ್ದಿಯಿಂದ ಕೂಡಿರುವ ಎರಡು ಕಡೆಯವರಿಗೂ ಬಹಳ ಬೇಕಾದವನಂತೆ ನಡೆದುಕೊಳ್ಳುತ್ತಾ, ಕಡೆಯಲ್ಲಿ ಗೆದ್ದವರ ಕಡೆಗೆ ವಾಲುವವನು ಹಾಗೂ ತನ್ನದೇ ಆದ ಒಂದು ವ್ಯಕ್ತಿತ್ವವಿಲ್ಲದವನು.

ಬಿಸಿಲು ಬೀಳುವ ದಿಕ್ಕು ಬದಲಾದಂತೆಲ್ಲಾ ಹಿಡಿದ ಚತ್ರಿಯನ್ನು ಆಯಾಯ ಕಡೆಗಳಿಗೆ ತಿರುಗಿಸುತ್ತಾ ನೆರಳನ್ನು ಪಡೆಯುವ ಬಗೆಯನ್ನು ಒಂದು ರೂಪಕವನ್ನಾಗಿ ಮಾಡಿಕೊಂಡು ಈ ಬಯ್ಗುಳವನ್ನು ಕಟ್ಟಲಾಗಿದೆ. ಸಂಸ್ಕೃತದ 'ಛತ್ರಿನ್' ಎಂಬ ಪದ ಕನ್ನಡಿಗರ ಬಾಯಲ್ಲಿ 'ಚತ್ರಿ' ಎಂದಾಗಿದೆ.

೫೪. ಚಮ್ಚ ನನ್ಮಗ

ಸಮಾಜದಲ್ಲಿ ತನ್ನದೇ ಆದ ಒಂದು ಒಳ್ಳೆಯ ವ್ಯಕ್ತಿತ್ವವನ್ನು ಗಳಿಸಿಕೊಳ್ಳದೆ, ಹಣ, ಗದ್ದುಗೆ, ಆಸ್ತಿಪಾಸ್ತಿಯುಳ್ಳ ಸಿರಿವಂತರ ನಡೆನುಡಿಗಳನ್ನು ಕೊಂಡಾಡುತ್ತಾ ತನಗೆ ಬೇಕಾದುದೆಲ್ಲವನ್ನೂ ಪಡೆದುಕೊಳ್ಳುವ ವ್ಯಕ್ತಿ.

ತುರ್ಕಿಶ್ ನುಡಿಯ 'ಚಮಚ' ಎಂಬ ಪದವು ಉರ್ದು ಮತ್ತು ಮರಾಠಿ ನುಡಿಗಳಲ್ಲಿ 'ಉಣಿಸನ್ನು ಎತ್ತಿ ಬಾಯಿಗಿಡಲು ಬಳಸುವ ಚಿಕ್ಕ ಉಪಕರಣ' ಎಂಬ ತಿರುಳಿನ

ಜತೆಗೆ, 'ಉಳ್ಳವರನ್ನು ಹಾಡಿ ಹೊಗಳುವವನು' ಎಂಬ ರೂಪಕ ವಾಗಿಯೂ ಬಳಕೆಯಲ್ಲಿದೆ. ಉರ್ದು ಮತ್ತು ಮರಾಠಿ ನುಡಿ ಸಮುದಾಯಗಳ ಒಡನಾಟದಿಂದ ಕನ್ನಡದಲ್ಲಿ ಬಳಕೆಗೆ ಬಂದಿದೆ. **"ಅವರಿವರ ಹತ್ರ ಚಮ್ಚಾಗಿರಿ ಮಾಡ್ಕೊಂಡೇ ಚೆನ್ನಾಗಿ ಆಸ್ತಿಪಾಸ್ತಿ ಮಾಡ್ಕೊಂಡವ್ನೆ"** ಎಂಬ ಮಾತು ಬಳಕೆಯಲ್ಲಿದೆ.

೫೫. ಚಿನಾಲಿ

ಕೆಟ್ಟ ನಡೆನುಡಿಗಳುಳ್ಳ ಹೆಂಗಸು

ಪ್ರಾಕೃತ ನುಡಿಯಲ್ಲಿ ಸೂಳೆ ಎಂಬ ತಿರುಳುಳ್ಳ 'ಛಿಣ್ಣಾಲೀ' ಪದ, ಹಿಂದಿ, ಮರಾಠಿ, ಉರ್ದು ನುಡಿ ಸಮುದಾಯಗಳಲ್ಲಿ 'ಛಿನಾಲ್/ಛಿನಾಲೀ' ಎಂಬ ರೂಪದಲ್ಲಿ ಬಳಕೆಯಾಗುತ್ತಿದೆ. ಈ ನುಡಿ ಸಮುದಾಯಗಳ ಒಡನಾಟದಿಂದ ಕನ್ನಡಿಗರಲ್ಲಿ ಬಳಕೆಗೆ ಬಂದಾಗ, ಕನ್ನಡ ನುಡಿಯ ಉಲಿ ರಚನೆಗೆ ತಕ್ಕಂತೆ 'ಚಿನಾಲಿ' ಎಂದು ಉಚ್ಚಾರಣೆಗೊಂಡಿದೆ.

೫೬. ಚಿಲ್ಲರೆ ನನ್ಮಗ

ಮಾತು, ಕೆಲಸ, ಹಣಕಾಸಿನ ವಿಚಾರದಲ್ಲಿ ಯಾರ ಗಣನೆಗೂ ಬಾರದವನು ಇಲ್ಲವೇ ಸಣ್ಣತನದ ನಡೆನುಡಿಗಳಿಂದಾಗಿ ಇತರರ ಕಣ್ಣಿನಲ್ಲಿ ಕೀಳಾದವನು.

ಉರ್ದು ನುಡಿಯ 'ಚಿಲ್ಲರ್' ಮತ್ತು ಮರಾಠಿ ನುಡಿಯ 'ಚಿಲ್ಹಾರ್' ಎಂಬ ಪದ ರೂಪವು ಕನ್ನಡದಲ್ಲಿ ಬಳಕೆಗೆ ಬಂದಾಗ 'ಚಿಲ್ಲರೆ' ಎಂದು ಉಚ್ಚಾರಣೆಗೊಂಡಿದೆ. ಈ ಪದಕ್ಕೆ 'ದೊಡ್ಡ ಮೊತ್ತದ ಒಂದು ನಾಣ್ಯ; ನೋಟನ್ನು ಮುರಿಸಿದಾಗ ದೊರೆಯುವ ಸಣ್ಣ ಮೊತ್ತದ ಹಣದ ಬಿಲ್ಲೆಗಳು; ಚಿಕ್ಕ ನೋಟುಗಳು; ಚಿಕ್ಕದಾಗಿರುವದು; ಸಾಮಾನ್ಯವಾಗಿರುವುದು' ಎಂಬ ತಿರುಳಿದೆ. ಕನ್ನಡ ನುಡಿ ಸಮುದಾಯದ ಮಾತುಕತೆಯ ಕೆಲವೊಂದು ಸನ್ನಿವೇಶದಲ್ಲಿ ಸಾಮಾಜಿಕ ಮನ್ನಣೆಯಿಲ್ಲದ ಸಂಗತಿಗಳನ್ನು ಅಥವಾ ವ್ಯಕ್ತಿಗಳನ್ನು ಹೆಸರಿಸಲು 'ಚಿಲ್ಲರೆ' ಎಂಬ ಪದವನ್ನು ಒಂದು ರೂಪಕವಾಗಿ ಬಳಸುತ್ತಾರೆ.

"ಅಂತಾ ಚಿಲ್ರೆ ಸಾವಾಸ ಬ್ಯಾಡ ಅಂತ ಬಡ್ಕೊಂಡೆ, ನನ್ ಮಾತ ನೀ ಕೇಳ್ಲಿಲ್ಲ. ಈಗ ಅತ್ತರೇನ್ ಬಂತು" ಎಂಬ ಮಾತು ಬಳಕೆಯಲ್ಲಿದೆ.

೫೭. ಚೆಂಗ್ಲು

ಕುಳಿತ ಕಡೆ ಕುಳಿತುಕೊಳ್ಳದೆ, ನಿಂತ ಕಡೆ ನಿಂತುಕೊಳ್ಳದೆ, ಮಾಡಬೇಕಾದ ಕೆಲಸವನ್ನು ಮಾಡದೆ ಕಿಡಿಗೇಡಿತನದಿಂದ ಎಲ್ಲವನ್ನೂ ಹಾಳು ಮಾಡುವ ವ್ಯಕ್ತಿ.

'ಹಾರು; ನೆಗೆ; ಕುಪ್ಪಳಿಸು' ಎಂಬ ತಿರುಳುಳ್ಳ 'ಚೆಂಗು/ಚಂಗು' ಎಂಬ ಕೆಲಸ ಪದಕ್ಕೆ 'ಅಲು' ಎಂಬ ಒಟ್ಟು ಸೇರಿ 'ಚೆಂಗಲು/ಚಂಗಲು' ಎಂಬ ಹೆಸರು ಪದ ರೂಪುಗೊಂಡಿದೆ. **"ಚೆಂಗ್ಲು ಸೂಳೆಮಗ; ಚಂಗ್ಲು ಮುಂಡೆ; ಚಂಗ್ಲು ಮುದೇವಿ"** ಎಂಬ ಪದಕಂತೆಗಳು ಬಳಕೆಯಲ್ಲಿವೆ.

೫೮. ಚೆಲ್ ಮುಂಡೆ

ಹೆಣ್ಣಿನ ನಡೆನುಡಿಯ ಬಗೆಗೆ ಕುಟುಂಬ ಮತ್ತು ಸಮಾಜ ಹಾಕಿರುವ ಕಟ್ಟು ಕಟ್ಟಲೆಗಳನ್ನು ಕಡೆಗಣಿಸಿ, ತಾನು ಬಯಸಿದ ಬಗೆಯಲ್ಲಿ ಉಡುಗೆ ತೊಡುಗೆಯನ್ನು ತೊಟ್ಟು, ನಾಲ್ಕು ಜನರ ನಡುವೆ ತನ್ನ ಮನ ಬಂದಂತೆ ನಡೆದುಕೊಳ್ಳುವ ಹೆಂಗಸು.

'ಎಸೆ; ಬಿಸಾಡು; ಕೆಡಹು' ಎಂಬ ತಿರುಳಿನ 'ಚೆಲ್ಲು' ಎಂಬ ಕ್ರಿಯಾಪದ 'ಕಿಡಿಗೇಡಿತನದ ನಡೆನುಡಿ' ಎಂಬ ತಿರುಳಿನ ಗುಣಪದವಾಗಿಯೂ ಬಳಕೆಯಲ್ಲಿದೆ. ಕನ್ನಡ ನುಡಿ ಸಮುದಾಯದ ಮಾತುಕತೆಗಳಲ್ಲಿ **"ನಮ್ ಮುಂದೆ ಚೆಲ್‌ಚೆಲ್ ಆಡ್ತಿರೂವಂಗೆ, ಎಲ್ರೂ ಮುಂದೇನೂ ಆಡಬೇಡ"** ಎಂಬ ಎಚ್ಚರಿಕೆಯ ಮಾತು ಮತ್ತು "ಬೆಕ್ಕಿಗೆ ಚೆಲ್ಲಾಟ, ಇಲಿಗೆ ಪ್ರಾಣ ಸಂಕಟ" ಎಂಬ ಗಾದೆ ಮಾತು ಬಳಕೆಯಲ್ಲಿವೆ. ಗಂಡಸರಿಗೆ ಬಯ್ಯುವಾಗ **'ಚೆಲ್ ಬಡ್ಡತ್ತದ್ದು; ಚೆಲ್ ನನ್ಮಗ'** ಎಂಬ ಪದಕಂತೆಗಳನ್ನು ಬಳಸುತ್ತಾರೆ.

೫೯. ಚೇಲ

ಹಣವಂತರ ಹಾಗೂ ಸಮಾಜದಲ್ಲಿ ಎತ್ತರವಾದ ಗದ್ದುಗೆಯಲ್ಲಿ ಕುಳಿತಿರುವ ವ್ಯಕ್ತಿಗಳ ನಡೆನುಡಿಗಳನ್ನು ಗುಣಗಾನ ಮಾಡುತ್ತಾ ಅವರ ನೆರಳಿನಲ್ಲೇ ಬಾಳುತ್ತಿರುವ ಮತ್ತು ಸಾಮಾಜಿಕವಾಗಿ ತನ್ನದೇ ಆದ ಒಂದು ಒಳ್ಳೆಯ ವ್ಯಕ್ತಿತ್ವವಿಲ್ಲದವನು.

ಸಂಸ್ಕೃತ ನುಡಿಯಲ್ಲಿ 'ಚೇಲ' ಪದಕ್ಕೆ 'ಸೇವಕ; ಆಳು' ಎಂಬ ತಿರುಳಿದೆ. ಹಿಂದಿ ನುಡಿಯಲ್ಲಿ 'ಚೇಲಾ' ಎಂಬ ಪದಕ್ಕೆ "ಗುರುವಿನ ಬಳಿಗೆ ಅರಿವನ್ನು ವಿದ್ಯೆಯನ್ನು ಕಲಿಯಲು ಬಂದವನು" ಎಂಬ ತಿರುಳಿದೆ. ಮರಾಠಿ ಮತ್ತು ಉರ್ದು ನುಡಿ

ಸಮುದಾಯಗಳಲ್ಲಿ 'ಹಿಂಬಾಲಕ; ಅನುಯಾಯಿ' ಎಂಬ ತಿರುಳಿನ ಜತೆಗೆ "ತನಗೆ ಬೇಕಾದುದನ್ನು ಪಡೆದುಕೊಳ್ಳಲು ಉಳ್ಳವರನ್ನು ಹೊಗಳಿ ಕೊಂಡಾಡುವ ವ್ಯಕ್ತಿ" ಎಂಬ ರೂಪಕವಾಗಿಯೂ ಆಡು ಮಾತಿನಲ್ಲಿ ಬಳಕೆಯಲ್ಲಿದೆ. ಈ ನುಡಿ ಸಮುದಾಯಗಳ ಒಡನಾಟದಿಂದ 'ಚೇಲ' ಪದದ ರೂಪಕದ ತಿರುಳು ಕನ್ನಡದ ಮಾತುಕತೆಗಳಲ್ಲೂ ಕಂಡುಬರುತ್ತದೆ.

೬೦. ಜುಜ್‌ಬಿ ನನ್ಮಗ

ಸಾಮಾಜಿಕ ವ್ಯವಹಾರದ ಸನ್ನಿವೇಶಗಳಲ್ಲಿ ನಾಲ್ಕು ಜನರ ನಡುವೆ ಯಾವುದೇ ಬಗೆಯ ಮರ್ಯಾದೆಯನ್ನು ಹೊಂದಿಲ್ಲದ ಹಾಗೂ ಅಂತಸ್ತನ್ನು ಗಳಿಸಿಲ್ಲದ ವ್ಯಕ್ತಿ.

'ಕೀಳಾದುದು; ಕಡೆಗಣಿಸುವಂತಹುದು; ಅತಿ ಚಿಕ್ಕದು' ಎಂಬ ತಿರುಳುಳ್ಳ 'ಜುಜ್‌ಬೀ' ಎಂಬ ಅರಾಬಿಕ್ ಪದವು ಉರ್ದು ನುಡಿಯಲ್ಲಿ ಬಳಕೆಯಲ್ಲಿದೆ. ಉರ್ದು ನುಡಿ ಸಮುದಾಯದ ಒಡನಾಟದಿಂದ ಕನ್ನಡ ನುಡಿ ಸಮುದಾಯದಲ್ಲಿ ಬಳಕೆಗೆ ಬಂದು **'ಜುಜ್‌ಬಿ ಮುಂಡೆ; ಜುಜ್‌ಬಿ ಕೆಲ್ಸ'** ಪದಕಂತೆಗಳ ರೂಪದಲ್ಲಿ ಉಚ್ಚಾರಣೆಗೊಳ್ಳುತ್ತಿದೆ. **"ಅವನು ಕೊಡೂ ಜುಜ್‌ಬಿ ದುಡ್ಡಿಗೆ ಇಲ್ಲಿಂದ ಅಲ್ಲೀತಂಕ ದಣ್ಕೊಂಡು ಹೋಗಬೇಕೆ"** ಎಂಬ ಮಾತು ಬಳಕೆಯಲ್ಲಿದೆ.

೬೧. ಡೋಂಗಿ ನನ್ಮಗ

ಸಾಮಾಜಿಕ ವ್ಯವಹಾರದ ಮಾತಿನ ಸನ್ನಿವೇಶದಲ್ಲಿ ಸುಳ್ಳು ಸಂಗತಿಗಳನ್ನು ನಿಜವಾಗಿ ನಡೆದಿರುವುದಾಗಿ ಕತೆಕಟ್ಟಿ ಹೇಳುತ್ತಾ ಜನರನ್ನು ಮರುಳುಗೊಳಿಸುವ ವ್ಯಕ್ತಿ.

'ವಂಚಕತನ; ಸುಳ್ಳಿನ ನಡೆನುಡಿ; ಕಪಟತನ' ಎಂಬ ತಿರುಳಿನ 'ಢೋಂಗಿ' ಎಂಬ ಪದವು ಮರಾಠಿ, ಉರ್ದು, ಹಿಂದಿ ನುಡಿ ಸಮುದಾಯಗಳಲ್ಲಿ ಬಳಕೆಯಲ್ಲಿದೆ. ಈ ನುಡಿ ಸಮುದಾಯಗಳ ಒಡನಾಟದಿಂದ ಕನ್ನಡದಲ್ಲಿ ಬಳಕೆಗೆ ಬಂದಿದೆ.

೬೨. ತಂಟ್ರೆ

ಕೆದರಿದ ತಲೆಗೂದಲಿನ, ಕೊಳಕು ಉಡುಗೆಯ ಮತ್ತು ಒರಟುತನದ ನಡೆನುಡಿಗಳ ಹೆಂಗಸು.

ಕನ್ನಡ ನುಡಿಯಲ್ಲಿ 'ತಂಟರು' ಎಂಬ ಪದಕ್ಕೆ 'ಕೆದರಿದ; ಹರಡಿದ' ಎಂಬ ತಿರುಳಿದೆ. 'ತಂಟರದಲೆ' ಎಂದರೆ ಬಹಳ ದಿನಗಳಿಂದ ಎಣ್ಣೆಯನ್ನೇ ಕಾಣದ

ಹಾಗೂ ಬಾಚದ ಕೂದಲಿನ ತಲೆ. ಈ ಬಗೆಯ ಇರುವಿಕೆಯನ್ನೇ ಒಂದು ರೂಪಕವಾಗಿ ಬಳಸಿಕೊಂಡು ಈ ಆರೋಪದ ಬಯ್ಗುಳ ಹುಟ್ಟಿದೆ.

೬೩. ತಟವಟಗಾರ

ತನ್ನ ನಯವಾದ ನಡೆನುಡಿಗಳಿಂದ ಇರುವುದನ್ನು ಇಲ್ಲವೆಂಬಂತೆಯೂ ಮತ್ತು ಇಲ್ಲದಿರುವುದನ್ನು ಇರುವಂತೆಯೂ ನಂಬಿಸಿ ಜನರನ್ನು ಮೋಸಗೊಳಿಸುವ ಕಲೆಯಲ್ಲಿ ಪಳಗಿದ ವ್ಯಕ್ತಿ.

'ಕಪಟ; ಮೋಸ; ವಂಚನೆ' ಎಂಬ ತಿರುಳುಳ್ಳ 'ತಟವಟ' ಎಂಬ ಪದಕ್ಕೆ 'ಮಾಡುವವನು' ಎಂಬ ತಿರುಳುಳ್ಳ 'ಗಾರ' ಒಟ್ಟು ಸೇರಿ 'ತಟವಟಗಾರ' ಎಂಬ ಪದ ರೂಪುಗೊಂಡಿದೆ. ಈ ಬಗೆಯ ಗುಣವುಳ್ಳ ಹೆಂಗಸನ್ನು 'ತಟವಟಗಾತಿ' ಎಂದು ಕರೆಯುತ್ತಾರೆ.

'ಕಪಟ; ಮೋಸ; ವಂಚನೆ" ಎಂಬ ತಿರುಳುಳ್ಳ 'ತಾಟುಪೋಟು' ಎಂಬ ಪದರೂಪವೇ ಜನಪದರ ಆಡು ಮಾತಿನಲ್ಲಿ 'ತಟವಟ' ಎಂದಾಗಿದೆ. ಸಾಲಸೋಲ, ತೋಟತುಡಿಕೆ, ಮಕ್ಕಳು ಮರಿ ಎಂಬ ಜೋಡಿ ಪದಗಳಂತೆ 'ತಾಟುಪೋಟು' ಎಂಬ ಪದ ಬಳಕೆಯಲ್ಲಿದೆ. ತಾಟು ಎಂದರೆ 'ತಟ್ಟು; ತಗುಲು; ಸೋಕು.' 'ಪೋಟು' ಎಂದರೆ 'ಪೊಳ್ಳಾಗಿರು; ಜಳ್ಳಾಗಿರು; ಪೊಟರೆ ಬೀಳು.'

೬೪. ತಲಿಡ್ಕ

ಹಣಕ್ಕಾಗಿ ಇಲ್ಲವೇ ಇತರ ಅಗತ್ಯಗಳನ್ನು ಈಡೇರಿಸಿಕೊಳ್ಳುವುದಕ್ಕಾಗಿ ಯಾವುದೇ ಬಗೆಯ ಕೆಟ್ಟ ಕೆಲಸವನ್ನು ಮಾಡಲು ಹೇಸದ ಇಲ್ಲವೇ ಯಾರನ್ನು ಬೇಕಾದರೂ ಬಲಿ ಕೊಡಲು ಹಿಂಜರಿಯದ ವ್ಯಕ್ತಿ.

'ತಲಿಡ್ಕ' ಎಂಬ ನುಡಿಗಟ್ಟಿನಲ್ಲಿ 'ತಲೆ ಹಿಡುಕ' ಎಂಬ ಎರಡು ಪದಗಳಿವೆ. ಈ ನುಡಿಗಟ್ಟಿಗೆ "ಗಂಡಸರ ಕಾಮದ ಬಯಕೆಯನ್ನು ಈಡೇರಿಸಲು ಹೆಂಗಸರನ್ನು ಒದಗಿಸುವವನು" ಎಂಬ ತಿರುಳಿದೆ. ಕನ್ನಡ ನುಡಿ ಸಮುದಾಯದಲ್ಲಿ ಇಂತಹ ಕೆಲಸವನ್ನು ಸಾಮಾಜಿಕ ಕಳಂಕವೆಂದು ತಿಳಿಯಲಾಗಿದೆ. ತಲೆಹಿಡುಕತನವನ್ನು ಅತಿ ಕೆಟ್ಟ ಹಾಗೂ ವಂಚನೆಯ ನಡೆನುಡಿಗಳಿಗೆ ಒಂದು ರೂಪಕವನ್ನಾಗಿ ಬಳಸುತ್ತಾರೆ.

೬೫. ತಲ್ಪಾತ್ಕ

ನಂಬಿದವರನ್ನು ತಳುಕುಬಳುಕಿನ ನಡೆನುಡಿಗಳಿಂದ ಮೋಸಗೊಳಿಸಿ ಕೇಡನ್ನು ಬಗೆದು, ಅವರ ಸರ್ವನಾಶಕ್ಕೆ ಕಾರಣನಾಗುವ ವ್ಯಕ್ತಿ.

'ಪೀಳಿಗೆ; ತಲೆಮಾರು; ಸಂತತಿ' ಎಂಬ ರೂಪಕದ ತಿರುಳಿನಲ್ಲಿ ಬಳಕೆಯಾಗುವ 'ತಲೆ' ಎಂಬ ಕನ್ನಡ ಪದಕ್ಕೆ 'ಹಾಳು ಮಾಡಿದವನು' ಬೀಳಿಸಿದವನು; ಕೊನೆಗೊಳಿಸಿದವನು' ಎಂಬ ತಿರುಳಿನ 'ಪಾತಕ' ಎಂಬ ಸಂಸ್ಕೃತ ಪದ ಸೇರಿ 'ತಲೆಪಾತಕ' ಎಂಬ ಜೋಡುಪದ ರೂಪುಗೊಂಡಿದೆ. ಇದು ಕನ್ನಡಿಗರ ಮಾತುಕತೆಗಳಲ್ಲಿ "ಒಂದು ಮನೆತನವನ್ನೇ ಬುಡಸಮೇತ ಕಿತ್ತು ಹಾಳು ಮಾಡುವ, ಇತರರ ನೆಮ್ಮದಿಯ ಬದುಕನ್ನೇ ಕಿತ್ತುಕೊಳ್ಳುವ ಕೆಟ್ಟ ನಡೆನುಡಿಗಳಿಗೆ" ಒಂದು ರೂಪಕವಾಗಿ ಬಳಕೆಯಲ್ಲಿದೆ.

೬೬. ತಲ್ಸಿಡ್ಕ

ಮಾತಿನ ಸನ್ನಿವೇಶಗಳಲ್ಲಿ ಒಳಿತು ಕೆಡುಕುಗಳ ಅರಿವಿಲ್ಲದೆ, ಗುರು ಹಿರಿಯರು ಆಡುವ ಮಾತುಗಳನ್ನು ತಾಳ್ಮೆಯಿಂದ ಕೇಳಿಸಿಕೊಳ್ಳದೆ, ಇತರರ ನಿಲುವುಗಳನ್ನು ಲೆಕ್ಕಿಸದೆ ಬಾಯಿಗೆ ಬಂದಂತೆ ಒರಟೊರಟಾಗಿ ಮಾತನಾಡುವ ವ್ಯಕ್ತಿ.

'ಅರಿವು; ತಿಳುವಳಿಕೆ' ಎಂಬ ರೂಪಕದ ತಿರುಳಿನಲ್ಲಿ ಬಳಕೆಯಾಗುವ 'ತಲೆ' ಎಂಬ ಪದಕ್ಕೆ, ಯಾವಾಗಲೂ ಕೋಪತಾಪಗಳಿಂದ ಕುದಿಯುತ್ತಿರುವವನು ಎಂಬ ತಿರುಳಿನ 'ಸಿಡುಕ' ಎಂಬ ಪದ ಸೇರಿ 'ತಲೆಸಿಡುಕ' ಎಂಬ ಜೋಡುಪದ ರೂಪುಗೊಂಡಿದೆ. **"ಆ ತಲ್ಸಿಡ್ಕನ ಕಟ್ಕೊಂಡು ಹೋದ್ರೆ, ಯಾವ ಗೇಮೇನೂ ಆಗೂದಿಲ್ಲ"** ಎಂಬ ಮಾತು ಬಳಕೆಯಲ್ಲಿದೆ.

೬೭. ತಾಟ್ಗಿತ್ತಿ

ಕೊಡಬಾರದ ಕಿರುಕುಳವನ್ನು ನೀಡಿ ಜನರನ್ನು ಗೋಳು ಹುಯ್ದುಕೊಳ್ಳುವ ಹೆಂಗಸು.

ವಾಲ್ಮೀಕಿ ರಾಮಾಯಣದಲ್ಲಿ ಚಿತ್ರಣಗೊಂಡಿರುವ ಅನೇಕ ರಕ್ಕಸಿಯರಲ್ಲಿ 'ತಾಟಕಾ' ಎಂಬುವಳು ಒಬ್ಬಳಾಗಿದ್ದಾಳೆ. ಈಕೆಯು ಸುಬಾಹು ಮತ್ತು ಮಾರೀಚ ಎಂಬ ತನ್ನ ಇಬ್ಬರು ಗಂಡು ಮಕ್ಕಳ ಜತೆಗೂಡಿ ವಿಶ್ವಾಮಿತ್ರ ಮುನಿಯು ಕಾಡಿನಲ್ಲಿ

ಮಾಡುತ್ತಿದ್ದ ಯಾಗಕ್ಕೆ ಎಡೆಬಿಡದೆ ಅಡೆತಡೆಗಳನ್ನು ಒಡ್ಡುತ್ತಿದ್ದಾಗ, ರಾಮನ ಬಾಣದ ಪೆಟ್ಟಿನಿಂದ ಸಾವನ್ನಪ್ಪಿದಳು.

ಸಂಸ್ಕೃತ ನುಡಿಯಲ್ಲಿ ರಚನೆಗೊಂಡಿರುವ ಪುರಾಣಗಳಲ್ಲಿ ಮತ್ತು ಮಹಾಕಾವ್ಯಗಳಲ್ಲಿ ಕಂಡುಬರುವ 'ರಕ್ಕಸರು' ಎಂದರೆ 'ಒರಟರು; ಮಾನವರನ್ನು ತಿನ್ನುವವರು; ಕ್ರೂರಿಗಳು' ಎಂಬ ನಿಲುವು ಕನ್ನಡ ಜನಮನದಲ್ಲಿ ಹಿಂದಿನಿಂದಲೂ ನೆಲೆಸಿದೆ. ಇದರಿಂದಾಗಿ ತಾಟಕೆಯ ಹೆಸರನ್ನು ಹೆಂಗಸನ್ನು ನಿಂದಿಸಲು ಒಂದು ರೂಪಕವನ್ನಾಗಿ ಬಳಸುತ್ತಾರೆ. ತಾಟಕಾ ಎಂಬ ಸಂಸ್ಕೃತ ಪದ ಕನ್ನಡಿಗರಲ್ಲಿ ಬಳಕೆಗೆ ಬಂದಾಗ 'ತಾಟಕೆ' ಎಂದಾಗಿ, ಇದಕ್ಕೆ 'ಇತ್ತಿ' ಎಂಬ ಒಟ್ಟು ಸೇರಿ 'ತಾಟಗಿತ್ತಿ/ತಾಟ್ಗಿತ್ತಿ' ಎಂಬ ರೂಪದಲ್ಲಿ ಉಚ್ಚಾರಣೆಗೊಂಡಿದೆ.

೬೮. ತಾಪೇದಾರಿ ನನ್ಮಗ

ತನ್ನದೆನ್ನುವ ಯಾವುದೇ ಆಸ್ತಿಪಾಸ್ತಿಯಿಲ್ಲದೆ, ಇತರರನ್ನೇ ನೆಚ್ಚಿಕೊಂಡು, ಅವರ ಅಡಿಯಾಳಾಗಿ ದುಡಿಯುತ್ತಾ ಹೊಟ್ಟೆ ಹೊರೆದುಕೊಳ್ಳುತ್ತಿರುವ ವ್ಯಕ್ತಿ.

'ಕಯ್ ಕೆಳಗಿನ; ಹೇಳಿದಂತೆ ಕೇಳುವ; ಅಡಿಯಾಳುತನದ' ಎಂಬ ತಿರುಳಿನ 'ತಾಬೂಅ' ಎಂಬ ಅರಾಬಿಕ್ ಪದಕ್ಕೆ, 'ಹೊಂದಿರುವುದು;ಆಗಿರುವುದು' ಎಂಬ ತಿರುಳಿನ 'ದಾರ್' ಎಂಬ ಪರ್ಶಿಯನ್ ನುಡಿಯ ಒಟ್ಟು ಸೇರಿ 'ತಾಬೇದಾರ್' ಎಂಬ ಪರ್ಸೋ–ಅರಾಬಿಕ್ ಪದ ರೂಪುಗೊಂಡಿದೆ. ಇದು ಉರ್ದು ನುಡಿಯಲ್ಲಿ 'ಸೇವಕ; ಆಳು' ಎಂಬ ತಿರುಳಿನ 'ತಾಬೇದಾರ' ಮತ್ತು 'ಅಡಿಯಾಳುತನದ ಕೆಲಸ' ಎಂಬ ತಿರುಳಿನ 'ತಾಬೇದಾರಿ' ಎಂಬ ಪದರೂಪಗಳಲ್ಲಿ ಬಳಕೆಯಲ್ಲಿದೆ. ಉರ್ದು ನುಡಿ ಸಮುದಾಯದ ಒಡನಾಟದಿಂದ ಕನ್ನಡಿಗರಲ್ಲಿ ಬಳಕೆಗೆ ಬಂದಾಗ 'ತಾಪೇದಾರಿ' ಎಂಬ ರೂಪದಲ್ಲಿ ಉಚ್ಚಾರಣೆಗೊಂಡಿದೆ.

೬೯. ತಾಯ್ಗಂಡ

ನಂಬಿದವರಿಗೆ ಎರಡು ಬಗೆಯುವವನು.

ಕನ್ನಡ ನುಡಿ ಸಮುದಾಯಕ್ಕೆ ಸೇರಿದ ಕುಟುಂಬದಲ್ಲಿ "ಗಂಡು ಹೆಣ್ಣುಗಳ ನಡುವೆ ಯಾರು ಯಾರೊಡನೆ ಕಾಮದ ನಂಟನ್ನು ಹೊಂದಬಹುದು ಇಲ್ಲವೇ ಹೊಂದಬಾರದು" ಎಂಬುದಕ್ಕೆ ತಲತಲಾಂತರಗಳಿಂದ ನಡೆದು ಬಂದ ಸಂಪ್ರದಾಯದ ಕಟ್ಟುಪಾಡುಗಳಿವೆ. ಇವುಗಳಲ್ಲಿ ತಾಯಿಯೊಡನೆ ಮಗನು ಕಾಮದ ನಂಟನ್ನು ಹೊಂದಬಾರದೆಂಬ ಕಟ್ಟುಪಾಡನ್ನು ಮುರಿದವನನ್ನು

‘ತಾಯ್ ಗಂಡ’ ಎನ್ನುತ್ತಾರೆ. ಈ ಬಗೆಯ ಕಾಮದ ನಂಟನ್ನು ಬಹು ದೊಡ್ಡ ಸಾಮಾಜಿಕ ಕಳಂಕವೆಂದು ಸಮಾಜ ಪರಿಗಣಿಸಿದೆ. ತಾಯ್ಗಂಡತನವನ್ನು ನಂಬಿಕೆದ್ರೋಹದ ನಡವಳಿಕೆಗೆ ಒಂದು ರೂಪಕವನ್ನಾಗಿ ಬಳಸುತ್ತಾರೆ.

೭೦. ತಿರ್ಕೆ ಜಂಬದ ನನ್ಮಗ

ಒಳಗೇನು ಬಂಡವಾಳ ಇಲ್ಲದಿದ್ದರೂ, ಹೊರಗೆ ಮಾತ್ರ ಸಿರಿವಂತನಂತೆ ಮಾತನಾಡುವವನು.

ಕನ್ನಡ ನುಡಿ ಸಮುದಾಯದಲ್ಲಿ ‘ತಿರ್ಕೆ ಜಂಬ’ ಎಂಬುದು ಒಂದು ನುಡಿಗಟ್ಟು, ಇದಕ್ಕೆ “ಅವರಿವರ ಬಳಿ ಕಾಡಿಬೇಡಿ ತನ್ನ ಜೀವನ ನಡೆಸುತ್ತಿದ್ದರೂ, ಜನ ಸೇರಿದಾಗ ಮಾತಿನಲ್ಲಿ ತನ್ನ ದೊಡ್ಡಸ್ತಿಕೆಯನ್ನು ಮೆರೆಯುವುದು” ಎಂಬ ತಿರುಳಿದೆ. **“ತಿರುಪೆ ಎತ್ಕೊಂಡು ತಿಂತಿದ್ದರೂ, ತಿರ್ಕೆ ಜಂಬಕ್ಕೇನೂ ಕಮ್ಮಿಯಿಲ್ಲ”** ಎಂಬ ಮಾತು ಬಳಕೆಯಲ್ಲಿದೆ.

೭೧. ತಿರ್ಬೋಕಿ

ಕಂಡಕಂಡವರ ಮುಂದೆ ಕಯ್ಯೊಡ್ಡಿ ಬೇಡುತ್ತಾ ಹೊಟ್ಟೆಯನ್ನು ಹೊರೆದುಕೊಳ್ಳುವ ಹಾಗೂ ದಿಕ್ಕುದೆಸೆಯಿಲ್ಲದ ವ್ಯಕ್ತಿ.

‘ತಿರಿ’ ಎಂದರೆ ‘ಒಂದೆಡೆಯಿಂದ ಮತ್ತೊಂದೆಡೆಗೆ ಒಂದೇ ಸಮನೆ ಅಲೆಯುವುದು.’ ‘ಪೋಕಿ’ ಎಂದರೆ ‘ಇರುವುದಕ್ಕೆ ಒಂದು ನೆಲೆಯಿಲ್ಲದ, ತಿನ್ನುವುದಕ್ಕೆ ಅನ್ನವಿಲ್ಲದ, ದುಡಿದು ಬಾಳಬೇಕೆಂಬ ಚಲವಿಲ್ಲದ ಹಾಗೂ ಅಲೆಮಾರಿಯಾದ ವ್ಯಕ್ತಿ.’ **“ತಿರ್ಬೋಕಿ ನನ್ಮಕ್ಳು ಮಾತ್ಗೆ ಮೂರ್ಕಾಸಿನ ಬೆಲೆಯಿಲ್ಲ.” “ತಿರ್ಬೋಕಿ ಮುಂಡೇರನ್ನ ಮನೆ ಹೊಸ್ತಿಲ ಹತ್ರಕ್ಕೆ ಬಿಟ್ಕೊಬಾರ್ದು”** ಎಂಬ ಮಾತು ಬಳಕೆಯಲ್ಲಿದೆ.

೭೨. ತುಂಡ್ ನನ್ಮಕ್ಳು

ಸಮಾಜದ ಕಟ್ಟುಪಾಡುಗಳನ್ನು ಮೀರಿ, ಇತರರ ಒಳಿತನ್ನು ಕಡೆಗಣಿಸಿ, ತಮಗೆ ಬೇಕಾದುದನ್ನು ಪಡೆಯಲು ಯಾವುದೇ ಬಗೆಯ ಕೆಟ್ಟ ಕೆಲಸಗಳನ್ನು ಮಾಡಲು ಹೇಸದ ವ್ಯಕ್ತಿಗಳು.

‘ಸೊಕ್ಕಿನ ನಡೆನುಡಿ; ಪುಂಡಾಟ; ಮನ ಬಂದಂತೆ ನಡೆಯುವುದು; ಹತೋಟಿಯಿಲ್ಲದ್ದು’ ಎಂಬ ತಿರುಳುಳ್ಳ ‘ತೊಂಡು’ ಎಂಬ ಪದವು ‘ತುಂಡು’ ಎಂಬ

ರೂಪದಲ್ಲಿ ಉಚ್ಚಾರಣೆಗೊಂಡಿದೆ. **"ಆ ತುಂಡ್ ನನ್ಮಕ್ಳು ಜತೇಲಿ ಹೋದ್ರೆ, ನಮ್ಮ ಮಾನ ಮರ್ಯಾದೆಯೆಲ್ಲ ಹರಾಜಾಗೋಯ್ತದೆ"** ಎಂಬ ಮಾತು ಬಳಕೆಯಲ್ಲಿದೆ.

೭೪. ತೊಡ್ಡಾಗ್ಲ

ಕಯ್ಗೊಂಡ ಯಾವೊಂದು ಕೆಲಸವನ್ನೂ ಸರಿಯಾಗಿ ಮಾಡದೆ, ತಾನಿರುವ ನೆಲೆಯು ಹಾಳಾಗಲು ಕಾರಣನಾದವನು.

ಕನ್ನಡ ನುಡಿ ಸಮುದಾಯದಲ್ಲಿ ವ್ಯಕ್ತಿಯ ಬರುವಿಕೆಯಿಂದ ಒಂದು ಮನೆಗೆ ಒಳ್ಳೆಯದಾಗುತ್ತದೆ ಇಲ್ಲವೇ ಕೆಟ್ಟದ್ದಾಗುತ್ತದೆ ಎಂಬ ನಂಬಿಕೆಯಿದೆ. ಇದನ್ನು 'ಕಾಲ್ಗುಣ' ಎನ್ನುತ್ತಾರೆ. 'ತೊಡೆ' ಎಂಬ ಪದಕ್ಕೆ 'ನಾಶವಾಗು; ಇಲ್ಲವಾಗು' ಎಂಬ ತಿರುಳಿದೆ. ತೊಡೆಯುವ ಕಾಲ್ಗುಣವುಳ್ಳವನನ್ನು 'ತೊಡ್ಡಾಗ್ಲ' ಎಂದು ಬಯ್ಯುತ್ತಾರೆ. ಇದೇ ಗುಣವುಳ್ಳ ಹೆಣ್ಣನ್ನು 'ತೊಡ್ಡಾಗ್ಲಿ' ಎನ್ನುತ್ತಾರೆ.

"ಈ ತೊಡ್ಡಾಗ್ಲ ಹುಟ್ಟದ ಮ್ಯಾಲೆ ನಮ್ಮ ಮನೆಯೇ ಹಾಳಾಗೋಯ್ತು" ಮತ್ತು **"ಆ ತೊಡ್ಡಾಗ್ಲಿ ಬಂದ ಗಳ್ಗೆಯಿಂದ ನಮ್ಮ ಮನೇಗೆ ಬರಬಾರದ್ದು ಬಂತು"** ಎಂಬ ಮಾತು ಬಳಕೆಯಲ್ಲಿದೆ.

೭೫. ದಗಲ್ಬಾಜಿ

ಅತಿಯಾದ ಆಸೆ ಮತ್ತು ಮೋಸದ ನಡೆನುಡಿಗಳಿಂದ ಇತರರ ಆಸ್ತಿಪಾಸ್ತಿಗಳನ್ನು ಲಪಟಾಯಿಸುವ ಹಾಗೂ ನಂಬಿಕೆಗೆ ತಕ್ಕವನಲ್ಲದ ವ್ಯಕ್ತಿ.

'ಕಳಂಕ ಹಚ್ಚು; ಹಾಳು ಮಾಡು' ಎಂಬ ತಿರುಳುಳ್ಳ 'ದಗಯ್ಲ್' ಎಂಬ ಅರಾಬಿಕ್ ಪದಕ್ಕೆ ಮಾಡುವವನು ಎಂಬ ತಿರುಳಿನ 'ಬಾಜ್' ಎಂಬ ಪರ್ಶಿಯನ್ ನುಡಿಯ ಒಟ್ಟು ಸೇರಿ "ಕಳಂಕ ಹಚ್ಚುವವನು/ಹಾಳು ಮಾಡುವವನು/ಮಸಿ ಬಳಿಯುವವನು" ಎಂಬ ತಿರುಳಿನ 'ದಗಯ್ಲ್‌ಬಾಜ್' ಎಂಬ ಪರ್ಶೋ-ಅರಾಬಿಕ್ ಪದ ರೂಪುಗೊಂಡಿದೆ. ಇದು ಉರ್ದು ಮತ್ತು ಮರಾಠಿ ನುಡಿ ಸಮುದಾಯಗಳಲ್ಲಿ 'ಮೋಸಗಾರ; ವಂಚಕ; ನಂಬಿಕೆದ್ರೋಹಿ' ಎಂಬ ತಿರುಳುಳ್ಳ 'ದಗಲ್ಬಾಜಿ' ಎಂಬ ರೂಪದಲ್ಲಿ ಬಳಕೆಯಾಗಿದೆ. ಈ ಎರಡು ನುಡಿ ಸಮುದಾಯಗಳ ಒಡನಾಟದಿಂದ ಕನ್ನಡದಲ್ಲಿ ಬಳಕೆಗೆ ಬಂದಿದೆ.

೭೬. ದಗಾಕೋರ

ಕಪಟತನದ ನಡೆನುಡಿಗಳಿಂದ ಇತರರ ಆಸ್ತಿಪಾಸ್ತಿಗಳನ್ನು ದೋಚುವವನು.

'ಕಪಟ; ವಂಚನೆ; ದ್ರೋಹ' ಎಂಬ ತಿರುಳುಳ್ಳ 'ದಗಾ' ಎಂಬ ಅರಾಬಿಕ್ ಪದಕ್ಕೆ 'ಮಾಡುವವನು' ಎಂಬ ತಿರುಳುಳ್ಳ 'ಖಿರ್' ಎಂಬ ಪರ್ಶಿಯನ್ ನುಡಿಯ ಒಟ್ಟು ಸೇರಿ 'ದಗಾಖಿರ್' ಎಂಬ ಪರ್ಶೋ-ಅರಾಬಿಕ್ ಪದವು ರೂಪುಗೊಂಡಿದೆ. ಇದು ಉರ್ದು ನುಡಿಯಲ್ಲಿ ಬಳಕೆಗೆ ಬಂದಾಗ 'ದಗಾಖೋರ್' ಎಂದಾಗಿದೆ. ಉರ್ದು ನುಡಿ ಸಮುದಾಯದ ಒಡನಾಟದಿಂದ ಕನ್ನಡ ನುಡಿ ಸಮುದಾಯದಲ್ಲಿ ಬಳಕೆಗೆ ಬಂದಾಗ 'ದಗಾಕೋರ' ಎಂದು ಉಚ್ಚಾರಣೆಗೊಂಡಿದೆ.

೭೭. ದಯ್ಯಂಗುಟ್ಟಿದ ನನ್ಮಗ

ಹೆತ್ತ ತಾಯಿತಂದೆಗಳ, ಒಡಹುಟ್ಟಿದವರ ಕಯ್ ಹಿಡಿದ ಹೆಂಡತಿಯ, ಪಡೆದ ಮಕ್ಕಳ ಮತ್ತು ನೆರೆಹೊರೆಯ ಜನಗಳ ಬದುಕಿನಲ್ಲಿ ಉಂಟಾಗುವ ನೋವು, ಸಂಕಟ, ಯಾತನೆಗಳಿಗೆ ಕಿಂಚಿತ್ತಾದರೂ ನೆರವಾಗದ ಇಲ್ಲವೇ ಮರುಗದ ವ್ಯಕ್ತಿ.

ಕನ್ನಡ ನುಡಿ ಸಮುದಾಯದ ಹಳ್ಳಿಗರ ಒಳನುಡಿಯಲ್ಲಿ "ಪಿಶಾಚಿ; ದೆವ್ವ; ಭೂತ" ಎಂಬ ಪದಗಳ ಬದಲಾಗಿ, 'ದಯ್ಯ/ದೆಯ್ಯ' ಎಂಬ ಪದಗಳನ್ನು ಬಳಸುತ್ತಾರೆ. ಮಾನವರ ನೆಮ್ಮದಿಯ ಬಾಳ್ವೆಗೆ ಬೇಕಾದ ಒಲವು ಮತ್ತು ಕರುಣೆಯ ನಡೆನುಡಿ ಯಿಲ್ಲದ, ಒರಟುತನ ಹಾಗೂ ಕ್ರೂರತನದ ವ್ಯಕ್ತಿತ್ವವುಳ್ಳವರನ್ನು ಹೆಸರಿಸುವಾಗ 'ದಯ್ಯಕ್ಕೆ ಹುಟ್ಟಿದವನು' ಎಂಬ ಪದಕಂತೆಯನ್ನು ಒಂದು ರೂಪಕವಾಗಿ ಬಳಸುತ್ತಾರೆ.

೭೮. ದ್ರಾಬೆ ನನ್ಮಗ್ನೆ

ನಡೆನುಡಿಗಳಲ್ಲಿ ಚೂಟಿಯಾಗಿಲ್ಲದ ಹಾಗೂ ಉಡುಗೆ ತೊಡುಗೆಗಳಲ್ಲಿ ಕೊಳಕಾಗಿರುವ ವ್ಯಕ್ತಿ.

'ದ್ರಾಪ' ಎಂಬ ಸಂಸ್ಕೃತ ಪದ ಕನ್ನಡಿಗರ ಬಾಯಲ್ಲಿ 'ದ್ರಾಬೆ' ಎಂದು ಉಚ್ಚಾರಣೆಗೊಂಡಿದೆ. 'ದ್ರಾಪ' ಎಂದರೆ 'ಬಡತನ, ಕೊಳಕುತನ, ಸೋಂಬೇರಿತನ ಹಾಗೂ ತಿಳಿಗೇಡಿತನದಿಂದ ಕೂಡಿರುವ ವ್ಯಕ್ತಿ.' **"ಆ ದ್ರಾಬೆ ನನ್ಮಗನ ಮೊಕ ನೋಡುದ್ರೆ, ಆಗೂ ಕೆಲಸನೂ ಹಾಳಾಗೋಯ್ತದೆ", "ಈ ದ್ರಾಬೆ ಮುಂಡೇದಕ್ಕೆ ಏನು ಹೇಳೂದ್ರೂ ತಲೆಗೆ ಹತ್ತುದಿಲ್ಲ"** ಎಂಬ ಮಾತು ಬಳಕೆಯಲ್ಲಿವೆ.

೭೯. ನಡ್ನೀರ್ನಲ್ಲಿ ಬುಂಡೆ ಕುಯ್ಯೋ ನನ್ಮಕ್ಳು

ಯಾವುದೇ ಒಂದು ಕೆಲಸದಲ್ಲಿ ತೊಡಗುವ ಮುನ್ನ ನೆರವು ನೀಡಿ ನಡೆಸಿಕೊಡುವ ನಂಬಿಕೆಯನ್ನು ಹುಟ್ಟಿಸಿ, ಕಯ್ಗೊಂಡ ನಂತರ ಅದಕ್ಕೆ ಅಡೆತಡೆಗಳನ್ನೊಡ್ಡಿ ಹಾಳು ಮಾಡುವವರು.

ತುಂಬಿ ಹರಿಯುತ್ತಿರುವ ನದಿಯನ್ನು ಈಜಿಕೊಂಡು ದಾಟುತ್ತಿರುವಾಗ, ಕಯ್ ಕಾಲುಗಳು ಸೋತರೆ, ನೀರಿನಲ್ಲಿ ಮುಳುಗದೆ ತೇಲುವಂತಿರಲೆಂದು ತಿರುಳನ್ನು ತೆಗೆದು ಒಣಗಿಸಿದ ಸೋರೆಕಾಯಿ ಬುರುಡೆಯನ್ನು ನಡುವಿಗೆ ಕಟ್ಟಿಕೊಂಡಿರುತ್ತಾರೆ. ನಡು ನೀರಿನಲ್ಲಿ ಬುರುಡೆಯನ್ನು ಕುಯ್ಯುವ ಕೆಲಸವು "ನಂಬಿಕೆದ್ರೋಹದ ನಡೆನುಡಿಗಳಿಗೆ" ಒಂದು ರೂಪಕವಾಗಿ ಬಳಕೆಯಾಗಿದೆ.

೮೦. ನನ್ಮಗ್ನೆ

"ನೀನು ನನಗೆ ಹುಟ್ಟಿದವನು" ಎಂಬ ತಿರುಳನ್ನು ಈ ಪದಕಂತೆ ಹೊಂದಿದೆ.

ಸಮಾಜ ಒಪ್ಪಿತ ರೀತಿಯಲ್ಲಿ ಮದುವೆಯಾದ ಗಂಡು-ಹೆಣ್ಣಿಗೆ ಹುಟ್ಟಿದ ಮಗುವಿಗೆ ಮಾತ್ರ ಸಾಮಾಜಿಕ ಮನ್ನಣೆಯಿರುತ್ತದೆ. ಈ ಬಯ್ಗುಳದ ಮೂಲಕ ವ್ಯಕ್ತಿಯ ಹುಟ್ಟಿನ ಮೂಲವನ್ನೇ ಕೆದಕಿ ಅಲ್ಲಗಳೆದಂತಾಗುತ್ತದೆ. ವ್ಯಕ್ತಿಯನ್ನು ಕುರಿತು ನೇರವಾಗಿ ಬಯ್ಯುವಾಗ, ಬಯ್ಗುಳದ ಪದಗಳ ಜತೆ 'ನನ್ಮಗ್ನೆ' ಎಂಬ ಪದಕಂತೆ ಹೆಚ್ಚಾಗಿ ಬಳಕೆಯಾಗುತ್ತದೆ. ಉದಾಹರಣೆ: **ಕಂತ್ರಿ ನನ್ಮಗ್ನೆ – ಲೋಫರ್ ನನ್ಮಗ್ನೆ ಕಳ್ ನನ್ಮಗ್ನೆ.** ಈ ರೀತಿ ಎರಡೆರಡು ಬಯ್ಗುಳಗಳ ಬಳಕೆಯಿಂದ ಬಯ್ಯುವಿಕೆಯ ಮೊನಚು ಹೆಚ್ಚಾಗುತ್ತದೆ.

೮೧. ನಮ್ಮಕ್ ಹರಾಮ್

ಉಂಡ ಮನೆಗೆ ಎರಡು ಬಗೆಯುವವನು ಇಲ್ಲವೇ ನೆರವನ್ನು ನೀಡಿ ಕಾಪಾಡಿದವರಿಗೆ ಕೇಡು ಎಸಗುವವನು.

'ಉಪ್ಪು' ಎಂಬ ತಿರುಳಿನ 'ನಮಕ್' ಎಂಬ ಪರ್ಶಿಯನ್ ಪದದೊಡನೆ 'ಇಸ್ಲಾಂ ಮತದ ಆಚರಣೆಗಳಿಗೆ ಹೊರತಾದುದು; ಅನಾಚಾರ; ಕೆಟ್ಟದ್ದು' ಎಂಬ ತಿರುಳಿನ 'ಹರಾಮ್' ಎಂಬ ಅರಾಬಿಕ್ ಪದ ಸೇರಿ 'ನಮಕ್ ಹರಾಮ್' ಎಂಬ ಪರ್ಶೋ-ಅರಾಬಿಕ್ ಜೋಡುಪದ ರೂಪುಗೊಂಡಿದೆ. ಈ ಪದವು ಉರ್ದು ನುಡಿ

ಸಮುದಾಯದ ಮಾತುಕತೆಗಳಲ್ಲಿ 'ನಂಬಿಕೆ ದ್ರೋಹದ ನಡೆನುಡಿಗಳಿಗೆ' ಒಂದು ರೂಪಕವಾಗಿ ಬಳಕೆಯಾಗುತ್ತಿದೆ. ಉರ್ದು ನುಡಿಯ ಒಡನಾಟದಿಂದ ಕನ್ನಡದಲ್ಲಿ ಬಳಕೆಗೆ ಬಂದಾಗ 'ನಮ್ಮಕ್ ಹರಾಮ್' ಎಂಬ ರೂಪದಲ್ಲಿ ಉಚ್ಚಾರಣೆಗೊಂಡಿದೆ. **"ಆ ನಮ್ಮಕ್ ಹರಾಮ್ ನನ್ಮಗನ್ನ ನಂಬ್ಕೊಂಡ್, ನನ್ ಮನೆಯೇ ಮುಳ್ಗೋಯ್ತು"** ಎಂಬ ಮಾತು ಕನ್ನಡಿಗರ ಮಾತುಕತೆಗಳಲ್ಲಿ ಬಳಕೆಯಲ್ಲಿವೆ.

೮೨. ನಸ್ಗುನಿ

ಹೊರನೋಟಕ್ಕೆ ಒಳ್ಳೆಯವನಂತೆ ನಡೆದುಕೊಳ್ಳುತ್ತ, ಒಳಗೊಳಗೆ ಕಿರುಕುಳವನ್ನು ಕೊಡುವ ಹಾಗೂ ಇಲ್ಲಸಲ್ಲದ ಮಾತುಗಳನ್ನಾಡಿ ಒಗ್ಗಟ್ಟಿನಿಂದ ಬಾಳುತ್ತಿರುವವರ ನಡುವೆ ಜಗಳವನ್ನು ಅಂಟು ಹಾಕುವ ವ್ಯಕ್ತಿ.

'ನಸ್ಗುನಿ' ಎಂಬುದು ಬೇಲಿಗಳ ಮೇಲೆ ಹಬ್ಬುವ ಹಂಬುಳ್ಳ ಒಂದು ಬಳ್ಳಿ. ಇದರಲ್ಲಿ ಹೆಬ್ಬೆಟ್ಟಿನ ಗಾತ್ರಕ್ಕೆ ಬಿಡುವ ಕಾಯಿಗೆ 'ನಸ್ಗುನ್ನಿಕಾಯಿ' ಎನ್ನುತ್ತಾರೆ. ಈ ಕಾಯಿಯ ಮೇಲ್ಗಡೆ ತುಂಬಾ ನವಿರಾದ ಮುಳ್ಳುಗಳಿರುತ್ತವೆ. ಕಾಯಿ ಒಣಗಿ ತಳ್ಳಾದಂತೆಲ್ಲಾ ಮುಳ್ಳುಗಳ ಮೊನೆ ಚೂಪಾಗುತ್ತದೆ. ಮುಳ್ಳುಗಳ ರಾಸಿಯನ್ನು 'ಸುಂಕು' ಎಂದು ಕರೆಯುತ್ತಾರೆ. ಈ ಸುಂಕು ಜನರ ಮಯ್ಯಿಕಯ್ಯಿಗೆ ಅಂಟಿಕೊಂಡಾಗ ತೊಗಲಿನಲ್ಲಿ ತಡೆಯಲಾಗದ ಉರಿ ಉಂಟಾಗುತ್ತದೆ. ಇದನ್ನು ಒಂದು ರೂಪಕವನ್ನಾಗಿ ಮಾಡಿಕೊಂಡು ಈ ಬಯ್ಗುಳವನ್ನು ಕಟ್ಟಲಾಗಿದೆ. 'ನಸ್ಗುನಿ' ಎಂಬ ಪದದಲ್ಲಿ 'ನಸೆ' ಮತ್ತು 'ಗುನಿ' ಎಂಬೆರಡು ಪದಗಳಿವೆ. ನಸೆ ಎಂದರೆ 'ನವೆ; ಉರಿ; ಕಡಿತ; ತುರಿಕೆ.' ಗುನಿ ಎಂದರೆ 'ಸಣ್ಣ ಸಣ್ಣ ಕಣಗಳಿಂದ ಕೂಡಿರುವ ಗುಂಗು ಇಲ್ಲವೇ ಸುಂಕು.'

"ಆಹಾ! ನಸ್ಗುನ್ನಿ ಮುಂಡೆ ಮಾಡೋದ್ನೆಲ್ಲ ಮಾಡ್ಬುಟ್ಟು ಈಗ ಏನೂ ಕಾಣ್ದೆ ಇದ್ದೋಳಂಗೆ ನಿಂತವ್ಳೆ". "ಅವನೊಬ್ಬ ನಸ್ಗುನ್ನಿಕಾಯಿ. ಅವನ ಸಾವಾಸಕ್ಕೆ ಯಾಕೆ ಹೋಗಿದ್ದೆ" ಎಂಬ ಮಾತು ಬಳಕೆಯಲ್ಲಿವೆ.

೮೩. ನಾಜೂಕಯ್ಯ

ಮಾತನಾಡುವಾಗ ಹುಸಿನಗೆಯನ್ನು ಬೀರುತ್ತಾ, ಕೇಳುವವರಿಗೆ ಮೆಚ್ಚುಗೆಯಾಗುವಂತಹ ನುಡಿಗಳನ್ನಾಡುತ್ತ, ತುಂಬಾ ನಯವಿನಯದಿಂದ ಜನರನ್ನು ಮರಳು ಮಾಡಿ ವಂಚಿಸುವವನು.

ನಟ ಮತ್ತು ನಾಟಕಕಾರ ಕೆ. ಹಿರಣ್ಣಯ್ಯನವರು ರಚಿಸಿ, ರಂಗದಲ್ಲಿ ಆಡಿ ತೋರಿಸಿದ 'ದೇವದಾಸಿ' ಎಂಬ ಸಾಮಾಜಿಕ ನಾಟಕದಲ್ಲಿರುವ ಒಂದು ಪಾತ್ರದ

ಹೆಸರು ನಾಜೂಕಯ್ಯ. ಈತ ಹಣವುಳ್ಳ ಗಂಡಸರ ಕಾಮದ ಬಯಕೆಯನ್ನು ಈಡೇರಿಸಲು ಹೆಣ್ಣುಗಳನ್ನು ಒದಗಿಸುವ ವ್ಯಕ್ತಿಯಾಗಿರುತ್ತಾನೆ. ಬಣ್ಣಬಣ್ಣದ ಮಾತುಗಳನ್ನಾಡುತ್ತಾ, ನಯಗಾರಿಕೆಯ ವರ್ತನೆಗಳಿಂದ ಗಂಡಸರ ಮನ ಸೆಳೆದು, ಅವರನ್ನು ದೇವದಾಸಿಯರತ್ತ ಕರೆದೊಯ್ಯುವ ಕಲೆಯಲ್ಲಿ ಪಳಗಿದ್ದನು. ಕನ್ನಡ ನುಡಿ ಸಮುದಾಯದ ಮಾತುಕತೆಗಳಲ್ಲಿ 'ನಯವಂಚಕತನದ ನಡೆನುಡಿಗಳಿಗೆ' ಒಂದು ರೂಪಕವಾಗಿ ನಾಜೂಕಯ್ಯನ ಹೆಸರು ಬಳಕೆಯಾಗುತ್ತಿದೆ. 'ಕೋಮಲವಾದುದು; ಮಿದುವಾದುದು; ನಯವಾದುದು' ಎಂಬ ತಿರುಳಿನ 'ನಾಜೂಕ್' ಎಂಬ ಪರ್ಶಿಯನ್ ಪದವು ಮರಾಠಿ ಮತ್ತು ಉರ್ದು ನುಡಿ ಸಮುದಾಯಗಳ ಮೂಲಕ ಕನ್ನಡದಲ್ಲಿ ಬಳಕೆಗೆ ಬಂದಾಗ 'ತಳುಕು; ಬೆಡಗು; ಚಾಲೋಕು' ಎಂಬ ತಿರುಳಿನಲ್ಲಿ ಬಳಕೆಯಾಗುತ್ತಿದೆ. 'ನಾಜೂಕು' ಎಂಬ ಪದಕ್ಕೆ 'ಅಯ್ಯ' ಎಂಬ ಪದ ಸೇರಿ 'ನಾಜೂಕಯ್ಯ' ಎಂಬ ಪದ ರೂಪುಗೊಂಡಿದೆ.

೮೪. ನಾಮರ್ದ

ಯಾವುದೇ ಕೆಲಸಕ್ಕೆ ಬಾರದವನು, ಹಿಂಜರಿಕೆಯ ನಡೆನುಡಿಯುಳ್ಳ ವ್ಯಕ್ತಿ.

'ನಪುಂಸಕ; ಗಂಡಸುತನವಿಲ್ಲದವನು; ಹೆದರುವವನು" ಎಂಬ ತಿರುಳುಳ್ಳ 'ನಾಮರ್ದ್' ಎಂಬ ಪರ್ಶಿಯನ್ ಪದವು ಉರ್ದು ನುಡಿ ಸಮುದಾಯದ ಒಡನಾಟದಿಂದ ಕನ್ನಡಿಗರಲ್ಲಿ ಬಳಕೆಗೆ ಬಂದಿದೆ.

'ವೀರ; ಸಾಹಸಿ; ಕೆಚ್ಚದೆಯುಳ್ಳ ಆಳು' ಎಂಬ ತಿರುಳುಳ್ಳ 'ಮರ್ದ್' ಎಂಬ ಪರ್ಶಿಯನ್ ಪದಕ್ಕೆ. 'ಇಲ್ಲ/ಅಲ್ಲ' ಎಂಬ ತಿರುಳುಳ್ಳ 'ನಾ' ಎಂಬ ಒಟ್ಟು ಸೇರಿ 'ನಾಮರ್ದ್' ಪದ ರೂಪುಗೊಂಡಿದೆ.

೮೫. ನಾಯಿ ನನ್ಮಗ್ನೆ

ಮಾನವ ಜೀವಿಯ ಸಾಮಾಜಿಕ ವ್ಯಕ್ತಿತ್ವವನ್ನೇ ಅಲ್ಲಗಳೆದು, ಅವನನ್ನು ಕೇವಲ ಒಂದು ಪ್ರಾಣಿಯೆಂದು ಆರೋಪಿಸುವ ಬಯ್ಗುಳವಿದು.

ಹೊಲಸು ಕಂಡ ಎಡೆಗೆ ನೆಗೆದು ತಿನ್ನುವ, ಬೆದೆಗೆ ಬಂದಾಗ ಅನೇಕ ನಾಯಿಗಳ ಜತೆ ಕಾಮದ ನೆಂಟನ್ನು ಹೊಂದುವ, ಹೊತ್ತುಗೊತ್ತಿಲ್ಲದೇ ಬೊಗಳುತ್ತಿರುವ ಮತ್ತು ಸಾಕಿದವರ ಮುಂದೆ ಬಾಲ ಮುದುರಿಕೊಳ್ಳುವ ನಾಯಿಗಳ ವರ್ತನೆಯನ್ನೇ ರೂಪಕವನ್ನಾಗಿ ಮಾಡಿಕೊಂಡು ಬಯ್ಯುತ್ತಾರೆ. "ನಾಯಿ ಮುಂಡೆ; ನಾಯ್ಗುಟ್ಟೋನೆ; ಕಂತ್ರಿನಾಯಿ; ಕಜ್ಜಿ ನಾಯಿ; ಹುಚ್ಚು ನಾಯಿ; ಬೀದಿ ನಾಯಿ" ಎಂಬ ಪದಕಂತೆಗಳು

ಬಯ್ಗುಳವಾಗಿ ಬಳಕೆಯಲ್ಲಿವೆ. ಬಳಕೆಯ ಸನ್ನಿವೇಶಕ್ಕೆ ತಕ್ಕಂತೆ ಇವು ಬಗೆಬಗೆಯ ತಿರುಳನ್ನು ಹೊಂದುತ್ತವೆ.

೮೬. ನಾರದ

ಒಂದೆಡೆಯಲ್ಲಿ ನಡೆದ ಮಾತುಕತೆ ಸಂಗತಿಯನ್ನು ಇಲ್ಲವೇ ಮತ್ತೊಂದೆಡೆಯಲ್ಲಿ ಹೇಳಿ, ಅಲ್ಲಿಯದನ್ನು ಇಲ್ಲಿ ಹೇಳಿ, ವ್ಯಕ್ತಿಗಳ ನಡುವೆ ಸಂಶಯ ಹಗೆತನದ ಒಳಗುದಿಯನ್ನು ಮೂಡಿಸಿ, ಅವರಲ್ಲಿ ಜಗಳವನ್ನು ಅಂಟುಹಾಕಿ, ತಾನು ಮಾತ್ರ ಏನೂ ಕಾಣದಂತಿರುವ ವ್ಯಕ್ತಿ.

ಸಂಸ್ಕೃತ ನುಡಿಯಲ್ಲಿ ರಚನೆಗೊಂಡಿರುವ ಪುರಾಣಗಳಲ್ಲಿ ಕಂಡುಬರುವ ನಾರದನು ಬ್ರಹ್ಮದೇವನ ಮಾನಸ ಪುತ್ರ, ದಕ್ಷ ಎಂಬುವವನಿಂದ **"ನೀನು ಯಾವತ್ತೂ ಒಂದೆಡೆ ನಿಲ್ಲದೆ, ಸದಾ ಕಾಲ ತಿರುಗುತ್ತಿರು"** ಎಂಬ ಶಾಪಕ್ಕೆ ಗುರಿಯಾಗಿದ್ದ ನಾರದನು ದೇವಲೋಕ, ಭೂಲೋಕ, ಪಾತಾಳಲೋಕಗಳಲ್ಲಿ ಒಂದೇ ಸಮನೆ ಸಂಚರಿಸುತ್ತಾ, ಲೋಕದ ಹಿತವನ್ನು ಕಾಪಾಡುವುದಕ್ಕಾಗಿ ವ್ಯಕ್ತಿ-ವ್ಯಕ್ತಿಗಳ ನಡುವೆ ಮನಸ್ತಾಪವುಂಟಾಗುವ ಸುದ್ದಿಗಳನ್ನು ಹರಡಿ, ಅವರ ನಡುವೆ ಕಲಹ ನಡೆಯುವಂತೆ ಮಾಡುತ್ತಿದ್ದನೆಂದು ನಾರದನ ಪಾತ್ರವನ್ನು ಚಿತ್ರಿಸಲಾಗಿದೆ. ಕನ್ನಡ ನುಡಿ ಸಮುದಾಯದ ಮಾತುಕತೆಯಲ್ಲಿ ನಾರದನ ಹೆಸರು 'ಚಾಡಿಕೋರ ತನದ ನಡೆನುಡಿಗಳಿಗೆ' ಒಂದು ರೂಪಕವಾಗಿ ಬಳಕೆಯಾಗುತ್ತಿದೆ. **"ನಾರದನಂತ ನಮ್ ಸ್ವಾದರಮಾವನ ಮಾತ್ ಕೇಳ್ಕೊಂಡು ಅಣ್ಣ-ತಮ್ಮಂದಿರಂಗಿದ್ದೋರು, ಈಗ ಹಾವು ಮುಂಗಸಿಯಂಗೆ ಆಡ್ತಾವರೆ"** ಎಂಬ ಮಾತು ಬಳಕೆಯಲ್ಲಿದೆ.

೮೭. ನಾಲಾಯಕ್ ನನ್ಮಗ

ಯಾವುದೇ ಒಂದು ಕೆಲಸವನ್ನು ಮಾಡಲು ಒಲವಿಲ್ಲದ, ಬಲವಿಲ್ಲದ, ನಿಪುಣತೆಯಿಲ್ಲದ ವ್ಯಕ್ತಿ.

'ಸರಿಯಾದುದು; ಉಪಯುಕ್ತವಾದುದು; ಯೋಗ್ಯವಾದುದು; ಗುಣವಂತ; ಶಕ್ತಿವಂತ' ಎಂಬ ಬಹುಬಗೆಯ ತಿರುಳುಳ್ಳ 'ಲಾಇಕ್' ಎಂಬ ಅರಾಬಿಕ್ ಪದಕ್ಕೆ 'ಇಲ್ಲ/ಅಲ್ಲ' ಎಂಬ ತಿರುಳುಳ್ಳ 'ನಾ' ಎಂಬ ಪರ್‍ಶಿಯನ್ ನುಡಿಯ ಒಟ್ಟು ಸೇರಿ 'ನಾಲಾಇಕ್' ಎಂಬ ಪರ್‍ಸೋ-ಅರಾಬಿಕ್ ಪದ ರೂಪುಗೊಂಡಿದೆ. ಇದು ಉರ್‍ದು ನುಡಿ ಸಮುದಾಯದ ಒಡನಾಟದಿಂದ ಕನ್ನಡಿಗರಲ್ಲಿ ಬಳಕೆಗೆ ಬಂದಾಗ

'ನಾಲಾಯಕ್' ಎಂದು ಉಚ್ಚಾರಣೆಗೊಂಡಿದೆ. **'ನಾಲಾಯಕ್ ಮುಂಡೆ; ನಾಲಾಯಕ್ ಕೆಲಸ; ನಾಲಾಯಕ್ ಜನ'** ಎಂಬ ಪದಕಂತೆಗಳು ಬಳಕೆಯಲ್ಲಿವೆ.

೭೭. ಪತ್ರೋಳಿ ನನ್ಮಗ

ಹಣ, ಗದ್ದುಗೆ ಆಸ್ತಿಪಾಸ್ತಿಗಳನ್ನುಳ್ಳ ಸಿರಿವಂತರ ನಡೆನುಡಿಗಳನ್ನು ಹಾಡಿ ಹೊಗಳುತ್ತ, ಅವರನ್ನು ಓಲೈಸಿಕೊಂಡು ಹೊಟ್ಟೆಯನ್ನು ಹೊರೆದುಕೊಳ್ಳುವ ವ್ಯಕ್ತಿ.

'ಎಲೆ; ದಳ; ಎಸಳು' ಎಂಬ ತಿರುಳಿನ 'ಪತ್ರ' ಎಂಬ ಪದ ಮತ್ತು 'ಗುಂಪು; ರಾಶಿ; ಸಮೂಹ' ಎಂಬ ತಿರುಳಿನ 'ಆವಲೀ' ಎಂಬ ಪದದ ಜತೆ ಸೇರಿ, 'ಜೋಡಿಸಿದ ಎಲೆಗಳು' ಎಂಬ ತಿರುಳಿನ 'ಪತ್ರಾವಲೀ' ಎಂಬ ಸಂಸ್ಕೃತ ಪದ ರೂಪುಗೊಂಡಿದೆ. ಈ ಪದವು ಕನ್ನಡಗರ ಬಾಯಲ್ಲಿ 'ಪತ್ರಾವಳಿ/ಪತ್ರೋಳಿ' ಎಂದಾಗಿದೆ. ಮುತ್ತುಗ, ಆಲ ಇನ್ನಿತರ ಗಿಡಮರಗಳ ಬಿಡಿ ಎಲೆಗಳನ್ನು ಜೋಡಿಸಿ ಮಾಡಿದ ಊಟದ ಎಲೆಯನ್ನು ಈ ಹೆಸರಿನಿಂದ ಕರೆಯುತ್ತಾರೆ.

ಕನ್ನಡಿಗರ ಮಾತುಕತೆಯಲ್ಲಿ ಇದು ಒಂದು ರೂಪಕವಾಗಿ **"ಅವನೊಬ್ಬ ಪತ್ರೋಳಿ ನನ್ಮಗ. ಏನಾದ್ರೂ ಒಂಚೂರು ಸಿಕ್ತದೆ ಅಂದ್ರೆ ಸಾಕು, ಯಾರನ್ನ ಬೇಕಾದ್ರೂ ಬಾಯ್ತುಂಬ ಕೊಂಡಾಡ್ತನೆ"** ಎಂಬ ಮಾತು ಬಳಕೆಯಲ್ಲಿದೆ.

೭೮. ಪರ್ದೇಸಿ ನನ್ಮಗ

ಇರುವುದಕ್ಕೆ ಒಂದು ನೆಲೆಯಿಲ್ಲದೆ, ತಿನ್ನುವುದಕ್ಕೆ ಅನ್ನವಿಲ್ಲದೆ, ತನ್ನವರೆಂದು ಹೇಳಿಕೊಳ್ಳುವುದಕ್ಕೆ ಯಾರೊಬ್ಬರೂ ಇಲ್ಲದೆ ಬಾಳುತ್ತಿರುವವನು ಇಲ್ಲವೇ ಜನ ಮನ ಸೇರದ ಅಂದರೆ ಯಾರೊಡನೆಯೂ ಒಡನಾಡದೆ ಒಬ್ಬಂಟಿಯಾಗಿ ಬಾಳ್ವೆ ಮಾಡುತ್ತಿರುವವನು.

ಸಂಸ್ಕೃತದಲ್ಲಿ 'ಹೊರನಾಡಿನವನು; ಪರದೇಶದವನು' ಎಂಬ ತಿರುಳಿನ 'ಪರದೇಶಿನ್' ಎಂಬ ಪದ ಮತ್ತು ಪರ್ಶಿಯನ್ ನುಡಿಯಲ್ಲಿ 'ದಿಕ್ಕುದೆಸೆಯಿಲ್ಲದ ಹೊರನಾಡಿನವನು' ಎಂಬ ತಿರುಳಿನ 'ಪರ್ದೇಸಿ' ಎಂಬ ಪದಗಳು ಬಳಕೆಯಲ್ಲಿವೆ. 'ಪರ್ದೇಸಿ' ಎಂಬ ಪದ ಪರ್ಶಿಯನ್ ನುಡಿಯಿಂದ ಉರ್ದು ನುಡಿ ಸಮುದಾಯದಲ್ಲಿ ಬಳಕಗೆ ಬಂದಾಗ 'ಗತಿಯಿಲ್ಲದ; ದಿಕ್ಕಿಲ್ಲದ; ತಬ್ಬಲಿಯಾದ ವ್ಯಕ್ತಿ' ಎಂಬ ರೂಪಕದ ತಿರುಳನ್ನು ಹೊಂದಿದೆ. ಉರ್ದು ನುಡಿಯ ಒಡನಾಟದಿಂದ ಕನ್ನಡದಲ್ಲಿ ಬಳಕೆಗೆ ಬಂದಿದೆ. **"ಆ ಪರ್ದೇಸಿ ಹತ್ರ ಹೋದ್ರೆ ಏನ್ ತಾನೆ ಸಿಕ್ಕದು... ಮೂರಾದಿ ಮಣ್ಣು"** ಎಂಬ ಮಾತು ಬಳಕೆಯಲ್ಲಿದೆ.

೯೦. ಪಾಕಡ ನನ್ಮಗ

ಚಾಲಾಕಿತನ ಮತ್ತು ಎದೆಗಾರಿಕೆಯ ನಡೆನುಡಿಗಳಿಂದ ಜನರನ್ನು ನಾನಾ ಬಗೆಗಳಲ್ಲಿ ವಂಚಿಸುವ ಹಾಗೂ ಕಯ್ಗೊಂಡ ಕೆಲಸವನ್ನು ಯಾವುದೇ ಬಗೆಯಲ್ಲಾದರೂ ಮಾಡಿ ಮುಗಿಸುವ ವ್ಯಕ್ತಿ.

'ಚತುರ; ಕಿಲಾಡಿ; ಗಟ್ಟಿಗ' ಎಂಬ ತಿರುಳಿನ 'ಫಾಕಡಾ' ಎಂಬ ಪದ ಉರ್ದು ಮತ್ತು ಮರಾಠಿ ನುಡಿ ಸಮುದಾಯಗಳಲ್ಲಿ ಬಳಕೆಯಲ್ಲಿದೆ. ಈ ಸಮುದಾಯಗಳ ಒಡನಾಟದಿಂದ ಕನ್ನಡದಲ್ಲಿ ಬಳಕೆಗೆ ಬಂದಿದೆ. **"ಅವನು ಬಲು ಪಾಕಡಾ ನನ್ಮಗ. ಅವನನ್ನ ಹಂಗೆಲ್ಲಾ ಸುಮ್‌ಸುಮ್ನೆ ನಂಬೂಕಾಗೂದಿಲ್ಲ"** ಎಂಬ ಮಾತು ಬಳಕೆಯಲ್ಲಿದೆ.

೯೧. ಪಾಪರ್ ನನ್ಮಗ

ತನ್ನದಾಗಿದ್ದ ಆಸ್ತಿಪಾಸ್ತಿಗಳೆಲ್ಲವನ್ನೂ ಕಳೆದುಕೊಂಡು ಬಿಡಿಗಾಸಿಗೂ ಗತಿಯಿಲ್ಲದೆ, ಸಮಾಜದಲ್ಲಿ ನಾಲ್ಕು ಮಂದಿಯ ನಡುವೆ ನೆಲೆಬೆಲೆಯಿಲ್ಲದೆ ಬಾಳುತ್ತಿರುವ ವ್ಯಕ್ತಿ.

'ಸಾಲದಿಂದ ಬಿಡುಗಡೆಯನ್ನು ಹೊಂದಿದವನು; ತಿರಿದು ತಿನ್ನುವವನು; ಸಾರ್ವಜನಿಕ ನೆರವಿನಿಂದ ಜೀವಿಸುವವನು' ಎಂಬ ತಿರುಳಿನ 'ಪಾಪರ್' ಎಂಬ ಪದವು ಇಂಗ್ಲಿಶ್ ನುಡಿಯಿಂದ ಕನ್ನಡ ನುಡಿ ಸಮುದಾಯದ ಮಾತುಕತೆಯಲ್ಲಿ ಬಳಕೆಗೆ ಬಂದಿದೆ.

ಕ್ರಿ.ಶ. ೧೫೪೨ರಲ್ಲಿ ಇಂಗ್ಲೆಂಡನ್ನು ಆಳುತ್ತಿದ್ದ ರಾಜನಾದ ಏಳನೆಯ ಹೆನ್ರಿ ಎಂಬುವನು ಸಾಲದ ಹೊರೆಯಿಂದ ಕುಸಿದಿದ್ದ ಬಡವರ ಹಿತಕ್ಕಾಗಿ ಒಂದು ಕಾನೂನನ್ನು ಮಾಡಿದನು. ಇದರಿಂದಾಗಿ ಯಾವುದೇ ಒಬ್ಬ ಸಾಲಗಾರನು 'ತಾನು ಆಸ್ತಿಪಾಸ್ತಿಯಿಲ್ಲದ ಕಡುಬಡವನೆಂದು, ಸಾಲವನ್ನು ಕಟ್ಟಲು ತನ್ನಿಂದಾಗುವುದಿಲ್ಲವೆಂದು' ನ್ಯಾಯಾಲಯಕ್ಕೆ ಮೊರೆ ಹೋದರೆ, ಎಲ್ಲಾ ಬಗೆಯ ಸಾಲಗಳಿಂದ ಆತನಿಗೆ ಬಿಡುಗಡೆ ದೊರೆಯುತ್ತಿತ್ತು. ಸಾಲದಿಂದ ಬಿಡುಗಡೆಯ ಆದೇಶವನ್ನು ಹೊರಡಿಸುವುದಕ್ಕೆ ಮುನ್ನ, ಅವನ ಬಳಿ ಯಾವುದಾದರೂ ಸಂಪತ್ತು ಇದ್ದಲ್ಲಿ, ಅದನ್ನು ಕೋರ್ಟ್ ಮುಟ್ಟುಗೋಲು ಹಾಕಿಕೊಂಡು, ಸಾಲಿಗರಿಗೆ ಅವರು ಕೊಟ್ಟಿರುವ ಸಾಲದ ಪ್ರಮಾಣಕ್ಕೆ ಅನುಗುಣವಾಗಿ ಹಂಚುತ್ತಿತ್ತು.

ಇದು ಭಾರತ ದೇಶದ ಕಾನೂನಿನಲ್ಲಿಯೂ 'ಇನ್ ಸಾಲ್ವೆನ್ಸಿ ಆಕ್ಟ್' ಎಂಬ ಹೆಸರಿನಲ್ಲಿ ಜಾರಿಯಲ್ಲಿದೆ. ಕೋರ್ಟಿನ ಮೂಲಕ ಈ ರೀತಿ ಸಾಲದಿಂದ ಬಿಡುಗಡೆ

ಪಡೆಯುವುದನ್ನು 'ಪಾಪರ್ ಚೀಟಿ ತೆಗೆದುಕೊಳ್ಳುವುದು' ಎಂದು ಕರೆಯುತ್ತಾರೆ. **"ಅವನೊಬ್ಬ ಪಾಪರ್ ಚೀಟಿ ನನ್ಮಗ, ಅವನಿಗೆ ಯಾವ ಯೋಗ್ಯತೆಯಿದೆ ಅಂತ, ಅವನತ್ರ ಹೋಗಿದ್ದೆ"** ಎಂಬ ಮಾತು ಜನ ಬಳಕೆಯಲ್ಲಿದೆ.

೯೨. ಪಿಶಾಚಿ

ಬೇಡಬೇಡವೆಂದು ದೂರ ತಳ್ಳಿದರೂ ಬೆಂಬಿಡದೆ ಬಂದು ಮತ್ತೆ ಮತ್ತೆ ಕಾಡುವ ಕೆಟ್ಟ ನಡೆನುಡಿಯುಳ್ಳ ವ್ಯಕ್ತಿ.

ಸಂಸ್ಕೃತ ನುಡಿ ಸಮುದಾಯದವರು ತಮಗೆ ಎದುರಾಳಿಗಳಾಗಿ ಹೋರಾಡಿದ ಭಾರತ ದೇಶದ ವಾಯುವ್ಯದ ಗಡಿಯಲ್ಲಿ ನೆಲೆಸಿದ್ದ ಬುಡಕಟ್ಟಿನ ಜನಸಮುದಾಯ ವೊಂದನ್ನು 'ಪಿಶಾಚಿ' ಎಂಬ ಹೆಸರಿನಿಂದ ಕರೆದರು. ಈ ಬುಡಕಟ್ಟಿಗೆ ಸೇರಿದ ಹೆಂಗಸನ್ನು 'ಪಿಶಾಚೀ/ಪಿಶಾಚಿಕಾ' ಎಂಬ ಪದದಿಂದ ಗುರುತಿಸಿದ್ದರು. ಸಂಸ್ಕೃತ ನುಡಿ ಬಳಕೆಯ ಸನ್ನಿವೇಶಗಳಲ್ಲಿ 'ದೆವ್ವ; ಮಸಣವಾಸಿಯಾದ ಶಿವನ ಸಂಗಡಿಗರು; ದೇವತೆಗಳಲ್ಲಿ ಒಂದು ಗಣ' ಎಂಬ ತಿರುಳುಗಳಲ್ಲಿಯೂ 'ಪಿಶಾಚ' ಪದ ಬಳಕೆಯಾಗುತ್ತಿತ್ತು.

ಕನ್ನಡ ನುಡಿ ಸಮುದಾಯದಲ್ಲಿ ಬಳಕೆಗೆ ಬಂದಿರುವ ಪಿಶಾಚಿ ಎಂಬ ಪದರೂಪವು ಹೆಣ್ಣು-ಗಂಡನ್ನು ಒಳಗೊಂಡಂತೆ "ಎಡೆಬಿಡದೆ ಪೀಡಿಸಿ ನೋವನ್ನು ಉಂಟುಮಾಡುವ ನಡೆನುಡಿಗಳಿಗೆ" ಒಂದು ರೂಪಕವಾಗಿ ಬಳಕೆಯಾಗುತ್ತಿದೆ. **"ಹೋದೆಯಾ ಪಿಶಾಚಿ ಎಂದರೆ ಬಂದೆ ಗವಾಕ್ಷೀಲಿ"** ಎಂಬ ಗಾದೆಯು ಕನ್ನಡಿಗರ ದಿನಬಳಕೆಯ ಮಾತುಕತೆಗಳಲ್ಲಿ ಕೇಳಿಬರುತ್ತದೆ.

೯೩. ಪುಡಾರಿ

ಜನ ಸಮುದಾಯದ ವ್ಯವಹಾರಗಳಲ್ಲಿ ನಾಲ್ಕು ಮಂದಿಯ ನಡುವೆ ತಾನೇ ಮುಂದಾಳಾಗಿ ನಿಂತು, ಎಲ್ಲರಿಗೂ ಒಳ್ಳೆಯದನ್ನು ಮಾಡುತ್ತಿರುವಂತೆ ನಟಿಸುತ್ತಾ ಹಣ, ಆಸ್ತಿ, ರಾಜಕೀಯ ಗದ್ದುಗೆಯನ್ನು ತನ್ನದಾಗಿಸಿಕೊಳ್ಳಲು ಹೊಂಚು ಹಾಕುತ್ತಿರುವ ವ್ಯಕ್ತಿ.

'ಮುಂದಾಳು; ನೇತಾರ; ನಾಯಕ' ಎಂಬ ತಿರುಳಿನ 'ಪುಢಾರಿ/ಪುಢಾಕಾರಿ' ಎಂಬ ಪದವು ಮರಾಠಿ ನುಡಿ ಸಮುದಾಯದಲ್ಲಿ ಬಳಕೆಯಲ್ಲಿದೆ. ಈ ಸಮುದಾಯದ ಒಡನಾಟದಿಂದ ಕನ್ನಡಿಗರ ಮಾತುಕತೆಗಳಲ್ಲಿ ಬಳಕೆಗೆ ಬಂದಾಗ ಪುಡಾರಿ ಎಂಬ ಪದವು 'ಎಗ್ಗಿಲ್ಲದ ಹಗಲು ದರೋಡೆಯ ನಡೆನುಡಿಗಳಿಗೆ" ಒಂದು ರೂಪಕವಾಗಿದೆ.

೯೪. ಪೂತ್ನಿ

ಇಲ್ಲಸಲ್ಲದ ಸಂಗತಿಗಳನ್ನು ಹೇಳಿ, ಒಳ್ಳೆಯ ನಂಟುಳ್ಳ ವ್ಯಕ್ತಿಗಳ ಮನಸ್ಸಿಗೆ ಹುಳಿಹಿಂಡಿ, ಅವರ ನಡುವಣ ಒಡನಾಟವನ್ನು ಮುರಿಯುವ ಹೆಂಗಸು.

ವ್ಯಾಸ ಮಹಾಭಾರತದಲ್ಲಿ ಚಿತ್ರಣಗೊಂಡಿರುವ ರಕ್ಕಸಿಯರಲ್ಲಿ 'ಪೂತನಾ' ಎಂಬುವಳು ಒಬ್ಬಳು. ಗೋಕುಲದಲ್ಲಿ ನಂದಗೋಪ ಮತ್ತು ಯಶೋಧೆಯ ಮಡಿಲಲ್ಲಿ ಬೆಳೆಯುತ್ತಿದ್ದ ಕೃಷ್ಣನನ್ನು ಕಂಸನ ಸೂಚನೆಯಂತೆ ಕೊಲ್ಲಲು ಈಕೆಯು ವೇಷ ಮರೆಸಿಕೊಂಡು ಬರುತ್ತಾಳೆ. ಎಳೆಯ ಕಂದ ಕೃಷ್ಣನನ್ನು ಒಲುಮೆಯಿಂದ ಎತ್ತಿ ಮುದ್ದಾಡುತ್ತಾ, ತನ್ನ ಎದೆಹಾಲನ್ನು ಉಣಿಸುವ ನೆಪದಲ್ಲಿ ಕೊಲ್ಲಲು ಹೊಂಚು ಹಾಕಿದಾಗ ಕೃಷ್ಣನಿಂದಲೇ ಸಾವನ್ನಪ್ಪುತ್ತಾಳೆ. 'ನಯವಂಚಕತನದ ನಡೆನುಡಿಗಳಿಗೆ' ಪೂತನಿಯ ಹೆಸರನ್ನು ಒಂದು ರೂಪಕವನ್ನಾಗಿ ಕನ್ನಡಿಗರು ತಮ್ಮ ಮಾತುಕತೆಗಳಲ್ಲಿ ಬಳಸುತ್ತಾರೆ.

೯೫. ಪೆದ್ದಾದರಗಿತ್ತಿ

ಕಂಡು ಕಂಡು ಎಲ್ಲಾ ಬಗೆಯ ತಪ್ಪುಗಳನ್ನು ಮಾಡುತ್ತಿದ್ದರೂ, ಏನೊಂದನ್ನೂ ಅರಿಯದವಳಂತೆ ನಟನೆ ಮಾಡುವ ಹೆಂಗಸು.

ಸಮಾಜಕ್ಕೆ ಒಪ್ಪಿತವಲ್ಲದ ರೀತಿಯಲ್ಲಿ ಗಂಡು-ಹೆಣ್ಣುಗಳು ಕಾಮದ ನಂಟನ್ನು ಹೊಂದಿದ್ದರೆ ಅದನ್ನು 'ಹಾದರ' ಎನ್ನುತ್ತಾರೆ. ಈ ಪದಕ್ಕೆ 'ಇಗ' ಒಟ್ಟು ಸೇರಿ 'ಹಾದರಿಗ' ಎಂದಾಗಿ ಹಾದರ ಮಾಡುವ ಗಂಡಸನ್ನು ಸೂಚಿಸುತ್ತದೆ. 'ಹಾದರಿಗ' ಪದಕ್ಕೆ 'ಇತ್ತಿ' ಒಟ್ಟು ಸೇರಿ 'ಹಾದರಗಿತ್ತಿ'ಯಾಗಿ ಹಾದರದಲ್ಲಿ ತೊಡಗಿರುವ ಹೆಂಗಸನ್ನು ಸೂಚಿಸುತ್ತದೆ. 'ಪೆದ್ದು' ಎಂದರೆ 'ಯಾವುದೇ ಬಗೆಯ ತಿಳುವಳಿಕೆಯಿಲ್ಲದಿರುವುದು.' ಪೆದ್ದು ಮತ್ತು ಹಾದರಗಿತ್ತಿ ಎಂಬ ಎರಡು ಪದಗಳು ಸೇರಿ ಜನಪದರ ಉಚ್ಚಾರಣೆಯಲ್ಲಿ 'ಪೆದ್ದಾದರಗಿತ್ತಿ' ಎಂಬ ರೂಪದಲ್ಲಿ ಬಳಕೆಯಾಗಿದೆ.

೯೬. ಪೊಂಟ್ ನನ್ಮಗ

ಆಡುವ ಮಾತು ಮತ್ತು ಮಾಡುವ ಕೆಲಸದಲ್ಲಿ ಪೊಳ್ಳುತನದ ನಡವಳಿಕೆಯುಳ್ಳ ವ್ಯಕ್ತಿ.

ತೆನೆ ಬಲಿತು ಬೆಳೆದು ನಿಂತಿರುವ ರಾಗಿ ಕಡ್ಡಿಯನ್ನು ಬುಡಮಟ್ಟದಲ್ಲಿ ಕುಯ್ದು ಅರಿಗಳನ್ನು ಹೊರೆಕಟ್ಟಿ ಮೆದೆ ಹಾಕುವುದಕ್ಕೆ ಬದಲಾಗಿ, ಕೆಲವೊಮ್ಮೆ ರಾಗಿ

ತೆನೆಯನ್ನು ಮಾತ್ರ ಕತ್ತರಿಸಿಕೊಂಡು, ಕಡ್ಡಿಗಳನ್ನು ಹೊಲ ಗದ್ದೆಯಲ್ಲಿ ಹಾಗೆಯೇ ಬಿಡುತ್ತಾರೆ. ಈ ರೀತಿ ತೆನೆ ಬರಿದಾಗಿ ನಿಂತಿರುವ ರಾಗಿ ಪಯಿರನ್ನು 'ಪಂಟು/ ಪೊಂಟು' ಎಂದು ಕರೆಯುತ್ತಾರೆ. ಪ್ರಯೋಜನವಿಲ್ಲದ ಮಾತುಕತೆ ಮತ್ತು ಕೆಲಸದಲ್ಲಿ ತೊಡಗಿರುವ ವ್ಯಕ್ತಿಯ ಸಾಮಾಜಿಕ ವರ್ತನೆಯನ್ನು ಸೂಚಿಸಲು 'ಪಂಟು/ಪೊಂಟು' ಎಂಬ ಪದವನ್ನು ಒಂದು ರೂಪಕವಾಗಿ ಬಳಸುತ್ತಾರೆ.

೯೭. ಪೋಕ್ರಿ ನನ್ಮಗ

ಕುಟುಂಬದ ಮತ್ತು ಸಮಾಜದ ಕಟ್ಟುಪಾಡುಗಳನ್ನು ಲೆಕ್ಕಿಸದೆ, ಗುರುಹಿರಿಯರ ಮಾತನ್ನು ಕೇಳದೆ, ಕೆಟ್ಟತನದ ನಡೆನುಡಿಗಳಿಂದ ಎಲ್ಲರಿಗೂ ಕಂಟಕನಾಗಿ ಬಾಳುತ್ತಿರುವ ವ್ಯಕ್ತಿ.

'ಪೋಕರಿ' ಎಂಬ ಪದಕ್ಕೆ 'ಕೆಟ್ಟ ನಡೆನುಡಿಯುಳ್ಳವನು; ನೀಚ; ಪೋಲಿ' ಎಂಬ ತಿರುಳಿದೆ. **"ಪೋಕ್ರಿಗಳ ಸಾವಾಸ ಮಾಡುದ್ರೆ ಹಾಳಾಗೋಯ್ತೀಯೆ... ಅಡ್ಡ ದಾರೀಲಿ ಹೋಗ್ಬೇಡ.... ನಿನ್ ಕೆಲ್ಸದಲ್ಲಿ ನಿಗವಾಗಿರು"** ಎಂಬ ಮಾತು ಬಳಕೆಯಲ್ಲಿದೆ.

೯೮. ಪೋರ್‌ಟೊಂಟಿ

ಬಗೆಬಗೆಯ ಸಂಚುಗಳಿಂದ ಜನರನ್ನು ಮೋಸಗೊಳಿಸಿ, ಆಸ್ತಿಪಾಸ್ತಿಗಳನ್ನು ಲಪಟಾಯಿಸುವುದರಲ್ಲಿ ನಿಸ್ಸೀಮನಾದವನು.

ಪತ್ರಗಳಲ್ಲಿನ ಬರಹವನ್ನು ತನಗೆ ಬೇಕಾದಂತೆ ತಿದ್ದಿ ಬದಲಾಯಿಸಿ, ಅದನ್ನೇ ಅಸಲು ಪತ್ರವೆಂದು ನೀಡುವ; ನಿಜವಾದ ವಸ್ತು ಒಡವೆಗಳಂತೆಯೇ ನಕಲಿ ವಸ್ತು-ಒಡವೆಗಳನ್ನು ತಯಾರಿಸಿ ಮಾರಾಟ ಮಾಡುವ, ಒಟ್ಟಿನಲ್ಲಿ ಇರುವುದನ್ನು ಮರೆಮಾಚಿ ಅದರ ರೂಪದಲ್ಲಿ ಮತ್ತೊಂದನ್ನು ಮುಂದೊಡ್ಡಿ ಜನರನ್ನು ವಂಚಿಸಿ ಸಂಪತ್ತನ್ನು ದೋಚುವ ವ್ಯಕ್ತಿಗಳಿಗೆ ಭಾರತ ದೇಶದ ದಂಡ ಶಾಸನದ ಕೋಡ್ ೪೨೦ರಲ್ಲಿ ಯಾವ ಬಗೆಯ ದಂಡನೆಯನ್ನು ನೀಡಬೇಕೆಂಬುದನ್ನು ನಮೂದಿಸಲಾಗಿದೆ. ಈ ಮೇಲ್ಕಂಡ ಬಗೆಯ ತಪ್ಪುಗಳನ್ನು ಮಾಡಿದ ವ್ಯಕ್ತಿಯ ಮೇಲೆ ನ್ಯಾಯಾಲಯದಲ್ಲಿ ಮೊಕದ್ದಮೆಯನ್ನು ಹೂಡುವಾಗ, ಪೊಲೀಸರು ೪೨೦ ಎಂಬ ಅಂಕಿಯನ್ನು ನಮೂದಿಸುತ್ತಾರೆ. ಜನಸಮುದಾಯದ ಮಾತುಕತೆಯಲ್ಲಿ 'ಫೋರ್‌ಟ್ವೆಂಟಿ' ಎಂಬ ಪದಕಂತೆಯು "ನಂಬಿಕೆದ್ರೋಹದ ನಡೆನುಡಿಗಳಿಗೆ" ಒಂದು ರೂಪಕವಾಗಿ ಬಳಕೆಯಾಗುತ್ತಿದೆ.

೯೯. ಬಕ್ರಾ ನನ್ಮಗ

ಇತರ ನಡೆನುಡಿಯಲ್ಲಿನ ತಪ್ಪು, ಕೊಂಕು, ವಂಚನೆಯನ್ನು ಅರಿಯದೆ, ಅವರು ಹೇಳಿದ್ದನ್ನು ಇಲ್ಲವೇ ಮಾಡಿದ್ದನ್ನು ನಂಬಿಕೊಂಡು ಮರುಮಾತಿಲ್ಲದೆ ಹಿಂಬಾಲಿಸುವ ವ್ಯಕ್ತಿ.

'ಹೋತ; ಗಂಡು ಆಡು' ಎಂಬ ತಿರುಳಿನ 'ಬಕರಾ' ಎಂಬ ಪದವು ಉರ್ದು, ಮರಾಠಿ, ಹಿಂದಿ ನುಡಿ ಸಮುದಾಯಗಳಲ್ಲಿ 'ದಡ್ಡತನ ನಡೆನುಡಿಗಳಿಗೆ' ಒಂದು ರೂಪಕವಾಗಿಯೂ ಬಳಕೆಯಲ್ಲಿದೆ. ಈ ಸಮುದಾಯಗಳ ಒಡನಾಟದಿಂದ ಕನ್ನಡದಲ್ಲಿ ಬಳಕೆಗೆ ಬಂದಿದೆ.

೧೦೦. ಬರ್ಗೆಟ್ಟ ನನ್ಮಗ

ತಾನು ಗಳಿಸಿದ ಇಲ್ಲವೇ ಇತರರು ನೀಡಿದ ಯಾವುದೇ ಒಡವೆ ವಸ್ತುಗಳಿಂದಲೂ ತುಸುವಾದರೂ ಹಿಗ್ಗು, ತಣಿವು, ನೆಮ್ಮದಿಯನ್ನು ಹೊಂದದೇ, ಇನ್ನೂ ಬೇಕುಬೇಕೆಂದು ಹಂಬಲಿಸುವ ವ್ಯಕ್ತಿ.

'ಕೊರತೆ; ಏನೂ ಇಲ್ಲದಿರುವುದು; ಮಳೆ ಬೆಳೆ ಹೋಗಿ ಕೂಳಿಲ್ಲದೆ ನರಳುವುದು' ಎಂಬ ತಿರುಳಿನ 'ಬರ' ಎಂಬ ಪದಕ್ಕೆ 'ಕೆಟ್ಟ' ಎಂಬ ಪದ ಸೇರಿ 'ಏನೂ ಇಲ್ಲದೆ ಕಂಗಾಲಾಗಿರುವುದು' ಎಂಬ ತಿರುಳಿನ 'ಬರಗೆಟ್ಟ' ಪದ ರೂಪುಗೊಂಡಿದೆ. ಒಂದಲ್ಲ ಒಂದು ಬಗೆಯ ಅರೆಕೊರೆಗಳಿಂದ ನರಳುತ್ತಿರುವ ನಡೆನುಡಿಗಳಿಗೆ ಒಂದು ರೂಪಕವಾಗಿ 'ಬರಗೆಟ್ಟ' ಎಂಬುದು ಕನ್ನಡಿಗರ ಮಾತುಕತೆಯಲ್ಲಿ ಬಳಕೆಯಾಗುತ್ತಿದೆ.

೧೦೧. ಬಜಾರಿ

ಚಿಕ್ಕವರು ದೊಡ್ಡವರೆನ್ನದೆ ಎಲ್ಲರೊಡನೆ ತೀಟೆ ಜಗಳ ತೆಗೆದು, ಮಾತಿಗೆ ಮಾತು ಬೆಳೆಸಿ, ಮಾತಿನಲ್ಲಿ ಯಾರಿಗೂ ಸೋಲದೆ, ಒರಟುತನ ಹಾಗೂ ಮೊಂಡುತನದಿಂದ ನಡೆದುಕೊಳ್ಳುವ ಹೆಂಗಸು.

'ಅಂಗಡಿ ಮುಂಗಟ್ಟುಗಳಿಂದ ಕೂಡಿರುವ ಜಾಗ; ಬಹುಬಗೆಯ ಸಾಮಾನುಗಳನ್ನು ಮಾರುವ ಪೇಟೆ ಬೀದಿ' ಎಂಬ ತಿರುಳುಳ್ಳ 'ಬಾಜಾರ್' ಎಂಬ ಪರ್ಶಿಯನ್ ಪದವು ಉರ್ದು ನುಡಿಯಲ್ಲಿ 'ಬಜಾರ್' ಎಂಬ ರೂಪದಲ್ಲಿ ಬಳಕೆಯಲ್ಲಿದೆ. ಪರ್ಶಿಯನ್ ನುಡಿಯಲ್ಲಿ 'ಬಾಜಾರೀ' ಎಂಬ ಪದಕ್ಕೆ 'ಪೇಟೆ ಬೀದಿಯಲ್ಲಿರುವ

ಹೆಂಗಸು; ಸೂಳೆ' ಎಂಬ ತಿರುಳಿದೆ. ಉರ್ದು ನುಡಿ ಸಮುದಾಯದ ಒಡನಾಟದಿಂದ ಕನ್ನಡ ನುಡಿ ಸಮುದಾಯದಲ್ಲಿ 'ಬಜಾರು ಮತ್ತು ಬಜಾರಿ" ಎಂಬ ಎರಡು ಪದಗಳು ಬಳಕೆಗೆ ಬಂದಿವೆ. **"ಆ ಬಜಾರಿಗೆ ಯಾರ್ ತಾನೇ ಬಾಯ್ ಕೊಡೂಕಾದದು!"** ಎಂಬ ಮಾತು ಕನ್ನಡಿಗರ ಮಾತಿನ ಸನ್ನಿವೇಶಗಳಲ್ಲಿ ಕೇಳಿಬರುತ್ತದೆ.

೧೦೨. ಬಡ್ಡತ್ತದ್ದೆ

ಬಡ್ಡಿಯು ಹೆತ್ತ ಮಗುವೇ ಬಡ್ಡತ್ತದ್ದು.

ಬಡ್ಡಿ ಎಂದರೆ 'ಸೂಳೆ.' ಯಾವುದೇ ವ್ಯಕ್ತಿಯನ್ನು ನೇರವಾಗಿ ಬಯ್ಯುವಾಗ 'ಬಡ್ಡತ್ತದ್ದೆ' ಎಂಬ ಎಕಾರಾಂತವಾದ ಪದರೂಪವನ್ನು ಬಳಸುತ್ತಾರೆ. ಇದು 'ಸೂಳೆಯ ಮಗ ಇಲ್ಲವೇ ಮಗಳು' ಎಂಬ ತಿರುಳನ್ನು ಹೊಂದಿದೆ. ಕೆಲವರು ಇದನ್ನು "ಬೊಡ್ಡತ್ತದ್ದೆ" ಎಂದು ಉಚ್ಚರಿಸುತ್ತಾರೆ.

೧೦೩. ಬದ್ಮಾಶ್

ಕೆಟ್ಟ ನಡೆನುಡಿಗಳಿಂದ ಎಲ್ಲವನ್ನೂ ಹಾಳು ಮಾಡುವ ವ್ಯಕ್ತಿ.

'ಕಯ್ಗೊಂಡ ಕೆಲಸ; ಜೀವನೋಪಾಯ' ಎಂಬ ತಿರುಳುಳ್ಳ 'ಮಆಶ್' ಎಂಬ ಅರಾಬಿಕ್ ಪದಕ್ಕೆ 'ಕೆಟ್ಟದ್ದು; ಹಾಳಾದ್ದು; ಕೆಡುಕ; ನೀಚ' ಎಂಬ ತಿರುಳುಳ್ಳ 'ಬದ್' ಎಂಬ ಪರ್ಶಿಯನ್ ನುಡಿಯ ಒಟ್ಟು ಸೇರಿ 'ಬದ್ಮಾಶ್' ಎಂಬ ಪರ್ಶೋ-ಅರಾಬಿಕ್ ಜೋಡುಪದ ರೂಪುಗೊಂಡಿದೆ. ಉರ್ದು ನುಡಿ ಸಮುದಾಯದ ಒಡನಾಟದಿಂದ ಕನ್ನಡಿಗರಲ್ಲಿ ಬಳಕೆಗೆ ಬಂದಿದೆ. ಬಡಗಣ ಕರ್ನಾಟಕದ ಒಳನುಡಿಯಲ್ಲಿ 'ಬದಮಾಶ/ಬದಮಾಸ' ಎಂಬ ರೂಪಗಳಲ್ಲಿಯೂ ಉಚ್ಚಾರಣೆಗೊಳ್ಳುತ್ತಿದೆ.

೧೦೪ ಬಸವಿ

ಕುಟುಂಬದಲ್ಲಿ ಮತ್ತು ಸಮಾಜದಲ್ಲಿ ಯಾರೊಬ್ಬರ ಅಂಕೆಶಂಕೆಗೂ ಒಳಪಡದೆ, ಯಾವುದನ್ನೂ ಯಾರನ್ನೂ ಲೆಕ್ಕಿಸದೆ, ಸೊಕ್ಕಿನಿಂದ ತನ್ನ ಮನ ಬಂದಂತೆ ನಡೆದುಕೊಳ್ಳುವ ಹೆಂಗಸು.

ಕರ್ನಾಟಕದ ಹಳ್ಳಿಗಾಡಿನ ಜನ ಸಮುದಾಯದಲ್ಲಿ 'ಬಸವನನ್ನು ಬಿಡುವುದು' ಎಂಬ ಒಂದು ಆಚರಣೆಯಿದೆ. ದನದ ಗಂಡುಕರುವಿನ ಮಯ್ ಮೇಲೆ ಇತರ ಕರುಗಳಲ್ಲಿ ಸಾಮಾನ್ಯವಾಗಿ ಇಲ್ಲದ ಹಾಗೂ ನೋಡಿದವರ ಮನದಲ್ಲಿ

ಅಚ್ಚರಿಯನ್ನು ಉಂಟುಮಾಡುವ ಚಹರೆಗಳಿದ್ದರೆ, ಅದಕ್ಕೆ ಮೂಗುದಾರವನ್ನು ಇಲ್ಲವೇ ಹಗ್ಗವನ್ನು ಹಾಕದೆ, ದೇವರ ಹೆಸರಿನಲ್ಲಿ ಬೀದಿಯಲ್ಲಿ ಬಿಡುತ್ತಿದ್ದರು. ಇಂತಹ ದನವನ್ನು 'ಬಸವ'ನೆಂದು ಕರೆಯುತ್ತಾರೆ. ದೇವರಾದ ಈಶ್ವರನಿಗೆ ಬಸವನು ವಾಹನವೆಂಬ ನಂಬಿಕೆಯು ಜನಮನದಲ್ಲಿದೆ. ಊರಿನ ಹಾದಿಬೀದಿಗಳಲ್ಲಿ ಮತ್ತು ಹೊಲಗದ್ದೆ ತೋಟಗಳಲ್ಲಿ ಅಡ್ಡಾಡುತ್ತಾ, ಮೇವು ಸಿಕ್ಕಲ್ಲೆಲ್ಲ ಬಾಯಾಡಿಸುತ್ತ, ಗಟ್ಟಿಮುಟ್ಟಾಗಿ ಬೆಳೆಯುವ ಬಸವನನ್ನೇ ಒಂದು ರೂಪಕವನ್ನಾಗಿ ಮಾಡಿಕೊಂಡು, 'ಬಸವ' ಎಂಬ ಪದಕ್ಕೆ 'ಇ' ಎಂಬ ಒಟ್ಟನ್ನು ಸೇರಿಸಿ 'ಬಸವಿ' ಎಂಬ ಪದವನ್ನು ರೂಪಿಸಿಕೊಂಡು, ಹೆಣ್ಣನ್ನು ನಿಂದಿಸುವುದಕ್ಕಾಗಿ ಬಳಸುತ್ತಾರೆ. ಇದೇ ತಿರುಳಿನಲ್ಲಿ 'ಊರ್ ಬಸವಿ/ಬೀದಿ ಬಸವಿ' ಎಂಬ ಆರೋಪದ ಬಯ್ಗುಳಗಳು ಬಳಕೆಯಲ್ಲಿವೆ.

ಕರ್ನಾಟಕದ ಕೆಲವೆಡೆಗಳಲ್ಲಿ 'ಬಸವಿ ಬಿಡುವುದು' ಎಂಬ ಒಂದು ಆಚರಣೆಯು ಹಿಂದಿನಿಂದಲೂ ಬಳಕೆಯಲ್ಲಿತ್ತು. ಮೇಲು-ಕೀಳಿನ ಜಾತಿ ಮೆಟ್ಟಿಲುಗಳಿಂದ ಕೂಡಿರುವ ಕನ್ನಡ ಜನ ಸಮುದಾಯದಲ್ಲಿ, ಕೆಳಜಾತಿ ಹಾಗೂ ಬಡತನದ ಬೇಗೆಯಲ್ಲಿ ಬೇಯುತ್ತಿದ್ದ ಜನರು ತಮ್ಮನ್ನು ಕಾಡುತ್ತಿರುವ ರೋಜರುಜಿನಗಳಿಂದ ಮತ್ತು ಸಾವುನೋವುಗಳಿಂದ ಪಾರಾಗಲು ದೇವರ ಹೆಸರಿನಲ್ಲಿ ಹರಕೆಯನ್ನು ಕಟ್ಟಿಕೊಂಡು, ಚಿಕ್ಕ ವಯಸ್ಸಿನ ತಮ್ಮ ಹೆಣ್ಣು ಮಕ್ಕಳನ್ನು ದೇವಾಲಯದ ಊಳಿಗಕ್ಕಾಗಿ ಮೀಸಲು ಬಿಡುತ್ತಿದ್ದರು. ಇಂತಹ ಹೆಣ್ಣುಮಕ್ಕಳನ್ನು 'ಬಸವಿ'ಯರೆಂದು ಕರೆಯುತ್ತಿದ್ದರು. ಮದುವೆಯಿಲ್ಲದೆ ಒಬ್ಬಂಟಿಗರಾಗಿ ಬಾಳುತ್ತಿದ್ದ ಇವರನ್ನು ಸಮಾಜದಲ್ಲಿನ ಮೇಲು ಜಾತಿಯವರು ಹಾಗೂ ಉಳ್ಳವರು ತಮ್ಮ ಕಾಮದ ತೀಟೆಯನ್ನು ತೀರಿಸಿಕೊಳ್ಳಲು ಬಲಿತೆಗೆದುಕೊಳ್ಳುತ್ತಿದ್ದರು.

೧೦೫. ಬುಡ್ಗೆಟ್ ನನ್ ಸವ್ತಿ

ನೆಮ್ಮದಿಯಿಂದ ಬಾಳುವುದಕ್ಕೆ ಬೇಕಾದ ಯಾವುದೇ ಆಸ್ತಿಪಾಸ್ತಿಯಿಲ್ಲದೆ, ಹಣಕಾಸಿನ ಅನುಕೂಲವಿಲ್ಲದೆ, ಇರಲು ಒಂದು ನೆಲೆಯಿಲ್ಲದೆ, ಇತ್ತ ತವರೂರಿನ ಇಲ್ಲವೇ ಅತ್ತ ಗಂಡನ ಮನೆಯ ಜನರಲ್ಲಿ ಯಾರೊಬ್ಬರ ಒತ್ತಾಸೆಯಿಲ್ಲದೆ, ಹೊಟ್ಟೆಹೊರೆದುಕೊಳ್ಳುವುದಕ್ಕೆ ಬೇರೆಯವರನ್ನು ನೆಮ್ಮಿಕೊಂಡಿರುವ ಹೆಂಗಸು.

'ಮರಗಿಡಗಳ ತಾಯಿಬೇರಿನ ಜಾಗ' ಎಂಬ ತಿರುಳಿನ ಜತೆಗೆ, 'ವಂಶ; ಮನೆತನ' ಎಂಬ ರೂಪಕದ ತಿರುಳಿನಲ್ಲಿಯೂ ಬಳಕೆಯಾಗುತ್ತಿರುವ 'ಬುಡ' ಎಂಬ ಪದಕ್ಕೆ, 'ಹಾಳಾಗಿರುವ' ಎಂಬ ತಿರುಳಿನ 'ಕೆಟ್ಟ' ಎಂಬ ಪದ ಸೇರಿ 'ಬುಡಗೆಟ್ಟ' ಎಂಬ ಜೋಡುಪದ ರೂಪುಗೊಂಡಿದೆ. ಬಯ್ಗುಳದ ಮೊನಚನ್ನು

ಹೆಚ್ಚಿಸಲೆಂದು ಮಾತಿನ ಸನ್ನಿವೇಶದಲ್ಲಿ 'ನನ್ನ ಸವತಿ' ಎಂಬ ಮತ್ತೊಂದು ಬಯ್ಗುಳವನ್ನು ಆಡಲಾಗಿದೆ.

೧೦೬. ಬುರುಡೆ ನನ್ಮಗ

ತಾನು ಕಂಡಿಲ್ಲದ, ಕೇಳಿಲ್ಲದ ಹಾಗೂ ನಡೆದಿಲ್ಲದ ಸಂಗತಿಗಳನ್ನು ಕೇಳುಗರು ನಂಬುವಂತೆ ಕತೆಕಟ್ಟಿ ಹೇಳುವ ಸುಳ್ಳುಗಾರ.

'ಬುರುಡೆ' ಎಂದರೆ ತಲೆಯ ಚಿಪ್ಪು. ಈ ಪದ ಇತರ ಪದಗಳ ಜತೆ ಸೇರಿ "ಬುರುಡೆ ಮಾತು; ಬುರುಡೆ ಹೊಡಿ; ಬುರುಡೆ ಬಿಡು" ಎಂಬ ನುಡಿಗಟ್ಟಾಗಿ ಕನ್ನಡ ಜನಸಮುದಾಯದ ಮಾತಿನ ಸನ್ನಿವೇಶಗಳಲ್ಲಿ ಬಳಕೆಯಾಗುತ್ತಿದೆ.

೧೦೭. ಬೂಟಾಟ್ಕೆ ನನ್ಮಗ

ಹೊರಗೊಂದು ಒಳಗೊಂದು ಬಗೆಯ ನಡೆನುಡಿಗಳಿಂದ ಜನರನ್ನು ಮರುಳು ಗೊಳಿಸಿ ತನ್ನತ್ತ ಸೆಳೆಯುವ ಇಲ್ಲವೇ ನೋಡುವವರ ಕಣ್ಣಿಗೆ ಒಳ್ಳೆಯವನಂತೆ ಕಾಣಿಸಿಕೊಂಡು ಮಾಡುವ ಕೆಲಸಗಳಲ್ಲಿ ಜನರನ್ನು ವಂಚಿಸುವ ವ್ಯಕ್ತಿ.

'ನಟನೆ; ತೋರಿಕೆ; ಮೋಸ; ಕಪಟ' ಎಂಬ ತಿರುಳುಳ್ಳ 'ಬೂಟ' ಎಂಬ ಪದಕ್ಕೆ 'ಆಟ' ಎಂಬ ಪದ ಮತ್ತು 'ಇಕೆ' ಎಂಬ ಒಟ್ಟು ಸೇರಿ 'ಬೂಟಾಟಿಕೆ' ಎಂಬ ಪದ ರೂಪು ಗೊಂಡಿದೆ. "**ಅವನ ಬೂಟಾಟ್ಕೆ ನಾಟಕವ ನೋಡೋಕಾಗೋದಿಲ್ಲ. ಅವನು ಯಾವಾಗಲೂ ಆಡೋದೆ ಒಂದು, ಮಾಡೋದೆ ಮತ್ತೊಂದು**" ಎಂಬ ಮಾತು ಬಳಕೆಯಲ್ಲಿದೆ.

೧೦೮. ಬೆದಗಣ್ಣೆ

ಕಾಮದ ನಡೆನುಡಿಗಳನ್ನು ಒಳಗೊಂಡ ಒಯ್ಯಾರದ ನೋಟದಿಂದ ಗಂಡಸನ್ನು ತನ್ನತ್ತ ಸೆಳೆದುಕೊಳ್ಳುವ ಹೆಣ್ಣು.

"ನೆಲದಲ್ಲಿ ಬೀಜವನ್ನು ಬಿತ್ತುವುದಕ್ಕೆ ಹದವಾದ ಕಾಲ" ಎಂಬ ತಿರುಳಿನ 'ಬೆದೆ' ಎಂಬ ಪದವು "ಗಂಡು-ಹೆಣ್ಣು ಜೀವಿಗಳ ಮಯ್-ಮನದಲ್ಲಿ ಕಾಮದ ಒಳ ಗುದಿಯು ಕೆರಳಿ, ಒಂದರೊಡನೆ ಮತ್ತೊಂದು ಜತೆಗೂಡಲು ಹಾತೊರೆಯುವ ಕಾಲ" ಎಂಬ ಮತ್ತೊಂದು ತಿರುಳಿನಲ್ಲಿಯೂ ಬಳಕೆಯಾಗುತ್ತಿದೆ. 'ಬೆದೆ' ಮತ್ತು 'ಕಣ್ಣು' ಎಂಬ ಎರಡು ಪದಗಳು ಜತೆಗೂಡಿ 'ಬೆದೆಗಣ್ಣು' ಎಂಬ ಜೋಡು ಪದ

ರೂಪುಗೊಂಡಿದೆ. ಇದಕ್ಕೆ 'ಇ' ಎಂಬ ಒಟ್ಟು ಸೇರಿ 'ಬೆದೆಗಣ್ಣಿ' ಎಂಬ ಪದವಾಗಿದೆ.

ಕುಟುಂಬ ಹಾಗೂ ಸಮಾಜ ಒಪ್ಪಿತವಾದ ಕಾಮದ ಕಟ್ಟುಪಾಡುಗಳಿಗೆ ಹೊರತಾಗಿ ಗಂಡಿನ ಜತೆಗೂಡುವ ಹೆಣ್ಣಿನ ನಡೆನುಡಿಗಳನ್ನು ಸೂಚಿಸಲು ಒಂದು ರೂಪಕವಾಗಿ 'ಬೆದಗಣ್ಣಿ' ಎಂದು ಉಚ್ಚಾರಣೆಗೊಳ್ಳುತ್ತಿದೆ.

೧೯೯. ಬೆರ್ಕೆಗೆ ಹುಟ್ದೋನು

ಆಗಬೇಕಾದ ಕೆಲಸಗಳನ್ನು ಹದಗೆಡಿಸುವ ಹಾಗೂ ಒಳ್ಳೆಯ ನಡೆನುಡಿಗಳಿಲ್ಲದ ವ್ಯಕ್ತಿ.

'ಬೆರಕೆಗೆ ಹುಟ್ಟಿದವನು' ಎಂಬ ಪದಕಂತೆಗೆ "ಅನೇಕ ಗಂಡಸರೊಡನೆ ಕಾಮದ ನಂಟನ್ನು ಹೊಂದಿರುವ ಹೆಂಗಸಿನ ಹೊಟ್ಟೆಯಲ್ಲಿ ಹುಟ್ಟಿದವನು" ಎಂಬ ತಿರುಳಿದೆ. ಕನ್ನಡ ನುಡಿ ಸಮುದಾಯಕ್ಕೆ ಸೇರಿದ ಕುಟುಂಬದಲ್ಲಿನ ಹೆಂಗಸು, ತನ್ನ ಗಂಡನಿಂದ ಹಡೆದ ಮಗುವಿಗೆ ಮಾತ್ರ ಸಾಮಾಜಿಕ ಮನ್ನಣೆಯು ದೊರೆಯುತ್ತದೆ. "ಅನೇಕ ವಸ್ತುಗಳು ಇಲ್ಲವೇ ಸಂಗತಿಗಳಿಂದ ಕೂಡಿರುವುದು" ಎಂಬ ತಿರುಳುಳ್ಳ 'ಬೆರಕೆ' ಎಂಬ ಪದವನ್ನೇ ಒಂದು ರೂಪಕವನ್ನಾಗಿ ಬಳಸಿಕೊಂಡು ಈ ಬಯ್ಗುಳವನ್ನು ಕಟ್ಟಲಾಗಿದೆ. ಇದೇ ತಿರುಳುಳ್ಳ "ಬೆರ್ಕೆ ನನ್ಮಗ್ನೆ; ಬೆರ್ಕೆಗೆ ಬಿದ್ದೋ; ಬೆರ್ಕೆ ಮುಂಡೆ" ಎಂಬ ನುಡಿಗಳು ಬಳಕೆಯಲ್ಲಿವೆ.

ಧಾರವಾಡ ಕನ್ನಡದ ಒಳನುಡಿಯಲ್ಲಿ **"ಅವ ಬಾಳ ಬೆರ್ಕಿ ಅದಾನ"** ಎಂಬ ಮಾತಿನಲ್ಲಿರುವ 'ಬೆರ್ಕಿ' ಎಂಬ ಪದವು ವ್ಯಕ್ತಿಯನ್ನು ಕುರಿತು ಮೆಚ್ಚುಗೆಯಾಗಿ ಬಳಕೆಯಾದಾಗ 'ಚುರುಕುತನ; ಚಾಲೂಕುತನ' ಎಂಬ ತಿರುಳನ್ನು ಪಡೆಯುತ್ತದೆ.

೧೧೦. ಬೇಕುಪ್ಪ

ತಿಳಿಗೇಡಿ, ಅರಿವಿಲ್ಲದವನು, ಯಾವುದೇ ಕೆಲಸಕ್ಕೂ ಬಾರದವನು.

'ಲೋಕದ ಅರಿವು; ಸಾಮಾಜಿಕ ತಿಳುವಳಿಕೆ' ಎಂಬ ತಿರುಳುಳ್ಳ 'ವುಕೂಫ್' ಎಂಬ ಅರಾಬಿಕ್ ಪದಕ್ಕೆ, "ಇಲ್ಲ/ಅಲ್ಲ" ಎಂಬ ತಿರುಳುಳ್ಳ 'ಬೇ' ಎಂಬ ಪರ್ಶಿಯನ್ ನುಡಿಯ ಒಟ್ಟು ಸೇರಿ "ಬೇವುಕೂಫ್' ಎಂಬ ಪದ ರೂಪುಗೊಂಡಿದೆ. ಇದು ಉರ್ದು ನುಡಿ ಸಮುದಾಯದಲ್ಲಿ 'ಬೇವಕೂಫ್' ಎಂದಾಗಿದೆ. ಕನ್ನಡ ನುಡಿ ಸಮುದಾಯದಲ್ಲಿ ಬಳಕೆಗೆ ಬಂದಾಗ, ಕನ್ನಡ ಉಲಿಕಂತೆಗಳ ಜೋಡಣೆಗೆ ತಕ್ಕಂತೆ 'ಬೇಕುಪ್ಪ' ಎಂದು ಉಚ್ಚಾರಣೆಗೊಳ್ಳುತ್ತಿದೆ.

೧೧೧. ಬೇವರ್ಸಿ

ತಂದೆತಾಯಿಗಳಿಲ್ಲದ, ಒಡಹುಟ್ಟಿಲ್ಲದ, ನೆಂಟರಿಲ್ಲದ, ಒಡನಾಡಿಗಳಿಲ್ಲದ ಹಾಗೂ ಯಾವುದೇ ಬಗೆಯ ಆಸ್ತಿಪಾಸ್ತಿಗಳಿಲ್ಲದ ವ್ಯಕ್ತಿ.

'ಬೇವಾರ್ಸೀ' ಎಂಬ ಪರ್ಶೋ-ಅರಾಬಿಕ್ ಪದಕ್ಕೆ "ಹಕ್ಕುದಾರಿಕೆಯಿಲ್ಲದಿರುವುದು; ಒಡೆತನವಿಲ್ಲದಿರುವುದು" ಎಂಬ ತಿರುಳಿದೆ. 'ಕುಟುಂಬದ ಹಿರಿಯರಿಗೆ ಸೇರಿದ ಆಸ್ತಿಪಾಸ್ತಿಗಳ ಹಕ್ಕುದಾರ' ಎಂಬ ತಿರುಳುಳ್ಳ 'ವಾರಿಸ್' ಎಂಬ ಅರಾಬಿಕ್ ಪದಕ್ಕೆ, "ಇಲ್ಲ/ಅಲ್ಲ" ಎಂಬ ತಿರುಳುಳ್ಳ 'ಬೇ' ಎಂಬ ಪರ್ಶಿಯನ್ ನುಡಿಯ ಒಟ್ಟು ಸೇರಿ 'ಬೇವಾರ್ಸೀ' ಎಂಬ ಪದ ರೂಪುಗೊಂಡಿದೆ. ಉರ್ದು ನುಡಿ ಸಮುದಾಯದ ಒಡನಾಟದಿಂದ ಕನ್ನಡ ನುಡಿ ಸಮುದಾಯದಲ್ಲಿ ಈ ಪದ ಬಳಕೆಗೆ ಬಂದಿದೆ. **"ಬೇವರ್ಸಿ ನನ್ಮಗ; ಬೇವರ್ಸಿ ಮುಂಡೆ; ಬೇವರ್ಸಿ ಜನ"** ಎಂಬ ಪದಕಂತೆಗಳು ಕನ್ನಡಿಗರ ಮಾತುಕತೆಗಳಲ್ಲಿ ಬಳಕೆಯಾಗುತ್ತಿವೆ.

೧೧೨. ಬೇವ್ನಟ್ಟಿ ಕಾಳಿ

ತನ್ನ ಬಳಿ ಬೇಡಿಬಂದವರಿಗೆ ಒಂದು ಹಿಡಿ ದಿನಸಿಯನ್ನಾಗಲಿ ಇಲ್ಲವೇ ಒಂದು ತುತ್ತು ಅನ್ನವನ್ನಾಗಲಿ ಹಾಕದ ಹಾಗೂ ಯಾರೊಬ್ಬರ ಸಂಕಟಕ್ಕೂ ಮರುಗದ ಮತ್ತು ನೆರವಾಗದ ಜಿಪುಣತನದ ಹೆಂಗಸು.

'ಮಲೆಯ ಮಾದೇಶ್ವರ' ಜನಪದ ಮಹಾಕಾವ್ಯದಲ್ಲಿ ಬೇವಿನಹಟ್ಟಿ ಕಾಳಮ್ಮನ ಪಾತ್ರ ಬರುತ್ತದೆ. ಕಡುಬಡತನದ ಬವಣೆಯಲ್ಲಿ ತೊಳಲುತ್ತಿದ್ದ ಕಾಳಮ್ಮನಿಗೆ ಏಳುಮಲೆಯ ದೇವನಾದ ಮಾದಪ್ಪನು ಕರುಣೆ ತೋರಿಸಿದ್ದರಿಂದ ಸಿರಿವಂತ ಳಾಗುತ್ತಾಳೆ. ದಿನೇ ದಿನೇ ಸಂಪತ್ತು ಕೂಡಿಬಂದಂತೆಲ್ಲಾ ಅಹಂಕಾರದೊಡನೆ ಜೀನತನವೂ ಹೆಚ್ಚಾಗುತ್ತದೆ. ಅವಳ ಸೊಕ್ಕನ್ನು ಅಡಗಿಸಲೆಂದು ಮಾದಪ್ಪನು ಜಂಗಮ ರೂಪವನ್ನು ತಳೆದು ಬೇವಿನಹಟ್ಟಿ ಕಾಳಮ್ಮನ ಬಳಿಗೆ ಬಂದು, ತನ್ನ ಎಣ್ಣೆ ಮಜ್ಜನಕ್ಕೆಂದು ಎಳ್ಳನ್ನು ಬೇಡುತ್ತಾನೆ. ಆಗ ಬೇವ್ನಟ್ಟಿ ಕಾಳಮ್ಮನು **"ನೋಡಯ್ಯ ಪರದೇಸಿ ಜಂಗಮ... ನನ್ನ ಮುನ್ನೂರು ಮೂವತ್ತು ಕಂಡ್ಗ ಎಳ್ಳಿನ ರಾಸಿಯೆಲ್ಲಾ ಇಲ್ಲಿ ಬೂದಿ ರಾಸಿಯಾಗೋದ್ರು ಸರಿಯೇ.. ನಾನು ದಾನ ಕೊಡುವಂತ ಮಗಳಲ್ಲ.. ದಾನಕ್ಕೆ ಕಯ್ ಬರೋದಿಲ್ಲ"** ಎಂಬ ನಿರಾಕರಿಸುತ್ತಾಳೆ. ಜಂಗಮ ರೂಪಿಯಾದ ಮಾದಪ್ಪನ ಯಾವೊಂದು ಬೇಡಿಕೆಗೂ ಬಗ್ಗದೆ, ಬೆದರಿಕೆಗೂ ಜಗ್ಗದೆ, ಕಟ್ಟ ಕಡೆಯಲ್ಲಿ ಅವನ ಕೋಪಕ್ಕೆ ಗುರಿಯಾಗಿ ಸಿರಿಸಂಪತ್ತೆಲ್ಲವನ್ನೂ ಕಳೆದುಕೊಂಡು

ಅಳಿಯುತ್ತಾಳೆ. ಬೇವ್ನಟ್ಟಿ ಕಾಳಮ್ಮನ ನಡೆನುಡಿಗಳು ಜನಪದರ ಬಾಯಲ್ಲಿ ಹರಿದಾಡಿ, "ಹಠಮಾರಿತನ ಮತ್ತು ಜಿಪುಣತನಕ್ಕೆ" ಆಕೆಯ ನಡೆನುಡಿಯು ಒಂದು ರೂಪಕವಾಗಿ ಬಳಕೆಗೆ ಬಂದಿದೆ.

೧೧೩. ಬೋಳಿಮಗ

ಬೋಳಿ ಎಂದರೆ ತಲೆಯಲ್ಲಿ ಕೂದಲು ಇಲ್ಲದವಳು. ಬ್ರಾಹ್ಮಣ ಜಾತಿ ಸಮುದಾಯದಲ್ಲಿ ಗಂಡ ಸತ್ತ ನಂತರ ಹೆಂಡತಿಯ ತಲೆಯ ಕೂದಲನ್ನು ತೆಗೆಸುವ ಆಚರಣೆಯಿತ್ತು. ಇಂತಹ ಹೆಣ್ಣು ಬೇರೆ ಗಂಡಸಿನ ಕೂಡುವಿಕೆಯಿಂದ ಪಡೆದ ಮಗನೇ ಬೋಳಿಮಗ.

ಈ ರೀತಿ ಹುಟ್ಟಿದ ವ್ಯಕ್ತಿಗೆ ಆಕೆಯ ಕುಟುಂಬದ ನೆಲೆಯಲ್ಲಿ ಆಸ್ತಿಯ ಹಕ್ಕು ಇಲ್ಲವೇ ಯಾವುದೇ ಬಗೆಯ ಮನ್ನಣೆಯಿರುವುದಿಲ್ಲ. ಏಕೆಂದರೆ ಕನ್ನಡ ನುಡಿ ಸಮುದಾಯದ ಸಾಮಾಜಿಕ ಕಟ್ಟುಪಾಡಿನಲ್ಲಿ ಈ ಬಗೆಯ ಹುಟ್ಟನ್ನು ಕೆಟ್ಟದ್ದೆಂದು ಪರಿಗಣಿಸಲಾಗಿದೆ. **'ಮುಂಡೇಮಗ'** ಎಂಬ ಬಯ್ಗುಳದ ಪದಕ್ಕೂ ಇದೇ ತಿರುಳಿದೆ. ಸಂಸ್ಕೃತ ನುಡಿಯಲ್ಲಿ ಮುಂಡ ಎಂದರೆ 'ಬೋಳು ತಲೆಯವನು'. ಇದಕ್ಕೆ 'ಎ' ಒಟ್ಟು ಸೇರಿ 'ಬೋಳು ತಲೆಯವಳು' ಎಂಬ ತಿರುಳಿನ 'ಮುಂಡೆ' ಪದ ರೂಪು ಗೊಂಡಿದೆ. ಬೋಳು ಎಂಬ ಕನ್ನಡ ಪದಕ್ಕೆ 'ಇ' ಒಟ್ಟು ಸೇರಿ ಬೋಳಿ ಎಂಬ ಪದವಾಗಿದೆ.

೧೧೪. ಮಂತ್ರೆ

ಒಲವು ಮತ್ತು ನಂಬಿಕೆಗಳಿಂದ ಜತೆಗೂಡಿ ಬಾಳುತ್ತಿರುವವರಿಗೆ ಇಲ್ಲಸಲ್ಲದ ಚಾಡಿ ಮಾತುಗಳನ್ನು ಹೇಳಿ, ಮನಸ್ಸಿಗೆ ಹುಳಿಹಿಂಡಿ, ಅವರ ಒಳ್ಳೆಯ ನಂಟನ್ನು ಮುರಿಯುವ ಹೆಂಗಸು.

'ಮಂಥರಾ' ಎನ್ನುವವಳು ವಾಲ್ಮೀಕಿ ರಾಮಾಯಣದ ದಶರಥ ಮಹಾರಾಜನ ಮೂರನೆಯ ಹೆಂಡತಿಯಾದ ಕೈಕಾ ದೇವಿಯ ದಾಸಿ. ಮಹಾರಾಜನು ರಾಮನಿಗೆ ಪಟ್ಟ ಕಟ್ಟಲು ತೊಡಗಿದ ಸನ್ನಿವೇಶದಲ್ಲಿ ಮಂಥರೆಯ ಚಾಡಿ ಮಾತುಗಳಿಗೆ ಕೈಕೆಯು ಕಿವಿಗೊಟ್ಟಿದ್ದರಿಂದಲೇ "ರಾಮಾಯಣದಲ್ಲಿ ದುರಂತಗಳು ನಡೆದವು" ಎಂಬ ನಂಬಿಕೆಯು ಜನಮನದಲ್ಲಿದೆ. ಆದುದರಿಂದ ಚಾಡಿಕೋರತನಕ್ಕೆ ಮಂಥರೆ ಹೆಸರನ್ನು ಒಂದು ರೂಪಕವಾಗಿ ಕನ್ನಡ ನುಡಿ ಸಮುದಾಯದಲ್ಲಿ ಬಳಸುತ್ತಾರೆ. ಸಂಸ್ಕೃತದ 'ಮಂಥರಾ' ಎಂಬ ಪದ ಕನ್ನಡಿಗರ ಬಾಯಲ್ಲಿ 'ಮಂತರೆ/ಮಂತ್ರೆ' ಎಂದಾಗಿದೆ.

೧೧೫. ಮಿಂಡ್ರುಗುಟ್ಟೋನು

ಆಗಬೇಕಾಗಿದ್ದ ಕೆಲಸವನ್ನು ಒಳಸಂಚಿನಿಂದ ಹಾಳು ಮಾಡುವ ಇಲ್ಲವೇ ನಡೆಯಬೇಕಾಗಿದ್ದ ಕೆಲಸಕ್ಕೆ ಅಡ್ಡಿ ಆತಂಕಗಳನ್ನು ಒಡ್ಡುವ ವ್ಯಕ್ತಿ.

ಕನ್ನಡ ನುಡಿ ಸಮುದಾಯದ ಕುಟುಂಬದಲ್ಲಿ ಮದುವೆಯಾದ ಹೆಂಗಸು ತನ್ನ ಗಂಡನಲ್ಲದೆ, ಮತ್ತೊಬ್ಬ ಗಂಡಸಿನೊಡನೆ ಕಾಮದ ನಂಟನ್ನು ಹೊಂದಿದ್ದರೆ, ಅವನನ್ನು 'ಮಿಂಡ' ಎಂದು ಕರೆಯುತ್ತಾರೆ. ಈ ಬಗೆಯ ಕಾಮದ ನಂಟನ್ನು ಸಾಮಾಜಿಕ ಕಳಂಕವೆಂದು ಪರಿಗಣಿಸಲಾಗಿದೆ. ಮಿಂಡನಿಂದ ಹುಟ್ಟಿದ ಮಕ್ಕಳಿಗೆ ಯಾವುದೇ ಬಗೆಯ ಸಾಮಾಜಿಕ ಮನ್ನಣೆಯಿರುವುದಿಲ್ಲ. ಇದನ್ನು ಕೆಲವು ಕಡೆಗಳಲ್ಲಿ **"ಮಿಂಡ್ರಿ ನನ್ಮಗ್ನೆ–ಮಿಂಡ್ರಿ"** ಎಂಬ ರೂಪಗಳಲ್ಲಿಯೂ ಉಚ್ಚರಿಸುತ್ತಾರೆ.

೧೧೬. ಮಿಟುಕಲಾಡಿ

ತಳುಕು ಬಳುಕಿನ ಉಡುಗೆ ತೊಡುಗೆ ಹಾಗೂ ನಡೆನುಡಿಗಳಿಂದ ಎಲ್ಲರ ಕಣ್ಮನಗಳನ್ನು ತನ್ನತ್ತ ಸೆಳೆಯುವ ಹೆಂಗಸು. ನಯಗಾರಿಕೆಯ ಮಾತುಕತೆಗಳಿಂದ ಇತರರ ಒಳ್ಳೆಯ ನಂಟನ್ನು ಮುರಿಯುವ ಹೆಂಗಸು.

'ತುಡಿ; ಮಿಡಿ; ಚಡಪಡಿಸು;ತವಕಿಸು' ಎಂಬ ತಿರುಳುಳ್ಳ 'ಮಿಟುಕು' ಎಂಬ ಕೆಲಸ ಪದಕ್ಕೆ 'ಅಲ್' ಎಂಬ ಒಟ್ಟು ಮತ್ತು 'ಆಡುವವಳು' ಎಂಬ ತಿರುಳಿನ 'ಆಡಿ' ಎಂಬ ಪದ ಸೇರಿ 'ಮಿಟುಕಲಾಡಿ' ಎಂಬ ಜೋಡುಪದ ರೂಪುಗೊಂಡಿದೆ. **"ಅಂತಾ ಮಿಟುಕಲಾಡಿ ಹೊಕ್ಕಿದ ಮನೆ ಎಂದೂ್ಗ ಏಳ್ಗೆಯಾಗೂದಿಲ್ಲ"** ಎಂಬ ಮಾತು ಬಳಕೆಯಲ್ಲಿದೆ.

೧೧೭. ಮುಸಂಡಿ

ನಾಲ್ಕು ಮಂದಿ ಜತೆಗೂಡಿ ಆಡುವ ಮಾತುಕತೆಯಲ್ಲಿ ಮತ್ತು ಮಾಡುವ ಕೆಲಸದಲ್ಲಿ ಹುಮ್ಮಸ್ಸಿನಿಂದ ತೊಡಗಿಕೊಳ್ಳದ, ಎಲ್ಲದಕ್ಕೂ ಹಿಂಜರಿಯುವ ಹಾಗೂ ಮುಖದಲ್ಲಿ ತುಸುವಾದರೂ ನಗುವಿನ ಕಳೆಯಿಲ್ಲದ ವ್ಯಕ್ತಿ.

'ಸಂಕೋಚ, ಹೇಡಿತನ ಇಲ್ಲವೇ ಕೊಂಕುತನದ ನಡೆನುಡಿಯುಳ್ಳ ವ್ಯಕ್ತಿ' ಎಂಬ ತಿರುಳಿನ 'ಮುಸಂಡಿ' ಎಂಬ ಪದವು ಜನರೊಡನೆ ಬೆರೆಯದೆ, ಒಬ್ಬಂಟಿಯಾಗಿ ಬಾಳುವ ವ್ಯಕ್ತಿಯ ನಡೆನುಡಿಗಳಿಗೆ ಒಂದು ರೂಪಕವಾಗಿ ಕನ್ನಡ ನುಡಿ

ಸಮುದಾಯದಲ್ಲಿ ಬಳಕೆಯಲ್ಲಿದೆ. **"ಆ ಮುಸಂಡಿ ಕಟ್ಕೊಂಡು ಹೋದ್ರೆ, ಆಗೂ ಕೆಲಸನೂ ಹಾಳಾಗೋಯ್ತದೆ"** ಎಂಬ ಮಾತು ಬಳಕೆಯಲ್ಲಿದೆ.

೧೧೮. ಯಕ್ಕಶ್ಚಿತ್ ನನ್ಮಗ್ನೆ

ಯಾವುದೇ ಆಸ್ತಿಪಾಸ್ತಿಗಳಿಲ್ಲದ, ಮಾನಮರ್ಯಾದೆಗಳಿಂದ ಬಾಳದ ಹಾಗೂ ಸಾಮಾಜಿಕವಾಗಿ ಕಿಂಚಿತ್ತಾದರೂ ಅಂತಸ್ತಿಲ್ಲದ ವ್ಯಕ್ತಿ.

"ಯಃ+ಕಃ+ಚಿತ್" ಎಂಬ ಸಂಸ್ಕೃತ ನುಡಿ ಸಾಮಗ್ರಿಗಳು ಸೇರಿ 'ಯಃಕಶ್ಚಿತ್' ಎಂಬ ಪದ ರೂಪುಗೊಂಡಿದೆ. ಈ ಸಂಸ್ಕೃತ ಪದಕ್ಕೆ 'ಯಾವನಾದರೂ ಒಬ್ಬ; ಯಾವುದಾದರೂ ಒಂದು' ಎಂಬ ತಿರುಳಿದೆ. ಇದು ಕನ್ನಡ ನುಡಿ ಸಮುದಾಯದಲ್ಲಿ ಬಳಕೆಗೆ ಬಂದಾಗ, ಕನ್ನಡ ನುಡಿಯ ಉಲಿರಚನೆಯ ನಿಯಮಕ್ಕೆ ತಕ್ಕಂತೆ 'ಯಕ್ಕಶ್ಚಿತ್' ಎಂಬ ರೂಪದಲ್ಲಿ ಉಚ್ಚಾರಣೆಗೊಂಡಿದೆ ಹಾಗೂ ತಿರುಳಿನಲ್ಲಿಯೂ ಬದಲಾವಣೆಗೊಂಡು ಒಂದು ಬಯ್ಗುಳವಾಗಿ ಬಳಕೆಗೊಂಡಿದೆ.

"ನಮ್ಮ ಕಯ್‌ಕಾಲ್ಗೆ ಎಟುಕದೇ ಇದ್ದರೂ ಯಕಶ್ಚಿತ್ ನನ್ಮಕ್ಳು, ಈಗ ನಮ್ಮ ಬಗ್ಗೆ ಮಾತಾಡುವಂತ ಕಾಲ ಬಂತು". "ಆ ಯಕ್ಕಶ್ಚಿತ್ ಮುಂಡೆ ಸಾವಾಸಕ್ಕೆ ಯಾಕ್ ಹೋಗಿದ್ದೆ ನೀನು" ಎಂಬ ಮಾತು ಬಳಕೆಯಲ್ಲಿವೆ.

೧೧೯. ರಂಡಿ ಮಗ

ಗಂಡ ಸತ್ತಿರುವ ಹೆಂಗಸನ್ನು 'ರಂಡಿ' ಎಂದು ಕರೆಯುತ್ತಾರೆ. ಗಂಡ ಸತ್ತ ನಂತರ ಮತ್ತೊಬ್ಬ ಗಂಡಸಿನೊಡನೆ ಕಾಮದ ನಂಟನ್ನು ಹೊಂದಿ ರಂಡಿಯು ಹೆತ್ತ ಮಗನೇ 'ರಂಡಿ ಮಗ'.

ಕನ್ನಡ ನುಡಿ ಸಮುದಾಯದ ಕುಟುಂಬದ ನೆಲೆಯಲ್ಲಿ ಈ ಬಗೆಯ ಕಾಮದ ನಂಟಿನಿಂದ ಹುಟ್ಟಿದ ವ್ಯಕ್ತಿಗೆ ಸಾಮಾಜಿಕ ಮನ್ನಣೆಯಿರುವುದಿಲ್ಲ. 'ರಂಡಿ' ಎಂಬ ಪದ ಬಿಡಿಯಾಗಿ ಬಳಕೆಗೊಂಡಾಗ ಸೂಳೆ ಎಂಬ ತಿರುಳನ್ನು ಹೊಂದುತ್ತದೆ.

ಸಂಸ್ಕೃತ, ಹಿಂದಿ, ಉರ್ದು ನುಡಿಗಳಲ್ಲಿ 'ರಂಡಾ' ಎಂಬ ಪದ ಬಳಕೆಯಲ್ಲಿದೆ. ಉರ್ದು ನುಡಿ ಸಮುದಾಯದ ಸಂಪರ್ಕದಿಂದ ಬಡಗಣ ಕರ್ನಾಟಕದ ಒಳನುಡಿಯಲ್ಲಿ 'ರಂಡಿ' ಎಂಬ ಪದ ಹೆಚ್ಚಾಗಿ ಬಳಕೆಗೆ ಬಂದಿದೆ. ತೆಂಕಣ ಕರ್ನಾಟಕದಲ್ಲಿ "ರಂಡೆ–ಕತ್ತೆ ರಂಡೆ" ಎಂಬ ಪದಗಳು ಬಳಕೆಯಲ್ಲಿವೆ .

೧೨೦. ರೌಡಿ

ಸಾಮಾಜಿಕ ಕಟ್ಟುಪಾಡುಗಳನ್ನಾಗಲಿ ಇಲ್ಲವೇ ಸರ್ಕಾರದ ಕಾನೂನನ್ನಾಗಲಿ ಕಿಂಚಿತ್ತಾದರೂ ಲೆಕ್ಕಿಸದೆ, ಜನಸಮುದಾಯದ ಮೇಲೆ ದಾಳಿ ಮಾಡಿ, ದಬ್ಬಾಳಿಕೆಯಿಂದ ಜನರ ಮತ್ತು ಒಟ್ಟು ಸಮುದಾಯಕ್ಕೆ ಸೇರಿದ ಆಸ್ತಿಪಾಸ್ತಿಗಳನ್ನು ಹಾಳು ಮಾಡುವ ಹಾಗೂ ದೋಚುವ ವ್ಯಕ್ತಿ.

'ಗದ್ದಲ ಮಾಡುವ; ಒರಟುತನ; ಯಾರ ಅಂಕೆಶಂಕೆಗಳಿಗೂ ಒಳಪಡದ ವ್ಯಕ್ತಿ' ಎಂಬ ತಿರುಳಿನ 'ರೌಡಿ' ಎಂಬ ಪದ ಇಂಗ್ಲಿಶ್ ನುಡಿ ಸಮುದಾಯದಲ್ಲಿ ಬಳಕೆಯಲ್ಲಿದೆ. ಉತ್ತರ ಅಮೆರಿಕಾದ ದಟ್ಟವಾದ ಕಾಡುಗಳಲ್ಲಿ ನಿಸರ್ಗದ ಮಡಿಲಲ್ಲಿ ನೆಲೆಸಿದ್ದ ಗಟ್ಟಿಮುಟ್ಟಾದ ಮಯ್ಯಿನ ಹಾಗೂ ಎತ್ತರವಾದ ನಿಲುವಿನ ಬುಡಕಟ್ಟಿನ ಜನಸಮುದಾಯದವರನ್ನು ಹದಿನೆಂಟನೆಯ ಶತಮಾನದಲ್ಲಿ ಯುರೋಪಿನಿಂದ ಇಲ್ಲಿಗೆ ವಲಸೆ ಬಂದ ಬಿಳಿಯರು ಸದೆಬಡಿದು, ಅವರನ್ನು ತಮ್ಮ ಹತೋಟಿಗೆ ತೆಗೆದುಕೊಳ್ಳಲು ತೊಡಗಿದಾಗ, ತಮ್ಮ ಉಳಿವಿಗಾಗಿ ಎದುರುಬಿದ್ದು ಹೋರಾಡಿದ ಅಮೆರಿಕಾದ ಮೂಲನಿವಾಸಿಗಳಾದ ಕಾಡಿನ ಜನರನ್ನು ಬಿಳಿಯರು 'ರೌಡಿ' ಎಂಬ ಹೆಸರಿನಿಂದ ಕರೆದರು.

೧೨೧. ರಾಕ್ಷಸ

'ತಂದೆ ತಾಯಿ, ಹೆಂಡತಿ ಮಕ್ಕಳು ಮತ್ತು ಇತರರನ್ನು ಬಯ್ದು ಬಡಿದು, ಎಡೆಬಿಡದೆ ಗೋಳು ಹುಯ್ದುಕೊಳ್ಳುವ ಹಾಗೂ ಕಂಡಿದ್ದೆಲ್ಲವನ್ನೂ ಕಬಳಿಸುವ ನಡೆನುಡಿಯುಳ್ಳ ವ್ಯಕ್ತಿ.

'ರಾಕ್ಷಸ' ಎಂಬ ಸಂಸ್ಕೃತ ಪದವು ಕನ್ನಡಿಗರ ಬಾಯಲ್ಲಿ 'ರಾಕ್ಸಸ/ರಾಕಾಸ' ಎಂಬ ರೂಪಗಳಲ್ಲಿ ಉಚ್ಚಾರಣೆಗೊಳ್ಳುತ್ತಿದೆ. ಕನ್ನಡ ಬರಹದಲ್ಲಿ ಕೆಲವೊಮ್ಮೆ ಪ್ರಾಕೃತ ನುಡಿಯ 'ರಕ್ಕಸ' ಎಂಬ ಪದರೂಪ ಬಳಕೆಯಾಗುತ್ತದೆ.

ಸಂಸ್ಕೃತ ನುಡಿಯಲ್ಲಿ ರಚನೆಗೊಂಡಿರುವ ರಾಮಾಯಣ, ಮಹಾಭಾರತ ಮತ್ತು ಇನ್ನಿತರ ಹೊತ್ತಿಗೆಗಳಲ್ಲಿ ಭಾರತದೇಶದ ದಟ್ಟವಾದ ಕಾಡುಗಳಲ್ಲಿ ನೆಲೆಸಿದ್ದ ಬುಡಕಟ್ಟಿನ ಕೆಲವು ಜನಸಮುದಾಯವನ್ನು 'ರಾಕ್ಷಸ' ಎಂಬ ಹೆಸರಿನಿಂದ ಕರೆಯಲಾಗಿದೆ. ಯಜ್ಞಯಾಗಾದಿಗಳ ನೆಪದಲ್ಲಿ ಕಾಡಿನ ಮರಗಿಡಗಳನ್ನು ಕಡಿದು ಬೆಂಕಿಗೆ ಹಾಕಿ, ನಾಡಿನ ಎಲ್ಲೆಗಳನ್ನು ದೊಡ್ಡದಾಗಿಸುತ್ತಿದ್ದವರನ್ನು ತಡೆಗಟ್ಟಿ, ಕಾಡಿನ ಉಳಿವಿಗಾಗಿ ಹೋರಾಡುತ್ತಿದ್ದ ಬುಡಕಟ್ಟಿನ ಜನರನ್ನು ನಾಡನ್ನಾಳುವ ಜನರು

‘ರಾಕ್ಷಸರು’ ಎಂದು ಹೆಸರಿಸಿ, ಅವರನ್ನು ಸದೆಬಡಿದರು. ಕನ್ನಡಿಗರ ಮಾತುಕತೆಯಲ್ಲಿ ‘ರಾಕ್ಷಸ’ ಎಂಬ ಪದವು ಎಡೆಬಿಡದೆ ಕೊಡುವ ಕಿರುಕುಳದ ನಡೆನುಡಿಗಳಿಗೆ ಒಂದು ರೂಪಕವಾಗಿ ಬಳಕೆಯಾಗುತ್ತಿದೆ.

೧೨೨. ಲಪಂಗ

ಸಾಮಾಜಿಕ ಕಟ್ಟುಪಾಡುಗಳನ್ನು ಲೆಕ್ಕಿಸದ, ಯಾವುದೇ ಬಗೆಯ ಕೆಡುಕನ್ನು ಮಾಡಲು ಹಿಂಜರಿಯದ ಹಾಗೂ ಕೆಟ್ಟ ನಡೆನುಡಿಗಳಿಂದ ಜನರನ್ನು ಗೋಳು ಹುಯ್ದುಕೊಳ್ಳುವ ವ್ಯಕ್ತಿ.

‘ಪುಂಡ; ನೀಚ; ಕೆಟ್ಟವನು’ ಎಂಬ ತಿರುಳಿನ ‘ಲಫಂಗ್’ ಎಂಬ ಪರ್ಶಿಯನ್ ಪದವು ಉರ್ದು, ಮರಾಠಿ, ಹಿಂದಿ ನುಡಿ ಸಮುದಾಯಗಳಲ್ಲಿ ಬಳಕೆಯಲ್ಲಿದೆ. ಈ ಸಮುದಾಯಗಳ ಒಡನಾಟದಿಂದ ಕನ್ನಡಿಗರಲ್ಲಿ ಬಳಕೆಗೆ ಬಂದಿದೆ.

೧೨೩. ಲುಚ್ಚಾ ನನ್ಮಗ

ಯಾವುದೇ ವ್ಯವಹಾರಗಳಲ್ಲಿ ಸಮಾಜ ಒಪ್ಪುವ ರೀತಿಯಲ್ಲಿ ನಡೆದುಕೊಳ್ಳದೆ, ಕೆಟ್ಟ ನಡೆನುಡಿಗಳಿಂದ ಎಲ್ಲವನ್ನೂ ಹಾಳು ಮಾಡುವ ವ್ಯಕ್ತಿ.

‘ಲಪಟಾಯಿಸುವುದು; ಕಿತ್ತುಕೊಳ್ಳುವುದು; ಅಪಹರಿಸುವುದು’ ಎಂಬ ತಿರುಳುಳ್ಳ ‘ಲುಚಕ್ನಾ’ ಎಂಬ ಹಿಂದಿ ನುಡಿಯಿಂದ ‘ಲುಚ್ಚಾ’ ಎಂಬ ಪದ ರೂಪುಗೊಂಡಿದೆ. ಹಿಂದಿ ನುಡಿಯಲ್ಲಿ ಲುಚ್ಚಾ ಎಂದರೆ ‘ನೀಚ; ಕೆಟ್ಟವನು’. ಹಿಂದಿ ನುಡಿ ಸಮುದಾಯದ ಒಡನಾಟದಿಂದ ಕನ್ನಡಿಗರಲ್ಲಿ ಬಳಕೆಗೆ ಬಂದಾಗ **“ಲುಚ್ಚಾ ಸಾವಾಸ; ಲುಚ್ಚಾ ಮುಂಡೆ; ಲುಚ್ಚಾ ಕೆಲ್ಸ”** ಎಂಬ ಪದಕಂತೆಗಳ ರೂಪದಲ್ಲಿ ಉಚ್ಚಾರಣೆಗೊಳ್ಳುತ್ತಿದೆ.

೧೨೪. ಲೂಸ್ ನನ್ಮಗ

ಸಾಮಾಜಿಕ ಒಡನಾಟದ ಮಾತುಕತೆ ಮತ್ತು ಕೆಲಸದ ಸನ್ನಿವೇಶಗಳಲ್ಲಿ ಬಾಯಿಗೆ ಬಂದಂತೆ ಮಾತನಾಡುವ, ಮನಸ್ಸಿಗೆ ಬಂದಂತೆ ನಡೆದುಕೊಳ್ಳುವ ವ್ಯಕ್ತಿ.

‘ಲೂಸ್’ ಎಂಬ ಇಂಗ್ಲಿಷ್ ಪದಕ್ಕೆ “ಸಡಿಲವಾಗಿರುವುದು; ಅಲುಗಾಡುವುದು; ಮಯ್ ಮನದ ಮೇಲೆ ಹತೋಟಿಯಿಲ್ಲದ ನಡವಳಿಕೆ’ ಎಂಬ ತಿರುಳುಗಳಿವೆ. ಇಂಗ್ಲಿಶ್ ನುಡಿಯನ್ನು ಬಲ್ಲ ಕನ್ನಡಿಗರ ಮಾತುಕತೆಯಲ್ಲಿ ಲೂಸ್ ಎಂಬ ಪದವು “ಸಾಮಾಜಿಕ

ಕಟ್ಟುಪಾಡು ಮತ್ತು ಸಂಪ್ರದಾಯಗಳಿಗೆ ಹೊರತಾದ ಹಾಗೂ ಹುಚ್ಚುತನದ ನಡೆನುಡಿಗಳನ್ನು" ಸೂಚಿಸಲು ಒಂದು ರೂಪಕವಾಗಿ ಬಳಕೆಯಾಗುತ್ತಿದೆ.

೧೨೫. ಲೊಡ್ ನನ್ಮಗ

ಆಡುವ ಮಾತು ಮತ್ತು ಮಾಡುವ ಕೆಲಸದಲ್ಲಿ ತುಸುವಾದರೂ ಒಳಿತಿನ ಉದ್ದೇಶವಿಲ್ಲದೆ, ಇತರರಿಗೆ ಹೇಸಿಕೆಯುಂಟಾಗುವಂತೆ ನಡೆದುಕೊಳ್ಳುವ ವ್ಯಕ್ತಿ.

ಲೊಡ್ಡು ಎಂಬ ಪದಕ್ಕೆ 'ಪೊಳ್ಳು; ಜಳ್ಳು; ಸಾರವಿಲ್ಲದ್ದು' ಎಂಬ ತಿರುಳಿದೆ. ಸರಿ ತಪ್ಪುಗಳ ವಿವೇಚನೆಯಿಲ್ಲದೆ ತಿಳಿಗೇಡಿತನದ ನಡೆನುಡಿಗಳಿಗೆ ಒಂದು ರೂಪಕ ವಾಗಿ ಈ ಪದ ಕನ್ನಡಿಗರ ಮಾತುಕತೆಯಲ್ಲಿ ಬಳಕೆಯಾಗುತ್ತಿದೆ. **"ಆ ಲೊಡ್ ನನ್ಮಗನ ಮಾತ್ಗೆ ಮೂರ್ಕಾಸಿನ ಬೆಲೆಯೂ ಇಲ್ಲ"** ಎಂಬ ಮಾತು ಬಳಕೆಯಲ್ಲಿದೆ.

೧೨೬. ಲೋಪರ್

ಸಾಮಾಜಿಕ ಸನ್ನಿವೇಶದ ಮಾತುಕತೆ ಇಲ್ಲವೇ ವ್ಯವಹಾರಗಳಲ್ಲಿ ಇತರರೊಡನೆ ಕೆಟ್ಟ ನಡೆನುಡಿಗಳಿಂದ ನಡೆದುಕೊಳ್ಳುವ ಹಾಗೂ ನಾಲ್ಕು ಜನರ ನಡುವೆ ಸಾಮಾಜಿಕವಾಗಿ ಒಳ್ಳೆಯ ಅಂತಸ್ತಿಲ್ಲದ ವ್ಯಕ್ತಿ.

'ದುಡಿಮೆಯನ್ನು ಮಾಡದೆ ಸುಮ್ಮನೆ ಕಾಲವನ್ನು ಕಳೆಯುವ ವ್ಯಕ್ತಿ' ಎಂಬ ತಿರುಳುಳ್ಳ 'ಲೋಫರ್' ಎಂಬ ಇಂಗ್ಲಿಶ್ ಪದವು ಕನ್ನಡಿಗರ ಆಡುನುಡಿಯಲ್ಲಿ ಬಳಕೆಗೆ ಬಂದಾಗ ಪದದ ತಿರುಳು ಬದಲಾಗಿದೆ. ಈ ರೀತಿ ಒಂದು ನುಡಿ ಸಮುದಾಯದಿಂದ ಮತ್ತೊಂದು ನುಡಿ ಸಮುದಾಯದಲ್ಲಿ ಬಳಕೆಗೆ ಬರುವ ಪದಗಳಲ್ಲಿ, ಕೆಲವು ಪದಗಳು ಅವು ರೂಪುಗೊಂಡು ಬಳಕೆಗೆ ಬಂದ ನುಡಿ ಸಮುದಾಯದ ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿಸರದಲ್ಲಿ ಪಡೆದಿದ್ದ ತಿರುಳಿಗಿಂತ ಬೇರೆಯಾದ ತಿರುಳನ್ನು ಹೊಂದುತ್ತವೆ. **"ಲೋಪರ್ ಮುಂಡೆ; ಲೋಪರ್ ಕೆಲಸ; ಲೋಪರ್ ಜನ; ಲೋಪರ್ ಸಾವಾಸ"** ಎಂಬ ಪದಕಂತೆಗಳು ಕನ್ನಡಿಗರ ಮಾತುಕತೆಗಳಲ್ಲಿ ಬಳಕೆಯಾಗುತ್ತಿವೆ.

೧೨೭. ವಲ್ಗರ್ ನನ್ಮಕ್ಕು

ಕೆಟ್ಟ ನಡೆನುಡಿಗಳಿಂದ ಎಲ್ಲರಿಗೂ ತೊಂದರೆಯನ್ನು ಕೊಡುವ ಮತ್ತು ಎಲ್ಲವನ್ನೂ ಹಾಳು ಮಾಡುವ ವ್ಯಕ್ತಿಗಳು.

"ಹದಿನೈದನೆಯ ಶತಮಾನದ ಇಂಗ್ಲಿಶ್ ನುಡಿ ಸಮುದಾಯದಲ್ಲಿ 'ವಲ್ಗರ್' ಎಂಬ ಪದಕ್ಕೆ 'ಜನಸಮುದಾಯದ ಆಡುನುಡಿ; ಒಂದು ಪ್ರದೇಶದಲ್ಲಿ ಬಳಕೆಯಲ್ಲಿರುವ ನುಡಿ; ಜನಸಾಮಾನ್ಯರು' ಎಂಬ ತಿರುಳಿತ್ತು. ಅನಂತರದ ವರುಷಗಳಲ್ಲಿ ಈ ಪದವು 'ಅಕ್ಕರ ಕಲಿಯದ, ಅರಿವಿಲ್ಲದ, ಒಳ್ಳೆಯ ಆಸಕ್ತಿಗಳಿಲ್ಲದ, ಸಮಾಜದ ಕೆಳಹಂತಕ್ಕೆ ಸೇರಿದ ವ್ಯಕ್ತಿಗಳು" ಎಂಬ ತಿರುಳಿನಲ್ಲಿ ಬಳಕೆಯಾಗತೊಡಗಿತು. ಇಂಗ್ಲಿಶ್ ನುಡಿಯನ್ನು ಬಲ್ಲ ಕನ್ನಡಿಗರ ಮಾತುಕತೆಯಲ್ಲಿ 'ವಲ್ಗರ್' ಎಂಬ ಪದವು "ಕೀಳುತರದ ನಡೆನುಡಿಗಳಿಗೆ" ಒಂದು ರೂಪಕವಾಗಿ ಬಳಕೆಯಾಗುತ್ತಿದೆ.

೧೨೮. ಶಕುನಿ

ಮೇಲುನೋಟಕ್ಕೆ ತುಂಬಾ ಬೇಕಾದವನಂತೆ ನಡೆದುಕೊಳ್ಳುತ್ತಾ, ಒಳಸಂಚಿನಿಂದ ಬುಡಕ್ಕೆ ಕೊಡಲಿಯನ್ನು ಹಾಕುವ ಅಂದರೆ ಹಾನಿಯನ್ನುಂಟುಮಾಡುವ ವ್ಯಕ್ತಿ.

ವ್ಯಾಸ ಮಹಾಭಾರತದಲ್ಲಿ ಬರುವ ಒಂದು ಪಾತ್ರ ಶಕುನಿ. ಈತ ಧೃತರಾಷ್ಟ್ರನ ಹೆಂಡತಿಯಾದ ಗಾಂಧಾರಿಯ ಅಣ್ಣ. ಪಾಂಡವರ ನಾಶಕ್ಕಾಗಿ ಹಗಲಿರುಳು ಹಂಬಲಿಸುತ್ತಿದ್ದ ದುರ್ಯೋಧನನಿಗೆ ಶಕುನಿಯು ಹೇಳಿಕೊಡುತ್ತಿದ್ದ ತಂತ್ರೋಪಾಯಗಳು ಪಾಂಡವರ ಸಂಕಟಗಳಿಗೆ ಕಾರಣವಾಗುವುದಲ್ಲದೆ, ಕೌರವರಿಗೆ ಸಾವು ನೋವುಗಳನ್ನು ತಂದಿತು. ಶಕುನಿಯ ಈ ಬಗೆಯ ನಡೆನುಡಿಗಳಿಗೆ "ದುರ್ಯೋಧನನು ಈ ಮೊದಲು ಇವನ ಒಡಹುಟ್ಟಿದ ನೂರು ಮಂದಿಯನ್ನು ಕಪಟತನದಿಂದ ಕ್ರೂರವಾಗಿ ಕೊಲ್ಲಿಸಿದ್ದನೆಂದು, ಅದಕ್ಕಾಗಿ ಶಕುನಿಯು ಈ ರೀತಿ ಸೇಡನ್ನು ತೀರಿಸಿಕೊಂಡನೆಂದು" ಹೇಳುವ ಕತೆಯೊಂದು ಕನ್ನಡ ಜನಮನದಲ್ಲಿ ಹಬ್ಬಿದೆ. ಶಕುನಿಯ ಹೆಸರನ್ನು 'ಕುತಂತ್ರ ಹಾಗೂ ಸೇಡಿನ ನಡೆನುಡಿಗಳಿಗೆ' ಒಂದು ರೂಪಕವನ್ನಾಗಿ ಮಾಡಿ ಕೊಂಡು ಕನ್ನಡ ನುಡಿ ಸಮುದಾಯದ ಮಾತುಕತೆಗಳಲ್ಲಿ ಬಳಸಲಾಗುತ್ತಿದೆ.

೧೨೯. ಸವತಿ

ಒಬ್ಬ ಗಂಡಸಿಗೆ ಇಬ್ಬರು ಇಲ್ಲವೇ ಅನೇಕ ಹೆಂಡತಿಯರಿದ್ದರೆ, ಅವರನ್ನು ಸವತಿಯರೆಂದು ಕರೆಯುತ್ತಾರೆ.

ಗಂಡನೊಡನೆ ಹೊಂದುವ ಕಾಮದ ನಂಟು, ಕುಟುಂಬದ ಆಗುಹೋಗುಗಳ ಹಿಡಿತ ಮತ್ತು ಆಸ್ತಿಪಾಸ್ತಿಯ ಹಂಚಿಕೆಯಲ್ಲಿ ಸವತಿಯರ ನಡುವೆ ಯಾವಾಗಲೂ ಜಗ್ಗಾಟ ಕಿತ್ತಾಟಗಳಿರುತ್ತವೆ. ಸಂಸ್ಕೃತದ 'ಸಪತ್ನೀ' ಎಂಬ ಪದರೂಪ ಪ್ರಾಕೃತ

ನುಡಿಯಲ್ಲಿ 'ಸವತ್ತಿ' ಎಂದಾಗಿ, ಕನ್ನಡದಲ್ಲಿ ಬಳಕೆಗೆ ಬಂದಾಗ 'ಸವತಿ' ಎಂಬ ರೂಪದಲ್ಲಿ ಉಚ್ಚಾರಣೆಗೊಂಡಿದೆ.

೧೩೦. ಸುವರ್ ನನ್ಮಗ

ಕೆಟ್ಟ ನಡೆನುಡಿಗಳಿಂದ ಕೂಡಿದ ವ್ಯಕ್ತಿ.

ಹಂದಿ ಎಂಬ ಪ್ರಾಣಿಯನ್ನು ಹೆಸರಿಸುವ 'ಸುಅರ್' ಎಂಬ ಉರ್ದು ಪದ, ಮಾತಿನಲ್ಲಿ ಬಳಕೆಯಾಗುವಾಗ 'ಸುವರ್' ಎಂದು ಉಚ್ಚಾರಣೆಗೊಳ್ಳುತ್ತದೆ. ಉರ್ದುವನ್ನು ತಾಯ್ನುಡಿಯಾಗಿ ಹೊಂದಿರುವ ಮುಸಲ್ಮಾನರು ಹಂದಿ ಮಾಂಸ ವನ್ನು ತಿನ್ನುವುದಿಲ್ಲ. ಈ ಸಮುದಾಯದ ಮಾತುಕತೆಗಳಲ್ಲಿ 'ಸುವರ್' ಎಂಬ ಪದ 'ಕೀಳಾಗಿರುವುದು; ಕೆಟ್ಟದ್ದಾಗಿರುವದು' ಎಂಬ ರೂಪಕವಾಗಿಯೂ ಬಳಕೆಯಲ್ಲಿದೆ. ಉರ್ದು ನುಡಿ ಸಮುದಾಯದ ಒಡನಾಟದಿಂದ ಕನ್ನಡದಲ್ಲಿ ಬಳಕೆಗೆ ಬಂದಿದೆ.

೧೩೧. ಸೋಗಲಾಡಿ

ಹೊರ ನೋಟಕ್ಕೆ ನಯ ನಾಜೂಕಿನ ನಡೆನುಡಿಗಳಿಂದ ತುಂಬಾ ಒಳ್ಳೆಯ ರೀತಿ ಯಲ್ಲಿ ನಡೆದುಕೊಳ್ಳುತ್ತಾ, ಮನಸ್ಸಿನೊಳಗೆ ಕೆಟ್ಟ ಉದ್ದೇಶವನ್ನು ಹೊಂದಿರುವ ವ್ಯಕ್ತಿ.

'ನಟನೆ; ತೋರಿಕೆ' ಎಂಬ ತಿರುಳುಳ್ಳ 'ಸೋಗು' ಎಂಬ ಪದಕ್ಕೆ, 'ಕೂಡಿರುವ' ಎಂಬ ತಿರುಳಿನ 'ಅಲ್' ಎಂಬ ಒಟ್ಟು ಮತ್ತು 'ಆಡುವುದು' ಎಂಬ ತಿರುಳಿನ 'ಆಡಿ' ಎಂಬ ಪದ ಸೇರಿ 'ಸೋಗಲಾಡಿ' ಎಂಬ ಪದ ರೂಪುಗೊಂಡಿದೆ. **'ಸೋಗಲಾಡಿ ನನ್ಮಗ; ಸೋಗಲಾಡಿ ಮುಂಡೆ'** ಎಂಬ ಪದಕಂತೆಗಳ ಜತೆಗೆ **"ಅವನನ್ನ ಒಂಚೂರು ನಂಬುವಂಗಿಲ್ಲ. ಅವನ್ದೆಲ್ಲಾ ಬರೀ ಸೋಗಲಾಡಿತನ"** ಎಂಬ ಪದರೂಪ ಬಳಕೆಯಲ್ಲಿದೆ.

೧೩೨. ಹತ್ತೆಸ್ಗೆ ನನ್ಮಗ

ಒಳ್ಳೆಯ ನಂಟುಳ್ಳವರ ನಡುವೆ ಇಲ್ಲಸಲ್ಲದ್ದನ್ನು ಹೇಳಿ, ಒಬ್ಬರು ಮತ್ತೊಬ್ಬರ ಬಗ್ಗೆ ಅನುಮಾನ ಹಾಗೂ ಅಪನಂಬಿಕೆಯನ್ನು ತಳೆಯುವಂತೆ ಮಾಡಿ, ಇಬ್ಬರಲ್ಲೂ ಹಗೆತನದ ಒಳಗುದಿಯನ್ನು ಉಂಟುಮಾಡುವ ವ್ಯಕ್ತಿ.

'ಹೊತ್ತಿಕೊಳ್ಳುವುದು; ಉರಿಯತೊಡಗುವುದು' ಎಂಬ ತಿರುಳಿನ 'ಹತ್ತು' ಎಂಬ ಕ್ರಿಯಾಪದಕ್ಕೆ 'ಲೋಹದ ಸಾಮಗ್ರಿಗಳನ್ನು ಚೆನ್ನಾಗಿ ಕಾಯಿಸಿ

ಒಂದರೊಡನೆ ಮತ್ತೊಂದನ್ನು ಸೇರಿಸುವುದು' ಎಂಬ ತಿರುಳಿನ 'ಬೆಸಗೆ' ಎಂಬ ಪದ ಜತೆಗೂಡಿ 'ಹತ್ತೆಸ್ಗೆ' ಎಂಬ ಜೋಡುಪದ ರೂಪುಗೊಂಡಿದೆ. ಚಾಡಿ ಮಾತುಗಳಿಂದ ಒಲಿದವರ ನಡುವೆ ಜಗಳವನ್ನು ತಂದಿಕ್ಕುವ ಸಾಮಾಜಿಕ ವರ್ತನೆಯನ್ನು ಸೂಚಿಸಲು 'ಹತ್ತೆಸ್ಗೆ' ಎಂಬ ಪದವನ್ನು ಒಂದು ರೂಪಕವಾಗಿ ಬಳಸುತ್ತಾರೆ.

೧೩೩. ಹರಾಮಿ

ಕುಟುಂಬದ ಮತ್ತು ಸಮಾಜದ ಕಟ್ಟುಪಾಡುಗಳನ್ನು ಲೆಕ್ಕಿಸದೆ, ಗುರುಹಿರಿಯರ ಮಾತುಗಳನ್ನು ಕಡೆಗಣಿಸಿ, ಯಾರ ಅಂಕೆಶಂಕೆಗಳಿಗೂ ಒಳಗಾಗದೆ, ತನಗೆ ಅನಿಸಿದ್ದೆಲ್ಲವನ್ನೂ ಹೇಳುವ ಮತ್ತು ತಾನು ಬಯಸಿದ್ದೆಲ್ಲವನ್ನೂ ಮಾಡುವ ಹೆಂಗಸು.

'ಇಸ್ಲಾಮ್ ಮತದ ನಡೆನುಡಿಗಳಿಗೆ ಹೊರತಾದುದು; ಅನಾಚಾರ; ಕೆಟ್ಟದ್ದು' ಎಂಬ ತಿರುಳಿನ 'ಹರಾಮ್' ಎಂಬ ಅರಾಬಿಕ್ ಪದವು ಉರ್ದು ನುಡಿ ಸಮುದಾಯದಲ್ಲಿ 'ಹರಾಮೀ' ಎಂಬ ರೂಪದಲ್ಲಿ ಉಚ್ಚಾರಣೆಗೊಂಡು, 'ಹಾದರಕ್ಕೆ ಹುಟ್ಟಿದವನು; ನೀಚ; ಕೆಟ್ಟವನು' ಎಂಬ ರೂಪಕದ ತಿರುಳಿನಲ್ಲಿ ಬಳಕೆಯಾಗಿದೆ. ಉರ್ದು ನುಡಿಯಿಂದ ಕನ್ನಡಕ್ಕೆ ಬಂದಾಗ, ಕೆಟ್ಟ ನಡೆನುಡಿಗಳನ್ನು ಹೊಂದಿರುವ ಹೆಣ್ಣನ್ನು ನಿಂದಿಸಲು ಬಳಕೆಯಾಗುತ್ತಿದೆ.

೧೩೪. ಹರಾಮ್ಕೋರ

ಕುಟುಂಬದ ಮತ್ತು ಸಮಾಜದ ಕಟ್ಟುಪಾಡುಗಳನ್ನು ಕಡೆಗಣಿಸಿ, ಗುರು ಹಿರಿಯರ ಮಾತುಗಳನ್ನು ಲೆಕ್ಕಿಸದೆ, ಕೆಟ್ಟ ನಡೆನುಡಿಗಳಿಂದ ಬಾಳುತ್ತಿರುವ ವ್ಯಕ್ತಿ.

'ಇಸ್ಲಾಮ್ ಮತದ ನಡೆನುಡಿಗಳಿಗೆ ಹೊರತಾದುದು; ಅನಾಚಾರ; ಕೆಟ್ಟದ್ದು' ಎಂಬ ತಿರುಳಿನ 'ಹರಾಮ್' ಎಂಬ ಅರಾಬಿಕ್ ಪದ ಮತ್ತು 'ಮಾಡುವವನು; ತೊಡಗುವವನು' ಎಂಬ ತಿರುಳಿನ 'ಖರ್' ಎಂಬ ಪರ್ಶಿಯನ್ ನುಡಿಯ ಒಟ್ಟು ಸೇರಿ 'ಹರಾಮ್ಖರ್' ಎಂಬ ಪರ್ಸೋ-ಅರಾಬಿಕ್ ಜೋಡುಪದ ರೂಪುಗೊಂಡಿದೆ. ಈ ಪದವು ಉರ್ದು ನುಡಿಯಲ್ಲಿ ಬಳಕೆಗೆ ಬಂದಾಗ 'ಪಾಪದ ಕೆಲಸಗಳಿಂದ ಜೀವಿಸುವವನು; ಕೆಟ್ಟ ಕೆಲಸಗಳಲ್ಲಿ ತೊಡಗಿದವನು; ಬೆವರು ಹರಿಸಿ ದುಡಿಯದೆ ತಿರಿದು ತಿನ್ನುವವನು' ಎಂಬ ತಿರುಳನ್ನು ಪಡೆದು 'ಹರಾಮ್ಖೋರ್' ಎಂಬ ರೂಪದಲ್ಲಿ ಉಚ್ಚಾರಣೆಗೊಂಡಿದೆ. ಉರ್ದು ನುಡಿ ಸಮುದಾಯದ ಒಡನಾಟದಿಂದ ಕನ್ನಡಿಗರಲ್ಲಿ ಬಳಕೆಗೆ ಬಂದಾಗ 'ಹರಾಮ್ಕೋರ' ಎಂದಾಗಿದೆ.

೧೩೫. ಹರುಕ್ ಬಾಯ್ ನನ್ ಸವ್ತಿ

ತಾನಾಡುವ ಮಾತುಗಳ ಮೇಲೆ ತುಸುವಾದರೂ ಹಿಡಿತವಿಲ್ಲದ ಹೆಂಗಸು.

'ಹರಿದಿರುವುದು; ಚಿಂದಿಯಾಗಿರುವುದು; ತೂತಾಗಿರುವುದು' ಎಂಬ ತಿರುಳಿನ 'ಹರುಕು' ಎಂಬ ಪದದೊಡನೆ 'ಬಾಯಿ' ಎಂಬ ಪದ ಸೇರಿ 'ಹರುಕುಬಾಯಿ' ಎಂಬ ಜೋಡುಪದ ರೂಪುಗೊಂಡಿದೆ. ಒಳ್ಳೆಯದು-ಕೆಟ್ಟದ್ದು ಎಂಬ ಅರಿವಿಲ್ಲದೆ; ಯಾವುದನ್ನು ಎಲ್ಲಿ, ಯಾರೊಡನೆ, ಹೇಗೆ ಮಾತನಾಡಬೇಕು-ಮಾತನಾಡ ಬಾರದು ಎಂಬ ಸಾಮಾಜಿಕ ಎಚ್ಚರವಿಲ್ಲದೆ; ಇತರರ ಮನಸ್ಸಿಗೆ ನೋವನ್ನುಂಟು ಮಾಡುವ ಮತ್ತು ಬದುಕಿಗೆ ಹಾನಿಯನ್ನುಂಟು ಮಾಡುವ ಮಾತುಗಳನ್ನು ಯಾವುದೇ ಹಿಂಜರಿಕೆಯಿಲ್ಲದೆ ನುಡಿಯುವ ವರ್ತನೆಗೆ ಒಂದು ರೂಪಕವಾಗಿ 'ಹರುಕುಬಾಯಿ' ಎಂಬ ಪದವು ಕನ್ನಡ ಸಮುದಾಯದ ಮಾತುಕತೆಯಲ್ಲಿ ಬಳಕೆ ಯಾಗುತ್ತಿದೆ. ಗಂಡಸನ್ನು ಬಯ್ಯುವಾಗ 'ಹರುಕ್ ಬಾಯ್ ನನ್ಮಗ' ಎನ್ನುತ್ತಾರೆ.

೧೩೬. ಹಿಡಂಬಿ

ಎತ್ತರವಾದ ನಿಲುವಿನ, ದಪ್ಪ ಮಯ್ಯಿನ ಹಾಗೂ ಒರಟುತನದ ನಡೆನುಡಿಗಳಿಂದ ಕೂಡಿದ ಹೆಂಗಸು.

ವ್ಯಾಸರ ಮಹಾಭಾರತದಲ್ಲಿ ಅರಗಿನ ಮನೆಯ ಒಳಸಂಚಿನಿಂದ ಪಾರಾಗಲೆಂದು ಪಾಂಡವರು ತಾವೇ ಅರಗಿನ ಮನೆಗೆ ಬೆಂಕಿಯಿಟ್ಟು, ಅಲ್ಲಿಂದ ಹೊರಟು ಕಾಡಿನಲ್ಲಿ ಬರುತ್ತಿದ್ದಾಗ ಎದುರಾದ ಹಿಡಿಂಬನೆಂಬ ರಕ್ಕಸನನು ಭೀಮನು ಕೊಲ್ಲುತ್ತಾನೆ. ಹಿಡಿಂಬನ ತಂಗಿಯಾದ ಹಿಡಿಂಬೆಯು ಭೀಮನ ರೂಪಕ್ಕೆ ಮರುಳಾಗಿ, ಅವನನ್ನು ವರಿಸುತ್ತಾಳೆ. ಸಂಸ್ಕೃತ ನುಡಿಯಲ್ಲಿ ರಚನೆಗೊಂಡಿರುವ ರಾಮಾಯಣ, ಮಹಾ ಭಾರತ ಮತ್ತು ಇನ್ನಿತರ ಹೊತ್ತಿಗೆಗಳಲ್ಲಿ ಭಾರತ ದೇಶದ ದಟ್ಟವಾದ ಕಾಡುಗಳಲ್ಲಿ ನೆಲೆಸಿದ್ದ ಬುಡಕಟ್ಟಿನ ಜನರನ್ನು 'ರಾಕ್ಷಸ-ಕಿರಾತ-ಪಿಶಾಚ' ಎಂಬ ಹೆಸರಿನಿಂದ ಕರೆದು, ಅವರನ್ನು ವಿಕಾರವಾದ ಮಯ್ ಮತ್ತು ಕ್ರೂರವಾದ ಮನಸ್ಸುಳ್ಳ ವ್ಯಕ್ತಿಗಳೆಂದು ಚಿತ್ರಿಸಲಾಗಿದೆ. ಕನ್ನಡ ಜನ ಸಮುದಾಯದ ಮಾತುಕತೆಯಲ್ಲಿ ಒಡ್ಡತನದ ನಡೆನುಡಿಯುಳ್ಳ ಹೆಂಗಸನ್ನು ಹೆಸರಿಸಲು 'ಹಿಡಿಂಬೆ/ಹಿಡಂಬಿ' ಎಂಬ ಪದವನ್ನು ಒಂದು ರೂಪಕವಾಗಿ ಬಳಸುತ್ತಾರೆ.

೧೩೭. ಹೆಣ್ ಹ್ಯಾಟೆ ನನ್ಮಗ

ಎಲ್ಲದಕ್ಕೂ ಹೆದರುವ, ಯಾವುದನ್ನು ಮಾಡುವುದಕ್ಕೂ ಹಿಂಜರಿಯುವ ಮತ್ತು ಎಲ್ಲರಿಗೂ ಅಡಿಯಾಳಾಗಿ ಬಾಳುವ ವ್ಯಕ್ತಿ.

ಕೋಳಿಗಳಲ್ಲಿ ಗಂಡು ಕೋಳಿಯನ್ನು 'ಹುಂಜ' ಮತ್ತು ಹೆಣ್ಣು ಕೋಳಿಯನ್ನು 'ಹೇಂಟೆ' ಎಂಬ ಹೆಸರುಗಳಿಂದ ಗುರುತಿಸುತ್ತಾರೆ. ಹೆಣ್ಣು ಕೋಳಿಯನ್ನು ಮೆಟ್ಟಲೆಂದು (ಕಾಮದ ನಂಟನ್ನು ಪಡೆಯಲೆಂದು) ಹುಂಜ ಹಾರಿಬಂದಾಗ, ಅದಕ್ಕೆ ಯಾವುದೇ ಬಗೆಯಲ್ಲೂ ಅಡೆತಡೆಗಳನ್ನು ಮಾಡದೆ, ತನ್ನನ್ನು ಸಲೀಸಾಗಿ ಒಡ್ಡಿಕೊಳ್ಳುವ ಹ್ಯಾಟೆಯ ವರ್ತನೆಯನ್ನು ಒಂದು ರೂಪಕವನ್ನಾಗಿ ಮಾಡಿಕೊಂಡು ಈ ಬಯ್ಗುಳವನ್ನು ಕಟ್ಟಲಾಗಿದೆ. 'ಹೇಂಟೆ' ಎಂಬ ಪದರೂಪ ಆಡುಮಾತಿನಲ್ಲಿ 'ಹ್ಯಾಟೆ' ಎಂದಾಗಿದೆ.

೧೩೮. ನಿಂಗೆ ಅರ್ಸಣಕೊಂಬೆ ರೋಗ್ಬರ

‘ಅರ್ಸಣಕೊಂಬೆ ರೋಗ’ ಎನ್ನುವುದು ಕಾಮಾಲೆ ರೋಗಕ್ಕೆ ಹಳ್ಳಿಗರು ಇಟ್ಟಿರುವ ಹೆಸರು.

ಈ ರೋಗ ತಗುಲಿದ ವ್ಯಕ್ತಿಯ ಕಣ್ಣು ಗುಡ್ಡೆಗಳು ಮತ್ತು ಮಯ್ಯಿನ ತೊಗಲು ಹಳದಿ ಬಣ್ಣಕ್ಕೆ ತಿರುಗುತ್ತವೆ ಹಾಗೂ ಹುಯ್ಯುವ ಉಚ್ಚೆಯು ಹಳದಿ ಬಣ್ಣದಲ್ಲಿರುತ್ತದೆ. ತುದಿಯಿಂದ ಕೊನೆಯ ತನಕ ಹಳದಿ ಬಣ್ಣದಿಂದ ಕೂಡಿರುವ ಅರಿಸಿನದ ಕೊಂಬೆಯನ್ನು ಒಂದು ರೂಪಕವನ್ನಾಗಿ ಮಾಡಿಕೊಂಡು ಈ ಶಾಪದ ನುಡಿಯನ್ನು ಕಟ್ಟಲಾಗಿದೆ. ಕೊಂಬೆ ಎಂದರೆ ‘ತೊಂಡು; ಚೂರು; ಕೊನೆ.’

೧೩೯. ನಿಂಗೆ ಅಳ್ ಕಟ್ಟ

ಸಾವು ಬರಲೆಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

ಪ್ಲೇಗ್ ರೋಗ ತಗುಲಿದ ವ್ಯಕ್ತಿಗೆ ಮೊದಲು ಚಳಿಜ್ವರ ಕಾಣಿಸಿಕೊಂಡು, ಅನಂತರ ಒಂದೆರಡು ದಿನಗಳಲ್ಲಿ ಜ್ವರದ ಕಾವು ಏರಿತ್ತಿದ್ದಂತೆಯೇ, ಕಂಕುಳು ಮತ್ತು ತೊಡೆಗಳ ಎರಡು ಸಂದುಗಳಲ್ಲಿ ಹೆಬ್ಬೆರಳಿನ ಗಾತ್ರದ ಹರಳುಗಳು ಕಟ್ಟಿಕೊಳ್ಳುತ್ತವೆ. ಕೀವು ಹಾಗೂ ನೆತ್ತರು ತುಂಬಿ ಹರಳುಗಳು ಒಡೆಯುತ್ತಿದ್ದಂತೆಯೇ ರೋಗಿಯ ಸಾವನ್ನಪ್ಪುತ್ತಾನೆ. ಪ್ಲೇಗ್ ರೋಗ ಬರುವುದಕ್ಕೆ ಮಾರಮ್ಮನೆಂಬ ಊರದೇವತೆಯ ಮುನಿಸು ಕಾರಣವೆಂಬ ನಂಬಿಕೆಯು ಹಳ್ಳಿಗಾಡಿನ ಜನರಲ್ಲಿ ಇರುವುದರಿಂದ, ಇದನ್ನು ‘ಪಿಳೇಕಮ್ಮ; ಪಳೇಕದಮ್ಮ’ ಎಂಬ ಹೆಸರುಗಳಿಂದಲೂ ಕರೆಯುತ್ತಿದ್ದರು. ‘ಕಲ್ಲಿನ ಚೂರು; ಬೀಜ; ಮಣಿ’ ಎಂಬ ತಿರುಳುಳ್ಳ ‘ಹರಳು’ ಎಂಬ ಪದವು ಮಾತಿನ ಸನ್ನಿವೇಶದಲ್ಲಿ ‘ಅಳ್’ ಎಂಬ ರೂಪದಲ್ಲಿ ಉಚ್ಚಾರಣೆಗೊಂಡಿದೆ.

೧೪೦. ನಿಂಗೆ ಆಪತ್ ಬಂದ್ ಚಾಪೇಲಿ ಸುತ್ಕೊಂಡೋಗ

"ಯಾವುದಾದರೊಂದು ಬಗೆಯ ಕೇಡಿನಿಂದ ನಡಂತ್ರದಲ್ಲಿಯೇ ಅಂದರೆ ಆಯುಸ್ಸು ತುಂಬುವ ಮುನ್ನವೇ ಸಾವು ಬರಲಿ" ಎಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

'ಮೋಟಾರು ವಾಹನಗಳ ಡಿಕ್ಕಿ, ಆತ್ಮಹತ್ಯೆ, ಕೊಲೆ, ಇನ್ನಿತರ ಅವಗಡಗಳಿಂದ ವ್ಯಕ್ತಿಗೆ ಸಾವುಂಟಾಗಿ, ಅದು ಪೋಲಿಸರಿಗೆ ವರದಿಯಾದಾಗ, ಹೆಣವನ್ನು ಸರ್ಕಾರಿ ಆಸ್ಪತ್ರೆಗೆ ಸಾಗಿಸಲಾಗುತ್ತದೆ. ವ್ಯಕ್ತಿಯ ಸಾವಿಗೆ ಕಾರಣವೇನೆಂಬುದನ್ನು ಪತ್ತೆಹಚ್ಚಲು ಡಾಕ್ಟರು ಹೆಣವನ್ನು ಕುಯ್ದು ಪರಿಶೀಲಿಸುತ್ತಾರೆ, ಈ ರೀತಿ ಕುಯ್ದು ಮತ್ತೆ ಹೊಲೆದು ಹೆಣವನ್ನು ಈಚಲ ಕಡ್ಡಿಗಳಿಂದ ಹೆಣೆದಿರುವ ಚಾಪೆಯಲ್ಲಿ ಸುತ್ತಿ ವಾರಸುದಾರರ ವಶಕ್ಕೆ ಒಪ್ಪಿಸುತ್ತಾರೆ. ಚಾಪೆಯಲ್ಲಿ ಮುದುಡಿ ತಂದ ಹೆಣಕ್ಕೆ ಬಿಸಿನೀರನ್ನು ಎರೆಯದೆ, ಸಿಂಗಾರವನ್ನೂ ಮಾಡದೆ, ಚಾಪೆಯ ಸಮೇತ ಚಿತೆಯ ಮೇಲಿಟ್ಟು ಬೆಂಕಿ ಕೊಡುತ್ತಾರೆ. ಚಾಪೆ ಎಂದರೆ ಕುಳಿತುಕೊಳ್ಳಲು ಇಲ್ಲವೇ ಮಲಗಿಕೊಳ್ಳಲು ನೆಲದ ಮೇಲೆ ಹಾಕುವ ಹಾಸು.

೧೪೧. ನಿಂಗೆ ಎದೆಬಾವಾಗ

"ಎದೆಬಾವು ಆಗಲಿ" ಎಂಬುದು ಹೆಂಗಸರಿಗೆ ಹಾಕುವ ಶಾಪದ ನುಡಿ.

ಬಾಣಂತಿಯರಿಗೆ ಬರುವ ಒಂದು ಬಗೆಯ ರೋಗವೇ ಎದೆಬಾವು. ಎದೆಯಲ್ಲಿ ಹಾಲು ಹೆಚ್ಚಾಗಿ ಉತ್ಪತ್ತಿಯಾದಾಗ; ಎದೆಯ ಹಾಲನ್ನು ಮಗು ಸರಿಯಾಗಿ ಕುಡಿಯದಿದ್ದಾಗ; ತಾಯಿಯು ಎದೆಹಾಲನ್ನು ಮಗುವಿಗೆ ಉಣಿಸದಿದ್ದಾಗ; ಎದೆಯಲ್ಲೇ ಉಳಿದುಕೊಳ್ಳುವ ಹಾಲಿನಿಂದಾಗಿ ಎದೆಗಳು ಊದಿಕೊಂಡು ಬಿಗಿಯಾಗ ತೊಡಗುತ್ತವೆ. ಇದರಿಂದ ಉಂಟಾಗುವ ಯಾತನೆಯಿಂದ ಬಾಣಂತಿಯು ನರಳ ತೊಡಗುತ್ತಾಳೆ. ಬಾವು ಎಂದರೆ 'ಊತ; ಊದಿಕೊಳ್ಳುವುದು; ಉಬ್ಬುವುದು.'

೧೪೨. ನಿಂಗೆ ಒದ್ದಾಡು ತಾಯ್ ಬರ

ಸಾವು ಬರಲೆಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

'ಒದ್ದಾಡು ತಾಯಿ' ಎನ್ನುವುದು ಪ್ಲೇಗ್ ರೋಗಕ್ಕೆ ಹಳ್ಳಿಗರು ಕೊಟ್ಟಿದ್ದ ಹೆಸರು. ಈ ರೋಗ ತಗುಲಿದ ವ್ಯಕ್ತಿಗೆ ಮೊದಲು ಅತಿಯಾದ ಜ್ವರ ಕಾದು, ಅನಂತರದ

ದಿನಗಳಲ್ಲಿ ಕಂಕುಳು ಮತ್ತು ತೊಡೆಗಳ ಎರಡು ಸಂದುಗಳಲ್ಲಿ ಹೆಬ್ಬೆರಳಿನ ಗಾತ್ರದ ಹರಳುಗಳು ಕಟ್ಟಿಕೊಳ್ಳುತ್ತವೆ. ಕೀವು ಹಾಗೂ ನೆತ್ತರು ತುಂಬಿ ಹರಳುಗಳು ಒಡೆಯ ತೊಡಗಿದಾಗ, ನೋವನ್ನು ತಾಳಲಾರದೆ, ವಿಲವಿಲನೆ ಒದ್ದಾಡಿ ಒದ್ದಾಡಿ ಸಾಯುತ್ತಾನೆ. ಕನ್ನಡ ನುಡಿ ಸಮುದಾಯದಲ್ಲಿ ಪ್ಲೇಗ್ ರೋಗಕ್ಕೆ ಮಾರಮ್ಮನೆಂಬ ಊರ ದೇವತೆಯ ಕೋಪವೇ ಕಾರಣವೆಂಬ ನಂಬಿಕೆಯಿದ್ದುದರಿಂದ, ಇದನ್ನು 'ಪಿಳೇಕಮ್ಮ' ಎಂದು ಕರೆಯುತ್ತಿದ್ದರು.

೧೪೩. ನಿಂಗೆ ಕಾಸಿ ಕಂಟ್ಕ ಬರ

ಸಾವು ಬರಲೆಂಬ ಉದ್ದೇಶದಿಂದ ಹಾಕು ಶಾಪದ ನುಡಿ.

ಸಾವನ್ನಪ್ಪಿದ ಹೆಂಗಸಿನ ಹೆಣವನ್ನು ಒಪ್ಪಮಾಡಲು ತೊಡಗಿದಾಗ, ಮೊದಲು ಹೆಣದ ಮಯ್ಯಿಗೆ ಸೀರೆಯನ್ನು ತೊಡೆಯ ಎಡೆಯಿಂದ ಹಾಯಿಸಿ ನಡುವಿಗೆ ಕಚ್ಚೆ ಯಂತೆ ಬಿಗಿಯಾಗಿ ಕಟ್ಟುತ್ತಾರೆ. ಇದನ್ನು 'ಕಾಸಿ ಕಟ್ಟುವುದು' ಎನ್ನುತ್ತಾರೆ. 'ಕಾಸೆ' ಎಂಬ ಪದ ಆಡುಮಾತಿನಲ್ಲಿ 'ಕಾಸಿ' ಎಂದಾಗಿದೆ. 'ಕಾಸೆ' ಎಂದರೆ 'ಕಚ್ಚೆ ಹಾಕಿ ಉಟ್ಟುಕೊಳ್ಳುವ ಬಟ್ಟೆ.' 'ಕಂಟಕ' ಎಂದರೆ ಆಪತ್ತು. ವಯಸ್ಸಿನಲ್ಲಿ ಹಿರಿಯಳಾದ ಹೆಂಗಸೊಬ್ಬಳು ಕಾಸೆಯನ್ನು ಕಟ್ಟಿದ ನಂತರ, ಹೆಣಕ್ಕೆ ನೀರನ್ನು ಎರೆಯುತ್ತಾರೆ.

೧೪೪. ನಿಂಗೆ ಕೊಕ್ರೆ ರೋಗ ತಗಳ

ಕೋಳಿಗಳಿಗೆ ಸಾವು ಬರಲೆಂದು ಹಾಕುವ ಶಾಪದ ನುಡಿ.

ತಮ್ಮ ಮನೆಯ ಮುಂದೆ ಒಣಗಿಹಾಕಿದ್ದ ರಾಗಿ, ಬತ್ತ ಇಲ್ಲವೇ ಇನ್ನಿತರ ಬಗೆಯ ಕಾಳುಕಡ್ಡಿಗಳನ್ನು ನೆರೆಹೊರೆಯವರ ಕೋಳಿಗಳು ಬಂದು ಮೇಯತೊಡಗಿದಾಗ ಇಲ್ಲವೇ ಗಲೀಜು ಮಾಡತೊಡಗಿದಾಗ, ಕೋಳಿಗಳನ್ನು ಅದರಿಸುತ್ತಾ, ಈ ರೀತಿ ಶಪಿಸುತ್ತಾರೆ. ಕೊಕ್ಕರೆ ರೋಗವೆಂಬುದು ಕೋಳಿಗಳಿಗೆ ಬರುವ ಒಂದು ಬಗೆಯ ರೋಗ. ಈ ರೋಗ ತಗುಲಿದ ಕೋಳಿಯು ಪದೇ ಪದೇ ಉಚ್ಚಿಕೊಳ್ಳುತ್ತಾ, ಏನನ್ನೂ ಹೆಕ್ಕಿ ತಿನ್ನದೆ, ಒಂದೇ ಕಡೆ ನಿಂತು ಜೂಗಡಿಸುತ್ತಿದ್ದು, ಒಂದೆರಡು ದಿನಗಳಲ್ಲೇ ಸಾಯುತ್ತದೆ. 'ತುದಿಗಾಲ ಮೇಲೆ ಕುಳಿತುಕೊಳ್ಳುವಿಕೆ; ನಿಂತು ಕೊಳ್ಳುವಿಕೆ' ಎಂಬ ತಿರುಳಿನ 'ಕುಕ್ಕರ/ಕೊಕ್ಕರ' ಎಂಬ ಪದರೂಪವು ಉಚ್ಚಾರಣೆಗೊಳ್ಳುವಾಗ 'ಕೊಕ್ಕರೆ' ಎಂದಾಗಿದೆ.

೧೪೫. ನಿಂಗೆ ಕೊಳ್ಳಿದೆವ್ವ ಬಡಿಯ

"ಸಾವು ಉಂಟಾಗಲಿ" ಎಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

ಬೆಂಕಿಯ ಕಿಡಿಗಳನ್ನು ಕಾರುತ್ತ ಉರಿಯುತ್ತಿರುವ ಕಟ್ಟಿಗೆಯ ತುಂಡನ್ನು 'ಕೊಳ್ಳಿ' ಎಂದು ಕರೆಯುತ್ತಾರೆ. ಇದಕ್ಕೆ ದೆವ್ವ ಎಂಬ ಪದ ಜತೆಗೂಡಿ "ಕೊಳ್ಳಿದೆವ್ವ" ಎಂಬ ಜೋಡುಪದ ರೂಪುಗೊಂಡಿದೆ. ಅಮಾವಾಸ್ಯೆಯ ಹಿಂದು–ಮುಂದಿನ ದಿನಗಳ ಕಗ್ಗತ್ತಲಲ್ಲಿ ಬೆಂಕಿಯ ಕೆನ್ನಾಲಿಗೆಯನ್ನು ಚಾಚಿ ಉರಿಯುತ್ತಾ ಸಂಚರಿಸುವ ಕೊಳ್ಳಿದೆವ್ವ, ಗ್ರಹಚಾರ ತಪ್ಪಿದವರ ಕಣ್ಣಿಗೆ ಕಂಡು ಬರುತ್ತದೆಯೆಂಬ ನಂಬಿಕೆಯು ತಲೆತಲಾಂತರಗಳಿಂದಲೂ ಕನ್ನಡ ಜನಪದರ ಮನದಲ್ಲಿ ನೆಲೆಸಿದೆ. ನಿಸರ್ಗದ ಆಗುಹೋಗುಗಳ ಓದಿನಿಂದ ದೊರಕಿರುವ ತಿಳುವಳಿಕೆಯು ಕೊಳ್ಳಿದೆವ್ವದ ಇರುವಿಕೆಯನ್ನು ಅಲ್ಲಗಳೆದು, ವಾತಾವರಣದಲ್ಲಿರುವ ಬಿಳಿಯ ರಂಜಕದೊಡನೆ ಆಮ್ಲಜನಕ ಕೂಡಿದಾಗ ಹತ್ತಿ ಉರಿಯುವ ರಂಜಕದ ಬೆಂಕಿ ಇಲ್ಲವೇ ಇನ್ನಿತರ ಕಾರಣಗಳಿಂದ ಮರಗಿಡಪೊದೆಗಳಲ್ಲಿ ಹತ್ತಿ ಉರಿಯುತ್ತಿರುವ ಬೆಂಕಿಯು ಇದಾಗಿರುತ್ತದೆ ಎಂಬುದನ್ನು ವಿವರಿಸಿದೆ.

೧೪೬. ನಿಂಗೆ ಗಾಳಿ ಬರ

"ವ್ಯಕ್ತಿಯ ಮಯ್ ಮನದ ಮೇಲಣ ಹಿಡಿತ ತಪ್ಪಿಹೋಗಿ, ನಡೆನುಡಿಯಲ್ಲಿ ಹೊಂದಾಣಿಕೆಯಿಲ್ಲದೆ ಬದುಕು ಹಾಳಾಗಲಿ" ಎಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

'ಗಾಳಿ ಬರಲಿ' ಎಂಬ ಪದಕಂತೆಯಲ್ಲಿನ 'ಗಾಳಿ' ಎಂಬ ಪದಕ್ಕೆ 'ದೆವ್ವ; ಪಿಶಾಚಿ' ಎಂಬ ತಿರುಳಿದೆ. ಕೆಲವೊಂದು ಬಗೆಯ ಬಯಕೆಗಳು ಈಡೇರುವ ಮುನ್ನವೇ ಅರೆ ಆಯುಸ್ಸಿನಲ್ಲಿ ಸಾವಿಗೀಡಾದವರು, ಉಳಿದ ಆಯುಸ್ಸು ತುಂಬುವ ತನಕ ಮೂಳೆ ಮಾಂಸವಿಲ್ಲದ ದೆವ್ವಗಳಾಗಿ ಅಲೆಯುತ್ತಿದ್ದು, ಸಮಯ ಸಿಕ್ಕಾಗ ಜೀವಂತ ವ್ಯಕ್ತಿಗಳ ಮಯ್ ಮನವನ್ನು ಹೊಕ್ಕು, ತಮ್ಮ ಆಸೆಗಳನ್ನು ಪೂರೈಸಿಕೊಳ್ಳುತ್ತಾರೆ ಎಂಬ ನಂಬಿಕೆಯು ಜನಮನದಲ್ಲಿ ತಲೆತಲಾಂತರಗಳಿಂದಲೂ ಹರಿದು ಬಂದಿದೆ.

'ಗಾಳಿ ಬಂದ/ದೆವ್ವ ಹಿಡಿದ ವ್ಯಕ್ತಿಗಳೆಂದು' ಗುರುತಿಸಲಾಗುವವರ ನಡೆ ನುಡಿಗಳು ಇತರರಿಗೆ ವಿಕಾರವಾಗಿ ಮತ್ತು ಅಸಹಜವಾಗಿ ಕಂಡುಬರುತ್ತವೆ. ಮನೋ ವಿಜ್ಞಾನದ ಓದಿನಿಂದ ದೊರಕಿದ ತಿಳುವಳಿಕೆಯು ಗಾಳಿ/ದೆವ್ವದ ಬಗೆಗಿನ ನಂಬಿಕೆಯನ್ನು ತಳ್ಳಿ ಹಾಕಿ, ವ್ಯಕ್ತಿಗಳು ಬದುಕಿನಲ್ಲಿ ಪಡುತ್ತಿರುವ ಸಂಕಟ, ಹಾನಿ, ಹತಾಶೆಯಿಂದ

ಉಂಟಾಗುವ ಮಾನಸಿಕ ಕುಗ್ಗುವಿಕೆ; ಮಿದುಳಿನ ನರಮಂಡಲದ ಜೀವಕಣಗಳಿಗೆ ಅಂಟುರೋಗಗಳು ತಗುಲಿ; ಮೆದುಳಿಗೆ ಹೋಗುವ ಆಮ್ಲಜನಕ ಇಲ್ಲವೇ ನೆತ್ತರಿನ ಪ್ರಮಾಣದಲ್ಲಿ ಕೊರತೆಯುಂಟಾಗಿ ನರಕೋಶಗಳಿಗೆ ಉಂಟಾಗುವ ಹಾನಿಯಿಂದ ಬಂದಿರುವ ಮಾನಸಿಕ ರೋಗದಿಂದಾಗಿ, ಒಂದಕ್ಕೊಂದು ತಾಳೆಯಿಲ್ಲದ ನಡೆನುಡಿ ಕಂಡುಬರುತ್ತವೆ ಎಂಬುದನ್ನು ಮನವರಿಕೆ ಮಾಡಿದೆ.

೧೪೭. ನಿಂಗೆ ಗೆಂಡೆ ರೋಗ್ಬರ

ಮಲೇರಿಯ ರೋಗವನ್ನು ಹಳ್ಳಿಗರು ಗೆಂಡೆ ರೋಗವೆಂದು ಕರೆಯುತ್ತಿದ್ದರು.

ಈ ರೋಗಕ್ಕೆ ತುತ್ತಾದ ವ್ಯಕ್ತಿಯು ಮೊದಲು ತುಂಬಾ ಚಳಿಯಿಂದ ನಡುಗುತ್ತಾ, ಆನಂತರ ಅಮರಿಕೊಳ್ಳುವ ಜ್ವರದ ತಾಪದಿಂದ ನರಳತೊಡಗುತ್ತಾನೆ. ಕೆಲವೇ ಗಂಟೆಗಳಲ್ಲಿ ಇಡೀ ಮಯ್ಯೆಲ್ಲಾ ಬೆವರತೊಡಗಿ, ಚಳಿಜ್ವರ ಬಿಟ್ಟುಹೋಗುತ್ತದೆ. ಆದರೆ ಮತ್ತೆ ಕೆಲಸಮಯದಲ್ಲೇ ಚಳಿಜ್ವರ ಮರುಕಳಿಸುತ್ತದೆ. ಈ ರೀತಿ ಬಿಟ್ಟು ಬಿಟ್ಟು ಬರುವ ಚಳಿಜ್ವರದಿಂದಾಗಿ ಕೆಲವೇ ದಿನಗಳಲ್ಲಿ ರೋಗಿಯ ಹೊಟ್ಟೆಯೊಳಗಿನ ಈಲಿ ಮತ್ತು ತೊಳ್ಳೆ (ತೊರಳೆ/ಗುಲ್ಮ) ದಪ್ಪವಾಗುತ್ತವೆ. ಕಯ್ಯಿಂದ ಮುಟ್ಟಿ ಗುರುತಿಸಬಹುದಾದ ಇವನ್ನು 'ಜ್ವರದ ಗೆಡ್ಡೆ; ಮಲೇರಿಯಾ ಗೆಡ್ಡೆ' ಎಂದು ಜನರು ಕರೆಯುತ್ತಿದ್ದರು. ಇದೇ ಉದ್ದೇಶದಿಂದ ಹಾಕುವ **'ನಿಂಗೆ ಗೆಡ್ಡೆ ಕಟ್ಟ'** ಎಂಬ ಶಾಪದ ನುಡಿಯೂ ಬಳಕೆಯಲ್ಲಿದೆ. 'ಗೆಣ್ಡೆ' ಎಂಬ ಪದದ ಉಲಿಕಂತೆಗಳ ಜೋಡಣೆಯಲ್ಲಿ ಉಂಟಾದ ಬದಲಾವಣೆಯಿಂದಾಗಿ 'ಗೆಡ್ಡೆ' ಎಂದು ಉಚ್ಚಾರಣೆಗೊಂಡಿದೆ.

೧೪೮. ನಿಂಗೆ ತುಪಾಕಿ ರೋಗ ಬಂದು ತುಪ್ಪನೆ ಬೀಳ

ಕೋಳಿಗಳಿಗೆ ಸಾವು ಬರಲೆಂದು ಹಾಕುವ ಶಾಪದ ನುಡಿ.

ತಮ್ಮ ಮನೆಯ ಮುಂದೆ ಒಣಗಿಹಾಕಿದ್ದ ರಾಗಿ, ಬತ್ತ ಇಲ್ಲವೇ ಇನ್ನಿತರ ಕಾಳುಗಳನ್ನು ಬೇರೆಯವರ ಕೋಳಿಗಳು ಬಂದು ಮೇಯತೊಡಗಿದಾಗ ಇಲ್ಲವೇ ಗಲೀಜು ಮಾಡತೊಡಗಿದಾಗ, ಅವನ್ನು ಅದರಿಸುತ್ತಾ ಈ ರೀತಿ ಶಪಿಸುತ್ತಾರೆ. 'ತುಪಾಕಿ ರೋಗ'ವೆಂಬುದು ಕೋಳಿಗಳಿಗೆ ಬರುವ ಒಂದು ಬಗೆಯ ರೋಗ. ಈ ರೋಗ ತಗುಲಿದ ಕೋಳಿಯು ಏನನ್ನು ಹೆಕ್ಕಿ ತಿನ್ನದೇ, ನೀರನ್ನು ಕುಡಿಯದೇ ಒಂದೇ ಕಡೆ ನಿಂತು ಜೂಗಡಿಸತೊಡಗುತ್ತದೆ. ಅನಂತರ ಒಂದೆರಡು ದಿನಗಳಲ್ಲಿ ನಿಂತಿದ್ದ ಕಡೆಯಲ್ಲೇ ತೊಪ್ಪನೆ ನೆಲಕ್ಕುರಳಿ ಸಾಯುತ್ತದೆ. 'ತುಪಾಕಿ' ಎಂದರೆ ಬಂದೂಕು.

ಬಂದೂಕಿನಿಂದ ಹಾರಿದ ಗುಂಡು ವ್ಯಕ್ತಿಗೆ ಬಡಿದಾಗ ಅವನು ನಿಂತಿದ್ದ ಎಡೆಯಲ್ಲಿ ಬಿದ್ದು ಸಾಯುವುದನ್ನು ರೂಪಕವಾಗಿ ಬಳಸಿ ಈ ಶಾಪವನ್ನು ಕಟ್ಟಲಾಗಿದೆ.

೧೪೯. ನಿಂಗೆ ತುರ್ಗಜ್ಜಿ ಏಳ

'ತುರ್ಗಜ್ಜಿ' ಎಂಬುದು ಮಾನವರ ಕಯ್ ಕಾಲುಗಳ ಬೆರಳಿನ ಸಂದುಗಳ ತೊಗಲಿನಲ್ಲಿ ಉಂಟಾಗುವ ಒಂದು ಬಗೆಯ ರೋಗ.

ಮೊದಲು ಸಣ್ಣ ಸಣ್ಣ ಗಂದೆಗಳಾಗಿ ಮೂಡಿ ಬಂದು, ಆಮೇಲೆ ಕೀವು ತುಂಬಿ ಕೊಂಡು ಹೆಚ್ಚಿನ ನವೆಯುಂಟಾದಾಗ, ನವೆಯನ್ನು ತಡೆಯಲಾಗದೆ ಕೆರೆಕೆರೆ ದಂತೆಲ್ಲಾ ಗಾಯಗಳಾಗುತ್ತವೆ. 'ಕಡಿತ; ಕೆರೆತ; ನವೆ' ಎಂಬ ತಿರುಳಿನ 'ತುರಿ' ಎಂಬ ಪದಕ್ಕೆ 'ಬೊಕ್ಕೆ/ಗಂದೆಗಳಿಂದ ಕೂಡಿದ ತೊಗಲಿನ ರೋಗ' ಎಂಬ ತಿರುಳಿನ 'ಕಜ್ಜಿ' ಎಂಬ ಪದ ಕೂಡಿ, 'ತುರ್ಗಜ್ಜಿ' ಎಂಬ ಜೋಡುಪದ ರೂಪುಗೊಂಡಿದೆ.

೧೫೦. ನಿಂಗೆ ನೆಲ್ಪಟ್ ಹೊಡಿಯ

ಸಾವು ಬರಲೆಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

'ನೆಲ್ಪಟ್ಟು' ಎಂಬ ಪದಕಂತೆಯಲ್ಲಿ 'ನೆಲ' ಮತ್ತು 'ಪಡು' ಎಂಬ ಎರಡು ಪದಗಳಿವೆ. 'ಪಡು' ಎಂದರೆ 'ಸಾಯುವುದು; ಮರಣ ಹೊಂದುವುದು.' "ನೆಲ್ಪಟ್ಟು ಹೊಡೆಯುವುದು" ಎಂದರೆ ಉಸಿರಾಡುವಿಕೆಯು (ಎದೆ ಬಡಿತ) ನಿಂತುಹೋಗಿ, ನಿಂತಿದ್ದ ಎಡೆಯಲ್ಲಿಯೇ ವ್ಯಕ್ತಿಯು ಕುಸಿದು ಬಿದ್ದು ಸಾಯುವುದು. ಇದೇ ಉದ್ದೇಶವುಳ್ಳ **'ನೀನ್ ನೆಗೆದು ಬೀಳ; ನಿಂಗೆ ನೆಲಗ್ರಾಹ ಹಿಡಿ'** ಎಂಬ ಶಾಪದ ನುಡಿಗಳು ಬಳಕೆಯಲ್ಲಿಯವೆ. 'ಗ್ರಾಹ' ಎಂದರೆ 'ಹಿಡಿಯುವುದು; ತೆಗೆದುಕೊಳ್ಳುವುದು.'

೧೫೧. ನಿಂಗೆ ಬಂದದ್ದು ಬಯಲಾಗ್ದೆ ಹೋಗ

"ಬಂದ ರೋಗರುಜಿನ ಮತ್ತು ಯಾತನೆ ಬಾಳಿನುದ್ದಕ್ಕೂ ಕಾಡುತ್ತಿರಲಿ" ಎಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

'ಬಯಲಾಗು' ಎಂಬ ನುಡಿಗಟ್ಟಿಗೆ "ಕಾಣುವುದು; ತಿಳಿಯುವುದು; ಕೊನೆ ಗೊಳ್ಳುವುದು" ಎಂಬ ತಿರುಳಿದೆ. ಈ ಶಾಪದ ನುಡಿ ಬಳಕೆಯ ಸನ್ನಿವೇಶದಲ್ಲಿ "ಬಯಲಾಗದೆ ಹೋಗಲಿ" ಎಂದರೆ "ಬಂದ ರೋಗ ಯಾವುದೆಂಬುದು ಪತ್ತೆಯಾಗದಿರಲಿ ಹಾಗೂ ಬಾಳಿನಲ್ಲಿ ಬಂದ ಸಂಕಟಗಳು ಕೊನೆಗೊಳ್ಳದಿರಲಿ."

೧೫೨. ನಿಂಗೆ ಬಾಣ್ಸನ್ನಿ ಬರ

'ಬಾಣ್ಸನ್ನಿ' ಎಂಬುದು ಹಸಿ ಬಾಣಂತಿಯರಿಗೆ ಬರುವ ಒಂದು ಬಗೆಯ ರೋಗ.

ಹೆರಿಗೆಯಾದ ಏಳೆಂಟು ದಿನಗಳಲ್ಲೇ ಈ ರೋಗಕ್ಕೆ ಒಳಗಾದ ಬಾಣಂತಿಯು ತುಂಬಾ ತಲೆನೋವಿನಿಂದ ನರಳುತ್ತ, ಕಣ್ಣುಗಳು ಮಂಕಾಗಿ, ಬಾಯಲ್ಲಿ ನೊರೆ ತುಂಬಿಕೊಂಡು, ಮಯ್ಯೆಲ್ಲಾ ಸೆಟೆದುಕೊಂಡು, ನಾಲಗೆಯನ್ನು ಕಚ್ಚಿಹಿಡಿದು ಗಡಗಡನೆ ನಡುಗುತ್ತ, ಆಗಾಗ್ಗೆ ಎಚ್ಚರ ತಪ್ಪಿ ಬೀಳುತ್ತಾಳೆ. ಎದೆ ಬಿಗಿದುಕೊಂಡಂತಾಗಿ ಮಗುವಿಗೆ ಹಾಲುಣಿಸಲಾಗದೆ ಒದ್ದಾಡುತ್ತಾಳೆ.

'ಬಾಣ್ಸನ್ನಿ' ಎಂಬ ಜೋಡುಪದದಲ್ಲಿ ಬಾಣಂತಿ ಮತ್ತು ಸನ್ನಿ ಎಂಬ ಎರಡು ಪದಗಳಿವೆ. 'ಸನ್ನಿ' ಎಂದರೆ ಮಿದುಳಿನ ನರಮಂಡಲಕ್ಕೆ ಹೋಗುತ್ತಿರುವ ನೆತ್ತರು ಮತ್ತು ಆಮ್ಲಜನಕದ ಪ್ರಮಾಣದಲ್ಲಿ ಕೊರತೆಯುಂಟಾದಾಗ ವ್ಯಕ್ತಿಯ ಮಯ್ ಅದುರತೊಡಗುವುದು ಹಾಗೂ ಅರಿವನ್ನು ಕಳೆದುಕೊಂಡು ಪದೇಪದೇ ಎಲ್ಲೆಂದರಲ್ಲಿ ಎಚ್ಚರ ತಪ್ಪಿ ಬೀಳುವುದು.

೧೫೩. ನಿಂಗೆ ಬಾಲಾಗ್ರ ಬರ

"ಬಗೆಬಗೆಯ ರೋಗರುಜಿನಗಳು ಮಕ್ಕಳನ್ನು ಕಾಡುವಂತಾಗಲಿ" ಎಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

'ಬಾಲಗ್ರಹ' ಎಂಬ ಸಂಸ್ಕೃತದ ಜೋಡಿಪದವು ಕನ್ನಡಿಗರ ಬಾಯಲ್ಲಿ 'ಬಾಲಾಗ್ರ'ವಾಗಿ ಉಚ್ಚಾರಣೆಗೊಂಡಿದೆ. ಸುಮಾರು ಐದು ತಿಂಗಳಿಂದ ಮೂರು ವರ್ಷದ ಮಕ್ಕಳ ಆರೋಗ್ಯದಲ್ಲಿ ಅನೇಕ ಬಗೆಯ ಏರುಪೇರುಗಳಾಗುತ್ತಿರುತ್ತವೆ. ಚಂಡಿ ಹಿಡಿದು ಒಂದೇ ಸಮನೆ ಅಳುವುದು ಇಲ್ಲವೇ ಕಿರುಚುವುದು; ಕತ್ತು ಸರಿಯಾಗಿ ನಿಲ್ಲದಿರುವುದು; ಮಯ್ತುಂಬ ಗಂದೆಗಳು ಏಳುವುದು; ತೊಗಲಿನಲ್ಲಿ ಕುರುಗಳೆದ್ದು ಹುಣ್ಣಾಗುವುದು; ನೀರು ನೀರಾಗಿ ಉಚ್ಚೆಕೊಳ್ಳುವುದನ್ನು ಒಳಗೊಂಡಂತೆ ಒಂದರ ನಂತರ ಮತ್ತೊಂದು ಕಾಯಿಲೆಗಳು ಕಾಡುತ್ತಿರುತ್ತವೆ. ಒಂಬತ್ತು ಗ್ರಹಗಳ ಕಾಟದಿಂದ ಈ ಬಗೆಯ ರೋಗಗಳು ಮಕ್ಕಳಿಗೆ ಬರುತ್ತವೆ ಎಂಬ ನಂಬಿಕೆಯು ಕನ್ನಡ ಸಮುದಾಯದ ಜನಮನದಲ್ಲಿದೆ.

೧೫೪. ನಿಂಗೆ ಬಾಳ್ಬಸುರ್ ಬರ

"ಹೊಟ್ಟೆ ಉಬ್ಬರಿಸಿಕೊಂಡಿದ್ದು, ಎಂದೆಂದಿಗೂ ಮಕ್ಕಳನ್ನು ಹೆರದಂತಾಗಲಿ" ಎಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

'ಬಾಳ್ ಬಸುರು' ಎನ್ನುವುದು ಒಂದು ಬಗೆಯ ರೋಗ. ಈ ರೋಗ ತಗುಲಿದ ಹೆಂಗಸಿನ ಹೊಟ್ಟೆಯೊಳಗಡೆ ದಪ್ಪನೆಯ ಗೆಡ್ಡೆ ಕಟ್ಟಿಕೊಂಡು ಇಲ್ಲವೇ ನೀರು ತುಂಬಿಕೊಂಡು, ಈಕೆಯ ಹೊಟ್ಟೆಯು ತುಂಬು ಬಸುರಿಯ ಹೊಟ್ಟೆಯಂತಾಗುತ್ತದೆ. ನೋಡಿದವರ ಕಣ್ಣಿಗೆ ಇವಳು ಇನ್ನೇನು ಮಗುವನ್ನು ಹಡೆಯಲಿರುವ ದಿನ ತುಂಬಿದ ಬಸುರಿಯಂತೆ ಕಾಣುತ್ತಾಳೆ. 'ಬೋಳ್ ಬಸುರು' ಎಂಬ ಜೋಡಿಪದವು ಉಚ್ಚಾರಣೆಯಾಗುವಾಗ 'ಬಾಳ್ ಬಸುರು' ಎಂದಾಗಿರಬಹುದು. ಏಕೆಂದರೆ 'ಬೋಳು' ಎಂಬ ಪದಕ್ಕೆ "ಬರಿದಾದ, ಇಲ್ಲದಿರುವ" ಎಂಬ ತಿರುಳಿದೆ.

೧೫೫. ನಿಂಗ್ ಬಿಜ್ ಬಡಿಯ

ಸಾವು ಬರಲೆಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

'ಬಿಜ್ಜು' ಎನ್ನುವುದು ಹದ್ದಿನ ಜಾತಿಗೆ ಸೇರಿದ ಹಕ್ಕಿ. ಗಾತ್ರದಲ್ಲಿ ಹದ್ದಿಗಿಂತ ಚಿಕ್ಕದಾಗಿರುತ್ತದೆ. ತಾಯಿಕೋಳಿಯು ತನ್ನ ಅಗಲಿಸಿದ ರೆಕ್ಕೆಗಳ ನೆರಳಿನ ಕಟ್ಟೆಚ್ಚರದಲ್ಲಿ ಹೂಮರಿಗಳನ್ನು ಕಟ್ಟಿಕೊಂಡು ಅಂಗಳದಲ್ಲಿರುವ ಪಯಿರುಪಚ್ಚೆಗಳನ್ನು ಕೆದಕಿ ಹುಳುಹುಪ್ಪಟೆ ಮತ್ತು ಕಾಳುಗಳನ್ನು ಉಣಿಸುತ್ತಿದ್ದಾಗ, ಬಾನಿನಿಂದ ಬರ್ರನೆ ಹಾರಿಬರುವ ಬಿಜ್ಜು ಹೂಮರಿಯೊಂದನ್ನು ತನ್ನ ಕಾಲಿನ ಪಂಜಗಳಿಂದ ಹೆಕ್ಕಿಕೊಂಡು, ಮತ್ತೆ ಮೇಲೇರಿ ಮರೆಯಾಗುತ್ತದೆ. ಕೋಳಿಮರಿಗೆ ಅರೆಗಳಿಗೆಯಲ್ಲಿ ಬಂದೆರಗುವ ಈ ಬಗೆಯ ಸಾವನ್ನು ಒಂದು ರೂಪಕವನ್ನಾಗಿ ಮಾಡಿಕೊಂಡು ಈ ಶಾಪದ ನುಡಿಯನ್ನು ಕಟ್ಟಲಾಗಿದೆ.

'ಬಿಜ್ಜು' ಪದಕ್ಕೆ 'ಸಿಡಿಲು' ಎಂಬ ಮತ್ತೊಂದು ತಿರುಳಿದೆ. ಕಾರ್ಮೋಡಗಳ ತಿಕ್ಕಾಟದಲ್ಲಿ ಎತ್ತಣನಿಂದಲೋ ಬಂದು ಬಡಿಯುವ ಸಿಡಿಲು, ವ್ಯಕ್ತಿಗೆ ಸಾವನ್ನು ತರಲೆಂಬ ಉದ್ದೇಶವೂ ಈ ಶಾಪದ ನುಡಿಯಲ್ಲಿದೆ. ಪ್ರಾಕೃತ ನುಡಿಯಲ್ಲಿ ಸಿಡಿಲು ಎಂಬ ತಿರುಳುಳ್ಳ 'ವಿಜ್ಜು' ಎಂಬ ಪದ ಕನ್ನಡಿಗರ ಬಾಯಲ್ಲಿ 'ಬಿಜ್ಜು' ಎಂದು ಉಚ್ಚಾರಣೆಗೊಂಡಿದೆ.

೧೫೬. ನಿಂಗೆ ಬೀದೀಲಿ ಬಿಸ್ನೀರ್ ಕಾಯ್ಸ

ಸಾವು ಬರಲೆಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

ಯಾವುದೇ ವ್ಯಕ್ತಿಯು ಸಾವನ್ನಪ್ಪಿದಾಗ, ಹೆಣವನ್ನು ಒಪ್ಪ ಮಾಡುವ ಮೊದಲ ಕೆಲಸವಾಗಿ ಹೆಣದ ಮಯ್ಯನ್ನು ಅರಿಸಿನದ ಪುಡಿ ಮತ್ತು ಸೀಗೆಪುಡಿಯಿಂದ ಉಜ್ಜಿ ಬಿಸಿನೀರಿನಿಂದ ತೊಳೆಯುತ್ತಾರೆ. ಈ ಸನ್ನಿವೇಶದಲ್ಲಿ ಸತ್ತ ವ್ಯಕ್ತಿಯ ಹತ್ತಿರದ ನೆಂಟರು ಮತ್ತು ಆತ್ಮೀಯರು ಒಂದೊಂದು ಮೊಗೆ ನೀರನ್ನು ಹೆಣದ ತಲೆಯ ಮೇಲೆ ಹುಯ್ಯುವ ಆಚರಣೆಯಿದೆ. ಹೆಣಕ್ಕೆ ಎರೆಯುವ ಬಿಸಿನೀರನ್ನು ಬೀದಿಯಲ್ಲಿ ಹಂಡೆಯನ್ನಿಟ್ಟು ಉರಿಹಚ್ಚಿ ಕಾಯಿಸಿರುತ್ತಾರೆ.

೧೫೭. ನಿಂಗೆ ಬೆನ್ಪಣೆ ಏಳ

ಬೆನ್ನಿನಲ್ಲಿ ಏಳುವ ದೊಡ್ಡ ಕುರು ಇಲ್ಲವೇ ಆಗುವ ದೊಡ್ಡ ಹುಣ್ಣಿಗೆ ಬೆನ್ಪಣೆ ಯೆಂದು ಹೆಸರು.

ರೋಗವನ್ನು ತಡೆಗಟ್ಟುವ ಅಳವು ಕುಗ್ಗಿದ ನಡುವಯಸ್ಸಿನ ವ್ಯಕ್ತಿಗಳಲ್ಲಿ ಇದು ಕಂಡುಬರುತ್ತದೆ. ವಾತಾವಣರದಲ್ಲಿನ ರೋಗಾಣುಗಳು ಮಯ್ಯಿನ ಒಳತೊಗಲನ್ನು ಹೊಕ್ಕಾಗ, ಮೊದಲು ಕೆಂಪನೆಯ ಗಂದೆಯು ಮೂಡಿ, ಅನಂತರದ ದಿನಗಳಲ್ಲಿ ಕೀವು ತುಂಬಿಕೊಂಡು ದೊಡ್ಡ ಕುರುವಾಗಿ ಬೆಳೆದು, ಕಡೆಯಲ್ಲಿ ಒಡೆದು ರಣಗಾಯವಾಗುತ್ತದೆ. ಗಾಯದ ನಂಜು ಮಯ್ಯಿನ ನರಮಂಡಲದ ಇತರ ಎಡೆಗಳಿಗೂ ಹರಡಿ ರೋಗಿಯನ್ನು ಸಾವಿನ ಅಂಚಿಗೆ ದೂಡುತ್ತದೆ.

ಹುಣ್ಣಿನ ಸುತ್ತಣ ತೊಗಲಿನ ಚಹರೆಯು ಹಾವಿನ ಹೆಡೆಯಲ್ಲಿರುವ ಗೆರೆಗಳಂತೆ ಗೋಚರಿಸುವುದರಿಂದ, ಇದನ್ನು 'ಬೆನ್ಪಣೆ' ಎಂದು ಕರೆಯುತ್ತಾರೆ. 'ಬೆನ್ಫಣಿ' ಎಂಬ ಜೋಡು ಪದದಲ್ಲಿ 'ಬೆನ್' ಎಂಬ ಕನ್ನಡ ಪದಕ್ಕೆ, 'ಹೆಡೆಯುಳ್ಳ ಹಾವು/ಸರ್ಪ' ಎಂಬ ತಿರುಳುಳ್ಳ 'ಫಣಿ' ಎಂಬ ಸಂಸ್ಕೃತ ಪದ ಸೇರಿದೆ. ತೆಂಕಣ ಕರ್ನಾಟಕದ ಒಳನುಡಿಯಲ್ಲಿ 'ಬೆನ್ಪಣೆ' ಎಂದು ಉಚ್ಚಾರಗೊಂಡಿದೆ.

೧೫೮. ನಿಂಗೆ ಬೊಗಳ್‌ಸನ್ನಿ ಬರ

ಕೆಟ್ಟ ರೋಗ ಬಂದು ನರಳುವಂತಾಗಲಿ ಎಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

ಮಯ್ ಮನದ ಮೇಲಣ ಹತೋಟಿಯನ್ನು ಕಳೆದುಕೊಂಡು ಗಡಗಡನೆ

ನಡುಗುತ್ತಾ, ಬಾಯಿಗೆ ಬಂದಂತೆ ಮಾತನಾಡುವ ಒಂದು ಬಗೆಯ ರೋಗವನ್ನು 'ಬೊಗಳ್ಸನ್ನಿ' ಎಂದು ಕರೆಯುತ್ತಾರೆ. ಈ ಜೋಡುಪದದಲ್ಲಿ 'ಬೊಗಳು' ಮತ್ತು 'ಸನ್ನಿ' ಎಂಬ ಪದಗಳಿವೆ. ಅತಿ ಹೆಚ್ಚಿನ ಜ್ವರದ ತಾಪದಿಂದ ಮಯ್ ಬೇಯ ತೊಡಗಿದಾಗ, ಮಿದುಳಿನ ನರಮಂಡಲಕ್ಕೆ ಹೋಗುತ್ತಿದ್ದ ನೆತ್ತರು ಮತ್ತು ಆಮ್ಲಜನಕದ ಪ್ರಮಾಣದಲ್ಲಿ ಕೊರತೆಯುಂಟಾಗಿ, ವ್ಯಕ್ತಿಯ ಮಯ್ ಅದುರ ತೊಡಗಿ, ಅರಿವನ್ನು ಕಳೆದುಕೊಂಡು, ಪದೇ ಪದೇ ಎಚ್ಚರತಪ್ಪಿ ಬೀಳುತ್ತಾನೆ. ಈ ಬಗೆಯ ರೋಗವನ್ನು 'ಸನ್ನಿ' ಎಂದು ಕರೆಯುತ್ತಾರೆ. 'ನಾಯಿಯ ಕೂಗು; ಹರಟು; ಒದರು' ಎಂಬ ತಿರುಳುಳ್ಳ 'ಬೊಗಳು' ಎಂಬ ಪದವು ಈ ಸನ್ನಿವೇಶದಲ್ಲಿ "ತಾನು ಎಲ್ಲಿದ್ದೇನೆ...ಏನು ಮಾಡುತ್ತಿದ್ದೇನೆ ಎಂಬ ಅರಿವು ಮತ್ತು ಎಚ್ಚರವಿಲ್ಲದೆ ಒಂದೇ ಸಮನೆ ಮಾತನಾಡುತ್ತಿರುವುದು" ಎಂಬ ರೂಪಕದ ತಿರುಳಿನಲ್ಲಿ ಬಳಕೆಯಾಗಿದೆ.

೧೫೯. ನಿಂಗೆ ಮೊಲ್ಲಾಗ್ರು ಬರ

ಪಿಟ್ಸ್ ರೋಗವನ್ನು ಹಳ್ಳಿಗರು 'ಮೊಲ್ಲಾಗರು' ಎಂದು ಕರೆಯುತ್ತಾರೆ.

ಈ ರೋಗಕ್ಕೆ ಗುರಿಯಾದ ವ್ಯಕ್ತಿಯು ಇದ್ದಕ್ಕಿದ್ದಂತೆ ಮಯ್ ಮೇಲಿನ ಅರಿವನ್ನು ಕಳೆದುಕೊಂಡು ಎಲ್ಲೆಂದರಲ್ಲಿ ಬೀಳುತ್ತಾನೆ. ಕಯ್ ಕಾಲುಗಳು ಸೆಳೆತಕ್ಕೆ ಒಳಗಾಗಿ, ಇಡೀ ಮಯ್ಯೆಲ್ಲವೂ ಅದುರತೊಡಗುತ್ತದೆ. ನಾಲಗೆಯನ್ನು ಕಚ್ಚಿ ಹಿಡಿದು ರೋಗಿಯು ನೆಲದ ಮೇಲೆ ಒದ್ದಾಡುತ್ತಿರುವಾಗ ಬಾಯಲ್ಲಿ ನೊರೆಯು ಬರತೊಡಗುತ್ತದೆ. ಮೆದುಳಿನ ನರಮಂಡಲಕ್ಕೆ ಹೋಗುತ್ತಿದ್ದ ನೆತ್ತರು ಮತ್ತು ಆಮ್ಲಜನಕದ ಪ್ರಮಾಣದಲ್ಲಿ ಕೊರತೆಯುಂಟಾದಾಗ, ಈ ಬಗೆಯ ಇರುವಿಕೆಗೆ ರೋಗಿಯು ತುತ್ತಾಗುತ್ತಾನೆ.

ಕ್ರಿ.ಶ. ಹನ್ನೊಂದನೆಯ ಶತಮಾನದಲ್ಲಿ ರಚನೆಗೊಂಡಿರುವ 'ಜಾತಕ ತಿಲಕಂ' ಎಂಬ ಕನ್ನಡದ ಹೊತ್ತಿಗೆಯಲ್ಲಿ ಈ ಬಗೆಯ ರೋಗಕ್ಕೆ 'ಮೊಲನಾಗರ' ಎಂಬ ಹೆಸರಿತ್ತೆಂದು ಹೇಳಲಾಗಿದೆ. '**ನಿಂಗೆ ಬಿಗಿನ ರೋಗ ಬರ; ನಿಂಗೆ ನೆಲಕೆರಿಯೂ ರೋಗ ಬರ**' ಎಂಬ ಶಾಪದ ನುಡಿಗಳು ಇದೇ ಉದ್ದೇಶದಿಂದ ಬಳಕೆಯಾಗುತ್ತವೆ.

೧೬೦. ನಿಂಗೆ ರಾವ್ ಬಡಿಯ

'ಇದ್ದಕ್ಕಿದ್ದಂತೆಯೇ ಯಾವುದಾದರೊಂದು ಬಗೆಯ ಕೇಡು ಬಡಿದಪ್ಪಳಿಸಿ, ಮಯ್ ಮನದ ಅಳವು ಕುಗ್ಗಿ, ಮಂಕು ಕವಿಯಲಿ' ಎಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

ಬಹು ಬಗೆಗಳಲ್ಲಿ ಹಾನಿಯನ್ನುಂಟುಮಾಡುವ 'ರಾವು' ಎಂಬ ಹೆಸರಿನ ಕೇಡಿನ ಮೂಲವೊಂದು ಅಮಾವಾಸ್ಯೆ, ಹುಣ್ಣಿಮೆ, ಬಿರುಬಿಸಿಲಿನ ದಿನಗಳಂದು ವ್ಯಕ್ತಿಗೆ ಬಡಿದು, ಸಾವುನೋವು ರೋಗರುಜಿನಗಳಿಗೆ ಕಾರಣವಾಗುತ್ತದೆಯೆಂಬ ನಂಬಿಕೆಯು ಕನ್ನಡ ಜನಪದರ ಮನದಲ್ಲಿ ನೆಲೆಸಿದೆ. 'ರಾವು' ಎಂಬ ಪದಕ್ಕೆ "ದೆವ್ವ; ಗಾಳಿ; ಕ್ರೂರವಾದುದು; ಉಗ್ರವಾದುದು; ಕೆಡುಕನ್ನು ಉಂಟುಮಾಡುವಂತಹುದು" ಎಂಬ ತಿರುಳಿದೆ. ಜನರ ಬಾಳಿನಲ್ಲಿ ಉಂಟಾಗುವ ಎಲ್ಲಾ ಬಗೆಯ ಕೇಡುಗಳ ಮೊತ್ತಕ್ಕೆ 'ರಾವು' ಎಂಬ ಪದ ಒಂದು ರೂಪಕವಾಗಿದೆ. **'ನಿನ್ ಮನೆಗೆ ರಾವ್ ನುಗ್ಗ – ನಿನ್ ಗಂಟ್ಲಗೆ ರಾವ್ ಕುಂತ್ಕೊಳ'** ಎಂಬ ಶಾಪದ ನುಡಿಗಳು ಬಳಕೆಯಲ್ಲಿವೆ.

೧೬೧. ನಿಂಗೆ ಸಂದ್ ಬರ

"ತಡೆಯಲಾಗದ ಯಾತನೆಯಿಂದ ಒಂದೇ ಸಮನೆ ನರಳುವಂತಾಗಲಿ" ಎಂಬ **ಉದ್ದೇಶದಿಂದ ಹಾಕುವ ಶಾಪದ ನುಡಿಯಿದು.**

'ಸಂದು ಬರಲಿ' ಎಂಬ ಪದಕಂತೆಯು 'ಸಂದಿವಾತ' ಎಂಬ ರೋಗವು ಬರುವಂತಾಗಲಿ' ಎಂಬುದನ್ನು ಸೂಚಿಸುತ್ತದೆ. ವಾತಾವರಣದಲ್ಲಿ ಹೆಚ್ಚಿನ ಶೀತವುಂಟಾದಾಗ, ರೋಗವನ್ನು ತಡೆಗಟ್ಟುವ ಕಸುವು ಕುಗ್ಗಿರುವ ವ್ಯಕ್ತಿಗಳಲ್ಲಿ ಉಸಿರಾಟಕ್ಕೆ ತೊಂದರೆಯುಂಟಾಗಿ ಉಬ್ಬಸವುಂಟಾಗುತ್ತದೆ. ಇದರಿಂದ ಎದೆಯೊಳಕ್ಕೆ ಹೋಗುತ್ತಿದ್ದ ಆಮ್ಲಜನಕದ ಪ್ರಮಾಣದಲ್ಲಿ ಹೆಚ್ಚು ಕಡಿಮೆಯಾಗಿ ಮತ್ತು ಮಯ್ಯೊಳಗೆ ಹರಿಯುತ್ತಿರುವ ನೆತ್ತರಿನಲ್ಲಿ ಅಡೆತಡೆಗಳುಂಟಾಗಿ ಬರುವ ಅನೇಕ ಬಗೆಯ ರೋಗ ಗಳಲ್ಲಿ 'ಸಂದಿವಾತ' ಒಂದಾಗಿದೆ. ಮೊಣಕಯ್, ಮೊಣ ಕಾಲು, ಮಂಡಿ, ಕಯ್ ಕಾಲಿನ ಬೆರಳುಗಳ ಗಿಣ್ಣು ಮತ್ತು ಬೆನ್ನುರಿಯ ಎಡೆಯಲ್ಲಿನ ನರದ ಕೊಂಡಿಗಳು ಸೆಳೆತಕ್ಕೆ ಒಳಗಾಗಿ, ಕೀಲುಗಳು ಸೆಟೆದು ಊದಿಕೊಂಡು ಹಾಗೂ ನೀರು ತುಂಬಿಕೊಂಡು ಉಂಟಾಗುವ ಉರಿ ಮತ್ತು ನೋವಿನ ಜತೆಜತೆಗೆ ಕಾಲುಗಳ ಆಡಿಸುವಿಕೆಗೆ ತೊಂದರೆ ಯಾಗುತ್ತದೆ. 'ಮೂಳೆಗಳ ನಡುವಣ ಕೀಲು/ ಸಂದು' ಎಂಬ ತಿರುಳಿನ 'ಸಂಧಿ' ಎಂಬ ಸಂಸ್ಕೃತ ಪದಕ್ಕೆ, 'ಗಾಳಿ/ಉಸಿರು' ಎಂಬ ತಿರುಳಿನ 'ವಾತ' ಎಂಬ ಮತ್ತೊಂದು ಸಂಸ್ಕೃತ ಪದ ಸೇರಿ 'ಸಂಧಿವಾತ' ಎಂಬ ಜೋಡುಪದ ರೂಪುಗೊಂಡಿದೆ.

೧೬೨. ನಿಂಗೆ ಸತ್ತೆ ಮುಟ್ಟ

"ಹಾವು ಕಡಿದು ಸಾವು ಬರಲಿ" ಎಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

ಕಿತ್ತು ಬಿಸಾಡಿದ ಗಿಡದ ಸಣ್ಣನೆಯ ಹಾಗೂ ಉದ್ದನೆಯ ಪಯಿರುಗಳನ್ನು 'ಸತ್ತೆ' ಎಂಬ ಹೆಸರಿನಿಂದ ಗುರುತಿಸುತ್ತಾರೆ. ನಂಜಿನಿಂದ ಕೂಡಿದ ಹಾವನ್ನು ನೇರವಾಗಿ ಹೆಸರಿಸಲು ಹಿಂಜರಿಯುವ ಹಳ್ಳಿಗರು. 'ಸತ್ತೆ' ಎಂಬ ಪದವನ್ನು ಹಾವನ್ನು ಹೆಸರಿಸಲು ಬಳಸುತ್ತಾರೆ. **'ನಿಂಗೆ ಕರಿನಾಗ್ರ ಕಡಿಯ ನಿಂಗೆ ನಾಗ್ರಾವ್ ಕಚ್ಚ. ನಿಂಗೆ ಕನ್ನಾಗ್ರಾವ್ ಕಡಿಯ'** ಎಂಬ ಶಾಪದ ನುಡಿಗಳು ಬಳಕೆಯಲ್ಲಿವೆ.

೧೬೩. ನಿಂಗೆ ಹತ್ತುದ್ದು ಹರೀದೆ ಹೋಗ

"ಬಂದೊದಗಿದ ಸಂಕಟ, ಆಪತ್ತು, ರೋಗರುಜಿನಗಳು ಎಂದೆಂದಿಗೂ ಕೊನೆಗಾಣದೆ ಜೀವನದ ಉದ್ದಕ್ಕೂ ಕಾಡುತ್ತಿರಲಿ" ಎಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

'ಹತ್ತು' ಎಂಬ ಪದಕ್ಕೆ 'ಅಂಟು; ಸೇರು; ಕೂಡು' ಎಂಬ ತಿರುಳಿದೆ. 'ಹರಿ' ಎಂಬ ಪದಕ್ಕೆ 'ನಿವಾರಣೆಯಾಗು; ಇಲ್ಲವಾಗು; ಮುಕ್ತಾಯವಾಗು' ಎಂಬ ತಿರುಳಿದೆ. 'ಹತ್ತದ್ದು ಹರಿಯದೇ ಹೋಗಲಿ' ಎಂಬ ಪದಕಂತೆಯು "ವ್ಯಕ್ತಿಯ ಬದುಕಿನಲ್ಲಿ ಎಡತಾಕಿದ ಕೆಟ್ಟದ್ದೆಲ್ಲವೂ ಕೊನೆಗೊಳ್ಳದಿರಲಿ" ಎಂಬ ರೂಪಕದ ತಿರುಳಿನಲ್ಲಿ ಬಳಕೆಯಾಗಿದೆ.

೧೬೪. ನಿನ್ ಹಜ್ಜೆ ಮರ್ಸ, ಗೆಜ್ಲು ತಿನ್ನ

ಸಾವು ಬರಲೆಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

ವ್ಯಕ್ತಿಯು ಜೀವಂತನಾಗಿದ್ದಾಗ ಉಂಟಾಗುವ ಮತ್ತು ಸತ್ತ ನಂತರ ಆಗುವ ಬಗೆಗಳನ್ನು ರೂಪಕಗಳನ್ನಾಗಿಸಿಕೊಂಡು ಶಪಿಸಲಾಗಿದೆ. ವ್ಯಕ್ತಿಯು ದಾರಿಯಲ್ಲಿ ನಡೆಯುತ್ತಿದ್ದಾಗ, ಅವನ ಇಲ್ಲವೇ ಅವಳ ಪಾದಗಳು ಊರಿದ ಎಡೆಗಳಲ್ಲಿ ಹೆಜ್ಜೆ ಗುರುತುಗಳು ಮೂಡುತ್ತಿರುತ್ತವೆ. ಅಂತಹ ಹೆಜ್ಜೆ ಗುರುತುಗಳು ಇಲ್ಲದಂತಾಗಲಿ ಎಂಬುದು ಸಾವನ್ನು ಸೂಚಿಸುತ್ತದೆ. ಅನಂತರ ಹೆಣವನ್ನು ಮಣ್ಣಿನಲ್ಲಿ ಹೂಳಿದಾಗ ಗೆಜ್ಜಲು ಹುಳುಗಳು ತಿನ್ನುತ್ತವೆ. 'ಪಜ್ಜೆ' ಎಂಬ ಹಳಗನ್ನಡ ಪದ 'ಹೆಜ್ಜೆ'ಯಾಗಿ, ಆಡುನುಡಿಯಲ್ಲಿ 'ಹಜ್ಜೆ' ಎಂಬ ರೂಪದಲ್ಲಿ ಉಚ್ಚಾರಣೆಗೊಂಡಿದೆ.

೧೬೫. ನಿನ್ ಅಯ್ಸಿರಿ ಮ್ಯಾಲೆ ಅಮ್ಮ ಕುಂತ್ಕೊಳ

ಸಿರಿತನ ತೊಲಗಿ, ಬಡತನ ಬರುವಂತಾಗಲಿ ಎಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

'ಸಂಪತ್ತು; ಹಣಕಾಸು; ಆಸ್ತಿಪಾಸ್ತಿ' ಎಂಬ ತಿರುಳಿನ 'ಐಶ್ವರ್ಯ' ಎಂಬ ಸಂಸ್ಕೃತ ಪದವು ಕನ್ನಡ ನುಡಿಯಲ್ಲಿ 'ಅಯ್ಸಿರಿ' ಎಂಬ ರೂಪದಲ್ಲಿ ಉಚ್ಚಾರಣೆಗೊಂಡು ಬಳಕೆಗೆ ಬಂದಿದೆ. 'ಅಮ್ಮ' ಕುಳಿತುಕೊಳ್ಳಲಿ ಎಂಬ ಪದಕಂತೆಯು ಕನ್ನಡ ಜನ ಸಮುದಾಯದ ಊರ ದೇವತೆ ಮಾರಮ್ಮನ ಕೋಪತಾಪಗಳಿಗೆ ವ್ಯಕ್ತಿಯು ಗುರಿಯಾಗಿ, ಅವಳ ಕೆಟ್ಟ ನೋಟಕ್ಕೆ ಸಿಲುಕಿ, ಆಸ್ತಿಪಾಸ್ತಿಗಳಿಂದ ಕೂಡಿದ ಸಿರಿವಂತಿಕೆಯೆಲ್ಲವೂ ಹಾಳಾಗಲಿ ಎಂಬ ರೂಪಕದ ತಿರುಳಿನಲ್ಲಿ ಬಳಕೆಯಾಗಿದೆ.

೧೬೬. ನಿನ್ ಈಲಿ ಒಡ್ದೋಗ

"ಬಗೆಬಗೆಯ ರೋಗರುಜಿನಗಳಿಂದ ನರಳುವಂತಾಗಲಿ" ಎಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

ಈಲಿಯು ಮಾನವನ ಹೊಟ್ಟೆಯಲ್ಲಿ ಎದೆಗೂಡಿನ ಕೆಳಗಿರುವ ಒಂದು ಅಂಗ. ಇದನ್ನು ಇಂಗ್ಲಿಶಿನಲ್ಲಿ 'ಲಿವರ್' ಮತ್ತು ಸಂಸ್ಕೃತದಲ್ಲಿ 'ಪಿತ್ತಕೋಶ/ಪಿತ್ತಜನಕಾಂಗ' ಎಂಬ ಹೆಸರುಗಳಿಂದ ಗುರುತಿಸುತ್ತಾರೆ. ಈಲಿಯ ಜೀವಕಣಗಳು ಕರುಳಿನಲ್ಲಿ ಕೊಬ್ಬು ಹೆಪ್ಪುಗಟ್ಟದಂತೆ ಸಣ್ಣ ಸಣ್ಣ ತುಂಡುಗಳನ್ನಾಗಿ ಮಾಡಲು ಪಿತ್ತರಸವನ್ನು ಹರಿಸುತ್ತವೆ. ಸಕ್ಕರೆಯ ಪ್ರಮಾಣವನ್ನು ಸರಿದೂಗಿಸುತ್ತವೆ. ಈಲಿಯ ಜೀವ ಕಣಗಳು ಒಡೆದು ಹೋದರೆ ಅಂದರೆ ಅಂಟುರೋಗದಿಂದ ಹಾಳಾದರೆ ಕಾಮಾಲೆ, ಹೊಟ್ಟೆಯೂತ, ಕಾಲುಬಾವು, ನೆತ್ತರು ಕಾರಿಕೊಳ್ಳುವಿಕೆ, ಮಯ್ ತುರಿಕೆ ಮುಂತಾದ ಹತ್ತಾರು ಬಗೆಯ ರೋಗಗಳು ಅಮರಿಕೊಳ್ಳುತ್ತವೆ.

೧೬೭. ನಿನ್ ಎದೆ ಮ್ಯಾಲೆ ದುವ್ವೆ ಮಾಡ

ಸಾವು ಬರಲೆಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

'ಎದೆ ಮೇಲೆ ದುವ್ವೆ ಮಾಡುವುದು' ಒಂದು ಆಚರಣೆ. ವ್ಯಕ್ತಿಯು ಸತ್ತ ನಂತರ ಮೂರು/ಏಳು/ಹನ್ನೊಂದನೆಯ ದಿನದಂದು ಹೂಳಿದ ಇಲ್ಲವೇ ಸುಟ್ಟ ಜಾಗದಲ್ಲಿ ಸುಮಾರು ಒಂದೂವರೆ ಅಡಿ ಎತ್ತರ, ಮೂರು ಅಡಿ ಅಗಲ ಮತ್ತು ಆರು ಅಡಿ

ಉದ್ದದ ಮಣ್ಣಿನ ದಿಬ್ಬವನ್ನು ಕಟ್ಟಿ, ಅದರ ಮೇಲೆ ವಡೆ, ಕಜ್ಜಾಯ, ಚಕಿನುಂಡೆ, ಚಕ್ಕಲಿ ಮುಂತಾದ ಕರಿದಿ ತಿಂಡಿಗಳನ್ನು ಹಾಗೂ ನಾನಾ ಬಗೆಯ ಹಣ್ಣುಗಳ ತೊಳೆಗಳನ್ನು ಬಿಡಿಸಿ ಇಡುತ್ತಾರೆ. ಇದರ ಜತೆಗೆ ಅಕ್ಕಿ, ಜೀರಿಗೆ, ಅರಿಸಿನವನ್ನು ಹಾಕಿ ಮಸಣದಲ್ಲಿಯೇ ಬೇಯಿಸಿ ತಯಾರಿಸಿದ ಅನ್ನವನ್ನು ಮಾಡಿ, ಅದನ್ನು ದಿಬ್ಬದ ಮೇಲೆ ಹಾಕುತ್ತಾರೆ. ಈ ಬಗೆಯ ವಸ್ತುಗಳಿಂದ ಕೂಡಿದ ಈ ದಿಬ್ಬವನ್ನು 'ದುವ್ವೆ' ಎಂದು ಕರೆಯುತ್ತಾರೆ. ದುವ್ವೆಯ ಮೇಲಿರುವ ತಿಂಡಿ ತಿನಿಸುಗಳನ್ನು ಪ್ರಾಣಿ ಪಕ್ಷಿಗಳು ತಿಂದರೆ ಸತ್ತವರ ಆತ್ಮಕ್ಕೆ ಶಾಂತಿ ದೊರೆಯುವುದೆಂಬ ನಂಬಿಕೆ ಜನಮನದಲ್ಲಿದೆ.

೧೬೮. ನಿನ್ ಎದೆ ಮ್ಯಾಲೆ ಬಳೆ ನರ್ಕ

ಸಾವು ಬರಲೆಂಬ ಉದ್ದೇಶದಿಂದ ಗಂಡಸರಿಗೆ ಹಾಕುವ ಶಾಪದ ನುಡಿ.

ಕನ್ನಡ ನುಡಿ ಸಮುದಾಯದ ಕೆಲವು ಜಾತಿಗುಂಪುಗಳಲ್ಲಿ ಗಂಡನ ದುವ್ವೆಯ ಮುಂದೆ ಅವನ ಹೆಂಡತಿಯ "ಬಳೆಗಳನ್ನು ನರುಕುವುದು ಅಂದರೆ ಒಡೆಯುವುದು" ಒಂದು ಬಗೆಯ ಆಚರಣೆಯಾಗಿದೆ. ಸತ್ತ ವ್ಯಕ್ತಿಯನ್ನು ಹೂಳಿದ ಇಲ್ಲವೇ ಸುಟ್ಟ ಜಾಗದಲ್ಲಿ ಮೂರು/ಏಳು/ಹನ್ನೊಂದನೆಯ ದಿನದಂದು ಚಿಕ್ಕದಾದ ಮಣ್ಣಿನ ದಿಬ್ಬವೊಂದನ್ನು ಕಟ್ಟಿ, ಅದರ ಮೇಲೆ ವಡೆ, ಕಜ್ಜಾಯ, ಚಕಿನುಂಡೆ, ಚಕ್ಕಲಿ ಮುಂತಾದ ಕರಿದ ತಿಂಡಿಗಳನ್ನು ಹಾಗೂ ನಾನಾ ಬಗೆಯ ಹಣ್ಣುಗಳ ತೊಳೆಗಳನ್ನು ಬಿಡಿಸಿ ಇಡುತ್ತಾರೆ. ಇದರ ಜತೆಗೆ ಅಕ್ಕಿ, ಜೀರಿಗೆ, ಅರಿಸಿನವನ್ನು ಹಾಕಿ ಮಸಣ ದಲ್ಲಿಯೇ ಬೇಯಿಸಿ ತಯಾರಿಸಿದ ಅನ್ನವನ್ನು ಮಾಡಿ, ಅದನ್ನು ದಿಬ್ಬದ ಮೇಲೆ ಹಾಕುತ್ತಾರೆ. ಈ ಬಗೆಯ ವಸ್ತುಗಳಿಂದ ಕೂಡಿದ ಈ ದಿಬ್ಬವನ್ನು 'ದುವ್ವೆ' ಎಂದು ಕರೆಯುತ್ತಾರೆ. ದುವ್ವೆಯ ಮೇಲಿರುವ ತಿಂಡಿ ತಿನಿಸುಗಳನ್ನು ಪ್ರಾಣಿ ಪಕ್ಷಿಗಳು ತಿಂದರೆ ಸತ್ತವರ ಆತ್ಮಕ್ಕೆ ಶಾಂತಿ ದೊರೆಯುವುದೆಂಬ ನಂಬಿಕೆ ಜನಮನದಲ್ಲಿದೆ. ತಿಥಿಯ ಕಾರ್ಯಕ್ಕೆ ಬಂದವರೆಲ್ಲರೂ ದುವ್ವೆಯ ಮುಂದೆ ಹಾಲುತುಪ್ಪ ಹುಯ್ದು ಕಯ್ ಮುಗಿಯುತ್ತಾರೆ.

ಅನಂತರ ಕಟ್ಟಕಡೆಯದಾಗಿ ಹಣೆಯಲ್ಲಿ ದೊಡ್ಡದಾಗಿ ಕುಂಕುಮವನ್ನು ಹಚ್ಚಿಕೊಂಡಿರುವ, ಮುಡಿಯಲ್ಲಿ ಹೂವಿನ ಹೊರೆಯನ್ನು ಹೊತ್ತಿರುವ, ಕಯ್ತುಂಬ ಗಾಜಿನ ಬಳೆಗಳನ್ನು ತೊಟ್ಟಿರುವ ಅವನ ಹೆಂಡತಿಯನ್ನು ಗಂಡ ಸತ್ತಿರುವ ವಯಸ್ಸಾದ ಹೆಂಗಸೊಬ್ಬಳು ಕರೆತರುತ್ತಾಳೆ. ಗಂಡನ ದುವ್ವೆಯ ಮುಂದೆ ಕುಳ್ಳಿರಿಸಿ, ಕೊರಳಿನಿಂದ ಅವಳ ತಾಳಿಸರವನ್ನು ಬಿಚ್ಚಿ, ಹಣೆಯ ಕುಂಕುಮವನ್ನು ಅಳಿಸಿ, ಹೂವುಗಳನ್ನು ಮುಡಿಯಿಂದ ಕಿತ್ತು ದುವ್ವೆಯ ಮೇಲೆ ಎರಚಿ, ಬಳೆಗಳನ್ನು ಕಲ್ಲಿನಿಂದ ಕುಕ್ಕಿ ಒಡೆದು ಬರಿಗಯ್ ಮಾಡಿ, ಹಣೆಗೆ ವಿಭೂತಿಯನ್ನು

ಬಳಿಯುತ್ತಾಳೆ. ಅಂದಿನಿಂದ ಆ ಹೆಣ್ಣು ಮುತ್ತೈದೆತನದ ವಸ್ತುಗಳನ್ನು ತೊಡುವುದನ್ನು ಬಿಡುತ್ತಾಳೆ.

೧೬೯. ನಿನ್ ಎದೆ ಮ್ಯಾಲೆ ಯಮನ ಬಂಡಿ ಹರಿಯ

ಸಾವು ಬರಲಿ ಎಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

ಈ ಲೋಕದಲ್ಲಿ ಹುಟ್ಟಿದ ಜೀವಿಗಳ ಆಯುಸ್ಸು ತುಂಬಿ ಬಂದಾಗ, ಯಮನೆಂಬ ಹೆಸರಿನ ಸಾವಿನ ದೇವತೆಯು ಕೋಣದ ಮೇಲೆ ಕುಳಿತು ದೇವ ಲೋಕದಿಂದ ನರಲೋಕಕ್ಕೆ ಬಂದು, ಜೀವಿಗಳ ಉಸಿರನ್ನು ಸೆಳೆದೊಯ್ಯುತ್ತಾನೆ ಎಂಬ ನಂಬಿಕೆಯು ಕನ್ನಡ ಜನಪದರ ಮನದಲ್ಲಿ ತಲೆತಲಾಂತರಗಳಿಂದಲೂ ನೆಲೆಸಿದೆ. 'ಬಂಡಿ' ಎಂಬ ಪದಕ್ಕೆ 'ಗಾಡಿ; ತೇರು; ಹೊತ್ತೊಯ್ಯಲು ಬಳಸುವ ಪ್ರಾಣಿ–ಉಪಕರಣ' ಎಂಬ ತಿರುಳಿದೆ. "ಯಮನ ಬಂಡಿ ಹರಿಯಲಿ" ಎಂಬ ಪದಕಂತೆಯು ಸಾವಿನ ರೂಪಕವಾಗಿ ಬಳಕೆಯಾಗಿದೆ.

೧೭೦. ನಿನ್ ಎಮ್ಮೆಗೆ ನಾಗೇರಾಗ

"ಬೇಸಾಯಗಾರನ ಹಣಕಾಸಿನ ಗಳಿಕೆಗೆ ಪೆಟ್ಟು ಬೀಳಲಿ" ಎಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

ಹಾಲು ಮತ್ತು ಗೊಬ್ಬರವನ್ನು ನೀಡಿ ಬೇಸಾಯಗಾರನ ಬೆನ್ನೆಲುಬಿನಂತಿರುವ ಸಾಕು ಪ್ರಾಣಿಯಾದ ಎಮ್ಮೆಗೆ ಬರುವ ಒಂದು ಬಗೆಯ ರೋಗದ ಹೆಸರು 'ನಾಗೇರು'. ಈ ರೋಗ ತಗುಲಿದ ಎಮ್ಮೆಯು ಜ್ವರದ ತಾಪದಿಂದ ನರಳ ತೊಡಗುತ್ತದೆ. ಇದರಿಂದಾಗಿ ಅದರ ನಾಲಗೆಯ ತಳದಲ್ಲಿನ ರಕ್ತನಾಳಗಳು ಊದಿಕೊಂಡು, ನೆತ್ತರು ದಟ್ಟವಾಗಿ ಹರಿದು ಕಪ್ಪನೆಯ ನರಗಳು ಎದ್ದು ಕಾಣುತ್ತವೆ. ಏನನ್ನೂ ಮೇಯದೆ, ಮೆಲುಕು ಹಾಕದೆ, ಏದುಸಿರನ್ನು ಬಿಡತೊಡಗುತ್ತದೆ. ಸರಿಯಾದ ಸಮಯದಲ್ಲಿ ಉಪಚಾರ ಮಾಡದಿದ್ದರೆ ಎಮ್ಮೆಯು ಸಾವನ್ನಪ್ಪುತ್ತದೆ. ನಾಲಗೆ ಎಂಬ ಪದದೊಡನೆ 'ಉಬ್ಬುವುದು; ದಪ್ಪವಾಗುವುದು' ಎಂಬ ತಿರುಳಿನ 'ಏರು' ಎಂಬ ಪದ ಸೇರಿ ಬಳಕೆಗೊಂಡ 'ನಾಲಗೆಯ ಏರು' ಎಂಬ ಪದಕಂತೆಯು "ನಾಲ್ಗೇರು" ಎಂದಾಗಿ, ಉಚ್ಚಾರಣೆಯಲ್ಲಿ ಉಲಿಕಂತೆಗಳ ಜೋಡಣೆಯಿಂದ ಲಕಾರವು ಇಲ್ಲವಾಗಿ "ನಾಗೇರು" ಎಂದಾಗಿದೆ.

೧೭೧. ನಿನ ಓಸು ಕಂಡಾಗ್ಲಿ

"ಮಕ್ಕಳಾಗದೆ ವ್ಯಕ್ತಿಯ ಕುಟುಂಬ ಕೊನೆಗೊಳ್ಳಲಿ" ಎಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

ಬಡಗಣ ಕರ್‍ನಾಟಕದ ಒಳನುಡಿಯಲ್ಲಿ 'ವಂಶ' ಎಂಬ ಸಂಸ್ಕ್ರುತ ಪದವು 'ಓಸು' ಎಂಬ ರೂಪದಲ್ಲಿ ಮತ್ತು 'ತುಂಡು; ಚೂರು' ಎಂಬ ತಿರುಳಿನ 'ಖಂಡ' ಎಂಬ ಸಂಸ್ಕ್ರುತ ಪದವು 'ಕಂಡ' ಎಂಬ ರೂಪದಲ್ಲಿ ಉಚ್ಚಾರಣೆಗೊಂಡಿದೆ. ವ್ಯಕ್ತಿಯ ತಲೆಮಾರು ಮಕ್ಕಳು ಮೊಮ್ಮಕ್ಕಳು ಮರಿಮಕ್ಕಳಿಂದ ಮುಂದುವರಿಯದೆ, ಒಂದೇ ತಲೆಗೆ ಮೊಟಕುಗೊಳ್ಳುವಂತಾಗಲಿ ಎಂಬುದನ್ನು ಈ ಶಾಪದ ನುಡಿಯು ಸೂಚಿಸುತ್ತದೆ.

೧೭೨. ನಿನ್ ಕಣ್ ಪೋಟ್ ಬೀಳ

"ಸಾವು ಉಂಟಾಗಲಿ" ಎಂಬ ಉದ್ದೇಶದಿಂದ ಹಾಕು ಶಾಪದ ನುಡಿ.

"ಪೋಟು ಬೀಳಲಿ" ಎಂಬ ಪದಕಂತೆಯಲ್ಲಿನ 'ಪೋಟು' ಎಂಬ ಪದಕ್ಕೆ 'ತೂತು; ಪೊಟರೆ; ಡೊಗರು' ಎಂಬ ತಿರುಳಿದೆ. ಮಣ್ಣಿನಲ್ಲಿ ಹೂತ ಹೆಣದ ಮಯ್ಯಿನ ಬಾಡು ಬಳ್ಳಿಗಳನ್ನು ಹುಳುಹುಪ್ಪಟೆಗಳು ತಿಂದು, ಕೊನೆಗೆ ಉಳಿಯುವ ಎಲುಬುಗೂಡಿನ ತಲೆಬುರುಡೆಯಲ್ಲಿ ಕಣ್ಣುಗಳಿದ್ದ ಎಡೆಯಲ್ಲಿ ದೊಡ್ಡ ಪೊಟರೆಗಳು ಉಂಟಾಗುತ್ತವೆ.

೧೭೩. ನಿನ್ ಕಣಜಕ್ಕೆ ಕಿಡಿ ಬೀಳ

"ಕೂಡಿಟ್ಟಿರುವ ಬೆಳೆಗೆ ಬೆಂಕಿ ಬಿದ್ದು ಹಾಳಾಗಲಿ" ಎಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

ಹೊಲಗದ್ದೆತೋಟಗಳಲ್ಲಿ ಬೆಳೆದ ರಾಗಿ ಬತ್ತ ಮುಂತಾದ ದವಸಗಳನ್ನು ಮತ್ತು ಅವರೆ ತೊಗರಿ ಮುಂತಾದ ಕಾಳುಗಳನ್ನು ಇಡೀ ವರ್‍ಶ ಕೆಡದಂತೆ ಕಾಪಾಡಿ ಇಡುವ ಎಡೆಯನ್ನು 'ಕಣಜ'ವೆಂದು ಕರೆಯುತ್ತಾರೆ. ಬೇಸಾಯಗಾರರು ಒಂದೊಂದು ಬೆಳೆಯನ್ನು ಒಂದೊಂದು ಬಗೆಯಲ್ಲಿ ಹಾಳಾಗದಂತೆ ಇಡುವ ವಿಧಾನವನ್ನು ಅರಿತಿದ್ದಾರೆ.

ಹುಲ್ಲಿನ ಹುರಿಗಳನ್ನು ಹೆಣೆದು ತಯಾರಿಸಿದ ಮೂಡೆಯಲ್ಲಿ ಕಾಳುಗಳನ್ನು ಇಟ್ಟರೆ, ನೆಲದಲ್ಲಿ ಆಳವಾಗಿ ಗುಳಿ ತೋಡಿ ಮಾಡಿದ ಹಗೇವಿನಲ್ಲಿ ಇಲ್ಲವೇ ಮಣ್ಣಿನಿಂದ ಮಾಡಿದ ದೊಡ್ಡ ಗಾತ್ರದ ಗುಡಾಣಗಳಲ್ಲಿ ರಾಗಿಯನ್ನು ಹಾಕಿಡುತ್ತಾರೆ. ಕೊಠಡಿ

ಯೊಂದರ ಬಾಗಿಲನ್ನು ಮುಚ್ಚಿ, ಒಂದು ಆಳು ಒಳಕ್ಕೆ ನುಗ್ಗುವುದಕ್ಕೆ ಆಗುವಂತೆ ಮಾಡಿರುವ ಕಿಂಡಿಯುಳ್ಳ ಕಣಜದಲ್ಲಿ ಬತ್ತವನ್ನು ತುಂಬಿಟ್ಟು, ಒಳಗೆ ಗಾಳಿಯಾಡ ದಂತೆ ಬಾಗಿಲಿನ ಸಂದುಗಳಿಗೆ ಎಮ್ಮೆ ದನಗಳ ಸಗಣಿಯನ್ನು ಬಳಿಯುತ್ತಾರೆ.

೧೭೪. ನಿನ್ ಕತ್ತಿನ ಕಳ್ಸ ಕಳ್ಕೊಳ

ಸಾವು ಬರಲೆಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

ಅರಮನೆ, ಗುರುಮನೆ ಮತ್ತು ದೇಗುಲಗಳ ಗೋಪುರದ ತುತ್ತತುದಿಯಲ್ಲಿ ಕಂಗೊಳಿಸುತ್ತಿರುವ ಕಳಶವು ಶಕ್ತಿ, ಕೀರ್ತಿ ಮತು ಇರುವಿಕೆಯ ಸಂಕೇತವಾಗಿರುತ್ತದೆ. ಇಂತಹ ಕಳಶ 'ಕಳಚಿಕೊಂಡು ಕೆಳಕ್ಕೆ ಉರುಳುವುದು' ಅವು ಹಾಳಾಗುವುದನ್ನು ಸೂಚಿಸುತ್ತದೆ. ಇದನ್ನೇ ಒಂದು ರೂಪಕವಾಗಿ ಬಳಸಿಕೊಂಡು ಕತ್ತಿನ ಮೇಲಿರುವ ತಲೆಯನ್ನು ಕಳಶವೆಂದು ಕಾಣುತ್ತ **"ನಿನ್ ಕತ್ತಿನ ಕಳ್ಸ ಮುರಿಯ; ನಿನ್ ಕತ್ತಿನ ಕಳ್ಸ ಬಿದ್ದೋಗ"** ಎಂಬ ಶಾಪದ ನುಡಿಗಳು ಹುಟ್ಟಿವೆ. 'ಕಲಶ' ಎಂಬ ಸಂಸ್ಕೃತ ಪದ ಕನ್ನಡಿಗರ ಬಾಯಲ್ಲಿ 'ಕಳಸ' ಎಂದಾಗಿದೆ.

೧೭೫. ನಿನ್ ಕಪಾಲ ಸಿಡಿಯ

ಸಾವು ಬರಲಿ ಎಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

'ತಲೆ ಬುರುಡೆ' ಎಂಬ ತಿರುಳಿನ 'ಕಪಾಲ' ಎಂಬ ಸಂಸ್ಕೃತ ಪದವು ಕನ್ನಡ ಜನ ಸಮುದಾಯದಲ್ಲಿ ಬಳಕೆಗೆ ಬಂದಿದೆ. ವ್ಯಕ್ತಿಯ ಹೆಣವನ್ನು ಒಪ್ಪ ಮಾಡಲೆಂದು ಮಸಣಕ್ಕೆ ಕೊಂಡೊಯ್ದು, ಚಿತೆಯ ಮೇಲಿರಿಸಿ, ಕೊಳ್ಳಿಯನ್ನಿಟ್ಟ ನಂತರ, ದಗದಗನೆ ಉರಿಯತೊಡಗಿದ ಬೆಂಕಿಯ ಕೆನ್ನಾಲಿಗೆಯಲ್ಲಿ ಹೆಣ ಸುಟ್ಟು ಬೇಯುತ್ತಿರುತ್ತದೆ. ಹೆಚ್ಚಾದ ಬೆಂಕಿಯ ತಾಪದಿಂದ ಕಾದ ಹೆಣದ ತಲೆ ಬುರುಡೆಯು ಜೋರಾದ ದನಿಯೊಡನೆ ಸಿಡಿದು ಹೋಳಾಗುತ್ತದೆ. ಇದೇ ತಿರುಳಿನ **'ನಿನ್ ಬುಂಡೆ ಸಿಡಿಯ'** ಎಂಬ ಶಾಪದ ನುಡಿ ಬಳಕೆಯಲ್ಲಿದೆ.

೧೭೬. ನಿನ್ ಕಯ್ ಕಾಲ್ ಕೊಂಟಾಗ

"ದುಡಿಯುವ ಕಯ್ಗಳ ಮತ್ತು ನಡೆದಾಡುವ ಕಾಲುಗಳ ಬಲವೆಲ್ಲವೂ ಉಡುಗಿ ಹೋಗಿ, ಒಂದೆಡೆಯಲ್ಲೇ ಮಲಗಿ ನರಳುವಂತಾಗಲಿ" ಎಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

ಮರದ ತುಂಡನ್ನು ಒಣಗಿದ ತುಂಡನ್ನು 'ಕೊಂಟು' ಎಂದು ಕರೆಯುತ್ತಾರೆ. "ಕಯ್ ಕಾಲುಗಳು ಕೊಂಟಾಗಲಿ" ಎಂಬ ಪದಕಂತೆಯು ವ್ಯಕ್ತಿಯು ತನ್ನ ಕಯ್ ಕಾಲುಗಳನ್ನು ಆಡಿಸುವ ಕಸುವನ್ನು ಕಳೆದುಕೊಳ್ಳುವ ಒಂದು ಬಗೆಯ ರೋಗದ ಚಹರೆಯನ್ನು ಸೂಚಿಸುತ್ತದೆ. ಮೆದುಳಿನ ನರಮಂಡಲದ ಜೀವಕಣಗಳಿಗೆ ಅಂಟು ರೋಗಗಳು ತಗುಲಿ ಇಲ್ಲವೇ ಮೆದುಳಿಗೆ ಹೋಗುವ ಆಮ್ಲಜನಕ ಅಥವಾ ನೆತ್ತರಿನ ಪ್ರಮಾಣದಲ್ಲಿ ಕೊರತೆಯುಂಟಾಗಿ ನರಕೋಶಗಳಿಗೆ ಹಾನಿಯುಂಟಾದಾಗ ಬರುವ ರೋಗಗಳಲ್ಲಿ ಇದು ಒಂದು ಬಗೆಯದು. ಇದನ್ನು 'ಲಕ್ವ ಹೊಡೆಯುವುದು' ಎಂದು ಕರೆಯುತ್ತಾರೆ. ಇದರಿಂದಾಗಿ ಕಯ್ ಕಾಲುಗಳ ಕಸುವು ಕುಗ್ಗಿ, ಚಲನವಲನಗಳು ನಿಂತು ಹೋಗುತ್ತವೆ.

೧೭೭. ನಿನ್ ಕಾಡೆಣ ಮಾಡ

"ವ್ಯಕ್ತಿಯು ಸತ್ತಾಗ, ಅವನ ಇಲ್ಲವೇ ಅವಳ ಹೆಣಕ್ಕೆ ಯಾರೊಬ್ಬರೂ ದಿಕ್ಕುದೆಸೆಯಿಲ್ಲದಂತಾಗಲಿ" ಎಂಬ ಉದ್ದೇಶವನ್ನುಳ್ಳ ಶಾಪದ ನುಡಿ.

'ಕಾಡೆಣ' ಎಂದರೆ ವ್ಯಕ್ತಿಯು ಅಪರಿಚಿತವಾದ ಎಡೆಯಲ್ಲಿ ಸಾವನ್ನಪ್ಪಿದಾಗ, "ಅವನು ಯಾರು... ಎಲ್ಲಿಂದ ಬಂದವನು... ಅವನ ಕುಲ ಯಾವುದು... ಅವನ ಕಸುಬೇನು" ಎಂಬ ಯಾವೊಂದು ಸಂಗತಿಯೂ ಅಲ್ಲಿದ್ದವರಿಗೆ ಗೊತ್ತಿಲ್ಲದಿರುವುದು. ಇದರಿಂದಾಗಿ ದೂರದ ಊರಿನವರು "ಕೇಳುವವರಿಲ್ಲದ ಈ ಹೆಣವನ್ನು" ತಮಗೆ ತೋಚಿದಂತೆ ಇಲ್ಲವೇ ಯಾವುದೇ ಬಗೆಯ ಆಚರಣೆಗಳಿಲ್ಲದೆ ಒಪ್ಪ ಮಾಡುತ್ತಾರೆ. ಕಾಡಿನ ಹೆಣ ಎಂಬ ಎರಡು ಪದಗಳಿಂದಾದ 'ಕಾಡೆಣ' ಎಂಬ ಜೋಡುಪದವು ಇಲ್ಲಿ ಒಂದು ರೂಪಕವಾಗಿ ಬಳಕೆಯಾಗಿದೆ.

೧೭೮. ನಿನ್ ಕಿವಿ ಕಿತ್ತೋಗ

"ಮಂಗಳಕಾರ್ಯಗಳನ್ನು ಮುಂದೆ ನಿಂತು ಮಾಡದಂತಾಗಲಿ" ಎಂಬ ಉದ್ದೇಶ ದಿಂದ ಹಾಕುವ ಶಾಪದ ನುಡಿ.

ಕನ್ನಡ ನುಡಿ ಸಮುದಾಯದ ಕುಟುಂಬಗಳಲ್ಲಿ ಮದುವೆಯ ಸಮಯದಲ್ಲಿ ನಡೆಯುವ ಆಚರಣೆಗಳಾದ ಗಂಡುಹೆಣ್ಣಿನ ಕಡೆಯವರು ಒಪ್ಪುವೀಳ್ಯ ತೆಗೆದು ಕೊಳ್ಳುವಾಗ, ಲಗ್ನ ಕಟ್ಟಿಸುವಾಗ, ಹೆಣ್ಣುಗಂಡನ್ನು ಕರೆತಂದು ಕಳುಹಿಸುವಾಗ ಮತ್ತು ಗ್ರಾಮ ದೇವತೆಗಳ ಹಬ್ಬ ಹಾಗೂ ಊರೊಟ್ಟಿನ ಕೆಲಸಗಳನ್ನು ಮಾಡುವಾಗ ಮಯ್‌ಕಟ್ಟಿನಲ್ಲಿ ಯಾವುದೇ ಬಗೆಯ ಕುಂದು ಇರುವ ವ್ಯಕ್ತಿಗಳನ್ನು ಮುಂದೆ

ಬಿಡುವುದಿಲ್ಲ. ಏಕೆಂದರೆ ಇಂತಹವರು ಮುಂದಾಗಿ ನಿಂತು ಮಾಡಿದರೆ ಕೆಟ್ಟದ್ದಾಗ ಬಹುದೆಂಬ ಹೆದರಿಕೆಯು ಜನಮನದಲ್ಲಿದೆ. ಜನರು ಕಯ್ ಕಯ್ ಮಿಲಾಯಿಸಿ ಜಗಳವಾಡುವ ಸನ್ನಿವೇಶಗಳಲ್ಲಿ ಕೆಲವೊಮ್ಮೆ ಓಲೆಯನ್ನು ತೊಟ್ಟಿರುವ ಕಿವಿಯನ್ನು ಜಡಿದು ಎಳೆದಾಗ, ಕಿವಿಯ ಹಾಳೆ ಹರಿದು ಬರುತ್ತದೆ. ಈ ರೀತಿ ಊನಗೊಂಡವರನ್ನು ಆಚರಣೆಗಳಿಂದ ದೂರವಿರಿಸುತ್ತಾರೆ.

೧೭೯. ನಿನ್ ಕುಕ್ಕ ನಿನ್ ನರ್ಕ ನಿನ್ ನಗ್ಗ ನಿನ್ ಮುಕ್ಕ

"ಇನ್ನಿಲ್ಲದಂತಹ ಸಾವು ನೋವುಗಳು ಉಂಟಾಗಲಿ" ಎಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

'ಅನಾಮತ್ತಾಗಿ ಮೇಲಕ್ಕೆ ಎತ್ತಿ ನೆಲಕ್ಕೆ ಬಡಿಯುವುದು' ಎಂಬ ತಿರುಳಿನ 'ಕುಕ್ಕು' ಎಂಬ ಪದ; 'ಒಡೆದು ಪುಡಿ ಪುಡಿ ಮಾಡುವುದು' ಎಂಬ ತಿರುಳಿನ 'ನರ್ಕ' ಎಂಬ ಪದ; 'ಮುದುಡುವಂತೆ ಸದೆ ಬಡಿಯುವುದು' ಎಂಬ ತಿರುಳಿನ 'ನಗ್ಗು' ಎಂದ ಪದ; 'ಒಮ್ಮೆಲೇ ತಿಂದು ಕಬಳಿಸುವುದು' ಎಂಬ ತಿರುಳಿನ 'ಮುಕ್ಕು' ಎಂಬ ಪದಗಳು ಈ ಬಯ್ಗುಳದ ಸನ್ನಿವೇಶದಲ್ಲಿ ಜತೆಗೂಡಿ ಬಳಕೆಯಾಗಿವೆ. ಬಯ್ಯುವವರ ಮನದ ಆಕ್ರೋಶ ಮತ್ತು ಆವೇಶ ಹೆಚ್ಚಾದಂತೆಲ್ಲಾ ಶಾಪಗಳು ಈ ರೀತಿ ಜತೆಗೂಡಿ ಬಳಕೆಯಾಗುತ್ತವೆ.

೧೮೦. ನಿನ್ ಗಂಟ್ಲಗೆ ಗಂಡಾಮಾಲೆ ಆಗ

'ಗಂಡಾಮಾಲೆ' ಎಂಬುದು ಒಂದು ಬಗೆಯ ರೋಗ.

ಈ ರೋಗ ತಗುಲಿದ ವ್ಯಕ್ತಿಗೆ ಮೊದಮೊದಲು ಗಂಟಲು ಕೆರೆತ ಇಲ್ಲವೇ ನೋವು ಕಾಣಿಸಿಕೊಂಡು, ಮಯ್ ಕಯ್ ಹೊಡೆತ ಹಾಗೂ ಜ್ವರ ಬರುತ್ತದೆ. ನಾಲ್ಕಾರು ದಿನಗಳಲ್ಲಿ ಗಂಟಲಿನ ಎರಡು ಕಡೆಗಳಲ್ಲಿ ಸಣ್ಣ ಗಾತ್ರದ ಹರಳುಗಳು ಕಟ್ಟಿಕೊಂಡು, ನೋಡುವವರ ಕಣ್ಣಿಗೆ ದುಂಡನೆಯ ಹರಳುಗಳಿಂದ ಕಟ್ಟಿರುವ ಮಾಲೆಯಂತೆ ಗೋಚರಿಸುತ್ತದೆ.

'ಕತ್ತಿನ ಮೇಲಿನ ಗಂಟು; ಕುರು' ಎಂಬ 'ತಿರುಳುಳ್ಳ ಸಂಸ್ಕೃತದ' 'ಗಂಡ' ಎಂಬ ಪದಕ್ಕೆ 'ಮಾಲಾ' ಎಂಬ ಪದ ಸೇರಿ ರೂಪುಗೊಂಡ 'ಗಂಡಮಾಲಾ' ಎಂಬ ಸಂಸ್ಕೃತ ಜೋಡುಪದ ಕನ್ನಡಿಗರ ಬಾಯಲ್ಲಿ 'ಗಂಡಾಮಾಲೆ' ಎಂಬ ರೂಪದಲ್ಲಿ ಬಳಕೆಗೊಂಡಿದೆ.

೧೮೧. ನಿನ್ ಗದ್ದೆಗೆ ಗೆದ್ಲಿಡಿಯ

"ಕಯ್ಯಿಗೆ ಬಂದ ಬೆಳೆ ಬಾಯಿಗೆ ಬರದಂತಾಗಲಿ" ಎಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

ಗದ್ದೆಯಲ್ಲಿ ಬೆಳೆದ ರಾಗಿ ಬತ್ತದ ಪಯಿರುಗಳು ಗೊನೆಕಟ್ಟಿ ಹಣ್ಣಾಗಿ ಕುಯಿಲಿಗೆ ಬಂದಾಗ, ಅವನ್ನು ಕೂದು ಅರಿಗಳನ್ನಾಗಿ ಜೋಡಿಸುತ್ತಾರೆ. ಅಂದರೆ ಹತ್ತಾರು ಹಿಡಿಗಳಾಗಿ ಕುಯ್ದ ರಾಗಿ ಕಡ್ಡಿಗಳನ್ನು ಬತ್ತದ ಗರಿಗಳನ್ನು ಗದ್ದೆಯಲ್ಲಿ ಸಾಲಾಗಿ ಒಟ್ಟುತ್ತಾರೆ. ಈ ಅರಿಗಳು ಗದ್ದೆಯಲ್ಲಿಯೇ ನಾಲ್ಕಾರು ದಿನಗಳ ಕಾಲ ಒಣಗಿದ ನಂತರ, ಅವುಗಳನ್ನು ಹೊರೆಗಳಾಗಿ ಕಟ್ಟಿ ಹೊರಕ್ಕೆ ಸಾಗಿಸುತ್ತಾರೆ. ಅರಿಗಳನ್ನು ಕುಯ್ದು ಗದ್ದೆಯಲ್ಲಿ ಹಾಕಿರುವಾಗ ಮಳೆ ಬಂದು ಇಲ್ಲವೇ ದಟ್ಟವಾಗಿ ಮಂಜು ಸುರಿದು ಗದ್ದೆಯು ಒದ್ದೆಯಾದರೆ, ನೆಲದ ಮೇಲೆ ಒಣಗಲೆಂದು ಹಾಕಿರುವ ಪಯಿರುಗಳಿಗೆ ಗೆದ್ದಲು ಹಿಡಿದು ಅಂದರೆ ಗೆಜ್ಜಲು ಹುಳುಗಳು ಮುತ್ತಿಕೊಂಡು ರಾಗಿ ಬತ್ತದ ತೆನೆಗಳು ಹಾಳಾಗುವುದಲ್ಲದೇ, ದನ ಮೇಯುವ ಹುಲ್ಲು ಮುಗ್ಗಲು ಹಿಡಿದು ಕೊಳೆಯುತ್ತದೆ.

೧೮೨. ನಿನ್ ಗೆಡ್ಡೆ ಕಿತ್ತೋಗ

"ಕುಟುಂಬಕ್ಕೆ ಸೇರಿದ ಎಲ್ಲಾ ವ್ಯಕ್ತಿಗಳಿಗೂ ಸಾವು ಬರಲಿ" ಎಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

ಮರಗಿಡಗಳ ಬುಡದಲ್ಲಿ ಕವಲುಬೇರುಗಳಿಂದ ಸುತ್ತುವರಿದು ದಪ್ಪನಾಗಿ ಗಟ್ಟಿಯಾಗಿರುವ ತಾಯಿಬೇರಿನ ಕಟ್ಟನ್ನು 'ಗಡ್ಡೆ/ಗೆಡ್ಡೆ' ಎಂದು ಕರೆಯುತ್ತಾರೆ. ಇದನ್ನು ಒಂದು ರೂಪಕವನ್ನಾಗಿ ಮಾಡಿಕೊಂಡು "ಒಬ್ಬ ವ್ಯಕ್ತಿಯ ಅಜ್ಜ–ಅಜ್ಜಿ; ತಂದೆ–ತಾಯಿ; ಅಣ್ಣ–ತಮ್ಮ; ಅಕ್ಕ–ತಮ್ಮ; ಚಿಕ್ಕಪ್ಪ–ದೊಡ್ಡಪ್ಪ; ಚಿಕ್ಕಮ್ಮ–ದೊಡ್ಡಮ್ಮ; ಹೆಂಡತಿ–ಮಕ್ಕಳು–ಮೊಮ್ಮಕ್ಕಳು ಮತ್ತು ಹತ್ತಿರದ ನೆಂಟಸ್ತನವುಳ್ಳ ಎಲ್ಲರಿಗೂ ಆಪತ್ತು ಬಂದು ಯಾರೊಬ್ಬರೂ ಉಳಿಯದಂತೆ ನಾಶವಾಗಲಿ" ಎಂಬ ತಿರುಳಿನ 'ಗೆಡ್ಡೆ ಕಿತ್ತು ಹೋಗಲಿ' ಎಂಬ ಶಾಪದ ನುಡಿಯನ್ನು ಕಟ್ಟಲಾಗಿದೆ. "ನಿನ್ ಬುಡ ಉಂಟೋಗ" ಎಂಬ ಶಾಪದ ನುಡಿಯು ಇದೇ ಬಗೆಯ ಉದ್ದೇಶದಿಂದ ಬಳಕೆಯಾಗುತ್ತದೆ.

೧೮೩. ನಿನ್ ತಲೇಗೆ ಬೂದಿ ಉಯ್ಯ

“ಮಾಡಬಾರದ ತಪ್ಪನ್ನು ಮಾಡಿ, ಮಾನ ಹೋಗುವಂತಾಗಲಿ” ಎಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

ತಲೆಯ ಮೇಲೆ ಬೂದಿಯನ್ನು ಹುಯ್ಯುವುದು/ಸುರಿಯುವುದು ಒಂದು ಬಗೆಯ ಆಚರಣೆ. ಕೀಳುಮಟ್ಟದ ಕೆಲಸವನ್ನು ಮಾಡಿ, ಸಮಾಜದಲ್ಲಿ ನಾಲ್ಕು ಜನರ ಮುಂದೆ ತಲೆತಗ್ಗಿಸುವಂತಹ ನೆಲೆಗೆ ಸಿಲುಕಿರುವ ವ್ಯಕ್ತಿಯನ್ನು ದಂಡಿಸಲೆಂದು ಬೀದಿಯಲ್ಲಿ ಎಲ್ಲರ ಮುಂದೆ ಅವನ/ಅವಳ ತಲೆಯ ಮೇಲೆ ಒಲೆಯ ಬೂದಿಯನ್ನು ಸುರಿಯಲಾಗುತ್ತದೆ. **“ಅಂತವನ ಸೊಸೆಯಂತೆ ಇಂತವನ ಮಗಳಂತೆ ನಿಂತ ಮದ್ದೀನದಲ್ಲಿ ಸಂತೇಲಿ ಸೋರೆಕಾಯಿ ಕದ್ಬುಟ್ಟು ತಲೇಗೆ ಬೂದಿ ಉಯ್ಯಿಸಿಕೊಂಡಳಂತೆ”** ಎಂಬ ನಾಣ್ಣುಡಿಯೊಂದು ಕನ್ನಡಿಗರ ಮಾತುಕತೆಯಲ್ಲಿ ಬಳಕೆಯಲ್ಲಿದೆ. ಮರಗಿಡಗಳ ಕೊಂಬೆ ರೊಂಬೆಗಳ ಕಡಿತ ತುಂಡುಗಳನ್ನು ಒಲೆಯಲ್ಲಿ ಒಡ್ಡಿ ಬೆಂಕಿಯನ್ನು ಹಾಕಿದಾಗ, ಅವು ಉರಿದು ಕೊನೆಯಲ್ಲಿ ಉಳಿಯುವ ಹುಡಿಯನ್ನು ಬೂದಿ ಎಂದು ಕರೆಯುತ್ತಾರೆ.

೧೮೪. ನಿನ್ ತೆಂಡೆ ತೇಲೋಗ

“ಒಂದು ಕುಟುಂಬಕ್ಕೆ ಸೇರಿದ ಎಲ್ಲಾ ವ್ಯಕ್ತಿಗಳು ನಾಶವಾಗಲಿ” ಎಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

ಹೊಲಗದ್ದೆಗಳಲ್ಲಿ ರಾಗಿ ಇಲ್ಲವೇ ಬತ್ತದ ಪಯಿರುಗಳನ್ನು ನಾಟಿ ಮಾಡುವಾಗ, ಮೂರು ಇಲ್ಲವೇ ನಾಲ್ಕು ಎಳೆಯ ಪಯಿರುಗಳನ್ನು ಒಟ್ಟುಗೂಡಿಸಿ ಮಣ್ಣಿನಲ್ಲಿ ಊರುತ್ತಾರೆ. ದಿನೇ ದಿನೇ ಒಂದೊಂದು ಪಯಿರು ಹತ್ತಾರು ಟಿಸಿಲುಗಳಾಗಿ ಒಡೆದು ಸೊಂಪಾಗಿ ಬೆಳೆಯುತ್ತವೆ. ಈ ರೀತಿ ಕವಲುಗೊಂಡು ಬೆಳೆದ ಪಯಿರುಗಳ ಗುಂಪನ್ನು ‘ತೆಂಡೆ’ ಎಂದು ಗುರುತಿಸುತ್ತಾರೆ.

ಕೆಲವೊಮ್ಮೆ ದೊಡ್ಡ ಮಳೆ ಸುರಿದು, ಕೆರೆಕಾಲುವೆಗಳ ಏರಿಗಳು ಒಡೆದು, ಬೆಳೆದು ನಿಂತ ಹೊಲಗದ್ದೆಗಳ ಮೇಲೆ ನೀರು ಒಂದೇ ಸಮನೆ ಉರುಳತೊಡಗಿದಾಗ, ಅದರ ಹೊಡೆತಕ್ಕೆ ತೆಂಡೆಗಳು ಬುಡ ಸಮೇತ ಕಿತ್ತುಬಂದು, ನೀರಿನ ಹೊನಲಿನಲ್ಲಿ ತೇಲಿ ಹೋಗುತ್ತವೆ. ಇದನ್ನು ಒಂದು ರೂಪಕವನ್ನಾಗಿ ಮಾಡಿಕೊಂಡು “ಒಬ್ಬ ವ್ಯಕ್ತಿಯ ಅಜ್ಜ-ಅಜ್ಜಿ, ತಂದೆ-ತಾಯಿ, ಅಣ್ಣ-ತಮ್ಮ, ಅಕ್ಕ-ತಂಗಿ, ಚಿಕ್ಕಪ್ಪ-ದೊಡ್ಡಪ್ಪ, ಚಿಕ್ಕಮ್ಮ-ದೊಡ್ಡಮ್ಮ, ಹೆಂಡತಿ-ಮಕ್ಕಳು-ಮೊಮ್ಮಕ್ಕಳು

ಮತ್ತು ಹತ್ತಿರದ ನೆಂಟಸ್ತನವುಳ್ಳ ಎಲ್ಲರಿಗೂ ಆಪತ್ತು ಬಂದು ಯಾರೊಬ್ಬರೂ ಉಳಿಯದಂತೆ ನಾಶವಾಗಲಿ" ಎಂಬ ಶಾಪದ ನುಡಿಯನ್ನು ಕಟ್ಟಲಾಗಿದೆ.

"ನಿನ್ ಬಳ್ಳಿ ಬತ್ತೋಗ; ನಿನ್ ಬುಡ ಉಂಟೋಗ; ನಿನ್ ವಂಶ ನಿರ್‍ವಂಶವಾಗ" ಎಂಬ ಶಾಪದ ನುಡಿಗಳು ಇದೇ ಬಗೆಯ ಉದ್ದೇಶವನ್ನು ಹೊಂದಿವೆ.

೧೮೫. ನಿನ್ ತೋಳು ನನ್ ತೋಳ್ನಂಗಾಗ

"ನನ್ನ ಗಂಡ ಸತ್ತಿರುವಂತೆಯೇ ನಿನ್ನ ಗಂಡನೂ ಸಾಯಲಿ" ಎಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

ಕನ್ನಡ ನುಡಿ ಸಮುದಾಯದ ಕೆಲವು ಜಾತಿಗುಂಪುಗಳಲ್ಲಿ ಗಂಡನು ಸತ್ತ ನಂತರ ಹೆಂಡತಿಯು ಹಣೆಗೆ ಕುಂಕುಮ, ಮುಡಿಗೆ ಹೂವು ಮತ್ತು ಕಯ್ಗಳಿಗೆ ಗಾಜಿನ ಬಳೆಗಳನ್ನು ತೊಡುವುದಿಲ್ಲ. ಇವೆಲ್ಲವೂ ಮುತ್ತಯ್ದೆತನದ ಚಹರೆಗಳೆಂಬ ನಂಬಿಕೆಯು ಜನಮನದಲ್ಲಿದೆ. ಇವನ್ನು ಗಂಡನು ಜೀವಂತವಾಗಿದ್ದಾಗ ಮಾತ್ರ ಹೆಂಡತಿಯು ತೊಟ್ಟಿರಬೇಕೆಂಬ ಸಂಪ್ರದಾಯವಿದೆ. "ನನ್ನ ತೋಳು" ಎಂಬ ಪದಕಂತೆಯು ಈ ಸನ್ನಿವೇಶದಲ್ಲಿ "ಬಳೆಗಳನ್ನು ತೊಟ್ಟಿರದ ಬರಿದೋಳು" ಎಂಬ ತಿರುಳನ್ನು ಹೊಂದಿದೆ.

೧೮೬. ನಿನ್ ದನೀಗೆ ದೊಡ್ರೋಗ ಬರ

"ಬೇಸಾಯಗಾರನ ದುಡಿಮೆಗೆ ಬಲಗೈಯಂತೆ ಇರುವ ದನಗಳು ಹಾಳಾಗಲಿ" ಎಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

ದೊಡ್ಡರೋಗವೆಂಬುದು ದನಗಳಿಗೆ ಬರುವ ಒಂದು ರೋಗದ ಹೆಸರು. ಈ ರೋಗ ತಗುಲಿದ ದನ ಜ್ವರದಿಂದ ನರಳತೊಡಗುತ್ತದೆ. ಮಯ್ಯಿನ ತಾಪ ಹೆಚ್ಚಾದಂತೆಲ್ಲಾ, ಕೆಂಪನೆಯ ಕೆಂಡದಂತಾಗಿ ರಗರಗನೆ ಉರಿಯುವ ಕಣ್ಣುಗಳಿಂದ ನೀರು ಸುರಿಯುತ್ತಿರುತ್ತದೆ. ಉಸಿರನ್ನು ದೊಡ್ಡದಾಗಿ ಮೇಲಕ್ಕೆ ಕೆಳಕ್ಕೆ ಬಿಡುತ್ತಾ ಮೇವನ್ನು ತಿನ್ನದೆ, ಮೆಲುಕು ಹಾಕದೆ ನಿಂತಾಗ, ದನದ ತೊಡೆಗಳು ನಡುಗತೊಡಗುತ್ತವೆ. ಸರಿಯಾದ ಉಪಚಾರ ಸಿಗದಿದ್ದರೆ ಎರಡು ಮೂರು ದಿನಗಳಲ್ಲಿಯೇ ಸಾವನ್ನಪ್ಪುತ್ತದೆ.

೧೮೭. ನಿನ್ ದುಂಡ್ಗೆ ದೂಪ ಹಾಕ

ಸಾವು ಬರಲಿ ಎಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

'ದುಂಡಿಗೆ ದೂಪವನ್ನು ಹಾಕುವುದು' ಒಂದು ಬಗೆಯ ಆಚರಣೆ. ಸಾವನ್ನಪ್ಪಿದ ವ್ಯಕ್ತಿಯ ಹೆಣವನ್ನು ಒಪ್ಪ ಮಾಡುವ ಮೊದಲ ಹಂತವಾಗಿ ಕುಟುಂಬದವರು, ಹತ್ತಿರದ ನೆಂಟರು ಮತ್ತು ಆಪ್ತರು ಹೆಣದ ಮಯ್ ಮೇಲೆ ಚೆಂಬಿನಿಂದ ಒಂದೊಂದು ಮೊಗೆ ಬಿಸಿ ನೀರನ್ನು ಎರೆಯುತ್ತಾರೆ. ಅನಂತರ ಹೆಣಕ್ಕೆ ಹೊಸ ಬಟ್ಟೆಯನ್ನು ಉಡಿಸಿ ಒಂದೆಡೆ ಕುಳ್ಳಿರಿಸಿ, ಹಣೆಗೆ ವಿಭೂತಿಯನ್ನು ಬಳಿದು ಕುಂಕುಮವನ್ನಿಟ್ಟು, ಊದುಕಡ್ಡಿ ಹಚ್ಚಿ, ಕರ್ಪೂರ ಬೆಳಗಿಸುತ್ತಾರೆ. ತಟ್ಟೆ ಇಲ್ಲವೇ ಲೋಹದಿಂದ ಮಾಡಿರುವ ಉಪಕರಣವೊಂದರಲ್ಲಿ ಉರಿಯುವ ಕೆಂಡದ ತುಂಡುಗಳನ್ನಿಟ್ಟು ಅದರ ಮೇಲೆ ಸಾಂಬ್ರಾಣಿಯನ್ನು ಹಾಕಿದಾಗ ಒಳ್ಳೆಯ ಕಂಪಿನಿಂದ ಕೂಡಿದ ಹೊಗೆಯೇಳುತ್ತದೆ. ಇದನ್ನು ದೂಪ ಎನ್ನುತ್ತಾರೆ. ದೂಪದ ಹೊಗೆಯಾಡುತ್ತಿರುವ ತಟ್ಟೆಯನ್ನು ಹೆಣದ ಮುಖದ ಬಳಿ ತಂದು, ಆರತಿ ಎತ್ತಿ ಪೂಜಿಸುತ್ತಾರೆ. ಕನ್ನಡ ನುಡಿ ಸಮುದಾಯದ ಒಳನುಡಿಯಲ್ಲಿ 'ದುಂಡು' ಎಂಬ ಪದಕ್ಕೆ 'ಮುಖ; ಮೋರೆ; ದುಂಡನೆಯ ತುಟಿಗಳಿಂದ ಕೂಡಿದ ಮುಸುಡಿ' ಎಂಬ ತಿರುಳಿದೆ.

೧೮೮. ನಿನ್ ದುವ್ವೆ ಮ್ಯಾಕೆ ಕಾಗೆ ಬರದೇ ಹೋಗ

"ಸತ್ತ ನಂತರವೂ ಒಳ್ಳೆಯ ಗತಿ ದೊರೆಯದಂತಾಗಲಿ" ಎಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

ಸತ್ತ ವ್ಯಕ್ತಿಯ ಹೆಣವನ್ನು ಒಪ್ಪ ಮಾಡಿದ ಮೂರು/ಏಳು/ಹನ್ನೊಂದನೆಯ ದಿನದಂದು ಹೆಣವನ್ನು ಹೂಳಿದ/ಸುಟ್ಟ ಜಾಗದಲ್ಲಿ ಮಣ್ಣಿನ ದಿಬ್ಬವೊಂದನ್ನು ಚಿಕ್ಕದಾಗಿ ಕಟ್ಟಿ, ಅದರ ಮೇಲೆ ಬಾಳೆಯ ಎಲೆಗಳನ್ನು ಹರಡಿ, ಎಣ್ಣೆಯಲ್ಲಿ ಕರಿದ ವಡೆ, ಕಜ್ಜಾಯ, ಚಿಕಿನುಂಡೆ, ಚಕ್ಕಲಿ ಮುಂತಾದ ತಿಂಡಿಗಳನ್ನು ಹಾಗೂ ನಾನಾ ಬಗೆಯ ಹಣ್ಣುಗಳ ತೊಳೆಗಳನ್ನು ಬಿಡಿಸಿ ಇಡುತ್ತಾರೆ. ಇದರ ಜತೆ ಅಕ್ಕಿ, ಜೀರಿಗೆ, ಅರಿಸಿನವನ್ನು ಹಾಕಿ ಬೇಯಿಸಿ ತಯಾರಿಸಿದ ಕೂಳನ್ನು ಉಂಡೆ ಕಟ್ಟಿ ಹಾಕುತ್ತಾರೆ. ಈ ಬಗೆಯ ವಸ್ತುಗಳಿಂದ ಕೂಡಿದ ಎಡೆಯನ್ನು 'ದುವ್ವೆ' ಎಂದು ಕರೆಯುತ್ತಾರೆ. ದುವ್ವೆಯ ಮೇಲಿರುವ ತಿಂಡಿ ತಿನಿಸುಗಳನ್ನು ಕಾಗೆ, ಗರುಡ, ಕುಂಬಾರ ಕೋಳಿ ಮುಂತಾದ ಹಕ್ಕಿಗಳು ತಿಂದರೆ ಸತ್ತವರ ಆತ್ಮಕ್ಕೆ ಸದ್ಗತಿಯು ದೊರೆಯುವುದೆಂಬ ನಂಬಿಕೆಯು ಕನ್ನಡ ಜನಪದರಲ್ಲಿದೆ. ಒಂದು ವೇಳೆ ದುವ್ವೆಯ ಮೇಲಿನ

ವಸ್ತುಗಳನ್ನು ತಿನ್ನಲು ಯಾವುದೇ ಪ್ರಾಣಿಪಕ್ಷಿಗಳು ಬಾರದಿದ್ದರೆ, ಸತ್ತ ವ್ಯಕ್ತಿಯು ಜೀವನದಲ್ಲಿ ಮನ್ನಿಸಲಾಗದಂತಹ ಪಾಪದ ಕೆಲಸವನ್ನು ಮಾಡಿದ್ದುದರಿಂದ ಅವು ಬರಲಿಲ್ಲವೆಂದು, ಇಂತಹ ವ್ಯಕ್ತಿಯ ಆತ್ಮಕ್ಕೆ ಶಾಂತಿಯಾಗಲಿ ಸದ್ಗತಿಯಾಗಲಿ ದೊರೆಯುವುದಿಲ್ಲವೆಂಬ ನಂಬಿಕೆಯು ಜನಮನದಲ್ಲಿದೆ.

೧೮೯. ನಿನ್ ಮಂಡೆ ಪತ್ಮಂಡೆಯಾಗ

'ಪತ್ಮಂಡೆ' ಎಂಬುದು ತಲೆಬುರುಡೆಯ ತೊಗಲಿನಲ್ಲಿ ಉಂಟಾಗುವ ಒಂದು ಬಗೆಯ ರೋಗ.

ಈ ರೋಗ ತಗುಲಿದ ಎಡೆಗಳಲ್ಲಿ ತಲೆಗೂದಲು ಉದುರಿಹೋಗುತ್ತದೆ. ರೂಪಾಯಿನ ಆಕಾರದಲ್ಲಿ ಕಂಡುಬರುವ ಮಚ್ಚೆಗಳು ಬಿಸಿಲಿನ ಕಿರಣಗಳ ತಾಕುವಿಕೆಯಿಂದ ಕಂದು ಬಣ್ಣಕ್ಕೆ ತಿರುಗುತ್ತವೆ. 'ಸುಕ್ಕು; ಸುರುಟು; ಬಾಡು' ಎಂಬ ತಿರುಳುಳ್ಳ 'ಪತ್ತು' ಎಂಬ ಪದಕ್ಕೆ, 'ತಲೆಬುರುಡೆ' ಎಂಬ ತಿರುಳುಳ್ಳ 'ಮಂಡೆ' ಪದ ಸೇರಿ 'ಪತ್ಮಂಡೆ' ಎಂಬ ಜೋಡುಪದ ರೂಪುಗೊಂಡಿದೆ.

೧೯೦. ನಿನ್ ಮಂದಳದಲ್ಲಿ ಕರ ಕಟ್ಟ

"ಮನೆಯು ಹಾಳಾಗಲಿ" ಎಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

'ಮನೆ' ಮತ್ತು 'ತಳ' ಎಂಬ ಎರಡು ಪದಗಳು ಸೇರಿ 'ಮಂದಳ' ಎಂಬ ಜೋಡುನುಡಿ ರೂಪುಗೊಂಡಿದೆ. 'ಮಂದಳ' ಎಂಬ ಪದಕ್ಕೆ "ಮನೆಯನ್ನು ಕಟ್ಟಲು ಮೀಸಲಾಗಿರುವ ಜಾಗ" ಎಂಬ ತಿರುಳಿದೆ. ತಾಯಿತಂದೆ, ಮಕ್ಕಳು ಮೊಮ್ಮಕ್ಕಳೊಡನೆ ಈಗ ಬಾಳುತ್ತಿರುವ ಮನೆಯಲ್ಲಿನ ಎಲ್ಲರಿಗೂ ಸಾವುನೋವು ಗಳು ಉಂಟಾಗಿ, ಮನೆಯನ್ನು ನೋಡಿಕೊಳ್ಳಲು ಯಾರೊಬ್ಬರೂ ಇಲ್ಲದಂತಾಗಿ, ಮನೆಯು ಪಾಳು ಬಿದ್ದು ನೆಲಸಮಗೊಂಡು, ಆ ಜಾಗದಲ್ಲಿ ದನಕರುಗಳನ್ನು ಕಟ್ಟುವಂತಾಗಲಿ ಎಂಬ ರೂಪಕದ ತಿರುಳಿನಲ್ಲಿ ಈ ಶಾಪದ ನುಡಿ ಬಳಕೆಯಾಗಿದೆ.

೧೯೧. ನಿನ್ ಮನೆ ಎಕ್ಕುಟ್ಟೋಗ

"ಚೆನ್ನಾಗಿ ಬಾಳಿ ಬದುಕುತ್ತಿರುವ ಕುಟುಂಬವು ಹಾಳಾಗಿ ಹೋಗಲಿ" ಎಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

ಇಂದು ಮಕ್ಕಳು ಮರಿಗಳಿಂದ ಕೂಡಿ ನೆಮ್ಮದಿಯಿಂದ ಬಾಳುತ್ತಿರುವ

ಮನೆಯನ್ನು ಮುನ್ನಡೆಸುವವರು ಇಲ್ಲದಂತಾಗಿ, ಮುಂದೊಂದು ದಿನ ಮನೆಯಲ್ಲಿ ವಾಸ ಮಾಡುವವರೇ ಇಲ್ಲವಾಗಿ, ಮನೆಯು ಮುರಿದು ಬಿದ್ದು, ಮನೆಯಿದ್ದ ಜಾಗ ಪಾಳು ನೆಲವಾಗಿ, ಅಲ್ಲಿ ಎಕ್ಕದ ಗಿಡ ಹುಟ್ಟುವಂತಾಗುವುದು.

ಪಾಳು ಬಿದ್ದ ನೆಲದಲ್ಲಿ ಹುಟ್ಟಿ ಬೆಳೆದು ನಿಲ್ಲುವ ಎಕ್ಕದ ಗಿಡವನ್ನೇ ಒಂದು ರೂಪಕವನ್ನಾಗಿ ಮಾಡಿಕೊಂಡು ಈ ಶಾಪದ ನುಡಿಯನ್ನು ಕಟ್ಟಲಾಗಿದೆ. ಇದೇ ಉದ್ದೇಶವನ್ನು ಹೊಂದಿರುವ **"ನಿಮ್ಮನೆ ಹಾಳಾಗ; ನಿಮ್ಮನೆ ಕಿಸಂತ್ರಾಗ; ನಿನ್ ಮನೆ ಗ್ವಾಡೆ ನಿಂತ್ಕೊಳ; ನಿನ್ ಮನೆ ಉಂಟೋಗ"** ಎಂಬ ಶಾಪದ ನುಡಿಗಳು ಬಳಕೆಯಲ್ಲಿವೆ.

೧೯೨. ನಿಮ್ಮನೆ ದೂಪದ ಚೆನ್ನನ ಮನೆಯಾಗ

"ಮನೆಮಂದಿಗೆ ಸಾವುನೋವುಗಳುಂಟಾಗಿ, ಆಸ್ತಿಪಾಸ್ತಿಗಳೆಲ್ಲವೂ ಕರಗಿ ಹೋಗಿ, ಮನೆಯು ಹೇಳಹೆಸರಿಲ್ಲದಂತೆ ಅಳಿದುಹೋಗಲಿ" ಎಂಬ ಉದ್ದೇಶದಿಂದ **ಹಾಕುವ ಶಾಪದ ನುಡಿ.**

ಸಾಂಬ್ರಾಣಿ, ಹಾಲುಮಡ್ಡಿ, ಚಂದನದ ಕೊರಡಿನ ಹುಡಿಯನ್ನು ಬೆಂಕಿಕೆಂಡದ ಮೇಲೆ ಹಾಕಿದಾಗ ಏಳುವ ಹೊಗೆಯನ್ನು ದೂಪವೆಂದು ಕರೆಯುತ್ತಾರೆ. ದೇವರು ದಿಂಡರನ್ನು ಅಥವಾ ಏನನ್ನಾದರೂ ಪೂಜಿಸುವಾಗ ದೂಪದ ಹೊಗೆಯನ್ನು ಹಾಕುತ್ತಾರೆ.

ಈ ಶಾಪದಲ್ಲಿ ಬಂದಿರುವ ದೂಪದ ಚೆನ್ನನ ಬಗ್ಗೆ ಜನಪದ ಬಾಯಲ್ಲಿ ಚಲಾವಣೆಯಲ್ಲಿರುವ ಸಂಗತಿಗಳನ್ನು ಕಲೆಹಾಕಿ ಎಚ್.ಎಲ್. ನಾಗೇಗೌಡರು 'ಸೊನ್ನೆಯಿಂದ ಸೊನ್ನೆಗೆ' ಎಂಬ ಕಾದಂಬರಿಯನ್ನು ಬರೆದಿದ್ದಾರೆ. ಕಡುಬಡವನಾಗಿದ್ದ ಚೆನ್ನನಿಗೆ ಚಿನ್ನಬೆಳ್ಳಿ ಒಡವೆಗಳು ದೊರಕಿ ಸಿರಿವಂತನಾದ ನಂತರ ಅವನು ತನ್ನ ಮನೆಯಲ್ಲಿ ದೊಡ್ಡದಾಗಿ ಮಾಡತೊಡಗಿದ ದೂಪದ ಆರತಿಯು ಊರವರ ಗಮನವನ್ನು ಸೆಳೆದುದರಿಂದ, ಅವನ ಮನೆಗೆ 'ದೂಪದ ಚೆನ್ನನ ಮನೆ' ಎಂಬ ಹೆಸರು ಬಂದಿತು. ಕೆಲವು ವರುಗಳ ನಂತರ ದೂಪದ ಚೆನ್ನನ ಮನೆಯಲ್ಲಿ ಸಾವು ನೋವು ಕೇಡು ಹಾನಿ ಉಂಟಾಗಿ ಸಿರಿವಂತಿಕೆ ಅಳಿದು, ದೂಪದ ಚೆನ್ನನು ಗತಿಗೇಡಿಯಾಗಿ ಊರನ್ನು ತೊರೆಯುತ್ತಾನೆ. ಜನಪದರ ಮಾತುಕತೆಯಲ್ಲಿ ದೂಪದ ಚೆನ್ನನ ಮನೆಯ ಏಳುಬೀಳುಗಳು "ಎಲ್ಲವನ್ನೂ ಕಳೆದುಕೊಂಡು ಬೀದಿಪಾಲಾಗುವುದಕ್ಕೆ" ಒಂದು ರೂಪಕವಾಗಿ ಬಳಕೆಯಾಗುತ್ತಿದೆ.

೧೯೩. ನಿನ್ ಮನೆ ಮುಂದೆ ಹೊಗೆ ಹಾಕ

"ಸಾವು ಬರಲಿ" ಎಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

ಸಾವನ್ನಪ್ಪಿದ ವ್ಯಕ್ತಿಯ ಹೆಣವನ್ನು ಮನೆಯ ಹೊರ ಜಗಲಿಯಲ್ಲಿ ಇಡುತ್ತಿದ್ದಂತೆಯೇ, ನಾಲ್ಕಾರು ಕಟ್ಟಿಗೆಯ ತುಂಡುಗಳನ್ನು ತೆಗೆದುಕೊಂಡು, ಅವುಗಳ ನಡುವೆ ಒಣಗಿದ ಪುಳ್ಳೆಗಳನ್ನಿಟ್ಟು ಮನೆಯ ಮುಂದೆ ಸಣ್ಣದಾಗಿ ಬೆಂಕಿಯನ್ನು ಹಾಕುತ್ತಾರೆ. ಪುಳ್ಳೆಗಳು ಕವರಿಕೊಂಡು ಉರಿಯೇಳುವಾಗ, ಕಟ್ಟಿಗೆಯ ತುಂಡುಗಳ ಎಡೆಯಿಂದ ಹೊಗೆಯಾಡತೊಡಗುತ್ತದೆ. ಸಾವಿನ ಸುದ್ದಿಯನ್ನು ಹೊರ ಜಗತ್ತಿಗೆ ತಿಳಿಸುವ ಒಂದು ಆಚರಣೆಯಾಗಿ ಈ ರೀತಿ ಮನೆಯ ಮುಂದೆ ಉರಿಯುವ ಕೊಳ್ಳಿಯನ್ನು ಇಡುತ್ತಾರೆ. ಹೆಣವನ್ನು ಮಸಣಕ್ಕೆ ಕೊಂಡೊಯ್ಯುವಾಗ, ಸತ್ತ ವ್ಯಕ್ತಿಯ ವಾರಸುದಾರನು ಅಂದರೆ ಹೆಣವನ್ನು ಒಪ್ಪ ಮಾಡುವ ಹಕ್ಕುಳ್ಳ ವ್ಯಕ್ತಿಯು ಮನೆಯ ಮುಂದೆ ಉರಿಯುತ್ತಿದ್ದ ಕಟ್ಟಿಗೆಯಲ್ಲಿ ಒಂದು ತುಂಡನ್ನು ಕಯ್ಯಲ್ಲಿ ಹಿಡಿದು ಸಾಗುತ್ತಾನೆ.

೧೯೪. ನಿನ್ ಮನೆಗೆ ಕಾಗೆ ನುಗ್ಗ

"ಬಗೆಬಗೆಯ ಸಂಕಟಗಳು ಒದಗಿ ಬಂದು ಕುಟುಂಬವನ್ನು ಕಾಡುವಂತಾಗಲಿ" ಎಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

ಕನ್ನಡ ನುಡಿ ಸಮುದಾಯದಲ್ಲಿ ಕೆಲವು ಬಗೆಯ ಜೀವಿಗಳನ್ನು ತಲೆತಲಾಂತರಗಳಿಂದಲೂ ಕೆಡುಕಿನ ಸಂಕೇತಗಳೆಂದು ತಿಳಿಯಲಾಗಿದೆ. ಅಂತಹ ಜೀವಿಗಳಲ್ಲಿ ಕಾಗೆಯು ಒಂದಾಗಿದೆ. ಕಾಗೆಯು ಹೊಕ್ಕ ಮನೆಯಲ್ಲಿನ ವ್ಯಕ್ತಿಗಳ ಆಸ್ತಿಪಾಸ್ತಿಗಳೆಲ್ಲವೂ ಕರಗಿಹೋಗಿ, ಕಡುಬಡತನ ವಕ್ಕರಿಸಿಕೊಳ್ಳುತ್ತದೆ ಹಾಗೂ ಶನಿದೇವರ ವಾಹನವಾದ ಕಾಗೆಯು ಮನೆಗೆ ನುಗ್ಗುವುದರಿಂದ, ಮನೆಯ ಜನರು ಶನಿದೇವರ ಕ್ರೂರನೋಟಕ್ಕೆ ಬಲಿಯಾಗಿ, ಪಡಬಾರದ ಕೋಟಲೆಗಳಿಗೆ ಒಳಗಾಗಿ, ಸಾವು, ನೋವು, ಅಪಮಾನದಿಂದ ನರಳುತ್ತಾರೆ ಎಂಬ ನಂಬಿಕೆಯು ಜನಮನದಲ್ಲಿ ನೆಲೆಯೂರಿದೆ.

೧೯೫. ನಿನ್ ಮನೇಗೆ ಗ್ವಾರ್ಕ ಸುತ್ತ

"ಮನೆಯನ್ನು ನೋಡಿಕೊಳ್ಳುವುದಕ್ಕೆ ಮತ್ತು ಮುನ್ನಡೆಸುವುದಕ್ಕೆ ಕುಟುಂಬದಲ್ಲಿ ಯಾರೊಬ್ಬರೂ ಇಲ್ಲದಂತಾಗಲಿ" ಎಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

‘ಗ್ವಾರ್ಕ ಸುತ್ತಲಿ’ ಎಂಬ ಪದಕಂತೆಯು ಜೇಡರ ಹುಳು ತನ್ನ ನೂಲಿನ ಎಳೆಗಳಿಂದ ಬಲೆ ಹೆಣೆಯುವುದನ್ನು ಸೂಚಿಸುತ್ತದೆ. ಪ್ರತಿದಿನವೂ ಮನೆಯ ಕಿಟಕಿ ಬಾಗಿಲು ಗೋಡೆಗಳ ಮೇಲಿನ ದುಂಬು ದೂಳನ್ನು ತೆಗೆದು, ನೆಲವನ್ನು ಗುಡಿಸಿ ಸಾರಿಸಿ, ಮನೆಯನ್ನು ಅಚ್ಚುಕಟ್ಟಾಗಿ ಇಟ್ಟುಕೊಳ್ಳಲು ಮನೆಮಂದಿಯಲ್ಲಿ ಯಾರೂ ಇಲ್ಲದಂತಾಗಿ ಅಂದರೆ ಎಲ್ಲರಿಗೂ ಸಾವುನೋವುಗಳುಂಟಾಗಿ, ಮನೆಯು ಹಾಳು ಬೀಳಲಿ ಎಂಬ ರೂಪಕದ ತಿರುಳಿನಲ್ಲಿ ‘ಗ್ವಾರ್ಕ ಸುತ್ತ’ ಎಂಬ ಪದಕಂತೆಯು ಬಳಕೆಯಾಗಿದೆ. ‘ಎಳೆದುಕೊಳ್ಳು’ ಬಲೆಯಿಂದ ಹಿಡಿ’ ಎಂಬ ತಿರುಳಿನ ‘ಗೋರ್’ ಎಂಬ ಪದಕ್ಕೆ, ‘ಮಾಡುವುದು’ ಎಂಬ ತಿರುಳಿನ ‘ಕ’ ಎಂಬ ಒಟ್ಟು ಸೇರಿ ‘ಬಲೆ ನೇಯುವ ಹುಳು/ಜೇಡರ ಹುಳು’ ಎಂಬ ತಿರುಳಿನ ‘ಗೋರ್ಕ’ ಎಂಬ ಪದ ರೂಪುಗೊಂಡು, ಉಚ್ಚಾರಣೆಯಲ್ಲಿ ‘ಗ್ವಾರ್ಕ’ ಎಂದಾಗಿದೆ.

೧೯೬. ನಿನ್ ಮುಂಡ್ಮೋಚ

“ತಂದೆ ತಾಯಿ ಇಲ್ಲವೇ ಗಂಡನಿಗೆ ಸಾವು ಬರಲಿ” ಎಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

‘ಮುಂಡ ಮೋಚಲಿ’ ಎಂಬ ಪದಕಂತೆಯಲ್ಲಿ ‘ಮುಂಡ’ ಮತ್ತು ‘ಮೋಚು’ ಎಂಬ ಸಂಸ್ಕೃತ ಪದಗಳು ಬಳಕೆಯಾಗಿವೆ. ಮುಂಡ ಎಂದರೆ ತಲೆ; ಮೋಚು ಎಂದರೆ ಬೋಳಿಸುವಿಕೆ.

ಕನ್ನಡ ನುಡಿ ಸಮುದಾಯದಲ್ಲಿ ವ್ಯಕ್ತಿಯು ಸತ್ತ ನಂತರ ಹೆಣವನ್ನು ಹೂಳಿದ ಇಲ್ಲವೇ ಸುಟ್ಟ ಎಡೆಯಲ್ಲಿ ಮೂರು/ಏಳು/ಹನ್ನೊಂದನೆಯ ದಿನದಂದು ಮಾಡುವ ತಿಥಿ ಕಾರ್ಯದಲ್ಲಿ ಮುಂಡ ಮೋಚುವಿಕೆಯು ಒಂದು ಆಚರಣೆಯಾಗಿದೆ. ಸತ್ತ ವ್ಯಕ್ತಿಯು ತಂದೆಯಾಗಿದ್ದರೆ ಹಿರಿಯ ಮಗ, ತಾಯಿಯಾಗಿದ್ದರೆ ಕಿರಿಯ ಮಗ ಮತ್ತು ಕುಟುಂಬದ ಇತರ ವ್ಯಕ್ತಿಗಳಾಗಿದ್ದರೆ ನೆತ್ತರಿನ ನಂಟುಳ್ಳ ಗಂಡು ಮಕ್ಕಳ ತಲೆಗೂದಲನ್ನು ಬೋಳಿಸುತ್ತಾರೆ. ಬ್ರಾಹ್ಮಣ ಜಾತಿ ಸಮುದಾಯದಲ್ಲಿ ಸತ್ತ ವ್ಯಕ್ತಿಯು ಗಂಡನಾಗಿದ್ದರೆ, ಆತನ ಹೆಂಡತಿಯ ತಲೆಗೂದಲನ್ನು ತೆಗೆದು, ಆಕೆಯನ್ನು ಬೋಳಿಯನ್ನಾಗಿಸುವ ಸಂಪ್ರದಾಯವಿತ್ತು. ಇದೇ ಉದ್ದೇಶವುಳ್ಳ **“ನಿನ್ನ ತಲೆ ಬೋಳ್ಸ”** ಎಂಬ ಶಾಪದಲ್ಲಿ ಕನ್ನಡದ ಪದಗಳು ಬಳಕೆಯಾಗಿವೆ. ‘ಮೋಚು’ ಎಂಬ ಪದಕ್ಕೆ “ಗಂಡ ಸತ್ತಿರುವ ಹೆಂಗಸು” ಎಂಬ ಮತ್ತೊಂದು ತಿರುಳಿದೆ.

೧೯೭. ನಿನ್ ಸುಳೀಗೆ ಸುಣ್ಣದ ತಿಳಿ ಬುಡ

"ಮಕ್ಕಳಾಗದೆ ವ್ಯಕ್ತಿಯ ಕುಟುಂಬದ ಬೆಳವಣಿಗೆಯ ಮೊಟಕಾಗಲಿ" ಎಂಬ **ಉದ್ದೇಶದಿಂದ ಹಾಕುವ ಶಾಪದ ನುಡಿ.**

ಮೊಳಕೆಯೊಡೆದು ಚಿಗುರಿ ಬೆಳೆಯುತ್ತಿರುವ ಗಿಡದ ಸುಳಿಗೆ ತಿಳಿಯಾದ ಸುಣ್ಣದ ನೀರನ್ನು ಹಾಕಿದರೆ, ಸುಳಿಯು ಸುಟ್ಟು ಕಮರಿಹೋಗಿ, ಸೊಂಪಾಗಿ ಬೆಳೆದು ಹೂಬಿಟ್ಟು ಹೀಚುಕಾಯಿ ಹಣ್ಣುಗಳಿಂದ ಕಂಗೊಳಿಸುವ ಮುನ್ನವೇ ಗಿಡ ಸಾಯುತ್ತದೆ. ಇದನ್ನೇ ಒಂದು ರೂಪಕವಾಗಿ ಬಳಸಿಕೊಂಡು "ವ್ಯಕ್ತಿಯ ತಲೆಮಾರು ಮಕ್ಕಳು ಮೊಮ್ಮಕ್ಕಳು ಮರಿಮಕ್ಕಳಿಂದ ಮುಂದುವರಿಯದೆ, ಒಂದೇ ತಲೆಗೆ ಕೊನೆಗೊಳ್ಳುವಂತಾಗಲಿ" ಎಂಬುದನ್ನು ಈ ಶಾಪದ ನುಡಿ ಸೂಚಿಸುತ್ತದೆ. ಇದೇ ಉದ್ದೇಶವನ್ನು ಹೊಂದಿರುವ **"ನಿನ್ ಸುಳಿಲ್ದೇ ಹೋಗ; ನಿನ್ ಸುಳೀಗೆ ಹುಳಬೀಳ"** ಎಂಬ ಶಾಪಗಳು ಬಳಕೆಯಲ್ಲಿವೆ.

೧೯೮. ನಿನ್ ಸುಳಿಗೆ ಸಿಡ್ಲು ಬಡಿಯ

"ಮಕ್ಕಳಾಗದೆ ವ್ಯಕ್ತಿಯ ಕುಟುಂಬದ ಬೆಳವಣಿಗೆಯು ಕೊನೆಗೊಳ್ಳಲಿ" ಎಂಬ **ಉದ್ದೇಶದಿಂದ ಹಾಕುವ ಶಾಪದ ನುಡಿ.**

ಮೊಳಕೆಯೊಡೆದು ಚಿಗುರಿ ಬೆಳೆಯುತ್ತಿರುವ ಗಿಡದ ಸುಳಿಗೆ ಇದ್ದಕ್ಕಿದ್ದಂತೆಯೇ ಎತ್ತಲಿಂದಲೋ ಬಂದು ಸಿಡಿಲು ಬಡಿದಾಗ, ಸಿಡಿಲಿನ ಬೆಂಕಿಯ ಕಣಗಳ ತಾಪಕ್ಕೆ ಸುಳಿಯೊಡನೆ ಗಿಡವು ಬುಡ ಸಮೇತ ಸುಟ್ಟು ಬೂದಿಯಾಗುತ್ತದೆ. ಇದನ್ನು ಒಂದು ರೂಪಕವನ್ನಾಗಿ ಬಳಸಿಕೊಂಡು "ವ್ಯಕ್ತಿಯ ತಲೆಮಾರು ಮಕ್ಕಳು ಮೊಮ್ಮಕ್ಕಳು ಮರಿಮಕ್ಕಳಿಂದ ಮುಂದುವರಿಯದೆ, ಯಾವುದಾದರೊಂದು ಬಗೆಯ ಗಂಡಾಂತರಕ್ಕೆ ಒಳಗಾಗಿ ಒಂದೇ ತಲೆಗೆ ಕೊನೆಗೊಳ್ಳುವಂತಾಗಲಿ" ಎಂಬುದನ್ನು ಈ ಶಾಪದ ನುಡಿಯು ಸೂಚಿಸುತ್ತದೆ.

೧೯೯. ನಿನ್ ಸೊಲ್ಲಡಗ

"ಮಾತು ನಿಂತು ಹೋಗಲಿ" ಎಂಬ **ಉದ್ದೇಶದಿಂದ ಹಾಕುವ ಶಾಪದ ನುಡಿ.**

'ಸೊಲ್ಲು ಅಡಗಲಿ' ಎಂಬ ಪದಕಂತೆಯಲ್ಲಿ ಸೊಲ್ಲು ಎಂದರೆ 'ಮಾತು; ನುಡಿ.'

ಮಾನವನ ಮಿದುಳಿನ ನರಮಂಡಲದಲ್ಲಿ ಮಾತನಾಡಲು ಮತ್ತು ಆಡಿದ

ಮಾತುಗಳನ್ನು ಕೇಳಿ ತಿಳಿದುಕೊಳ್ಳಲು ನೆರವಾಗುವ ನರಕೋಶಗಳಿವೆ. ಮಾತನಾಡಲು ನೆರವಾಗುವ ನರಮಂಡಲದ ಜಾಗವನ್ನು 'ಬ್ರೋಕ ಜಾಗ'ವೆಂದು ಮತ್ತು ಕೇಳಿ ತಿಳಿದುಕೊಳ್ಳಲು ನೆರವಾಗುವ ನರಮಂಡಲದ ಜಾಗವನ್ನು 'ವರ್ನಿಕೆ ಜಾಗ'ವೆಂದು ಕರೆಯುತ್ತಾರೆ. ಪ್ರಾನ್ಸಿನ ಬ್ರೋಕ ಮತ್ತು ಜರ್ಮನಿಯ ಕಾರ್ಲ್ ವರ್ನಿಕೆ ಎಂಬ ವಿಜ್ಞಾನಿಗಳು ಮಿದುಳಿನ ನರಮಂಡಲದಲ್ಲಿ ಮಾತನಾಡಲು ಮತ್ತು ಕೇಳಿ ತಿಳಿಯಲು ಕಾರಣವಾಗುವ ನೆಲೆಗಳನ್ನು ಗುರುತಿಸಿದವರಲ್ಲಿ ಮೊದಲಿಗರಾಗಿದ್ದಾರೆ.

ತಲೆಬುರುಡೆಗೆ ದೊಡ್ಡ ಪೆಟ್ಟು ಬಿದ್ದಾಗ; ಮೆದುಳಿನ ನರಮಂಡಲಕ್ಕೆ ಅಂಟು ರೋಗಗಳು ತಗುಲಿದಾಗ; ಮೆದುಳಿಗೆ ಹೋಗುವ ನೆತ್ತರು ಮತ್ತು ಆಮ್ಲಜನಕದ ಪ್ರಮಾಣದಲ್ಲಿ ಕೊರತೆಯುಂಟಾಗಿ 'ಬ್ರೋಕ ಜಾಗ'ದ ನರಕೋಶಗಳಿಗೆ ಹಾನಿಯುಂಟಾಗಿ ಮಾತುಗಳು ನಿಂತುಹೋಗುತ್ತವೆ. **"ನಿನ್ ನಾಲ್ಗೆ ಸೇದೋಗ; ನಿನ್ ನಾಲ್ಗೆ ನಿಂತೋಗ; ನಿನ್ ನಾಲ್ಗೆ ನರ್ಸಾಯ; ನಿನ್ ಬಾಯ್ ಬಿದ್ದೋಗ; ನಿನ್ ಬಾಯ್ ಬತ್ತೋಗ; ನಿನ್ ಬಾಯ್ ಸೇದೋಗ"** ಎಂಬ ಶಾಪದ ನುಡಿಗಳು ಇದೇ ಉದ್ದೇಶದಿಂದ ಬಳಕೆಯಾಗುತ್ತಿವೆ. "ಸೇದು ಹೋಗಲಿ" ಎಂದರೆ 'ಮುದುಡಿಕೊಳ್ಳಲಿ; ಕಿರಿದಾಗಲಿ; ಜಡವಾಗಲಿ.'

೨೦೦. ನಿನ್ ಹಿಂಡಡಗಿ ಇಂಡೇಕೂಳ್ ಮಾಡ

"ಕುಟುಂಬದ ಎಲ್ಲರಿಗೂ ಸಾವು ಬರಲಿ" ಎಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

'ಹಿಂಡು ಅಡಗಿ' ಎಂಬ ಪದಕಂತೆಯು "ತಂದೆ ತಾಯಿ ಮಕ್ಕಳು ಮೊಮ್ಮಕ್ಕಳಿಂದ ತುಂಬಿದ ಒಟ್ಟು ಕುಟುಂಬದಲ್ಲಿ ಎಲ್ಲರಿಗೂ ಸಾವುನೋವುಗಳು ಉಂಟಾಗಿ, ಮನೆತನವೇ ಹಾಳಾಗಲಿ" ಎಂಬ ತಿರುಳನ್ನು ಹೊಂದಿದೆ.

'ಹಿಂಡೆಕೂಳು ಮಾಡುವುದು' ಎನ್ನುವುದು ವ್ಯಕ್ತಿಯ ಸಾವಿನ ನಂತರದ ದಿನಗಳಲ್ಲಿ ಮಾಡುವ ಒಂದು ಆಚರಣೆ. ಹೆಣವನ್ನು ಹೂಳಿದ/ಸುಟ್ಟ ಜಾಗದಲ್ಲಿ ಮೂರು/ಏಳು/ಹನ್ನೊಂದನೆಯ ದಿನದಂದು ಮಣ್ಣಿನ ದಿಬ್ಬವೊಂದನ್ನು ಕಟ್ಟಿ, ಅದರ ಮೇಲೆ ವಡೆ, ಕಜ್ಜಾಯ, ಚಿಕಿನುಂಡೆ, ಚಕ್ಕಲಿ ಮುಂತಾದ ಎಣ್ಣೆಯಿಂದ ಕರಿದ ತಿಂಡಿಗಳನ್ನು ಹಾಗೂ ಬಗೆ ಬಗೆಯ ಹಣ್ಣುಗಳ ತೊಳೆಗಳನ್ನು ಬಿಡಿಸಿ ಇಡುತ್ತಾರೆ. ಇದರ ಜತೆಗೆ ಅಕ್ಕಿ, ಜೀರಿಗೆ, ಅರಿಸಿನವನ್ನು ಹಾಕಿ ಮಸಣದಲ್ಲಿಯೇ ಬೇಯಿಸಿ ತಯಾರಿಸಿದ ಅನ್ನವನ್ನು ಮಾಡಿ, ಅದನ್ನು ದಿಬ್ಬದ ಮೇಲೆ ಹಾಕುತ್ತಾರೆ. ಈ ಬಗೆಯ ಅನ್ನವನ್ನು 'ಇಂಡೇಕೂಳು' ಎನ್ನುತ್ತಾರೆ. 'ಪಿಂಡದ ಕೂಳು' ಎಂಬ ಪದಕಂತೆಯು ಮಾತಿನ ಸನ್ನಿವೇಶದಲ್ಲಿ 'ಇಂಡೇಕೂಳು' ಎಂಬ ರೂಪದಲ್ಲಿ ಜೋಡುನುಡಿಯಾಗಿ ಉಚ್ಚಾರಣೆಗೊಂಡಿದೆ. ಕನ್ನಡ ನುಡಿಯಲ್ಲಿ 'ಪಿಂಡ' ಎಂದರೆ

‘ಮುದ್ದೆ; ಉಂಡೆ.’ ಕೂಳು ಎಂದರೆ ‘ಅನ್ನ; ಆಹಾರ.’ ಸಂಸ್ಕೃತ ನುಡಿಯಲ್ಲಿ ‘ಪಿಂಡ’ ಎಂದರೆ “ಸತ್ತವರಿಗೆ ನೀಡುವ ವಸ್ತುಗಳು” ಎಂಬ ತಿರುಳಿದೆ.

೨೦೧. ನಿನ್ ಹುಟ್ಟು ಉರ್ದೋಗ

ಸಾವು ಬರಲಿ ಎಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

“ಹುಟ್ಟು ಉರಿದುಹೋಗಲಿ” ಎಂಬ ಪದಕಂತೆಯು “ನಾನಾ ಬಗೆಯ ಸಂಕಟ, ವೇದನೆ, ನೋವುಗಳಿಂದ ಬದುಕು ಹಾಳಾಗಲಿ” ಎಂಬ ರೂಪಕದ ತಿರುಳಿನಲ್ಲಿ ಬಳಕೆಯಾಗಿದೆ. ಹುಟ್ಟು ಎಂಬ ಪದಕ್ಕೆ ‘ಜನನ, ಜೀವ, ಬದುಕು, ಬಾಳ್ವೆ’ ಎಂಬ ತಿರುಳಿದೆ.

೨೦೨. ನಿನ್ ಹೊಲ ಬರ್ಬೀಳ

“ಬೆಳೆ ಕೊಡುವ ಜಮೀನು ಬರಡು ಬೀಳಲಿ” ಎಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

‘ಬರ್ಬೀಳ’ ಎಂಬ ಪದಕಂತೆಯನ್ನು ‘ಬರ ಬೀಳಲಿ’ ಮತ್ತು ‘ಬರೆ ಬೀಳಲಿ’ ಎಂಬ ಎರಡು ಬಗೆಗಳಲ್ಲಿ ನಮ್ಮ ಹಳ್ಳಿಗರು ವಿವರಿಸುತ್ತಾರೆ.

೧. ‘ಬರ ಬೀಳಲಿ’ ಎಂಬ ಪದಕಂತೆಯು “ಮಳೆಬೆಳೆಯಿಲ್ಲದೆ ಹೊಲ ತಕ್ಕಲು ಬೀಳಲಿ” ಎಂಬ ತಿರುಳನ್ನು ಹೊಂದಿದೆ. ಉಳುಮೆಯಿಲ್ಲದೆ ನೂರೆಂಟು ಬಗೆಯ ಕಳೆ ಮತ್ತು ಮುಳ್ಳಿನ ಗಿಡಗಂಟೆಗಳಿಂದ ತುಂಬಿಕೊಂಡಿರುವ ಜಮೀನನ್ನು ತಕ್ಕಲು ಎಂದು ಕರೆಯುತ್ತಾರೆ.

೨. ‘ಬರೆ ಬೀಳಲಿ’ ಎಂಬ ಪದಕಂತೆಯು ‘ಬರೆ’ ಎಂಬ ಪದಕ್ಕೆ ‘ಗೆರೆ/ಗೀಟು’ ಎಂಬ ತಿರುಳಿದೆ. ದೊಡ್ಡ ಮಳೆ ಸುರಿದು, ಎಲ್ಲೆಡೆಯಲ್ಲೂ ಉಕ್ಕಿ ಹರಿದ ನೀರಿನ ಹೊಡೆತಕ್ಕೆ ಸಿಲುಕಿ, ಹೊಲದ ಮೇಲಿನ ಪದರದಲ್ಲಿರುವ ಸಾರವತ್ತಾದ ಹುಡಿಮಣ್ಣು ಮತ್ತು ಹೊಲದ ತುಂಬೆಲ್ಲಾ ಹರಡಿಕೊಳ್ಳುವಂತೆ ಚೆಲ್ಲಿರುವ ಗೊಬ್ಬರ ಗೋಡು ಕೊಚ್ಚಿಹೋಗಿ, ಗಟ್ಟಿಯಾದ ಬರಡು ನೆಲ ಉಳಿದು, ನೀರು ನುಗ್ಗಿ ಹರಿದು ಕೊರಕಲಾದ ಎಡೆಗಳಲ್ಲಿ ದೊಡ್ಡ ಗೆರೆಗಳು ಬೀಳುತ್ತವೆ. ಇಂತಹ ಹೊಲದಲ್ಲಿ ಹಾಕಿದ ಬಿತ್ತನೆ ಸರಿಯಾಗಿ ಮೊಳೆಯದೆ, ನೆಟ್ಟ ಪಯಿರು ಚೆನ್ನಾಗಿ ಬೆಳೆಯದೆ ಒಡ್ಡಿದ ಬೆಳೆ ಹಾಳಾಗುತ್ತದೆ.

೨೦೩. ನಿನ ಅಡ್‌ಗುಣಿಯಾಗ ಇಡ್ಲಿ

ಮದುವೆಯಾಗುವುದಕ್ಕೆ ಮುನ್ನವೇ ಸಾವು ಬರಲೆಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

"ಅಡ್ಡಲಾಗಿ ಗುಣಿಯಲ್ಲಿ ಇಡುವುದು" ಒಂದು ಬಗೆಯ ಆಚರಣೆ. ಬಡಗಣ ಕರ್ನಾಟಕದ ಕೆಲವು ಜಾತಿ ಸಮುದಾಯಗಳಲ್ಲಿ ಸತ್ತ ವ್ಯಕ್ತಿಯನ್ನು ಹೂಳುವುದಕ್ಕಾಗಿ ತೋಡುವ ಗುಣಿಯಲ್ಲಿ, ಹೆಣವನ್ನು ಕುಳ್ಳಿರಿಸಲು ಕಮಾನಿನ ಆಕಾರದ ಒಂದು ಗೂಡನ್ನು ಕೊರೆಯುತ್ತಾರೆ. ಇದನ್ನು 'ಮಾಡ' ಎಂದು ಕರೆಯುತ್ತಾರೆ. ಮದುವೆ ಯಾಗದೆ ಸಾವನ್ನಪ್ಪಿದ ವ್ಯಕ್ತಿಗೆ, ಈ ರೀತಿಯ ಮಾಡವನ್ನು ಮಾಡದೆ, ಗುಣಿಯಲ್ಲಿ ಹೆಣವನ್ನು ಉದ್ದುದ್ದಕ್ಕೆ ಅಡ್ಡಲಾಗಿ ಮಲಗಿಸಿ, ಮಣ್ಣಿನ ಹೆಂಟೆಗಳನ್ನು ಅಡಕುತ್ತಾರೆ.

೨೦೪. ನಿನ ಉಡ್ದಾರ ಹರಿಲಿ

ಸಾವು ಬರಲೆಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

ಬಡಗಣ ಕರ್ನಾಟಕದ ಕನ್ನಡ ನುಡಿ ಸಮುದಾಯದ ಕೆಲವು ಜಾತಿಗುಂಪು ಗಳಲ್ಲಿ ಗಂಡಸಿನ ನಡುವಿಗೆ ಕಟ್ಟಿರುವ ಉಡುದಾರವನ್ನು ಹರಿಯುವುದು ಅಂದರೆ ಕೀಳುವುದು ಒಂದು ಆಚರಣೆಯಾಗಿದೆ. ಈ ಆಚರಣೆಯನ್ನು ಎರಡು ಸನ್ನಿವೇಶಗಳಲ್ಲಿ ಮಾಡುತ್ತಾರೆ.

೧. ಗಂಡಸು ಸಾವನ್ನಪ್ಪಿದಾಗ, ಆತನ ಹೆಣವನ್ನು ಹೂಳುವ/ಸುಡುವ ಮುನ್ನ, ಹೆಣದ ನಡುವಿನಲ್ಲಿದ್ದ ಉಡುದಾರವನ್ನು ಕಿತ್ತು ಕುಣಿಗೆ/ಚಿತೆಗೆ ಹಾಕುತ್ತಾರೆ.

೨. ಹೆಂಗಸರು ಸಾವನ್ನಪ್ಪಿದಾಗ, ಆಕೆಯ ಹೆಣವನ್ನು ಹೂಳುವ/ಸುಡುವ ಸಮಯದಲ್ಲಿ, ಆಕೆಯ ಗಂಡನ ಉಡುದಾರವನ್ನು ಕೀಳುತ್ತಾರೆ. ಈ ರೀತಿ ಉಡುದಾರವನ್ನು ಹರಿಸಿಕೊಂಡ ಗಂಡಸು ಮತ್ತೆ ಮದುವೆಯಾಗಬಾರದೆಂಬ ನಿಲುವು ಜನ ಸಮುದಾಯದಲ್ಲಿತ್ತು. 'ಉಡೆ/ಉಡಿ' ಎಂದರೆ 'ಸೊಂಟ; ಟೊಂಕ; ನಡು.'

೨೦೫. ನಿನ ಉರ್ಗುಣ್ಗೆ ತಣ್ಣಗಾಗ್ಲಿ

"ಹಣ, ಗದ್ದುಗೆ, ಆಸ್ತಿಪಾಸ್ತಿಯ ಸಿರಿವಂತಿಕೆಯಿಂದ ಇತರರನ್ನು ಕೆಣಕಿ ಕಾಡುತ್ತಿರುವ, ಕಡೆಗಣಿಸುತ್ತಿರುವ, ನೋಯಿಸುತ್ತಿರುವ ಸೊಕ್ಕಿನ ನಡೆನುಡಿಗಳು ನಾಶವಾಗಲಿ" ಎಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

ಬಡಗಣ ಕರ್ನಾಟಕದ ಜನ ಸಮುದಾಯದ ಒಳನುಡಿಯ ಮಾತುಕತೆಗಳಲ್ಲಿ "ಉರಿಯುವಿಕೆ; ಉಪದ್ರವ; ಕಾಟ; ಕಿರುಕುಳ; ಅಬ್ಬರ" ಎಂಬ ತಿರುಳಿನಲ್ಲಿ 'ಉರುಣ್ಗಿ' ಎಂಬ ಪದ ಬಳಕೆಯಾಗುತ್ತಿದೆ. "ದಗದಗನೆ ಹತ್ತಿ ಉರಿಯುತ್ತಿರುವ ಬೆಂಕಿಯು, ಆಮೇಲೆ ಬೂದಿಯಾಗಿ ನೆಲಕ್ಕೆ ಉರುಳುವುದನ್ನು" ಒಂದು ರೂಪಕವಾಗಿ ಮಾಡಿಕೊಂಡು ವ್ಯಕ್ತಿಯ ಸೊಕ್ಕು ಅಡಗುವುದನ್ನು 'ಉರುಣ್ಗಿ ತಣ್ಣಗಾಗಲಿ' ಎಂಬ ಪದಕಂತೆಯು ಸೂಚಿಸುತ್ತಿದೆ.

೨೦೬. ನಿನ ಕುಳ್‌ಬಾನ ಒಟ್ಲಿ

"ಯಾವುದಾದರೊಂದು ಬಗೆಯ ಆಪತ್ತಿನಿಂದ ನಡಂತ್ರದಲ್ಲಿಯೇ ಅಂದರೆ ಆಯುಸ್ಸು ತುಂಬುವ ಮುನ್ನವೇ ಸಾವು ಬರಲಿ" ಎಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

ಮೋಟಾರು ವಾಹನಗಳ ಡಿಕ್ಕಿ, ಆತ್ಮಹತ್ಯೆ, ಕೊಲೆ, ಹೆರಿಗೆಯ ಸಮಯ ದಲ್ಲಾಗುವ ಏರುಪೇರು ಹಾಗೂ ಇನ್ನಿತರ ನೂರೆಂಟು ಬಗೆಯ ಅವಗಡದಿಂದ ವ್ಯಕ್ತಿಗೆ ಸಾವುಂಟಾದಾಗ, ಅಂತಹ ಹೆಣವನ್ನು ಹೂಳುವ ಬದಲು ಸುಡುತ್ತಾರೆ. ಹಸು ಇಲ್ಲವೇ ಎಮ್ಮೆಯ ಸಗಣಿಯನ್ನು ಅಂಗಯ್‌ಗಳಿಂದ ತಟ್ಟಿ, ಒಣಗಿಸಿ ತಯಾರಿಸಿದ ಬೆರಣಿಗಳನ್ನು ಹೆಣದ ಚಿತೆಯ ಮೇಲೆ ಒಂದರ ಮೇಲೊಂದು ಜೋಡಿಸಿ ಮೆದೆ ಹಾಕಿ, ಬೆಂಕಿಯನ್ನು ಕೊಡುತ್ತಾರೆ. ಇದನ್ನು ಬಡಗಣ ಕರ್ನಾಟಕದ ಒಳನುಡಿಯಲ್ಲಿ "ಕುಳ್‌ಬಾನ ಒಟ್ಟುವುದು" ಎನ್ನುತ್ತಾರೆ. ಒಣಗಿದ ಸಗಣಿ/ಬೆರಣಿ ಎಂಬ ತಿರುಳಿನ 'ಕುರುಳು' ಎಂಬ ಪದ ಉಚ್ಚಾರಣೆಯಲ್ಲಿ 'ಕುಳ್ಳು/ಕುಳ್' ಎಂದಾಗಿದೆ. 'ಬಾನ' ಎಂಬ ಪದಕ್ಕೆ 'ರಾಶಿ; ಗುಡ್ಡೆ; ಗುಪ್ಪೆ' ಎಂಬ ತಿರುಳಿದೆ.

೨೦೭. ನಿನ ಗಟ್ಬಾಯಿ ಕಟ್ಲಿ

ಸಾವು ಬರಲೆಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

ಬಡಗಣ ಕರ್ನಾಟಕದ ಕೆಲವು ಜಾತಿ ಗುಂಪುಗಳಲ್ಲಿ ವ್ಯಕ್ತಿಯು ಸಾವನ್ನಪ್ಪಿದಾಗ, ಹೆಣವನ್ನು ಮಸಣಕ್ಕೆ ಕೊಂಡೊಯ್ಯುವುದಕ್ಕೆ ಮುನ್ನ ಬರುವ ಜನರೆಲ್ಲರೂ ನೋಡಲು ಅನುವಾಗುವಂತೆ ಹೆಣವನ್ನು ಗೋಡೆಗೆ ಒರಗಿಸಿ ಕುಳ್ಳಿರಿಸುತ್ತಾರೆ. ಗೋಡೆಗೆ ಗುಂಟಗಳನ್ನು ಬಡಿದು, ಹೆಣದ ತಲೆಯು ಕೆಳಬಾಗದೆ ನೆಟ್ಟಗಿರಲೆಂದು ಬಟ್ಟೆಯ ತುಂಡುಗಳಿಂದ ಕೆಳತುಟಿಯ ಎಡೆಯಲ್ಲಿ ಬಾಯಂಚಿನ ಗದ್ದವನ್ನು ಸೇರಿಸಿಕೊಂಡು ಬಿಗಿದು ಗುಂಟಕ್ಕೆ ಕಟ್ಟುತ್ತಾರೆ. 'ಕಡೆ; ಕೊನೆ; ತುದಿ; ಅಂಚು' ಎಂಬ

ತಿರುಳಿನ 'ಕಟ' ಎಂಬ ಪದಕ್ಕೆ, 'ಬಾಯಿ' ಎಂಬ ಪದ ಸೇರಿ 'ಕಟಬಾಯಿ' ಎಂಬ ಜೋಡುಪದ ರೂಪುಗೊಂಡಿದೆ. ಬಡಗಣ ಕರ್ನಾಟಕದ ಒಳನುಡಿಯಲ್ಲಿ ಇದು 'ಗಟಬಾಯಿ' ಎಂಬ ರೂಪದಲ್ಲಿ ಉಚ್ಚಾರಣೆಗೊಂಡಿದೆ.

೨೦೮. ನಿನ ಚಂಡಿ ಚುಂಟ್ಲಿ

"ಮಕ್ಕಳಾಗದೆ ವ್ಯಕ್ತಿಯ ಕುಟುಂಬ ಕೊನೆಗೊಳ್ಳಲಿ' ಎಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

ಬಡಗಣ ಕರ್ನಾಟಕದ ಒಳನುಡಿಯಲ್ಲಿ 'ಚಂಡಿ' ಎಂದರೆ ಮೊಳಕೆಯೊಡೆದು ಚಿಗುರಿ ಬೆಳೆಯುತ್ತಿರುವ ಗಿಡದ ಸುಳಿ. 'ಚಿವುಂಟು' ಎಂಬ ಪದ ಜನರ ಆಡು ಮಾತಿನಲ್ಲಿ 'ಚುಂಟು' ಎಂದು ಉಚ್ಚಾರಣೆಗೊಂಡಿದೆ. ಸೊಗಸಾಗಿ ಬೆಳೆದು ಹೂಬಿಟ್ಟು ಹೀಚುಕಾಯಿ ಹಣ್ಣುಗಳಿಂದ ಕಂಗೊಳಿಸಬೇಕಾಗಿದ್ದ ಗಿಡದ ಚಂಡಿಯನ್ನು ಚಿವುಟಿ ತೆಗೆದಾಗ, ಉಗುರುಗಳ ನಂಜಿನಿಂದ ಸುಳಿಯಿದ್ದ ಎಡೆ ಸೀದುಹೋಗಿ ಎಳೆಯ ಗಿಡ ಸಾಯುತ್ತದೆ. ಇದನ್ನು ಒಂದು ರೂಪಕವನ್ನಾಗಿ ಮಾಡಿಕೊಂಡು "ವ್ಯಕ್ತಿಯ ತಲೆಮಾರು ಮಕ್ಕಳು ಮೊಮ್ಮಕ್ಕಳು ಮರಿಮಕ್ಕಳಿಂದ ಮುಂದುವರಿಯದೆ, ಒಂದೇ ತಲೆಗೆ ಮೊಟಕಾಗಲಿ" ಎಂಬುದನ್ನು ಈ ಶಾಪದ ನುಡಿ ಚಿಸುತ್ತದೆ. ಮಾತಿನ ಸನ್ನಿವೇಶಗಳಲ್ಲಿ 'ಚಂಡಿ/ಚೆಂಡಿ' ಎಂಬ ಪದ 'ತಲೆ/ತೆನೆ' ಎಂಬ ತಿರುಳುನಲ್ಲಿಯೂ ಬಳಕೆಯಾಗುತ್ತದೆ.

೨೦೯. ನಿನ ದೀಪ ಅಡವಿಯಾಗ ಇಡಲಿ

ಸಾವು ಬರಲೆಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

ಬಡಗಣ ಕರ್ನಾಟಕದ ಒಳನುಡಿಯಲ್ಲಿ 'ಅಡವಿ' ಎಂಬ ಪದಕ್ಕೆ "ಹೆಣಗಳನ್ನು ಹೂಳುವ ಇಲ್ಲವೇ ಸುಡುವ ನೆಲೆಯಾದ ಮಸಣ/ಸುಡುಗಾಡು" ಎಂಬ ಮತ್ತೊಂದು ತಿರುಳಿದೆ. ವ್ಯಕ್ತಿಯ ಹೆಣವನ್ನು ಒಪ್ಪ ಮಾಡಿದ ಎಡೆಯಲ್ಲಿ ಮೂರು/ಏಳು/ಹನ್ನೊಂದನೆಯ ದಿನದಂದು ಮಣ್ಣಿನ ದಿಬ್ಬ ಇಲ್ಲವೇ ಕಲ್ಲಿನ ಕಟ್ಟೆಯನ್ನು ಕಟ್ಟಿ, ತಿಂಡಿ ತಿನಿಸುಗಳನ್ನಿಟ್ಟು, ಸತ್ತ ವ್ಯಕ್ತಿಯ ಜೀವದ ಸಂಕೇತವಾಗಿ ದೀಪವನ್ನು ಹಚ್ಚಿಡುತ್ತಾರೆ. ಕೆಲವರು ಸತ್ತ ವ್ಯಕ್ತಿಯ ಮೇಲಣ ನೆನಪಿಗಾಗಿ ಹುಣ್ಣಿಮೆ, ಅಮಾವಾಸ್ಯೆ ಹಾಗೂ ಸಾವನ್ನಪ್ಪಿ ವರುಶ ತುಂಬಿದ ದಿನಗಳಂದು ಅಡವಿಯಲ್ಲಿ ಹಣತೆಯನ್ನು ಬೆಳಗಿಸುತ್ತಾರೆ.

೨೧೦. ನಿನ ದೀಪಕ್ಕ ದಿಕ್ ಇಲ್ದಂಗಾಗ್ಲಿ

"ಕುಟುಂಬದ ಎಲ್ಲಾ ವ್ಯಕ್ತಿಗಳಿಗೂ ಸಾವು ಬರಲಿ" ಎಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

ಮನೆಯಲ್ಲಿ ದಿನದಿನವೂ ಹಚ್ಚುವ ದೀಪದ ಕುಡಿಯಿಂದ ಹೊರಹೊಮ್ಮುವ ಬೆಳಕು, ಆ ಮನೆಯವರೆಲ್ಲರೂ ಚೆನ್ನಾಗಿ ಬಾಳಿಬದುಕುತ್ತಿರುವುದಕ್ಕೆ ಮತ್ತು ಮಕ್ಕಳು ಮೊಮ್ಮಕ್ಕಳು ಮರಿಮಕ್ಕಳಿಂದ ಮನೆತನ ಮುಂದುವರಿಯುತ್ತಿರುವುದಕ್ಕೆ ಸಂಕೇತ ವಾಗಿದೆ. ದೀಪವನ್ನು ಹಚ್ಚುವುದಕ್ಕೆ ಮನೆಯಲ್ಲಿ ಯಾರೊಬ್ಬರೂ ಜೀವಂತವಾಗಿ ಉಳಿಯದಂತಾಗಿ, ವ್ಯಕ್ತಿಯ ಕುಟುಂಬ ಹಾಳಾಗಲಿ ಎಂಬುದನ್ನು ಈ ಶಾಪ ಸೂಚಿಸುತ್ತದೆ.

೨೧೧. ನಿನ ನೆಳ್ಳಾಗ ಬಡ್ದು ಚಳ್ಳಮ್ ಬಡೀಲಿ

ಸಾವು ಬರಲೆಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

ಬಡಗಣ ಕರ್ನಾಟಕದ ಕೆಲವು ಜಾತಿ ಗುಂಪುಗಳಲ್ಲಿ ವ್ಯಕ್ತಿಯು ಸಾವನ್ನಪ್ಪಿದಾಗ, ಹೆಣವನ್ನು ಮಸಣಕ್ಕೆ ಕೊಂಡೊಯ್ಯುವದಕ್ಕೆ ಮುನ್ನ ಬರುವ ಜನರೆಲ್ಲರೂ ನೋಡಲು ಅನುವಾಗುವಂತೆ ಹೆಣವನ್ನು ಮನೆಯ ಮುಂದಿನ ಪಡಸಾಲೆಯ ಗೋಡೆಗೆ ಒರಗಿಸಿ ಕುಳ್ಳಿರಿಸುತ್ತಾರೆ. ದೇಹ ಅತ್ತಿತ್ತ ವಾಲಿಕೊಂಡು ಬೀಳದಿರಲೆಂದು ಮತ್ತು ತಲೆಯ ಕೆಳಬಾಗದೆ ನೆಟ್ಟಗಿರಲೆಂದು ಗೋಡೆಗೆ ಗುಂಟಗಳನ್ನು ಬಡಿದು, ಬಟ್ಟೆಯ ತುಂಡುಗಳಿಂದ ಹೆಣವನ್ನು ಬಿಗಿದು ಕಟ್ಟುತ್ತಾರೆ. ಈ ರೀತಿಯ ಆಚರಣೆಯನ್ನು 'ನೆರಳಿನಲ್ಲಿ ಬಡಿಯುವುದು' ಎನ್ನುತ್ತಾರೆ.

ವ್ಯಕ್ತಿಯು ಸಾವನ್ನಪ್ಪಿದ ದಿನವೇ ಒಪ್ಪಮಾಡಲಾಗದೆ, ಮರುದಿನ ಮಾಡ ಬೇಕಾದ ಸನ್ನಿವೇಶ ಉಂಟಾದಾಗ, ಅಂದಿನ ಇರುಳು ಕಳೆದು ಬೆಳಕು ಹರಿಯುವ ತನಕ ಕೆಲವರು ಕಯ್ಗಳಿಂದ ಚಳ್ಳಮ್ ಅನ್ನು ಬಡಿದು ತಾಳ ಹಾಕುತ್ತಾ, ತತ್ವಪದ ಮತ್ತು ದೇವರ ಹಾಡುಗಳನ್ನು ಹೇಳುತ್ತಿರುತ್ತಾರೆ. ತಾಳ ಹಾಕಲು ಬಳಸುವ ಕಂಚಿನ ಲೋಹದಿಂದ ಮಾಡಿದ ತಟ್ಟೆಯಾಕಾರದ ಎರಡು ಚಿಕ್ಕ ಉಪಕರಣಗಳಿಗೆ 'ಚಳ್ಳಮ್' ಎಂದು ಹೆಸರು.

೨೧೨. ನಿನ ಬೇವಿನ ತಪ್ಪಲದಾಗ ಒಯ್ಯಲಿ

"ಕೊಲೆ ಇಲ್ಲವೇ ಮೋಟಾರು ವಾಹನಗಳ ಡಿಕ್ಕಿ ಮುಂತಾದ ಅವಡಗಳಿಂದ

ಆಯುಸ್ಸು ತುಂಬುವುದಕ್ಕೆ ಮುನ್ನವೇ ಸಾವು ಬರಲಿ" ಎಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

ಯಾವುದೇ ಬಗೆಯ ಅವಗಡಗಳಲ್ಲಿ ಬಿದ್ದ ಪೆಟ್ಟಿನಿಂದಾಗಿ ಸತ್ತ ವ್ಯಕ್ತಿಗೆ ಗಾಯಗಳಾಗಿ, ನೆತ್ತರ ಹರಿದು ಹೆಪ್ಪುಗೊಂಡು ಮಯ್ಗೆಲ್ಲಾ ಅಂಟಿಕೊಂಡಿರುತ್ತದೆ. ಇಂತಹ ಹೆಣವನ್ನು ಆಸ್ಪತ್ರೆಗೆ ಸಾಗಿಸುವಾಗ ಮತ್ತು ಆಸ್ಪತ್ರೆಯಿಂದ ಮಸಣಕ್ಕೆ ಕೊಂಡೊಯ್ಯುವಾಗ ಹೆಣದ ಮಯ್ ಮೇಲೆ ಬೇವಿನ ಸೊಪ್ಪಿನ ಕಂತೆಗಳನ್ನು ಅಡಕುತ್ತಾರೆ. ಹೆಣದ ವಾಸನೆ ಹಾಗೂ ಅಂಟುರೋಗದ ನಂಜಿನ ಅಣುಗಳು ಸುತ್ತಮುತ್ತಲಿದ್ದ ವರಿಗೆ ಸೋಂಕದಂತೆ ತಡೆಯಲೆಂದು ಈ ರೀತಿ ಬೇವಿನ ಸೊಪ್ಪನ್ನು ಹಾಕುತ್ತಾರೆ. 'ತಪ್ಪಲು/ತೊಪ್ಪಲು' ಎಂದರೆ 'ಮರಗಿಡಗಳ ಎಲೆ/ಸೊಪ್ಪು.'

೨೧೩. ನಿನ ಮನಿ ದೀಪ ಬಡೀಲಿ

"ಕುಟುಂಬದ ಎಲ್ಲಾ ವ್ಯಕ್ತಿಗಳಿಗೂ ಸಾವು ಬರಲಿ" ಎಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

ಮನೆಯಲ್ಲಿ ನಿತ್ಯವೂ ಹಚ್ಚುವ ದೀಪದ ಬೆಳಕು, ಆ ಮನೆಯವರೆಲ್ಲರೂ ಬಾಳಿ ಬದುಕುತ್ತಿರುವುದನ್ನು ಸಂಕೇತಿಸುತ್ತದೆ. ಬೆಳಗುತ್ತಿರುವ ದೀಪವು ನಂದಿ ಹೋಗಿ, ಮನೆಯಲ್ಲಿ ಕತ್ತಲು ತುಂಬಿಕೊಳ್ಳುವುದನ್ನು ಒಂದು ರೂಪಕವನ್ನಾಗಿ ಮಾಡಿಕೊಂಡು ಈ ಶಾಪದ ನುಡಿಯನ್ನು ಕಟ್ಟಲಾಗಿದೆ. 'ಬಡಿಯಲಿ' ಎಂಬ ಪದಕ್ಕೆ "ಹಾಳಾಗಲಿ; ನಾಶವಾಗಲಿ; ಕೊನೆಗೊಳ್ಳಲಿ" ಎಂಬ ತಿರುಳಿದೆ.

೨೧೪. ನಿನ ಮನಿ ಮಸುಟ್ಗಿ ಆಗ್ಲಿ

"ಮಕ್ಕಳು ಮೊಮ್ಮಕ್ಕಳು ಮರಿಮಕ್ಕಳಿಂದ ಮುಂದುವರಿದು ಬಾಳಬೇಕಾದ ಮನೆಯಲ್ಲಿ ಸಾವುನೋವುಗಳು ಉಂಟಾಗಿ, ಮನೆಯನ್ನು ನೋಡಿಕೊಂಡು ಮುನ್ನಡೆಸುವವರೇ ಇಲ್ಲದಂತಾಗಿ, ಮನೆ ಪಾಳು ಬಿದ್ದು ಮಸಣದಂತಾಗಲಿ" ಎಂಬ ಉದ್ದೇಶದಿಂದ ಹಾಕಿರುವ ಶಾಪದ ನುಡಿ.

ಬಡಗಣ ಕರ್ನಾಟಕ ಒಳನುಡಿಯನ್ನು ಹೆಣಗಳನ್ನು ಹೂಳುವ/ಸುಡುವ ಜಾಗವನ್ನು 'ಮಸುಟ್ಗಿ/ಮಸುಂಟ್ಗೆ' ಎಂದು ಕರೆಯುತ್ತಾರೆ. ಸಂಸ್ಕೃತದ 'ಶ್ಮಶಾನ' ಎಂಬ ಪದ ಪ್ರಾಕೃತ ನುಡಿಯಲ್ಲಿ 'ಮಸಾಣ' ಎಂದು ಉಚ್ಚಾರಗೊಂಡಿದೆ. ಪ್ರಾಕೃತದಿಂದ ಕನ್ನಡಕ್ಕೆ ಬಂದಾಗ, ತೆಂಕಣ ಕರ್ನಾಟಕದ ಒಳನುಡಿಯಲ್ಲಿ 'ಮಸಣ/ಮಸಾಣ' ಎನ್ನುವ ರೂಪಗಳಲ್ಲಿ ಬಳಕೆಗೊಂಡಿದೆ.

೨೧೫. ನಿನ ಮನಿಗಿ ಮುಳ್ ಬಡೀಲಿ

ಸಾವು ಬರಲೆಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

ಬಡಗಣ ಕರ್ನಾಟಕ ಕೆಲವು ಜನ ಸಮುದಾಯಗಳಲ್ಲಿ "ಮನೆಯ ಬಾಗಿಲಿಗೆ ಮುಳ್ಳನ್ನು ಬಡಿಯುವುದು" ಒಂದು ಆಚರಣೆಯಾಗಿದೆ. ಕುಟುಂಬಕ್ಕೆ ಸೇರಿದ ವ್ಯಕ್ತಿಯು ಸಾವನ್ನಪ್ಪಿದಾಗ ಹೆಣವನ್ನು ಒಪ್ಪ ಮಾಡಿ, ಮೂರು/ಏಳು/ಹನ್ನೊಂದನೆಯ ದಿನದ ತಿಥಿ ಕಾರ್ಯಗಳನ್ನು ಮುಗಿಸಿದ ನಂತರ, ಮನೆಯ ಹಿರಿಯರು ಪಂಚಾಂಗ ಓದುವವರ ಇಲ್ಲವೇ ತಮ್ಮ ಜಾತಿ ಗುರುಗಳ ಬಳಿಗೆ ಹೋಗಿ, ವ್ಯಕ್ತಿಯು ಸಾವನ್ನಪ್ಪಿರುವುದು ಒಳ್ಳೆಯ ಗಳಿಗೆಯಲ್ಲೋ ಇಲ್ಲವೇ ಕೆಟ್ಟ ಗಳಿಗೆಯಲ್ಲೋ ಎಂಬುದನ್ನು ತಿಳಿದುಕೊಳ್ಳಲು ಮುಂದಾಗುತ್ತಾರೆ. ಏಕೆಂದರೆ ವಾರದ ಏಳು ದಿನಗಳಲ್ಲಿ ಹಾಗೂ ದಿನದ ಹಗಲಿನ ಹನ್ನೆರಡು ಗಂಟೆಗಳಲ್ಲಿ ಒಳ್ಳೆಯ ಮತ್ತು ಕೆಟ್ಟ ಗಳಿಗೆಗಳು ಇವೆಯೆಂಬ ನಂಬಿಕೆಯು ಜನಮನದಲ್ಲಿದೆ. ವ್ಯಕ್ತಿಯು ಜೀವ ಬಿಟ್ಟ ಗಳಿಗೆಯು ಕೆಟ್ಟದ್ದಾಗಿದ್ದರೆ ಜೋಯಿಸರ ಅಥವಾ ಜಾತಿಗುರುಗಳ ಆದೇಶದಂತೆ ಮನೆಯಲ್ಲಿನ ಎಲ್ಲಾ ಸಾಮಾನುಗಳನ್ನು ಹೊರ ತಂದು, ಗಾಳಿ ಬೆಳಕು ಆಡದಂತೆ ಕಿಟಕಿ ಬಾಗಿಲುಗಳನ್ನು ಮುಚ್ಚಿ, ಬೀಗವನ್ನು ಜಡಿದು, ಮುಂಬಾಗಿಲ ಮುಂದೆ ಕಾರೆ ಮುಳ್ಳು ಇಲ್ಲವೇ ಬಾರೆ ಮುಳ್ಳನ್ನು ರಾಶಿ ರಾಶಿಯಾಗಿ ಅಡಕಿ, ಮೂರು, ಆರು ತಿಂಗಳು ಮನೆಯನ್ನು ತೊರೆಯುತ್ತಾರೆ. ಈ ಸಮಯದಲ್ಲಿ ಸತ್ತ ವ್ಯಕ್ತಿಯ ಆತ್ಮ ಮನೆಯೊಳಗೆ ನೆಲೆಸಿರುತ್ತದೆ ಎಂಬ ನಂಬಿಕೆಯಿದೆ. ಇತ್ತೀಚಿನ ದಿನಗಳಲ್ಲಿ ಈ ಬಗೆಯ ಆಚರಣೆಯ ಕಡಿಮೆಯಾಗುತ್ತಿದೆ.

೨೧೬. ನಿನ ಮೀಸಿಗಿ ಹೆಂಟಿ ಏರಿಸಲಿ

ಸಾವು ಬರಲೆಂಬ ಉದ್ದೇಶದಿಂದ ಗಂಡಸಿಗೆ ಹಾಕುವ ಶಾಪದ ನುಡಿ.

ಬಡಗಣ ಕರ್ನಾಟಕದ ಕೆಲವು ಜಾತಿಗುಂಪುಗಳಲ್ಲಿ ಹೆಣವನ್ನು ಹೂಳುವುದಕ್ಕಾಗಿ ತೋಡುವ ಗುಣಿಯಲ್ಲಿ, ಅದನ್ನು ಕುಳ್ಳಿರಿಸಲು ಬೇಕಾದ ಕಮಾನಿನ ಆಕಾರದ ಒಂದು ಗೂಡನ್ನು ಮಾಡುತ್ತಾರೆ. ಇದನ್ನು 'ಮಾಡ' ಎನ್ನುತ್ತಾರೆ. ಮಾಡದಲ್ಲಿ ಹೆಣವನ್ನು ಕುಳ್ಳಿರಿಸಿ ನಂತರ, ಮಣ್ಣಿನ ಹೆಂಟಗಳನ್ನು ಒಂದೊಂದಾಗಿ ಹೆಣದ ಮಯ್ಯ ಮೇಲೆ ಏರಿಸುತ್ತಾರೆ. ಮಣ್ಣಿನ ಮುದ್ದೆ/ಉಂಡೆಯನ್ನು ಹೆಂಟಿ ಎಂದು ಕರೆಯುತ್ತಾರೆ. ತೆಂಕಣ ಕರ್ನಾಟಕದ ಒಳನುಡಿಯಲ್ಲಿ ಇದನ್ನು ಹೆಂಟೆ ಎನ್ನುತ್ತಾರೆ.

೨೧೭. ನಿನ ಮುಂಡಾಸು ಕಡೀಲಿ

"ವ್ಯಕ್ತಿಯ ತಲೆಮಾರು ಮಕ್ಕಳು ಮೊಮ್ಮಕ್ಕಳು ಮರಿ ಮಕ್ಕಳಿಂದ ಮುಂದುವರಿಯದೆ, ಒಂದೇ ತಲೆಗೆ ಕೊನೆಗೊಳ್ಳುವಂತಾಗಲಿ" ಎಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

ಬಡಗಣ ಕರ್ನಾಟಕದ ಕನ್ನಡ ನುಡಿ ಸಮುದಾಯದ ಕೆಲವು ಜಾತಿಗುಂಪುಗಳಲ್ಲಿ "ಮುಂಡಾಸು ತೊಡಿಸುವುದು" ಒಂದು ಬಗೆಯ ಆಚರಣೆ. ಕುಟುಂಬದ ಹೊಣೆಗಾರಿಕೆಯನ್ನು ಹೊತ್ತು, ಅದರ ಆಗುಹೋಗುಗಳನ್ನು ನೋಡಿಕೊಳ್ಳುತ್ತಿದ್ದ ಗಂಡಸು ಸಾವನ್ನಪ್ಪಿದಾಗ, ಹೆಣವನ್ನು ಹೂಳುವ ಇಲ್ಲವೇ ಸುಡುವ ಮುನ್ನ ಹೆಣದ ತಲೆಗೆ ತೊಡಿಸಿದ್ದ ಮುಂಡಾಸನ್ನು ಅಲ್ಲಿದ್ದ ಹಿರಿಯರಲ್ಲೊಬ್ಬರು ತೆಗೆದು, ಆ ಕುಟುಂಬಕ್ಕೆ ಸೇರಿದ ಮತ್ತೊಬ್ಬ ಗಂಡಸಿಗೆ ತಲೆಗೆ ತೊಡಿಸಿ "ಇನ್ನು ಮುಂದೆ ಈ ಕುಟುಂಬವನ್ನು ಮುನ್ನಡೆಸಿಕೊಂಡು ಹೋಗುವ ಹೊಣೆ ನಿನ್ನದು" ಎಂದು ಹೇಳಿ, ಒಳ್ಳೆಯದಾಗಲೆಂದು ಹರಸುತ್ತಾರೆ. ಸತ್ತ ಗಂಡಸಿಗೆ ಮಕ್ಕಳಿಲ್ಲದಿದ್ದರೆ, ಹೆಣದ ಮುಂಡಾಸನ್ನು ತೆಗೆದು ಕುಣಿಗೆ ಇಲ್ಲವೇ ಚಿತೆಗೆ ಹಾಕುತ್ತಾರೆ. 'ಮುಂಡಾಸು' ಎಂದರೆ 'ತಲೆಯುಡಿಗೆ; ರುಮಾಲು; ಪೇಟ.' 'ಕಡಿಯಲಿ' ಎಂದರೆ 'ಕತ್ತರಿಸಿ ಹೋಗಲಿ; ತುಂಡಾಗಲಿ.'

೨೧೮. ನಿನ ಸಂತಾರ್ರ್ಲಿ

"ಮಕ್ಕಳನ್ನು ಹಡೆಯದಂತಾಗಲಿ, ಮನೆತನವು ಇನ್ನಿಲ್ಲದಂತಾಗಲಿ, ವ್ಯಕ್ತಿಯ ತಲೆಮಾರು ಮಕ್ಕಳು ಮೊಮ್ಮಕ್ಕಳು ಮರಿಮಕ್ಕಳಿಂದ ಮುಂದುವರಿಯದೆ ಒಂದೇ ತಲೆಗೆ ಮೊಟಕುಗೊಳ್ಳಲಿ" ಎಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

"ಸಂತಾನ ಆರಲಿ" ಎಂಬ ಶಾಪದ ನುಡಿಯು ಮಾತಿನ ಸನ್ನಿವೇಶಕ್ಕೆ ತಕ್ಕಂತೆ ಬಹು ಬಗೆಯ ತಿರುಳನ್ನು ಹೊಂದುತ್ತದೆ.

೨೧೯. ನಿನ ಸತ್ತಾನಾಶವಾಗ್ಲಿ

"ವ್ಯಕ್ತಿಗೆ ಮಕ್ಕಳಾಗದೆ ಕುಟುಂಬವು ಒಂದೇ ತಲೆಮಾರಿನಲ್ಲಿ ಕೊನೆಯಾಗುವುದರ ಜತೆಗೆ ವ್ಯಕ್ತಿಯ ಆಸ್ತಿಪಾಸ್ತಿಗಳೆಲ್ಲವೂ ನಾಶವಾಗಲಿ" ಎಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

‘ಸತ್ತಾ’ ಮತ್ತು ‘ನಾಶ’ ಎಂಬ ಸಂಸ್ಕೃತ ಪದಗಳು ಹಿಂದಿ ಮತ್ತು ಮರಾಠಿ ನುಡಿ ಸಮುದಾಯದ ಜನರ ಮಾತುಕತೆಯಲ್ಲಿ “ಇರುವುದೆಲ್ಲವೂ ನಾಶವಾಗುವುದು” ಎಂಬ ತಿರುಳುಳ್ಳ ‘ಸತ್ತಾನಾಶ್’ ಎಂಬ ಪದಕಂತೆಯಾಗಿ ಬಳಕೆಯಲ್ಲಿವೆ. ಸತ್ತಾ ಎಂಬ ಪದಕ್ಕೆ “ಇರುವಿಕೆ; ಅಸ್ತಿತ್ವ; ಶಕ್ತಿ” ಎಂಬ ತಿರುಳಿದೆ. ಹಿಂದಿ ಮತ್ತು ಮರಾಠಿ ನುಡಿ ಸಮುದಾಯಗಳ ಒಡನಾಟವಿರುವ ಬಡಗಣ ಕರ್ನಾಟಕದ ಕನ್ನಡದ ಒಳನುಡಿಯಲ್ಲಿ ಈ ಶಾಪ ಬಳಕೆಯಲ್ಲಿದೆ.

೨೨೦. ನಿನ ಹಲಗಿ ಹಚ್ಚಲಿ

ಸಾವು ಬರಲೆಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

ಸತ್ತಿರುವ ವ್ಯಕ್ತಿಯ ಹೆಣವನ್ನು ಒಪ್ಪಮಾಡಲು ತೊಡಗಿದಾಗ, ಮಯ್ಯಿಗೆ ನೀರನ್ನು ಎರೆಯುವಾಗಿನಿಂದ ಹಿಡಿದು ಮಸಣಕ್ಕೆ ಕೊಂಡೊಯ್ದು ಗುಣಿಯಲ್ಲಿಡುವ ಇಲ್ಲವೇ ಸುಡುವ ತನಕ ಬಹು ಬಗೆಯ ವಾದ್ಯಗಳನ್ನು ನುಡಿಸುತ್ತಾರೆ. ಆ ವಾದ್ಯಗಳಲ್ಲಿ ದನ ಇಲ್ಲವೇ ಎಮ್ಮೆಯ ತೊಗಲಿನಿಂದ ಮಾಡಿರುವ ಹಲಗೆಯು ಒಂದಾಗಿದೆ. ತೆಂಕಣ ಕರ್ನಾಟಕದ ಒಳನುಡಿಯಲ್ಲಿ ‘ತಮಟೆ’ ಎಂದು ಹೆಸರಿಸುವ ವಾದ್ಯವನ್ನು, ಬಡಗಣ ಕರ್ನಾಟಕದ ಒಳನುಡಿಯಲ್ಲಿ ‘ಹಲಗಿ’ ಎನ್ನುತ್ತಾರೆ.

೨೨೧. ನಿನಗ ಎಕ್ಕದ ಗಿಡಕ್ಕ ಬಾಸಿಂಗ ಕಟ್ಟಲಿ

“ಮದುವೆಯಾಗುವುದಕ್ಕೆ ಮುನ್ನವೇ ಸಾವು ಬರಲಿ” ಎಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

‘ಎಕ್ಕದ ಗಿಡಕ್ಕೆ ಬಾಸಿಂಗವನ್ನು ಕಟ್ಟುವುದು’ ಒಂದು ಆಚರಣೆ. ಬಡಗಣ ಕರ್ನಾಟಕದ ಕೆಲವು ಜಾತಿ ಸಮುದಾಯಗಳಲ್ಲಿ ಯಾವುದೇ ವ್ಯಕ್ತಿಯು ಮದುವೆ ಯಾಗದೆ ಸತ್ತರೆ, ಹೆಣವನ್ನು ಒಪ್ಪ ಮಾಡುವಾಗ ಎಕ್ಕದ ಗಿಡದ ಒಂದು ಟೊಂಗೆಯನ್ನು ಮುರಿದು ತರುತ್ತಾರೆ. ಸತ್ತ ವ್ಯಕ್ತಿಯು ಗಂಡಾಗಿದ್ದರೆ ಆ ಟೊಂಗೆಗೆ ಹೆಣ್ಣಿನ ಉಡುಗೆಯನ್ನು ಇಲ್ಲವೇ ಸತ್ತ ವ್ಯಕ್ತಿಯು ಹೆಣ್ಣಾಗಿದ್ದರೆ ಗಂಡಿನ ಉಡುಗೆಯನ್ನು ತೊಡಿಸಿ, ಬಾಸಿಂಗವನ್ನು ಕಟ್ಟಿ, ಹೆಣದ ಪಕ್ಕದಲ್ಲಿಟ್ಟು, ಅರಿಸಿನ ಬೆರೆಸಿದ ಅಕ್ಕಿಕಾಳನ್ನು ಹಾಕಿ ಮದುವೆ ಮಾಡುತ್ತಾರೆ. ಅನಂತರ ಹೆಣದ ಜತೆಯಲ್ಲಿ ಟೊಂಗೆಯನ್ನು ಹೂಳುತ್ತಾರೆ ಇಲ್ಲವೇ ಸುಡುತ್ತಾರೆ. ಈ ರೀತಿ ಮದುವೆಯ ಆಚರಣೆಯನ್ನು ಮಾಡದಿದ್ದರೆ, ಸತ್ತ ವ್ಯಕ್ತಿಯ ಜೀವಕ್ಕೆ ಇಹಲೋಕದಿಂದ ಬಿಡುಗಡೆಯಿಲ್ಲವೆಂಬ ನಂಬಿಕೆ ಜನಮನದಲ್ಲಿದೆ.

೨೨೨. ನಿನಗ ಮರಗಮ್ಮನ ಹಾವಳಿ ಬರ್ಲಿ

ಸಾವು ಬರಲೆಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

ಬಡಗಣ ಕರ್ನಾಟಕದ ಹಳ್ಳಿಗಾಡಿನಲ್ಲಿ ನೆಲೆಸಿರುವ ಕನ್ನಡ ನುಡಿ ಸಮುದಾಯದಲ್ಲಿ ಮರಗಮ್ಮ ಎಂಬ ಊರದೇವತೆಯನ್ನು "ಒಲಿದರೆ ಕಾಪಾಡುವ/ಮುನಿದರೆ ಕೊಲ್ಲುವ" ಅಳವುಳ್ಳ ದೇವತೆಯೆಂದು ತಿಳಿದಿದ್ದಾರೆ. ಯಾವುದೇ ವ್ಯಕ್ತಿ/ಸಮುದಾಯ ಮಾಡುವ ಆಚರಣೆಗಳಲ್ಲಿ ಏನಾದರೂ ಕುಂದುಕೊರತೆ, ತಪ್ಪುಗಳು ಉಂಟಾದಾಗ ಮುನಿದುಕೊಳ್ಳುವ ಮರಗಮ್ಮನು ಸಿಡುಬು, ಕಾಲರ, ಪ್ಲೇಗು ಮುಂತಾದ ಅಂಟು ರೋಗಗಳ ಹಾವಳಿಯಿಂದ ತೊಂದರೆಗಳನ್ನು ಕೊಟ್ಟು ಜನರನ್ನು ಬಲಿತೆಗೆದುಕೊಳ್ಳುತ್ತಾಳೆ ಎಂಬ ನಂಬಿಕೆಯು ಜನಮನದಲ್ಲಿ ಬೇರೂರಿದೆ. "ನಿನ ಮರ್ಗಿ ನುಂಗ್ಲಿ" ಎಂಬ ಶಾಪದ ನುಡಿಯು ಇದೇ ತಿರುಳಿನಲ್ಲಿ ಬಳಕೆಯಲ್ಲಿದೆ. ಬೀದರ್ ಜಿಲ್ಲೆಯ ಕನ್ನಡ ಒಳನುಡಿಯಲ್ಲಿ ಪ್ಲೇಗ್ ರೋಗವನ್ನು 'ಮರ್ಗಿಬ್ಯಾನಿ' ಎನ್ನುತ್ತಾರೆ.

೨೨೩. ನಿನಗ ಸೆಟಿಬ್ಯಾನಿ ಬರ್ಲಿ

'ಫಿಟ್ಸ್' ರೋಗವನ್ನು ಬಡಗಣ ಕರ್ನಾಟಕದ ಒಳನುಡಿಯಲ್ಲಿ 'ಸೆಟಿಬ್ಯಾನಿ' ಎಂದು ಕರೆಯುತ್ತಾರೆ.

'ಸೆಟಿಬ್ಯಾನಿ' ಎಂಬ ಜೋಡುನುಡಿಯಲ್ಲಿ "ಸೆಟೆದುಕೊಳ್ಳುವ ಬೇನೆ" ಎಂಬ ಪದಗಳಿವೆ. ಸೆಟೆ ಎಂದರೆ 'ಮುದುಡು; ನಡುಗು; ಕುಗ್ಗು.' ಬೇನೆ ಎಂದರೆ ರೋಗ. ಈ ರೋಗಕ್ಕೆ ಗುರಿಯಾದ ವ್ಯಕ್ತಿಯು ಇದ್ದಕ್ಕಿದ್ದಂತೆ ಮಯ್ ಮೇಲಿನ ಅರಿವನ್ನು ಕಳೆದುಕೊಂಡು ಎಲ್ಲೆಂದರಲ್ಲಿ ಬೀಳುತ್ತಾನೆ. ಕಯ್ ಕಾಲುಗಳು ಸೆಳೆತಕ್ಕೆ ಒಳಗಾಗಿ, ಇಡೀ ಮಯ್ಯೆಲ್ಲವೂ ನಡುಗತೊಡಗುತ್ತದೆ. ನಾಲಗೆಯನ್ನು ಕಚ್ಚಿಹಿಡಿದು ರೋಗಿಯು ನೆಲದ ಮೇಲೆ ಬಿದ್ದು ಒದ್ದಾಡುತ್ತಿರುವಾಗ ಬಾಯಲ್ಲಿ ನೊರೆಯು ಒಸರ ತೊಡಗುತ್ತದೆ. ಮೆದುಳಿನ ನರಮಂಡಲಕ್ಕೆ ಹೋಗುತ್ತಿದ್ದ ನೆತ್ತರು ಮತ್ತು ಆಮ್ಲಜನಕದ ಪ್ರಮಾಣದಲ್ಲಿ ಕೊರತೆಯುಂಟಾದಾಗ, ಈ ಬಗೆಯ ಇರುವಿಕೆಗೆ ರೋಗಿಯು ತುತ್ತಾಗುತ್ತಾನೆ. ತೆಂಕಣ ಕರ್ನಾಟಕದ ಒಳನುಡಿಯಲ್ಲಿ ಈ ರೋಗವನ್ನು 'ಮೊಲ್ಲಾಗರ' ಎಂಬ ಹೆಸರಿನಿಂದ ಕರೆಯುತ್ತಾರೆ.

೨೨೪. ನಿನ್ನ ಒಂಟ್ ಬಡ್ಗೇಲಿ ಹೊತ್ಕೊಂಡೋಗ

ಮದುವೆಯಾಗುವುದಕ್ಕೆ ಮುನ್ನವೇ ಸಾವು ಬರಲೆಂಬ ಉದ್ದೇಶದಿಂದ ಹಾಕುವ ಶಾಪ.

ಮದುವೆಗೆ ಮುನ್ನ ಸಾವನ್ನಪ್ಪುವ ವ್ಯಕ್ತಿಯ ಹೆಣವನ್ನು ಮಸಣಕ್ಕೆ ಸಾಗಿಸಲು ನಾಲ್ಕು ಜನ ಹೊತ್ತುಕೊಂಡು ಹೋಗುವ ನಾಲ್ಕು ಬಡಿಗೆಗಳಿಂದ ಕೂಡಿದ ಚಟ್ಟವನ್ನು ಕಟ್ಟುವುದಿಲ್ಲ. ಇದಕ್ಕೆ ಬದಲಾಗಿ ಒಂದು ಬಿದಿರಿನ ಬಡಿಗೆಗೆ ದೊಡ್ಡ ಬಟ್ಟೆಯನ್ನು ತೊಟ್ಟಿಲಂತೆ ಬಿಗಿದು ಕಟ್ಟಿ ಅದರಲ್ಲಿ ಹೆಣವನ್ನಿಟ್ಟುಕೊಂಡು, ಒಂಟಿ ಬಡಿಗೆಯನ್ನು ಇಬ್ಬರು ಹಿಂದೆ ಮುಂದೆ ಹೊತ್ತುಕೊಂಡು ಹೋಗುತ್ತಾರೆ. ಇತ್ತೀಚಿನ ವರುಗಳಲ್ಲಿ ಈ ಬಗೆಯ ಆಚರಣೆಯು ಕಡಿಮೆಯಾಗಿದೆ. 'ಬಡಿಗೆ' ಎಂದರೆ 'ಉದ್ದನೆಯ ಕೋಲು ಇಲ್ಲವೇ ದೊಣ್ಣೆ.'

೨೨೫. ನಿನ್ನ ವಾಕರ್ಬಟ್ಟೇಲಿ ಹೊತ್ಕೊಂಡೋಗ

ಸಾವು ಬರಲಿ ಎಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

ಕೊಳೆಕಸ ಹುಳುಹುಪ್ಪಟೆಗಳಿಂದ ಬಗ್ಗಡವಾಗಿರುವ ನೀರನ್ನು ಕುಡಿದಾಗ, ಹಸವಲ್ಲದ ಕೂಳನ್ನು ಉಂಡಾಗ ಹೊಟ್ಟೆಯೊಳಕ್ಕೆ ಸೇರುವ ಕಾಲರ ರೋಗಾಣು ಗಳಿಂದ ನರಳುವ ರೋಗಿಯು ಒಂದೇ ಸಮನೆ ಉಚ್ಚಲು ಮತ್ತು ಕಕ್ಕಲು ತೊಡಗುತ್ತಾನೆ. ಕೆಲವೇ ಗಂಟೆಗಳಲ್ಲಿ ಹೊಟ್ಟೆಯೊಳಗಿನ ಕರುಳಿನಲ್ಲಿದ್ದ ನೀರಿನ ಅಂಶವೆಲ್ಲವೂ ಹೊರಬಂದು, ಸರಿಯಾದ ಆರೈಕೆ ದೊರೆಯದಿದ್ದಾಗ ರೋಗಿಯು ಸಾವನ್ನಪ್ಪುತ್ತಾನೆ. ಅಂಟುರೋಗವಾದ ಕಾಲರ ಹಬ್ಬಿದ ಹಳ್ಳಿಗಳಲ್ಲಿ ಒಂದು ಹೆಣವನ್ನು ಮಣ್ಣು ಮಾಡಿ ಬರುವುದರೊಳಗೆ, ಇನ್ನು ನಾಲ್ಕಾರು ಮಂದಿ ರೋಗಕ್ಕೆ ಬಲಿಯಾಗಿ ಸಾಯುತ್ತಿದ್ದರು, ಈ ರೀತಿ ಸತ್ತವರ ಹೆಣಕ್ಕೆ ಬಿಸಿನೀರನ್ನು ಎರೆದು, ಸಿಂಗಾರ ಮಾಡಿ, ಚಟ್ಟದಲ್ಲಿ ಸಾಗಿಸಲು ಸಮಯ ಸಿಗದೇ, ಹೆಣವನ್ನು ಇರುವ ರೀತಿಯಲ್ಲಿಯೇ ಅಂದರೆ ಮಯ್ ಮೇಲೆಲ್ಲಾ ಕಕ್ಕಿಕೊಂಡು ಗಲೀಜಾಗಿದ್ದ ಬಟ್ಟೆಯನ್ನೂ ಕಳಚದೆ ಮಸಣಕ್ಕೆ ಹೊತ್ತೊಯ್ಯುತ್ತಿದ್ದರು. 'ವಾಂತಿ, ವಮನ, ಕಕ್ಕುವುದು, ಹೊರಹಾಕುವುದು' ಎಂಬ ತಿರುಳಿನ 'ಓಕರ' ಎಂಬ ಪದಕ್ಕೆ, 'ಬಟ್ಟೆ' ಎಂಬ ಪದ ಸೇರಿ 'ಓಕರಬಟ್ಟೆ' ಎಂಬ ಜೋಡುಪದ ರೂಪುಗೊಂಡು, ಮಾತುಕತೆಗಳಲ್ಲಿ ಉಚ್ಚಾರಣೆಗೊಳ್ಳುವಾಗ 'ವಾಕರ್ಬಟ್ಟೆ' ಎಂದಾಗಿದೆ. ಇದೇ ಬಗೆಯ ಉದ್ದೇಶವುಳ್ಳ **"ನಿಂಗೆ ವಾಂತ್ಬೇದಿ ತಗಳ"** ಮತ್ತು **"ನಿಂಗೆ ಉಚ್ಚೂದು ಕಕ್ಕೂದು ಬರ"** ಎಂಬ ಶಾಪಗಳು ಬಳಕೆಯಲ್ಲಿವೆ.

೨೨೬. ನೀನ್ ಉಂಡ್ಸಯ್ತ ಹೋಗ

"ಬಸುರಿಯಾಗಿದ್ದಾಗ ಸಾವು ಬರಲಿ" ಎಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

'ಉಂಡೆಯ ಸಹಿತ' ಎಂಬ ಪದಕಂತೆಯು ಬೆಳೆಯುತ್ತಿರುವ ಮಗುವನ್ನು ತನ್ನೊಳಗೆ ಉಳ್ಳ ಬಸುರಿಯ ಉಬ್ಬಿದ ಹೊಟ್ಟೆಯನ್ನು ಸೂಚಿಸುತ್ತದೆ. ಒಳಗೆ ತಿರುಳುಳ್ಳ ದುಂಡನೆಯ ಆಕಾರದ ಉಂಡೆಯನ್ನು ಒಂದು ರೂಪಕವನ್ನಾಗಿ ಮಾಡಿಕೊಂಡು ಈ ಶಾಪದ ನುಡಿಯನ್ನು ಕಟ್ಟಲಾಗಿದೆ.

೨೨೭. ನೀನ್ ಒರ್ಗೋಗ

ಸಾವು ಬರಲಿ ಎಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

"ಒರಗಿ ಹೋಗಲಿ" ಎಂಬ ಪದಕಂತೆಯು ಹೆಣವನ್ನು ಮಸಣಕ್ಕೆ ಸಾಗಿಸುವುದಕ್ಕಾಗಿ ಮಾಡುವ ತಯಾರಿಯನ್ನು ತಿಳಿಸುತ್ತದೆ. ಬಿದಿರಿನ ದಬ್ಬೆಯನ್ನು ಸೀಳಿ, ಗಳವನ್ನು ತುಂಡು ಹಾಕಿಕೊಂಡು, ತೆಂಗಿನ ನಾರಿನ ಉರಿಯಿಂದ ಅವುಗಳನ್ನು ಬಿಗಿದು, ಹೆಣವನ್ನು ಹೊತ್ತೊಯ್ಯುವುದಕ್ಕಾಗಿ ಚಟ್ಟವನ್ನು ಕಟ್ಟುತ್ತಾರೆ. ಚಟ್ಟದೊಳಗೆ ಹೆಣವನ್ನು ಚಕ್ಕಳಬಕ್ಕಳ ಹಾಕಿ ಅಂದರೆ ಕಾಲುಗಳನ್ನು ಮಡಿಸಿ ಕುಳ್ಳಿರಿಸುತ್ತಾರೆ. ಅನಂತರ ಚಟ್ಟದ ಹಿಂದುಗಡೆಗೆ ಬೆನ್ನನ್ನು ಒರಗಿಸಿ, ಹೆಣವು ಅತ್ತಿತ್ತ ಹೊರಳಿ ಬೀಳದಂತೆ ಕವೆಗೋಲನ್ನಿಟ್ಟು ಉರಿಗಳಿಂದ ಬಿಗಿದು ಕಟ್ಟುತ್ತಾರೆ. ಮಾತಿನ ಸನ್ನಿವೇಶಗಳಲ್ಲಿ 'ಒರಗು' ಎಂಬ ಪದವು "ನೆಮ್ಮು; ಆತುಕೊಳ್ಳು; ಸಾಯುವುದು" ಎಂಬ ತಿರುಳಿನಲ್ಲಿಯೂ ಬಳಕೆಗೊಳ್ಳುತ್ತದೆ.

೨೨೮. ನೀನ್ ತುಂಬಿ ತುಳುಕ್ದೆ ಹೋಗ

"ಅರೆಕೊರೆಗಳಿಂದಲೇ ಬಾಳ್ವೆ ಕೊನೆಗೊಳ್ಳಲಿ" ಎಂಬ ಉದ್ದೇಶದಿಂದ ಹಾಕುವ ಶಾಪನುಡಿ.

'ತುಂಬಿ ತುಳುಕುವುದು' ಎಂಬ ನುಡಿಗಟ್ಟಿಗೆ "ಯಾವುದೇ ವಿಚಾರದಲ್ಲಿ ಹೆಚ್ಚಳದಿಂದ ಕೂಡಿರುವುದು" ಎಂಬ ತಿರುಳಿದೆ. ಈ ಬಯ್ಗುಳದ ಸನ್ನಿವೇಶದಲ್ಲಿ "ತುಂಬಿ ತುಳುಕದೆ ಹೋಗಲಿ" ಎಂಬ ಪದಕಂತೆಯು "ವ್ಯಕ್ತಿಯು ತನ್ನ ಕುಟುಂಬದಲ್ಲಿ ಮಕ್ಕಳು ಮೊಮ್ಮಕ್ಕಳು ಮರಿಮಕ್ಕಳೊಡನೆ ಒಲವಿನಿಂದ ಜತೆಗೂಡಿ ಮತ್ತು ಆಸ್ತಿ

ಪಾಸ್ತಿ ಹಾಗೂ ಹಣಕಾಸಿನಲ್ಲಿ ಚೆನ್ನಾಗಿ ಅನುಕೂಲವನ್ನು ಹೊಂದಿ ನೆಮ್ಮದಿಯಿಂದ ಬಾಳದಂತಾಗಲಿ ಇಲ್ಲವೇ ಅರೆ ಆಯಸ್ಸಿನಲ್ಲೇ ಸಾಯುವಂತಾಗಲಿ" ಎಂಬ ರೂಪಕದ ತಿರುಳಿನಲ್ಲಿ ಬಳಕೆಯಾಗಿದೆ.

೨೨೯. ನೀನ್ ನೆಟ್ಮರ ನಿನ್ತಲೆ ಮ್ಯಾಲೆ ಬೀಳ

"ಹತ್ತಿರದವರಿಂದಲೇ ಆಪತ್ತು ಬರಲಿ" ಎಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

ಹೆಚ್ಚಿನ ಒಲವು ಮತ್ತು ಆಸೆಯಿಂದ ಹೆತ್ತು ಹೊತ್ತು ಸಾಕಿ ಸಲಹಿ ಬೆಳೆಸಿದ ನಿನ್ನ ಮಕ್ಕಳೇ ಅಥವಾ ಸಂಕಟದ ಸಮಯದಲ್ಲಿ ಹೆಚ್ಚಿನ ನೆರವನ್ನು ಪಡೆದ ವ್ಯಕ್ತಿಗಳೇ ನಿನಗೆ ಎದುರಾಗಿ ತಿರುಗಿಬಿದ್ದು ಕೇಡನ್ನು ಬಗೆಯುವಂತಾಗಲಿ ಎನ್ನುವ ಇಂಗಿತವನ್ನು "ತಲೆಯ ಮೇಲೆ ಮರ ಬೀಳುವ" ರೂಪಕವು ಒಳಗೊಂಡಿದೆ.

೨೩೦. ನೀನ್ ಬಾಳು ತಾವು ಬಾಳ್ದೇ ಹೋಗ

"ಗಂಡನ ಮನೆಯಲ್ಲಿ ನೆಮ್ಮದಿಯ ಬಾಳು ದೊರೆಯದಂತಾಗಲಿ" ಎಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

ಕನ್ನಡ ನುಡಿ ಸಮುದಾಯಕ್ಕೆ ಸೇರಿದ ಹೆಚ್ಚಿನ ಕುಟುಂಬಗಳಲ್ಲಿ "ಮದುವೆಯಾಗಿ ಗಂಡನ ಮನೆಯಲ್ಲಿ ಚೆನ್ನಾಗಿ ಒಗೆತನ ಮಾಡುವುದೇ ಹೆಣ್ಣಿನ ಬದುಕಿನ ಗುರಿ" ಎಂಬ ನಿಲುವಿದೆ. ಈ ನಿಲುವನ್ನು "ಕೊಟ್ಟ ಹೆಣ್ಣು ಕುಲಕ್ಕೆ ಹೊರಗು" ಎಂಬ ಗಾದೆ ಮಾತು ಎತ್ತಿಹಿಡಿದಿದೆ. "ಬಾಳು ತಾವು" ಎಂಬ ಪದಕಂತೆಯು ಈ ಸನ್ನಿವೇಶದಲ್ಲಿ "ಜೀವನವಿಡೀ ಬಾಳ್ವೆಯನ್ನು ನಡೆಸಬೇಕಾದ ಗಂಡನ ಮನೆಯಲ್ಲಿ" ಎಂಬ ತಿರುಳನ್ನು ಹೊಂದಿದೆ. 'ತಾವು' ಎಂದರೆ ಜಾಗ, ನೆಲೆ.

೨೩೧ ನೀನ್ ಮುಂಡೆಯಾಗಿ ಮೂರ್ದಾರೀಲಿ ಬಾಯ್ಬುಡ

ಗಂಡನಿಗೆ ಸಾವು ಬರಲಿ ಎಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

ಸಾವನ್ನಪ್ಪಿದ ವ್ಯಕ್ತಿಯ ಹೆಣವನ್ನು ಚಟ್ಟದಲ್ಲಿಟ್ಟುಕೊಂಡು ಮನೆಯಿಂದ ಮಸಣಕ್ಕೆ ಕೊಂಡೊಯ್ಯುವಾಗ, ಊರ ಹೆಬ್ಬಾಗಿಲನ್ನು ದಾಟಿದ ನಂತರ ಮೊದಲು ಸಿಗುವ ಮೂರು ದಾರಿಗಳು ಕೂಡುವ ಜಾಗದಲ್ಲಿ ಹೊತ್ತಿರುವ ಚಟ್ಟವನ್ನು ಕೆಳಗಿಟ್ಟು, ಮತ್ತೊಮ್ಮೆ ಹೆಣಕ್ಕೆ ಪೂಜೆ ಮಾಡಿ, ಚಟ್ಟವನ್ನು ಮುಂದೆ ಹೊತ್ತಿದ್ದ

ಇಬ್ಬರು ಈಗ ಹಿಂದಕ್ಕೆ ಬಂದು ಹೆಗಲು ಕೊಡುತ್ತಾರೆ. ಹಿಂದೆಯಿದ್ದ ಇಬ್ಬರು ಮುಂದೆ ಹೋಗುತ್ತಾರೆ. ಈ ಆಚರಣೆಯನ್ನು 'ಹೆಗಲು ಬದಲಾಯಿಸಿ ಕೊಳ್ಳುವುದು' ಎನ್ನುತ್ತಾರೆ. ಈ ಸನ್ನಿವೇಶದಲ್ಲಿ ಗಂಡನನ್ನು ಕಳೆದುಕೊಂಡಿರುವ ಹೆಣ್ಣು ಅಗಲಿಕೆಯ ಸಂಕಟದಿಂದ ಬೇಯುತ್ತಾ, ತನ್ನ ಒಡಲಿನ ನೋವನ್ನು ಮಾತುಗಳ ಮೂಲಕ ತೋಡಿಕೊಳ್ಳುತ್ತಾ ಕಂಬನಿಗರೆಯುತ್ತಾಳೆ.

೨೩೨. ನೀನ್ ಹತ್ತೂರು ಸುತ್ತುದ್ರೂ ಬತ್ಲೇನೆ ಬರ

"ಯಾವುದೇ ಬಗೆಯ ದುಡಿಮೆ, ಪ್ರಯತ್ನ, ಹೋರಾಟವನ್ನು ಮಾಡಿದರೂ ಬಾಳಿನಲ್ಲಿ ಏಳಿಗೆಯನ್ನು ಕಾಣದಂತಾಗಲಿ" ಎಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

ಈ ಶಾಪದ ಸೊಲ್ಲಿನಲ್ಲಿರುವ ಎರಡು ಪದಕಂತೆಗಳು ರೂಪಕಗಳಾಗಿ ಬಳಕೆಯಾಗಿವೆ. "ಹತ್ತು ಊರುಗಳನ್ನು ಸುತ್ತುವುದು" ಎನ್ನುವುದು ಹಣಕಾಸಿನ ಗಳಿಕೆಗಾಗಿ ಮಾಡುವ ಬಗೆಬಗೆಯ ಕೆಲಸಗಳಿಗೆ ರೂಪಕವಾಗಿದ್ದರೆ, 'ಬತ್ತಲೆಯಲ್ಲೇ ಬರಲಿ' ಎಂಬ ಪದಕಂತೆಯು ಏನೊಂದನ್ನು ಗಳಿಸಲಾಗದೆ ಬಡತನಲ್ಲಿಯೇ ಬೇಯುವುದನ್ನು ಸೂಚಿಸುತ್ತದೆ. 'ಬತ್ತಲೆ/ಬೆತ್ತಲ' ಎಂಬ ಪದಕ್ಕೆ 'ಬರಿದಾಗಿರುವುದು; ಮಯ್ ಮೇಲೆ ಉಡುಗೆ ತೊಡುಗೆಯಿಲ್ಲದಿರುವುದು" ಎಂಬ ತಿರುಳಿದೆ.

೨೩೩. ನೀನ್ ಹೆತ್ ಮಕ್ಳ ಹುತ್ತುಕ್ಕಾಕ

ಹೆತ್ತ ಮಕ್ಕಳು ಉಳಿಯದೆ ಕೂಡಲೇ ಸಾಯಲಿ ಎಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

ಹುಟ್ಟಿದ ಮಗು ನಾಲ್ಕಾರು ದಿನಗಳಲ್ಲಿಯೇ ಸಾವನ್ನಪ್ಪಿದಾಗ 'ಅದಕ್ಕೆ ಚಟ್ಟಕಟ್ಟಿ' ಅದರಲ್ಲಿ ಹೆಣವನ್ನಿಟ್ಟು ಹೊತ್ತುಕೊಂಡು ಹೋಗಿ ಹೂಳುವುದಿಲ್ಲ ಇಲ್ಲವೇ ಸುಡುವುದಿಲ್ಲ. ಇದಕ್ಕೆ ಬದಲಾಗಿ ಮಗುವಿನ ಹೆಣವನ್ನು ಒಂದು ಬಾಳೆ ಎಲೆಯ ಮೇಲಿಟ್ಟುಕೊಂಡು, ಅದನ್ನು ಕಯ್ಗಳಲ್ಲೆ ಎತ್ತಿಕೊಂಡು ಹೋಗಿ, ಹಾವಿನ ಹುತ್ತವೊಂದನ್ನು ಬಗೆದು, ಹುತ್ತದ ಬಾಯಲ್ಲಿ ಇಲ್ಲವೇ ಬುಡದಲ್ಲಿ ಹೆಣವನ್ನು ಹೂಳಿ, ಅದರ ಮೇಲೆ ಅಂಕೋಲೆ ಕಡ್ಡಿ ಮತ್ತು ಇತರ ಮುಳ್ಳಿನ ಕೋಲುಗಳನ್ನು ಜೋಡಿಸಿ, ಮುಳ್ಳಿನ ಮೇಲೆ ದಪ್ಪನೆಯ ಕಲ್ಲು ದಿಂಡುಗಳನ್ನು ಇಡುತ್ತಾರೆ. ನಾಯಿ ನರಿಗಳು ಹೆಣವನ್ನು ಕಿತ್ತು ತಿನ್ನದಿರಲೆಂದು ಮುಳ್ಳು ಮತ್ತು ಕಲ್ಲನ್ನು ಹೇರುತ್ತಾರೆ.

೨೩೪. ನೀನ್ ಹೆಸ್ರು ಹೇಳ್ದೆ ಹೋಗ

“ನಾಲ್ಕು ಮಂದಿಯ ನಡುವೆ ತಲೆಯೆತ್ತಿ ಬಾಳದಂತಾಗಲಿ, ಉಣಲು ಉಡಲು ಒಂದೆಡೆ ನೆಲೆಯಾಗಿ ನಿಲ್ಲಲು ಗತಿಯಿಲ್ಲದೆ ಹಾಳಾಗಿ ಹೋಗಲಿ” ಎಂಬ ಉದ್ದೇಶದಿಂದ ಹಾಕುವ ಶಾಪದ ನುಡಿ.

‘ಹೆಸರನ್ನು ಹೇಳುವುದು’ ಎಂಬ ಪದಕಂತೆಯು ಕನ್ನಡಿಗರ ಮಾತುಕತೆಯಲ್ಲಿ “ಆಸ್ತಿಪಾಸ್ತಿಯನ್ನು ಹೊಂದಿ, ಹಣಕಾಸಿನಲ್ಲಿ ಅನುಕೂಲವಿದ್ದು, ಒಳ್ಳೆಯ ನಡೆನುಡಿಗಳಿಂದ ಬಾಳುತ್ತ, ಸುತ್ತಮುತ್ತಣ ಜನರಿಂದ ಮೆಚ್ಚುಗೆಯನ್ನು ಪಡೆಯುವುದು” ಎಂಬ ತಿರುಳಿನಲ್ಲಿ ಬಳಕೆಯಾಗುತ್ತಿದೆ. ‘ಹೆಸರನ್ನು ಹೇಳದಂತಾಗಲಿ’ ಎಂದರೆ “ಒಳ್ಳೆಯ ರೀತಿಯಲ್ಲಿ ಬಾಳ್ವೆಯನ್ನು ಮಾಡಲು ಅವಕಾಶಗಳೇ ದೊರೆಯದಂತಾಗುವುದು”.

ಸಂಗ್ರಹಿಸಿದ ಬಯ್ಗುಳಗಳು

ಆರೋಪದ ಬಯ್ಗುಳಗಳು

೧. ಅಂಜುಬುರಕ
೨. ಅಂಟ್ ನನ್ಮಗ
೩. ಅಕ್ಕಲ್ ಬಡ್ಡಿಹೈದ.
೪. ಅಕ್ನಾತಿ ಬಡ್ಡಿಹೈದ
೫. ಅಟಾರಾಜ್ಯ ಕೆಡ್ಸುದ್ ಮುಂಡೆ
೬. ಅಟ್ಟಿಕ್ಕಿದ ಮ್ಯಾಲೆ ಬಟ್ಟಿಕ್ಕೊ ನನ್ ಸವ್ತಿ
೭. ಅಡಕಸ್ಬಿ
೮. ಅಡ್ಡಕಸ್ಬಿ
೯. ಅಡಾಸ್ ನನ್ಮಗ
೧೦. ಅಡ್ನಾಡಿ
೧೧. ಅಡ್ನಾಡಿಗೆ ಹುಟ್ದೋನು.
೧೨. ಅಡ್ಮೋರೆ ಬಡ್ಡಿಹೈದ
೧೩. ಅನ್ನ ತಿಂದ ಮನೇಗೆ ಕನ್ನ ಹಾಕು ಸೂಳೆಮಕ್ಳು
೧೪. ಅನ್ನ ತಿಂದ ಮನೇಗೆ ಮಣ್ಣು ಹಿಡಿಯೋ ಸೂಳೆಮಕ್ಳು
೧೫. ಅನಿಷ್ಟುದ್ದು
೧೬. ಅನಿಷ್ಟದ ಮುಂಡೆಮಗ
೧೭. ಅನುಕ್ ಮುಂಡೆ
೧೮. ಅಪ್ಪನ ಗುರುತು ಕಾಣ್ದೇ ಹುಟ್ದೋನು.
೧೯. ಅಬ್ಬೆಪರಿ ಬಡ್ಡಿಹೈದ
೨೦. ಅಮಾಸೆಲಿ ಹುಟ್ಟಿದ ನನ್ಮಗ
೨೧. ಅರ್ನಾಡಿ ನನ್ಮಗ
೨೨. ಅರ್ಮೆಡ್ಡೆ ಬಡ್ಡಿಹೈದ
೨೩. ಅರಬೆರಕೆಗೆ ಹುಟ್ದೋನು.
೨೪. ಅಲ್ವಂಗ್ದೋನು

೨೫. ಅಲಾಲ್ಕೋರ
೨೬. ಅಲಾಲ್ ಟೋಪಿ ನನ್ಮಗ
೨೭. ಅಲ್ಕಾ ನನ್ಮಗ
೨೮. ಅಲ್ಕಾ ಮುಂಡೆ
೨೯. ಅಲ್ಕಾ ಸುವರ್
೩೦. ಅದೊಂದು ದಂಡ ಪಿಂಡ
೩೧. ಆರ್ ತಿಂಗಳ್ಗೆ ಹುಟ್ದೋನು.
೩೨. ಇಟ್ಟಾಡುನ್ಗೆ ಹುಟ್ದೋನು.
೩೩. ಇಬ್ಬಂದಿಗೆ ಹುಟ್ದೋನು.
೩೪. ಉಂಡ್ ಮನೆ ಕರ ಸಾಯ್ಲಿ ಅನ್ನೋ ಬಡ್ಡಿಹೈಕ್ಳು
೩೫. ಉಂಡ್ ಮನೆ ಗಳ ಎಣ್ಸು ಸೂಳೆಮಕ್ಳು
೩೬. ಉಂಡ್ ಮನೇಗೆ ಹೂಸ್ಬುಟ್ಟು, ತುಂಬಿದ ಕೆರೆಗೆ ಕಲ್ ಎತ್ತಾಕೊ ಬಡ್ಡಿಹೈಕ್ಳು
೩೭. ಉರ್ಸಿಂಗಿ
೩೮. ಊರ್ ಕೆಡ್ಸುದ್ ಮುಂಡೆ
೩೯. ಊರೇಸಿ
೪೦. ಊರ್ ಹೇಸಿದ ನನ್ ಸವ್ತಿ
೪೧. ಎಂಜ್ಲು ನನ್ಮಗ
೪೨. ಎಂಜ್ಲುಗೆ ಬಾಯ್ ಬಾಯ್ ಬುಡು ನನ್ಮಕ್ಳು
೪೩. ಎಂಜ್ಲುಗೆ ಹುಟ್ಟಿದ ಬಡ್ಡಿಹೈದ
೪೪. ಎಡವಟ್ಟ
೪೫. ಎಡಬಿಡಂಗಿ
೪೬. ಎಮ್ಮೆಗೆ ಹುಟ್ಟಿದ ಬಡ್ಡಿಹೈದ
೪೭. ಎರಡು ತಲೆ ಹಾವು
೪೮. ಎಲ್ಲಾ ಬುಟ್ ನಿಂತೀರು ಬಡ್ಡಿ
೪೯. ಏಳು ತಿಂಗಳ್ಗೆ ಹುಟ್ದೋನು.
೫೦. ಒರಟು ಮುಂಡೇದೆ
೫೧. ಕಂಜಾತಿ ನನ್ಮಗ
೫೨. ಕಂಜಾತಿ ಮುಂಡೆ
೫೩. ಕಂಜಾತಿಗೆ ಹುಟ್ಟಿದ ಸೂಳೆಮಗ
೫೪. ಕಂಜೂಸ್
೫೫. ಕಮ್ ತಿಳುವಳ್ಕೆ ಬಡ್ಡಿಮಗ

೫೬. ಕಂತ್ರಿ
೫೭. ಕಂದನ್ನ ಕೂದು ಖಂಡ ತಿಂದ ಬಡ್ಡಿ
೫೮. ಕಚಡಾ ನನ್ಮಗ
೫೯. ಕಚ್ಚೆ ಹರುಕ
೬೦. ಕಚ್ಚಗಳ್ಳ
೬೧. ಕತ್ತೆ ನನ್ಮಗ
೬೨. ಕಲ್ಲುಕಚ್ಚು ಮುಂಡೆ
೬೩. ಕಲಕೇತಿ
೬೪. ಕಳ್ ಮುಂಡೆ
೬೫. ಕಿಮ್ಮಳಿ ಮುಂಡೆ
೬೬. ಕಿತಾಪತಿ ಬಡ್ಡಿಹೈದ
೬೭. ಕಿತ್ತೋದ್ ನನ್ಸವ್ತಿ
೬೮. ಕಿತ್ತೋದ್ ಮುಂಡೆ
೬೯. ಕಿಪ್ಗೆಡ್ಸ್ ನನ್ಮಗ
೭೦. ಕಿರಾತಕ
೭೧. ಕಿವಿ ಕಿತ್ ನನ್ ಸವ್ತಿ
೭೨. ಕೀರನ ಮುಸುಡಿ ಬಡ್ಡಿಮಗ
೭೩. ಕೀಳ್ಜಾತಿ ಮುಂಡೆ
೭೪. ಕೀಳ್ಗಿಟ್ ನನ್ ಸವ್ತಿ
೭೫. ಕುತಂತ್ರಿ
೭೬. ಕೂಪ್ಳಿ ಮುಂಡೆ
೭೭. ಕೆಚ್ಗಾರ್ ಲೌಡಿ
೭೮. ಕೆಟ್ ಮುಂಡೆ
೭೯. ಕೇಡ್ಗ ಬುದ್ದಿ ಮುಂಡೆಮಗ
೮೦. ಕೈಗೊಬ್ಬನಿಗೆ ಕಾಲ್ಗೊಬ್ಬನಿಗೆ ಹುಟ್ದೋನು
೮೧. ಕೋಣ್ ನನ್ ಸವ್ತಿ
೮೨. ಕೋತಿ
೮೩. ಕೋಡಂಗಿ
೮೪. ಗಂಡ್ಸತನವಿಲ್ಲದ ಬಡ್ಡಿಹೈದ
೮೫. ಗಂಡ ಬಿಟ್ಟ ನನ್ ಸವ್ತಿ
೮೬. ಗುಂಡ್ರುಗೋಬಿ

೮೭. ಗುಡ್ಸೆಟ್ಟಿ
೮೮. ಗೂನ
೮೯. ಚಂಗ್ಲು
೯೦. ಚಪ್ಪಂಡ್ ಕಿತ್ತೋಳು
೯೧. ಚಿತ್ತೆಬೆದೆ ನಕ್ಷತ್ರಕ್ಕೆ ಹುಟ್ದೋಳು
೯೨. ಚಿತ್ರಾಂಗಿಣಿ
೯೩. ಚಿನಾಲಿ
೯೪. ಜನಮನ ಸೇರದ ಬಡ್ಡಿಹೈದ
೯೫. ಜಾತ್ಕೆಟ್ ನನ್ ಸವ್ತಿ
೯೬. ಜೀನ
೯೭. ಜುಜುಬಿ ನನ್ಮಗ
೯೮. ತಂಟ್ರ
೯೯. ತಟವಾಣಿ
೧೦೦. ತರಲ್ಕಾಂಟಿ
೧೦೧. ತರಲೆ
೧೦೨. ತಲ್ವಾತ್ಕ
೧೦೩. ತಲೆಹರಟೆ
೧೦೪. ತಲಿಡುಕ
೧೦೫. ತಲ್ಸಿಡ್ಕ
೧೦೬. ತಾಟ್ಗಿತ್ತಿ
೧೦೭. ತಿರಕೆ ಮುಂಡೆ
೧೦೮. ತಿರಕೆ ನನ್ಮಗ
೧೦೯. ತಿರಕೆ ಜಂಬದ ನನ್ಮಗ
೧೧೦. ತುಂಡ್ ನನ್ಮಗ
೧೧೧. ತೇಕ್ಡಿಕೆ
೧೧೨. ತೊಟ್ಟಿ ಮುಂಡೆ
೧೧೩. ತೊಟ್ಟಿ ನನ್ಮಕ್ಳು
೧೧೪. ದಗಡಿ
೧೧೫. ದಗಡಿಕೆ
೧೧೬. ದಗಲ್ಬಾಜಿ
೧೧೭. ದಗಲ್ಬಾಯ್ ಮುಂಡೆ

೧೧೮. ದಗಾಕೋರ
೧೧೯. ದಡಗ್ ಸುಬ್ಬಿ
೧೨೦. ದಡಗ್ ನನ್ ಸವ್ತಿ
೧೨೧. ದಡ್ಡ
೧೨೨. ದಯ್ಯಂಗೆ ಹುಟ್ಟಿದ ನನ್ಮಗ
೧೨೩. ದರಿದ್ರ ನನ್ಮಗ
೧೨೪. ದರಿದ್ರ ಮುಂಡೆ
೧೨೫. ದುರಹಂಕಾರಿ
೧೨೬. ದ್ರಾಬೆ ಮುಂಡೇದು
೧೨೭. ನಡವಳ್ಕೆ ಇಲ್ದೇರೂ ಮುಂಡೆ
೧೨೮. ನನ್ ಕಾಸ್ದಾರ್ ನನ್ಮಗ
೧೨೯. ನನ್ಮಗ್ನೆ
೧೩೦. ನನ್ ಸವತಿ ಹೆತ್ತದ್ದೆ
೧೩೧. ನನ್ ಹಳಮಗ್ನೆ
೧೩೨. ನನ್ ಹಳಮಗನ ಮಗ್ನೆ
೧೩೩. ನಮಕ್ ಹರಾಮ್
೧೩೪. ನರ ಸತ್ತ ನನ್ಮಗ
೧೩೫. ನಸುಗುನಿ
೧೩೬. ನಸುಗುನ್ನಿಕಾಯಿ ನನ್ಮಗ
೧೩೭. ನಸ್ಕೂನಿ ಮುಂಡೆ
೧೩೮. ನಳ್ಳುಗ್ಸ್ಕ
೧೩೯. ನಾಮರ್ದ
೧೪೦. ನಾಯಿ
೧೪೧. ನಾಯ್ಗೆ ಹುಟ್ಟಿದ ಬಡ್ಡಿಹೈದ
೧೪೨. ನಿಯ್ಯತ್ತಿಲ್ಲದ ನನ್ಮಗ
೧೪೩. ಪತ್ರಾವಳಿ
೧೪೪. ಪರಂಟು
೧೪೫. ಪಲ್ಲಿ ಮುಂಡೆ
೧೪೬. ಪಾಪಿ
೧೪೭. ಪಾಪ್ಗೇಡಿ
೧೪೮. ಪಾಳ್ ಮುಂಡೆ

೧೪೯. ಪೀನಾಸಿ ಮುಂಡೆ
೧೫೦. ಪೀಡೆ
೧೫೧. ಪೆಂಗ
೧೫೨. ಪೆಕರ
೧೫೩. ಪೆದ್ದಾದರಗಿತ್ತಿ
೧೫೪. ಪೋಲಿ
೧೫೫. ಪೋಲಿ ಮುಂಡೆ
೧೫೬. ಪ್ರಳಯಾಂತಕ
೧೫೭. ಬಂಡ
೧೫೮. ಬಂಡ್ ಮುಂಡೆ
೧೫೯. ಬಕ್ರ
೧೬೦. ಬಚ್ಚಾಲಿ
೧೬೧. ಬಜಾರಿ
೧೬೨. ಬರಗೆಟ್ಟ ನನ್ಮಗ
೧೬೩. ಬಸ್ತಿಕುಟ್ಟುದ್ದು
೧೬೪. ಬಳಂಗ್ ನನ್ಮಗ
೧೬೫. ಬಾಂಚೋತ್
೧೬೬. ಬಾಡ್ಕಾರಿ ಬಡ್ಡಿಹೈದ
೧೬೭. ಬಾಯ್ಬಡುಕ
೧೬೮. ಬಾಳ್ಗೆಟ್ ನನ್ಮಗ
೧೬೯. ಬಿಕ್ನಾಸಿ
೧೭೦. ಬಿಚ್ಚಾಲೆ ತಾಟ್ಗಿತ್ತಿ
೧೭೧. ಬೀದಿ ಸೂಳೆ
೧೭೨. ಬುಡ್ಗೆಟ್ ನನ್ ಸವ್ತಿ
೧೭೩. ಬುರ್ಲೆ ನನ್ಮಗ
೧೭೪. ಬೆಪ್ಪ
೧೭೫. ಬೇಕುಪ್ಪ
೧೭೬. ಬೆರಕೆ ಬಡ್ಡಿ
೧೭೭. ಬೆರಕೆಗೆ ಹುಟ್ಟೋನು
೧೭೮. ಬೇತೂರಿ ಮುಂಡೆ
೧೭೯. ಬೇಪಾರಿ ನನ್ಮಗ

೧೮೦. ಬೇವರ್ಸಿ
೧೮೧. ಬೇವರ್ಸಿಗೆ ಹುಟ್ಟೋನು
೧೮೨. ಬೇವ್ನಟ್ಟಿ ಕಾಳಿ
೧೮೩. ಬೊದ್ದೆ ನನ್ ಸವ್ತಿ
೧೮೪. ಬೊಡ್ಡಿಮಗ
೧೮೫. ಬೋಸುಡಿ
೧೮೬. ಬೋಸುಡ್ ಮಲ್ಲಿ
೧೮೭. ಬ್ಯಾಡ್ ಬೆಸ್ಗೆ ನನ್ಮಗ
೧೮೮. ಮಂಕ್ ನನ್ಮಗ
೧೮೯. ಮಂಗ
೧೯೦. ಮನಾಳ
೧೯೧. ಮನೆ ಮನೆ ಹಿಟ್ಟೆತ್ತೊ ನಾಯಿ
೧೯೨. ಮನಮುರ್ಕ
೧೯೩. ಮರ್ಕಾಟಿ
೧೯೪. ಮಳ್ಳಿ
೧೯೫. ಮಾಡ್ದೋರ ಅಲ್ಲಾ ಮಾಡಿ, ಬೂದೀಲಿ ಹೋಮ ಮಾಡೋ ಸೂಳೆಮಕ್ಳು
೧೯೬. ಮಾದರ್ ಚೋತ್
೧೯೭. ಮುಗ್ಗಲ್ಗೇಡ್ ನನ್ ಸವ್ತಿ
೧೯೮. ಮುದೇವಿ
೧೯೯. ಮುದಿಯ
೨೦೦. ಮುಸಂಡಿ
೨೦೧. ಮೂದೇವಿ
೨೦೨. ಮೂರನ್ನು ಕಿತ್ ನಿಂತ ನನ್ ಸವ್ತಿ
೨೦೩. ಮೂರ್ಕಾಸಿಗೆ ಬೆಲೆಯಿಲ್ದೇರು ಸೂಳೆಮಕ್ಳು
೨೦೪. ಮೂರ್ ಮೊಕದ ಮುಂಡೆ
೨೦೫. ಮೆಡ್ಡಗಣ್ಣ
೨೦೬. ಮೆಳ್ಳಗಣ್ಣ
೨೦೭. ಮೊರಗಾಲ
೨೦೮. ಮೋಟ್ ಬುದ್ದಿ ಮುಂಡೆ
೨೦೯. ಮೋಣಿ ಮಗ
೨೧೦. ಯಕ್ಕಚ್ಚಿತ್ ನನ್ಮಗ

೨೧೧. ಯಾತಕ್ಕೂ ಹೇಸದ ನನ್ಮಗ
೨೧೨. ರಣಹದ್ದು ಸೂಳೆಮಗ
೨೧೩. ರಣ್ಕಾಟಿ
೨೧೪. ರಾಂಕೋರಿ
೨೧೫. ರೌಡಿ
೨೧೬. ಲಂಗ ಕಿತ್ತೋಳೆ
೨೧೭. ಲಂಗುಲಗಾಮ್ ಕಿತ್ತೋಳೆ
೨೧೮. ಲುಚ್ಚ
೨೧೯. ಲೋಪರ್
೨೨೦. ವಡ್ಡಾರ ಕಿತ್ ಬಡ್ಡಿ
೨೨೧. ವಂಶಗೇಡಿ ನನ್ಮಗ
೨೨೨. ಸಂಗ ನನ್ಮಗ
೨೨೩. ಸಣ್ ಮುಂಡೆ
೨೨೪. ಸಮಯಸಾಧಕ
೨೨೫. ಸೀಮೆ ಅಗ್ಗರಿಸಿದ ನನ್ ಸವ್ತಿ
೨೨೬. ಸುವರ್
೨೨೭. ಸೂಳ್ಮುಂಡೆ
೨೨೮. ಸೊತ್ತ
೨೨೯. ಸೋಮಾರಿ
೨೩೦. ಹಂದಿಗುಟ್ಟೋನು
೨೩೧. ಹನ್ನೆರಡಾಟ ಆಡೋ ಬಡ್ಡಿ
೨೩೨. ಹದ್ಗೆಟ್ ಮುಂಡೆ
೨೩೩. ಹರುಕ್ ಬಾಯಿ ಮುಂಡೆ
೨೩೪. ಹಲ್ಕಟ್ ನನ್ಮಗ
೨೩೫. ಹುಚ್ಚ
೨೩೬. ಹೂಟ್ಗೆಟ್ ನನ್ ಸವ್ತಿ

ಶಾಪ ರೂಪದ ಬಯ್ಗುಳ

೦೧. ಅವನಿಗೆ ಇತಿಪಾತ ಕಾಣಿಸ್ಕೊಳ.
೦೨. ಅವನ ಕಯ್ಗೆ ಬಂದದ್ದು ಬಾಯ್ಗೆ ಬರ್ದೆ ಹೋಗ.
೦೩. ಅವನ ಮನೆ ಕಿಸಂತ್ರಾಗ.
೦೪. ನಂಗೆ ಸಂಕಟ ಬಂದಂಗೆ ನಿಂಗು ಬರ.
೦೫. ನನ್ ಕಣ್ಣಲಿ ನೀರ್ ಕೆಡಗ್ದೋರ ಮನೆ ಹಾಳಾಗೋಗ.
೦೬. ನನ್ ಕಿಚ್ಚು ನಿಂಗು ತಟ್ಟ.
೦೭. ನನ್ನ ಗಂಡ ಸತ್ತಂಗೆ ನಿನ್ ಗಂಡನೂ ಸಾಯ
೦೮. ನನ್ ಮಕ್ಳು ಹೋದಂಗೆ ನಿನ್ ಮಕ್ಳು ಹೋಗ.
೦೯. ನನ್ ಹೊಟ್ಟೆ ಉರಿ ನಿಂಗು ತಟ್ಟ.
೧೦. ನನ್ ಹೊಟ್ಟೆ ಉರಿಸ್ಕೊಂಡೋರ್ ಮನೆ ಹಾಳಾಗೋಗ.
೧೧. ನಿಂಗೆ ಅಮ್ಮ ಆಗ.
೧೨. ನಿಂಗೆ ಅರಿಸಣಕಂಬ ಬರ.
೧೩. ನಿಂಗೆ ಅರಿಸಣಕೊಂಬೆ ರೋಗ ಬರ.
೧೪. ನಿಂಗೆ ಅಲೆದಾಡು ರೋಗ ಬರ.
೧೫. ನಿಂಗೆ ಅಳ್ ಕಟ್ಟ.
೧೬. ನಿಂಗೆ ಆನೆಪಾದ ರೋಗ ಬರ.
೧೭. ನಿಂಗೆ ಆಪತ್ ಬರ.
೧೮. ನಿಂಗೆ ಆಪತ್ ಬಂದು ಚಾಪೇಲಿ ಸುತ್ಕೊಂಡು ಹೋಗ.
೧೯. ನಿಂಗೆ ಇತಿಪಾತ್ ರೋಗ ಬರ.
೨೦. ನಿಂಗೆ ಇದ್ದಕ್ಕಿದ್ದಂತೆ ಕಾಣಿಸ್ಕೊಳ.
೨೧. ನಿಂಗೆ ಉಚ್ಚೊದು ಕಕ್ಕೊದು ಬರ.
೨೨. ನಿಂಗೆ ಉರಲು ರೋಗ ಬಂದು ಊರಿಗೆ ಸುದ್ದಿ ಕೊಡ.
೨೩. ನಿಂಗೆ ಎದೆಬಾವಾಗ.
೨೪. ನಿಂಗೆ ಏನಾರ ಬಂದು ಹೋಗ.
೨೫. ನಿಂಗೆ ಒದ್ದಾಡು ತಾಯ್ ಬರ.
೨೬. ನಿಂಗೆ ಒದ್ದಾಡು ಸಂಕಟ ಬರ.
೨೭. ನಿಂಗೆ ಓತಿ ಏಳ.

೨೮. ನಿಂಗೆ ಕಜ್ಜಿ ಹತ್ತ.
೨೯. ನಿಂಗೆ ಕಣ್ ಮಂಜು ರೋಗ ಬರ.
೩೦. ನಿಂಗೆ ಕರಿಗ್ವಾರ ಹತ್ತ.
೩೧. ನಿಂಗೆ ಕರಿನಾಗ್ರ ಕಡಿಯ.
೩೨. ನಿಂಗೆ ಕಾಣಿಸ್ಕೋಳ.
೩೩. ನಿಂಗೆ ಕಾಣಿಸ್ಕೊಂಡು ಕದ್ರಲಿ ಬರೆ ಹಾಕ.
೩೪. ನಿಂಗೆ ಕಾಮಾಲೆ ರೋಗ ಬರ.
೩೫. ನಿಂಗೆ ಕಾಲರ ತಗಲ.
೩೬. ನಿಂಗೆ ಕಾಸಿ ಕಂಟಕ ಬರ.
೩೭. ನಿಂಗೆ ಕೀಲು ರೋಗ ಬರ.
೩೮. ನಿಂಗೆ ಕೊಕ್ರೆ ರೋಗ ಬರ.
೩೯. ನಿಂಗೆ ಕೊಳ್ಳಿ ದೆವ್ವ ಬಡಿಯ.
೪೦. ನಿಂಗೆ ಗಂಡಾಂತರ ಬರ.
೪೧. ನಿಂಗೆ ಗಾಳಿ ಬರ.
೪೨. ನಿಂಗೆ ಗುಪ್ಪಟ್ಟೆ ರೋಗ ಬರ.
೪೩. ನಿಂಗೆ ಗೂಬೆ ರೋಗ ಬರ.
೪೪. ನಿಂಗೆ ಗೂರಲು ರೋಗ ಬರ.
೪೫. ನಿಂಗೆ ಗೆಂಡೆ ರೋಗ ಬರ.
೪೬. ನಿಂಗೆ ಗೆಡ್ಡೆ ಕಟ್ಟ.
೪೭. ನಿಂಗೆ ಗ್ವಾರದಮ್ಮ ತಗಲ.
೪೮. ನಿಂಗೆ ಗ್ವಾರದಮ್ಮ ಬಂದು ಗೋರ್ಕೊಂಡು ಹೋಗ.
೪೯. ನಿಂಗೆ ಚಪ್ಪೆ ರೋಗ ಬರ.
೫೦. ನಿಂಗೆ ಬಾಯ್ ರೋಗ ಬರ.
೫೧. ನಿಂಗೆ ಚಿಟ್ಟೆ ರೋಗ ಬರ.
೫೨. ನಿಂಗೆ ಚೌಳೇಶ್ವರ ಬರ.
೫೩. ನಿಂಗೆ ತಗಳೋಗ.
೫೪. ನಿಂಗೆ ತಲೆಸೂಲೆ ರೋಗ ಬರ.
೫೫. ನಿಂಗೆ ತುಪಾಕಿ ರೋಗ ಬಂದು ತುಪ್ಪನೆ ಬೀಳ.
೫೬. ನಿಂಗೆ ತುರ್ಗಜ್ಜಿ ಏಳ.
೫೭. ನಿಂಗೆ ತೊಟ್ಕಟ್ಟು ಬರ.
೫೮. ನಿಂಗೆ ದೊಡ್ಡರೋಗ ಬಂದ್ ಹೊತ್ಕೊಂಡ್ ಹೋಗ.

೫೯. ನಿಂಗೆ ದೊಡ್ಡರೋಗ ಬರ.
೬೦. ನಿಂಗೆ ನರ್ ನರೀದ್ ಬಂದು ಸರ್ರನೆ ಹೊತ್ಕೊಂಡ್ ಹೋಗ.
೬೧. ನಿಂಗೆ ನಾಗ್ರಾವು ಕಚ್ಚ.
೬೨. ನಿಂಗೆ ನೆಲಕೆರಿ ರೋಗ ಬರ.
೬೩. ನಿಂಗೆ ನೆಲಗ್ರಾಹ ಹಿಡಿಯ.
೬೪. ನಿಂಗೆ ನೆಲ ಸಿಡಿಯ.
೬೫. ನಿಂಗೆ ನೆಲ್ಪಟ್ಟು ಬಡಿಯ.
೬೬. ನಿಂಗೆ ಪಸರೆ ರೋಗ ಬರ.
೬೭. ನಿಂಗೆ ಪಳೀಕ್ ಬರ.
೬೮. ನಿಂಗೆ ಪಳೀಕ್ದಮ್ಮ ಬರ.
೬೯. ನಿಂಗೆ ಪಳೂರಿ ತಗಳ.
೭೦. ನಿಂಗೆ ಪಳೇಗ್ ತಗಳ.
೭೧. ನಿಂಗೆ ಪಿಣಿಪಿಣಿತಿ ರೋಗ ಬರ.
೭೨. ನಿಂಗೆ ಪಿತ್ಮಂಡೆ ರೋಗ ಬರ.
೭೩. ನಿಂಗೆ ಬಂದದ್ದು ಬಯಲಾಗ್ದೆ ಹೋಗ.
೭೪. ನಿಂಗೆ ಬರಬಾರದ್ದು ಬರ.
೭೫. ನಿಂಗೆ ಬರಬಾರದ್ದು ಬಂದು ಹೊತ್ಕೊಂಡ್ ಹೋಗ.
೭೬. ನಿಂಗೆ ಬಾಡಬವಣ್ಕೆ ರೋಗ ಬರ.
೭೭. ನಿಂಗೆ ಬಾಣ್ಸನ್ನಿ ರೋಗ ಬಂದು ಬಕರೆಗೆ ನೀರ್ ಹುಯ್ದು ಮಡಗ.
೭೮. ನಿಂಗೆ ಬಾಲಾಗ್ರ ಬರ.
೭೯. ನಿಂಗೆ ಬಾಳ್ ಬಸುರ್ ಬರ.
೮೦. ನಿಂಗೆ ಬಿಗಿನ್ ರೋಗ ಬರ.
೮೧. ನಿಂಗೆ ಬಿಜ್ಜು ಬಡಿಯ.
೮೨. ನಿಂಗೆ ಬಿಳಿಗ್ವಾರ ಹತ್ತ.
೮೩. ನಿಂಗೆ ಬೀದೀಲಿ ಬಿಸ್ನೀರ್ ಕಾಯ್ಸ.
೮೪. ನಿಂಗೆ ಬುಕ್ಕಲು ರೋಗ ಬರ.
೮೫. ನಿಂಗೆ ಬೆನ್ಪಣಿ ಏಳ.
೮೬. ನಿಂಗೆ ಬೆಪ್ ಬರ.
೮೭. ನಿಂಗೆ ಬೆರಗು ಬರ.
೮೮. ನಿಂಗೆ ಬೊಗಳ್ ಸನ್ನಿ ರೋಗ ಬರ.
೮೯. ನಿಂಗೆ ಮಂದ ರೋಗ ಬರ.

೯೦. ನಿಂಗೆ ಮಾದ್ಗಟ್ ಆಗ.
೯೧. ನಿಂಗೆ ಮಾನಡಗು ಬರ.
೯೨. ನಿಂಗೆ ಮಾರಿ ರೋಗ ಬರ.
೯೩. ನಿಂಗೆ ಮಾಯದ ಜರ ಬರ.
೯೪. ನಿಂಗೆ ರಕ್ತ ಕಕ್ಕು ರೋಗ ಬರ.
೯೫. ನಿಂಗೆ ರಕ್ತಬೇದಿ ಆಗ.
೯೬. ನಿಂಗೆ ರಾವ್ ಬಡಿಯ.
೯೭. ನಿಂಗೆ ಲಕ್ವ ಹೊಡಿಯ.
೯೮. ನಿಂಗೆ ವಾಂತ್ಬೇದಿ ಬರ.
೯೯. ನಿಂಗ ಸಂದ್ ಬರ.
೧೦೦. ನಿಂಗೆ ಸಂದಿವಾತ ಬರ.
೧೦೧. ನಿಂಗೆ ಸನ್ನಿ ಹಿಡಿಯ.
೧೦೨. ನಿಂಗೆ ಸತ್ತೆ ಮುಟ್ಟ.
೧೦೩. ನಿಂಗೆ ಸಿಡುಬು ಬರ.
೧೦೪. ನಿಂಗೆ ಸಿಡ್ಪುಟ್ಟೆ ರೋಗ ಬರ.
೧೦೫. ನಿಂಗೆ ಸಿಡಿಲು ಬಡಿಯ.
೧೦೬. ನಿಂಗೆ ಸೀತಾಳ್ ಸಿಡುಬು ಆಗ.
೧೦೭. ನಿಂಗೆ ಹತ್ತುದ್ದು ಹರೀದೆ ಹೋಗ.
೧೦೮. ನಿಂಗೆ ಹರಿಬಾರದ್ದು ಬಂದ್ ಹೋಗ.
೧೦೯. ನಿಂಗೆ ಹಾವ್ ಕಡಿಯ.
೧೧೦. ನಿಂಗೆ ಹಾಲ್ಬಾವಾಗ.
೧೧೧. ನಿಂಗೆ ಹಿಂದೆ ಉಚ್ಚೋದು ಮುಂದೆ ಕಕ್ಕೋದು ಬರ.
೧೧೨. ನಿಂಗೆ ಹುಚ್ ಬರ.
೧೧೩. ನಿಂಗೆ ಹುಚ್ ನಾಯಿ ಕಡಿಯ.
೧೧೪. ನಿಂಗೆ ಹೊಟ್ಟೆಕುಟ್ ಬರ.
೧೧೫. ನಿಂಗೆ ಹೊಟ್ಟೆ ನೋವ್ ಬರ.
೧೧೬. ನಿಂಗೆ ಹೊತ್ತುಗ್ ಸರಿಯಾಗಿ ಮತ್ ಬರ.
೧೧೭. ನಿನ್ ಅಜ್ಜಿ ಯಾಸಾನ ಬಡಿಯ.
೧೧೮. ನಿನ್ ಹಟ್ಟಿ ಕರ ಸಾಯ.
೧೧೯. ನಿನ್ನ ಹಟ್ಟಿ ತಿಪ್ಪೆ ಹಳ್ಳ ಆಗ.
೧೨೦. ನಿನ್ ಆಂಕಾರ ಅಡಗ.

೧೨೧. ನಿನ್ ಆಂಕಾರ ಓಂಕಾರತ್ತೋಗ.
೧೨೨. ನಿನ್ ಇಂಡೇಕೂಳ್ ಇಡ್ಸ.
೧೨೩. ನಿನ್ ಇಂಡೇಕೂಳ್ ಮಾಡ.
೧೨೪. ನಿನ್ ಈಲಿ ಒಡ್ದೋಗ.
೧೨೫. ನಿನ್ ಉತ್ರಾಸ ಚಿನ್ವಾಗ.
೧೨೬. ನಿನ್ನ ಉತ್ರಿಸಿ ಕತ್ರಿಸಿ ಒಲೆ ಮ್ಯಾಕೆ ತುಂಬ.
೧೨೭. ನಿನ್ನ ಎದೆ ಮ್ಯಾಲಿನ ಅಕ್ಕಿ ಆಯ.
೧೨೮. ನಿನ್ ಎದೆ ಮ್ಯಾಲೆ ನಿದ್ದೆ ಮಾಡ.
೧೨೯. ನಿನ್ ಎದೆ ಮ್ಯಾಲೆ ಸಮಾಧಿ ಕಟ್ಟ.
೧೩೦. ನಿನ್ ಎಮ್ಮೆಗೆ ನಾಗೇರ್ ಆಗ.
೧೩೧. ನಿನ್ ಐಸಿರಿ ಮ್ಯಾಲೆ ಅಮ್ಮ ಕುಂತ್ಕೊಳ.
೧೩೨. ನಿನ್ ಒಬ್ಬ ಮಗನ್ನ ಕಡ್ದು ಒಬ್ಬೇಗೆ ತುರಕ.
೧೩೩. ನಿನ್ ಕಂತೇನಾ ಬಡಿಯ.
೧೩೪. ನಿನ್ ಕಂದನ್ನ ತಿನ್ಕೊಳ.
೧೩೫. ನಿನ್ ಕಂದನ್ನ ತಿನ್ಕೊಂಡು ಕಣ್ಣೀರ್ ಹಾಕ.
೧೩೬. ನಿನ್ ಕಂದನ ಬಾಯ್ಗೆ ಇಂಬೆಹುಳಿ ಬುಡ.
೧೩೭. ನಿನ್ ಕಣ್ ಇಂಗೋಗಿ ಕದೀನ್ ಸಂದೀಲಿ ತಡಕ.
೧೩೮. ನಿನ್ ಕಣ್ ಪೋಟ್ ಬೀಳ.
೧೩೯. ನಿನ್ ಕಣ್ಗೆ ಕಾಮಾಲೆ ರೋಗ ಬರ.
೧೪೦. ನಿನ್ ಕಣ್ಗೆ ಕಾರದ ಹುಡಿ ಹಾಕ.
೧೪೧. ನಿನ್ ಕಣ್ಗೆ ಚಗರೆ ಬಡಿಯ.
೧೪೨. ನಿನ್ ಕತ್ತಿನ ಕಳಸ ಬಿದ್ದೋಗ.
೧೪೩. ನಿನ್ ಕತ್ತಿನ ಕೊನೆ ಮುರಿಯ.
೧೪೪. ನಿನ್ ಕತ್ತಿನ ಸಿರಿ ಮುರಿಯ.
೧೪೫. ನಿನ್ ಕಪಾಲ ಸಿಡಿಯ.
೧೪೬. ನಿನ್ ಕರ್ಕುಳ್ಳಿ ಮ್ಯಾಲೆ ಮೂರುಳ್ಳು ಉರಿಯ.
೧೪೭. ನಿನ್ನ ಕಳ್ಳಿ ದಡಿ ಮ್ಯಾಲೆ ಹೊತ್ಕೊಂಡ್ ಹೋಗ.
೧೪೮. ನಿನ್ನ ಕಾಡೆಣ ಮಾಡ.
೧೪೯. ನಿನ್ ಕಾಲ್ ಕಡಿಯ.
೧೫೦. ನಿನ್ ಕಾಲ್ಗೆ ಕ್ವಾಷ್ಟ ಹತ್ತ.
೧೫೧. ನಿನ್ ಕಾಲ್ ಸೇದೋಗ.

೧೫೨. ನಿನ್ ಕಾಲ್ ಮುರಿಯ.
೧೫೩. ನಿನ್ ಕಾಲ್ಗೆ ಹುಳ ಬೀಳ.
೧೫೪. ನಿನ್ ಕಿವಿ ಕಿತ್ತೋಗ.
೧೫೫. ನಿನ್ ಕಿಸಂತ್ರಾಗ.
೧೫೬. ನಿನ್ ಕುಂಡೀಲಿ ಕುರ ಏಳ.
೧೫೭. ನಿನ್ ಕಯ್ ಮುರಿಯ.
೧೫೮. ನಿನ್ ಕೈಕಾಲು ಬಿದ್ದೋಗ.
೧೫೯. ನಿನ್ ಕೈಗೆ ಕನ್ನಾಗ್ರಾವು ಕಡಿಯ.
೧೬೦. ನಿನ್ ಕೈಗೆ ಕ್ವಾಷ್ಟ ಏಳ.
೧೬೧. ನಿನ್ ಕೈಗೆ ಕ್ವಾಷ್ಟ ಹತ್ತ.
೧೬೨. ನಿನ್ ಕೈಗೆ ತುರ್ಗಜ್ಜಿ ಏಳ.
೧೬೩. ನಿನ್ ಕೈಗೆ ಹಾವ್ ಕಡಿಯ.
೧೬೪. ನಿನ್ ಕೈಗೆ ಹುಳಬೀಳ.
೧೬೫. ನಿನ್ ಕೊನೆ ಮುರಿಯ.
೧೬೬. ನಿನ್ ಗಂಟಲ ನರ ಸೀಳ.
೧೬೭. ನಿನ್ ಗಂಟಲಿಗೆ ಗಂಡಾಮಾಲೆ ಆಗ.
೧೬೮. ನಿನ್ ಗಂಟಲಿಗೆ ರಾವ್ ಕುಂತ್ಕೊಳ.
೧೬೯. ನಿನ್ ಗಂಟಲಿಗೆ ಸರಮಾಲೆ ಅಳ್ ಕಟ್ಟ.
೧೭೦. ನಿನ್ ಗಂಡನ್ನ ತಿನ್ಕೊಳ.
೧೭೧. ನಿನ್ ಗಂಡನ್ನ ತಿನ್ಕೊಂಡು ಗಣಗಲ ಓಲೆ ಇಕ್ಕೊಳ.
೧೭೨. ನಿನ್ ಗಂಡ್ ಮಕ್ಳು ತಿನ್ನ.
೧೭೩. ನಿನ್ ಗುಂಡಿಗೇಗೆ ಗುಂಡುಕಲ್ಲು ಎತ್ತಾಕ.
೧೭೪. ನಿನ್ ಗುದ್ದ ಕಟ್ಟ.
೧೭೫. ನಿನ್ ಗೆಡ್ಡೆ ಕಿತ್ತೋಗ.
೧೭೬. ನಿನ್ ಚಟ್ಟ ಕಟ್ಟ.
೧೭೭. ನಿನ್ ಚಟ್ಟ ಕಟ್ಟಿ ಹೊತ್ಕೊಂಡ್ ಹೋಗ.
೧೭೮. ನಿನ್ ತಟ್ಟೆಗೆ ನಾ ಹೇಲ.
೧೭೯. ನಿನ್ ತಲೇಗೆ ಬೂದಿ ಉಯ್ಯ.
೧೮೦. ನಿನ್ ತಲೆ ಬೋಳಸ.
೧೮೧. ನಿನ್ ತಲೆ ಮ್ಯಾಲೆ ಅಕ್ಕಿಕಾಳು ಬೀಳ್ದೆ ಹೋಗ.
೧೮೨. ನಿನ್ ತಲೆ ಸಿಡಿಯ.

೧೮೩. ನಿನ್ ತಾಲಿ ಕೀಳ.
೧೮೪. ನಿನ್ ತಿಕ್ಕೆ ತೊಣಚಿ ಹೊಕ್ಕ.
೧೮೫. ನಿನ್ ತುಲ್ಗೆ ತುಣ್ಣೆ ಕಾಣಿಸದೆ ಹೋಗ.
೧೮೬. ನಿನ್ ತುಲ್ಗೆ ತುರುಗಜ್ಜು ಏಳ.
೧೮೭. ನಿನ್ ತುಳ್ಸೋಗ.
೧೮೮. ನಿನ್ ತೆಂಡೆ ತೇಲೋಗ.
೧೮೯. ನಿನ್ ತೊಡೆ ಸೇದೋಗ.
೧೯೦. ನಿನ್ ತೋಳ್ ನನ್ ತೋಳ್ನಂಗೆ ಆಗ.
೧೯೧. ನಿನ್ ದನೀಗೆ ದೊಡ್ಡರೋಗ ಬರ.
೧೯೨. ನಿನ್ ದಾರಿ ಮುಳ್ಳಾಗ.
೧೯೩. ನಿನ್ ದುವ್ವೆ ಕಟ್ಟ.
೧೯೪. ನಿನ್ ನರ ಬತ್ತೋಗ.
೧೯೫. ನಿನ್ ನರ ಸೇದ.
೧೯೬. ನಿನ್ ನಾಶ್ನಾಗ.
೧೯೭. ನಿನ್ನ ನಾಯ್ ತಿನ್ನ.
೧೯೮. ನಿನ್ನ ನಾಯಿ ತಿಂದು ನೀರ್ ಕುಡಿಯ.
೧೯೯. ನಿನ್ನ ನಾಯಿ ಹೊತ್ಕೊಂಡೋಗ.
೨೦೦. ನಿನ್ ನಾಲ್ಗೇಗೆ ತೊನ್ನು ಏಳ.
೨೦೧. ನಿನ್ ನಾಲ್ಗೇಗೆ ನಚ್ಚಿರ ಮುತ್ತ.
೨೦೨. ನಿನ್ ನಾಲ್ಗೆ ನರ ಸೀಳ.
೨೦೩. ನಿನ್ ನಾಲ್ಗೆ ನರ ಸೇದ.
೨೦೪. ನಿನ್ ನಾಲ್ಗೇಲಿ ಹುಳ ಬೀಳ.
೨೦೫. ನಿನ್ನ ನಾಲ್ಗೇಗೆ ಹುಳಬಿದ್ದು ರೌರವ ನರಕಕ್ಕೆ ಹೋಗ.
೨೦೬. ನಿನ್ನ ನ್ಯಾಣಾಕ.
೨೦೭. ನಿನ್ನ ಪಳೇಕಮ್ಮ ಮುರಿಯ.
೨೦೮. ನಿನ್ ಪುಕ್ಕಿ ಸಿಡಿಯ.
೨೦೯. ನಿನ್ನ ಪಿಂಡ ನಾಯಿ ತಿನ್ನ.
೨೧೦. ನಿನ್ನ ಬಂದಂತೆ ಅಮ್ಮ ಬಂದು ಗೋರ್ಕೊಂಡ್ ಹೋಗ.
೨೧೧. ನಿನ್ ಬಡಗೆ ಕಟ್ಟ.
೨೧೨. ನಿನ್ ಬಳ್ಳಿ ಬತ್ತೋಗ.
೨೧೩. ನಿನ್ ಬಾಯ್ಗೆ ನನ್ ಗಲ್ಲೆ ಎತ್ತಾಕ.

೨೧೪. ನಿನ್ ಬಾಯ್ಗೆ ನನ್ ಎಕ್ಕಡ ಹಾಕ.
೨೧೫. ನಿನ್ ಬಾಯ್ಗೆ ನನ್ ಗೂದೆ ಹಾಕ.
೨೧೬. ನಿನ್ ಬಾಯ್ಗೆ ನನ್ ಜೋಡು ಎಟ್ಟ.
೨೧೭. ನಿನ್ ಬಾಯ್ಗೆ ನನ್ ಹೇಲ್ ತುಂಬ.
೨೧೮. ನಿನ್ ಬಾಯ್ಗೆ ನೀರ್ ಬುಡ.
೨೧೯. ನಿನ್ ಬಾಯ್ಗೆ ಬಟ್ರಸರ ಏಳ.
೨೨೦. ನಿನ್ ಬಾಯ್ ಬರದೇನೆ ಹೋಗ.
೨೨೧. ನಿನ್ ಬಾಯ್ಗೆ ಬಿತ್ತ ಸಿಗಾಕ.
೨೨೨. ನಿನ್ ಬಾಯಿ ಸೇದೋಗ.
೨೨೩. ನಿನ್ ಬಾಯ್ಗೆ ಹುಡಮಣ್ಣು ಹಾಕ.
೨೨೪. ನಿನ್ ಬಾಯಲ್ಲಿ ಹುಳ ಬೀಳ.
೨೨೫. ನಿನ್ನ ಬಾಳ್ಗಿಷ್ಟು ಬೆಂಕಿ ಎಟ್ಟ.
೨೨೬. ನಿನ್ ಬುಂಡೇಗೆ ಬಿಸ್ನೀರ್ ಕಾಯ್ಸ.
೨೨೭. ನಿನ್ ಬುಂಡೆ ಸಿಡಿಯ.
೨೨೮. ನಿನ್ ಬುಡ ಉಂಟೋಗ.
೨೨೯. ನಿನ್ ಮಂಡೆ ಪತ್ಮಂಡೆಯಾಗ.
೨೩೦. ನಿನ್ ಮಕ್ಳ ತಕೊಂಡೋಗಿ ಒಳ್ಗೆರೆಗೆ ಹಾಕ.
೨೩೧. ನಿನ್ ಮಕ್ಕಳಿಗೆ ಬರಬಾರದ್ದು ಬರ.
೨೩೨. ನಿನ್ ಮನೆ ಅಳ್ಳು ಸಿಡಿಯ.
೨೩೩. ನಿನ್ ಮನೆ ಕಾಯಾಗ.
೨೩೪. ನಿನ್ ಮನೆ ಕಿಸಂತ್ರಾಗ.
೨೩೫. ನಿನ್ ಮನೆ ಕೆಟ್ಟೋಗ.
೨೩೬. ನಿನ್ ಮನೆ ಗೆಡ್ಡೆ ಕಿತ್ತೋಗ.
೨೩೭. ನಿನ್ ಮನೆ ಗ್ವಾಡೆ ಉಂಟೋಗಿ ಗುಂಡಾಂತ್ರಾಗ.
೨೩೮. ನಿನ್ ಮನೆ ಗ್ವಾರ್ಕ ಸುತ್ತ.
೨೩೯. ನಿನ್ ಮನೆ ಚೆನ್ವಾಗ.
೨೪೦. ನಿನ್ ಮನೆ ಜೊಳ್ಳಾಗ.
೨೪೧. ನಿನ್ ಮನೆ ತಿಪ್ಪೆಗುಂಡಿಯಂಗೆ ಆಗ.
೨೪೨. ನಿನ್ ಮನೇಗೆ ತೂತ್ ಬೀಳ.
೨೪೩. ನಿನ್ ಮನೆ ದೂಪದ ಚೆನ್ನನ ಮನೆ ಆಗ.
೨೪೪. ನಿನ್ ಮನೆ ಬುಡ್ಸೊತ್ತೋಗ.

೨೪೫. ನಿನ್ ಮನೇಗೆ ಬೆಂಕಿ ಬಿದ್ದು ಬೂದಿಯಾಗ.
೨೪೬. ನಿನ್ ಮನೇಗೆ ಮಾರಿ ನುಗ್ಗ.
೨೪೭. ನಿನ್ ಮನೆ ಮಾರತ್ತೋಗ.
೨೪೮. ನಿನ್ ಮನೇಗೆ ಮಾರಿ ಹಿಂಡು ಬಡ್ಡು ಹೊತ್ಕೊಂಡೋಗ.
೨೪೯. ನಿನ್ ಮನೇಗೆ ಮಾರೀರು ಮಸಣೀರೆಲ್ಲ ಒಟ್ಟಿಗೆ ನುಗ್ಗ.
೨೫೦. ನಿನ್ ಮನೆ ಮ್ಯಾಲೆ ಗೂಬೆ ಕುಂತ್ಕೊಳ.
೨೫೧. ನಿನ್ ಮನೇಗೆ ಕಾಗೆ ನುಗ್ಗ.
೨೫೨. ನಿನ್ ಮನೇಗೆ ರಾವ್ ನುಗ್ಗ.
೨೫೩. ನಿನ್ ಮನೇನ ಸುಂಟರಗಾಳಿ ಬಂದು ಹೊತ್ಕೊಂಡೋಗ.
೨೫೪. ನಿನ್ ಮನೆ ಸುಳಿ ಇಲ್ಲದಂಗೆ ಆಗ.
೨೫೫. ನಿನ್ ಮನೇಲಿ ಹೆಣ ಹೋಗ.
೨೫೬. ನಿನ್ ಮನತನಕ್ಕೆ ಮುಳ್ ಬಡಿಯ.
೨೫೭. ನಿನ್ ಮದಗ ತಳ್ಳಿಸ್ದೆ ಹೋಗ.
೨೫೮. ನಿನ್ ಮುಂಡ್ಮೋಚ.
೨೫೯. ನಿನ್ ಮುಸೂಡಿಗಷ್ಟು ಬೆಂಕಿ ಹಾಕ.
೨೬೦. ನಿನ್ ಮೊಕ್ಕೆ ಕಜ್ಜತ್ತ.
೨೬೧. ನಿನ್ ಮೊಕ್ಕೆ ಮಂಗಳಾರತಿ ಎತ್ತ.
೨೬೨. ನಿನ್ ಮೊಕ್ಕೆ ಮುಂಡ್ಗಳ್ಳಿ ಚಾಚ.
೨೬೩. ನಿನ್ ಯಾಪ್ ಮ್ವಾರೆ ನಾಯಿ ನೆಕ್ಕ.
೨೬೪. ನಿನ್ ಯಾಸಕ್ಕೆ ದ್ವಾಸೆ ಹುಯ್ಯ.
೨೬೫. ನಿನ್ ವಂಶ ನಿರ್ವಂಶ ಆಗ.
೨೬೬. ನಿನ್ನ ವಾಕರ್ ಬಟ್ಟೇಲಿ ಹೊತ್ಕೊಂಡೋಗ.
೨೬೭. ನಿನ್ ಸಾಲ್ ಮಕ್ಳು ಸಮಾಧಿ ಮಾಡ.
೨೬೮. ನಿನ್ ಸಿರಿ ಸಿಡ್ಡೋಗ.
೨೬೯. ನಿನ್ ಸಿರಸ ಕುಯ್ಯ.
೨೭೦. ನಿನ್ ಸುಳಿ ಸುಟ್ಟೋಗ.
೨೭೧. ನಿನ್ ಸುಳಿ ಮ್ಯಾಲೆ ಸುಣ್ಣದ ನೀರುಯ್ಯ.
೨೭೨. ನಿನ್ ಸೊಂಟ ಮುರಿಯ.
೨೭೩. ನಿನ್ ಸೊಲ್ ಅಡಗ.
೨೭೪. ನಿನ್ ಹಣೇಗೆ ಬಾಸಿಂಗ ಕಟ್ಟದೇ ಹೋಗ.
೨೭೫. ನಿನ್ ಹಾಲ್ತುಪ್ಪ ತೊಳಿಯ.

೨೭೬. ನಿನ್ ಹಿಂದ್ಲು ರೋಗ ಮುಂದಕ್ಕೆ ಬರ.

೨೭೭. ನಿನ್ ಹುಳೀಗೆ ಕರುಕ್ ಮಾರಿ ಹತ್ತ.

೨೭೮. ನಿನ್ ಹೆಂಡ್ತಿ ತಿನ್ಕೊಂಡು ತಿಪ್ಪೆ ಮ್ಯಾಲೆ ಕುಂತ್ಕೊಳ.

೨೭೯. ನಿನ್ ಹೆಂಡ್ತಿಗೆ ಬರಬಾರದ್ದು ಬರ.

೨೮೦. ನಿನ್ ಹೆಂಡ್ತಿ ಮುಂಡೆ ಆಗ.

೨೮೧. ನಿನ್ ಹೆಸರು ಅಳ್ಸೋಗ.

೨೮೨. ನಿನ್ ಹೊತ್ತೋರ್ ಮ್ಯಾಲೆ ತೊಟ್ಟಿಕ್ಕೋಗ.

೨೮೩. ನೀ ಇನ್ನಿಂಥೇ ದಿನ ಕಾಣದೇ ಹೋಗ.

೨೮೪. ನೀ ಉಂಡೆ ಸಹಿತ ಹೋಗ.

೨೮೫. ನೀ ಉಣ್ಣು ತಟ್ಟೇಲಿ ನನ್ ಹೇಲ್ ಬರ.

೨೮೬. ನೀ ಓ ಲಕ್ಷ್ಮಣ ಅಂತ ತಿರಗ.

೨೮೭. ನೀ ತಿನ್ನು ಅನ್ನ ಚಿನ್ವಾಗ.

೨೮೮. ನೀನ್ ತಿರಿದು ತಿನ್ನುವಂಗೆ ಆಗ.

೨೮೯. ನೀನ್ ನಿಸಂತ್ರಾಗ.

೨೯೦. ನೀನ್ ನೆಗೆದುಬಿದ್ದು ನೆಲ್ಲಿಕಾಯಾಗ.

೨೯೧. ನೀನ್ ನೆಟ್ಟ ಮರ ನಿನ್ ತಲೆ ಮ್ಯಾಲೆ ಬೀಳ.

೨೯೨. ನೀನ್ ಸಿಗುದುಬಿದ್ದು ಸೀಗೆಕಾಯಾಗ.

೨೯೩. ನೀನ್ ಹತ್ತೂರ್ ಸುತ್ತುದ್ರು ಬೆತ್ತಲೇನೆ ಬರ.

೨೯೪. ನೀನ್ ಹಿಡಿದುದ್ದು ಹೆಚ್ಚದೇ ಹೋಗ.

೨೯೫. ನೀನ್ ಹೆಸರ್ ಹೇಳ್ದೆ ಹೋಗ.

೨೯೬. ನೀನ್ ಹೋದ ಹಾದೀಲಿ ಹಿಂದಕ್ಕೆ ಬರದೆ ಹೋಗ.

೨೯೭. ನಿಮ್ಮಪ್ಪನ ಹಟ್ಟಿ ಹೇಲೂರಿಗೆ ತಿಪ್ಪೆಯಾಗ.

೨೯೮. ನಿಮ್ಮಪ್ಪನ ತಿನ್ಕೊಳ.

೨೯೯. ನಿಮ್ಮಪ್ಪನ ಮನೆ ತಿಪ್ಪೆ ಹಳ್ಳ ಆಗ.

೩೦೦. ನಿಮ್ಮವ್ವ ಮಕ್ಳ ತಿನ್ಕೊಳ.

ಕಾಮದ ನಂಟಿನ ಬಯ್ಗುಳಗಳು

೦೧. ಅವಳಪ್ಪಾಳ್ ಕೆಯ್ಯ.
೦೨. ಅವಳ್ ಕುಂಡಿ ನನ್ ಗಂಡ ಕೇಯ.
೦೩. ಅವಳ್ ಬೊದ್ದೆ ನನ್ ಗಂಡ ಕೇಯ.
೦೪. ಒಳ್ಳೇಲಿ ಒನಕೆ ಕುಟ್ದಂಗೆ ನಿನ್ ತುಲ್ಲಲಿ ನನ್ ತುಣ್ಣೆ ಕುಟ್ಟ.
೦೫. ನನ್ ಗಂಡನ್ ಕೇಯ.
೦೬. ನನ್ ಜೀತ್ಕಾರನ ಕೆಯ್ಯ.
೦೭. ನನ್ ತುಣ್ಣೆ ಉಣ್ಣು.
೦೮. ನನ್ ತುಲ್ ಕಡಿ.
೦೯. ನನ್ ಮಗನ್ನ ಕೆಯ್ಯಿ.
೧೦. ನನ್ ಮರುಮಗನ್ನ ಕೆಯ್ಯಿ.
೧೧. ನನ್ ಹಳಮಗನ್ನ ಕೆಯ್ಯಿ.
೧೨. ನಿನ್ ಹೆಣ್ ಕೊಟ್ಟೋಳ್ ಅಪ್ಪಾಳ್ ಕೇಯ.
೧೩. ನಿನ್ನ ಅಂಗಳ್ಗೆ ನನ್ನ ತಿಂಗಳ ಗಲ್ಲೆ ಎತ್ತಾಕ.
೧೪. ನಿನ್ನಕ್ಕನಾ ಕೆಯ್ಯ.
೧೫. ನಿನ್ನಕ್ಕನ್ ತಂಗೀನಾ ಕೆಯ್ಯ.
೧೬. ನಿನ್ನಕ್ಕನ್ ಪುಟ್ಟೀನಾ ಕೆಯ್ಯ.
೧೭. ನಿನ್ ಅಗಲ್ಗೆ ನನ್ ಗಲ್ಲೆ ಹಾಕ.
೧೮. ನಿನ್ ಅಮ್ಮನ್ ಅಲ್ಕಾ ತುಲ್ನಾ ಕೆಯ್ಯ.
೧೯. ನಿನ್ ಗಂಟ್ಲಗೆ ನನ್ ಮಾಸಾಕ.
೨೦. ನಿನ್ ಚೆಳ್ಳೀಗೆ ನನ್ ಕಾಲ್ ಸಿಗಾಕ.
೨೧. ನಿನ್ ತಾಯಿ ಕೆಚ್ಚಲ್ನಾ ಕೆಯ್ಯ.
೨೨. ನಿನ್ ತಾಯಿ ತಲೆಬಾಗಿಲ್ನಾ ಕೆಯ್ಯ.
೨೩. ನಿನ್ ತಾಯಿ ಮೊಲೆನಾ ಕೆಯ್ಯ.
೨೪. ನಿನ್ ತುಲ್ಲ ಹರಿದು ಪಲ್ಲಂಟ ಮಾಡ.
೨೫. ನಿನ್ ತುಲ್ಗೆ ಚುರುಕನ ಚಬ್ಬೆ ಸಿಗಾಕ.
೨೬. ನಿನ್ ತುಲ್ಗೆ ನನ್ ಬೆಳ್ ಎಟ್ಟ.
೨೭. ನಿನ್ ತುಲ್ಗೆ ಮೊಟ್ಟೆ ಕಡ್ಡಿ ಎಟ್ಟ.
೨೮. ನಿನ್ ತುಲ್ಗೆ ವಿರಾಟರಾಯನ ತುಣ್ಣೆ ಎಟ್ಟ.

೨೯. ನಿನ್ ತೊಡೆನಾ ಕೆಯ್ಯ.
೩೦. ನಿನ್ ನೆತ್ತಿ ಮ್ಯಾಲೆ ನನ್ ಮಾಸಿನ ಮಡ್ಕೆ ಎತ್ತಾಕ.
೩೧. ನಿನ್ ನೆತ್ತಿ ಮ್ಯಾಲೆ ನನ್ದ ಎತ್ತಿ ಹುಯ್ಯ.
೩೨. ನಿನ್ ನೆತ್ತಿ ಮ್ಯಾಲೆ ನನ್ ಹಾಟು ಹುಯ್ಯ.
೩೩. ನಿನ್ ಪುಕ್ಕೀಗೆ ನನ್ ದಡಿ ಸಿಗಾಕ.
೩೪. ನಿನ್ ಪುಟ್ಟಿ ಚೀಲಾನ ಕೆಯ್ಯ.
೩೫. ನಿನ್ ಬಾಯ್ಗೆ ಊರೋರ ರತ್ತ ಹುಯ್ಯ.
೩೬. ನಿನ್ ಬಾಯ್ಗೆ ನನ್ ಕೊಳೆ ಹುಯ್ಯ.
೩೭. ನಿನ್ ಬಾಯ್ಗೆ ನನ್ ಗಲ್ಲೆ ಅಡಕ.
೩೮. ನಿನ್ ಬಾಯ್ಗೆ ನನ್ ತುಣ್ಣೆ ಸಿಗಾಕ.
೩೯. ನಿನ್ ಬಾಯ್ಗೆ ನನ್ ಬಟ್ಟೆ ಕುಕ್ಕ.
೪೦. ನಿನ್ ಬಾಯ್ಗೆ ನನ್ ಮಾಸ್ ತುಂಬ.
೪೧. ನಿನ್ ಬಾಯ್ಗೆ ನನ್ ರಕ್ತ ಎತ್ತಾಕ.
೪೨. ನಿನ್ ಬಾಯ್ಗೆ ನನ್ ರಕ್ತ ಹಿಂಡ.
೪೩. ನಿನ್ ಬಾಯ್ಗೆ ನನ್ ಹೆಂಡ್ತಿ ಹಾಟು ಹುಯ್ಯ.
೪೪. ನಿನ್ ಬೊದ್ದೆಗೆ ನನ್ ಕಾಲ್ ಸಿಗಾಕ.
೪೫. ನಿನ್ ಬೊದ್ದೆ ನನ್ ಗಂಡ ಕೇಯ.
೪೬. ನಿನ್ ಬೋಸುಡಾನ ಕೆಯ್ಯ.
೪೭. ನಿನ್ ಮಗಳ್ನಾ ಕೆಯ್ಯ.
೪೮. ನಿನ್ ಮೀಸೆಗೆ ನನ್ ಗಲ್ಲೆ ಹಾಕ.
೪೯. ನಿನ್ ಮೀಸೆಗೆ ನನ್ ಮಾಸ್ ಹಾಕ.
೫೦. ನಿನ್ ಮೀಸೆಗೆ ನನ್ ಹೊಲೆಸಾಲೆ ಹಿಂಡ.
೫೧. ನಿನ್ ಮುಸುಡೀನಾ ಕೆಯ್ಯ.
೫೨. ನಿನ್ ಮೊಲೆ ನನ್ ಗಂಡ ಕೇಯ.
೫೩. ನಿನ್ ಯಾಪ್ ಮೋರೆಗೆ ನನ್ ಹಾಟು ಹುಯ್ಯ.
೫೪. ನಿನ್ ಯಾಸಾನಾ ಕೆಯ್ಯ.
೫೫. ನಿನ್ ಸತ್ಯವಂತ ತುಲ್ಲ ನನ್ ಗಂಡ ಕೇಯ.
೫೬. ನಿನ್ ಹಿಡ್ಕೊಂಡು ಕತ್ತೆ ಕೇಯ.
೫೭. ನಿನ್ ಹಿಡ್ಕೊಂಡು ನನ್ ಗಂಡ ಕೇಯ.
೫೮. ನಿನ್ ಹಿಡ್ಕೊಂಡು ನನ್ ಆಳ್ ಮಗ ಕೆಯ್ಯ.
೫೯. ನಿನ್ ಹುಟ್ಟಿಸಿದವನ ತಲೆ ಮ್ಯಾಲೆ ನನ್ ಹೊಲೆಸಾಲೆ ಹಾಕ.

೬೦. ನಿನ್ ಹೆಂಡ್ರ ಚಿಳ್ಳೀನಾ ಕೆಯ್ಯ.
೬೧. ನಿನ್ ಹೆತ್ತೋಳ್ನಾ ಕೆಯ್ಯ.
೬೨. ನಿನ್ ಹೈಕ್ಳು ಜಾತೀನಾ ಕೆಯ್ಯ.
೬೩. ನಿಮ್ಮಕ್ಕನ್ ಈದೋಳ್ನಾ ಕೆಯ್ಯ.
೬೪. ನಿಮ್ಮಕ್ಕನ್ ಬಳ್ಳೀನಾ ಕೆಯ್ಯ.
೬೫. ನಿಮ್ಮಪ್ಪನ್ ಹೆಂಡ್ತಿನಾ ಕೆಯ್ಯ.
೬೬. ನಿಮ್ಮಪ್ಪಾನಿ ಕೆಯ್ಯ.
೬೭. ನಿಮ್ಮಪ್ಪಾನಿ ಮೊಕ ಕೆಯ್ಯ.
೬೮. ನಿಮ್ಮಮ್ಮನಾ ಕೆಯ್ಯ.
೬೯. ನಿಮ್ಮ ಅಮ್ಮನ್ ಗೊಳ್ಳೆನಾ ಕೆಯ್ಯ.
೭೦. ನಿಮ್ಮ ಅಮ್ಮನ್ ಜಾತೀನಾ ಕೆಯ್ಯ.
೭೧. ನಿಮ್ಮ ಅಮ್ಮನ್ ತುಲ್ಲ ಹದಿನಾರು ಬಣ್ಣದೋರು ಕೆಯ್ಯ.
೭೨. ನಿಮ್ಮವ್ವ ಎದೆ ತೊಟ್ನಾ ಕೆಯ್ಯ.
೭೩. ನಿಮ್ಮವ್ವನ್ ಕಚ್ಚೆಪಡೆನಾ ಕೆಯ್ಯ.
೭೪. ನಿಮ್ಮ ಅವ್ವನಾ ಕೆಯ್ಯ.
೭೫. ನಿಮ್ಮ ಅವ್ವನ್ ಜುಟ್ನಾ ಕೆಯ್ಯ.
೭೬. ನಿಮ್ಮ ಅವ್ವನ್ ದಗ್ರೀನಾ ಕೆಯ್ಯ.
೭೭. ನಿಮ್ಮ ಅವ್ವನ್ ಪುಟ್ಟೀನಾ ಕೆಯ್ಯ.
೭೮. ನಿಮ್ಮ ಅವ್ವನ್ ಬಗ್ರೀನಾ ಕೆಯ್ಯ.
೭೯. ನಿಮ್ಮ ಅವ್ವನ್ ಬಾಯ್ನಾ ಕೆಯ್ಯ.
೮೦. ನಿಮ್ಮ ಅವ್ವನ್ ಮುಸುಡೀನಾ ಕೆಯ್ಯ.
೮೧. ನಿಮ್ಮ ಅವ್ವನ್ ಮೊಲೆನಾ ಕೆಯ್ಯ.
೮೨. ನಿಮ್ಮ ಅವ್ವನ್ ಲಂಗೋಟಿನಾ ಕೆಯ್ಯ.
೮೩. ನಿಮ್ಮ ಅಮ್ಮನ್ ಹಡೇನಾ ಕೆಯ್ಯ.
೮೪. ನಿಮ್ಮ ಅವ್ವೆ ಈದೋಳ್ನಾ ಕೆಯ್ಯ.
೮೫. ನಿಮ್ಮ ಅವ್ವೆ ಈಲಿ ತೊಟ್ನಾ ಕೆಯ್ಯ.
೮೬. ನಿಮ್ಮ ಅವ್ವೆ ಪಾಪರ್ ತುಲ್ನಾ ಕೆಯ್ಯ.
೮೭. ನಿಮ್ಮವ್ ಬಡ್ಡೀನಾ ಕೆಯ್ಯ.
೮೮. ನಿಮ್ಮ ಹೈಕ್ಳ ಕೆಯ್ಯ.
೮೯. ನಿಮ್ಮ ವಂಶಕ್ಕೆ ನನ್ ರಕ್ತ ಹುಯ್ಯ.
೯೦. ಸುಳ್ ಮುರುಕ ಹೆಂಡ್ತಿನಾ ಕೆಯ್ಯ.

ಕನ್ನಡ ಬಯ್ಗುಳ ಓದುವಿಕೆಗೆ ನೆರವಾದ ಲೇಖನಗಳು

೧. ಕಲಬುರ್ಗಿ ಎಂ.ಎಂ. ೧೯೮೬: 'ಸಮಗಾರ ದೇವರಿಗೆ ಮಚ್ಚೆ ಪೆಟ್ಟು ಇತ್ಯಾದಿ', ಉದಯವಾಣಿ, ದೀಪಾವಳಿ ಸಂಚಿಕೆ, ಪುಟ ೬೨–೬೫

೨. ಕಾವ್ಯ ಜೇವಿ. ೧೯೮೨: 'ಜನಪದ ಬಯ್ಗುಳಗಳು–ಒಂದು ವಿಶ್ಲೇಷಣೆ' ಜಾನಪದ ಸಂಪದ, ಪುಟ ೧೦೪–೧೦೮, (ಸಂ) ಮಲ್ಲಿಕಾರ್ಜುನ ಶಿ ಲಠ್ಠೆ

೩. ಕೃಷ್ಣ ಭಟ್ ಪಿ.ಕೆ. ೧೯೮೫: 'ಬೈಗಳು–ಒಂದು ಅಧ್ಯಯನ ಸಾಧನೆ, ಸಂಪುಟ–೧೪, ಸಂಚಿಕೆ–೨, ಪುಟ ೫೬–೬೯

೪. ಚಿದಾನಂದ ಮೂರ್ತಿ ಎಂ. ೧೯೭೬: 'ಶಬ್ದಕೋಶ ಪ್ರಪಂಚದ ಅಗ್ನಿಕುಂಡ ಬೈಗುಳಗಳು'
ಸಾಹಿತ್ಯ ಜೀವಿ ಪುಟ ೨೩೦–೨೩೯, (ಸಂ) ಶೇಷಗಿರಿರಾವ್ ಎಲ್.ಎಸ್.

೫. ತಪಸ್ವೀ ಕುಮಾರ್ ನಂ. ೧೯೭೦ : 'ಗ್ರಾಮ್ಯ ಬಯ್ಗುಳ ಬನಿ'
ಜನಪದ ಸಂಸ್ಕೃತಿ, ಪುಟ ೬೮–೯೮, ಪ್ರಬುದ್ಧ ಪ್ರಕಾಶನ, ಮೈಸೂರು.

೬. ಬಸವರಾಜ ನೆಲ್ಲಿಸರ. ೧೯೭೯: ' ಗ್ರಾಮ ಜೀವನದಲ್ಲಿ ಬಯ್ಗುಳಗಳು'
ಜಾನಪದ ಜಿಜ್ಞಾಸೆ, ಪುಟ ೯೧–೧೦೮, ಯಕ್ಷ ಪ್ರಕಾಶನ, ಮೈಸೂರು.

೭. ಬಸವರಾಜ ನೆಲ್ಲಿಸರ. ೧೯೭೯: 'ಪಂಜಿನ ಹಾಡುಗಳು'
ಜಾನಪದ ಜಿಜ್ಞಾಸೆ, ಯಕ್ಷ ಪ್ರಕಾಶನ, ಮೈಸೂರು.

೮. ಮೃತ್ಯುಂಜಯ ಹೊರಕೇರಿ. ೧೯೭೫: 'ಬೈಗುಳ: ಜನಪದ ಸಾಹಿತ್ಯದ ಒಂದು ಪ್ರಕಾರ'
ವಿದ್ಯಾರ್ಥಿ ಭಾರತಿ, ಸಂಪುಟ–೧, ಸಂಚಿಕೆ–೧, ಪುಟ ೩೩–೩೮

೯. ಸತ್ಯನಾಥ್ ಟಿ.ಎಸ್. ೧೯೮೨: 'ಆಟಗಳು: ಮನೋವೈಜ್ಞಾನಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯಲ್ಲಿ',
ಜಾನಪದ ಅಧ್ಯಯನ ವಿಚಾರ ಸಂಕಿರಣ ಪುಟ ೭–೩೭, (ಸಂ) ಹಂಪ ನಾಗರಾಜಯ್ಯ

೧೦. **ಹರಿಕೃಷ್ಣ ಭಟ್ ಭರಣ್ಯ. ೧೯೮೨: 'ದಕ್ಷಿಣ ಕನ್ನಡ ಹವ್ಯಕರ ಬೈಗಳು'**
ಸಾಧನೆ, ಸಂಪುಟ-೧೧, ಸಂಚಿಕೆ-೪, ಪುಟ ೭೯-೯೩

ಪುಸ್ತಕಗಳು

೧. **ಆಚಾರ್ಯ ಪಾ.ವೆಂ. ೧೯೯೧: ಪದಾರ್ಥ ಚಿಂತಾಮಣಿ**
ದತ್ತಾತ್ರೇಯ ಪ್ರಕಾಶನ, ಮಂಗಳೂರು.

೨. **ಮೃತ್ಯುಂಜಯ ಹೊರಕೇರಿ. ೧೯೮೧: ಉತ್ತರ ಕರ್ನಾಟಕದ ಬೈಗುಳಗಳು,**
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೩. **(ಸಂ) ಚಂದ್ರಶೇಖರ ಕಂಬಾರ. ೧೯೮೫: ಕನ್ನಡ ಜಾನಪದ ವಿಶ್ವಕೋಶ,**
ಸಂಪುಟ-೨, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

4. Alan Dundes. 1965: The Study of Folklore,
Prentice-Hall of India(Private) Ltd. New Delhi.

೫. **ಅನುವಾದ: ಶೇಷ ನವರತ್ನ ೨೦೦೭, ಮನುಸ್ಮೃತಿ,**
ಸಮಾಜ ಪುಸ್ತಕಾಲಯ, ಧಾರವಾಡ

6. **Dell Hymes. 1966: Language In Culture And Society-A Reader In Linguistics And Anthropology,**
Harper and Row, New York.

7. **(Ed) John J Gumperz And Dell Hymes. 1972: Directions In Sociolinguistics-The Ethnography Of Communication,**
Holt, Rinehart And Winston, INC, New York.

8. **Martin Montgomery. 1986: An Introduction To Language And Society,**
Methuen, London And New York.

9. **Timothy Jay. 1992: Cursing In America,**
John Benjamins Publishing Company, Philadelphia / Amsterdam.

10. **Timothy Jay. 1999: Why We Curse**
A Neuro-Psycho-Social Theory of Speech
John Benjamins Publishing Company, Philadelphia/ Amsterdam,

11. **(Ed) James George Frazer. 1976: The Golden Bough, The Magic Art and the Evaluation of Kings, Part-1, Vol-1,**
The Macmillan Press Ltd, London and Basingstoke.
12. **(Ed) James Hastings. 1925: Encyclopedia of Religion And Ethics, Vol-1,**
T and T Clark, Edinburgh.

ಬರಹಗಾರ

ಹೆಸರು : ಸಿ.ಪಿ.ನಾಗರಾಜ (೧೯೪೫)

ತಾಯಿ : ಲಕ್ಷ್ಮಿದೇವಮ್ಮ, ಮದ್ದೂರು, ಮಂಡ್ಯ ಜಿಲ್ಲೆ.

ತಂದೆ : ಪುಟ್ಟೇಗೌಡ, ಚೆಕ್ಕೆರೆ, ಚೆನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ.

ಓದು : ಎಂ.ಎ. ಪಿಎಚ್.ಡಿ.

ಕೆಲಸ : ಕನ್ನಡ ಅಧ್ಯಾಪಕ

೧೯೭೧-೭೨ ಅರ್ಜುನಪುರಿ ಕಾಲೇಜು, ಮದ್ದೂರು, ಮಂಡ್ಯ ಜಿಲ್ಲೆ.

೧೯೭೨-೨೦೦೩ ಭಾರತಿ ಕಾಲೇಜು, ಕಾಳಮುದ್ದನದೊಡ್ಡಿ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ.

೨೦೦೬-೨೦೨೧ ತೇಜಸ್ವಿ ಸ್ನಾತಕೋತ್ತರ ಕೇಂದ್ರ, ಮಹಾರಾಣಿ ಲಕ್ಷ್ಮೀ ಅಮ್ಮಣ್ಣಿ ಮಹಿಳಾ ಕಾಲೇಜು, ಮಲ್ಲೇಶ್ವರಂ, ಬೆಂಗಳೂರು.

ಬರಹ

೧. ಮುದ್ರಿತ ಪುಸ್ತಕಗಳು

ನಾಟಕ: ಭಾಗೀರಥಿ, ಅಂಬೆ, ಹಾವು, ಅಂಗಿಬಟ್ಟೆ, ಒಂದು ರೂಪಾಯಿ, ಕಳ್ಳರಿದ್ದಾರೆ ಎಚ್ಚರಿಕೆ, ಹೆಣದ ಹಣ, ಮೂರು ಸಾಮಾಜಿಕ ನಾಟಕಗಳು

ಗದ್ಯ: ಕರಿಯನ ಪುರಾಣ, ಕನಕನ ಅವ್ವ, ಹಳ್ಳಿಗಾಡಿನ ರೂವಾರಿ, ಡಾ.ಬಂದೀಗೌಡ, ಆಣೆ ಪ್ರಮಾಣಗಳು, ಬಯ್ಗುಳ, ಸರ್ವಜ್ಞವಚನಗಳ ಓದು, ಅಲ್ಲಮ ವಚನಗಳ ಓದು, ಶಿವಶರಣೆಯರ ವಚನಗಳ ಓದು, ಶಿವಶರಣರ ವಚನಗಳ ಓದು, ಬಸವಣ್ಣ ವಚನಗಳ ಓದು, ಮುದ್ದೆಗಂಟು, ಶಿವಶರಣಶರಣೆಯರ ವಚನಗಳ ಓದು, ಪಂಪ ಭಾರತ ಓದು, ಸರ್ವಜ್ಞಮತ್ತು ಅಲ್ಲಮ ವಚನಗಳ ಓದು

ವಚನದಿಂದ ಆಯ್ದ ಸಾಲುಗಳ ಓದು ಕುವೆಂಪು ಕವನಗಳ ಓದು
ಕನ್ನಡ ಬಯ್ಗುಳ ಓದು

೨. ಮೈಲಾಂಗ್ ಡಿಜಿಟಲ್ ಪುಸ್ತಕಗಳು

https://mylang.in/collection/cpnagaraja

ಏಳು ನಾಟಕಗಳು(ಇಬುಕ್); ಭಾಗೀರಥೀ(ನಾಟಕ–ಇಬುಕ್); ಅಂಬೆ (ನಾಟಕ–ಇಬುಕ್); ಹಾವು (ನಾಟಕ–ಇಬುಕ್); ಅಂಗಿಬಟ್ಟೆ(ನಾಟಕ–ಇಬುಕ್); ಒಂದು ರೂಪಾಯಿ (ನಾಟಕ–ಇಬುಕ್); ಕಳ್ಳರಿದ್ದಾರೆ ಎಚ್ಚರಿಕೆ (ನಾಟಕ–ಇಬುಕ್); ಹೆಣದ ಹಣ(ನಾಟಕ–ಇಬುಕ್); ಶಿವಶರಣಶರಣೆಯರ ವಚನಗಳ ಓದು(ಇಬುಕ್); ಬಯ್ಗುಳ(ಆಡಿಯೋ ಬುಕ್); ಸರ್ವಜ್ಞನ ವಚನಗಳ ಓದು (ಆಡಿಯೋ ಬುಕ್); ಅಲ್ಲಮನ ವಚನಗಳ ಓದು(ಆಡಿಯೋ ಬುಕ್); ಬಸವಣ್ಣನ ವಚನಗಳ ಓದು(ಆಡಿಯೋ ಬುಕ್); ಶಿವಶರಣಶರಣೆಯರ ವಚನಗಳ ಓದು–ಭಾಗ–೧ (ಆಡಿಯೋ ಬುಕ್); ಶಿವಶರಣಶರಣೆಯರ ವಚನಗಳ ಓದು–ಭಾಗ–೨–(ಆಡಿಯೋ ಬುಕ್); ವಚನದಿಂದ ಆಯ್ದ ಸಾಲುಗಳು ಓದು–ಭಾಗ–೧–(ಆಡಿಯೋ ಬುಕ್); ವಚನದಿಂದ ಆಯ್ದ ಸಾಲುಗಳು ಓದು–ಭಾಗ–೨–(ಆಡಿಯೋ ಬುಕ್); ಮುದ್ದೆಗಂಟು(ಆಡಿಯೋ ಬುಕ್)

3. C P Nagaraj-You Tube

Play lists
ಸರ್ವಜ್ಞನ ವಚನಗಳ ಓದು–೧೩ ಎಪಿಸೋಡ್
ಅಲ್ಲಮನ ವಚನಗಳ ಓದು– ೩೬ ಎಪಿಸೋಡ್
ಬಸವಣ್ಣನ ವಚನಗಳ ಓದು–೨೬ ಎಪಿಸೋಡ್
ಶಿವಶರಣಶರಣೆಯರ ವಚನಗಳ ಓದು–೫೨ ಎಪಿಸೋಡ್
ವಚನದಿಂದ ಆಯ್ದ ಸಾಲುಗಳ ಓದು–೧೬೨ ಎಪಿಸೋಡ್
ಮುದ್ದೆಗಂಟು–೬೦ ಎಪಿಸೋಡ್
ಹಳ್ಳಿಗಾಡಿನ ರೂವಾರಿ ಜಿ.ಮಾದೇಗೌಡ–೧೫ ಎಪಿಸೋಡ್
ಜನಪರ ಚೇತನ ಡಾ.ಬಂದೀಗೌಡ–೧೫ ಎಪಿಸೋಡ್
ಕುವೆಂಪು ಕವನಗಳ ಓದು–೧೩ ಎಪಿಸೋಡ್

ವಿಳಾಸ : ಸಿ.ಪಿ.ನಾಗರಾಜ, 75, 'ಎ' ಬ್ಲಾಕ್, 5ನೇ ಕ್ರಾಸ್, ಕ್ರಿಶ್ಣ ಗಾರ್ಡನ್, ಆರ್.ವಿ. ಕಾಲೇಜು ಅಂಚೆ, ಬೆಂಗಳೂರು–560 059. ಮೊ : 9986347521
e-mail : ngy7777@gmail.com



ಬಯ್ಗುಳವನ್ನು ಸಿ.ಪಿ. ನಾಗರಾಜ್ ಬೆನ್ನು ಹತ್ತಿದ್ದಾರೆಯೋ ಇಲ್ಲವೇ ಬಯ್ಗುಳವೇ ಇವರ ಬೆನ್ನು ಹತ್ತಿದೆಯೋ ಎನ್ನುವುದು ಕಳೆದ ಮೂರೂವರೆ ದಶಕಗಳಿಂದ ನನ್ನನ್ನು ಕಾಡುತ್ತಲೇ ಇದೆ. ಸವಾಲು ಹಾಕುವ ಬೇತಾಳವನ್ನು ಹೆಗಲಮೇಲೆ ಹೊತ್ತು ತಿರುಗುವ ಛಲ ಬಿಡದ ತ್ರಿವಿಕ್ರಮನಂತೆ ನನಗೆ ಅವರು ಕಾಣುತ್ತಿದ್ದಾರೆ. ಈ ಹೊತ್ತಗೆಯೂ ಅವರ ಹುಡುಕಾಟ ತಡಕಾಟಗಳ ಕೊನೆ ಎಂದು ನನಗೆ ತೋರುತ್ತಿಲ್ಲ. ಏಕೆಂದರೆ ಬರೆಯಬೇಕಾಗಿರುವುದು ಇನ್ನೂ ಇದೆ ಎಂದು ಅವರೇ ಹೇಳುತ್ತಿದ್ದಾರೆ. ನೋಡೋಣ ಈ ಅಂಟಿನ ನಂಟಿನ ಕೊನೆ ಬಲ್ಲವರು ಯಾರು!

ಈ ಹೊತ್ತಗೆಯಲ್ಲಿ ಬಯ್ಗುಳವನ್ನು ಜನರು ಬಳಸುವುದೇಕೆ ಎನ್ನುವುದನ್ನು ವಿವರಿಸಲು ನಾಗರಾಜ್ ಹೆಚ್ಚಾಗಿ ಮಾನಸಿಕ ನೆಲೆಯನ್ನು ಅವಲಂಬಿಸಿದ್ದಾರೆ. ಬಳಸುವ ಸಂದರ್ಭ ಮತ್ತು ಅವುಗಳ ಪರಿಣಾಮಗಳನ್ನು ವಿವರಿಸುವಾಗ ಸಾಮಾಜಿಕ ನೆಲೆಗಳನ್ನು ಹುಡುಕಿ ತೆಗೆದಿದ್ದಾರೆ. ಬಯ್ಗುಳದ ತಿರುಳನ್ನು ಕಂಡುಕೊಳ್ಳುವಾಗ ಮತ್ತೆ ಹೆಚ್ಚಾಗಿ ಸಮಾಜ ರಚನೆಯ ಕೆಲವು ಚಹರೆಗಳನ್ನು ಬಳಸಿಕೊಳ್ಳುತ್ತಾರೆ. ಇವಲ್ಲದೆ ಬೇರೆ ದಾರಿಗಳು ಇವೆಯೇ ಎನ್ನುವುದನ್ನು ಮುಂದಿನ ಓದುಗಳು ನಮಗೆ ತೆರೆದು ತೋರಿಸಬೇಕಿದೆ.

ಕೆ.ವಿ. ನಾರಾಯಣ

ಬಯ್ಗುಳ ಪದಗಳು ಒಂದು ಭಾಷಾ ಸಮುದಾಯದ, ಸಮಾಜದ ಆಳದ ಅಭಿವ್ಯಕ್ತಿ. ಅವು ನಿರಾಕರಣೆಗೆ ಒಳಪಡುತ್ತಲೇ ನಮ್ಮನ್ನು ಆವರಿಸಿಕೊಳ್ಳುತ್ತವೆ. ಸಾಮಾಜಿಕ ಬಳಕೆಯ ವ್ಯಾಪ್ತಿಯಿಂದಾಚೆಗೆ ಈ ಬಯ್ಗುಳ ಪದಗಳನ್ನು ಅಂಕಣವಾಗಿ ಪ್ರಯೋಗಿಸುವುದರ ಹಿಂದೆ ಅನೇಕ ವಿಚಾರಗಳು ತಲೆಯಲ್ಲಿ ಸುಳಿದು ಹೋಗಿದ್ದವು. ಒಬ್ಬ ಓದುಗನನ್ನು ಈ ಮೂಲಕ ಮನರಂಜಿಸಬಹುದೇ ? - ಓದುಗರಿಗೆ ಪ್ರತಿದಿನ ಸಣ್ಣ ಆಘಾತ ಉಂಟುಮಾಡಬಹುದೇ ? - ಅವರ ತಾಳ್ಮೆಯ, ಸೈರಣೆಯ ಪರಿಧಿಯನ್ನು ಈ ಮೂಲಕ ಪರೀಕ್ಷಿಸಿ ವಿಸ್ತರಿಸಬಹುದೇ - ಎಂದೆಲ್ಲಾ ಯೋಚಿಸಿದ್ದೆವು.

'ಮನರಂಜನೆ' - 'ಆಘಾತ' ಇತ್ಯಾದಿಗಳ ನಡುವೆ 'ತಾಳ್ಮೆ' ಮತ್ತು 'ಸೈರಣೆ' ಯ ವಿಚಾರ ನನಗೆ ರಾಜಕೀಯ ಪ್ರಶ್ನೆಗಳಾಗಿ ಕಂಡವು. ನಮ್ಮ ಸುತ್ತಲಿನ ವಾತಾವರಣವನ್ನು ನಾವು 'ಏಕಮುಖಿ' - 'ಏಕ ಸಂಸ್ಕೃತಿ' ಮಾಡಹೊರಟು ಏಕ ಧರ್ಮದತ್ತ ಕೊಂಡೊಯ್ದು ಅದಕ್ಕೆ ಇಲ್ಲಸಲ್ಲದ ಪೊಳ್ಳು ನೈತಿಕ ವಾಗ್ವಾದಗಳನ್ನು ನಮ್ಮ ದಿನಪತ್ರಿಕೆಗಳು ಸೃಷ್ಟಿ ಮಾಡುತ್ತಿದ್ದ ಹೊತ್ತಿನಲ್ಲಿ ; ಜೊತೆಗೆ ನಾವುಗಳು ವೈಯಕ್ತಿಕವಾಗಿ ಒಂದು ಅಪಾಯಕಾರಿ ನೀತಿ ಭ್ರಮೆಗೆ ಬೀಳುತ್ತಿದ್ದಾಗ - (A dangerous moral imagining of ourselves) - ಈ ಬಯ್ಗುಳ ಪದಗಳು ನಮ್ಮ ವಿಭಿನ್ನತೆ, ನಮ್ಮ ನಿಜಗಣ, ನಮ್ಮ ನಡುವಿನ ಬೆಳಕಾಗಿ ಕಂಡಿದ್ದು ಒಂದು ಸೋಜಿಗ.

ಸುಗತ ಶ್ರೀನಿವಾಸ ರಾಜು

ನಾಗು ಸ್ಮಾರಕ ಪ್ರಕಾಶನ, ಬೆಂಗಳೂರು.

ರೂ. 260/-